ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೨

ಉಪಶಮ ಪ್ರಕರಣ

ಕನ್ನಡಿಸಿದವರು:
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು ನಗರ.
೧೯೪೯

ಯೋಗವಾಸಿಷ್ಠ

ಸಂಪುಟ ೧೨

ಉಪಶಮು ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೨

ಉಪಶಮ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು ನಗರ.
೧೯೪೯

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠ ರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲ ದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠ ಸಿದ್ಧಾಂತವೂ, ಶಾಂಕರ ಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ, ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಕರಿಕತೆಯ ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠ ಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜ ವೈಭವವೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು. ಅವಶ್ಯವೆಂದು ತೋರಿದ ಕಡೆಗಳಲ್ಲಿ ಗ್ರಂಥಾಂತರಗಳಲ್ಲಿ ಹೇಳಿರುವುದು. ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದು ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರ ವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರೆಲ್ಲ ವಿದ್ಯಾವಂತ ರಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶ ವಿಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡ ಲೋಕದ ಸುದೈವ. ಕಾವ್ಯ ಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ, ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ. ಶ್ರದ್ಧೆಯೊಂದಿದ್ದರೆ ಸಾಕು ; ಅದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ. ಅವರು. ಈ ಗ್ರಂಥ ಪಠನ ಪಾಠನಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾ ಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರಮೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ,
೨೦-೮-೪೯.

ದೇವುಡು

ಸೂಚನೆ:—ಈ ಸಂಪುಟವನ್ನು ವೇದಾಂತ ಶಿರೋಮಣಿ ಬ್ರಹ್ಮಶ್ರೀ ಮ. ಸು. ವೆಂಕಟೇಶ ಶಾಸ್ತ್ರಿಗಳು ಕನ್ನಡಿಸಿದ್ದಾರೆ.

ವಿಷಯ ಸೂಚಿಕೆ

|| ಶ್ರೀ ||

ಯೋಗವಾಸಿಷ್ಠ

ಉಪಶಮ ಪ್ರಕರಣ

ಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಏವಮೇಷಾತಿವಿತತಾ ದುಜ್ಞಾನಾ ರಘುನಂದನ |
ಮಹಾಮೋಹಮಯೀ ಮಾಯಾ ವಿಷಮಾ ಪಾರಮಾತ್ಮಿಕೀ || ೧ ||

ಕ್ವ ಮುಹೂರ್ತದ್ವಯಸ್ವಪ್ನ ಸಂಭ್ರಮಾಲೋಕದೃಷ್ಟತಾ |
ಕ್ವಾನೇಕವರ್ಷಸಂಭುಕ್ತಶ್ವಪಚಾವನಿಪಭ್ರಮಃ || ೨ ||

ಐವತ್ತನೆಯ ಸರ್ಗವು

೧. ಅಯ್ಯಾ ರಘುನಂದನ, ಹೀಗೆ ಪರಮಾತ್ಮನನ್ನು ಆಶ್ರಯಿಸಿರುವ ಅತ್ಯಂತ ವಿಷಮವೂ ಮಹಾಮೋಹಮಯವೂ ಆದ ಈ ಮಾಯೆಯು ಅತಿ ವಿಸ್ತೃತವಾದುದು ಮತ್ತು ಅಚಿಂತ್ಯವೂ ಅನಿರ್ವಚನೀಯವೂ ಆಗಿರುವುದು.

೨. ಈ ಮಾಯೆಯು ಅಚಿಂತ್ಯವು (ದುಜ್ಞಾನವು) ಎಂಬ ವಿಷಯದಲ್ಲಿ ಗಾಧಿವೃತ್ತಾಂತವೇ ನಿದರ್ಶನವು. ಹೇಗೆಂದರೆ ಎರಡು ಮುಹೂರ್ತ ಮಾತ್ರ ಕಾಲದ ಸ್ವಪ್ನಸದೃಶವಾದ ಭ್ರಾಂತಿಯ ದೆಸೆಯಿಂದ ಇದ್ದ ಕಡೆಯಿಂದಲೇ ಭೂತ

ಕ್ವ ಸಂಭ್ರಮೋಪಲಬ್ಧತ್ವಂ ಕ್ವ ಪ್ರತ್ಯಕ್ಷನಿದರ್ಶನಂ |
ಕ್ವಾಸತ್ಯತ್ವಮಸಂದಿಗ್ಧಂ ಕ್ವ ಸತ್ಯಪರಿಣಾಮಿತಾ || ೩ ||

ಅತೋ ವಚ್ಮಿ ಮಹಾಬಾಹೋ ಮಾಯೇಯಂ ವಿಷಮಾನ್ವಹಂ |
ಅಸಾವಧಾನಮನಸಂ ಸಂಯೋಜಯತಿ ಸಂಕಟೇ || ೪ ||

ಶ್ರೀರಾಮ ಉವಾಚ —

ಏವಮಸ್ಯ ಕಥಂ ಬ್ರಹ್ಮನ್ಮಾಯಾ ಚಕ್ರಸ್ಯ ರೋಧನಂ |
ಕುರ್ಯುಃ ಪ್ರವಹತೋ ವೇಗಾತ್ಸರ್ವಾಂಗಚ್ಛೇದಕಾರಿಣಃ || ೫ ||

ಮಂಡಲ, ಕೀರ ಮುರಿತಾದ ದೇಶಗಳನ್ನು ನೋಡುವುದೆಲ್ಲಿ? ಅನೇಕ ವರ್ಷಕಾಲ ಅನುಭವಿಸಿದ ಶ್ವಪಚತ್ವ ರಾಜತ್ವರೂಪ ಭ್ರಾಂತಿಯೆಲ್ಲಿ? ಇವೆರಡಕ್ಕೂ ಎಷ್ಟು ಅಂತರವಿರುವುದು?

೩. ತನ್ನ ಮನಸ್ಸಿನೊಳಗೆಯೇ ಭ್ರಾಂತಿಯ ದೆಸೆಯಿಂದ ಒಂದು ವಸ್ತುವನ್ನು ಪಡೆದು ಅನುಭವಿಸಿದಂತೆ ಭಾವಿಸುವುದೆಲ್ಲಿ? ಪ್ರತ್ಯಕ್ಷವಾಗಿ ಅನುಭವಿಸುವುದೆಲ್ಲಿ? ಒಂದು ವಸ್ತುವು ಸರ್ವಥಾ ಅಸತ್ಯವೇ ಎಂಬ ನಿಶ್ಚಯ ಜ್ಞಾನವೆಲ್ಲಿ? ಅದನ್ನೇ ಸತ್ಯವೆಂದು ತಿಳಿಯುವಿಕೆಯೆಲ್ಲಿ?

೪. ಅಯ್ಯ ಮಹಾಬಾಹುವೆ, ಈ ಕಾರಣದಿಂದಲೇ ಈ ಮಾಯೆಯು ಅತ್ಯಂತ ವಿಷಮವಾದುದೆಂದೂ, ಪ್ರಮತ್ತಚಿತ್ತನಾದ ನರನನ್ನು (ಅಜಾಗರೂಕವಾದ ಮನಸ್ಸುಳ್ಳವನನ್ನು) ನಿರಂತರವೂ ಮಹಾಸಂಕಟಕ್ಕೆ ಒಳಪಡಿಸುವುದೆಂದೂ ನಾನು ಪದೇಪದೇ ನಿನಗೆ ಹೇಳುತ್ತಿರುವೆನು.

೫. ಶ್ರೀರಾಮನು ಕೇಳಿದನು—ಬ್ರಹ್ಮರ್ಷಿಗಳೇ, ಹೀಗೆ ಚಕ್ರವು ಅತಿ ವೇಗದಿಂದ ಪ್ರವಹಿಸುತ್ತಾ (ತಿರುಗುತ್ತಾ), ಪ್ರಮತ್ತಚಿತ್ತನ ಸರ್ವಾಂಗಗಳನ್ನೂ ಕತ್ತರಿಸಿ ಹಾಕತಕ್ಕ ಈ ಮಾಯಾಚಕ್ರವನ್ನು (ಜ್ಞಾನದಲ್ಲಿ ಅಧಿಕಾರಿಗಳು) ಹೇಗೆ ಯಾವ ಬಗೆಯಿಂದ ತಡೆಯುವರು? ಈ ವಿಚಾರವನ್ನು ಅಪ್ಪಣೆ ಕೊಡಿಸಬೇಕು.

ಶ್ರೀ ವಸಿಷ್ಠ ಉವಾಚ—

ಅಸ್ಯ ಸಂಸಾರರೂಪಸ್ಯ ಮಾಯಾಚಕ್ರಸ್ಯ ರಾಘವ |
ಚಿತ್ತಂ ವಿದ್ಧಿ ಮಹಾನಾಭಿಂ ಭ್ರಮತೋ ಭ್ರಮದಾಯಿನಃ || ೧ ||

ಅಸ್ಮಿನ್ದೃತಮವಷ್ಟಬ್ಧೇ ಧಿಯಾ ಪುರುಷಯತ್ನತಃ |
ಗೃಹೀತನಾಭಿವಹನಾನ್ಮಾಯಾಚಕ್ರಂ ನಿರುಧ್ಯತೇ || ೨ ||

ಅವಷ್ಟಬ್ಧಮನೋನಾಭಿರ್ಮೋಹಚಕ್ರಂ ನ ಗಚ್ಛತಿ |
ಯಥಾ ರಜ್ಜ್ವಾಂ ನಿರುದ್ಧಾಯಾಂ ಕೀಲಕಂ ರಜ್ಜುವೇಷ್ಟಿತಂ || ೩ ||

ಚಕ್ರಯುದ್ಧೈಕತಜ್ಜ್ಞೋಽಸಿ ಕಸ್ಮಾಜ್ಜಾನಾಸಿ ನಾನಘ |
ಚಕ್ರಂ ನಾಭಾವವಷ್ಟಬ್ಧಂ ವಶಮಾಯಾತಿ ನಾನ್ಯಥಾ || ೪ ||

---

೧. ಅಯ್ಯ ರಾಘವ, ಈ ಸಂಸಾರರೂಪವಾದ ಮಾಯಾಚಕ್ರವು ಸುತ್ತಲೂ ಭ್ರಮದಾಯಕವಾಗಿರುವುದು. (ಸರ್ವತ್ರ ಭ್ರಾಂತಿಯನ್ನುಂಟುಮಾಡುತ್ತಿರುವುದು. ಸುತ್ತುತ್ತಿರುವುದು ಅಥವಾ ಗಿರ್ರನೆ ತಿರುಗುತ್ತಿರುವುದು.) ಈ ಮಾಯಾಚಿತ್ರಕ್ಕೆ ಚಿತ್ತವೇ ಮಹಾನಾಭಿ (ಗುಂಬ) ಯೆಂದು ತಿಳಿ.

[ಭ್ರಮ=ಭ್ರಾಂತಿ ಅಥವಾ ಮೋಹ ಮತ್ತು ಗಿರ್ರನೆ ಸುತ್ತುವಿಕೆ.)

೨. ಈ ಚಿತ್ತವನ್ನು ಸಂತತ ನಿರೋಧಾಭ್ಯಾಸರೂಪ ಪುರುಷಕಾರ ಪೂರ್ವಕವಾಗಿ ವಿವೇಕ ವೈರಾಗ್ಯ ಪೂರ್ಣವಾದ ಬುದ್ಧಿಯಿಂದ ಹಿಡಿದು ನಿಲ್ಲಿಸಿಬಿಟ್ಟರೆ, ಆಗ ಮಾಯೆಯೆಂಬ ಚಕ್ರದ ನಾಭಿಯನ್ನು ತಡೆದುಬಿಟ್ಟಂತಾಗುವುದರಿಂದ ಈ ಮಾಯಾ ಚಕ್ರದ ಭ್ರಮಣಕ್ಕೆ (ಸುತ್ತುವಿಕೆಗೆ) ನಿರೋಧವಾಗುವುದು.

೩. ಹಗ್ಗವನ್ನು ಬಲವಾಗಿ ಹಿಡಿದುಕೊಂಡು (ನಿಲ್ಲಿಸಿ) ಬಿಟ್ಟರೆ, ಆ ಹಗ್ಗದಿಂದ ಸುತ್ತಲ್ಪಟ್ಟಿರುವ ಒಂದು ಕೀಲಕವು (ಚಕ್ರವು) ಹೇಗೆ ನಡೆಯುವುದಿಲ್ಲವೋ, ಹಾಗೆ ಚಿತ್ತವೆಂಬ ನಾಭಿಯನ್ನು ತಡೆದುಬಿಟ್ಟರೆ (ಮೋಹ) ಮಾಯೆಯೆಂಬ ಚಕ್ರವೂ ನಡೆಯುವುದಿಲ್ಲ.

೪. ಅನಘನೇ, (ನಿರ್ದೋಷಿಯೇ) ನೀನು ಚಕ್ರಾಯುಧವನ್ನು ಕೈಯ್ಯಲ್ಲಿ ಧರಿಸಿ ಯುದ್ಧ ಮಾಡುವುದರಲ್ಲಿ ಅಗ್ರಗಣ್ಯನೂ (ಮುಖ್ಯನೂ) ಮತ್ತು ಚಕ್ರವನ್ನು

ಚಿತ್ತಂ ನಾಭಿಮವಷ್ಟಭ್ಯ ತಸ್ಮಾದ್ಯತ್ನೇನ ರಾಘವ |
ಸಂಸಾರಚಕ್ರಂ ವಹನಾದಾತ್ಮನಃ ಪರಿರೋಧಯ ॥ ೧೦ ॥

ಏತಾಂ ಯುಕ್ತಿಂ ವಿನಾ ದುಃಖಮನಂತಮಿತಮಾತ್ಮನಃ |
ಅಸ್ಯಾಂ ದೃಷ್ಟೌ ಕ್ಷಣಾದಂತಂ ಗತಮೇವಾವಲೋಕಯ ॥ ೧೧ ॥

ನಿಲ್ಲಿಸುವುದು, ತಿರುಗಿಸುವುದು, ಇವೇ ಮೊದಲಾದ ಪ್ರಯೋಗಗಳಲ್ಲಿ ಅಭಿಜ್ಞನೂ ಆಗಿರುವೆ. ನಾನು ಹೇಳಿದ ದೃಷ್ಟಾಂತವು ನಿನಗೇಕೆ ಗೊತ್ತಾಗಲಿಲ್ಲ? ನಾಭಿಯಲ್ಲಿ ಹಿಡಿದುಕೊಂಡುಬಿಟ್ಟರೆ ಅಲ್ಲವೇ ಚಕ್ರವು ನಮ್ಮ ವಶದಲ್ಲಿರುವುದು! ಅನ್ಯಥಾ ಅದು ಎಂದಿಗೂ ನಮ್ಮ ವಶದಲ್ಲಿರುವುದಿಲ್ಲ.

[ಶ್ರೀರಾಮನು ಮಹಾವಿಷ್ಣುವಿನ ಅವತಾರ. ವಿಷ್ಣುವು ಸುದರ್ಶನವೆಂಬ ಚಕ್ರಾಯುಧವನ್ನು ಧರಿಸಿರುವನು. ಅದನ್ನು ಬೇಕಾದಾಗ ರಾಕ್ಷಸಾದಿ ತಾಮಸ ಪ್ರಕೃತಿಗಳಾದ ಲೋಕಕಂಟಕರನ್ನು ನಿಗ್ರಹಿಸುವುದಕ್ಕಾಗಿ ತಿರುಗಿಸುವನು. ಮಿಕ್ಕ ಕಾಲಗಳಲ್ಲಿ ತಿರುಗಿಸದೆ ಇರುವನು. ಹೀಗೆ ಚಕ್ರಾಯುಧದಿಂದ ಯುದ್ಧ ಮಾಡು ವುದರಲ್ಲಿ ನೀನು ನಿಪುಣನು ಎಂದು ಮುಂತಾಗಿ ಇಲ್ಲಿ ಹೇಳಿದುದರಿಂದ ಶ್ರೀರಾಮನು ವಿಷ್ಣುವಿನ ಅವತಾರವೆಂಬುದನ್ನು ಸೂಚಿಸಿ, ಇಂತಹ ಅವತಾರಪುರುಷನಾದ ನಿನಗೂ ಅದು ಹೇಗೆ ಈ ಚಕ್ರ ದೃಷ್ಟಾಂತವು ಗೊತ್ತಿಲ್ಲವು? ಎಂದು ವಸಿಷ್ಠರು ತಮ್ಮ ವಿಸ್ಮಯವನ್ನು ತೋರಿರುವುದರಿಂದ ಮಾಯಾ ಸ್ವರೂಪವು ದುರ್ವಿಜ್ಞೇಯ ವೆಂಬುದು ಸ್ಪಷ್ಟವು.]

೧೦. ಆದಕಾರಣ, ಅಯ್ಯ ರಾಘವ, ನೀನು ನಿನ್ನ ಪ್ರಯತ್ನ ವಿಶೇಷದಿಂದ ಚಿತ್ತವೆಂಬ ನಾಭಿಯನ್ನು ತಡೆದು ನಿಲ್ಲಿಸಿಬಿಟ್ಟು, ಈ ಸಂಸಾರರೂಪ ಮಾಯಾ ಚಕ್ರವು ನಿನ್ನನ್ನು ಜನನ ಮರಣ ಪರಂಪರೆಗೆ ಒಯ್ದು ಸಿಕ್ಕಿಸುವುದರಿಂದ ತಪ್ಪಿಸಿ ಕೊಳ್ಳುವುದಕ್ಕಾಗಿ ಅದು ತಿರುಗದಂತೆ (ನಡೆಯದಂತೆ) ನಿಲ್ಲಿಸುವವನಾಗು.

೧೧. ಈ ಚಿತ್ತ ನಿರೋಧರೂಪವಾದ ಉಪಾಯವಿಲ್ಲದ ಕಾರಣದಿಂದಲೇ ಆತ್ಮನಿಗೆ ಅನಂತವಾದ ದುಃಖವು ಸಂಪ್ರಾಪ್ತವಾಗಿರುವುದು. ಈ ಉಪಾಯವೊಂದು ಪ್ರಾಪ್ತವಾಗಿಬಿಟ್ಟರೆ, ಆಗ ಈ ದುಃಖವೆಲ್ಲವೂ ಒಂದು ಕ್ಷಣದಲ್ಲಿ ನಾಶವನ್ನು ಹೊಂದಿಯೇಬಿಡುವುದು. ನನ್ನ ಮಾತಿನಲ್ಲಿ ಸಂಶಯವುಂಟಾದರೆ ನಾನು ಹೇಳಿ ದಂತೆ ಮಾಡಿ ನೀನೇ ನೋಡು.

ಚಿತ್ತಾಕ್ರಮಣಮಾತ್ರಾತ್ತು ಪರಮಾದೌಷಧಾದೃತೇ |
ಪ್ರಯತ್ನೇನಾಪಿ ಸಂಸಾರ ಮಹಾರೋಗೋ ನ ಶಾಮ್ಯತಿ || ೧೨ ||

ತಸ್ಮಾದ್ರಾಘವ ಸಂತ್ಯಜ್ಯ ತೀರ್ಥದಾನತಪಃ ಕ್ರಿಯಾ |
ಶ್ರೇಯಸೇ ಪರಮಾಯಾಂತಶ್ಚಿತ್ತಮೇವ ವಶಂ ಕುರು || ೧೩ ||

ಚಿತ್ತಾಂತರೇವ ಸಂಸಾರಃ ಕುಂಭಾಂತಃ ಕುಂಭಕಂ ಯಥಾ |
ಚಿತ್ತನಾಶೇ ನ ಸಂಸಾರಃ ಕುಂಭನಾಶೇ ನ ಕುಂಭಕಂ || ೧೪ ||

ಚಿರಂ ಸಂಸರಣಾಕಾಶಕೋಟರಂ ಚಿತ್ತ ಕುಂಭಕಂ |
ವಿನಶ್ಯಾತುಲಿತಾಕಾಶ ಸ್ವರೂಪಂ ರೂಪಮಾವಿಶ || ೧೫ ||

---

೧೨. ಇಂತಹ ಕೇವಲ ಚಿತ್ತನಿರೋಧವೆಂಬ ಒಂದೇ ಒಂದಾದ ದಿವ್ಯೌಷಧದ ಹೊರತು, ಇತರ ಸಾವಿರಾರು ಪ್ರಯತ್ನಗಳನ್ನು ಮಾಡಿದರೂ, ಸಂಸಾರವೆಂಬ ಮಹಾವ್ಯಾಧಿಯು ಎಂದಿಗೂ ನಾಶವಾಗುವುದೇ ಇಲ್ಲ.

೧೩. ಆದುದರಿಂದ, ರಾಮ, ನೀನು ತೀರ್ಥಯಾತ್ರೆ, ದಾನ, ತಪಸ್ಸು, ಮುಂತಾದ ಎಲ್ಲ ಧರ್ಮ (ಕರ್ಮ) ಗಳನ್ನೂ ಬಿಟ್ಟು, ಪರಮ ಶ್ರೇಯೋರೂಪವಾದ ಮೋಕ್ಷ ಪ್ರಾಪ್ತಿಗಾಗಿ ಮುಖ್ಯವಾಗಿ ಒಳಗಿರುವ ಚಿತ್ತವೊಂದನ್ನೇ ಜಯಿಸಿ, ನಿನ್ನ ವಶದಲ್ಲಿ ಇಟ್ಟುಕೊಳ್ಳುವವನಾಗು.

೧೪. ಒಂದು ಘಟದೊಳಗೆ ಘಟಾಕಾಶವು ಹೇಗೆ ಇರುವುದೋ, ಹಾಗೆ ಚಿತ್ತದೊಳಗೆಯೇ ಈ ಸಂಸಾರವಿರುವುದು. ಉಪಾಧಿಯಾದ ಘಟವು ನಾಶವಾದ ಮಾತ್ರದಿಂದಲೇ ಘಟಾಕಾಶವೂ ಇಲ್ಲದೇ ಹೋಗುವಂತೆಯೇ, ಈ ಚಿತ್ತವು ನಾಶವಾಗಿಬಿಟ್ಟರೆ ಕೂಡಲೇ ಈ ಸಂಸಾರವೂ ಇಲ್ಲವಾಗುವುದು.

೧೫. ಒಂದು ಘಟಾಕಾಶದೊಳಗೆ ನಿರುದ್ಧವಾಗಿ ಬಹು ದುಃಖಗೊಂಡಿದ್ದ ಮಶಕ ಮಕ್ಷಿಕಾದಿ ಸಣ್ಣ ಜಂತುವು, ದೈವಾತ್ ಘಟವು ಒಡೆದುಹೋಗಲಾಗಿ, ತನ್ನ ದುಃಖ ಸಂತಾನಕ್ಕೆ ಕಾರಣವಾಗಿದ್ದ ಘಟಾಕಾಶವನ್ನು ನಾಶಗೊಳಿಸಿ, ಅಸದೃಶವಾದ ಮಹಾಕಾಶದೊಳಗೆ ಹಾರಿಹೋಗಿ ಬಂಧನವನ್ನು ಕಳೆದುಕೊಂಡು, ಸ್ವೇಚ್ಛೆಯಿಂದ ವಿಹರಿಸುತ್ತಾ ಹೇಗೆ ಸುಖಿಸುವುದೋ, ಹಾಗೆ ನೀನೂ ನಿನ್ನ ಪುರುಷಕಾರ

ವರ್ತಮಾನಮನಾಯಾಸಂ ಭಜದ್ಬಾಹ್ಯಧಿಯಾ ಕ್ಷಣಂ |
ಭೂತಂ ಭವಿಷ್ಯದಭಜನ್ಯಾತಿ ಚಿತ್ತಮಚಿತ್ತತಾಂ || ೧೬ ||

ಸಂಕಲ್ಪಾಂಶಾನುಸಂಧಾನವರ್ಜನಂ ಚೇತ್ಪ್ರತಿಕ್ಷಣಂ |
ಕರೋಷಿ ತದಚಿತ್ತತ್ವಂ ಪ್ರಾಪ್ತ ಏವಾಸಿ ಪಾವನಂ || ೧೭ ||

ಯಾವತ್ಸಂಕಲ್ಪಕಲನಾ ತಾವಚ್ಚಿತ್ತವಿಭೂತಯಃ |
ಯಾವಜ್ಜಲದ ವಿಸ್ತಾರಸ್ತಾವತ್ಜಲ ಬಿಂದವಃ || ೧೮ ||

ದಿಂದ ಚಿತ್ತವನ್ನು ನಾಶಗೊಳಿಸಿ ನಿನ್ನ ಅನಂತದುಃಖಮಯವಾದ ಸಂಸಾರಕ್ಕೆ ಹೇತುವಾದ ಮಾಯೆಯ ಬಂಧದಿಂದ ತಪ್ಪಿಸಿಕೊಂಡು, ಅನುತ್ತಮವಾದ ಆಕಾಶದಂತೆ ಸರ್ವಗತನಾದ ಬ್ರಹ್ಮಾನಂದ ಸ್ವರೂಪವನ್ನು ಪಡೆದು, ಸ್ವಸ್ಥನಾಗಿ ನಿತ್ಯ ಸುಖಿಯಾಗಿರು.

೧೬. ಬಾಹ್ಯವಾದ ವ್ಯಾವಹಾರಿಕ ದೃಷ್ಟಿಯಿಂದ ವರ್ತಮಾನ ಕಾಲಿಕಗಳಾದ ಶೀತೋಷ್ಣ ಸುಖದುಃಖಾದಿ ಕ್ಷಣಿಕ ದ್ವಂದ್ವಗಳನ್ನು ಅನಾಯಾಸವಾಗಿ (ಅಸಂಗನಾಗಿ) ಸೇವಿಸುತ್ತಲೂ, ಹಿಂದೆ ಕಳೆದುಹೋಗಿಯೂ (ಭೂತ), ಮುಂದೆ ಬರತಕ್ಕವುಗಳೂ (ಭವಿಷ್ಯತ್) ಆದ ದ್ವಂದ್ವ ವಿಷಯಗಳನ್ನು ಅನುಸಂಧಾನ ಮಾಡದೆಯೂ ಇದ್ದರೆ ಆಗ ಚಿತ್ತವು ತಾನಾಗಿಯೇ ಒಂದು ಕ್ಷಣದೊಳಗೆ ಅಚಿತ್ತತ್ವವನ್ನು ಪಡೆಯುವದು. (ಅಂದರೆ ಚಿತ್ತವು ಇದ್ದರೂ ಕಾರ್ಯಕಾರಿಯಾಗದೆ ಇರುವದರಿಂದ ಚಿತ್ತವಿಲ್ಲದಂತೆಯೇ ಆಗಿ ನಾಶಹೊಂದುವದು ಎಂದರ್ಥ.)

೧೭. ಆದುದರಿಂದ, ನೀನು ಪ್ರತಿಕ್ಷಣವೂ ಭಾವಿ ವಿಷಯ ಸಂಕಲ್ಪವನ್ನೂ ಅದರ ಅಂಶಭೂತವಾದ ಅರ್ಥಾನುಸಂಧಾನವನ್ನೂ ಮಾಡದೆ ಸಾವಧಾನದಿಂದ ಬಿಟ್ಟುಬಿಡುತ್ತಾ ಬಂದದ್ದೇ ಆದರೆ ಆಗ ನೀನು ಅತಿ ಪವಿತ್ರವಾದ ಅಚಿತ್ತತ್ವವನ್ನು (ಚಿತ್ತ ಶೂನ್ಯತೆಯನ್ನು) ಹೊಂದಿದವನೇ ಆಗುವೆ.

೧೮. ಎಲ್ಲಿಯವರೆವಿಗೆ ಮೇಘ ಮಂಡಲವು ಆಕಾಶದಲ್ಲಿ ಹರಡಿಕೊಂಡಿರುವದೋ ಅಲ್ಲಿಯವರೆವಿಗೂ ಮಳೆಯ ಬಿಂದುಗಳು ಇದ್ದೇ ಇರುವಂತೆ, ಎದುವರೆವಿಗೆ ಸಂಕಲ್ಪಗಳು ಕಲ್ಪಿಸಲ್ಪಡುತ್ತಿರುವವೋ, ಅದುವರೆವಿಗೂ ಮನೋವಿಲಾಸ ಭ್ರಮುಗಳು ಸಮೃದ್ಧಿಯಾಗಿ ಉದಯಿಸುತ್ತಿರುವವು.

ಸಚಿತ್ತಂ ಚೇತನಂ ಯಾವತ್ತಾವತ್ಸಂಕಲ್ಪಕಲನಂ |
ಸ ಚಂದ್ರಾಂಶು ಜಗದ್ಯಾವತ್ತಾವತ್ಪ್ರಾಲೇಯಲೇಶಕಾಃ ॥ ೧೯ ॥

ಚೇತನಂ ಚಿತ್ತರಿಕ್ತಂ ಚೇದ್ಭಾವಿತಂ ತತ್ಸ್ವಸಂಸೃತೇಃ |
ಆಮೂಲಮೇವ ದಗ್ಧಾನಿ ವಿದ್ಧಿ ಮೂಲಾನಿ ಸಿದ್ಧವತ್ ॥ ೨೦ ॥

ಚೇತನಂ ಚಿತ್ತರಿಕ್ತಂ ಹಿ ಪ್ರತ್ಯಕ್ಚೇತನ ಮುಚ್ಯತೇ |
ನಿರ್ಮನಸ್ಕಸ್ವಭಾವಂ ತನ್ನ ತತ್ರ ಕಲನಾಮಲಃ ॥ ೨೧ ॥

---

೧೯. ಚಿದಾತ್ಮಸ್ವರೂಪವು ಎಲ್ಲಿಯವರೆವಿಗೆ ಚಿತ್ತಯುಕ್ತವಾಗಿರುವುದೋ, ಅಲ್ಲಿಯವರೆವಿಗೂ ಸಂಕಲ್ಪಗಳೂ ಕಲ್ಪಿತವಾಗುತ್ತಿರುವುವು. ಎಲ್ಲಿಯವರೆಗೆ ಜಗತ್ತು ಚಂದ್ರಕಿರಣಗಳಿಂದ ವ್ಯಾಪ್ತವಾಗಿರುವುದೋ ಅಲ್ಲಿಯವರೆವಿಗೂ ಹಿಮದ ಲೇಶಗಳು (ಅತಿಸೂಕ್ಷ್ಮಕಣಗಳು) ಇದ್ದೇ ಇರುವುವು.

[ಚಂದ್ರನು-ಹಿಮಕರನು, ಆದಕಾರಣ.]

೨೦. ಚಿದಾತ್ಮಸ್ವರೂಪವು (ಚೇತನ-ಚೈತನ್ಯ) ಚಿತ್ತದಸೆಸೆಯಿಂದ ಪೃಥಕ್ಕೃತವಾದ ಕೂಟಸ್ಥವು ಎಂದು ದೃಢವಾಗಿ ಭಾವಿಸಿದ್ದೇ ಆದರೆ ಆಗ ನಿನ್ನ ಸಂಸಾರಕ್ಕೆ ಮೂಲಗಳಾದ ಕಾಮಕರ್ಮವಾಸನಾದಿಗಳು ಸಮೂಲವಾಗಿ ಅಂದರೆ ತಮಗೆ ಮೂಲ (ಕಾರಣ)ವಾದ ಅಜ್ಞಾನದ ಸಹಿತ ಸಂಪೂರ್ಣವಾಗಿ ಸುಡಲ್ಪಟ್ಟುವೆಂದೇ (ಸಿದ್ಧವತ್ ಕೃತ್ಯ) ತಿಳಿಯುವವನಾಗು. (ಮತ್ತು ಪರಮ ಪುರುಷಾರ್ಥವನ್ನು ಪಡೆದ ಮಹಾ ಸಿದ್ಧಪುರುಷನಿಗೆ ಸಮನೆಂದು ನಿನ್ನನ್ನು ಭಾವಿಸುವವನಾಗು.)

೨೧. ಹೀಗೆ, ಚೈತನ್ಯಾತ್ಮಸ್ವರೂಪವು ಚಿತ್ತರಹಿತವಾಗಿಬಿಡುವುದೇ ವಾಸ್ತವವಾಗಿಯೂ ಪ್ರತ್ಯಕ್ಚೇತನವೆನ್ನಿಸುವುದು. ಅದು ಸ್ವಭಾವದಿಂದಲೇ ನಿರ್ಮನಸ್ಕವಾದುದು. ಆದಕಾರಣವೇ ಅದರಲ್ಲಿ ಯಾವುದೊಂದು ಕಲ್ಪನೆಯ ಮೂಲವೂ ಇಲ್ಲವು. ಆದುದರಿಂದ ಸಂಸಾರ ಮೂಲವು ಒಂದು ಸಲ ನಿರ್ಮೂಲವಾಗಿ ಸಮಗ್ರವಾಗಿ ದಗ್ಧವಾಗಿಬಿಟ್ಟ ಬಳಿಕ ಪುನಃ ಅದೆಂದಿಗೂ ತಲೆಹಾಕುವುದೇ ಇಲ್ಲ,

ಸಾ ಸತ್ಯತಾ ಸಾ ಶಿವತಾ ಸಾಽವಸ್ಥಾ ಪರಮಾತ್ಮಿಕೀ |
ಸರ್ವಜ್ಞತಾ ಸಾ ಸಾ ದೃಷ್ಟಿರ್ನತು ಯತ್ರ ಮನಃ ಕ್ಷತಂ || ೨೨ ||

ಮನೋ ಯತ್ರ ತು ತತ್ರಾಶಾಸ್ತತ್ರ ದುಃಖಸುಖಾನಿ ಚ |
ಸದಾ ಸನ್ನಿಧಿಮಾಯಾಂತಿ ಸ್ಮಶಾನೇ ಇವ ವಾಯಸಾಃ || ೨೩ ||

ವಸ್ತುತತ್ವಾವಬೋಧೇನ ಸರ್ವಭಾವ ವ್ಯವಸ್ಥಿತೇಃ |
ಸಂಸೃತಿವ್ರತತೇರ್ಬೀಜಂ ಸಂಕಲ್ಪೇನೋಪಜಾಯತೇ || ೨೪ ||

ಶಾಸ್ತ್ರಸಜ್ಜನಸಂಪರ್ಕ ಸಂತತಾಭ್ಯಾಸಯೋಗತಃ |
ಜಾಗತಾನಾಮವಸ್ತುತ್ವಂ ಭಾವಾನಾಮವಗಮ್ಯತೇ || ೨೫ ||

---

೨೨. ಹೀಗೆ, ಚಿತ್ತರಹಿತವಾದ ಚೇತನಾತ್ಮಸ್ವರೂಪವೆಂಬುದು ಯಾವುದುಂಟೋ ಅದೇ ಪರಮಾರ್ಥಸತ್ಯತ್ವವೆಂಬುದು. ಅದೇ ನಿರತಿಶಯಾನಂದರೂಪ ಪರಮ ಮಂಗಳವು. ಅದೇ ಪರಮಾತ್ಮಸ್ವಭಾವಭೂತಸ್ಥಿತಿಯು. (ಅವಸ್ಥೆಯು) ಸರ್ವಾವ ಭಾಸಕ ಚಿದ್ರೂಪತ್ವವೂ (ಸರ್ವಜ್ಞತ್ವವು) ಅದೇ ! ಪರಮಾರ್ಥದರ್ಶನವೆಂಬುದೂ ಅದೇಯೇ! ಆ ಸ್ಥಿತಿಯಲ್ಲಾದರೋ ಈ ಹಾಳು ಮನಸ್ಸು (ನಾಶ ಹೊಂದಿ) ಇರುವುದೇ ಇಲ್ಲ.

೨೩. ಆದರೆ ಮನಸ್ಸು ಎಲ್ಲಿ ಇರುವುದೋ ಅಲ್ಲಿ ಎಲ್ಲಾ ಬಗೆಯ ಆಶೆಗಳೂ ಮತ್ತು ಸರ್ವ ಸುಖದುಃಖಗಳೂ ಕೂಡ, ಸ್ಮಶಾನದಲ್ಲಿ ಕಾಗೆಗಳಂತೆ ಸದಾ ಸನ್ನಿಹಿತವಾಗಿಯೇ ಇರುವುವು.

೨೪. ಮನಸ್ಸಿನಲ್ಲಿ ಆಶೆಯೇ ಮೊದಲಾದ ಸಕಲ ಭಾವಗಳ ವ್ಯವಸ್ಥಾಪಕವಾದ ಸಂಸಾರವೆಂಬ ಲತೆಯ ಕಾಮ ಕರ್ಮವಾಸನೆಯೆಂಬ ಬೀಜವು, ದೃಢವಾದ ಸ್ವಾತ್ಮಯಾಥಾತ್ಮ್ಯಜ್ಞಾನವೆಂಬ ಅಗ್ನಿಯಿಂದ ಚೆನ್ನಾಗಿ ಹುರಿಯಲ್ಪಟ್ಟದ್ದಾಗಿ, ಎಂದೆಂದಿಗೂ ಸಂಕಲ್ಪದಲ್ಲಿ ಉದಯಿಸುವುದೇ ಇಲ್ಲ, ಈ ಕಾರಣದಿಂದ ಜ್ಞಾನಿಗಳಿಗೆ ಮನಸ್ಸಿದ್ದರೂ ಅಲ್ಲಿ ಆಶೆ ಮುಂತಾದುವುಗಳು ಹುಟ್ಟುವುದಿಲ್ಲ ಎಂದು ತಿಳಿ.

೨೫. ವೇದಾಂತ ಶಾಸ್ತ್ರಗಳ ಅಧ್ಯಯನವನ್ನೂ ಸಾಧು ಸತ್ಪುರುಷರ ಸಹವಾಸವನ್ನೂ ಸಂತತವಾಗಿ ಅಭ್ಯಾಸ ಮಾಡಿದರೆ ಅದರ ಮೂಲಕ ಈ ಪ್ರಾಪಂಚಿಕ ಸಕಲ ವಸ್ತುಗಳ ಅಸತ್ಯತ್ವವು (ಮಿಥ್ಯಾತ್ವವು) ಸ್ಪಷ್ಟವಾಗಿ ಗೋಚರವಾಗುವುದು.

ಅವಿವೇಕಾದುಪಾಹೃತ್ಯ ಚೇತಸೋದ್ಯಮ ನಿಶ್ಚಯೈಃ |
ಬಲಾತ್ಕಾರೇಣ ಸಂಯೋಜ್ಯಂ ಶಾಸ್ತ್ರಸತ್ಪುರುಷ ಕ್ರಮೈಃ || ೨೬ ||

ಮುಖ್ಯಂ ಕಾರಣಮಾತ್ಮೈವ ಪರಮಾತ್ಮಾವಲೋಕನೇ |
ಅಗಾಧೇ ಪತಿತಂ ರತ್ನಂ ರತ್ನೇನೈವಾವಲೋಕ್ಯತೇ || ೨೭ ||

ಸ್ವಾನುಭೂತಾನಿ ದುಃಖಾನಿ ಸ್ವಾತ್ಮೈವ ತ್ಯಕ್ತುಮಿಚ್ಛತಿ |
ತೇನಾತ್ಮೈವಾತ್ಮ ವಿಜ್ಞಾನೇ ಹೇತುರೇಕಃ ಪರಃ ಸ್ಮೃತಃ || ೨೮ ||

---

೨೬. ಆದಕಾರಣ, ಮುಮುಕ್ಷುವಾದ ಅಧಿಕಾರಿಯು ಪುರುಷಪ್ರಯತ್ನ ಸಹಿತವಾದ, ಅವಶ್ಯವಾಗಿ "ನಾನು ಈ ಜನ್ಮದಲ್ಲಿ ಜ್ಞಾನವನ್ನು ಸಾಧಿಸುತ್ತೇನೆ" ಎಂಬ ಧೃಢನಿಶ್ಚಯಗಳಿಂದ ಮನಸ್ಸನ್ನು ಅವಿವೇಕದ ದೆಸೆಯಿಂದ ಹಿಂದಿರುಗಿಸಿ, ಬಲಾತ್ಕಾರದಿಂದ ಅದನ್ನು ಶಾಸ್ತ್ರಸತ್ಸಂಗಗಳಲ್ಲಿ ಸೇರಿಸಬೇಕು.

೨೭. ಸ್ವಯಂಜ್ಯೋತಿಸ್ಸ್ವರೂಪನಾದ ಪರಮಾತ್ಮ ಸಾಕ್ಷಾತ್ಕಾರದಲ್ಲಿ ಆತ್ಮವೇ ಮುಖ್ಯ ಕಾರಣವು. ಅಗಾಧವಾದ ಸಂಸಾರದಲ್ಲಿ ಸಿಕ್ಕಿಬಿದ್ದಿರುವ ಸ್ವಯಂಜ್ಯೋತಿಃ ಸ್ವರೂಪನಾದ ಪ್ರತ್ಯಗಾತ್ಮನು (ರತ್ನದಂತೆ) ಪ್ರಕಾಶಮಾನನಾದ ಆತ್ಮನಿಂದಲೇ ಸಾಕ್ಷಾತ್ತಾಗಿ ಅವಲೋಕಿಸಲ್ಪಡುವನು.

೨೮. ತನ್ನಿಂದ ಅನುಭೂತವಾದ ಸಕಲ ದೃಶ್ಯಜಾತಗಳೂ ಕೇವಲ ದುಃಖಗಳೇ ಎಂದು ವಿವೇಕದಿಂದ ನಿಶ್ಚಯಿಸಿ, ತಾನು ಜಡವೂ ದುಃಖವೂ ಆದ ದೃಶ್ಯಗಳಿಗೆ ವಿರುದ್ಧವಾದ ಸ್ವಭಾವವುಳ್ಳವನು ಅಂದರೆ ಸಚ್ಚಿದಾನಂದ ಸ್ವರೂಪನು ಎಂಬ ಯಾವ ಕಾರಣದಿಂದ ನಮ್ಮ ಆತ್ಮವು ಸಕಲ ದೃಶ್ಯಗಳನ್ನೂ ಪರಿಹರಿಸಲು ಇಚ್ಛಿಸುಸುವುದೋ ಅದೇ ಕಾರಣದಿಂದ ಆತ್ಮವೇ ಆತ್ಮವಿಜ್ಞಾನದಲ್ಲಿ ಅತಿಮುಖ್ಯವಾದ, ಒಂದೇ ಒಂದಾದ ಕಾರಣವೆಂದು ಪ್ರಾಜ್ಞರು ಹೇಳುವರು.

[ನಮ್ಮ ಆತ್ಮವೂ ಸ್ವಾನುಭೂತದೃಶ್ಯಗಳಂತೆ ಜಡವೂ ದುಃಖವೂ ಆಗಿದ್ದ ಪಕ್ಷದಲ್ಲಿ ಆ ದೃಶ್ಯಗಳಿಗೆ ಪ್ರತಿಕೂಲ ಭೂತನಾಗಿ ಅವುಗಳನ್ನು ಬಿಡಬೇಕೆಂದು ಇಚ್ಛಿಸುತ್ತಿರಲಿಲ್ಲ. ಆತ್ಮನು ದೃಶ್ಯವಿಲಕ್ಷಣನಾದ ಚಿದಾನಂದ ಸ್ವಭಾವದವನಾದು

ಪ್ರಲಪನ್ವಿಸೃಜನ್ಗೃಹ್ಣನ್ನುನ್ಮಿಷನ್ನಿಮಿಷನ್ನಪಿ |
ನಿರಸ್ತಮನನಾನಂತಸಂವಿನ್ಮಾತ್ರಪರೋ ಭವ ॥ ೨೯ ॥

ಜಾಯಮಾನಸ್ತಥಾ ಜೀವನ್ಮ್ರಿಯಮಾಣಃ ಕ್ರಿಯಾರತಃ |
ಸ್ವಾತ್ಮನ್ಯಮಲತಾಂ ಪ್ರಾಪ್ತೇ ಸಂವಿದಂಶೇ ಸ್ಥಿರೋ ಭವ ॥ ೩೦ ॥

ಮಮೇದಂ ತದಯಂ ಮೋಹಮಿತಿ ಸಂತ್ಯಜ್ಯ ವಾಸನಾಃ |
ಏಕನಿಷ್ಠತಯಾಂತಸ್ಥ ಸಂವಿನ್ಮಾತ್ರಪರೋ ಭವ ॥ ೩೧ ॥

ದರಿಂದಲೇ ಅವುಗಳನ್ನು ಬಿಡಲು ಇಚ್ಛಿಸುವನು ಎಂಬುದು ಸಿದ್ಧಾಂತವು. ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್, ಆತ್ಮೈವಹ್ಯಾತ್ಮನೋಬಂಧುಃ ಆತ್ಮೈವ ರಿಪುರಾತ್ಮನಃ॥ ಗೀತಾ ೬-೫]

೨೯. ಆದುದರಿಂದ, ರಾಘವ, ನೀನು ಮಾತನಾಡುವಾಗಲೂ ಅಪ್ರಿಯವಾದುದನ್ನು ತ್ಯಜಿಸುವಾಗಲೂ, ಪ್ರಿಯವಾದುದನ್ನು ಸ್ವೀಕರಿಸುವಾಗಲೂ, ಉನ್ಮೇಷ ನಿಮೇಷಗಳನ್ನು ಮಾಡುವಾಗಲೂ ಹೀಗೆ ಸಕಲ ಲೌಕಿಕ ವ್ಯವಹಾರಗಳನ್ನು ನಡೆಯುಸುತ್ತಿದ್ದರೂ ಸರ್ವದಾ ಆತ್ಮ ಲಾಭಕ್ಕಾಗಿ ಸಕಲ ವಿಧ ಮನನಗಳಿಂದ ಶೂನ್ಯನಾಗಿ ಅನಂತ ಚಿನ್ಮಾತ್ರಾತ್ಮಕನಾದ ಆತ್ಮಸ್ವರೂಪವೊಂದರಲ್ಲಿಯೇ ತತ್ಪರನಾಗಿರು.

[ಭಗವದ್ಗೀತಾ ೫ನೇ ಅಧ್ಯಾಯ ೮-೯-೧೦ ಶ್ಲೋಕಗಳನ್ನು ನೋಡಿ.]

೩೦. ನೀನು ಮತ್ತೆ ಜನ್ಮ ಪಡೆದರೂ ಅಥವಾ ಜೀವಿಸಿರುವಾಗಲೂ ಅಥವಾ ಮರಣಹೊಂದಿದರೂ ಅಥವಾ ಆಯಾವ್ಯವಹಾರಗಳಲ್ಲಿ (ಕಾರ್ಯಗಳಲ್ಲಿ) ನಿರತನಾಗಿದ್ದರೂ, ಹೀಗೆ ಸಕಲ ವಿಧಗಳಲ್ಲಿಯೂ ಸರ್ವದಾ ಅವಿದ್ಯೆಯೆಂಬ ಮಲವನ್ನು ಶೋಧಿಸಿ ತೆಗೆದುಹಾಕಿದುದರಿಂದ ಸ್ವಸ್ವಭಾವವಾದ ನೈರ್ಮಲ್ಯವನ್ನು ಪಡೆದ ಚಿನ್ಮಾತ್ರಸ್ವಾತ್ಮಸ್ವರೂಪದಲ್ಲಿಯೇ ಸ್ಥಿರನಾಗಿ ನಿಲ್ಲು. [ಇಲ್ಲಿ ಜನನ ಮರಣಗಳನ್ನು ಹೇಳಿರುವುದರಿಂದ ಅವುಗಳಿಗೆ ಸಮನಾದ ಸುಖದುಃಖರೂಪ ದುರ್ದಶೆಗಳಲ್ಲಿಯೂ ಆತ್ಮಾನುಸಂಧಾನವನ್ನು ಮರೆಯಕೂಡದು ಎಂದು ವಿಧಿಸಿರುವುದು.]

೩೧. ಇದು ನನ್ನದು, ಅದು ನನ್ನದು, ಅವನು ನನ್ನವನು, ನಾನು ಅಂತಹವನು ಇತ್ಯಾದಾಕಾರಕ ನಾನಾ ವಾಸನೆಗಳನ್ನೆಲ್ಲ ಪರಿತ್ಯಜಿಸಿ, ನಿನ್ನ ದೇಹಾಂತರ್ವರ್ತಿಯಾದ ಕೇವಲ ಚಿನ್ಮಾತ್ರಸ್ವರೂಪದಲ್ಲಿ ಏಕನಿಷ್ಠೆಯಿಂದ ಸ್ಥಿರನಾಗಿರು.

ವರ್ತಮಾನ ಭವಿಷ್ಯಂತ್ಯೋಃ ಸ್ಥಿತ್ಯೋರಾದೇಹಮೇಕಧೀಃ ।
ಸ್ವಸಂವಿತ್ಯಾನುಸಂಧಾನಸಮಾಧಾನಪರೋ ಭವ　　॥ ೩೨ ॥

ಬಾಲ್ಯಯೌವನವೃದ್ಧೇಷು ದುಃಖೇಷು ಚ ಸುಖೇಷು ಚ ।
ಜಾಗ್ರತ್ಸ್ವಪ್ನ ಸುಷುಪ್ತೇಷು ಸ್ವಸಂವಿತ್ತಿಪರೋ ಭವ　　॥ ೩೩ ॥

ಮಲಂ ಸಂವೇದ್ಯಮುತ್ಸೃಜ್ಯ ಮನೋ ನಿರ್ಗಲಂಯನ್ಪರಂ ।
ಆಶಾಪಾಶಮಲಂ ಛಿತ್ವಾ ಸ್ವಸಂವಿತ್ತಿಪರೋಭವ　　॥ ೩೪ ॥

ಶುಭಾಶುಭಸ್ವಸಂಕೇತ ಸಂಶಾಂತಾಶಾ ವಿಷೂಚಿಕಃ ।
ನಷ್ಟೇಷ್ಟಾನಿಷ್ಟದೃಷ್ಟಿಸ್ತ್ವಂ ಸಂವಿತ್ಸಾರಪರೋ ಭವ　　॥ ೩೫ ॥

---

೩೨. ಈಗಿರುವ ಸ್ಥಿತಿಯಲ್ಲಿಯೂ, ಮುಂದೆ ಬರಬಹುದಾದ ಸ್ಥಿತಿಯಲ್ಲಿಯೂ ಕೂಡ ಒಂದೇ ವಿಧವಾದ ಸ್ಥಿರಬುದ್ಧಿಯುಳ್ಳವನಾಗಿ ಸ್ವಾತ್ಮತತ್ತ್ವಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು, ಈ ದೇಹಪಾತವಾಗುವವರೆವಿಗೂ ಸರ್ವದಾ ಸ್ವಾತ್ಮವನ್ನೇ ಅನುಸಂಧಾನ (ಧ್ಯಾನ) ಮಾಡುತ್ತಾ ಸಮಾಧಿನಿಷ್ಠನಾಗಿರು. (ಸಮಾಹಿತ ನಾಗಿರು.)

೩೩. ಬಾಲ್ಯ ಯೌವನವಾರ್ಧಕಗಳಲ್ಲಿಯೂ, ಸುಖದುಃಖಕಾಲಗಳಲ್ಲಿಯೂ, ಜಾಗ್ರತ್ ಸ್ವಪ್ನಸುಷುಪ್ತ್ಯಾವಸ್ಥೆಗಳಲ್ಲಿಯೂ ಸರ್ವದಾ ನೀನು ಸ್ವಸ್ವರೂಪಾನು ಸಂಧಾನದಲ್ಲಿ ಮಾತ್ರ ನಿರತನಾಗಿರು.

೩೪. ಬಾಹ್ಯ ವಿಷಯುಗಳೆಂಬ ಮಲವನ್ನು ಬಿಟ್ಟು ಬಿಟ್ಟು, ಮನಸ್ಸನ್ನು ಚೆನ್ನಾಗಿ ಪರಿಶೋಧಿಸಿ, ಆಶಾ ಪಾಶಗಳನ್ನು ಸಂಪೂರ್ಣವಾಗಿ ಕತ್ತರಿಸಿಹಾಕಿ, ನೀನು ಸ್ವಸ್ವರೂಪಾನುಸಂಧಾನ ಮಾತ್ರ ತತ್ಪರನಾಗಿರು.

೩೫. ಈ ಸ್ವಸಂಕಲ್ಪದಿಂದ ಸಂಕೇತಮಾಡಲ್ಪಟ್ಟಿರುವ ಶುಭಾಶುಭಫಲಗಳಲ್ಲಿ ತಾನಾಗಿಯೇ ಉಂಟಾಗತಕ್ಕ ಆಶೆಯೆಂಬ ವಿಷೂಚಿಕೆಯನ್ನು ಚೆನ್ನಾಗಿ ಶಾಂತಿಗೊಳಿಸಿ, ಇದು ಇಷ್ಟ, ಇದು ಅನಿಷ್ಟವೆಂಬ ಜ್ಞಾನವನ್ನು ನಾಶಪಡಿಸಿಕೊಂಡು ನೀನು ಶಾಶ್ವತವಾದ ಕೇವಲ ಚಿನ್ಮಾತ್ರದಲ್ಲಿ ಸ್ಥಿರನಾಗಿರು.

[ವಿಷೂಚಿಕಾ-ಕಾಲರಾ ಎಂಬ ರೋಗ.]

ಸಕರ್ತೃಕರ್ಮಕರಣಾನ್ಸ್ವಸ್ಪರ್ಶಾನಂತರಾ ಸ್ಪೃಶನ್ |
ನಿರ್ವಿಕಲ್ಪನಿರಾಲಂಬಃ ಸ್ವಚಿನ್ಮಾತ್ರಪರೋ ಭವ || ೩೬ ||

ಜಾಗ್ರತ್ಯೇವ ಹಿ ಸಂಸುಪ್ತಾಂ ಭಾವಯನ್ಸುಸ್ಥಿರಾಂ ಸ್ಥಿತಿಂ |
ಸರ್ವಮಸ್ಮೀತಿ ಸಂಚಿಂತ್ಯ ಸತ್ತೈಕಾತ್ಮವಪುರ್ಭವ || ೩೭ ||

ನಾನಾನಾನಾದಶಾಮುಕ್ತೋ ಯುಕ್ತೋ ಮುಕ್ತತಯಾ ಸಮೇ |
ಸಮುಗ್ರಕಲನಾದೀಪಃ ಸ್ವಚಿನ್ಮಾತ್ರಪರೋ ಭವ || ೩೮ ||

---

೩೬. ಕರ್ತೃ, ಕರ್ಮ, ಕರಣಾದಿ (ಕ್ರಿಯಾನಿರ್ವರ್ತಕ) ಸಕಲ ಕಾರಕಗಳಿಂದ ಯುಕ್ತವಾಗಿಯೂ ಸ್ವಾತ್ಮನೊಂದಿಗೆ ಯಾವ ವಿಧವಾದ ಸಂಪರ್ಕವೂ (ಸಂಸರ್ಗವೂ) ಇಲ್ಲದುದಾಗಿಯೂ ಇರುವ ಸಂಸಾರಗಳನ್ನು ಒಂದು ಸ್ವಚ್ಛವಾದ ಸ್ಫಟಿಕಮಣಿಯು ತನ್ನೊಳಗೆ ಅಂತರ್ಗತವಾದ ಪ್ರತಿಬಿಂಬಗಳನ್ನು ಹೇಗೋ ಹಾಗೆ ನೀನು ನಿನ್ನೊಳಗೆಯೇ ಪ್ರಕಟಿಸುತ್ತಾ ನಿರ್ವಿಕಲ್ಪನಾಗಿಯೂ ನಿರಾಲಂಬನಾಗಿಯೂ ಇದ್ದು ಕೇವಲ ಚಿನ್ಮಾತ್ರಪರನಾಗಿರು.

[ಸ್ವಂ ಆತ್ಮಾನಂ ನ ಸ್ಪೃಶಂತಿ= ಆತ್ಮನನ್ನು ಸ್ಪರ್ಶಮಾಡುವುದಿಲ್ಲ. ಎಂಬರ್ಥದಲ್ಲಿ ಸ್ವಾಸ್ಪರ್ಶಾಃ ಸ್ಪೃಶನ್ ಪ್ರಥರ್ಯ ಸಕರ್ತೃಕರ್ಮಕರಣಾ ಕರ್ತಾ ವಿಜ್ಞಾನಮಯಃ ಕರ್ಮ ಬಾಹ್ಯವಿಷಯಾಃ ಕರಣಾನಿ ಇಂದ್ರಿಯಾಣಿ ತತ್ಸಹಿತಾನ್ ಎಂದು ತಾತ್ಪರ್ಯಪ್ರಕಾಶದಲ್ಲಿ ಹೇಳಿದೆ.]

೩೭. ನೀನು ಜಾಗ್ರದ್ದಶೆಯಲ್ಲಿಯೇ ಇದ್ದರೂ ಸುಷುಪ್ತಾವಸ್ಥೆಯಂತೆ ನಿರ್ವಿಕಲ್ಪವಾದ ಅತ್ಯಂತ ಸ್ಥಿರವಾದ ನಿನ್ನ ಪಾರಮಾರ್ಥಿಕ ಸ್ಥಿತಿಯನ್ನು ಮರೆಯದೆ ಸರ್ವದಾ ಭಾವನೆಮಾಡುತ್ತಾ ನಾನೇ ಸರ್ವವೂ ಆಗಿರುವೆನೆಂದು ಚಿಂತಿಸುತ್ತಾ ಕೇವಲ ಸತ್ತಾಮಾತ್ರಶರೀರನಾಗಿರು (ಸನ್ಮಾತ್ರರೂಪನಾಗಿರು.)

೩೮. ನೀನು ನಾನಾದಶೆಗಳುಳ್ಳ ಜಾಗ್ರತ್ಸ್ವಪ್ನಗಳಿಂದಲೂ (ಅಥವಾ ಸೃಷ್ಟಿಯಿಂದಲೂ) ಇಂತಹ ನಾನಾ ದಶೆಗಳಿಲ್ಲದಿರುವ (ಅನಾನಾದಶಾ) ಸುಷುಪ್ತಿಯಿಂದಲೂ (ಅಥವಾ ಪ್ರಳಯದಿಂದಲೂ) ಮುಕ್ತನಾಗಿಯೂ, ತತ್ತ್ವಜ್ಞಾನದಿಂದ ಮುಕ್ತನಾಗಿರುವ ಕಾರಣ ಬ್ರಹ್ಮನಲ್ಲಿ ಐಕ್ಯವನ್ನು (ಅಭೇದ) ಹೊಂದಿದವನಾ

ಆತ್ಮತಾಪರತೇ ತ್ಯಕ್ತ್ವಾ ನಿರ್ವಿಭಾಗೌ ಜಗತ್ಸ್ಥಿತೌ |
ವಜ್ರಸ್ತಂಭವದಾತ್ಮಾನಮವಲಂಬ್ಯ ಸ್ಥಿರೋ ಭವ || ೩೯ ||

ಸ್ಥಿತ್ವಾಂತರ್ಮಾನಸಾನ್ಪಾಶಾನಾಶಾರೂಪಾನುದಾರಯಾ |
ಧಿಯಾ ಧೈರ್ಯೈಕಧರ್ಮಿಣ್ಯಾ ನಿರ್ಧರ್ಮಾಧರ್ಮತಾಂ ವ್ರಜ || ೪೦ ||

ಸಮಾಸ್ವಾದಯ ತತ್ಸತ್ತ್ವಂ ಸ್ವಸಂವೇದನಧರ್ಮಿಣಃ |
ವಿಷಂ ಹಾಲಾಹಲಮಪಿ ಯಾಸ್ಯತ್ಯಮೃತತಾಮಥ || ೪೧ ||

ಗಿಯೂ, ನಾನಾವಿಧಗಳಾದ ಸಕಲ ಬುದ್ಧಿ ವೃತ್ತಿಗಳಿಗೂ ದೀಪದಂತೆ ಪ್ರಕಾಶಕ ನಾಗಿಯೂ (ಅಥವಾ ಸಮಸ್ತ ದೃಶ್ಯಪ್ರಪಂಚವನ್ನೂ ಪ್ರಕಟಗೊಳಿಸುವ ದೀಪ ವಾಗಿಯೂ) ಸ್ವಚಿನ್ಮಾತ್ರನಿರತನಾಗಿರು.

೩೯. "ಇದು ನನ್ನದು, ಇದು ಇತರರದು" ಎಂಬ ಭಾವನೆಯನ್ನು ಬಿಟ್ಟು ಬಿಟ್ಟು ,ಲೌಕಿಕ ವ್ಯಾಪಾರದಲ್ಲಿ ಸರ್ವತ್ರ ಭೇದ ಬುದ್ಧಿ ಶೂನ್ಯನಾಗಿ, ಸ್ವಾತ್ಮನನ್ನು ವಜ್ರಸ್ತಂಭದಂತೆ ದೃಢವಾಗಿ ಅವಲಂಬಿಸಿ ಸ್ಥಿರನಾಗಿರು.

೪೦. ಧೈರ್ಯವೇ ಮುಖ್ಯ ಧರ್ಮವಾಗುಳ್ಳ ಉದಾರವಾದ ಬುದ್ಧಿಯಿಂದ ಮಾನಸಿಕಗಳಾದ ಆಶಾಪಾಶಗಳನ್ನು, ಒಳಗೆಯೇ ತಲೆಯೆತ್ತದಂತೆ ಕತ್ತರಿಸಿಹಾಕಿ, ಧರ್ಮಾಧರ್ಮಗಳೊಂದೂ ಇಲ್ಲದವನಾಗಿ ಆತ್ಮಪರಿನಿಷ್ಠಿತನಾಗಿರು.

[ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂ ಶರಣಂ ವ್ರಜ. ಗೀತಾ. ೧೮-೬೬. ಸರ್ವಧರ್ಮಾಧರ್ಮಗಳನ್ನೂ (ಸರ್ವ ಕರ್ಮಗಳನ್ನೂ) ಸನ್ಯಾಸಮಾಡಿ, ಸರ್ವಾತ್ಮಕನೂ, ಸಮನೂ, ಸರ್ವಭೂತಸ್ಥಿತನೂ ಆದ ಈಶ್ವರನನ್ನು (ಮಾಂಏಕಂ) ನಾನೇ ಎಂದು ಅವಧರಿಸು. "ತ್ಯಜ ಧರ್ಮಂ ಅಧರ್ಮಂ ಚ ಉಭೇ ಸತ್ಯಾನೃತೇ ತ್ಯಜ | ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ ತ್ಯಜ ||"]

೪೧. ಹೀಗೆ, ತತ್ತ್ವಾಸ್ವಾದನೆಮಾಡುತ್ತ ಆತ್ಮಜ್ಞಾನೈಕನಿಷ್ಠನಾಗಿರುವ ಮಹಾತ್ಮನಿಗೆ ಸರ್ವವೂ ಅಮೃತವಾಗಿಬಿಟ್ಟಿರುವ ಕಾರಣ, ಹಾಲಾಹಲ ವಿಷವೂ ಕೂಡ ಅಮೃತವಾಗಿಬಿಡುವುದು.

[ಸರ್ವಗತ ಸರ್ವಾತ್ಮಭಾವನೆಯುಳ್ಳ ಪ್ರಹ್ಲಾದನಿಗೆ ಹಾಲಾಹಲವಿಷವೂ ಅಮೃತವಾದುದು ದೃಷ್ಟಾಂತ.]

ತದೋದೇತಿ ಮಹಾಮೋಹಃ ಸಂಸೃತಿ ಭ್ರಮಕಾರಣಂ |
ನಿರ್ಮಲಾಯಾ ನಿರಂಶಾಯಾಃ ಸಂವಿತ್ತೇಽಶ್ಜಾಮತಿರ್ಯದಾ ॥ ೪೨ ॥

ಸದಾ ಸಂಕ್ಷೀಯತೇ ಮೋಹಃ ಸಂಸಾರಭ್ರಮಕಾರಣಂ |
ನಿರ್ಮಲಾಯಾಂ ನಿರಂಶಾಯಾಂ ಸ್ವಸಂವಿತ್ತೌ ಸ್ಥಿತಿರ್ಯದಾ ॥ ೪೩ ॥

ಸ್ವರೂಪಮನುಯಾತಸ್ಯ ತೀರ್ಣಸ್ಯಾಶಾಮಹಾರ್ಣವಂ |
ಪ್ರಸರಿಷ್ಯತಿ ತೇ ಸಂವಿತ್ಸೂರ್ಯಾಂಶುರಿವ ಸರ್ವತಃ ॥ ೪೪ ॥

ಸ್ವಭಾವಮಾಲೋಕಯತ ಆನಂದಾದ್ವಯಸಂಸ್ಥಿತೇಃ |
ರಸಾಯನಮಪಿ ಸ್ವಾದು ರಾಮ ಪ್ರತಿ ವಿಷಾಯತೇ ॥ ೪೫ ॥

---

೪೨. ನಿರ್ಮಲವಾಗಿಯೂ, ನಿರವಯವವಾಗಿಯೂ ಇರುವ ಚಿತ್ತತ್ತ್ವದ ಅಜ್ಞಾನವು (ವಿಸ್ಮೃತಿಯು) ಯಾವಾಗ ಇರುವುದೋ ಆಗ ಈ ಸಂಸಾರಭ್ರಮ ಹೇತುವಾದ ಮಹಾ ಮೋಹವು ಉದಯಿಸುವುದು.

೪೩- ನಿರ್ಮಲವೂ, ನಿರವಯವವೂ ಆಗಿರುವ ಸ್ವಾತ್ಮಚಿತ್‌ಸ್ವರೂಪದಲ್ಲಿ ಯಾವಾಗ ಸ್ಥಿತಿಯು ಉಂಟಾಗುವದೋ ಆಗ ಸಂಸಾರಭ್ರಮಹೇತುವಾದ ಮಹಾ ಮೋಹವು ಸಂಪೂರ್ಣವಾಗಿ ಕ್ಷಯಿಸಿ ನಾಶಹೊಂದುವುದು.

೪೪. ನೀನು ಸ್ವಸ್ವರೂಪವನ್ನು ಬಿಡದೆ ಅದರಲ್ಲಿಯೇ ಪರಿನಿಷ್ಠಿತನಾಗಿ, ಆಶೆ ಯೆಂಬ ಮಹಾ ಸಮುದ್ರವನ್ನು ದಾಟಿಬಿಟ್ಟರೆ ಆಗ ನಿನಗೆ ಎಲ್ಲೆಲ್ಲಿಯೂ ಸೂರ್ಯ ಕಿರಣದಂತೆ ಚಿದ್ರೂಪವೊಂದೇ ಪ್ರಸರಿಸುತ್ತಿರುವುದು.

[ರಸೋಽಪ್ಯಸ್ಯ ಪರಂ ದೃಷ್ಟ್ವಾನಿವರ್ತತೇ —ಗೀತಾ. ೨-೫೯.]

೪೫. ಅಯ್ಯಾ ರಾಮ, ಸಚ್ಚಿದಾನಂದಾತ್ಮಕ ಸ್ವಸ್ವರೂಪವನ್ನು ಸರ್ವದಾ ಸಾಕ್ಷಾತ್ಕರಿಸುತ್ತ ನಿತ್ಯಾನಂದರೂಪ ಅದ್ವಿತೀಯಾತ್ಮ ಸ್ಥಿತಿಯಲ್ಲಿ ಪರಿನಿಷ್ಠಿತನಾದವನಿಗೆ ಅತಿ ಮಧುರವಾದ ರಸಾಯನವೂ ಕೂಡ ಪ್ರತಿಕೂಲವಾದ ವಿಷದಂತೆ ಆಗಿಬಿಡುವುದು. (ಅಂದರೆ ಆತ್ಮ ಪರಮಾನಂದ ಲಾಭದಿಂದ ಈ ರಸಾಯನವೂ ಕೇವಲ ತುಚ್ಛವಾಗಿ ನೀರಸವಾಗಿ ಬೇಡವಾಗುವುದು.)

ತೈರ್ನೋ ಭಜಾಮಹೇ ಪುಂಭಿರ್ಯೇ ಸ್ವಭಾವಮುಪಾಗತಾಃ |
ಏಷಾಂ ಪುರುಷನಾಮಾನೋ ಗರ್ದಭಾ ದೀರ್ಘಬಾಹವಃ || ೪೬ ||

ಪರ್ವತಾತ್ಪರ್ವತಂ ಯಾಂತಿ ಪುರೋದ್ರೇರಿವ ದಂತಿನಃ |
ಪರಾಂ ಕೋಟಿಂ ಪ್ರಯಾತಸ್ಯ ಸ್ವಸಂವಿತ್ತ್ಯುನ್ನತಸ್ಥಿತೇಃ || ೪೭ ||

ಅದೃಷ್ಟಾದೃಶ್ಯಸೀಮ್ನೋಽತಃ ಸೂರ್ಯಾದೀನ್ಯಖಿಲಾನ್ಯಪಿ |
ನ ತೇಜಾಂಸ್ಯುಪಕುರ್ವಂತಿ ಸ್ವಸಂವಿದ್ದಿವ್ಯಚಕ್ಷುಷಃ || ೪೮ ||

---

೪೬. ಯಾವ ಪುರುಷರು ತಮ್ಮ ಸ್ವಭಾವ (ಸ್ಥಿತಿಗೆ) ಸದೃಶವಾದ, ಪ್ರತ್ಯಗಾತ್ಮ (ಭಾವ) ಸ್ಥಿತಿಯನ್ನು ಪಡೆದು ಜೀವನ್ಮುಕ್ತರಾಗಿರುವರೋ ಅವರೇ ತಮ್ಮ ಪುರುಷ ಜನ್ಮವನ್ನು ಸಾರ್ಥಕಪಡಿಸಿಕೊಂಡಿರುವುದರಿಂದಲೂ ಪರಮ ಪುರುಷಾರ್ಥವನ್ನು ಸಾಧಿಸಿರುವದರಿಂದಲೂ, ಪುರುಷಾಕಾರದ ಸಾಫಲ್ಯವನ್ನು ಪಡೆದಿರುವದರಿಂದಲೂ, ಪುರುಷಶ್ರೇಷ್ಠರು. ಅಂತಹ ಮಹಾನುಭಾವರೊಡನೆ ನಾವು ಸರ್ವದಾ ಮೈತ್ರಿಯನ್ನು ಪಡೆಯುವೆವು. ಇತರರಾದರೋ ಪುರುಷಾರ್ಥೋಪಯೋಗಿ ಪೌರುಷಹೀನರಾಗಿ, ನಾಮ ಮಾತ್ರದಿಂದ ಪುರುಷರೆನ್ನಿಸಿಕೊಳ್ಳುತ್ತಾ ಸಂಚರಿಸುವ ದೀರ್ಘಬಾಹುಗಳಾದ ಗರ್ದಭ (ಕತ್ತೆ)ಗಳೇ ಸರಿ.

೪೭. ಸ್ವಾತ್ಮಜ್ಞಾನಲಾಭದಿಂದ ಸರ್ವೋನ್ನತಸ್ಥಿತಿಯಲ್ಲಿರುವ, ಆದಕಾರಣವೇ ನಿರತಿಶಯವಾದ, ಉತ್ಕರ್ಷದ ತುದಿಯನ್ನು ಹೋಗಿ ಸೇರಿರುವ ತತ್ತ್ವಜ್ಞನ ಮುಂದ್ಗಡೆಯಲ್ಲಿ, ಮೇರುಪರ್ವತದ ಎದುರಿನಲ್ಲಿ ಆನೆಗಳು ಒಂದು ಸಣ್ಣ ಬೆಟ್ಟದಿಂದ ಮತ್ತೊಂದು ಬೆಟ್ಟಕ್ಕೆ ಅಲೆದಾಡುವಂತೆ, ಯೋಗಿಗಳೂ ಉಪಾಸಕರೂ ಮುಂತಾದವರೆಲ್ಲ ಆತ್ಮಜ್ಞಾನೋಪದೇಶಕ್ಕಾಗಿ ಆಯಾ ಮಹಾತ್ಮರನ್ನು ಹುಡುಕಿಕೊಂಡು ಅತ್ತಿತ್ತ ಭ್ರಮಿಸುತ್ತಿರುವಂತೆ ಕಾಣುವರು. (ಅನಾತ್ಮಜ್ಞರು ವಿಶೇಷವಾದ ಯೋಗಸಿದ್ಧರಾಗಿದ್ದರೂ ಉಪಾಸಕರಾಗಿದ್ದರೂ ಅವರೆಲ್ಲರಿಗಿಂತಲೂ ಆತ್ಮಜ್ಞನೇ ಸರ್ವೋತ್ಕೃಷ್ಟನು.)

೪೮. ಸ್ವಾತ್ಮಜ್ಞಾನವೆಂಬ ದಿವ್ಯದೃಷ್ಟಿಯನ್ನು ಪಡೆದಿರುವ ತತ್ವಜ್ಞನ ಉನ್ನತ ಸ್ಥಿತಿಯ ಅವಧಿಗಳು ಹಿಂದೆ ಯಾರಿಂದಲೂ ನೋಡಲ್ಪಟ್ಟಿಲ್ಲ. ಈಗಲೂ ಮತ್ತು ಇನ್ನು ಮೇಲೆಯೂ ನೋಡಲು ಶಕ್ಯಗಳಲ್ಲ. ಸೂರ್ಯಚಂದ್ರಾದಿ ಅಖಿಲ

ಅವಸ್ತುತಾಂ ವ್ರಜಂತ್ಯೇತೇ ಮಧ್ಯಾಹ್ನಾ ಇವ ದೀಪಕಾಃ |
ಅರ್ಕಾದಯೋ ಮಹಾಲೋಕಾ ವಿದ್ಯಯಾಧಿಗತಾತ್ಮನಃ || ೪೯ ||

ತೇಜೋಂಶುಷು ಪ್ರಭಾವೇಷು ಬಲಿಷ್ವಪಿ ಮಹತ್ಸ್ವಪಿ |
ಸರ್ವೇಷೂನ್ನತಿಯುಕ್ತೇಷು ತತ್ತ್ವಜ್ಞಃ ಪರಮೋನ್ನತಃ || ೫೦ ||

ಭಾಂತೀಹ ಭಾಸಾ ಯಸ್ಯಾರ್ಕವಹ್ನೀಂದು ಮಣಿತಾರಕಾಃ |
ತಥಾ ಜಯತಿ ರಾಜಂತೇ ಜ್ಞಾತಜ್ಞೇಯಾ ನರೋತ್ತಮಾಃ || ೫೧ ||

ತೇಜಸ್ಸುಗಳೂ ಕೂಡ ಅಂತಃಕಲ್ಪಿತಗಳಾಗಿರುವ ಕಾರಣ, ಈ ಔನ್ನತ್ಯದ ಅವಧಿಗಳನ್ನು ಕಾಣಲು ಉಪಕಾರ ಮಾಡುವುದೇ ಇಲ್ಲ.

[ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ |—ಗೀತಾ. ೧೫-೬.]

೪೯. ಸೂರ್ಯಾದಿ ಸಕಲ ಮಹಾತೇಜಸ್ಸುಗಳು ಮೇಲೆ ಹೇಳಿದಂತೆ ಉಪಕಾರಮಾಡಲು ಅಶಕ್ತಗಳಾಗಿರುವುದು ಮಾತ್ರವೇ ಅಲ್ಲ. ಮತ್ತೂ ದಿವ್ಯವಾದ ಅಧ್ಯಾತ್ಮಜ್ಞಾನದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದ ತತ್ತ್ವಜ್ಞನ ಮುಂದುಗಡೆ ಮಧ್ಯಾಹ್ನ ಕಾಲದಲ್ಲಿರುವ ಸಣ್ಣ ದೀಪಗಳಂತೆ ಈ ಸೂರ್ಯಾದಿ ತೇಜಸ್ಸುಗಳೆಲ್ಲವೂ ಅವಸ್ತುತ್ವವನ್ನು ಪಡೆಯುವುವು. (ಇದ್ದರೂ ಇಲ್ಲದಂತೆಯೇ ಆಗುವವು, ಪ್ರಕಾಶಿಸುವುದಿಲ್ಲ.)

೫೦. ಹೀಗೆ ತೇಜಸ್ಸಿನ ಕಾರ್ಯಗಳಾದ ಪ್ರಕಾಶನಗಳಲ್ಲಿಯೂ ಯೋಗಸಿದ್ಧಿಗಳಿಂದ ಈಶಿತ್ವವಶಿತ್ವಾದಿ ಪ್ರಭಾವಗಳಲ್ಲಿಯೂ, ಶರೀರ ಬಲಶಾಲಿಗಳಲ್ಲಿಯೂ, ಐಶ್ವರ್ಯಾದಿಗಳಿಂದ ದೊಡ್ಡವರಾಗಿರುವರಲ್ಲಿಯೂ, ಇನ್ನೂ ಇತರ ವಾಗ್ಮಿತ್ವ ಮೊದಲಾದ ಉನ್ನತಿಯುಕ್ತರಾದ ಸಕಲ ಪುರುಷರಲ್ಲೆಲ್ಲಾ ತತ್ತ್ವಜ್ಞಾನಿಯು ಸರ್ವ ಮಹೋನ್ನತನಾಗಿರುವನು.

[ಸರ್ವೌನ್ನತ್ಯಗಳೂ ಜ್ಞಾನಿಯಲ್ಲಿ ಅಧ್ಯಸ್ತವಾಗಿರುವವು.]

೫೧. ಯಾವ ಪರಮಾತ್ಮನ ಪ್ರಕಾಶದಿಂದಲೇ ಸೂರ್ಯ-ಚಂದ್ರ-ಅಗ್ನಿ-ಮಣಿ-ನಕ್ಷತ್ರ ಮುಂತಾದುವೆಲ್ಲವೂ ಪ್ರಕಾಶಿಸುತ್ತಿರುವುವೋ ಅಂತಹ ಪರಮಾತ್ಮನಿಗೆ

ಧಾರಾವಿವರಕೀಟೇಭ್ಯೋ ಗರ್ದಭೇಭ್ಯೋಽಪಿ ಮಾನವಾಃ |
ತಿರ್ಯಗ್ಭ್ಯಶ್ಚಾಪ್ಯತತ್ತ್ವಜ್ಞಾ ರಾಮ ತುಚ್ಛತರಾಃ ಸ್ಮೃತಾಃ || ೫೨ ||

ತಾವತ್ಸಂಮೋಹವೇತಾಲೋ ದೇಹೀ ಯಾವದನಾತ್ಮವಾನ್ |
ಆತ್ಮಜ್ಞ ಏವ ಸಂಯುಕ್ತಶ್ಚೇತನೇನೇತಿ ತದ್ವಿದಃ || ೫೩ ||

ಅನಾತ್ಮಜ್ಞೋಽಹಿ ದುರೀಹಃ ಪ್ರಸ್ಫುರನ್ನಪಿ ಭೂತಲೇ |
ಶವ ಏವ ಭ್ರಮತ್ಯಜ್ಞೈರಾತ್ಮಜ್ಞಸ್ತು ಸಚೇತನಃ || ೫೪ ||

ಸಮಾನರಾಗಿ, ತತ್ತ್ವಜ್ಞರಾದ ಪುರುಷೋತ್ತಮರು ಈ ಜಗತ್ತಿನಲ್ಲಿ ವಿರಾಜಿಸುವರು.

["ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ | ತಮೇವ ಭಾನ್ತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ||" ಶ್ವೇತಾಶ್ವತರ.]

೫೨. ರಾಮಚಂದ್ರ, ತತ್ತ್ವಜ್ಞಾನರಹಿತರಾದ ಮಾನವರು, ನೆಲದೊಳಗೆ ರಂಧ್ರಗಳಲ್ಲಿರುವ ಕೀಟ (ಹಾವು-ಚೇಳು)ಗಳಿಗಿಂತಲೂ, ಗರ್ದಭ (ಕತ್ತೆ)ಗಳಿಗಿಂತಲೂ ಇನ್ನೂ ಇತರ ನಾನಾ ತಿರ್ಯಗ್ಜಂತುಗಳಿಗಿಂತಲೂ ಕೂಡ ತುಚ್ಛತರರೆಂದು ಪರಿಗಣಿಸಲ್ಪಟ್ಟಿರುವರು.

೫೩. ದೇಹಿಯು ಎದುವರೆವಿಗೆ ಆತ್ಮಜ್ಞಾನ ರಹಿತನಾಗಿರುವನೋ ಅದುವರೆವಿಗೂ ಅವನು ಅಚೇತನವಾದ ಭ್ರಾಂತಿಕಲ್ಪಿತವಾದ ಬೇತಾಳನೇ ಎಂದೂ, ಯಾವನು ಆತ್ಮಜ್ಞನೋ ಅವನೇ ಚೈತನ್ಯಯುಕ್ತನಾದವನೆಂದೂ, ಪ್ರಾಜ್ಞರು ಹೇಳುವರು.

[ಅನಾತ್ಮಜ್ಞನು ಸದಾ ಆತ್ಮನು ಸ್ವಭಾವತಃ ಸದ್ರೂಪನಾಗಿದ್ದರೂ ಕೂಡ ಅಜ್ಞಾನದಿಂದ ಅಸತ್ತ್ವವನ್ನು ಆಪಾದಿಸುವುದರಿಂದ ಅಚೇತನನೆಂದೇ ಭಾವವು.]

೫೪. ಆತ್ಮಜ್ಞಾನರಹಿತನು ಸರ್ವದಾ ದುಃಖಪ್ರದಗಳಾದ ವ್ಯವಹಾರಗಳಲ್ಲಿ ಮಗ್ನನಾಗಿ, ನೆಲದಮೇಲೆ ವಿಶೇಷವಾಗಿ ಓಡಾಡುತ್ತಾ, ಸ್ಫುರಿಸುತ್ತಿರುವವನಾದರೂ

ದೂರಾದಾತ್ಮಜ್ಞತಾ ಯಾತಿ ಚಿತ್ತೇ ಪೀವರತಾಂ ಗತೇ |
ಆಲೋಕಲಕ್ಷ್ಮೀರಭಿತೋ ಮಹಾಮೇಘ ಇವೋತ್ಥಿತೇ || ೫೫ ||

ಭೋಗಾಭೋಗತಿರಸ್ಕಾರೈಃ ಕಾರ್ಶ್ಯಂ ನಾಶ್ಯಂ ಶನೈರ್ಮನಃ |
ರಸಾಪಹಾರೈಸ್ತಜ್ಜ್ಞೇನ ಕಾಲೇನಾಜೀರ್ಣಪರ್ಣವತ್ ; || ೫೬ ||

ಅನಾತ್ಮನ್ಯಾತ್ಮಭಾವೇನ ದೇಹಮಾತ್ರಾಸ್ಥಯಾನಯಾ |
ಪುತ್ರದಾರಕುಟುಂಬೈಶ್ಚ ಚೇತೋ ಗಚ್ಛತಿ ಪೀನತಾಂ || ೫೭ ||

ಕೂಡ ಅವನು ಅಚೇತನವಾದ ಶವವೇ ! ಸಂದೇಹವಿಲ್ಲ. ಯಾವನು ಆತ್ಮಜ್ಞಾನ ಸಂಪನ್ನನಾಗಿ, ಸರ್ವೋನ್ನತನಾಗಿ ತಿರುಗಾಡುತ್ತಾನೆಯೋ ಅವನೇ ಸಚೇತನನು.

೫೫. ಮಹಾ ಮೇಘಮಾಲೆಯು ಆಕಾಶದಲ್ಲಿ ಎದ್ದು ಸುತ್ತಲೂ ಆವರಿಸಿಕೊಂಡಿರುವಾಗ, ಸೂರ್ಯಚಂದ್ರಾದಿ ತೇಜಸ್ಸುಗಳ ದೇದೀಪ್ಯಮಾನವಾದ ಪ್ರಕಾಶವೆಲ್ಲವೂ ದೂರವಾಗಿಬಿಡುವಂತೆ, ಮನಸ್ಸು ಪೀನತ್ವವನ್ನು (ಸ್ಥೌಲ್ಯವನ್ನು) ಹೊಂದಲಾಗಿ, ಆತ್ಮಜ್ಞಾನವು ಸ್ವಲ್ಪ ಸಂಪಾದಿತವಾಗಿದ್ದರೂ ದೂರವಾಗಿ ಹೋಗುವುದು.

೫೬. ಆದುದರಿಂದ ಪ್ರಾಜ್ಞನು ಪ್ರಾಪ್ತವಾದ ಪ್ರಾಪಂಚಿಕ ವಿಷಯಗಳ ಸೇವನೆಯನ್ನು ತಿರಸ್ಕರಿಸುವುದರಿಂದಲೂ ಅಪ್ರಾಪ್ತವಾದ ಭೋಗಗಳಲ್ಲಿ ಆಶೆಯನ್ನು ಅಪಹರಿಸುವುದರಿಂದಲೂ (ಹೀಗೆ ಪದೇಪದೇ ಪ್ರಾಪ್ತಾಪ್ರಾಪ್ತ ಭೋಗಗಳ ಸೇವನ ತಿರಸ್ಕಾರ ಆಶಾಪಹಾರಗಳನ್ನು ಚಿರಕಾಲ ಅಭ್ಯಾಸ ಮಾಡುವುದರಿಂದ) ಹಣ್ಣೆಲೆಯು ಕಾಲಕ್ರಮದಿಂದ ಕೃಶವಾಗಿ ನಾಶವಾಗುವಂತೆ, ತನ್ನ ಮನಸ್ಸನ್ನು ಕ್ರಮಕ್ರಮವಾಗಿ ಮೆಲ್ಲಗೆ ಕೃಶಪಡಿಸಬೇಕು.

೫೭. ಆತ್ಮವಲ್ಲದುದರಲ್ಲಿ (ಅನಾತ್ಮ ವಸ್ತುಗಳಲ್ಲಿ) ಆತ್ಮಭಾವನೆಯನ್ನು ಇಡುವುದರಿಂದಲೂ, ಈ ದೇಹದಲ್ಲಿಯೂ ಇಂದ್ರಿಯಗಳಲ್ಲಿಯೂ ಆಸೆಯಿಡುವುದರಿಂದಲೂ, ಪುತ್ರಪತ್ನೀ ಮುಂತಾದ ಆತ್ಮೀಯ ಬಂಧುಗಳಮೇಲೆ ಮಮತೆಯನ್ನಿಡುವುದರಿಂದಲೂ ಮನಸ್ಸು ಬೆಳೆದು ಸ್ಥೂಲವಾಗುವುದು.

ಅಹಂಕಾರವಿಕಾರೇಣ ಮಮತಾಮಲಹೇಲಯಾ |
ಇದಂ ಮಮೇತಿ ಭಾವೇನ ಚೇತೋ ಗಚ್ಛತಿ ಪೀನತಾಂ || ೫೮ ||

ಜರಾಮರಣ ದುಃಖೇನ ವ್ಯರ್ಥಮುನ್ನತಿಮೀಯುಷಾ |
ದೋಷಾಶೀವಿಷಕೋಶೇನ ಚೇತೋ ಗಚ್ಛತಿ ಪೀನತಾಂ || ೫೯ ||

ಆಧಿವ್ಯಾಧಿ ವಿಲಾಸೇನ ಸಮಾಶ್ವಾಸೇನ ಸಂಸೃತೇಃ |
ಹೇಯಾದೇಯಪ್ರಯತ್ನೇನ ಚೇತೋ ಗಚ್ಛತಿ ಪೀನತಾಂ || ೬೦ ||

ಸ್ನೇಹೇನ ಧನಲೋಭೇನ ಲಾಭೇನ ಮಣಿಯೋಷಿತಾಂ |
ಆಪಾತರಮಣೀಯೇನ ಚೇತೋ ಗಚ್ಛತಿ ಪೀನತಾ || ೬೧ ||

---

೫೮. ಅಹಂಕಾರದ ವಿಕಾಸದಿಂದಲೂ, ಮಮಕಾರವೆಂಬ ಮಲದಲ್ಲಿ ಆಸಕ್ತಿಯಿಂದಲೂ, ಈ ದೇಹವು ನನ್ನ ಭೋಗಾಯತನವೆಂಬ ಭಾವನೆಯಿಂದಲೂ ಕೂಡ ಚಿತ್ತವು ಬೆಳೆದು ಸ್ಥೂಲವಾಗುವುದು.

೫೯. ದೋಷಗಳೆಂಬ ಸರ್ಪಗಳಿಗೆಲ್ಲ ನಿಧಿಯಾಗಿಯೂ, ವ್ಯರ್ಥವಾಗಿ ವೃದ್ಧಿಯನ್ನು ಪಡೆಯುತ್ತಲೂ ಇರುವ, ಜರಾಮರಣ ದುಃಖದಿಂದ ಮನಸ್ಸು ಬೆಳೆದು ಸ್ಥೂಲತೆಯನ್ನು ಪಡೆಯುವದು.

೬೦. ಆಧಿ-ವ್ಯಾಧಿಗಳ ವಿಲಾಸದಿಂದಲೂ, ಈ ಸಂಸಾರದಲ್ಲಿ ಅತಿ ರಮ್ಯವಾದುದೆಂದೂ ಚಿರಸ್ಥಾಯಿಯೆಂದೂ ವಿಶ್ವಾಸ (ನಂಬಿಕೆ) ವನ್ನು ಇಡುವುದರಿಂದಲೂ, ಇದು ತ್ಯಾಜ್ಯ, ಇದು ಗ್ರಾಹ್ಯ ಎಂಬ ಪ್ರಯತ್ನದಿಂದಲೂ ಕೂಡ ಮನಸ್ಸು ಬೆಳೆದು ಸ್ಥೂಲವಾಗುವುದು.

೬೧. ಶಬ್ದಾದಿ ವಿಷಯುಗಳಲ್ಲಿ ರಾಗದಿಂದಲೂ, ಧನಲೋಭದಿಂದಲೂ, ಆಪಾತ ರಮಣೀಯವಾದ ರತ್ನಗಳ ಮತ್ತು ಕಾಂತೆಯರ (ಅಥವಾ ಸ್ತ್ರೀರತ್ನಗಳ) ಲಾಭದಿಂದಲೂ ಮನಸ್ಸು ಬೆಳೆದು ಪೀವರತ್ವವನ್ನು ಪಡೆಯುವುದು.

ದುರಾಶಾಕ್ಷೀರಪಾನೇನ ಭೋಗಾನಿಲಬಲೇನ ಚ |
ಆಸ್ಥಾದಾನೇನ ಚಾರೇಣ ಚಿತ್ತಾಹಿರ್ಯಾತಿ ಪೀನತಾಂ || ೬೨ ||

ಆಗಮಾಪಾಯವಪುಷಾ ವಿಷವೈಶಮ್ಯಶಂಸಿನಾ |
ಭೋಗಾಭೋಗೇನ ಭೀಮೇನ ಚೇತೋ ಗಚ್ಛತಿ ಪೀನತಾಂ || ೬೩ ||

ಶರೀರದುಃಶ್ವಭ್ರಚಿರಪ್ರರೂಢಂ |
ಚಿಂತಾಚಯೋಚ್ಚಾಕೃತಿಮಂಜರೀಕಂ ||
ಜರಾಮೃತಿವ್ಯಾಧಿಫಲೌಘನಮ್ರಂ |
ಕಾಮೋಪಭೋಗೌಘ ವಿಕಾಸಿಪುಷ್ಪಂ || ೬೪ ||

ವಿಚಾರಸಾರಕ್ರಕಚೇನ ಚಿತ್ತ |
ವಿಷದ್ರುಮಂ ತ್ವದ್ಛಿಮಂದ್ರಿಕಲ್ಪಂ ||
ಆಶಾಮಹಾಶಾಖಮ ಶಂಕಮೇನಂ |
ಛಿಂಧಿ ಪ್ರಸಹ್ಯಾತ್ರ ವಿಕಲ್ಪಪತ್ರಂ || ೬೫ ||

---

೬೨. ದುರಾಶೆಯೆಂಬ ಕ್ಷೀರದ ಪಾನದಿಂದಲೂ, ಭೋಗಗಳೆಂಬ ವಾಯುವನ್ನು ಸೇವಿಸುವುದರಿಂದ ಉಂಟಾದ ಬಲದಿಂದಲೂ, ಪ್ರಾಪಂಚಿಕ ವಿಷಯಗಳಲ್ಲಿ ಆಸ್ಥೆಯನ್ನು ವಹಿಸುವುದರಿಂದಲೂ, ವಿಷಯ ಸಂಚಾರದಿಂದಲೂ, ಚಿತ್ತವೆಂಬ ಸರ್ಪವು ಸ್ಥೂಲತ್ವವನ್ನು ಹೊಂದುವದು.

೬೩. ಜನನ ಮರಣಗಳೇ ಶರೀರ ಸ್ವಭಾವಗಳಾಗಿ ಉಳ್ಳದ್ದಾಗಿಯೂ, ವಿಷದಂತೆ (ವೈಷಮ್ಯ) ದಾಹ ಮೂರ್ಛಾದಿ ವ್ಯಾಕುಲತೆಯಲ್ಲಿ ಪರ್ಯವಸಿತವಾಗಿಯೂ ಇರುವ ಅತ್ಯಂತ ಘೋರವಾದ, ಪ್ರಾಪ್ತವಾದ ವಿಷಯಗಳ ಸೇವನೆಯಿಂದ ಭೋಗಾಭೋಗದಿಂದ, ಚಿತ್ತವು ಸ್ಥೂಲತ್ವವನ್ನು ಹೊಂದುವದು.

೬೪–೬೫, ಅಯ್ಯ ರಾಮ, ಈ ಚಿತ್ತವು ಒಂದು ಮಹಾ ವಿಷವೃಕ್ಷವಾಗಿರುವುದು. ಇದು ಶರೀರವೆಂಬ ಹಾಳುಗುಂಡಿ (ಕಾಡಕವಿಸಿರುವ ಗುಣಿ) ಯೊಳಗೆ ಚಿರಕಾಲದಿಂದಲೂ ಚೆನ್ನಾಗಿ ಬೆಳೆದುಕೊಂಡಿರುವುದು. ನಾನಾ ಚಿಂತಾ ಸಮೂಹಗಳೆಂಬ ದೊಡ್ಡ ದೊಡ್ಡ ಹೂಗೊಂಚಲುಗಳುಗಳಿಂದ ಶೋಭಿಸುತ್ತಿರುವುದು. ಜರೆ (ಮುಪ್ಪು) ಮರಣ, ರೋಗಗಳೆಂಬ ಫಲಸಮೃದ್ಧಿಯ ಭಾರದಿಂದ ಕುಗ್ಗಿಹೋಗಿರುವುದು (ಬಗ್ಗಿರುವುದು.) ಕಾಮೋಪಭೋಗಗಳೆಂಬ ಅರಳಿದ (ವಿಕಸಿತ) ಪುಷ್ಪರಾಶಿ

ಮತ್ತೇಕ್ಷಣಂ ಚೈಕತಟೋಪವೇಶಂ |
    ವಿಶ್ರಾಂತಿ ಸೌಖ್ಯೇಷ್ವಸಮರ್ಥಮುಗ್ರಂ ||
ಆಲೋಕನೋತ್ಕಂ ಸುಜನಕ್ರಮಾಬ್ಜ |
    ಖಾದಸ್ಯ ಚಂಡ ಸುಖದುಃಖಗಂಡಂ || ೬೬ ||

ಚೇತೋಗಜಂ ಕಾಯಕುಕಾನನಸ್ಥಂ |
    ಸುತೀಕ್ಷ್ಣಯಾ ಧೀಕರಜಾಗ್ರಸಂಕ್ರಾತ್ಯೈ ||
ವಿದಾರಯಾದೀರ್ಘವಿಕಾರದಂತಂ |
    ಕ್ರಿಯಾಕರಂ ರಾಘವ ರಾಜಸಿಂಹ || ೬೭ ||

ಗಳಿಂದ ಕೂಡಿರುವುದು. ಆಶೆಗಳೆಂಬ ಉದ್ದವಾದ ಕೊಂಬೆಗಳು ಸುತ್ತಲೂ ಬಹು ದೂರ ಪ್ರಸರಿಸಿರುವುವು. ವಿಕಲ್ಪಗಳೆಂಬ ಎಲೆಗಳು ತುಂಬಿಕೊಂಡಿರುವುವು. ಇಂತಹ, ಅದ್ಭುತವಾದ ಪರ್ವತದಂತೆ ಅತ್ಯಂತ ದುರ್ಗಮವಾದ ಈ ಚಿತ್ತವೆಂಬ ವಿಷವೃಕ್ಷವನ್ನು ಬಹು ಪ್ರಯತ್ನಪಟ್ಟು, ನಿನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ ಆತ್ಮತತ್ತ್ವವಿಚಾರಸಾರವೆಂಬ ಗರಗಸದಿಂದ ನಿಶ್ಶಂಕನಾಗಿ ಈಗಲೇ ಬೇರುಸಹಿತ ಕತ್ತರಿಸಿಬಿಡು.

೬೬–೬೭. ಅಯ್ಯ ರಾಘವ, ರಾಜಸಿಂಹ, ಈ ಚಿತ್ತವನ್ನೇ ಒಂದು ಮದಿಸಿದ ಆನೆ (ಸಲಗ) ಯೆಂದು ಭಾವಿಸು. (ಇದಕ್ಕೆ ಚಾರ್ವಾಕಾದಿ ಕುಶಾಸ್ತ್ರ ಮತ್ತು ಅನುಮಾನ ಪ್ರಮಾಣ ಎಂಬ ಎರಡು ಕಣ್ಣುಗಳು ಇವೆ. ಇವು ಆತ್ಮವಿವೇಕ ಪ್ರಮಾದಕಾರಿಗಳಾಗಿ ಸರ್ವದಾ ಮದದಿಂದ ಗಿರ್ರನೆ ತಿರುಗುತ್ತಿರುವುವು.) ಈ ಚಿತ್ತಗಜವು ಸಂಸಾರವೆಂಬ ಪರ್ವತಪ್ರಾಂತದಲ್ಲಿ ಒಂದರಲ್ಲಿಯೇ (ಸದಾ) ಕುಳಿತಿರುವುದು. ವಿಶ್ರಾಂತಿ ಸುಖಾನುಭವಗಳಲ್ಲಿ ಸ್ವಲ್ಪವೂ ಸಾಮರ್ಥ್ಯವಿಲ್ಲದುದು. ದ್ವೇಷಾಸೂಯಾದಿಗಳಿಂದ ಕೂಡಿಕೊಂಡು ನೋಡುವುದಕ್ಕೆ ಅತಿ ಭಯಂಕರವಾಗಿರುವುದು. ಸತ್ಪುರುಷರೆಂಬ ರಾಜ ಹಂಸಗಳು (ಪರಮಹಂಸರು) ಸಹಜವಾಗಿ ಸಂಚರಿಸುವ ಶಮದಮ, ಉಪರತಿ, ತಿತಿಕ್ಷಾದಿಗಳೆಂಬ ಪದ್ಮವನವನ್ನು ಹುಡುಕಿ ನೋಡುವುದರಲ್ಲಿ ಅತ್ಯಂತ ಕುತೂಹಲವುಳ್ಳದ್ದಾಗಿಯೂ ಅವುಗಳನ್ನು ನಿರ್ಮೂಲ ಮಾಡುವುದರಲ್ಲಿ ಅತ್ಯಂತ ಕೋಪವುಳ್ಳದ್ದಾಗಿಯೂ ಇರುವುದು. ಸುಖದುಃಖಗಳೆಂಬ ಇದರ ಗಂಡಸ್ಥಳಗಳಲ್ಲಿ ಶೀತೋಷ್ಣಾದಿ ದ್ವಂದ್ವಗಳೆಂಬ ಬಾಷ್ಪೋದಕ ಮದೋದಕಗಳು ಸರ್ವದಾ ಸ್ರವಿಸುತ್ತಿರುವುವು. ಇದು ಶರೀರವೆಂಬ ಗಹನವಾದ ಮಹಾರಣ್ಯದಲ್ಲಿ ಸರ್ವದಾ ವಿಹರಿಸಿ

ರತಿಂ ಗತಂ ನಿತ್ಯಮಸತ್ಪ್ರದೇಶೇ
ಶರೀರಮಾಂಸಗ್ರಸನೇನ ಪುಷ್ಟಂ |
ದುಷ್ಟಕ್ರಿಯಾಕರ್ಕಶಚಂಚುದಂಡ
ಮೇಕೇಕ್ಷಣಂ ಪುಷ್ಟತಮೋಂಶು ಕೃಷ್ಣಂ || ೬೮ ||

ದೂರೇ ಸಮುತ್ಸಾರಯ ಭಾರಭೂತಂ
ದುಶ್ಚೇಷ್ಟಿತಂ ಕರ್ಕಶಮಾರಟಂತಂ |
ಗಂಧೋದ್ಗತಂ ಕಾಯಕುಲಾಯಕೋಶಾ
ದ್ದೋಷೋಪಶಾಂತ್ಯೈ ನಿಜಚಿತ್ತಕಾಕಂ || ೬೯ ||

ಕೊಂಡಿರುವುದು. ಅತಿ ದೀರ್ಘಗಳಾದ ಕಾಮಾದಿ ವಿಕಾರಗಳೆಂಬ ದಂತಗಳಿಂದ ಇದು ಭೀಕರವಾಗಿರುವುದು. ಧೈರ್ಯಸ್ಥೈರ್ಯಾದಿ ಗುಣಗಳೆಂಬ ಶೈಲತಟಗಳನ್ನು ಸೀಳುತ್ತಾ ವಪ್ರಕ್ರೀಡಾ ವಿನೋದದಲ್ಲಿ ಆಸಕ್ತವಾಗಿರುವುದು. ಇಂತಹ ಚಿತ್ತವೆಂಬ ಮತ್ತಗಜವನ್ನು ರಾಜಸಿಂಹನಾದ ನೀನು ಸುತೀಕ್ಷ್ಣವಾದ ನಿನ್ನ ಬುದ್ಧಿಯೆಂಬ ನಖಪಂಕ್ತಿಯಿಂದ ಬೇಗನೆ ಸೀಳಿಹಾಕು.

೬೮–೬೯. ರಾಮ, ನಿನ್ನ ಈ ಚಿತ್ತವು ಕಾಗೆಯಂತೆ ಕೇವಲ ಜುಗುಪ್ಸಾಕರವಾಗಿರುವುದು. ಹೇಗೆಂದರೆ, ಇದು ಯಾವಾಗಲೂ ಸ್ತ್ರೀವ್ಯಕ್ತಿಗಳೆಂಬ ಶ್ಮಶಾನಾದಿ (ಅತಿ ಕುತ್ಸಿತವಾದ)ಸ್ಥಳದಲ್ಲಿ ವಿನೋದದಿಂದ ಕ್ರೀಡಿಸುವುದು. ಶರೀರಗಳೆಂಬ ಪ್ರಾಣಿಗಳ ಮಾಂಸಗಳನ್ನು ಯಥೇಚ್ಛವಾಗಿ ತಿಂದು ಪುಷ್ಟಿಯನ್ನು ಪಡೆದಿರುವುದು. ಇತರರ ಮರ್ಮಸ್ಥಾನವನ್ನು ಕುಕ್ಕಿ ಹಿಂಸಿಸುವ ದುಷ್ಕಾರ್ಯದಲ್ಲಿ ಅತ್ಯಂತ ಕರ್ಕಶವಾದ ಓಷ್ಠದ್ವಯ (ತುಟಿ)ವೆಂಬ ಉದ್ದವಾದ ಕೊಕ್ಕುಳ್ಳದ್ದಾಗಿರುವುದು. ಇದಕ್ಕೆ ಸ್ವಪ್ರಯೋಜನಮಾತ್ರದೃಷ್ಟಿಯೆಂಬ ಒಂದೇ ಒಂದು ಕಣ್ಣು ಇರುವುದು. ಕಗ್ಗತ್ತಲೆಯಂತೆ ಕಾಗೆಯು ಹೇಗೆ ಕಪ್ಪಾಗಿರುವುದೋ ಹಾಗೆ ಈ ಚಿತ್ತವೂ ಸುಪುಷ್ಟವಾದ ತಾಮಸವೃತ್ತಿಗಳಿಂದ (ಕಪ್ಪಗೆ) ಮಲಿನವಾಗಿರುವುದು. ಕಾಗೆಯು ಅದನ್ನು ಹೊತ್ತಿರುವ ವೃಕ್ಷಾದಿಗಳಿಗೆ ವೃಥಾಶ್ರಮಹೇತುವಾಗಿ ಹೇಗೆ ಭಾರಭೂತವಾದುದೋ ಹಾಗೆಯೇ ಈ ಚಿತ್ತವು ಆತ್ಮನಿಗೆ ವೃಥಾಶ್ರಮಹೇತುವಾಗಿ ಭಾರಭೂತವಾಗಿರುವುದು. ಕಾಗೆಯು ಕ್ರಿಮಿಭಕ್ಷಣಾದಿ ದುರ್ವ್ಯಾಪಾರದಲ್ಲಿ ನಿರತವಾಗಿರುವಂತೆ, ಚಿತ್ತವೂ ದುಷ್ಕರ್ಮಗಳಲ್ಲಿ (ಪಾಪಕರ್ಮ) ಪ್ರವರ್ತಿಸುವುದು. ಕರ್ಣಕಠೋರವಾಗಿ ಕಾಗೆಯು ಧ್ವನಿಮಾಡುವಂತೆ, ಚಿತ್ತವೂ ಪರನಿಂದಾದಿದುರ್ಭಾಷೆಗೆ ಹೇತು

ತೃಷ್ಣಾಪಿಶಾಚ್ಯಾ ಪರಿಚರ್ಯಮಾಣಂ
ವಿಶ್ರಾಂತಮಜ್ಞಾನಮಹಾವಟೇಷು ।
ಭ್ರಾಂತಂ ಚಿರಂ ದೇಹಶತೇಷ್ವಟವ್ಯಾಂ
ಸ್ವಸಂಸೃತೌ ಚೇತನವರ್ಜಿತೇಷು ॥ ೭೦ ॥

ವಿವೇಕವೈರಾಗ್ಯಗುರುಪ್ರಯತ್ನ
ಮಂತ್ರೈಃ ಸ್ವತಂತ್ರೈಃ ಸ್ವಚಿದಾತ್ಮಗೇಹಾತ್ ।
ನೋತ್ಸಾದಯೇಚ್ಚಿತ್ತಪಿಶಾಚಮೇನಂ
ಯಾವತ್ಕುತಸ್ತಾವದಿಹಾತ್ಮಸಿದ್ಧಿಃ ॥ ೭೧ ॥

ವಾಗಿರುವದು, ದುರ್ಗಂಧವಿರುವ ಕಡೆಗೆಲ್ಲಾ ಕಾಗೆಯು ಓಡಿಹೋಗುವಂತೆ, ಚಿತ್ತವು ವಿಷಯ ದುರ್ವಾಸನೆಗಳಿರಿದ ಆವಿರ್ಭವಿಸುವುದು. ಇಂತಹ ನಿನ್ನ ಚಿತ್ತವೆಂಬ ಕಾಗೆಯನ್ನು ನೀನು ನಿನ್ನ ಶರೀರವೆಂಬ ಗೂಡಿನಿಂದ ಈಗಲೇ ಬಹುದೂರ ಆಚೆಗೆ ಹೊರಡಿಸು. ಇದನ್ನು ಹೊರಡಿಸಿದಾಗಲೇ, ನಿನ್ನಲ್ಲಿರುವ ದೋಷಗಳೆಂಬ ರಾತ್ರಿಯು ಕಳೆದುಹೋಗಿ ವಿವೇಕವೆಂಬ ಸೂರ್ಯನು ಉದಯಿಸುವನೆಂದು ತಿಳಿ.

೭೦-೭೧. ಮತ್ತು ಈ ಚಿತ್ತವು ಒಂದು ಪಿಶಾಚದಂತಿರುವದು. ಇದನ್ನು ತೃಷ್ಣೆಯೆಂಬ ಹೆಣ್ಣು ಪಿಶಾಚಿಯು ಸದಾ ಉಪಚರಿಸುತ್ತಿರುವುದು. ಈ ಚಿತ್ತ ಪಿಶಾಚವು ಅಜ್ಞಾನವೆಂಬ ದೊಡ್ಡ ಆಲದ ಮರಗಳನ್ನು ಆಶ್ರಯಿಸಿ ವಾಸಮಾಡಿಕೊಂಡಿರುವುದು. ಕೋಟ್ಯನುಕೋಟಿ ದೇಹಗಳೆಂಬ ಮಹಾರಣ್ಯಗಳಲ್ಲಿ ಯಾವಾಗಲೂ ಅಲೆಯುತ್ತಿರುವುದು. ಈ ಚಿತ್ತವು ತೊಲಗಿಹೋದರೆ, ಈ ದೇಹಗಳು ಪ್ರತ್ಯಕ್ಷವಾಗಿಯೇ ನಿಶ್ಚೇತನಗಳಾಗಿಬಿಡುವುವು. ಇಂತಹ ಚಿತ್ತವೆಂಬ ಪಿಶಾಚವನ್ನು ತನ್ನ ಹೃದಯವೆಂಬ ಚಿದ್ರೂಪನಾದ ಆತ್ಮನ ಮನೆಯ ದೆಸೆಯಿಂದ, ವಿವೇಕ, ವೈರಾಗ್ಯ, ಗುರೂಪದೇಶ, ಪುರುಷಕಾರ (ಸ್ವಪ್ರಯತ್ನ) ಮಣಿಮಂತ್ರಾದಿ ಸ್ವತಂತ್ರ ಸಕಲೋಪಾಯಗಳಿಂದಲೂ ಹೊರಗೆ ಹೊರಡಿಸುವವನಾಗು. ಅನ್ಯಥಾ ಈ ಚಿತ್ತ ಪಿಶಾಚವು ನಿನ್ನನ್ನು ಆಕ್ರಮಿಸಿಕೊಂಡಿರುವವರೆಗೂ ಈ ಜಗತ್ತಿನಲ್ಲ ನಿನಗೆ ಯಾವ ಪುರುಷಾರ್ಥವೂ ಸಿದ್ಧಿಸುವುದೇ ಇಲ್ಲ.

[ಮಹಾ ವಟೇಷು=ದೊಡ್ಡ ಆಲದಮರಗಳಲ್ಲಿ ಅಥವಾ ಮಹಾ ಅವಟೇಷು-ದೊಡ್ಡ ಗರ್ತಗಳಲ್ಲಿ ಎಂದು ಎರಡು ವಿಧವಾಗಿಯೂ ಅರ್ಥಮಾಡಬಹುದು.]

ಶುಭಾಶುಭಾಸ್ಯಂ ಹತಮಾನವೌಘಂ
ಚಿಂತಾವಿಷಂ ಕಾಯಕುಕಂಚುಕಂ ಚ |
ಅಜಸ್ರಮುಚ್ಛ್ವಸನಾಶನಂ ಚ
ಸರ್ವಸ್ಯ ನಾನಾಭಯ ನಾಶದಂ ಚ ॥ ೭೨ ॥

ಹೃದಬ್ಜದುಃಶಾಲ್ಮಲಿಕೋಟರಸ್ಥ
ಮಮೋಘಯಾ ಚಿತ್ತಗಮಂತ್ರಶಕ್ತ್ಯಾ |
ನೀತ್ವಾ ಶಮಂ ರಾಮ ಮನೋ ಮಹಾಹಿಂ
ಭಯಂ ಭೃಶಂ ಪ್ರೋಜ್ಝ್ಯ ಭವಾಭಯಾತ್ಮಾ ॥ ೭೩ ॥

೭೨–೭೩. ರಾಮ, ಈ ಚಿತ್ತವು ಒಂದು ಘೋರವಾದ ಕೃಷ್ಣಸರ್ಪದಂತೆಯೂ ಇರುವುದು. ಇದರ ಬಾಯಲ್ಲಿ ಶುಭಾಶುಭಗಳೆಂಬ ಎರಡು ದಾಡೆಗಳಿರುವುವು. (ದ್ರಂಷ್ಟ್ರಾ–ದವಡೆ ಅಥವಾ ದಾಡೆ) ಇದು ಸಕಲ ಜನರನ್ನೂ ಕಚ್ಚಿ ಕೊಲ್ಲುತ್ತಿರುವುದು. ಚಿಂತೆಯೆಂಬ ವಿಷದಿಂದ ಕೂಡಿರುವುದು. (ಮನುಷ್ಯ) ದೇಹಗಳೆಂಬ ಪೊರೆಯು ಈ ಚಿತ್ತ ಸರ್ಪವನ್ನು ಮುಸುಕಿರುವುದು. ಪ್ರಾಣಿಗಳ ಪ್ರಮಾದಿ ದೋಷ ವಿವರ್ಜಿತವಾದ ಪ್ರಾಣವಾಯುಗಳನ್ನು ಆಹಾರ ಮಾಡಿಕೊಂಡು ಬದುಕಿರುವುದು. ಮತ್ತು ಸಕಲ ಪ್ರಾಣಿಗಳ ಹೃದಯ ಕಮಲವೆಂಬ ಶಾಲ್ಮಲೀ ವೃಕ್ಷದ ಕೋಟರ (ಪೊಟ್ಟರೆ) ದೊಳಗೆ ಸರ್ವದಾ ವಾಸಮಾಡಿಕೊಂಡಿರುತ್ತಾ ನಾನಾ ಭಯಗಳಿಗೆ ಕಾರಣವಾಗಿ ಕೊನೆಗೆ ಮರಣಪ್ರದವಾಗಿಯೂ ಇರುವುದು. ಇಂತಹ ಚಿತ್ತ ಮಹಾ ಸರ್ಪವನ್ನು ಚಿದೇಕರಸನಾದ ಆತ್ಮತತ್ತ್ವಾವಬೋಧಕ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಮಹಾವಾಕ್ಯಗಳೆಂಬ ಅಮೋಘವಾದ ಗಾರುಡ ಮಂತ್ರಗಳಿಂದ (ಅಜ್ಞಾನ ಸಹಿತ) ಸಮಗ್ರವಾಗಿ ಶಾಂತಿಗೊಳಿಸಿ (ಉಚ್ಛೇದಮಾಡಿ) ಭಯವನ್ನು ನಿಶ್ಶೇಷವಾಗಿ ಬಿಟ್ಟು ನಿಶ್ಶಂಕನಾಗಿ (ನಿರ್ಭಯನಾಗಿ) ವಿಹರಿಸಿಕೊಂಡಿರು.

(ಅಭಯಾತ್ಮಾ – ಎನ್ನುವುದಕ್ಕೆ ಅಭವಾತ್ಮಾ – ಎಂಬ ಪಾಠಾಂತರವನ್ನು ಇಟ್ಟುಕೊಂಡರೆ ಅಸಂಸಾರಿಯಾಗಿ ಎಂದರ್ಥ ಮಾಡಬೇಕು.)

ಅಮಂಗಲಾಕಾರಧರಃ ಶರೀರ
ಶವಾವಲೀಸಂತತಸೇವನೇನ ।
ದಿಗಾವಲೀಸಂಭ್ರಮಣಶ್ರಮಾರ್ತಃ
ಶ್ಮಶಾನಸೇವೀ ವಪುಷಾ ಕ್ಷತೇನ ॥ ೭೪ ॥

ಭೋಗಾಭಿಷೋ ದಿಕ್ಷ್ವಭಿಧಾವಮಾನ
ಉತ್ಕಂಧರೋ ಧೀರವಿವೃದ್ಧಗರ್ಧಃ ।
ಉಡ್ಡೀಯ ವೈ ಗಚ್ಛತಿ ಚಿತ್ತಗೃಧ್ರೋ
ದೇಹದ್ರುಮಾತ್ತನ್ನಿಪುಣಂ ಜಯಸ್ತೇ ॥ ೭೫ ॥

ಭ್ರಾಂತಂ ವನಾಂತೇಷು ದಿಗಂತರೇಷು
ಫಲಾರ್ಥಿನಂ ಚಂಚಲಮಾಕುಲಾಂಗಂ ।
ಜನ್ಮಾವನೇರ್ಜನ್ಮಮಹೀಂ ಪ್ರಯಾತಂ
ಸಂಸಾರಬಂಧಂ ಜನತಾಂ ಹಸಂತಂ ॥ ೭೬ ॥

೭೪–೭೫. ಈ ಚಿತ್ತವು ಒಂದು ಗೃಧ್ರ (ಹದ್ದು) ಎಂಬುದಾಗಿಯೂ ತಿಳಿ. ಇದು ಸರ್ವದಾ ಅಮಂಗಳಕರವಾದ ಆಕಾರವನ್ನು ಧರಿಸಿರುವುದು. ಸಕಲ ಪ್ರಾಣಿ ಶರೀರಗಳೆಂಬ ಶವಗಳ ಸಮೂಹಗಳನ್ನು ನಿರಂತರವೂ ಸೇವಿಸುತ್ತ, ಎಲ್ಲೆಲ್ಲಿಯೂ ಎಲ್ಲ ದಿಕ್ಕುಗಳಲ್ಲಿ ಸಂಚಾರಮಾಡಿ ಆಯಾಸಗೊಂಡು ಬಹಳ ದುಃಖಪಡುತ್ತಿರುವುದು ಇದರ ದೇಹವು ಅಪಮಾನ ಶೋಕಭಯಾದಿಗಳೆಂಬ, ಕಾಗೆ ಮೊದಲಾದವುಗಳ ಚಂಚುಪ್ರಹಾರಗಳಿಂದ ಘಾಯಗೊಂಡಿರುವುದು. (ಈ ಚಿತ್ತ ಗೃಧ್ರವು) ಇದು ಸುಷುಪ್ತದಶೆಯಲ್ಲಿ ಸುಪ್ತದೇಹವೆಂಬ ಸ್ಮಶಾನವೃಕ್ಷದಲ್ಲಿ ವಾಸಮಾಡಿಕೊಂಡಿರುವದು. ಶಬ್ದಾದಿ ವಿಷಯೋಪಭೋಗಗಳೆಂಬ ಮಾಂಸದಲ್ಲಿ ಹೆಚ್ಚಾದ ಅಭಿಲಾಷೆಯುಳ್ಳದ್ದಾಗಿಯೂ, ಅಧೀರವಾಗಿಯೂ ತನ್ನ ಕುತ್ತಿಗೆಯನ್ನು ಎತ್ತಿಕೊಂಡು, ದಿಕ್ಕುದಿಕ್ಕುಗಳಿಗೂ ಸಂತತವೂ ಹಾರುತ್ತಿರುವುದು. ಇಂತಹ ಚಿತ್ತವೆಂಬ ಗೃಧ್ರವು, ನಿನ್ನ ದೇಹವೆಂಬ ವೃಕ್ಷವನ್ನು ಬಿಟ್ಟು ನಿನ್ನ ಪ್ರಯತ್ನದಿಂದ ಹಾರಿಹೋಗಿಬಿಟ್ಟರೆ ಆಗ ನಿನಗೆ ಸರ್ವತ್ರ ನಿರಾತಂಕವಾಗಿ ಸಂಪೂರ್ಣ ಜಯವು ಲಭಿಸುವುದು.

೭೬–೭೭. ರಾಮಚಂದ್ರ, ಈ ಚಿತ್ತವು ಒಂದು ವಾನರದಂತೆ ಮಾಡುವ ಹಾವಳಿಯನ್ನು ಸ್ವಲ್ಪ ನಿಧಾನವಾಗಿ ಪರಿಶೀಲಿಸು. ನಾನಾ ಮನೋರಥಗಳೆಂಬ

ದ್ರುಮೇಕ್ಷಿನಾಸಾಕುಸುಮೇ ಭುಜಾದಿ
ಶಾಖೇ ವಿಲೋಲಾಂಗುಲಿಜಾಲಪತ್ರೇ |
ಸಮುಲ್ಲಸಂತಂ ಪರಿಮಾರಯಾಂತ
ರ್ಮನೋಮಹಾಮರ್ಕಟಮಂಗ ಸಿದ್ಧೈಃ ॥ ೭೭ ॥

ಅಭ್ಯುತ್ಥಿತಂ ಸತ್ಫಲಸಂಕ್ಷಯಾಯ
ಲಸನ್ಮುಖಾಸಂಗಿತಡಿತ್ಪ್ರಕಾಶಂ |
ವರ್ಷಂತಮಾಸಾರಮನರ್ಥಸಾರ್ಥ
ಮಾಂದೋಲಿತಂ ವಾಸನವಾತ್ಯಯಾಂತಃ ॥ ೭೮ ॥

ಸಂಕಲ್ಪಸಂಕಲ್ಪನವರ್ಜನೋಗ್ರ
ಮಂತ್ರಪ್ರಭಾವಾದ್ಧೃದಯಾಂಬರಸ್ಥಂ |
ಸೋತ್ಸಾದಮುತ್ಸಾದಯ ಚಿತ್ತಮೇಘಂ
ಬೃಹತ್ಫಲಂ ಪ್ರಾಪ್ಯ ಭವಾಲಮಾದ್ಯಃ ॥ ೭೯ ॥

ಫಲಗಳನ್ನು ಅಪೇಕ್ಷಿಸಿ, ವನಮಧ್ಯಗಳಲ್ಲಿಯೂ, ದಿಗಂತರಾಳಗಳಲ್ಲಿಯೂ, ಬಹು ಚಪಲತೆಯಿಂದ ನಿರಂತರವೂ ಭ್ರಮಿಸುತ್ತಾ (ತಿರುಗಾಡುತ್ತಾ) ದುಃಖಕ್ಕೆ ಒಳಗಾಗಿರುವುದು (ಒದ್ದಾಡುತ್ತಿರುವುದು). ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನೆಗೆಯುವಂತೆ, ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಹಾರುತ್ತಾ ಕಂಡಕಂಡ ಜನರೆಲ್ಲರನ್ನೂ ಮತ್ತು ಅವರ ಸಂಸಾರ ಬಂಧವನ್ನೂ ನೋಡಿ ತನ್ನ ಚೇಷ್ಟೆಗಳಿಂದ ಅನುಕರಣ ಮಾಡುತ್ತಾ, ಪರಿಹಾಸಗೈಯುತ್ತಿರುವದು. ಕಣ್ಣು ಮೂಗುಗಳೆಂಬ ಹೂಗಳಿಂದಲೂ, ಕೈಕಾಲುಗಳೆಂಬ ಕೊಂಬೆಗಳಿಂದಲೂ, ಚಂಚಲವಾದ ಬೆರಳುಗಳೆಂಬ ಎಲೆಗಳಿಂದಲೂ ಕೂಡಿರುವ ಶರೀರವೆಂಬ ವೃಕ್ಷದಲ್ಲಿ ವಿಹರಿಸುತ್ತಿರುವದು. ಇಂತಹ ಮನೋ ಮರ್ಕಟವನ್ನು ನೀನು ಬುದ್ಧಿಬಲದಿಂದ ನಿರೋಧಿಸಿ ನಿನ್ನ ಶ್ರೇಯಸ್ಸಿಗಾಗಿ ಕೊಲ್ಲುವವನಾಗು.

೭೮–೭೯. ರಾಮ, ಈ ಚಿತ್ತವೇ ಒಂದು ಮೇಘವೆಂದು ತಿಳಿ. ಇದು ಪಾರಮಾರ್ಥಿಕವಾದ ಆತ್ಮಸುಖಾನುಭವವೆಂಬ ಪಕ್ವವಾದ ಸಸ್ಯಫಲವನ್ನು ಹಾಳು ಮಾಡುವುದಕ್ಕಾಗಿ ಅಕಾಲದಲ್ಲಿ ಉದಯಿಸುವದು. ಈ ಚಿತ್ತ ಮೇಘದ ಬಹಿರ್ಮುಖ ವೃತ್ತಿಯೆಂಬ ಅಗ್ರಭಾಗದಲ್ಲಿ ಚಿದಾಭಾಸ ಪ್ರಕಾಶವೆಂಬ ಮಿಂಚು ಒಂದೊಂದು ಸಲ ಹೊಳೆಯುವದು. ಸಕಲಾನರ್ಥ ಸಮೂಹಗಳೆಂಬ ಧಾರಾಕಾರವಾದ ವೃಷ್ಟಿ

ಗ್ರಂಥೀಕೃತಂ ಕರ್ಮಭಿರಾತ್ಮಸೃಷ್ಟೈಃ
ಮಂತ್ರೈರಭೇದ್ಯಂ ಜ್ವಲನೈರದಗ್ಧಂ ।
ಪೀಡಾಂ ಪರಾಮಾತ್ಮನಿ ಕಲ್ಪಯಂತಂ
ಸಮುಸ್ತಜಾತ್ಯಂತರದೀರ್ಘದಾಮು ॥ ೮೦ ॥

ಸಂಪ್ರೋತನಿಃಸಂಖ್ಯಶರೀರಮಾಲಂ
ಬಲಾದಸಂಕಲ್ಪನಮಾತ್ರಶಸ್ತ್ರೈಃ ।
ಛಿತ್ತ್ವಾ ಸ್ವಯಂ ರಾಘವ ಚಿತ್ತಪಾಶಂ
ಯಥಾಸುಖಂ ತ್ವಂ ವಿಹರಾಸ್ತಶಂಕಃ ॥ ೮೧ ॥

ಯನ್ನು ಸಂತತವಾಗಿ ಸುರಿಸುವದು. ವಿವಿಧ ವಾಸನೆಗಳೆಂಬ ವಾಯುವೃಂದವು ಇದರೊಳಗೆ ಸೇರಿಕೊಂಡು ಇದನ್ನು ಸಿಕ್ಕಿದ ಹಾಗೆ ಸುತ್ತಿಸುತ್ತಿರುವದು. ಹೃದಯ ವೆಂಬ ಆಕಾಶವನ್ನು ಇದು ಕವಿದುಕೊಂಡಿರುವದು. ಇಂತಹ ಚಿತ್ತವೆಂಬ ಮೇಘ ವನ್ನು ಮನಸ್ಸಿನಲ್ಲಿ ನಾನಾ ಸಂಕಲ್ಪಗಳ ಕಲ್ಪನೆ ಮಾಡಿಕೊಳ್ಳುವದನ್ನು ಪರಿತ್ಯಾಗ ಮಾಡುವಿಕೆಯೆಂಬ ಉಗ್ರವಾದ ವಾಯವ್ಯಾಸ್ತ್ರದ ಪ್ರಭಾವದಿಂದ ನೀನು ಅತ್ಯು ತ್ಸಾದೊಡನೆ ಓಡಿಸಿಬಿಡು. ಬಳಿಕ, ಜೀವನ್ಮುಕ್ತಿ ರೂಪ ಮಹಾಫಲವನ್ನು ಹೊಂದಿ ಪೂರ್ವಸಿದ್ಧ ನಿತ್ಯಮುಕ್ತಾತ್ಮನಾಗಿಯೇ ಸಂಪೂರ್ಣವಾಗಿ ಇದ್ದುಬಿಡು.

೮೦-೮೧. ರಾಘವ, ಈ ಮನಸ್ಸೇ ಒಂದು ಪಾಶವೆಂದು ತಿಳಿ. ಇದು ಕಲ್ಪಾದಿಯಲ್ಲಿ ಆತ್ಮಕರ್ತೃಕವಾದ ಸೃಷ್ಟಿಕಾಲದ ಮೊದಲು ಈ ಕಾಲದವರೆಗೂ ಮಾಡಲ್ಪಟ್ಟ ಸುಕೃತ ದುಷ್ಕೃತ ಕರ್ಮಗಳಿಂದ ನಿರಂತರವೂ ಗಂಟುಹಾಕಲ್ಪಟ್ಟು ದೃಢವಾಗಿರುವದು. ಯಾವ ಮಂತ್ರಗಳಿಂದಲೂ ಇದನ್ನು ಭೇದಿಸಲು ಶಕ್ಯವಿಲ್ಲ ಅಗ್ನಿಗಳಿಗೂ ಇದನ್ನು ಸುಡಲು ಸಾಧ್ಯವಿಲ್ಲ. ಆತ್ಮನಿಗೆ ಅತ್ಯಂತ ಪೀಡಾಕರವಾಗಿರು ವದು. ಆತ್ಮನನ್ನು ನಾನಾ ಯೋನಿ ಜನ್ಮಭೇದಗಳ ಕ್ರಮದಿಂದ ಬಲವಾಗಿ ಬಿಗಿ ಯುವದಕ್ಕೆ ಅನುಕೂಲವಾದ ಉದ್ದವಾದ ಹಗ್ಗದಂತಿರುವದು. ಸಂಖ್ಯಾತೀತಗಳಾದ ಶರೀರಗಳೆಂಬ ಸಣ್ಣಸಣ್ಣ ಹುರಿಗಳ ಸಮೂಹದಿಂದ ಹೆಣೆಯಲ್ಪಟ್ಟಿರುವದು. ಇಂತಹ ಮನಸ್ಸೆಂಬ ಪಾಶವನ್ನು ನೀನು ಸಂಕಲ್ಪ ತ್ಯಾಗಮಾತ್ರವೆಂಬ ಹರಿತವಾದ ಶಸ್ತ್ರ ಗಳಿಂದ ಬಲಾತ್ಕಾರವಾಗಿ ಹಿಡಿದುಕೊಂಡು ಕತ್ತರಿಸಿ ಸುಖವಾಗಿ ಪುನರ್ಜನ್ಮದ ಶಂಕೆಯೇ ಇಲ್ಲದೆ ವಿಹರಿಸಿಕೊಂಡಿರು.

ಫೂತ್ಕಾರದಗ್ಧಾಖಿಲಪಾಂಥಲೋಕ
ಮತ್ಯಂತದುಷ್ಪ್ರಾಪಪರಪ್ರಬೋಧಂ |
ಆಶೀವಿಷಂ ಶೋಷಿತಲೋಕಖಂಡಂ
ವ್ಯಾತ್ತಾಮಿಷೋದ್ಧೂತಶರೀರಖಂಡಂ || ೮೨ ||

ಆಮಂಥರಂ ದೇಹಗುಹಾಸು ಸುಪ್ತಂ
ಸಂಕಲ್ಪಘೋರಾಜಗರಂ ಜವೇನ |
ಅಕಾಮನಾ ನಾಮ ಮಹಾನಲೇನ
ಬಲೇನ ದಗ್ಧ್ವಾ ವಿಭವೋ ಭವ ತ್ವಂ || ೮೩ ||

ಚಿತ್ತೇನ ಚೇತಃ ಶಮಮಾಶು ನೀತ್ವಾ
ಶುದ್ಧೇನ ಘೋರಾಸ್ತ್ರಮಿವಾಸ್ತ್ರಯುಕ್ತ್ಯಾ |
ಚಿರಾಯ ಸಾಧೋ ತ್ಯಜ ಚಂಚಲತ್ವಂ
ವಿಮರ್ಕಟೋ ವೃಕ್ಷ ಇವಾಕ್ಷತಶ್ರೀಃ || ೮೪ ||

೮೨–೮೩. ರಾಮ, ಈ ಸಂಕಲ್ಪವೆಂಬುದನ್ನು ಒಂದು ಘಟಸರ್ಪವೆಂದು ತಿಳಿ. ಇದು ಕಾಮಕ್ರೋಧಾದಿಗಳೆಂಬ ಫೂತ್ಕಾರದಿಂದ (ವಿಷಮಯವಾದ) ಸಂಸಾರ ಮಾರ್ಗದಲ್ಲಿ ಪ್ರಯಾಣಮಾಡುವವರನ್ನೆಲ್ಲ ಸುಟ್ಟುಬಿಡುವದು. ಘಟಸರ್ಪದಿಂದ ಪರಬೋಧವೆಂಬುದು ಎಂದಿಗೂ ಆತ್ಯಂತಿಕವಾಗಿ ಉಂಟಾಗದಿರುವಂತೆಯೇ ಈ ಸಂಕಲ್ಪದಿಂದ ಪರಮಾತ್ಮನ ವಿಷಯಕವಾದ ತತ್ತ್ವಜ್ಞಾನವು (ಪರಪ್ರಬೋಧ) ಎಂದಿಗೂ ಉದಯಿಸುವದಿಲ್ಲ. ಸರ್ವದಾ ತನ್ನ ಮುಖದಲ್ಲಿ ವಿಷವನ್ನು ಧರಿಸಿ ಕೊಂಡು ಇದು ಸಕಲ ಭುವನಗಳ ನಾನಾಖಂಡಗಳನ್ನೂ ಸಂತಾಪಗೊಳಿಸುವದು. ಇದು ತೃಷ್ಣೆಯೆಂಬ ಮುಖವನ್ನು ತೆರೆದುಕೊಂಡು ಶಬ್ದಾದಿ ವಿಷಯಗಳೆಂಬ ಮಾಂಸಕ್ಕಾಗಿ ದಂಡಾಕಾರವಾದ ತನ್ನ ಶರೀರವನ್ನು ಕಂಪಿಸುವದು. ದೇಹಗಳೆಂಬ ಗುಹೆಗಳಲ್ಲಿ (ಮೋಕ್ಷೋದ್ಯೋಗದಲ್ಲಿ ಉತ್ಸಾಹವಿಲ್ಲದೆ) ಮಂದಗತಿಯಾಗಿ ಅಡಗಿ ಕೊಂಡಿರುವದು. ಇಂತಹ ಘೋರವಾದ ಸಂಕಲ್ಪವೆಂಬ ಹೆಬ್ಬಾವನ್ನು ಬಲಾತ್ಕಾರ ದಿಂದ, ವೈರಾಗ್ಯವೆಂಬ ಮಹಾ ಅಗ್ನಿಯಿಂದ ಬೇಗನೆ ಸುಟ್ಟು ಬೂದಿಮಾಡಿ, ನೀನು ಸ್ವಾಭಾವಿಕವಾದ ಪೂರ್ಣಾನಂದ ವೈಭವದಲ್ಲಿ ಸ್ಥಿರನಾಗಿ ನಿಲ್ಲು.

೮೪. ಸಾಧುವೇ, ಒಂದು ಘೋರವಾದ ಅಸ್ತ್ರವನ್ನು ಮತ್ತೊಂದು ಅಸ್ತ್ರದ ಸಹಾಯದಿಂದ ಶಾಂತಿಪಡಿಸುವಂತೆ, ನೀನು ನಿನ್ನ ಶುದ್ಧವಾದ ಚಿತ್ತದಿಂದಲೇ,

ಅಮಲಮಿತಿ ಚ ಕೃತ್ವಾ ಚೇತಸಾ ವೀತಶಂಕ
ಮುಪಶಮಿತಮನೋಂತಃ ಸರ್ವಮಾದೇಹಮೇವ|
ತೃಣಲವಲಘುಪಶ್ಯ‌ಲೀಲಯಾ ಹೇಯದೃಷ್ಟ್ಯಾ
ಪಿಬ ವಿಹರ ರಮಸ್ವ ಪ್ರಾಪ್ತಸಂಸಾರಪಾರಃ || ೮೫ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ಉಪಶಮಪ್ರಕರಣೇ " ರಾಘವಾಶಯ ವಿನಿಯೋಗೋ " ನಾಮ
ಪಂಚಾಶಃ ಸರ್ಗಃ

ಬೇಗನೆ ಚಿತ್ತವನ್ನು ಶಾಂತಿಗೊಳಿಸಿ, ಕಪಿಯಿಂದ ಬಿಡುಗಡೆಯಾದ ವೃಕ್ಷದಂತೆ, ಕುಗ್ಗದ ತೇಜಸ್ಸುಳ್ಳವನಾಗಿ (ಪೂರ್ಣ ತೇಜಸ್ವಿಯಾಗಿ) ಎಂದೆಂದಿಗೂ ನಿಶ್ಚಲನಾಗಿರು.

೮೫. ರಾಮಚಂದ್ರ, ನಾನು ಇದುವರೆವಿಗೆ ಹೇಳಿದ ಕ್ರಮದಿಂದಲೂ ಮತ್ತು ನಾನು ಉಪದೇಶ ಮಾಡಿದ ತತ್ತ್ವಾವಬೋಧದಿಂದಲೂ, ನಿನ್ನ ಚಿತ್ತವನ್ನು ನಿರ್ಮಲವನ್ನಾಗಿ ಮಾಡಿಕೊಂಡು, ನಿಶ್ಯಂಕನಾಗಿ ಉಪಶಾಂತಿ ಹೊಂದಿದ ಮನಸ್ಸಿನೊಳಗೆ ಈ ಸಮಸ್ತವೂ ದೇಹವಿರುವವರೆಗೆ ಮಾತ್ರವೇ ಇರತಕ್ಕುದೆಂದೂ, ಒಂದು ಹುಲ್ಲು ಕಡ್ಡಿಯಂತೆ ಅತಿ ಲಘುವಾದುದೆಂದೂ, ಮನಗಂಡು (ತಿಳಿದು) ಈ ದೃಶ್ಯವೆಲ್ಲದರಲ್ಲಿಯೂ ಹೇಯಬುದ್ಧಿಯನ್ನಿಟ್ಟು, ಸಂಸಾರಸಾಗರದ ಪಾರಂಗತನಾಗಿ (ಸಂಸಾರವನ್ನು ದಾಟಿದವನಾಗಿ) ಅನಂತರ, ನೀನು ಪಾನಮಾಡಬೇಕಾದರೂ ಮಾಡು ಅಥವಾ ವಿಹಾರ ಮಾಡಿಕೊಂಡಿರು. ಅಥವಾ ನಿನ್ನಿಷ್ಟಬಂದಂತೆ ಕ್ರೀಡಿಸಿಕೊಂಡಿರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ಉಪಶಮಪ್ರಕರಣದಲ್ಲಿ " ರಾಘವಾಶಯ ವಿನಿಯೋಗ " ಎಂಬ
ಐವತ್ತನೆಯ ಸರ್ಗವು

ಏಕಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಪರಿದೀರ್ಘಾಸು ತನ್ವೀಷು ಸುತೀಕ್ಷ್ಣಾಸು ಸುತಾಸು ಚ |
ಕ್ಷುರಧಾರೋಪಮಾನಾಸು ಚಿತ್ತವೃತ್ತಿಷು ತಿಷ್ಠ ಮಾ ॥ ೧ ॥

ಕಾಲೇನ ಮಹತಾ ಕ್ಷೇತ್ರೇ ಜಾತೇಯಂ ಬುದ್ಧಿವಲ್ಲರೀ |
ವೃದ್ಧಿಂ ವಿವೇಕಸೇಕೇನ ನಯ ತಾಂ ನಯಕೋವಿದ ॥ ೨ ॥

ಐವತ್ತೊಂದನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಅಯ್ಯಾ ರಾಘವ, ಪ್ರಪಂಚದಲ್ಲಿ ಸಾಧಾರಣವಾಗಿ ಪ್ರಾಣಿಗಳ ಚಿತ್ತವೃತ್ತಿಗಳು ಅತ್ಯಂತ ಅವಿಶ್ವಸನೀಯವಾದವುಗಳು. ಏಕೆಂದರೆ ಅವು ಅತಿ ದೂರಸ್ಥಗಳಾದ ಐಹಿಕಾಮುಷ್ಮಿಕ ವಿಷಯೋಪಭೋಗಗಳಲ್ಲಿ ವಿಶೇಷವಾದ ಆಸಕ್ತಿಯನ್ನು ಪಡೆದಿವೆ. ಅವು ಕೇವಲ ವಾಸನಾ ಪ್ರಚುರವಾಗಿರುವ ಕಾರಣ ಬಹು ಸೂಕ್ಷ್ಮವಾಗಿರುವುವು. (ಮನುಷ್ಯನು ಅಜಾಗರೂಕನಾದ ಕೂಡಲೆ ಅವನ ಚಿತ್ತಸ್ಥೈರ್ಯ ಸುಖಶಾಂತಿಗಳಿಗೆ ಭಂಗವನ್ನುಂಟುಮಾಡಿ ಅನರ್ಥಹೇತ್ರು ಗಳೇ ಆದರೂ) ಆತ್ಮಪ್ರತಿಬಿಂಬವನ್ನು ಗ್ರಹಿಸುವುದರಲ್ಲಿ ಯೋಗ್ಯತೆಯನ್ನು ಅಂದರೆ ನೈರ್ಮಲ್ಯವನ್ನು ಹೊಂದಿರುವವು. ಅವು ಹೀಗಿರುವದರಿಂದಲೇ ಕತ್ತಿಗಳ ಅಲಗು ಗಳಿಗೆ ಸಮಾನವಾಗಿ ಅತ್ಯಂತ ಹರಿತವಾಗಿರುವವು. ಇಂತಹ ಆತ್ಮವಿನಾಶಕಾರಿ ಗಳಾದ ಚಿತ್ತಚಾರಿತ್ರ್ಯಗಳಲ್ಲಿ (ವೃತ್ತಿಗಳಲ್ಲಿ) ನೀನು ಪ್ರಮತ್ತನಾಗಿ (ಅಜಾಗರೂಕ ನಾಗಿ) ವಿಶ್ವಾಸವನ್ನು (ನಂಬುಗೆ) ಇಟ್ಟುಕೊಂಡು ವ್ಯವಹರಿಸದೆ ಇರು.

೨. ಅಯ್ಯಾ ಸಕಲನೀತಿಜ್ಞನಾದ ರಾಮ, ಎಷ್ಟೋ ದೀರ್ಘಕಾಲ ಕಳೆದು ಹೋದ ತರುವಾಯ, ಅದೃಷ್ಟವಶದಿಂದ ಸತ್ಕುಲವೆಂಬ ಸುಕ್ಷೇತ್ರದಲ್ಲಿ ನಿನಗೆ ಈ ದೇಹವೆಂಬ ವೃಕ್ಷವು ಹುಟ್ಟಿರುವುದು, ಇದರಲ್ಲಿ ಚಿತ್ತಶುದ್ಧಿ ಶ್ರವಣ ಮನನ ಮೊದ ಲಾದ ಸಂಸ್ಕಾರಗಳೆಂಬ ದೋಹದೋಪಾಯಗಳಿಂದ (ದೋಹದ=ಗಿಡಗಳನ್ನು ಕಸಿ

ಯಾವನ್ಮ್ಲಾಯತಿ ನೋ ಕಾಯಲತಿಕಾ ಕಾಲಭಾಸ್ವತಾ |
ಭೂತಲೇಽಪತಿತಾಂ ತಾವದೇನಾಮುದ್ಧೃತ್ಯ ಧಾರಯ || ೩ ||

ಮದ್ವಾಕ್ಯಾರ್ಥೈಕತತ್ವಜ್ಞ ಮದ್ವಾಕ್ಯಾರ್ಥೈಕ ಭಾವನಾತ್ |
ಸುಖಮಾಪ್ನೋಷಿ ಸರ್ವಾರ್ಥೈಥಾಭ್ರರವಭಾವನಾತ್ || ೪ ||

ಉದ್ದಾಲಕವದಾಲೂನಂ ವಿಶೀರ್ಣಂ ಭೂತಪಂಚಕಂ |
ಕೃತ್ವಾ ಕೃತ್ವಾ ಧಿಯಾ ಧೀರ ಧೀರಯಾಂತರ್ವಿಚಾರಯ || ೫ ||

ಮಾಡುವ ವಿಧಾನ) ಪರಮಾತ್ಮ ಪರಿಚಯ ರೂಪ ಬುದ್ಧಿಯೆಂಬ ಲತೆಯು ಉಲ್ಲಾಸದಿಂದ ಹಬ್ಬಿಕೊಂಡಿರುವುದು. ಇಂತಹ ಬುದ್ಧಿಲತೆಯನ್ನು ನೀನು ಅತಿ ನೈಪುಣ್ಯದಿಂದ ಬಾಹ್ಯದೃಶ್ಯಗಳ ಕಡೆಯಿಂದ ಹಿಂದಿರುಗಿಸಿ, ವಿವೇಕವೆಂಬ ತಿಳಿನೀರನ್ನು ಎರೆದು ಚೆನ್ನಾಗಿ ವೃದ್ಧಿಹೊಂದಿಸುವವನಾಗು.

೩. ಈ ನಿನ್ನ ಶರೀರವೆಂಬ ಕೋಮಲವಾದ ಲತೆಯು ಕಾಲ(ಆಯಸ್ಸು)ವೆಂಬ ಸೂರ್ಯನಿಂದ ಎಷ್ಟು ಕಾಲದವರೆಗೆ ಬಾಡಿಹೋಗದೆ ರಾರಾಜಿಸುತ್ತಿರುವುದೋ ಅಷ್ಟರೊಳಗಾಗಿಯೇ ಗುರುಶುಶ್ರೂಷೆ, ಶ್ರವಣ, ಮನನ ಮುಂತಾದ ಸಾಧನಗಳಿಂದ ಇದನ್ನು ನೆಲದಮೇಲೆ ಬೀಳದಹಾಗೆ ಎತ್ತಿ ಹಿಡಿದುಕೊಂಡು ನಿನ್ನ ಬುದ್ಧಿವಲ್ಲರಿಯನ್ನು ಚೆನ್ನಾಗಿ ಕಾಪಾಡಿಕೊಂಡಿರು.

೪. ನನ್ನ ಉಪದೇಶವಾಕ್ಯಗಳ ಅರ್ಥದಲ್ಲಿನ ಮುಖ್ಯವಾದ ತತ್ತ್ವವನ್ನು ಬಲ್ಲವನಾದ ರಾಮಚಂದ್ರನೇ, ಮೇಘಗಳ ಗರ್ಜನೆಯನ್ನು ಕೇಳಿದ ಮಾತ್ರದಿಂದ ನವಿಲು ಹೇಗೆ ಆನಂದ ಪಡುವುದೋ ಹಾಗೆ ನೀನೂ ನನ್ನ ಉಪದೇಶ ವಚನಗಳ ಪರಮಾರ್ಥವನ್ನು ಚೆನ್ನಾಗಿ ಭಾವನೆ ಮಾಡುವದರಿಂದ ನಿರತಿಶಯಾನಂದ ಲಾಭದಿಂದ ಸದಾ ಸುಖಿಸುವೆ.

೫. ಎಲೈ ಧೀರನೆ, ಉದ್ದಾಲಕನೆಂಬ ಮುನಿಶ್ರೇಷ್ಠನಂತೆ, ನೀನೂ ಕೂಡ ದೇಹೇಂದ್ರಿಯಾದಿಗಳಿಗೂ ಸಕಲ ಬಾಹ್ಯ ಪ್ರಪಂಚಕ್ಕೂ ಆರಂಭಕರವಾದ (ಪ್ರಯೋಜಕ) ಪಂಚಭೂತಗಳನ್ನು ಜರ್ಜರಿತವಾದವುಗಳೆಂದೂ ನಿರ್ಮೂಲವಾಗಿ ನಶ್ವರವಾದವುಗಳೆಂದೂ (ತತ್ತ್ವಮಸ್ಯಾದಿ ವೇದಾಂತ ವಾಕ್ಯಗಳ ವಿಚಾರಪರವಾದ ವಿವೇಕದಿಂದ) ಪುನಃ ಪುನಃ ವಿಮರ್ಶೆಮಾಡಿ ನಿರ್ಧರಿಸಿ ನಿರ್ವಿಕಾರವಾದ ಉದಾರ ಬುದ್ಧಿ

ಶ್ರೀರಾಮ ಉವಾಚ—

ಕೇನ ಕ್ರಮೇಣ ಭಗವನ್ಮುನಿನೋದ್ದಾಲಕೇನ ತತ್ |
ಭೂತಪಂಚಕಮಾಲೂನಂ ಕೃತ್ವಾಂತಃ ಪ್ರವಿಚಾರಿತಂ ॥ ೬ ॥

ಶ್ರೀವಸಿಷ್ಠ ಉವಾಚ—

ಶೃಣುರಾಮ ಯಥಾಪೂರ್ವಂ ಭೂತವೃಂದವಿಚಾರಣಾತ್ |
ಉದ್ದಾಲಕೇನ ಸಂಪ್ರಾಪ್ತಾ ಪರಮಾ ದೃಷ್ಟಿರಕ್ಷತಾ ॥ ೭ ॥

ಯಿಂದ ಎಲ್ಲ ಜಗತ್ತಿಗೂ ಅಧಿಷ್ಠಾನವಾದ ಪರಬ್ರಹ್ಮವನ್ನು ಸಾಕ್ಷಾತ್ಕರಿಸುವ ಸಲು ವಾಗಿ ಸದಾ ವಿಚಾರಪರನಾಗಿರು.

[ಅನೇನ ಸೌಮ್ಯ ಶುಂಗೇನಾಪೋಮೂಲಮನ್ವಿಚ್ಛ ಇತ್ಯಾದಿ ಛಾಂದೋಗ್ಯ ಶ್ರುತಿಯು ಕಾರಣವ್ಯತಿರಿಕ್ತವಾಗಿ ಕಾರ್ಯಕ್ಕೆ ಸತ್ತೆಯೇ ಇಲ್ಲವೆಂದು ಯುಕ್ತಿ ಯಿಂದ ಕಾರ್ಯವನ್ನು ಅಪಲಾಪಮಾಡಿ ಮಿಥ್ಯೆಯೆಂದು ಪ್ರತಿಪಾದಿಸಿರುವುದು. ಆದಕಾರಣ ಆಕಾಶಾದಿ ಪಂಚಭೂತಗಳು ಕಾರಣವಾದ ಆತ್ಮನಿಗಿಂತ ವ್ಯತಿರಿಕ್ತವಾಗಿ ಇಲ್ಲವು. ಅವು ಕಾಲಕ್ರಮದಲ್ಲಿ ಜೀರ್ಣವಾಗುವುವು. ಜ್ಞಾನದಿಂದ ಬಾಧಿತವಾ ಗುವವು. ಎಂಬುದನ್ನು ನೆನಪಿನಲ್ಲಿಡಬೇಕು.]

೬. ಶ್ರೀರಾಮನು ಕೇಳಿದನು—ಪೂಜ್ಯರೇ, ಆ ಉದ್ದಾಲಕನೆಂಬ ಮುನಿಯು ಯಾವ ಕ್ರಮದಿಂದ ಆಕಾಶಾದಿಪಂಚಭೂತಗಳನ್ನು ಮಿಥ್ಯೆಯೆಂದೂ ನಶ್ವರಗ ಳೆಂದೂ ನಿರ್ಧರಿಸಿ ಆತ್ಮತತ್ತ್ವವನ್ನು ವಿಚಾರಮಾಡಿ ಕೃತಕೃತ್ಯನಾದನು ?

೭. ಶ್ರೀ ವಸಿಷ್ಠನು ಹೇಳಿದನು—ರಾಮ, ಹಿಂದೆ ಉದ್ದಾಲಕಮುನಿಯು ಆಕಾಶಾದಿ ಪಂಚಭೂತಸಮುದಾಯಗಳನ್ನು ಯಾವ ಕ್ರಮದಿಂದ ವಿಚಾರಮಾಡಿ ಅವುಗಳ ಮಿಥ್ಯಾತ್ವವನ್ನು ತತ್ತ್ವತಃ ನಿರ್ಧರಿಸಿ ಕೊನೆಗೆ ಶಾಶ್ವತವಾದ ಪಾರಮಾ ರ್ಥಿಕ ದೃಷ್ಟಿಯನ್ನು ಹೇಗೆ ಪಡೆದನೆಂಬುದನ್ನು ನಾನು ಈಗ ನಿನಗೆ ವಿವರಿಸಿ ಹೇಳು ವೆನು ಕೇಳು.

ಜಗಜ್ಜೀರ್ಣ ಗೃಹಸ್ಯಾಸ್ಯ ಕೋಣೇ ಕಸ್ಮಿಂಶ್ಚಿದಾತತೇ |
ಭೂಮೇರನಿಲದಿಗ್ನಾಮ್ನಿ ಭೂಭೃದ್ಭಾಂಡಸಮಾಕುಲೇ || ೮ ||

ಗಂಧಮಾದನಶೈಲೇಂದ್ರನಾಮ್ನಿ ಕಾಚಿತ್ಕಿಲ ಸ್ಥಲೀ |
ವಿದ್ಯತೇ ಕೀರ್ಣಕುಸುಮಾ ದ್ರುಮಕರ್ಪೂರಕೇಸರಾ || ೯ ||

ವಿಚಿತ್ರವರ್ಣವಿಹಗಾ ನಾನಾವಲ್ಲೀವಿಲಾಸಿನೀ |
ವನೇಚರವ್ಯಾಪ್ತತಟೀ ಪುಷ್ಪಕೇಸರಭಾಸಿನೀ || ೧೦ ||

ಕ್ವಚಿತ್ಸ್ಫೀತಮಹಾರತ್ನಾ ಕ್ವಚಿಲ್ಲೋಲಾಂಬುಜೋತ್ಪಲಾ |
ಕ್ವಚಿನ್ನೀಹಾರಕಬರೀ ಸರಸೀದರ್ಪಣಾ ಕ್ವಚಿತ್ || ೧೧ ||

೮–೯. ಈ ಜಗತ್ತೆಂಬುದು ಬಹು ಹಿಂದಿನಕಾಲದ ಒಂದು ಪಾಳುಬಿದ್ದಿರುವ ಮನೆಯೆಂದು ತಿಳಿ. ಈ ಭೂಮಿಯು ಆ ಪಾಳುಮನೆಯ ಒಂದು ಕಿರುಮನೆ. (ಒಂದು ಭಾಗ) ಅದರಲ್ಲಿ ವಾಯುವ್ಯದಿಕ್ಕು ಎಂಬ ಅತಿ ವಿಸ್ತಾರವಾದ ಒಂದು ಮೂಲೆಯಿರುವುದು. ಅಲ್ಲಿ ಪರ್ವತಗಳೆಂಬ ಭಾಂಡಗಳು (ಮಡಕೆ, ಗುಡಾಣ ಮುಂತಾದ ಗೃಹೋಪಕರಣಗಳು) ವರಸೆಯಾಗಿ ತುಂಬಿಕೊಂಡಿರುವವು. ಅವುಗಳ ಲ್ಲೊಂದಾದ ಗಂಧಮಾದನ ಪರ್ವತವೆಂಬ ಹೆಸರುಳ್ಳ ಭಾಂಡದೊಳಗೆ ಅಕೃತ್ರಿಮ ವಾದ ಒಂದು ಪ್ರದೇಶವಿರುವುದು. ಅದರಲ್ಲಿ ವಿವಿಧವಾದ ವೃಕ್ಷಗಳ ಹೂಗಳೂ, ಅವುಗಳ ಕರ್ಪೂರಧೂಳಿ ಸದೃಶವಾದ ಪರಾಗಗಳೂ ಕೇಸರಗಳೂ ಬೇಕಾದಷ್ಟು ತುಂಬಿಕೊಂಡಿವೆ.

೧೦. ಆ ಸ್ಥಳದಲ್ಲಿ ವಿಚಿತ್ರವಾದ ಬಣ್ಣಗಳಿಂದ ಕಣ್ಗೊಳಿಸುವ ಬಗೆಬಗೆಯ ಸಾವಿರಾರು ಪಕ್ಷಿಗಳು ಸಾಲುಸಾಲಾಗಿ ಹಾರಾಡುತ್ತಿವೆ. ನಾನಾವಿಧ ಲತೆಗಳು ವಿರಾಜಿಸುತ್ತಲಿವೆ. ಆ ಪರ್ವತಪ್ರಾಂತ ಭೂಮಿಗಳಲ್ಲಿ ಕಿರಾತ (ಬೇಡ) ಮುಂತಾದ ಕಾಡುಜನರು (ವನಚರ) ಆಕ್ರಮಣ ಮಾಡಿಕೊಂಡಿರುವರು. ಮತ್ತು ಆ ಪ್ರದೇಶವು ಬಹುವಿಧ ಪುಷ್ಪಗಳ ಕೇಸರಗಳಿಂದ ಶೋಭಿಸುತ್ತಲಿರುವದು.

೧೧. ಆ ಪ್ರದೇಶದ ಒಂದೆಡೆಯಲ್ಲಿ ಅಮೂಲ್ಯವಾದ ದಿವ್ಯರತ್ನಗಳು ರಾಶಿ ರಾಶಿಯಾಗಿ ಬಿದ್ದಿವೆ. ಮತ್ತೊಂದೆಡೆಯಲ್ಲಿ ಕಮಲಗಳೂ, ನೈದಿಲೆ ಹೂಗಳೂ ಚಲಿಸುತ್ತಿವೆ. ಇನ್ನೊಂದೆಡೆಯಲ್ಲಿ ಮಂಜಿನ ಗಡ್ಡೆಗಳು ಆ ವನದೇವತೆಯ ಕೇಶ

ತತ್ರ ಕಸ್ಮಿಂಶ್ಚಿದುದಿತೇ ಸಾನೌ ಸರಲಪಾದಪೇ |
ಆಗುಲ್ಫಾಕೀರ್ಣಕುಸುಮೇ ಸ್ನಿಗ್ಧಚ್ಛಾಯಮಹಾದ್ರುಮೇ ॥ ೧೨ ॥

ಉದ್ದಾಲಕೋ ನಾಮ ಮುನಿರ್ಮೌನೀ ಮಾನೀ ಮಹಾಮತಿಃ |
ಅಪ್ರಾಪ್ತಯೌವನಃ ಪೂರ್ವಮುವಾಸೋದ್ದಾಮತಾಪಸಃ ॥ ೧೩ ॥

ಪ್ರಥಮಂ ತು ಬಭೂವಾಸಾವಲ್ಪಪ್ರಜ್ಞೋ ವಿಚಾರವಾನ್ |
ಅಪ್ರಾಪ್ತಪದವಿಶ್ರಾಂತಿರಪ್ರಬುದ್ಧಃ ಶುಭಾಶಯಃ ॥ ೧೪ ॥

ರಾಶಿಯಂತೆ ಹೊಳೆಯುತ್ತಿವೆ. ಮುಗುದೊಂದೆಡೆಯಲ್ಲಿ ಕನ್ನಡಿಗಳಂತೆ ಥಳಥಳಿಸುವ ಅತಿ ಸ್ವಚ್ಛವಾದ ಸರೋವರಗಳು ಇವೆ.

೧೨–೧೩. ಆ ಗಂಧಮಾದನ ಪರ್ವತದಲ್ಲಿ ಒಂದು ಎತ್ತರವಾದ ಪ್ರಸ್ಥಭೂಮಿಯಿರುವದು. ಆ ಪ್ರಸ್ಥಭೂಮಿಯಲ್ಲಿ ಸರಳ ವೃಕ್ಷಗಳು ಸಾಲಾಗಿ ಬೆಳೆದಿದ್ದವು. ನೆಲದ ಮೇಲೆ ಪಾದಗಳು ಮುಚ್ಚಿಕೊಳ್ಳುವಷ್ಟು ಎತ್ತರವಾಗಿ ಹೂವುಗಳು ಬಿದ್ದು ಹರಡಿಕೊಂಡಿದ್ದವು. ಅಲ್ಲಿ ಬೆಳೆದಿರುವ ದೊಡ್ಡ ದೊಡ್ಡ ವೃಕ್ಷಗಳ ಕೆಳಗಡೆ ನೆಳಲು ಬಹಳ ನಿಬಿಡ (ಒತ್ತು) ವಾಗಿದ್ದುಕೊಂಡು ಅಲ್ಲಿಗೆ ಹೋದವರ ಆಯಾಸವನ್ನು ಪರಿಹರಿಸಿ ತಂಪನ್ನುಂಟು ಮಾಡುತ್ತಿದ್ದವು. ಇಂತಹ ದಿವ್ಯವಾದ ಪ್ರಸ್ಥಭೂಮಿಯಲ್ಲಿ ಉದ್ದಾಲಕನೆಂಬ ಮುನಿಶ್ರೇಷ್ಠನು ಬಹು ಹಿಂದಿನ ಕಾಲದಲ್ಲಿ ವಾಸವಾಗಿದ್ದನು. ಆತನು ಸದಾ ಮೌನದಿಂದಿದ್ದನು. ಸ್ವಪ್ರಯತ್ನವಿಶೇಷಗಳಿಂದ ಅತ್ಯವಶ್ಯವಾಗಿ ಪರಮ ಪುರುಷಾರ್ಥವನ್ನು ಸಾಧಿಸಿಯೇ ತೀರುವೆನು ಎಂಬ ಅಭಿಮಾನಶಾಲಿಯಾಗಿದ್ದನು. ಉದಾರಬುದ್ಧಿಯುಳ್ಳವನಾಗಿದ್ದನು. ಯೌವನವು ಇನ್ನೂ ಪ್ರಾಪ್ತವಾಗಿರಲಿಲ್ಲ. ಆದರೂ ಕೂಡ ಅತ್ಯುತ್ಕಟವಾದ ತಪಶ್ಚರ್ಯೆಯಲ್ಲಿ ಅಚಲನಾಗಿ ನಿರತನಾಗಿದ್ದನು.

೧೪. ಈತನು ಮೊಟ್ಟಮೊದಲಲ್ಲಿ(ಪ್ರಥಮತಃ)ಅಲ್ಪ ಪ್ರಜ್ಞಾವಂತನಾಗಿದ್ದುದರಿಂದ ವಿಚಾರಪರನಾಗಿಯೂ ಪ್ರಬುದ್ಧನಾಗಿಯೂ ಇರಲಿಲ್ಲ. ಆದಕಾರಣ ಈತನಿಗೆ ಎಲ್ಲಿಯೂ (ಯಾವುದೊಂದು ಸ್ಥಿತಿಯಲ್ಲಿಯೂ) ಮನಸ್ಸಿಗೆ ವಿಶ್ರಾಂತಿಯು ದೊರೆತಿರಲಿಲ್ಲ. ಆದರೂ ಕೂಡ ಈತನ ಮನಸ್ಸು ಆತ್ಮತತ್ತ್ವಜ್ಞಾನನಿಷ್ಠೆಗೆ ಅನುಕೂಲವಾಗಿರುವಷ್ಟುಮಟ್ಟಿಗೆ ಜನ್ಮಾಂತರೀಯವಾದ ಸುಕೃತಗಳಿಂದ ಸುಸಂಸ್ಕೃತವಾಗಿಯೂ ಪರಿಪಕ್ವವಾಗಿಯೂ ಇದ್ದಿತು.

ತತಃ ಕ್ರಮೇಣ ತಪಸಾ ಶಾಸ್ತ್ರಾರ್ಥನಿಯಮೈಃ ಕ್ರಮೈಃ |
ವಿವೇಕ ಆಜಗಾಮೈನಂ ವಸಂತರ್ತುರಿವ ಭೂತಲಂ || ೧೫ ||

ಅಥೇವಂ ಚಿಂತಯಾಮಾಸ ಸಂಸಾರಾಮಯಭೀರುಧೀಃ |
ಏಕಾಂತ ಏವ ನಿವರ್ಸಕದಾಚಿತ್ಕ್ಲಾಂತಮಾನಸಃ || ೧೬ ||

ಕಿಂ ತತ್ಪ್ರಾಪ್ಯಂ ಪ್ರಧಾನಂ ಸ್ಯಾದ್ಯದ್ವಿಶ್ರಾಂತೌ ನ ಶೋಚ್ಯತೇ |
ಯತ್ಪ್ರಾಪ್ಯ ಜನ್ಮನಾ ಭೂಯಃ ಸಂಬಂಧೋ ನೋಪಜಾಯತೇ || ೧೭ ||

---

೧೫. ಆ ಬಳಿಕ, ಕ್ರಮೇಣ ಕಾಲವು ಕಳೆಯುತ್ತಾ ಬಂದಹಾಗೆಲ್ಲ ಈತನಿಗೆ ತಪಶ್ಚರ್ಯೆಯಿಂದಲೂ ಶಾಸ್ತ್ರಾರ್ಥವಿಚಾರದಿಂದಲೂ ವಿಹಿತ ನಿಯಮಾಚರಣೆಗಳಿಂದಲೂ ವೈರಾಗ್ಯಾದಿಗಳ ಅಭ್ಯಾಸ ಪರಿಪಾಕದಿಂದಲೂ ವಿವೇಕೋದಯವಾಯಿತು. ಹೀಗೆ ವಿವೇಕೋದಯವಾದ ಕೂಡಲೆ ಈತನು ವಸಂತರ್ತುವಿನ ಆವಿರ್ಭಾವದಿಂದ ಭೂತಲವು ರಮಣೀಯವಾಗಿ ಶೋಭಿಸುವ ತೆರದಲ್ಲಿ ವಿಕಾಸ ಹೊಂದಿದನು.

೧೬. ತರುವಾಯ ಈತನು ಸಂಸಾರವೆಂಬ ರೋಗಕ್ಕೆ ಭಯಪಟ್ಟುಕೊಂಡು ಅದರಿಂದ ನರಳುವುದನ್ನು ತಪ್ಪಿಸಿಕೊಳ್ಳಬೇಕೆಂಬ ಸಂಕಲ್ಪದಿಂದ, ಏಕಾಂತದಲ್ಲಿಯೇ ವಾಸಮಾಡುತ್ತಾ ಬಂದಾನೊಂದು ಸಮಯದಲ್ಲಿ, ತನ್ನ ಪ್ರಶಾಂತವಾದ ಮನಸ್ಸಿನಿಂದಲೇ ಮುಂದೆ ಹೇಳುವ ಪ್ರಕಾರವನ್ನು ಚಿಂತಿಸತೊಡಗಿದನು.

(ಕಾಂತ ಮಾನಸಃ ಎಂಬ ಪಾಠವನ್ನು ಆದರಿಸಿ ಈ ಅರ್ಥವನ್ನು ಹೇಳಿದೆ. ಕ್ಲಾಂತಮಾನಸಃ ಎಂಬ ಪಾಠಾಂತರವನ್ನು ಇಟ್ಟುಕೊಂಡಾಗ ಬಳಲಿದ ಅಥವಾ ಬೇಸತ್ತ ಮನಸ್ಸುಳ್ಳವನಾಗಿ ಎಂದರ್ಥ ಮಾಡಬೇಕು.)

೧೭. ಅತ್ಯವಶ್ಯಪ್ರಾಪ್ಯವಾದ ಪುರುಷಾರ್ಥಗಳೊಳಗೆ ಅತ್ಯಂತ ಪ್ರಧಾನವಾದ ಮೋಕ್ಷವೆಂಬ ಪರಮ ಪುರುಷಾರ್ಥವು ಯಾವುದಾಗಿರುವದು ? ಇಂತಹ ಮೋಕ್ಷದಲ್ಲಿ ವಿಶ್ರಾಂತನಾದ ಆತ್ಮಜ್ಞಾನನಿಷ್ಠನಿಗೆ ಯಾವದೊಂದು ಶೋಕದ ಸಂಪರ್ಕವೂ ಇಲ್ಲವೆಂದೂ ಪುನಃ ಜನ್ಮವೆತ್ತುವ ಸಂಭವವೇ ಇಲ್ಲವೆಂದೂ ಶ್ರುತಿಗಳು ಘೋಷಿಸುತ್ತಿವೆಯಲ್ಲಾ ! ಅಹಹ !! ಅದೆಂತಹುದು ?

ಕದಾಹಂ ತ್ಯಕ್ತಮನನೇ ಪದೇ ಪರಮಪಾವನೇ |
ಚಿರಂ ವಿಶ್ರಾಂತಿಮೇಷ್ಯಾಮಿ ಮೇರುಶೃಂಗ ಇವಾಂಬುದಃ || ೧೮ ||

ಕದಾ ಶಮಮುಪೈಷ್ಯಂತಿ ಮಮಾಂತರ್ಭೋಗಸಂವಿದಃ |
ಆಲೋಲಕಲ್ಲೋಲರವಾ ಊರ್ಮಯೋಽಂಬುನಿಧಾವಿವ || ೧೯ ||

ಇದಂ ಕೃತ್ವೇದಮುಸ್ಯನ್ಯತ್ಕರ್ತವ್ಯಮಿತಿ ಕಲ್ಪನಾಂ |
ಕದಾಂತರ್ವಿಹಸಿಷ್ಯಾಮಿ ಪದವಿಶ್ರಾಂತಯಾ ಧಿಯಾ || ೨೦ ||

("ತರತಿ ಶೋಕಮಾತ್ಮವಿತ್" ಆತ್ಮಜ್ಞನು ಸಕಲ ಶೋಕಗಳನ್ನೂ ದಾಟು ವನು. "ನ ಸ ಪುನರಾವರ್ತತೇ" ಪುನಃ ಜ್ಞಾನಸಂಪನ್ನನು ಸಂಸಾರಕ್ಕೆ ಹಿಂದಿ ರುಗುವುದಿಲ್ಲ. "ನೈವ ಭೂಯೋಽಭಿಜಾಯತೇ" ಪುನಃ ಜನ್ಮವೆತ್ತುವದೇ ಇಲ್ಲ. ಇತ್ಯಾದಿ ಸಾವಿರಾರು ಶ್ರುತಿಗಳನ್ನು ನೆನಪಿನಲ್ಲಿಟ್ಟುಕೊಂಡು ಆಡಿರುವ ಮಾತಿದು.)

೧೮. ಮೇರುಪರ್ವತದ ಶಿಖರದ ಮೇಲೆ ಮೇಘವು ವಿಶ್ರಮಿಸಿಕೊಳ್ಳುವಂತೆ ಸರ್ವವಿಧ ಮನೋ ವ್ಯಾಪಾರಗಳಿಂದ ವಿವರ್ಜಿತವಾಗಿ ನಿಶ್ಚಿಂತವಾದ ಮತ್ತು ಅತಿ ಪವಿತ್ರವಾದ ಆ ಪರಮ ಪದದಲ್ಲಿ ನಾನು ಯಾವಾಗ ಅನವರತವೂ ವಿಶ್ರಾಂತಿ ಯನ್ನು ಪಡೆಯುತ್ತಾ ಆತ್ಮಾರಾಮನಾಗಿರುವೆನು ?

೧೯. ಅತಿ ಚಂಚಲವಾಗಿ ಮೇಲಿಂದ ಮೇಲೆ ಬೀಸುತ್ತಾ ವಿಶೇಷವಾಗಿ ಭೋರ್ಗರೆಯುವ ತರಂಗಮಾಲೆಗಳು (ಅಲೆಗಳು) ಅಡಗಿರುವಾಗ ಸಮುದ್ರವು ಸ್ವಲ್ಪಮಾತ್ರವೂ ಕ್ಷೋಭೆಯಿಲ್ಲದೆ ಪ್ರಶಾಂತವಾಗಿರುವಂತೆ ಯಾವಾಗ ನನ್ನ ಮನಸ್ಸಿನಲ್ಲಿ ಈ ಐಹಿಕಾಮುಷ್ಮಿಕ ಭೋಗಾಭಿಲಾಷೆಗಳು ಒಂದೂ ಮೂಡದೆ ಹೋಗಿ ನಾನು ಚಿರಕಾಲ ಶಾಂತಿಯನ್ನು ಪಡೆಯುವೆನು ?

೨೦. "ಇದೋ, ಈಗ ಈ ಕಾರ್ಯವನ್ನು ಮಾಡಿ ಮುಗಿಸಿದೆನು". "ಈಗ ಮತ್ತೊಂದು ಕೆಲಸವೂ ಮಾಡಿಯಾಯಿತು" "ಇನ್ನು ಮೇಲೆ ಈ ಇನ್ನೊಂದು ಕೆಲಸವನ್ನು ಮಾಡಬೇಕಾಗಿರುವದು" ಇತ್ಯಾದಿ ಪ್ರಕಾರವಾಗಿ ಮನಸ್ಸಿನಲ್ಲಿ ಉದ ಯಿಸುವ ನಾನಾ ಕಲ್ಪನೆಗಳನ್ನು ಆ ಪರಮ ಪದದಲ್ಲಿ ಸ್ಥಿರವಾಗಿ ವಿಶ್ರಾಂತವಾದ ಬುದ್ಧಿಯ ಬಲದಿಂದ ನಾನು ಯಾವಾಗ ನನ್ನ ಮನಸ್ಸಿನೊಳಗೆ ಪರಿಹಾಸ ಮಾಡುತ್ತಾ ಕೃತಕೃತ್ಯನಾದೇನು ?

ಕದಾ ವಿಕಲ್ಪಜಾಲಂ ಮೇ ನ ಲಗಿಷ್ಯತಿ ಚೇತಸಿ |
ಸ್ಥಿತಮಪ್ಯುಜ್ಝಿತಾಸಂಗಪಯಃ ಪದ್ಮದಲೇ ಯಥಾ || ೨೧ ||

ಕದಾ ಬಹುಲಕಲ್ಲೋಲಾಂ ನಾವಾ ಪರಮಯಾ ಧಿಯಾ |
ಪರಿತೀರ್ಣೋ ಭವಿಷ್ಯಾಮಿ ಮತ್ತಾಂ ತೃಷ್ಣಾತರಂಗಿಣೀಂ || ೨೨ ||

ಕದೇಮಾಂ ಜಾಗತೈರ್ಭೂತೈಃ ಕ್ರಿಯಮಾಣಾಮಸನ್ಮಯೀಂ |
ಕ್ರಿಯಾಮುಪಹಸಿಷ್ಯಾಮಿ ಬಾಲಲೀಲಾಮಿವಾಕುಲಾಂ || ೨೩ ||

ಕದಾ ವಿಕಲ್ಪಪರ್ಯಸ್ತಂ ಮನೋ ದೋಲಾವದೋಲನಾಂ |
ಶಮಮೇಷ್ಯತಿ ಮೇ ಶಾಂತವಾತೌಜಸ ಇವ ಭ್ರಮಃ || ೨೪ ||

---

೨೧. ನೀರು ತಾವರೆಯೆಲೆಗಳ ಮೇಲೆ ಇದ್ದರೂ ಕೂಡ ಅವುಗಳೊಡನೆ ಸ್ವಲ್ಪ ಮಾತ್ರವೂ ಹೇಗೆ ಅಂಟಿಕೊಳ್ಳದೆ (ಸಂಪರ್ಕವನ್ನು ಹೊಂದದೆ) ನಿರ್ಲಿಪ್ತವಾಗಿರುವದೋ ಹಾಗೆ ಈ ವಿಕಲ್ಪ ಜಾಲಗಳು ಆಭಾಸಮಾತ್ರದಿಂದ ನನ್ನ ಮನಸ್ಸಿನಲ್ಲಿರುವುವಾದರೂ ಕೂಡ ಉಪೇಕ್ಷಿಸಲ್ಪಡತಕ್ಕವುಗಳಾದ ಕಾರಣ ಆಸಕ್ತಿಯಿಲ್ಲದವುಗಳಾಗಿ ನನ್ನ ಮನಸ್ಸಿನೊಡನೆ ಅಂಟಿಕೊಳ್ಳದೆ ಅದನ್ನು ತನ್ನ ವಶಪಡಿಸಿಕೊಳ್ಳದಿರುವದು ಯಾವಾಗಲೋ ತಿಳಿಯಲಾರೆನಲ್ಲ !

೨೨. ಅನೇಕಾನೇಕ ದೊಡ್ಡ ತರಂಗ ಮಾಲೆಗಳಿಂದ ಕೂಡಿ ಅತಿ ರಭಸದಿಂದ ಘೋರವಾಗಿ ಹರಿಯುತ್ತಿರುವ ತೃಷ್ಣೆಯೆಂಬ ನದಿಯನ್ನು ವಿವೇಕ ವೈರಾಗ್ಯಗಳಿಂದ ಸುದೃಢವಾದ ಬುದ್ಧಿಯೆಂಬ ಉತ್ತಮವಾದ ನಾವೆಯಿಂದ ಯಾವಾಗ ನಾನು ದಾಟುವೆನು ?

೨೩. ಎಳೆಮಕ್ಕಳುಗಳ ಲೀಲೆಗಳನ್ನು (ಕ್ರೀಡೆ=ಆಟ) ನೋಡಿ ದೊಡ್ಡವರು ಪರಿಹಾಸದಿಂದ ನಕ್ಕು ಉಪೇಕ್ಷಿಸುವಂತೆ ಈ ಲೋಕದಲ್ಲಿ ಅವಿವೇಕಿಗಳಾದ ಸಕಲ ಪ್ರಾಣಿಗಳೂ ಅತ್ಯಾಸಕ್ತಿಯಿಂದ ನಡೆಸುತ್ತಿರುವ ಕೇವಲ ಅಸತ್ಯಪ್ರಾಯಗಳಾದ ಮತ್ತು ಚಿತ್ತವ್ಯಗ್ರತೆಗೆ ಹೇತುಗಳಾದ ಈ ಬಾಹ್ಯ ಪ್ರವೃತ್ತಿಗಳನ್ನು ನಾನು ಯಾವಾಗ ಪರಿಹಾಸ ಮಾಡುತ್ತಾ ಉಪೇಕ್ಷಿಸುವೆನು ?

೨೪. ವಿವಿಧ ವಿಕಲ್ಪಗಳಿಂದ ವಿಕ್ಷೇಪಕ್ಕೆ ಒಳಗಾಗಿ ಸ್ವಲ್ಪವೂ ವಿಶ್ರಾಂತಿಯನ್ನು ಪಡೆಯದೆ ಸದಾ ಉಯ್ಯಾಲೆಯಂತೆ ತೂಗಾಡುತ್ತಿರುವ ಈ ನನ್ನ ಮನಸ್ಸು

ಕದೋದಿತವಪುರ್ಭಾಸಾ ವಿಹರ್ಸಜಾಗತೀರ್ಗತೀಃ |
ಅಂತಃ ಸಂತೋಷಮೇಷ್ಯಾಮಿ ವಿರಾಡಾತ್ಮೇವ ಪೂರ್ಣಧೀಃ || ೨೫ ||

ಅಂತಃ ಸಮಸಮಾಕಾರಃ ಸೌಮ್ಯಃ ಸರ್ವಾರ್ಥನಿಸ್ಪೃಹಃ |
ಕದೋಪಶಮಮೇಷ್ಯಾಮಿ ಮಂಥಮುಕ್ತಾಮೃತಾಬ್ಧಿವತ್ || ೨೬ ||

ಕದೇಮಾಮಚಲಾಂ ದೃಶ್ಯಶ್ರಿಯಮಾಶಾಶತಾತ್ಮಿಕಾಂ |
ಸರ್ವಾಂ ಸುಷುಪ್ತವತ್ಪಶ್ಯನ್ಭವಿಷ್ಯಾಮ್ಯಂತರಾತತಃ || ೨೭ ||

ಉನ್ಮಾದ ವಾತರೋಗವನ್ನು ಪರಿಹರಿಸಿಕೊಂಡವನಿಗೆ ಭ್ರಮೆಯು (ವಿಕ್ಷೇಪವು) ತಪ್ಪಿಹೋಗುವಂತೆ (ಇಲ್ಲದೆ ಹೋಗುವಂತೆ) ಆಗಿ ಯಾವಾಗ ಶಾಂತವಾಗುವುದು ?

೨೫. ಆವಿರ್ಭವಿಸಿದ ಸ್ವರೂಪದ ಸ್ವಪ್ರಕಾಶಸ್ಫುರಣದಿಂದ ನಾನು ಯಾವಾಗ ಪ್ರಪಂಚದ ಸ್ಥಿತಿಗಳನ್ನೆಲ್ಲ ಪರಿಹಾಸಮಾಡುತ್ತಾ, ಬ್ರಹ್ಮಾಂಡ ಶರೀರನಾದ ವಿರಾಡಾತ್ಮನಂತೆ ಪರಿಪೂರ್ಣ ಪ್ರಜ್ಞನಾಗಿ ನನ್ನ ಹೃದಯದೊಳಗೆ ಸಂತೋಷವನ್ನು ಹೊಂದುವೆನು ?

೨೬. ವಿಷ್ಣುವಿನ ಆಕಾರಕ್ಕೆ ಸಮನಾದ ಆಕಾರವುಳ್ಳದ್ದಾಗಿಯೂ, ವಿಷ್ಣುವಿನಂತೆಯೇ ಲಕ್ಷ್ಮೀದೇವಿಯನ್ನು ಧರಿಸಿರುವುದಾಗಿಯೂ, ಪ್ರೇಕ್ಷಕರಿಗೆ ಆನಂದದಾಯಕವಾದ ನೋಟವುಳ್ಳದ್ದಾಗಿಯೂ (ಪ್ರಿಯದರ್ಶನಃ) ಅಮೃತ, ಕೌಸ್ತುಭಮುಂತಾದ ವಸ್ತುಗಳಲ್ಲಿ ನಿಸ್ಪೃಹವಾಗಿಯೂ (ಆಶೆಯಿಲ್ಲದುದಾಗಿಯೂ) ಕ್ಷೀರಸಮುದ್ರವು ತನ್ನಲ್ಲಿ ದೇವಾಸುರರು ಮಂದರ ಪರ್ವತವೆಂಬ ಕಡೆಗೋಲನ್ನು ಹಾಕಿ ಕಡೆದ ಬಳಿಕ, ಕಡೆಯುವುದು ನಿಂತ ಕೂಡಲೇ ಸ್ವಲ್ಪವೂ ಕ್ಷೋಭವಿಲ್ಲದೆ ನಿಶ್ಚಲವಾಗಿ ಪ್ರಶಾಂತವಾಗುವಂತೆ, ನಾನು ಪರಬ್ರಹ್ಮಸದೃಶವಾಗಿ ಏಕರಸವಾದ ಆಕಾರವುಳ್ಳವನಾಗಿಯೂ, ಅತ್ಯಂತ ಸೌಮ್ಯವಾಗಿಯೂ, ಧರ್ಮಾರ್ಥ ಕಾಮ ರೂಪ ಐಹಿಕಾಮುಷ್ಮಿಕ ಸಕಲಾರ್ಥಗಳಲ್ಲಿ ನಿಸ್ಪೃಹನಾಗಿಯೂ ಇದ್ದುಗೊಂಡು ನನ್ನ ಮನಸ್ಸಿನಲ್ಲಿ ಯಾವಾಗ ಉಪಶಾಂತಿಯನ್ನು ಹೊಂದುವೆನು ?

["ನಿರ್ದೋಷಂ ಹಿ ಸಮಂ ಬ್ರಹ್ಮ" ಎಂಬ ಶ್ರುತಿಯು ಸಮಂ ಎಂದರೆ ಪರಬ್ರಹ್ಮ ಎಂಬರ್ಥದಲ್ಲಿ ಪ್ರಮಾಣವು.]

೨೭. ಜಾಗ್ರದ್ದಶೆಯಲ್ಲಿ ಮಾತ್ರವೇ ಸ್ಥಿರವಾಗಿರುವಂತೆ ತೋರುವ ಬಗೆ

ಸಬಾಹ್ಯಾಭ್ಯಂತರಂ ಸರ್ವಂ ಶಾಂತಕಲ್ಪನಯಾ ಧಿಯಾ |
ಪಶ್ಯಂಶ್ಚಿನ್ಮಾತ್ರಮಖಿಲಂ ಭಾವಯಿಷ್ಯಾಮ್ಯಹಂ ಕದಾ || ೨೮ ||

ಕದೋಪಶಾಂತಚಿತ್ತಾತ್ಮಾ ಚಿತ್ತಾಮುಪಗತಃ ಪರಾಂ |
ಪರಮಾಲೋಕಮೇಷ್ಯಾಮಿ ಜಾತ್ಯಂಧವಿಗಮಾದಿವ || ೨೯ ||

ಕದಾಭ್ಯಾಸೋಪಲಭ್ಯೇನ ಚಿತ್ಪ್ರಕಾಶೇನ ಚಾರುಣಾ |
ದೂರಾದಾಲೋಕಯಿಷ್ಯಾಮಿ ತನ್ವೀಂ ಕಾಲಕಲಾಮಿಮಾಂ || ೩೦ ||

ಬಗೆಯ ಸಾವಿರಾರು ಆಶೆಗಳ ರೂಪವಾಗಿರತಕ್ಕ ಈ ಸಮಸ್ತ ದೃಶ್ಯ ಸಮುದಾಯವನ್ನು ನಾನು ಸುಷುಪ್ತ ಪುರುಷನಂತೆ, ಸನ್ಮಾತ್ರಾತ್ಮಕವಾಗಿ ಕಾಣುತ್ತಾ, ನನ್ನ ಮನಸ್ಸಿನೊಳಗೆ ಯಾವಾಗ ಮಹಾ ವೈಶಾಲ್ಯವನ್ನು ಪಡೆದವನಾಗುವೆನು ?

೨೮. ಬಾಹ್ಯ (ಹೊರಗಣ) ಆಭ್ಯಂತರ (ಒಳಗಣ)ಗಳೆಂದು ಪ್ರಸಿದ್ಧವಾದ ಸಕಲ ವಸ್ತುಗಳಿಂದ ಸಹಿತವಾದ ಈ ಜಗತ್ತನ್ನೆಲ್ಲ ಕಲ್ಪನಾಶೂನ್ಯವಾದ ವಿಮಲ ಬುದ್ಧಿಯಿಂದ ಕಾಣುತ್ತಾ ನಾನು ಎಂದಿಗೆ ಇದೆಲ್ಲವೂ ಅಖಂಡ ಚಿನ್ಮಾತ್ರವೇ ಎಂದು ಮನಸ್ಸಿನಲ್ಲಿ ಭಾವನೆಮಾಡುತ್ತಾ ಅದೇ ಭಾವನೆಯಲ್ಲಿ ಸ್ಥಿರವಾಗಿ ನಿಂತುಬಿಡುವೆನು ?

೨೯. ಒಬ್ಬ ಹುಟ್ಟು ಕುರುಡನು ತನ್ನ ಕುರುಡುತನವನ್ನು ಕಳೆದುಕೊಂಡು, ದರ್ಶನದ ಶಕ್ತಿಯನ್ನು ಪಡೆದ ತರುವಾಯ ತನ್ನೆದುರಿನಲ್ಲಿರುವ ಇತರರನ್ನು ಚೆನ್ನಾಗಿ ಕಾಣುವಂತೆ ನಾನು ಉಪಶಾಂತಚಿತ್ತನಾಗಿ, ಅನಾದ್ಯಜ್ಞಾನವನ್ನು ನೀಗಿಕೊಂಡು, ಪರಮ ಚಿದೇಕರಸರೂಪನಾಗಿ ಯಾವಾಗ ದಿವ್ಯವಾದ ಆ ಆತ್ಮಜ್ಯೋತಿಯನ್ನು ಸಾಕ್ಷಾತ್ಕರಿಸುವೆನು ?

೩೦. ನಿರಂತರವೂ ಪುನಃ ಪುನಃ ಅಭ್ಯಾಸ ವಿಶೇಷಗಳಿಂದ ಪ್ರಾಪ್ಯವಾಗುವ ಭವ್ಯವಾದ ಆತ್ಮ ಚೈತನ್ಯಪ್ರಕಾಶದಿಂದ ನನ್ನ ಆಯುಃಶೇಷವೆಂಬ ಕಾಲಕಲೆಯು (ಕಲೆ–೧|೧೬ಭಾಗ) ಅತಿ ತುಚ್ಛವಾದುದೆಂದೂ, ಸ್ವಲ್ಪವೇ ಉಳಿದಿರುವುದೆಂದೂ ನಾನು ಎಂದಿಗೆ ದೂರದಲ್ಲಿದ್ದುಕೊಂಡು ನೋಡುವೆನು ?

ಈಹಿತಾನೀಹಿತೈರ್ಮುಕ್ತೋ ಹೇಯೋಪಾದೇಯವರ್ಜಿತಃ |
ಕದಾಂತಸ್ತೋಷಮೇಷ್ಯಾಮಿ ಸ್ವಪ್ರಕಾಶಪದೇ ಸ್ಥಿತಃ || ೩೧ ||

ಕದಾಶಾಕೌಶಿಕೀಕೀರ್ಣಾ ಜಾಡ್ಯಜೀರ್ಣಹೃದಂಬುಜಾ |
ಕ್ಷಯಮೇಷ್ಯತಿ ಕೃಷ್ಣೇಯಂ ಕದಾ ಮೇ ದೋಷಯಾಮಿನೀ || ೩೨ ||

ಕದೋಪಶಾಂತಮನನೋ ಧರಣೀಧರಕಂದರೇ |
ಸಮೇಷ್ಯಾಮಿ ಶಿಲಾಸಾಮ್ಯಂ ನಿರ್ವಿಕಲ್ಪಸಮಾಧಿನಾ || ೩೩ ||

ಕದಾ ಮೇ ಮಾನಮಾತಂಗಃ ಸ್ವಾಭಿಮಾನಮಹಾಮದಃ |
ಸತ್ವಾವಬೋಧಹರಿಣಾ ಹತೋ ನಾಶಮುಪೈಷ್ಯತಿ || ೩೪ ||

---

೩೧. ಇಷ್ಟಾನಿಷ್ಟಗಳಿಂದ ವಿನಿರ್ಮುಕ್ತನಾಗಿ, ಇದು ಅತ್ಯಾಚಾರವೆಂದೂ ಇದು ಗ್ರಾಹ್ಯವೆಂದೂ ಯಾವುದರಲ್ಲಿಯೂ ರಾಗದ್ವೇಷಗಳನ್ನಿಡದೆ, ನಾನು ಸ್ವತಃ ಪ್ರಕಾಶವಾದ ಸ್ವಸ್ವರೂಪಾನುಸಂಧಾನದಲ್ಲಿದ್ದುಕೊಂಡು ಯಾವಾಗ ಅಂತರಂಗದಲ್ಲಿ ಆನಂದವನ್ನು ಅನುಭವಿಸುವೆನು ?

೩೨. ದುರಾಶೆಗಳೆಂಬ ಗೂಗೆಗಳ ಸಂಚಾರದಿಂದ ವ್ಯಾಪೃತವಾಗಿಯೂ, ಮೌಢ್ಯವೆಂಬ ಹಿಮದಿಂದ ಹೃದಯವೆಂಬ ಕಮಲವನ್ನು ಜರ್ಜರಗೊಳಿಸತಕ್ಕುದಾಗಿಯೂ, ತಮೋಗುಣವೆಂಬ ಅಂಧಕಾರದಿಂದ ಅತ್ಯಂತ ಕಪ್ಪಾಗಿಯೂ ಇರುವ ನನ್ನ ಈ ಅವಿದ್ಯಾದೋಷವೆಂಬ ರಾತ್ರಿಯು ಯಾವಾಗ ಪೂರ್ತಿಯಾಗಿ ಕ್ಷಯ ಹೊಂದಿ, ಪರಮಾರ್ಥಜ್ಞಾನವೆಂಬ ಸೂರ್ಯನ ಉದಯವಾಗುವುದು ?

೩೩. ನಾನು ಯಾವಾಗ ನಿರ್ವಿಕಲ್ಪಕಸಮಾಧಿನಿಷ್ಠನಾಗಿ, ಚಿದೇಕರಸಾತ್ಮಾನುಭವದಿಂದ ಬಾಹ್ಯವಸ್ತುಗಳಲ್ಲಿದ್ದ ಮನೋವೃತ್ತಿಗಳನ್ನೆಲ್ಲ ನೀಗಿಕೊಂಡವನಾಗಿ ಪರ್ವತದ ಗುಹೆಯೊಳಗೆ ವಾಸಮಾಡುತ್ತಾ ಅಲ್ಲಿರುವ ಕಲ್ಲುಬಂಡೆಗಳಂತೆ ನಿಶ್ಚಲತೆಯನ್ನು ಪಡೆಯುವೆನು ?

೩೪. ಸ್ವಾಭಿಮಾನವೃತ್ತಿಗಳೆಂಬ ನಿರವಧಿಕ ಮದೋದಕ ಪ್ರವಾಹಗಳನ್ನು ಸುರಿಸುತ್ತಿರುವ ನನ್ನ ಈ ದುರಹಂಕಾರವೆಂಬ ಮದಿಸಿದ ಆನೆಯು ಪರಮಾರ್ಥ ಸಚ್ಚಿದಾನಂದಾತ್ಮಜ್ಞಾನವೆಂಬ ಸಿಂಹದಿಂದ ಕೊಲ್ಲಲ್ಪಟ್ಟು ಯಾವಾಗ ನಾಶ ಹೊಂದುವುದು ?

ನಿರಂಶಧ್ಯಾನವಿಶ್ರಾಂತೇರ್ಮೂಕಸ್ಯ ಮಮ ಮೂರ್ಧನಿ ।
ಕದಾ ತಾರ್ಣಂ ಕರಿಷ್ಯಂತಿ ಕುಲಾಯಂ ವನಘೂರ್ಣಿಕಾಃ ॥ ೩೫ ॥

ಕದಾ ನಿಃಶಂಕಮುರಸಿ ಧ್ಯಾನಧೀರಧಿಯಃ ಖಗಾಃ ।
ಮಮ ವಿಶ್ರಾಂತಿಮೇಷ್ಯಂತಿ ಶೈಲಸ್ಥಾಣ್ವಚಲಸ್ಥಿತೇಃ ॥ ೩೬ ॥

ತೃಷ್ಣಾಕರಂಜಜಟಿಲಾಂ ಜನ್ಮಜರ್ಜರಗುಲ್ಮಿಕಾಂ ।
ಸಂಸಾರಾರಣ್ಯಸರಸೀಂ ತ್ಯಕ್ತ್ವಾ ಯಾಸ್ಯಾಮ್ಯಹಂ ಕದಾ ॥ ೩೭ ॥

ಇತಿ ಚಿಂತಾಪರವಶೋ ವನ ಉದ್ದಾಲಕೋ ದ್ವಿಜಃ ।
ಪುನಃ ಪುನಸ್ತೂಪವಿಶ್ಯ ಧ್ಯಾನಾಭ್ಯಾಸಂ ಚಕಾರ ಹ ॥ ೩೮ ॥

---

೩೫. ನಿರ್ವಿಕಲ್ಪ ಸಮಾಧಿಯಲ್ಲಿ ಲೀನವಾಗಿ, ಕಟ್ಟಕದಲದೆ ಮೌನದಿಂದ ಆತ್ಮಧ್ಯಾನಾರೂಢವಾಗಿರುವಾಗ ನನ್ನ ತಲೆಯಮೇಲೆ, ಈ ಆರಣ್ಯಕ ಪಕ್ಷಿಗಳು ಯಾವಾಗ ಹುಲ್ಲು ಕಡ್ಡಿಗಳಿಂದ ಗೂಡುಗಳನ್ನು ಕಟ್ಟಿಕೊಂಡು ವಾಸಮಾಡುವುವು ?

೩೬. ಧ್ಯಾನದಲ್ಲಿ ಸ್ಥಿರವಾದ ಚಿತ್ತವೃತ್ತಿಯುಳ್ಳವನಾಗಿ ಬೆಟ್ಟ ಗುಡ್ಡಗಳಂತೆಯೂ ಸ್ಥಾಣು (ಮೋಟು ಮರ) ವಿನಂತೆಯೂ, ನಿಶ್ಚಲನಾಗಿ ಕುಳಿತಿರುವ ನನ್ನ ಎದೆಯಮೇಲೆ ನೇತಾಡುತ್ತಿರುವ ಜಟೆಗಳ ತುದಿಯಲ್ಲಿ ಕಟ್ಟಿರುವ ಗೂಡುಗಳಲ್ಲಿ ಈ ಹಕ್ಕಿಗಳು ಎಂದಿಗೆ ನಿರ್ಭಯವಾಗಿ ವಿಶ್ರಮಿಸಿಕೊಳ್ಳುವವು ?

೩೭. ನಾನಾ ತೃಷ್ಣೆಗಳೆಂಬ ಮುಳ್ಳುಗಿಡಗಳು ದಡಗಳಮೇಲೆ ದಟ್ಟವಾಗಿ ಬೆಳೆದಿರುವ, ಕಾಮಕ್ರೋಧ ಲೋಭ, ಮೋಹ. ಮದ, ಮಾತ್ಸರ್ಯಗಳೆಂಬ ಕಾಡುಮೃಗಗಳ ಅನವರತ ಸಂಚಾರದಿಂದ ಜರ್ಜರವಾದ ಅನೇಕ ಜನ್ಮಗಳೆಂಬ ಪೊದೆಗಳಿಂದ ಪರಿವೃತವಾಗಿ ಭಯಂಕರವಾದ, ಈ ಸಂಸಾರವೆಂಬ ವನಸರೋವರವನ್ನು ಬಿಟ್ಟು ನಾನು ಎಂದಿಗೆ ಹೊರಗೆ ಹೋದೇನು ?

೩೮. ಇತ್ಯಾದಿ ನಾನಾ ಚಿಂತೆಗಳಲ್ಲಿ ಮಗ್ನನಾಗಿ ಪಶ್ಚಾತ್ತಾಪದಿಂದ ಮೈಮರೆತಿದ್ದ ಆ ಉದ್ದಾಲಕನೆಂಬ ಬ್ರಾಹ್ಮಣನು ಆ ಕಾಡಿನಲ್ಲಿ ಸ್ವಲ್ಪ ಹೊತ್ತು ಏಳುತ್ತಲೂ, ಸ್ವಲ್ಪ ಹೊತ್ತು ಕೂಡುತ್ತಲೂ ಹೀಗೆ ಪುನಃ ಪುನಃ ಅಭ್ಯಾಸ ಮಾಡುತ್ತಾ ಮಾಡುತ್ತಾ ಕೊನೆಗೆ ಬಹು ದೀರ್ಘಕಾಲ ಧ್ಯಾನಮಾಡುತ್ತಾ ಕೂಡುವುದನ್ನು ಕಲಿತನು.

ವಿಷಯೈರ್ನೀಯಮಾನೇ ತು ಚಿತ್ತೇ ಮರ್ಕಟಚಂಚಲೇ |
ನ ಸ ಲೇಭೇ ಸಮಾಧಾನಪ್ರತಿಷ್ಠಾಂ ಪ್ರೀತಿದಾಯಿನೀಂ ॥ ೩೯ ॥

ಕದಾಚಿದ್ಬಾಹ್ಯಸಂಸ್ಪರ್ಶಪರಿತ್ಯಾಗಾದನಂತರಂ |
ತಸ್ಯಾಗಚ್ಛಚ್ಚಿತ್ತಕಪಿಃ ಪ್ರೋದ್ವೇಗಂ ಸತ್ವಸಂಸ್ಥಿತೌ ॥ ೪೦ ॥

ಕದಾಚಿದಾಂತರಸ್ಪರ್ಶಾನ್ಪರಿತ್ಯಜ್ಯ ಮನಃಕಪಿಃ |
ಲೋಲತ್ವಾತ್ತಸ್ಯ ಸಂಯಾತೋ ವಿಷಯಂ ವಿಷದಗ್ಧವತ್ ॥ ೪೧ ॥

---

೩೯. ಸ್ವಭಾವತಃ ಮನಸ್ಸು ಕಪಿಯಂತೆ ಅತ್ಯಂತ ಚಂಚಲವಾದುದು. ವಾಯುವಿಗಿಂತಲೂ ಹೆಚ್ಚು ವೇಗವಾಗಿ ಓಡಾಡುವದು. ಅದನ್ನು ನಿಗ್ರಹಿಸುವದು ಬಲು ಕಷ್ಟವು. ಹೀಗಿರುವ ಕಾರಣ ಈ ಉದ್ದಾಲಕನ ಮನಸ್ಸು ಇನ್ನೂ ಚೆನ್ನಾಗಿ ನಿಗೃಹೀತವಾಗದೇ ಇರುವಾಗ ಪ್ರಾರಂಭದಶೆಯಲ್ಲಿ ಪೂರ್ವ ಸಂಸ್ಕಾರ ಬಲದಿಂದ ಶಬ್ದಾದಿ ವಿಷಯಗಳ ಬಲೆಗೆ ಸಿಕ್ಕಿ ಹೊರಗೆ ಆಗಾಗ್ಗೆ ಓಡಿ ಹೋಗುತ್ತ ಅವನಿಗೆ ಆತ್ಮಾನಂದದಾಯಕವಾದ ಸಮಾಧಿನಿಷ್ಠೆಯು ತಪ್ಪಿಹೋಗುತ್ತಲಿದ್ದಿತು.

(ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವತ್ ದೃಢಂ | ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ॥ ಗೀತಾ)

೪೦. ಹೀಗೆ ಬಲುದೂರ ಓಡಿಹೋಗಿದ್ದ ಚಿತ್ತವೆಂಬ ಕಪಿಯನ್ನು ಪುನಃ ಬಲಾತ್ಕಾರವಾಗಿ ಹಿಂದಿರುಗಿಸಿ, ಈ ಲೋಕದ ವಿಷಯ ಸಂಪರ್ಕಗಳನ್ನೆಲ್ಲ ಪರಿಹಾರ ಮಾಡಿದರೆ ಅದು ಸಾತ್ವಿಕವಾದ ದಿವ್ಯ ವಿಷಯಗಳಲ್ಲಿ ಮನೋರಥಗಳನ್ನು ಕಲ್ಪಿಸಿಕೊಂಡು ಬಹಳ ಚಾಪಲ್ಯವನ್ನು ಹೊಂದುತ್ತಲಿದ್ದಿತು.

(ಸತ್ವಸಂಸ್ಥಿತೌ ಪ್ರೋದ್ವೇಗಂ ಆಗಚ್ಛತ್=ಎಂಬ ವಾಕ್ಯಕ್ಕೆ ಪ್ರಧಾನವಾದ ಸಮಾಧಿಸ್ಥಿತಿಯು ಪ್ರಸಕ್ತವಾಗಲಾಗಿ ಅವನ ಚಿತ್ತವೆಂಬ ಕಪಿಯು ರಜೋಗುಣದಿಂದ ಕ್ಷೋಭೆಗೊಂಡದ್ದಾಗಿ ಭಯ, ಆಲಸ್ಯ, ಅರತಿ (ಬೇಸರ) ಮೊದಲಾದ ಉದ್ವೇಗವನ್ನು ಹೊಂದುತ್ತಲಿತ್ತು ಎಂಬ ಅರ್ಥಾಂತರವೂ ತಾತ್ಪರ್ಯ ಪ್ರಕಾಶದಲ್ಲಿ ವರ್ಣಿತವಾಗಿದೆ.)

೪೧. ವಿಷದ ವ್ಯಾಪನೆಯಿಂದ ಸತ್ತವನು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗಿ ಸೇರಿಕೊಳ್ಳುವಂತೆ ಅತ್ಯಂತ ಚಪಲ ಸ್ವಭಾವವುಳ್ಳ ಅವನ ಚಿತ್ತ

ಕದಾಚಿದುದಿತಾರ್ಕಾಭಂ ತೇಜೋ ದೃಷ್ಟ್ವಾಂತರೇ ಮನಃ |
ವಿಷಯೋನ್ಮುಖತಾ ಯಾತಂ ತಸ್ಯ ತಾಮರಸೇಕ್ಷಣ　　|| ೪೨ ||

ಆಂತರಾನ್ಧ್ಯತಮಸ್ತ್ಯಾಗಂ ಕೃತ್ವಾ ವಿಷಯಲಂಪಟಂ |
ತಸ್ಮೋಡ್ಡೀಯ ಮನೋ ಯಾತಿ ಕದಾಚಿತ್ತ್ರಸ್ತಪಕ್ಷಿವತ್　　|| ೪೩ ||

ಬಾಹ್ಯಾನಾಭ್ಯಾಂತರಾನ್ಸ್ಪರ್ಶಾಂಸ್ತ್ಯಕ್ತ್ವಾ ನಿದ್ರಾಂ ಚ ತನ್ಮನಃ |
ತಮಸ್ತೇಜೋಂತಿಕೇ ಲೇಭೇ ಕದಾಚಿಚ್ಛಾಶ್ವತೀಂ ಸ್ಥಿತಿಂ　　|| ೪೪ ||

ವೆಂಬ ಕಪಿಯು ಬೇರೊಂದು ಸಮಯದಲ್ಲಿ ಮಾನಸಿಕ ಸಮಾಧಿ ಸುಖ ಸ್ಪರ್ಶ ಗಳನ್ನೂ ಕೂಡ ಬಿಟ್ಟು ಬಾಹ್ಯ ವಿಷಯಗಳಲ್ಲಿ ಹೋಗಿ ಸೇರಿಬಿಡುವದು.

೪೨. ಅಯ್ಯಾ ಕಮಲನೇತ್ರನಾದ ರಾಮ, ಅವನ ಮನಸ್ಸು ಮತ್ತೊಂದು ಸಮಯದಲ್ಲಿ ಹೃದಯ ಮಧ್ಯವರ್ತಿ ಬ್ರಹ್ಮನ ಉದಯವಾಗುತ್ತಲಿರುವ ಸೂರ್ಯನ ಪ್ರಭೆಗೆ ಸದೃಶವಾದ, ಪರಮ ತೇಜಸ್ಸನ್ನು ನೋಡಿ, ಪುನಃ ವಿಷಯಾಭಿಮುಖವಾಗಿ ಓಡಲಾರಂಭಿಸುವದು.

೪೩. ಮತ್ತೂ ಒಂದೊಂದು ಸಲ, ಅವನ ಮನಸ್ಸು ಸ್ವಲ್ಪಕಾಲ ಬ್ರಹ್ಮಾಭಿವ್ಯಕ್ತಿಯನ್ನು ಹೊಂದಿ ಆಂತರವಾದ ಅಜ್ಞಾನಾಂಧಕಾರವನ್ನು ಸ್ವಲ್ಪ ಮಾತ್ರ ಹೋಗಲಾಡಿಸಿಕೊಂಡಿದ್ದರೂ ಪುನಃ ಹಿಂದಿನ ವಿಷಯ ವಾಸನೆಯು ಉದ್ಬುದ್ಧ ನಾದ ಕಾರಣ ವಿಷಯ ಸುಖಗಳಲ್ಲಿ ತೀವ್ರವಾದ ಆಸೆಯನ್ನು ವಹಿಸಿ ಹೆದರಿದ ಹಕ್ಕಿಯಂತೆ ಗಾಬರಿಗೊಂಡು ಅಲ್ಲಿಂದ ಬಲು ವೇಗವಾಗಿ ದೂರಕ್ಕೆ ಹಾರಿ ಹೋಗುವದು.

(ವಿವೇಕ ವೈರಾಗ್ಯಾದಿಗಳಿಂದ ಸುಸಂಸ್ಕೃನಾಗಿ ಶಮದಮಾದಿ ಸಂಪನ್ನನಾಗಿ ರುವ ಮುಮುಕ್ಷುವಿಗೆ ಶಾಸ್ತ್ರಾಚಾರ್ಯೋಪದೇಶಗಳ ಶ್ರವಣ ಮನನ ನಿದಿಧ್ಯಾಸನ ಗಳಿಂದ ಆತ್ಮೈಕತ್ವಜ್ಞಾನವು ಅತ್ಯಂತ ದೃಢವಾಗಿಯೂ ನಿಸ್ಸಂಶಯವಾಗಿಯೂ ಬೇರೂರಿ ಮನವರಿಕೆಯಾದ ಹೊರತು ಶಾಶ್ವತವಾದ ಮುಕ್ತಿಯು ಲಭಿಸುವದಿಲ್ಲ ವೆಂಬ ಸಿದ್ಧಾಂತವನ್ನು ಮರೆಯಬಾರದು.)

೪೪. ಒಂದೊಂದು ಸಲ ಆತನ ಮನಸ್ಸು ಬಾಹ್ಯಗಳೂ ಅಂತರಗಳೂ ಆದ ವಿಷಯ ಸುಖಸ್ಪರ್ಶಗಳನ್ನು ಬಿಟ್ಟು ಬಿಟ್ಟು ಅಜ್ಞಾನಕ್ಕೂ ದಿವ್ಯಾತ್ಮಜ್ಯೋತಿಗೂ

ಇತಿ ಪರ್ಯಾಕುಲಸ್ವಾಂತಃ ಸ ಖಲು ಧ್ಯಾನವೃತ್ತಿಷು |
ದರೀಷ್ವನ್ವಹಮುಗ್ರಾಸು ವಾತಭಗ್ನ ಇವ ದ್ರುಮಃ || ೪೫ ||

ಅತಿಷ್ಠದ್ಧ್ಯಾನಸಂರೂಢಮನನಃ ಸಂಕಟೇ ಯಥಾ |
ದೋಲಾಯಿತವಪುಸ್ತುಚ್ಛತೃಷ್ಣಾತೀರತರಂಗಕೈಃ || ೪೬ ||

ಅಥ ಪರ್ಯಾಕುಲಮನಾ ವಿಜಹಾರ ಮುನಿರ್ಗಿರೌ |
ಪ್ರತ್ಯಹಂ ದಿವಸಾಧೀಶೋ ಮಹಾಮೇರಾವಿವೈಕಕಃ || ೪೭ ||

ಸಮಸ್ತಭೂತದುಷ್ಪ್ರಾಪಾಮೇಕದಾ ಪ್ರಾಪ ಕಂದರಾಂ |
ಸಂಶಾಂತಸರ್ವಸಂಚಾರಾಂ ಮುನಿರ್ಮೋಕ್ಷದಶಾಮಿವ || ೪೮ ||

ಮಧ್ಯವರ್ತಿಯಾದ ಸಂಧಿಯಲ್ಲಿ ಚಿರಕಾಲದಿಂದ ಅನುವೃತ್ತವಾದ ನಿದ್ರಾಸ್ಥಿತಿಯನ್ನೇ ಹೊಂದುವದು.

೪೫–೪೬. ಹೀಗೆ ಆ ಉದ್ದಾಲಕನು ಪ್ರತಿದಿನವೂ ಧ್ಯಾನವೃತ್ತಿಗಳಲ್ಲಿ ವ್ಯಾಕುಲಗೊಂಡು ಚಂಚಲವಾದ ಮನಸ್ಸುಳ್ಳವನಾಗಿಯೂ ಮತ್ತೆ ಮತ್ತೆ ಮಹೋಗ್ರಗಳಾದ ಗುಹೆಗಳಲ್ಲಿ ನಿಶ್ಚಲನಾಗಿ ಕುಳಿತು ಧ್ಯಾನಾರೂಢವಾದ ಚಿತ್ತವೃತ್ತಿಯುಳ್ಳವನಾಗಿಯೂ ಪ್ರಬಲವಾದ ಗಾಳಿಯಿಂದ ಮುರಿದು ನೀರಿನಲ್ಲಿ ಬಿದ್ದಿರುವ ಮರವು ಅಲೆಗಳಿಂದ ಡೋಲಾಯಮಾನವಾಗಿ ಅತ್ತಲೂ ಇತ್ತಲೂ ಅಲ್ಲಾಡುತ್ತಿರುವಂತೆಯೇ ಅತಿ ತುಚ್ಛವಾದ ತೃಷ್ಣೆಗಳ ಹೊಡೆತಕ್ಕೆ ಸಿಕ್ಕಿ ಬಿದ್ದು ಉಯ್ಯಾಲೆಯಂತೆ ಬಹು ಸಂಕಟದಲ್ಲಿ ತೊಳಲುತ್ತಿದ್ದನು.

೪೭. ಬಳಿಕ ಈ ರೀತಿಯಾಗಿ ಯಾವೊಂದು ಸ್ಥಿತಿಯಲ್ಲಿಯೂ ಸ್ಥಿರವಾಗಿ ನಿಲ್ಲಲಾರದೆ ಬಹು ಸಂಕಟದಲ್ಲಿ ಬಿದ್ದು ವ್ಯಗ್ರಚಿತ್ತನಾದ ಆ ಉದ್ದಾಲಕ ಮುನಿಯು ಸೂರ್ಯನು ಮಹಾಮೇರು ಪರ್ವತದ ಮೇಲೆ ವಿಹರಿಸುವಂತೆ, ಪ್ರತಿದಿನವೂ ಏಕಾಕಿಯಾಗಿ ಆ ಗಂಧಮಾದನ ಪರ್ವತದಲ್ಲಿ ವಿನೋದಾರ್ಥವಾಗಿ ವಿಹಾರ ಮಾಡುತ್ತಿದ್ದನು.

೪೮. ಅಲ್ಲಿ ಹೀಗೆ ಸಂಚಾರ ಮಾಡುತ್ತಿರುವಾಗ ಜ್ಞಾನನಿಷ್ಠನಿಗೆ ಮೋಕ್ಷದಶೆಯು ಲಭಿಸುವಂತೆ ಆ ಉದ್ದಾಲಕ ಮುನಿಗೆ ಒಂದು ದಿವಸ ಒಂದಾನೊಂದು ಪ್ರದೇಶದಲ್ಲಿ ಒಂದು ಗುಹೆಯು ಕಂಡು ಬಂದಿತು. ಸಕಲ ಪ್ರಾಣಿಗಳಿಗೂ ಸುಲಭ

ಅಪರ್ಯಾಕುಲಿತಾಂ ವಾತೈರಪ್ರಾಪ್ತಮೃಗಪಕ್ಷಿಣೀಂ |
ಅದೃಷ್ಟಾಂ ದೇವಗಂಧರ್ವೈಃ ಪರಮಾಕಾಶಶೋಭನಾಂ ॥ ೪೯ ॥

ಪುಷ್ಪಪ್ರಕರಸಂಛನ್ನಾಂ ಮೃದುಶಾದ್ವಲಕೋಮಲಾಂ |
ಜ್ಯೋತೀರಸಾಶ್ಮಸಂಪ್ರೋತೈಃ ಕೃತಾಂ ಮರಕತೈರಿವ ॥ ೫೦ ॥

ವಾಗಿರಲಿಲ್ಲವಾಗಿ ಅದರ ಸಮೀಪದಲ್ಲಿ ಯಾವ ಪ್ರಾಣಿಯೂ ಸುಳಿಯು ತ್ತಿರಲಿಲ್ಲ.

(ಮೋಕ್ಷದಶೆಯು ಸರ್ವರಿಗೂ ಸುಲಭವಾಗಿ ಸಿಗತಕ್ಕುದಲ್ಲ; ಆದುದರಿಂದ ಸಾಮಾನ್ಯರಾದ ಪಾಮರರು ಯಾರೂ ಅದನ್ನು ಪಡೆಯುವದಕ್ಕೆ ಯತ್ನಿಸುವದಿಲ್ಲ ಎಂದೂ ಅರ್ಥವನ್ನು ವಿಶೇಷಣ ಸಾಮರ್ಥ್ಯದಿಂದ ಮಾಡಬೇಕು.)

೪೯. ಆ ಗುಹೆಯೊಳಗೆ ವಾಯುಗಳು ರಭಸವಾಗಿ ಬೀಸುತ್ತಿರಲಿಲ್ಲ. ಅದು ಆ ಪರ್ವತದಲ್ಲಿನ ಮೃಗಗಳಿಗಾಗಲೀ ಪಕ್ಷಿಗಳಿಗಾಗಲೀ ಗೋಚರವಾಗಿರಲೇ ಇಲ್ಲ. ದೇವತೆಗಳೂ ಗಂಧರ್ವರೂ ಮೊದಲಾದ ದೇವಲೋಕ ನಿವಾಸಿಗಳೂ ಕೂಡ ಅದನ್ನು ಎಂದೂ ಕಂಡಿರಲಿಲ್ಲ. ಅದು ಪರಬ್ರಹ್ಮದಂತೆ ಸರ್ವದಾ ನಿರ್ಮಲವಾಗಿ ಶೋಭಿಸುತ್ತಿದ್ದಿತು.

(ಪರಮಾಕಾಶ = ಪರಬ್ರಹ್ಮ, ಪಂಚಭೂತಗಳಲ್ಲೊಂದಾದ ಆಕಾಶವು ಕಾರ್ಯಾಕಾಶವೆಂದರ್ಥ.)

೫೦. ಹೂಗಳ ರಾಶಿಗಳಿಂದ ಮುಚ್ಚಿರುವ ಆ ಗುಹೆಯ ನೆಲವು ಕೋಮಲ ವಾಗಿ ಬೆಳೆದಿರುವ ಮೆತ್ತನೆಯ ಎಳೆ ಹುಲ್ಲುಗಳಿಂದ ಹಚ್ಚಗೆ ಶೋಭಿಸುತ್ತ ಚಂದ್ರ ಕಾಂತ ಶಿಲೆಗಳಿಂದಲೂ ಮರಕತ ಮಣಿಗಳಿಂದಲೂ ರಚಿತವಾಗಿವೆಯೋ ಎಂಬಂತೆ ಮನೋಹರವಾಗಿತ್ತು.

ಸುಸ್ನಿಗ್ಧಶೀತಲಚ್ಛಾಯಾಂ ಪ್ರಕಟಾಂ ರತ್ನದೀಪಕೈಃ |
ಸುಗುಪ್ತಾಂ ವನದೇವೀನಾಮಂತಃಪುರಕುಟೀಮಿವ ॥ ೫೧ ॥

ಕುಲಂಬನಾಪಿಮಾಲೋಕಾಂ ನಾತ್ಯುಷ್ಣಾಂ ನಾತಿಶೀತಲಾಂ |
ಶಾರದಸ್ಯೋದಿತಾರ್ಕಸ್ಯ ಹೇಮಗೌರೀಂ ಪ್ರಭಾಮಿವ ॥ ೫೨ ॥

ಬಾಲಾಲೋಕಪರಿಮ್ಲಾನಾಂ ಕೋಮಲಾಶಬ್ದಮಾರುತಾಂ |
ಮಂಜರೀಜಟಿಲೋಪೇತಾಂ ಬಾಲಾಂ ಮಾಲಾವತೀಮಿವ ॥ ೫೩ ॥

---

೫೧. ನೆರಳಿನಿಂದ ಬಹಳ ಒತ್ತಾಗಿಯೂ ತಂಪಾಗಿಯೂ ಇದ್ದ ಆ ಗುಹೆಯು ದೀಪಗಳಂತೆ ಹೊಳೆಯುತ್ತಿದ್ದ ರತ್ನಗಳ ಪ್ರಕಾಶದಿಂದ ವಿರಾಜಮಾನವಾಗಿ ವನ ದೇವತೆಗಳ ವಾಸಕ್ಕೆಂದು ನಿರ್ಮಿತವಾದ ಸುರಕ್ಷಿತವಾದ ಅಂತಃಪುರ ಪ್ರದೇಶವೋ ಎಂಬಂತೆ ಕಾಣುತ್ತಿತ್ತು.

೫೨. ಬಾಗಿಲ ಹತ್ತಿರ, ಛಳಿಯನ್ನು ನಿವಾರಣೆ ಮಾಡುವದಕ್ಕೆ ಮಾತ್ರ ಸಾಕಾದಷ್ಟು ಬಿಸಿಲು ಬೀಳುತ್ತ ಆ ಗುಹೆಯು ಶರದೃತುವಿನಲ್ಲಿ ಉದಯವಾಗು ತ್ತಿರುವ ಸೂರ್ಯನ ಹೊಂಬಣ್ಣದ ಪ್ರಕಾಶದಂತೆ ಅತ್ಯುಷ್ಣವೂ ಅತ್ಯಂತ ಶೀತಲವೂ ಆಗಿರದೆ ಸುಖಕರವಾಗಿದ್ದಿತು.

೫೩. ಪ್ರಾತಃಕಾಲದ ಸ್ವಲ್ಪ ಎಳೆಬಿಸಿಲಿನಿಂದಲೇ ಆ ಗುಹೆಯ ನೆಲವು ಒಣಗಿ ವಾಯುವು ಹೆಚ್ಚು ಶಬ್ದ ಮಾಡದೆ ಮೆಲ್ಲಗೆ ಮನೋಹರವಾಗಿ ಬೀಸುತ್ತಿರಲು, ಹೂಗಳ ಗೊಂಚಲುಗಳಿಂದ ಸದಾ ಕಣ್ಗೊಳಿಸುತ್ತಿರುವ ನಾನಾ ವೃಕ್ಷಗಳು ಹತ್ತಿರವೇ ಬೆಳೆದಿರಲು, ಆ ಗುಹೆಯು ಸ್ವಯಂವರಾರ್ಥವಾಗಿ ಪುಷ್ಪಮಾಲಿಕೆಯನ್ನು ಕೈಯಲ್ಲಿ ಹಿಡಿದಿರುವ ಒಬ್ಬ ರಾಜಪುತ್ರಿಯಂತೆ ಶೋಭಿಸುತ್ತಿದ್ದಿತು.

ಉಪಶಮಪದವೀಮಿವಾನುರೂಪಾಂ
ಕಮಲಜವಿಶ್ರಮಣಾಯ ಯೋಗ್ಯರೂಪಾಂ ।
ಕುಸುಮನಿಕರಕೋಮಲಾಭಿರಾಮಾಂ
ಸರಸಿಜಕೋಟರಕೋಮಲಾಂ ಸಮಂತಾತ್ ॥ ೫೪ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ಉಪಶಮಪ್ರಕರಣೇ "ಉದ್ದಾಲಕಮನೋರಥ ವರ್ಣನಂ" ನಾಮ
ಏಕಪಂಚಾಶಃ ಸರ್ಗಃ

---

೫೪. ಆ ಗುಹೆಯ ಸುತ್ತಲೂ ನಾನಾ ವಿಧ ಪುಷ್ಪಗಳು ರಾಶಿರಾಶಿಯಾಗಿ ಬಿದ್ದಿದ್ದುದರಿಂದ ಅದು ರಮ್ಯವಾಗಿಯೂ ಸುಂದರವಾಗಿಯೂ ಕಮಲ ಪುಷ್ಪಗಳ ಮಧ್ಯಭಾಗದಂತೆ ಕೋಮಲವಾಗಿಯೂ ಇತ್ತು. ಆ ಕಾರಣದಿಂದ, ಪದ್ಮೋದ್ಭವನಾದ ಚತುರ್ಮುಖ ಬ್ರಹ್ಮನು ವಿಶ್ರಮಿಸಿಕೊಳ್ಳಲು ಯೋಗ್ಯರೂಪವಾಗಿತ್ತು. ಮತ್ತು ಆ ಗುಹೆಯು ಶಾಂತಿಯ ಸ್ಥಿತಿಗೆ ಕರೆದೊಯ್ಯುವ ಮಾರ್ಗದಂತೆ ಸರ್ವದಾ ಆಶ್ರಯಿಸುವದಕ್ಕೆ ಅನುರೂಪವಾಗಿತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ಉಪಶಮಪ್ರಕರಣದಲ್ಲಿ "ಉದ್ದಾಲಕಮನೋರಥ ವರ್ಣನ" ಎಂಬ
ಐವತ್ತೊಂದನೆಯ ಸರ್ಗವು

ದ್ವಿಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಸ ತಾಂ ನಿವೇಶ ಧರ್ಮಾತ್ಮಾ ಗಂಧಮಾದನಕಂದರಾಂ |
ಚಿತ್ರಭ್ರಮಣಸಂಪ್ರಾಪ್ತಾಮಲಿಃ ಪದ್ಮಕುಟೀಮಿವ ॥ ೧ ॥

ಸಮಾಧಾನೋನ್ಮುಖತಯಾ ಪ್ರವಿಶನ್ಸ ವ್ಯರಾಜತ |
ಸರ್ವವ್ಯಾಪಾರವಿರತಾವಾತ್ಮಪುರ್ಯಾಮಿವಾಬ್ಜಜಃ ॥ ೨ ॥

ಐವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಎಲ್ಲೆಲ್ಲಿಯೋ ಅಲೆದಲೆದು ಹುಡುಕಿ ಕೊನೆಗೆ ಒಂದು ಭ್ರಮರವು ಮಧುರಸಪೂರ್ಣವಾದ ಕಮಲಪುಷ್ಪ ಒಂದನ್ನು ನೋಡಿದೊಡನೆಯೇ ಅತ್ಯಾನಂದದಿಂದ ಅದರ ಮಧ್ಯವನ್ನು ಪ್ರವೇಶಿಸುವಂತೆ ಧರ್ಮಾತ್ಮನಾದ ಆ ಉದ್ದಾಲಕನೂ ಕೂಡ ಮನಸ್ಸಿಗೆ ಶಾಂತಿದಾಯಕವಾದ ಸ್ಥಳವನ್ನು ಹುಡುಕಿಕೊಂಡು ನಾನಾ ಪ್ರದೇಶಗಳಲ್ಲಿ ಬಹುವಾಗಿ ಅಲೆದು ದಣಿದವನಾಗಿ ಕೊನೆಗೆ ಆ ರಮ್ಯವಾದ ಗಂಧಮಾದನ ಗುಹೆಯನ್ನು ನೋಡಿ ಕೂಡಲೆ ಪ್ರವೇಶ ಮಾಡಿದನು.

೨. ಐಹಿಕ ವ್ಯಾಪಾರಗಳು ನಿಸ್ಸಾರವೆಂದು ವಿರಕ್ತಿಯಿಂದ ತ್ಯಜಿಸಿ ಪರಮ ಪುರುಷಾರ್ಥಕ್ಕಾಗಿ ಪ್ರಥಮತಃ ಮನಸ್ಸಮಾಧಾನವನ್ನು ಪಡೆಯಬೇಕೆಂಬ ಔತ್ಸುಕ್ಯದಿಂದ ಆ ಗುಹಾ ಪ್ರವೇಶಮಾಡಿದ ಆ ಉದ್ದಾಲಕನು ಪ್ರಪಂಚದ ಸೃಷ್ಟಿಯ ಕೆಲಸವು ಮುಗಿದ ತರುವಾಯ (ಸತ್ಯಲೋಕದಲ್ಲಿ "ಅಪರಾಜಿತಾ" ಎಂಬ ಹೆಸರಿನಿಂದ ಪ್ರಖ್ಯಾತವಾದ ತನ್ನ ನಗರಿಯಲ್ಲಿ) ವಿಶ್ರಾಂತಿಸುಖವನ್ನು ಅನುಭವಿಸುತ್ತಾ ವಿರಾಜಿಸುವ ಚತುರ್ಮುಖನಂತೆ ತಾನೂ ವಿರಾಜಿಸುತ್ತಿದ್ದನು.

ಚಕಾರಾಸನಮಮ್ಲಾನೈಃ ಪತ್ರೈರಂತಸ್ಸಗುಚ್ಛಕಂ |
ಮೃದುಮೇಘವಿಧಿರ್ವೃಂದಮಂಭೋದಮಿವ ತತ್ರ ಸಃ ॥ ೩ ॥

ಸ ತತ್ರಾಸ್ತಾರಯಾಮಾಸ ಪೃಷ್ಠೇ ಚಾರುಮೃಗಾಜಿನಂ |
ನೀಲರತ್ನತಟೇ ಮೇರುಸ್ತಾರಾಸಾರಮಿವಾಂಬರಂ ॥ ೪ ॥

ಸ ತತ್ರೋಪಾವಿಶದ್ವೃತ್ತೀಶ್ಛೇತಸಸ್ತನುತಾಂ ನಯನ್ |
ಅಂತಃಶುದ್ಧವಪುಃ ಶೃಂಗೇ ವೃಷ್ಯಮೂಕ ಇವಾಂಬುದಃ ॥ ೫ ॥

---

೩. ದೇವೇಂದ್ರನು ಮಿಂಚುಗಳಿಂದ ಪ್ರಕಾಶಿಸುವ ಮೇಘವೃಂದವನ್ನು ತನ್ನ ಆಸನವನ್ನಾಗಿ ಮಾಡಿಕೊಳ್ಳುವಂತೆ ಆ ಉದ್ದಾಲಕನು ಆ ಗುಹೆಯಲ್ಲಿ ಪ್ರವೇಶ ಮಾಡಿ ಮಧ್ಯದಲ್ಲಿ ಹೂಗಳ ಗೊಂಚಲುಗಳಿಂದ ಕೂಡಿದ ಹೊಸ ಚಿಗುರೆಲೆಗಳಿಂದ ಮೃದುವಾದ ಒಂದು ಆಸನವನ್ನು ರಚಿಸಿಕೊಂಡನು.

೪. ಅನಂತರ ಮೇರುಪರ್ವತವು ಇಂದ್ರನೀಲಮಣಿಮಯವಾದ ತನ್ನ ದಡದ ಮೇಲೆ ದಿವ್ಯ ನಕ್ಷತ್ರಮಂಡಲದಿ ವ್ಯಾಪ್ತವಾದ ಅಂತರಿಕ್ಷವನ್ನು ಹರಡುವಂತೆ ಆ ಉದ್ದಾಲಕನು ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಬಿಳಿಯ ಮಚ್ಚೆಗಳಿಂದ ಕೂಡಿ ಬಹು ಸುಂದರವಾಗಿದ್ದ ಕೃಷ್ಣಾಜಿನವನ್ನು ಆ ಪಲ್ಲವಾಸನದ ಮೇಲೆ ಹಾಸಿದನು.

೫. ಮೇಘವು ಚೆನ್ನಾಗಿ ಮಳೆಗರೆದು ಅದರ ಮೂಲಕ ತನ್ನಲ್ಲಿರ ಜಲತ್ವ (ಜಡತ್ವ) ಕಳೆದುಕೊಂಡು, ಬಿಳುಪಾದ ಮೈಯುಳ್ಳದ್ದಾಗಿ, ಗರ್ಜನೆ ಮಾಡದೆ ಒಂದು ಪರ್ವತದ ಶೃಂಗಾಗ್ರದಲ್ಲಿ ಕುಳಿತುಕೊಳ್ಳುವಂತೆ ಆ ಉದ್ದಾಲಕನು ತನ್ನ ಮನೋವೃತ್ತಿಗಳನ್ನೆಲ್ಲ ಅವುಗಳ ಜಡ ವಿಷಯಗಳನ್ನು ತ್ಯಾಗಮಾಡುವುದರ ಮೂಲಕ, ಲಘುವಾಗಿ ಮಾಡಿಕೊಂಡು ಮನಸ್ಸಿನಲ್ಲಿದ್ದ ರಾಗದ್ವೇಷಾದಿ ಮಲಗಳನ್ನು ನೀಗಿ (ನಿರ್ಮಲಾಂತಃಕರಣನಾಗಿ) ಮೌನವ್ರತವನ್ನು ಅವಲಂಬಿಸಿ ಆ ಕೃಷ್ಣಾಜಿನವನ್ನು ಹಾಸಿದ ಆಸನದ ಮೇಲೆ ಕುಳಿತುಕೊಂಡನು.

ಬುದ್ಧ್ವವತ್ಸ್ವದೃಢಂ ಬದ್ಧಪದ್ಮಾಸನ ಉದಂಮುಖಃ ।
ಪಾರ್ಷ್ಣಿಭ್ಯಾಂ ವೃಷಣೌ ಧೃತ್ವಾ ಚಕಾರ ಬ್ರಾಹ್ಮಮಂಜಲಿಂ ॥ ೬ ॥

ವಾಸನಾಭ್ಯಃ ಸಮಾಹೃತ್ಯ ಮನೋಮೃಗಮುಪಪ್ಲುತಂ ।
ನಿರ್ವಿಕಲ್ಪಸಮಾಧ್ಯರ್ಥಂ ಚಕಾರೇಮಾಂ ವಿಚಾರಣಾಂ ॥ ೭ ॥

ಅಯಿ ಮೂರ್ಖಮನಃ ಕೋರ್ಥಸ್ತವ ಸಂಸಾರವೃತ್ತಿಭಿಃ ।
ಧೀಮಂತೋ ನ ನಿಷೇವಂತೇ ಪರ್ಯಂತೇ ದುಃಖದಾಂ ಕ್ರಿಯಾಂ ॥ ೮ ॥

ಅನುಧಾವತಿ ಯೋ ಭೋಗಾಂಸ್ತ್ಯಕ್ತ್ವಾ ಶಮರಸಾಯನಂ ।
ಸಂತ್ಯಜ್ಯ ಮಂದಾರವನಂ ಸ ಯಾತಿ ವಿಷಜಂಗಲಂ ॥ ೯ ॥

---

೬. ಅನಂತರ ಅವನು ಮಹಾನುಭಾವರಾದ ಕಪಿಲಾದಿ ತತ್ವಜ್ಞಾನಿಗಳಂತೆ, ಉತ್ತರ ದಿಕ್ಕಿಗೆ ಅಭಿಮುಖನಾಗಿ, ಸುದೃಢವಾಗಿ ಸ್ಥಿರವಾದ ಪದ್ಮಾಸನವನ್ನು ಹಾಕಿಕೊಂಡು, ಸಿದ್ಧಾಸನದಲ್ಲಿ ಕುಳಿತು, ಬ್ರಹ್ಮವಿದ್ಯಾ ಸಂಪ್ರದಾಯಕರ್ತೃಗಳಾದ ಪರಮ ಗುರುಗಳಾದ ಬ್ರಹ್ಮಾದಿ ಗುರು ಪರಂಪರೆಗೆ ಬದ್ಧಾಂಜಲಿಪುಟನಾಗಿ ಪ್ರಣಾಮ ಮಾಡಿದನು.

೭. ಆಮೇಲೆ, ಶಬ್ದಾದಿ ವಿಷಯಗಳನ್ನು ಹುಡುಕಿಕೊಂಡು ಅವುಗಳ ಸಮೀಪದಲ್ಲಿ ಓಡಾಡುತ್ತಲಿದ್ದ ತನ್ನ ಮನಸ್ಸೆಂಬ ಜಿಂಕೆಯನ್ನು (ಮೃಗವನ್ನು) ವಿಷಯವಾಸನೆಗಳೆಂಬ ವನಶ್ರೇಣಿಗಳ ದೆಸೆಯಿಂದ ಹಿಂದಿರುಗಿಸಿ, ನಿರ್ವಿಕಲ್ಪ ಸಮಾಧಿ ಸಿದ್ಧಿಯ ಲಾಭಕ್ಕಾಗಿ ಮುಂದೆ ಹೇಳುವ ಕ್ರಮದಲ್ಲಿ ವಿಚಾರವನ್ನು ಮಾಡತೊಡಗಿದನು.

೮. ಎಲೈ ಮೂರ್ಖ ಮನಸ್ಸೇ, ಈ ಸಾಂಸಾರಿಕ ವ್ಯವಹಾರಗಳಿಂದ ನಿನಗೆ ಯಾವ ಪ್ರಯೋಜನವು ಲಭಿಸುವುದು? ಜ್ಞಾನಿಗಳಾದವರು ಪರಿಣಾಮದಲ್ಲಿ ದುಃಖ ಬಾಹುಳ್ಯದಾಯಕವಾದ ಯಾವುದೊಂದು ಕೆಲಸವನ್ನೂ ಎಂದಿಗೂ ಮಾಡುವುದಿಲ್ಲವಷ್ಟೇ.

೯. ಯಾವನು ಶಾಂತಿಯೆಂಬ ಅಮೃತ ತುಲ್ಯವಾದ ಪರಮ ರಸಾಯನವನ್ನು ಉಪೇಕ್ಷಿಸಿ, ನೀರಸಗಳಾದ ವಿಷಯ ಭೋಗಗಳನ್ನು ಹಿಡಿದುಹೋಗುವನೋ,

ಯದಿ ಯಾಸಿ ಮಹೀರಂಧ್ರಂ ಬ್ರಹ್ಮಲೋಕಮಥಾಪಿ ವಾ ।
ತನ್ನ ನಿರ್ವಾಣಮಾಯಾಸಿ ವಿನೋಪಶಮನಾಮೃತಂ ॥ ೧೦ ॥

ಆಶಾಶತಾವಪೂರ್ಣತ್ವೇ ತ್ವಮೇವಂ ಸರ್ವದುಃಖದಂ ।
ತ್ಯಜ್ಯ ಯಾಹಿ ಪರಂ ಶ್ರೇಯಃ ಪರಮೇಕಾಂತಸುಂದರಂ ॥ ೧೧ ॥

ಇಮಾ ವಿಚಿತ್ರಾಃ ಕಲನಾ ಭಾವಾಭಾವಮಯಾತ್ಮಿಕಾಃ ।
ದುಃಖಾಯೈವ ತವೋಗ್ರಾಯ ನ ಸುಖಾಯ ಕದಾಚನ ॥ ೧೨ ॥

ಅವನು ಮಂದಾರಾದಿ ಕಲ್ಪವೃಕ್ಷಗಳಿಂದ ಸುಂದರವಾದ ನಂದನೋದ್ಯಾನವನ್ನು ಬಿಟ್ಟು, ವಿಷವೃಕ್ಷಮಯವಾದ ಘೋರಾರಣ್ಯಕ್ಕೆ ಹೋಗಲೆಳಸುವ ಅವಿವೇಕಿಯಾದ ನರಾಧಮನೆಂದೇ ತಿಳಿ.

೧೦. ಎಲೈ ಅವಿವೇಕಿ ಮನಸ್ಸೇ, ನೀನು ಭೂಮಿಯ ರಂಧ್ರವನ್ನು ಒಳ ಹೊಕ್ಕು ಪಾತಾಳಕ್ಕಾದರೂ ಹೋಗು. ಅಥವಾ ಬ್ರಹ್ಮಲೋಕಕ್ಕೆ ಬೇಕಾದರೂ ಹೋಗು. ನೀನು ಎಲ್ಲಿಗೆ ಹೋದರೂ, ಏನು ಮಾಡಿದರೂ ಕೂಡ, ಉಪಶಾಂತಿ ಯೆಂಬ ದಿವ್ಯವಾದ ಅಮೃತರಸವನ್ನು (ಸಂಪಾದಿಸಿದ ಹೊರತು) ನೀನು ಎಂದಿಗೂ ಎಲ್ಲಿಯೂ, ಹೇಗೂ ಕೂಡ, ನಿತ್ಯಾನಿರತಿಶಯ ಸುಖಪ್ರಾಪ್ತಿರೂಪ ವಿಶ್ರಾಂತಿಯನ್ನು ಪಡೆಯುವುದೇ ಇಲ್ಲ.

೧೧. ನೀನು ಎದುವರೆವಿಗೆ ಸಾವಿರಾರು ಭೋಗಾಕಾಂಕ್ಷೆಗಳಿಂದ ಪರಿಪೂರ್ಣ ನಾಗಿರುವಿಯೋ, ಅದುವರೆವಿಗೂ ನೀನು ತಪ್ಪದೆ ಸಕಲ ದುಃಖಪ್ರದನಾಗಿಯೇ ಇರುವೆ. ಆದಕಾರಣ, ಈ ಎಲ್ಲ ಭೋಗಾಭಿಲಾಷೆಗಳನ್ನು ಇನ್ನಾದರೂ ಪರಿತ್ಯಾಗ ಮಾಡಿ, ನಿರ್ದುಃಖವೂ ನಿರತಿಶಯಾನಂದ ರೂಪವೂ ಆಗಿ ಅತ್ಯಂತ ರಮಣೀಯ ವಾದ ಪರಮ ಶ್ರೇಯಸ್ಸನ್ನು ಹೊಂದು.

೧೨. ಇಷ್ಟ ಸಂಪಾದನೆ (ಭಾವ) ಮತ್ತು ಅನಿಷ್ಟ ನಿವಾರಣೆ (ಅಭಾವ) ಗಳಿಂದ ಪ್ರಚುರವಾಗಿ ಅತಿ ವಿಚಿತ್ರವಾದ ಈ ವಿಷಯ ಕಲ್ಪನೆಗಳೆಲ್ಲವೂ ಅತಿ ಘೋರ ವಾದ ದುಃಖಕ್ಕೆ ಕಾರಣವಾಗುವುವೇ ಹೊರತೂ ನಿನ್ನ ಸುಖಕ್ಕೆ ಎಂದಿಗೂ ಹೇತು ವಾಗುವುದಿಲ್ಲ.

ಶಬ್ದಾದಿಕಾಭಿರೇತಾಭಿಃ ಕಿಂ ಮೂರ್ಖ ಹತವೃತ್ತಿಭಿಃ |
ಭ್ರಮಸ್ಯವಿರತಂ ವ್ಯರ್ಥಂ ಮೇಘೇ ಮಂಡೂಕಿಕಾ ಯಥಾ || ೧೩ ||

ಮನೋಮಂಡೂಕಿಕೇ ವ್ಯರ್ಥಮಿಯಂತಂ ಕಾಲಮಂಧಯಾ |
ಭ್ರಮಂತ್ಯಾ ಭುವನಂ ಕ್ಷಿಪ್ರಂ ಕಿಂ ಸಮಾಸಾದಿತಂ ತ್ವಯಾ || ೧೪ ||

ಯಸ್ಮಾತ್ಕಿಂಚಿದವಾಪ್ನೋಷಿ ಯಸ್ಮಿನ್ನ್ವಹಸಿ ನಿರ್ವೃತಿಂ |
ತಸ್ಮಿಂಶ್ಚೇತಃಶಮೇ ಮೂರ್ಖ ನಾನುಬಧ್ನಾಸಿ ಕಿಂ ಪದಂ || ೧೫ ||

ಆಗತ್ಯ ಶ್ರೋತ್ರತಾಂ ಮೂರ್ಖ ವ್ಯರ್ಥೋತ್ಥಾನೋಪಬೃಂಹಿತಾಂ |
ಧಿಯಾ ಶಬ್ದಾನುಸಾರಿಣ್ಯಾ ಮೃಗವನ್ಮಾ ಕ್ಷಯಂ ವ್ರಜ || ೧೬ ||

---

೧೩. ಎಲೈ ಮೂರ್ಖ ಮನವೇ, ಅತ್ಯಂತ ಜುಗುಪ್ಸಿತವಾದ ಶಬ್ದಾದಿ ಈ ತುಚ್ಛ ವೃತ್ತಿಗಳಿಂದ ನೀನು ಏಕೆ ವ್ಯರ್ಥವಾಗಿ, ಮೇಘಗಳು ಉದಯಿಸಿದಾಗ ಕಪ್ಪೆಯು ಕಿರುಚುತ್ತಾ ತೊಳಲುವಂತೆ, ಅವಿಶ್ರಾಂತವಾಗಿ ತೊಳಲುತ್ತಿರುವೆ ?

೧೪. ಎಲೈ ಮನಸ್ಸೆಂಬ ಮಂಡೂಕವೇ, ನೀನು ಇಷ್ಟು ದೀರ್ಘಕಾಲ ಪರ್ಯಂತವೂ ಕಣ್ಣು ಕಾಣದ್ದಾಗಿ ವ್ಯರ್ಥವಾಗಿಯೇ ಅತಿವೇಗದಿಂದ ಭುವನವನ್ನೆಲ್ಲ (ಮನಸ್ಸಿಗೆ ಪ್ರಪಂಚ ಮತ್ತು ಕಪ್ಪೆಗೆ ಜಲ ಎಂದರ್ಥ ಮಾಡಬೇಕು.) ಅಲೆವಲೆದು ದಣಿದೆಯಲ್ಲಾ ! ಅದರಿಂದ ನಿನಗೇನು ಸಂಪಾದನೆಯಾಯಿತು ?

೧೫. ಎಲೈ ಮೂರ್ಖ ಮನಸ್ಸೇ, ನೀನು ಯಾವುದರ ದೆಸೆಯಿಂದ ಅವಾಂಗ್ಮಾನಸಗೋಚರವಾದ ಕೈವಲ್ಯವೆಂಬ ನಿರತಿಶಯಾತ್ಮಾನಂದವನ್ನು ಹೊಂದಬಹುದೋ, ಮತ್ತು ಯಾವ ಸ್ಥಿತಿಯಲ್ಲಿದ್ದುಕೊಂಡು ಜೀವನ್ಮುಕ್ತನಾಗಿ ಪರಮ ವಿಶ್ರಾಂತಿ ಸುಖವನ್ನು ಅನುಭವಿಸುವೆಯೋ ಅಂತಹ ಶಾಂತಿಯಲ್ಲಿ ನೀನೇತಕ್ಕಾಗಿ ಹೆಜ್ಜೆಯಿಡದೆ ಕಾಲಹರಣ ಮಾಡುತ್ತಾ ಇರುವೆ ?

೧೬. ಎಲೈ ಮೂರ್ಖ, ಬೇಟೆಗಾರನ ಶಬ್ದಗಳಿಗೆ ಮೋಹಪಟ್ಟು ಜಿಂಕೆಯು ನಾಶಹೊಂದುವ ತೆರದಲ್ಲಿ ನೀನು ವ್ಯರ್ಥವಾದ ಬಹಿರ್ಮುಖ ವೃತ್ತಿರೂಪವಾಗಿ ಎದ್ದೆದ್ದುಬಿಕೆಯಿಂದ ವೃದ್ಧಿಯನ್ನು ಹೊಂದಿ, ಶ್ರೋತ್ರೇಂದ್ರಿಯ ತಾದಾತ್ಮ್ಯವನ್ನು

ತ್ವಕ್ತ್ತಾಮಾಗತ್ಯ ದುಃಖಾಯ ಸ್ಪರ್ಶೋನ್ಮುಖತಯಾ ಧಿಯಾ |
ಮೂರ್ಖ ಮಾ ಬದ್ಧತಾಮೇಹಿ ಗಜೀಲುಬ್ಧಗಜೇಂದ್ರವತ್ || ೭ ||

ರಸನಾಭಾಗಮಾಗತ್ಯ ಗರ್ಧೇನಾಂಧದುರಂಧಸಾಂ |
ಮಾ ನಾಶಮೇಹ ಬಡಿಶಪಿಂಡೀಲಂಪಟಮತ್ಸ್ಯವತ್ || ೧೮ ||

ಚಾಕ್ಷುಷೀಂ ವೃತ್ತಿಮಾಶ್ರಿತ್ಯ ಪ್ರಭಾರೂಪಚಯೋನ್ಮುಖೀಂ |
ಮಾ ಗಚ್ಛ ದಗ್ಧತಾಂ ಮುಗ್ಧ ಕಾಂತಿಲುಬ್ಧಪತಂಗವತ್ || ೧೯ ||

ಪಡೆದು ಶಬ್ದಗಳನ್ನು ಅನುಸರಿಸಿಕೊಂಡು ಹೋಗುವ ವಿನಾಶಕಾರಕ ಬುದ್ಧಿಯಿಂದ ಮೋಹಿತವಾಗಿ ಕ್ಷಯವನ್ನು ಹೊಂದಬೇಡ.

("ಪ್ರಾಣನ್ನೇವ ಪ್ರಾಣೋನಾಮಭವತಿ, ವದನ್ ವಾಕ್, ಪಶ್ಯನ್ ಚಕ್ಷುಃ, ಶೃಣ್ವನ್ ಶ್ರೋತ್ರಂ" ಛಾಂದೋಗ್ಯ ಇತ್ಯಾದಿ ಶ್ರುತಿಯು ಆತ್ಮನಿಗೆ ಶ್ರವಣ, ಮನನ, ದರ್ಶನಾದಿ ಕಾಲಗಳಲ್ಲಿ ಶ್ರೋತ್ರ, ಮನಸ್, ಚಕ್ಷುಸ್ ಮುಂತಾದ ಇಂದ್ರಿಯ ಭಾವವುಂಟಾಗುವುದೆಂಬ ವಿಷಯದಲ್ಲಿ ಪ್ರಮಾಣವು.)

೧೭. ಹೆಣ್ಣಾನೆಗಳ ಶರೀರ ಸ್ಪರ್ಶದಲ್ಲಿ ಆಶೆಪಟ್ಟು ಗಂಡಾನೆಗಳು (ಸಲಗಗಳು) ಕೆಡ್ಡಾಗಳಲ್ಲಿ ಬಿದ್ದು ಬಂಧನಕ್ಕೆ ಸಿಕ್ಕಿಬೀಳುವಂತೆ ನೀನು ತ್ವಗಿಂದ್ರಿಯ ತಾದಾತ್ಮ್ಯವನ್ನು ಹೊಂದಿ, ಸ್ಪರ್ಶಾಭಿಮುಖವಾಗಿ ಹೋಗುವ ಬುದ್ಧಿಯಿಂದ ಅಪಾರ ದುಃಖಕ್ಕೆ ಹೇತುವಾದ ಬಂಧನಕ್ಕೆ ಸಿಕ್ಕಿಹಾಕಿಕೊಂಡು ನರಳದಂತೆ ಎಚ್ಚರವಾಗಿರು.

೧೮. ಬೆಸ್ತರು ಬೀಸುವ ಗಾಳದ ತುದಿಯೊಳಗೆ ಸಿಕ್ಕಿಸಿರುವ ಸಣ್ಣ ಮಾಂಸದ ಚೂರನ್ನು ಆಶಿಸಿ ವ್ಯರ್ಥವಾಗಿ ನಾಶಪಡೆಯುವ ಮತ್ಸ್ಯಗಳಂತೆ, ಎಲೈ ಕುರುಡು ಮನವೇ, ನೀನು ದುಷ್ಟವಾದ ಆಹಾರಗಳಲ್ಲಿರುವ ಅತ್ಯಾಶೆಯಿಂದ ರಸನೇಂದ್ರಿಯ ಭಾವವನ್ನು ಹೊಂದಿ ನಾಶಹೊಂದಬೇಡ.

೧೯. ಎಲೈ ಮೂಢ ಮನಸ್ಸೆ, ದೀಪಪ್ರಕಾಶವನ್ನು ಕಂಡು ಮೋಹ ಪರವಶತೆಯಿಂದ ಪತಂಗವು ದೀಪದ ಮೇಲೆ ಬಿದ್ದು ಸುಟ್ಟು ಹೋಗುವ ತೆರದಲ್ಲಿ ನೀನು ಚಕ್ಷುರಿಂದ್ರಿಯ ಭಾವವನ್ನು ಆಶ್ರಯಿಸಿಕೊಂಡು, ಕಾಂತಿಮಯವಾದ ನಾನಾ ರೂಪ ಭೇದಗಳ ದರ್ಶನಾಕಾಂಕ್ಷೆಯಿಂದ ಪ್ರೇರಿತವಾಗಿ ದಗ್ಧನಾಗಬೇಡ.

ಘ್ರಾಣಮಾರ್ಗಮುಪಾಶ್ರಿತ್ಯ ಶರೀರಾಂಭೋಜಕೋಟರೇ ।
ಗಂಧೋನ್ಮುಖತಯಾ ಬಂಧಂ ಮಾ ತ್ವಂ ಸಾಶ್ರಯ ಭೃಂಗವತ್ ॥ ೨೦ ॥

ಕುರಂಗಾಲಿಪತಂಗೇಭಮೀನಾಸ್ತ್ವೇಕೈಕಶೋ ಹತಾಃ ।
ಸರ್ವೈರ್ಯುಕ್ತೈರನರ್ಥೈಸ್ತು ವ್ಯಾಪ್ತಸ್ಯಾಜ್ಞ ಕುತಃ ಸುಖಂ ॥ ೨೧ ॥

ಹೇ ಚಿತ್ತ ವಾಸನಾಜಾಲಂ ಬಂಧಾಯ ಭವತೋಹಿತಂ ।
ಸ್ವಾತ್ಮನಃ ಸಹಜಃ ಫೇನಸ್ತತಃ ಕುಕೃಮಿಣಾ ಯಥಾ ॥ ೨೨ ॥

---

೨೦. ಭ್ರಮರಗಳು ಗಂಧಲೋಭದಿಂದ ಉನ್ಮತ್ತಗಳಾಗಿ ಕಮಲ ಪುಷ್ಪಗಳ ಒಳಹೊಕ್ಕು ಕೊನೆಗೆ ಆ ಪುಷ್ಪಗಳು ಮುಚ್ಚಿಕೊಂಡಾಗ ಹೊರಕ್ಕೆ ಹೊರಡಲಾರವೆ ಅವುಗಳ ಮಧ್ಯದಲ್ಲಿಯೇ ಸಿಕ್ಕಿಕೊಂಡು ರಾತ್ರಿಯೆಲ್ಲಾ ಕೊರಗುತ್ತಾ ಬಿದ್ದಿರುವುವು. ಎಲೈ ಮನವೇ, ನೀನು ಅಂತಹ ಭೃಂಗಗಳಂತೆ, ಘ್ರಾಣೇಂದ್ರಿಯ ಭಾವವನ್ನಾಶ್ರಯಿಸಿ ಪರಿಮಳವನ್ನು ಹುಡುಕಿಕೊಂಡು ಹೋಗುತ್ತಾ ಈ ಶರೀರ ಮಧ್ಯದಲ್ಲಿ ಸೆರೆಯಾಳಾಗಿ ಸಿಕ್ಕಿ ಬಂಧನವನ್ನು ಅನುಭವಿಸದೆ ಇರುವಂತೆ ಜಾಗರೂಕನಾಗಿರು.

೨೧. ಎಲೈ ಅಜ್ಞ ಚಿತ್ತವೇ, ಈಗ ನಾನು ಮೇಲೆ ಉದಹರಿಸಿದ ಜಿಂಕೆ, ಭ್ರಮರ, ಪತಂಗ, ಆನೆ, ಮೀನುಗಳು ಒಂದೊಂದೂ ಕ್ರಮವಾಗಿ ಶಬ್ದ, ಗಂಧ, ರೂಪ, ಸ್ಪರ್ಶ, ರಸಗಳೊಳಗೆ ಒಂದೊಂದು ವಿಷಯದಲ್ಲಿ ಮಾತ್ರವೇ ವಿಶೇಷವಾಗಿ ಆಸಕ್ತಿಯನ್ನು ವಹಿಸಿದುದರ ಪರಿಣಾಮವಾಗಿ ಸಂಪೂರ್ಣ ನಾಶವನ್ನು ಹೊಂದಿದಾಳಾಗಿ ಹೋಗಿರುವುವು. ಹೀಗೆ ಒಂದೊಂದು ವಿಷಯಾಭಿನಿವೇಶವೇ ಸರ್ವಾನರ್ಥ ಮೂಲವಾಗಿ ವಿನಾಶಕಾರಿಯಾಹುದೆಂದು ಸ್ಥಿರಪಟ್ಟಿರುವಲ್ಲಿ ಸರ್ವಾನರ್ಥ ಸಾಧನಗಳಾದ ಶಬ್ದಾದಿ ಪಂಚವಿಧ ವಿಷಯಗಳೂ ಒಟ್ಟುಗೂಡಿ ಗುಂಪಾಗಿ ನಿನ್ನನ್ನು ವ್ಯಾಪಿಸಿಕೊಂಡು ಮುತ್ತಿಗೆ ಹಾಕಿರುವಾಗ, ನಿನಗೆ ಸುಖವೆಲ್ಲಿಯದು ?

೨೨. ಎಲೈ ಚಿತ್ತವೇ, ಅತಿ ಕುತ್ಸಿತವಾದ ಕೋಶಕಾರ ಕೃಮಿಯು ತನ್ನ ಲಾಲಾಜಲದಿಂದಲೇ ತನ್ನ ಸುತ್ತಲೂ ವಿಸ್ತಾರವಾಗಿ ಗೂಡು ಕಟ್ಟಿಕೊಂಡು ತನ್ನ ಬಂಧನವನ್ನು ತಾನೇ ಕಲ್ಪಿಸಿಕೊಳ್ಳುವಂತೆ ನೀನೂ ನಿನ್ನ ಬಂಧನಾರ್ಥವಾಗಿಯೇ ಕುವಿತರ್ಕಗಳಿಂದ ವಿಷಯ ವಾಸನೆಗಳೆಂಬ ಜಾಲವನ್ನು ಕಲ್ಪಿಸಿಕೊಂಡು ನೀನಾಗಿಯೇ ಅದರೊಳಗೆ ಸಿಕ್ಕಿ ಬೀಳುವೆ. ಇದೇನು ನಿನ್ನ ಮೂಢತನ ? ಅಹಹ !!!

ಶರದಭ್ರವದಾಗತ್ಯ ಶುದ್ಧಿಂ ತ್ಯಕ್ತಭವಾಮಯಾಂ ।
ಯದಿ ಶಾಮ್ಯಸಿ ನಿರ್ಮಲಂ ತದನಂತೋ ಜಯಸ್ತವ ॥ ೫೩ ॥

ಕ್ಷಯೋದಯದಶಾಧಾತ್ರೀಂ ಪರ್ಯಂತಪರಿತಾಪಿನೀಂ ।
ಜಾನನ್ನಪಿ ಜಗತ್ಸೃಷ್ಟಿಂ ನ ತ್ಯಕ್ಷ್ಯಸಿ ವಿನಂಕ್ಷ್ಯಸಿ ॥ ೫೪ ॥

---

೫೩. ಎಲೈ ಮನವೇ, ನೀನು ಪ್ರಥಮತಃ ನಿಷ್ಕಾಮಕರ್ಮೋಪಾಸನಾದಿ ಸಾಧನಗಳಿಂದ ನಿನ್ನೊಳಗೆ ಬಲವಾಗಿ ಅಂಟಿಕೊಂಡಿರುವ ರಾಗದ್ವೇಷಾದಿ ಮಲರಾಶಿಯನ್ನು ಚೆನ್ನಾಗಿ ತೊಳೆದು ಹಾಕಿ ಶರದೃತುವಿನ ಮೇಘದಂತೆ ನೈರ್ಮಲ್ಯವನ್ನು (ಧಾವಳ್ಯವನ್ನು) ಹೊಂದು. ಆಮೇಲೆ ಸಂಸಾರವೆಂಬ ರೋಗವನ್ನು ಪರಿಹರಿಸಿಕೊಂಡ ಬಳಿಕ ಗುರೂಪದಿಷ್ಟ ಕ್ರಮದಿಂದ ಶ್ರವಣ ಮನನ ನಿದಿಧ್ಯಾಸನಗಳಲ್ಲಿ ನಿರತವಾಗು. ಅವುಗಳ ಸಂಸ್ಕಾರ ಪರಿಪಾಕ ವಶದಿಂದ ಕಾಲಕ್ರಮದಲ್ಲಿ ತತ್ತ್ವಜ್ಞಾನೋದಯವಾಗುವುದು. ಅದರಿಂದ ನಿನ್ನ ಬೆನ್ನು ಹತ್ತಿರುವ ಅಜ್ಞಾನವು ನಿಃಶೇಷವಾಗಿ ಪರಿಹಾರವಾಗುವುದು. ಆಗಲೇ ನೀನು ಪ್ರಶಾಂತವಾಗಿ ಕೃತಕೃತ್ಯತೆಯಿಂದ ನಿಶ್ಚಲವಾಗಿ ಶಾಂತಿಯನ್ನು ಪಡೆಯುವೆಯಾದರೆ, ನಿನಗೆ ಅನಂತವೂ ಶಾಶ್ವತವೂ ಆದ ಜಯವು ಲಭಿಸುವುದು.

(ಮೇಘದಲ್ಲಿ ನೀರು ತುಂಬಿಕೊಂಡಿರುವಾಗ, ಅದು ನೀಲವರ್ಣವಾಗಿ ಕಾಣುವದು. ಆ ನೀಲವರ್ಣವೇ ಇಲ್ಲಿ ಮಾಲಿನ್ಯವೆಂದು ಭಾವಿಸಲಾಗಿದೆ. ವರ್ಷರ್ತುವಿನಲ್ಲಿ ಮೇಘದಲ್ಲಿರುವ ನೀರು (ಜಲಾಂಶವು) ಮಳೆಯ ರೂಪದಲ್ಲಿ ಸುರಿದು ಹೋಗಿ ಬಿಡಲು ಅದರ ಮುಂದಿನ ಋತು (ಶರದೃತು) ವಿನಲ್ಲಿ ಮೇಘವು ಬೆಳ್ಳಗೆ ಪ್ರಕಾಶಿಸುವದು. ಹಗುರವಾಗುವದು. (ಅದರ ಜಲತ್ವ ಜಡತ್ವವು ನೀಗುವದು ಎಂದು ಭಾವ.)

೫೪. ಪ್ರಾಪಂಚಿಕ ಪ್ರವೃತ್ತಿಯು ಜನನ ಮರಣಗಳಿಗೂ, ಬಾಲ್ಯ ಯೌವನಾದಿ ಅವಸ್ಥಾ ವಿಶೇಷಗಳಿಗೂ ಮತ್ತು ದಾರಿದ್ರ್ಯ ಪ್ರಭುತ್ವ ಮುಂತಾದ ಸ್ಥಿತಿಗಳಿಗೂ ಹೀಗೆ ಈರ್ಷ್ಯಾಸೂಯಾಹೇತುಗಳಾಗಿ ತರತಮ ಭಾವದಿಂದ ಕೂಡಿ ದುಃಖಮಯವಾದ ಸರ್ವಾನರ್ಥಗಳಿಗೆ ಪೋಷಣೆಯನ್ನು ನೀಡುವ ಉಪಮಾತೆಯಾಗಿರುವದು. ಪರಿಣಾಮದಲ್ಲಿ ಮರಣಾನಂತರವೂ ನರಕಾದಿ ಲೋಕಾಂತರಗಳಲ್ಲಿ ಸ್ಥಾವರ ತಿರ್ಯಗಾದಿ ನೀಚಯೋನಿಗಳಲ್ಲಿ ಬಿಸುಟು ಪರಿತಾಪವನ್ನುಂಟುಮಾಡು

ಕರೋಮ್ಯಥ ಕಿಮರ್ಥಂ ವಾ ತವೈತದನುಶಾಸನಮ್ |
ವಿಚಾರಣವತಃ ಪುಂಸಶ್ಚಿತ್ತಮಸ್ತಿ ಹಿ ನಾನಘ || ೨೫ ||

ಯಾವದಜ್ಞಾನಘನತಾ ತಾವತ್ಪ್ರಘನಚಿತ್ತತಾ |
ಯಾವತ್ಪ್ರಾವೃಂಜಲದತಾ ತಾವನ್ನೀಹಾರಭೂರಿತಾ || ೨೬ ||

ಪಮ. ಈ ವಿಚಾರವನ್ನು ನೀನು ಚೆನ್ನಾಗಿ ತಿಳಿದುಕೊಂಡಿದ್ದರೂ ಕೂಡ ನೀನು ಅದೇಕೆ ಇದನ್ನು ಬಿಡದೆ ಇರುವೆ? ಜೋಕೆ. ಹೀಗೆಯೇ ಕೆಲವು ಕಾಲ ಈ ಜಗತ್ಪ್ರವೃತ್ತಿಯಲ್ಲಿಯೇ ನಿರತನಾಗಿದ್ದು ಬಿಟ್ಟರೆ ನೀನು ನಿಶ್ಚಯವಾಗಿಯೂ ವಿನಾಶವನ್ನು ಹೊಂದುವೆ. ಸಂಶಯವಿಲ್ಲ.

೨೫. ಅಥವಾ ನಾನು ನಿನಗೆ ಏತಕ್ಕಾಗಿ ಇಷ್ಟೊಂದು ಶ್ರಮಪಟ್ಟುಕೊಂಡು ಹೀಗೆ ಉಪದೇಶಮಾಡಬೇಕು? ವಿಚಾರಪರನಾದ ಜ್ಞಾನಿಯ ದೃಷ್ಟಿಯಲ್ಲಿ ವಸ್ತುತಃ ಚಿತ್ತವೆಂಬ ವಸ್ತುವೇ ಇಲ್ಲವಲ್ಲ. ಹೀಗಿರುವಾಗ ಶಶವಿಷಾಣ ಮುಂತಾದವುಗಳಂತೆ ಅಸದ್ವಸ್ತುವಿಗೆ ಉಪದೇಶಮಾಡುವದೆಂದರೇನು?

(ಮನಸ್ಸೆಂಬುದು ರಾಜಸ ಪ್ರಕೃತಿಯುಳ್ಳ ಪರಮ ದುಷ್ಟ ಶತ್ರು. ಸಾತ್ವಿಕ ಪ್ರಕೃತಿಗಳಲ್ಲಿ ಮಾತ್ರವೇ ಸಾಮ ದಾನ ಭೇದೋಪಾಯಗಳು ಸಫಲವಾಗುವವು. ರಾಕ್ಷಸಪ್ರಕೃತಿಯುಳ್ಳ ಬಲದರ್ಪಿತನಾದ ಕಡುಮೂರ್ಖನಾದ ದುಷ್ಟಶತ್ರುವನ್ನು ಎದುರಿಸಿ ಪರಾಕ್ರಮದಿಂದ ಶಿಕ್ಷಿಸಿ ದಂಡೋಪಾಯದಿಂದ ನಿಗ್ರಹಿಸಲಾಗುವದೇ ಹೊರತು ಅನ್ಯಥಾ ಸಾಧ್ಯವಿಲ್ಲ. ಆದಕಾರಣ, ನಾನು ಈಗ ವಿಚಾರವೆಂಬ ಖಡ್ಗದಿಂದ ದುಷ್ಟ ಶತ್ರುವಾದ ನನ್ನ ಮನಸ್ಸನ್ನು ದಂಡಿಸಿ ನಿಗ್ರಹ ಮಾಡಬೇಕೇ ಹೊರತು ಹಿತೋಪದೇಶವು ಫಲಕಾರಿಯಲ್ಲ ಎಂದು ಭಾವಾರ್ಥ.)

೨೬. ಎಲ್ಲಿಯವರೆವಿಗೆ ವರ್ಷಾಕಾಲದ ಮೇಘವು ವರ್ಷೋನ್ಮುಖವಾಗಿ ಸಂಚಲಿಸುತ್ತಿರುವದೋ ಅಲ್ಲಿಯವರೆಗೆ ಮಾತ್ರವೇ ಜಲಕಣಗಳು ಸಮೃದ್ಧಿಯಾಗಿ ಎಲ್ಲೆಲ್ಲೂ ಕಾಣುವವು. ಅಂತೆಯೇ ಎಲ್ಲಿಯವರೆಗೆ ಅಜ್ಞಾನವು ಸಾಂದ್ರವಾಗಿದ್ದುಕೊಂಡು ದುರ್ಭೇದ್ಯವಾಗಿ ವಿಲಾಸಗೊಳ್ಳುವದೋ ಅಲ್ಲಿಯವರೆಗೆ ಮಾತ್ರವೇ ಚಿತ್ತವೂ ಅತ್ಯಂತ ಘನವಾಗಿರುವದು.

ಯಾವದಜ್ಞಾನತನುತಾ ತಾವಚ್ಚಿತ್ತಸ್ಯ ತಾನವಂ |
ಪ್ರಾವೃಟ್ಪರಿಕ್ಷಯೋ ಯಾವತಾವನ್ನೀಹಾರಸಂಕ್ಷಯಃ || ೨೭ ||

ಯಾವತ್ತಾನವಮಾಯಾತಂ ಶುದ್ಧಂ ಚಿತ್ತಂ ವಿಚಾರತಃ |
ತಾವತ್ತ್ಕ್ಷೀಣಮೇವಾಹಂ ಮನ್ಯೇ ಶಾರದಮೇಘವತ್ || ೨೮ ||

ಅನುಶಾಸನಮೇತದ್ಯದಸತೋ ನಶ್ಯತೋಽಥ ವಾ |
ಕ್ರಿಯತೇ ತನ್ನಭೋವಾರಿಪವನಾಹನನೈಃ ಸಮಂ || ೨೯ ||

---

೨೭. ಯಾವಾಗ ವರ್ಷಾಕಾಲವು ಕ್ಷೀಣವಾಗುತ್ತಾ ಬರುವುದೋ ಆಗಲೇ ಜಲಕಣಸಮೃದ್ಧಿಯೂ ಕೂಡ ಕ್ಷಯಹೊಂದುತ್ತಾ ಬರುವದು. ಹಾಗೆಯೇ ಅಜ್ಞಾನವು ಕ್ರಮೇಣ ಕೃಶವಾಗುತ್ತಾ ಬಂದಹಾಗೆಲ್ಲ ಅದರೊಂದಿಗೆ ಚಿತ್ತವೂ ಕೂಡ ಕೃಶವಾಗಿಬಿಡುವದು.

೨೮. ಯಾವಾಗ ಚಿತ್ತವು ತತ್ತ್ವಮಸ್ಯಾದಿ ಶಾಸ್ತ್ರಾರ್ಥ ವಿಚಾರಜನ್ಯವಾದ ವಿವೇಕಜ್ಞಾನದಿಂದ ಶುದ್ಧವಾಗಿ ವಾಸನಾಕ್ಷಯವನ್ನು ಹೊಂದಿ, ಎಷ್ಟುಮಟ್ಟಿಗೆ ಸೂಕ್ಷ್ಮವಾಗುವದೋ ಆಗ ಅಜ್ಞಾನವೂ ಕೂಡ, ಶರತ್ಕಾಲದ ಮೇಘದಂತೆ ಅಷ್ಟು ಮಟ್ಟಿಗೆ ಕ್ಷೀಣತೆಯನ್ನು ಪಡೆದು ಸೂಕ್ಷ್ಮವಾಗಿಬಿಟ್ಟಿರುವುದೆಂದು ನಾನು ತಿಳಿದಿರುವೆನು.

೨೯. ಹೀಗೆ ಅತ್ಯಂತಾಸತ್ ಆಗಿರುವ (ಶಶವಿಷಾಣ=ಮೊಲದ ಕೊಂಬು, ಗಗನಕುಸುಮ=ಆಕಾಶದ ಹೂ ಇತ್ಯಾದಿಗಳಿಗೆ ಸದೃಶವಾದ) ಅಥವಾ ಕ್ಷಣಭಂಗುರವಾಗಿ ನಶ್ವರವಾದ ಈ ಚಿತ್ತಕ್ಕೆ ಹಿತೋಪದೇಶ ಮಾಡುವಿಕೆಯೆಂಬುದಾವುದುಂಟೋ ಅದು ಆಕಾಶ, ನೀರು, ವಾಯುಗಳನ್ನು ಕೈಯಿಂದ ಗುದ್ದುವ ಕೆಲಸಕ್ಕೆ ಸದೃಶವಾಗಿ ಅಷ್ಟೇ ವ್ಯರ್ಥವಾದುದು.

ತಸ್ಮಾತ್ತ್ವಂ ಕ್ಷೀಯಮಾಣತ್ವಾತ್ತ್ಯಜಾಮಿ ತ್ವಾಮಸನ್ಮಯಂ |
ಮೌರ್ಖ್ಯಂ ಪರಮಮೇವಾಹುಃ ಪರಿತ್ಯಾಜ್ಯಾನುಶಾಸನಂ ॥ ೩೦ ॥

ನಿರ್ವಿಕಲ್ಪೋಽಸ್ಮಿ ಚಿದ್ದೀಪ್ತೋ ನಿರಹಂಕಾರವಾಸನಃ |
ತ್ವಯಾಹಂಕಾರಬೀಜೇನ ನ ಸಂಬದ್ಧೋಽಸ್ಮ್ಯಸನ್ಮಯ ॥ ೩೧ ॥

ಅಯಂ ಸೋಽಹಮಿತಿ ವ್ಯರ್ಥಂ ದುರ್ದೃಷ್ಟಿರವಲಂಬಿತಾ |
ತ್ವಯಾ ಮೂಢ ವಿನಾಶಾಯ ಶಂಕಾವಿಷವಿಷೂಚಿಕಾ ॥ ೩೨ ॥

---

೩೦. ಆದುದರಿಂದ, ಎಲೆ ಮನವೇ, ಹೀಗೆ ನೀನು ಸ್ವಭಾವತಃ ಕ್ಷೀಣತೆಯನ್ನು ಹೊಂದಿ ಕೊನೆಗೆ ನಾಶಹೊಂದುವೆಯಾದ ಕಾರಣ, ಅಸದ್ರೂಪವಾದ ನಿನ್ನಿಂದ ನನಗೆ ಯಾವ ಲಾಭವಾಗಬಹುದು? ಇದೋ, ನಿನ್ನನ್ನು ನಾನು ಪರಿತ್ಯಾಗ ಮಾಡುವೆನು. ಇಂತು ಪರಿತ್ಯಾಗಾರ್ಹ (ಪರಿತ್ಯಾಜ್ಯ) ವಾದ ಅಸದ್ವಸ್ತುವಿಗೆ ಉಪದೇಶ ಮಾಡಲೆಳಸುವದು ನಿಜವಾಗಿಯೂ ಮಹಾಮೂರ್ಖತನವೇ ಸರಿ ಎಂದು ಪ್ರಾಜ್ಞರು ಭಾವಿಸಿರುವರು.

೩೧. ಎಲೈ ಅಸನ್ಮಯವಾದ ಚಿತ್ತವೇ, ಅಹಂಕಾರಕ್ಕೆ ಬೀಜಸ್ಥಾನೀಯವಾಗಿ ಪ್ರಧಾನ ಕಾರಣವಾಗಿರುವ ನಿನ್ನೊಡನೆ ನನಗೆ ಬಹು ಹಿಂದಿನ ಕಾಲದಿಂದಲೂ, ಅನುವರ್ತಿಸಿಕೊಂಡಿದ್ದ ಎಲ್ಲ ಸಂಬಂಧಗಳನ್ನೂ ಈಗ ನಾನು ಪರಿಹರಿಸಿಕೊಂಡು ಸರ್ವಥಾ ಸಂಬಂಧರಹಿತನಾಗಿರುವೆನು. ಹೀಗಿರುವ ಕಾರಣ, ಈಗ ನಾನು ನಿರ್ವಿಕಲ್ಪನಾಗಿರುವೆನು. ಸ್ವಯಂಚಿದ್ರೂಪನಾಗಿ ಸರ್ವಪ್ರಕಾಶಕನಾಗಿರುವೆನು. ಅಹಂಕಾರವಾಸನೆಯನ್ನೂ ಸಂಪೂರ್ಣವಾಗಿ ತೊರೆದು, ನಿರ್ಲಿಪ್ತನಾಗಿಯೂ ಇರುವೆನು.

೩೨. ಎಲೆ ಮೂಢ ಚಿತ್ತವೇ, ನೀನು ನಿರರ್ಥಕವಾಗಿಯೇ "ಇವನು, ಅವನು, ನಾನು" ಇತ್ಯಾದಿ ನಾನಾ ಪ್ರಕಾರಗಳಾದ ದುಷ್ಟ ಭೇದ ಜ್ಞಾನಗಳನ್ನು ಕಲ್ಪಿಸಿಕೊಂಡು ಅವುಗಳ ಅವಲಂಬನದಿಂದ ಹೀಗೆ ಲೋಕದಲ್ಲಿ ವ್ಯವಹರಿಸುತ್ತಿರುವೆ. ದೇಹಾದಿಗಳಲ್ಲಿ "ಅಹಂ" (ನಾನು) ಎಂಬ ಅಧ್ಯಾಸರೂಪವಾದ ಈ ಭೇದಜ್ಞಾನವೇ

ಅನಂತಸ್ಯಾತ್ಮತತ್ವಸ್ಯ ಸತ್ತೇತಿ ಮನಸಿ ಸ್ಥಿತಃ |
ನ ಸಂಭವತಿ ಬಿಲ್ವಾಂತರ್ವಾರಣಾದಂತಿನೋರ್ಯಥಾ || ೩೩ ||

ಮಹಾಶ್ವಭ್ರೀವ ಗಂಭೀರಾ ದುಃಖದಾ ವಾಸನಾಶ್ರಿತಾ |
ತ್ವಯ್ಯೈಷಾ ಬತ ಚಿತ್ತೇತಿ ನೈನಾಮನುಸರಾಮ್ಯಹಂ || ೩೪ ||

ನಾನಾ ಶಂಕೆಗಳೆಂಬ ವಿಷಗಳಿಂದ ಪ್ರಯುಕ್ತವಾದ ವಿಷೂಚಿಕೆ (ಸೂಜಿ) ಯಂತೆ ಮಿಥ್ಯಾಹೇತುವಾಗಿದ್ದರೂ ಕೂಡ ವಿಮೂಢನಾದ ವಿನಾಶಕ್ಕೇ ಸಾಧನವಾಗಿ ರುವುದು.

೩೩. ಒಂದು ಬಿಲ್ವ ಫಲದ ಒಳಗಡೆ ಮತ್ತಗಜ ದಂಪತಿಗಳ ಇರುವಿಕೆಯು (ಸ್ಥಿತಿಯು) ಹೇಗೆ ಅಸಂಭವವೋ ಹಾಗೆ ಅನಂತವೂ ಅಪಾರವೂ ಆದ ಆತ್ಮ ತತ್ತ್ವವು ಇಂತಹ ಪರಿಚ್ಛಿನ್ನವಾದ ಸಣ್ಣ ಮನಸ್ಸಿನೊಳಗೆ ದೇಹಾದ್ಯಹಂಭಾವ ದಿಂದ ಪರಿಚ್ಛಿನ್ನವಾಗಿ ಸಂಕುಚಿತ ರೂಪವಾಗಿರುವುದೆಂದು ಹೇಳುವಿಕೆಯೇ ಸುತರಾಂ ಅನುಪಪನ್ನವೂ ಅಸಂಭವವೂ ಆಗಿದೆ.

[ಇದೇ ಕಾರಣದಿಂದ ದೇಹಾದಿಗಳಲ್ಲಿ ಆತ್ಮಬುದ್ಧಿಯು ಮಿಥ್ಯಾರೂಪವೆಂದು ಹೇಳಿರುವುದು.]

೩೪. ಎಲೈ ಚಿತ್ತವೇ, ಹಾಳುಭಾವಿಯಂತೆ ಅದರ ತಳವೇ ಕಣ್ಣಿಗೆ ಕಾಣಿಸ ದಿರುವಷ್ಟುಮಟ್ಟಿಗೆ ಬಹಳ ಆಳವಾಗಿಯೂ, ಕಾಮಕ್ರೋಧ ಲೋಭಾದಿಗಳೆಂಬ ಸರ್ಪ, ವೃಶ್ಚಿಕ ಪಿಶಾಚ ಮೊದಲಾದ ದುಷ್ಟ ಜಂತುಗಳಿಗೆ ನಿವಾಸಸ್ಥಾನ ವಾಗಿರುವ ಕಾರಣ ಬಹುವಿಧ ದುಃಖದಾಯಕವಾಗಿಯೂ ಇರುವ ಈ ದುಷ್ಟ ವಿಷಯ ವಾಸನೆಯನ್ನೇ ನೀನು ನಿನ್ನ ವಾಸಗೃಹವನ್ನಾಗಿ ಮಾಡಿಕೊಂಡಿರುವೆ. ಅಯ್ಯೋ! ಇದು ನಿನ್ನ ಮೌಢ್ಯವೇ ಸರಿ. ನಾನಾದರೋ ಎಂದಿಗೂ ಈ ದುಷ್ಟ ವಾಸನೆಯನ್ನು ಅನುವರ್ತಿಸಿಕೊಂಡು ಹೋಗತಕ್ಕವನಲ್ಲ. ಅದನ್ನು ಆಶ್ರಯಿಸಿ ಕೊಂಡಿರುವ ನಿನ್ನನ್ನು ನಾನು ಪರಿತ್ಯಾಗ ಮಾಡುವದು ಖಂಡಿತ.

ಕಃ ಕಿಲಾಯಂ ಮುಧಾ ಮೋಹೋ ಬಾಲಸ್ಯೇವಾವಿಚಾರಿಣಃ ।
ಅಯಂ ಸೋಽಹಮಿತಿ ಭ್ರಾಂತಿಸ್ತ್ವಹಂತಾಪರಿಕಲ್ಪಿತಾ ॥ ೩೫ ॥

ಪಾದಾಂಗುಷ್ಠಾಚ್ಛಿರೋ ಯಾವತ್ಕಣಶಃ ಪ್ರವಿಚಾರಿತಂ ।
ನ ಲಬ್ಧೋಽಸಾವಹಂ ನಾಮ ಕಃ ಸ್ಯಾದಹಮಿತಿ ಸ್ಥಿತಃ ॥ ೩೬ ॥

ಭರಿತಾಶೇಷದಿಕ್ಕುಂಜಂ ಯತ್ಸ್ವೈಮೇಕಂ ಜಗತ್ರಯೇ ।
ಸಂವೇದನಮಸಂವೇದ್ಯಂ ಸರ್ವತ್ರ ವಿಗತಾತ್ಮಕಂ ॥ ೩೭ ॥

---

೩೫. "ಇವನು, ಅವನು, ನಾನು" ಎಂಬೀಮೊದಲಾದ ವಿವಿಧ ಭ್ರಾಂತಿಯಾದರೋ ಮಿಥ್ಯಾಭೂತವಾದ ದೇಹಾದ್ಯಾತ್ಮಜ್ಞಾನದಿಂದ (ಅನಾತ್ಮ ದೇಹಾದಿಗಳಲ್ಲಿ ಭ್ರಾಂತಿಮೂಲಕ ಅಧ್ಯಸ್ತವಾದ ಆತ್ಮಬುದ್ಧಿ) ಕಲ್ಪಿತವಾದುದೇ ಸರಿ. ವಿಚಾರಮಾಡಲು ಅಸಮರ್ಥನಾದ ಕೇವಲ ಅವಿವೇಕಿಯಾದ ಬಾಲಕನಂತೆ, ನೀನೇಕೆ ಹೀಗೆ ವ್ಯರ್ಥವಾಗಿ ವಿಚಾರಶೂನ್ಯತೆಯಿಂದ ಇಂತಹ ಮೋಹ ಪರವಶನಾಗಿದ್ದೀಯೆ ?

೩೬. ನಾನು ಪಾದಾಂಗುಷ್ಠವನ್ನು ಮೊದಲು ಮಾಡಿಕೊಂಡು ತಲೆಯ ತುದಿಯವರೆಗೂ ಇರುವ ಈ ದೇಹದಲ್ಲಿ ಯಾವದೊಂದು ಸಣ್ಣ ಭಾಗವನ್ನೂ ಬಿಡದೆ ಒಂದೊಂದು ಅಂಶವನ್ನೂ ತೆಗೆದುಕೊಂಡು ಚೆನ್ನಾಗಿ ಸುಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡಿ ಹುಡುಕಿದೆನು. ಆದರೆ ಎಲ್ಲೆಲ್ಲಿಯೂ ಯಾವೊಂದು ಅಂಶದಲ್ಲಿಯೂ ಈ "ಅಹಂ" ಎಂಬುದು ನನಗೆ ಗೋಚರಿಸಲೇ ಇಲ್ಲ. "ಅಹಂ" ಎನ್ನಿಸಿಕೊಂಡಿರುವ ವಸ್ತುವು ದೇಹದಲ್ಲಿ ಯಾವದು ?

೩೭-೩೮-೩೯. ದಿಕ್ಕು, ವಸ್ತು, ಕಾಲಗಳಿಂದ ಆದ ಪರಿಚ್ಛೇದ ಶೂನ್ಯವಾಗಿ ಮೂರು ಲೋಕಗಳಲ್ಲಿಯೂ ಸರ್ವತ್ರ ಪರಿಪೂರ್ಣವಾಗಿರುವ, ಜ್ಞಾನವು (ಚೈತನ್ಯವು) ಯಾವುದುಂಟೋ ಅಂತಹ ಚಿತ್ಸ್ವರೂಪನೇ ನಾನು. ಬೇರೆ ಯಾವದೊಂದೂ ನಾನು ಅಲ್ಲ. ಇದು ಸ್ವಾನುಭವಮಾತ್ರ ರೂಪವಾದುದು. ಸದಾ ಸರ್ವತ್ರ ಸರ್ವ ಪ್ರಕಾರಗಳಲ್ಲಿಯೂ ಸ್ವಸತ್ತಾರೂಪದಿಂದಲೇ ಅನುಗತವಾಗಿರುವುದು. ಅದು ಯಾವ ಜ್ಞಾನಕ್ಕೂ ವಿಷಯವಲ್ಲವು. (ಅದೇ ವಿಷಯಿ.) (ಇಷ್ಟೆಂಬ) ಪರಿಮಿತಿಯು

ದೃಶ್ಯತೇ ಯಸ್ಯ ನೇಯತ್ತಾ ನ ನಾಮ ಪರಿಕಲ್ಪನಾ |
ನೈಕತಾನಾ ನ್ಯತ್ವೇವೇಹ ನ ಮಹತ್ತಾ ನ ಚಾಣುತಾ || ೩೮ ||

ವೇದ ತತ್ತ್ವಾಂ ಸ್ವಸಂವೇದ್ಯಮಾತತಂ ದುಃಖಕಾರಣಂ |
ವಿವೇಕಜೇನ ಬೋಧೇನ ತದಿದಂ ಹನ್ಯತೇ ಮಯಾ || ೩೯ ||

ಅದಕ್ಕೆ ಇಲ್ಲವು. ನಾಮರೂಪಾದಿಗಳ ಕಲ್ಪನೆಯೂ ಇಲ್ಲವು. ಅದರಲ್ಲಿ ಏಕತ್ವ, ದ್ವಿತ್ವಾದಿ ಸಂಖ್ಯಾಕೃತವಾದ ಧರ್ಮಗಳೂ, ಮಹತ್ವಾಣುತ್ವಾದಿ ಭೇದಗಳೂ ಒಂದೂ ಇಲ್ಲ. ಇಂತಹ ಕೇವಲ ಜ್ಞಾನಮಾತ್ರವೇ ನಾನು. ಎಲೈ ಚಿತ್ತವೇ, ನೀನು ಜ್ಞಾನರೂಪನಾದ ನನಗೆ ವಿಷಯ (ಜ್ಞೇಯ) ವಾಗಿರುವೆಯೆಂದೂ, ಸಕಲ ದುಃಖಹೇತುವಾಗಿ ಸರ್ವತ್ರ ಹರಡಿಕೊಂಡು ವ್ಯವಹರಿಸುವೆಯೆಂದೂ, ಈಗ ನಾನು ಕಂಡುಕೊಂಡೆನು. ಆದುದರಿಂದ ಇದೋ, ಈಗಲೇ ನಾನು ವಿವೇಕಜನ್ಯವಾದ ತತ್ತ್ವಾವಬೋಧದಿಂದ ನಿನ್ನನ್ನು ಸಂಹರಿಸಿಬಿಡುವೆನು.

[ಪರಿಚ್ಛೇದ=ಮೊಟಕು ಮಾಡುವದು. ದಿಕ್ಕು ಅಥವಾ ಪರಿಚ್ಛೇದವೆಂದರೆ ಇಲ್ಲಿ ಉಂಟು, ಅಲ್ಲಿ ಇಲ್ಲ ಎಂದು ಒಂದು ಅಳವಟ್ಟ ಸಂಕುಚಿತವುಳ್ಳ ವಸ್ತುವಿನ ಸ್ಥಿತಿ. ಉದಾಹರಣೆ, ಘಟ, ಪಟ, ಮುಂತಾದುವುಗಳ ಇರವು. ಕಾಲ ಪರಿಚ್ಛೇದ–ಹಿಂದೆ ಇತ್ತು, ಈಗ ಇಲ್ಲ ಇತ್ಯಾದಿ ಕಾಲದಿಂದ ಆದ ಸಂಕುಚಿತ ಭಾವ ವಸ್ತುಕೃತವಾದ ಸಂಕುಚಿತ ಭಾವವಿದೆ.

"ಏಕಮೇವಾ ದ್ವಿತೀಯಂ ಬ್ರಹ್ಮ
ಸತ್ಯಂ ಜ್ಞಾನಮನಂತಂ ಬ್ರಹ್ಮ
ವಿಜ್ಞಾನಮಾನಂದಂ ಬ್ರಹ್ಮ
ಸರ್ವಂ ಖಲ್ವಿದಂ ಬ್ರಹ್ಮ

—ಇತ್ಯಾದಿ ಸಾವಿರಾರು ಶ್ರುತಿಗಳು ಆತ್ಮನು ಸಚ್ಚಿದಾನಂದ ರೂಪನು, ಅದ್ವಿತೀಯನು, ಸರ್ವವ್ಯಾಪಿಯು, ಅಸಂಗನು, ಅಪರಿಚ್ಛಿನ್ನನು (ಪರಿಪೂರ್ಣನು) ಸಜಾತೀಯ, ವಿಜಾತೀಯ, ಮತ್ತು ಸ್ವಗತಭೇದ ರಹಿತನು ಎಂದು ಸಾರುತ್ತಲಿರುವವು.

ಸಂವೇದನಂ=ಜ್ಞಾನ, ಚಿತ್, ಚೈತನ್ಯ.

ಇದಂ ಮಾಂಸಮಿದಂ ರಕ್ತಮಿಮಾನ್ಯಸ್ಥೀನಿ ದೇಹಕೇ |
ಇಮೇ ತೇ ಶ್ವಾಸಮರುತಃ ಕೋಽಸಾವಹಮಿತಿ ಸ್ಥಿತಃ || ೪೦ ||

ಸ್ಪಂದೋ ಹಿ ವಾತಶಕ್ತೇರ್ನಾಮವಬೋಧೋ ಮಹಾಚಿತಃ |
ಜರಾ ಮೃತಿಶ್ಚ ಕಾಯೇಽಸ್ಮಿನ್ಕೋಽಸಾವಹಮಿತಿ ಸ್ಥಿತಃ || ೪೧ ||

ಅಸಂವೇದ್ಯಂ=ಜ್ಞಾನಕ್ಕೆ ವಿಷಯವಾಗದುದು ಎಂದರೆ ವಿಷಯಿ ಎಂದರ್ಥ.

ಭರಿತಾಶೇಷ ದಿಕ್ಕುಂಜಂ=ಸಮಸ್ತದಿಕ್ಕುಗಳ ಮೂಲೆಮೂಲೆಗಳನ್ನೂ ಆವರಿಸಿ ಕೊಂಡಿರುವದು, ದಿಕ್ಕೃತ ಪರಿಚ್ಛೇದ ರಹಿತವಾದುದು.

ಏಕಂ=ವಸ್ತುಕೃತ ಪರಿಚ್ಛೇದವಿಲ್ಲದುದು.]

೪೦. ಈ ದೇಹದಲ್ಲಿ ಎಲ್ಲಿಲ್ಲಿ ಹುಡುಕಿದರೂ ಇಲ್ಲಿ ಒಂದು ಕಡೆ ಕೆಲವು ಮಾಂಸ ಖಂಡಗಳೂ ಅಲ್ಲೊಂದು ಕಡೆ ಹರಿಯುತ್ತಿರುವ ರಕ್ತವೂ ಇನ್ನೊಂದು ಕಡೆ ಈ ಮೂಳೆಗಳೂ ಮತ್ತೂ ಕೆಲವು ಕಡೆಗಳಲ್ಲಿ ಉಚ್ಛ್ವಾಸನಿಶ್ವಾಸ ರೂಪವಾದ ಪ್ರಾಣಾದಿ ವಾಯುಗಳ ಸಂಚಾರವೂ ಇವುಗಳೇ ಕಾಣುತ್ತಿವೆ. ಇಂತಹ ಈ ಹಾಳು ದೇಹದಲ್ಲಿ "ಅಹಂ" (ನಾನು) ಎನ್ನಿಸಿಕೊಂಡಿರುವದು ಪೂರ್ವೋಕ್ತ ಮಾಂಸ ರಕ್ತಾದಿಗಳಲ್ಲಿ ಯಾವುದಾಗಿರುವುದು ?

(ಇವುಗಳಿಗಿಂತ ಬೇರೆ ಯಾವುದೂ ಕಾಣುವುದಿಲ್ಲ. ಆದರೆ ಅದೊಂದೂ ಆತ್ಮವಲ್ಲ. ಈ ದೇಹವೂ, ಜ್ಞಾನೇಂದ್ರಿಯ ಪಂಚಕವೂ, ಕರ್ಮೇಂದ್ರಿಯ ಪಂಚಕವೂ, ಅಂತಃಕರಣ ಚತುಷ್ಟಯವೂ, ಪ್ರಾಣಾದಿ ವಾಯುಗಳೂ ದೇಹಾ ರಂಭಕಗಳಾದ ಆಕಾಶಾದಿ ಪಂಚಭೂತಗಳೂ, ಶಬ್ದಾದಿ ಪಂಚ ತನ್ಮಾತ್ರಗಳೂ ಇವು ಯಾವುದೊಂದೂ ಅಥವಾ ಇವೆಲ್ಲವುಗಳ ಸಂಘಾತವೂ ಆತ್ಮವಲ್ಲವೇ ಅಲ್ಲವು. ಇವುಗಳಿಗೆಲ್ಲ ಸಾಕ್ಷಿಯಾಗಿರುವ ಸತ್ಯಜ್ಞಾನಾನಂದರೂಪನೇ ಆತ್ಮನು ಎಂದು ಶ್ರುತಿ, ಯುಕ್ತಿ ಮತ್ತು ಅನುಭವಗೋಚರವಾದ ಸಿದ್ಧಾಂತವು.)

೪೧. ಈ ದೇಹಗತವಾದ ಸ್ಪಂದಾಂಶವೆಲ್ಲವೂ (ಚಲನೆ) ಪ್ರಾಣಾದಿ ವಾಯು ಗಳ ಶಕ್ತಿಗೆ ಸಂಬಂಧಿಸಿದುದು. ಅವಬೋಧಾಂಶ (ಜ್ಞಾನ) ವೆಂಬುದೆಲ್ಲ ಮಹಾ ಚಿತ್ಸ್ವರೂಪನಾದ ಆತ್ಮನಿಗೆ ಸಂಬಂಧಪಟ್ಟುದು. ಜರಾಮರಣಗಳಾದರೋ ಶರೀರ

ಮಾಂಸಮನ್ಯದಸೃಕ್ತ್ವನ್ಯದಸ್ಥೀನ್ಯನ್ಯಾನಿ ಚಿತ್ತ ಹೇ |
ಬೋಧೋಽನ್ಯಃ ಸ್ಪಂದನಂ ಚಾನ್ಯತ್ಕೋಽಸಾವಹಮಿತಿ ಸ್ಥಿತಃ || ೪೨ ||

ಇದಂ ಘ್ರಾಣಮಿಯಂ ಜಿಹ್ವಾ ತ್ವಗಿಯಂ ಶ್ರವಣೇ ಇಮೇ |
ಇದಂ ಚಕ್ಷುರಸೌ ಸ್ಪರ್ಶಃ ಕೋಽಸಾವಹಮಿತಿ ಸ್ಥಿತಃ || ೪೩ ||

ಯಥಾ ಭೂತತಯಾ ನಾಹಂ ಮನೋ ನ ತ್ವಂ ನ ವಾಸನಾ |
ಆತ್ಮಾ ಶುದ್ಧಚಿದಾಭಾಸಃ ಕೇವಲೋಽಯಂ ವಿಜೃಂಭತೇ || ೪೪ ||

ನಿಷ್ಠವಾದ ಧರ್ಮಗಳು. ಇನ್ನು "ಅಹಂ" ಎನ್ನಿಸಿಕೊಂಡಿರುವದು ಪ್ರತ್ಯೇಕವಾಗಿ ಯಾವುದಿರುವುದು ?

೪೨. ಎಲೈ ಚಿತ್ತವೇ, ಮಾಂಸವೇ ಬೇರೆ, ರಕ್ತವೇ ಬೇರೆ, ಈ ಮೂಳೆಗಳೂ ಬೇರೆ, ಜ್ಞಾನವೆಂಬುದೇ ಬೇರೆ ಮತ್ತು ಚಲನೆಯೆಂಬುದು ಇವೆಲ್ಲಕ್ಕಿಂತಲೂ ಪೃಥಕ್ಕಾದುದು. ಇವುಗಳಲ್ಲಿ ಯಾವೊಂದೂ ಆತ್ಮವಲ್ಲವೆಂದು ಸರ್ವಾನುಭವವೇದ್ಯವಾಗಿರಲು, ಆ "ಅಹಂ" ಎಂಬುದು ಮತ್ತೆ ಯಾವುದು ?

೪೩. ಹೀಗೆಯೇ, ಈ ದೇಹದಲ್ಲಿ ಇಗೋ ಇದೇ ಮೂಗು. ಇದು ನಾಲಗೆ, ಇದು ಚರ್ಮ, ಇವು ಕಿವಿಗಳು, ಇವು ಕಣ್ಣುಗಳು ಮತ್ತು ಇದು ಸ್ಪರ್ಶವು ಇವೆಲ್ಲವೂ ಬೇರೆಬೇರೆಯೇ. ಇವುಗಳಲ್ಲಿ ಯಾವದೂ "ಅಹಂ" ಅಲ್ಲವಾಗಿರಲು ಮತ್ತೆ ಯಾವುದು ?

೪೪. ಎಲೆ ಮನವೇ, ಯಥಾರ್ಥವಾಗಿ ಪರಮಾರ್ಥ ತತ್ವವಿಚಾರ ಪೂರ್ವಕವಾಗಿ ನೋಡಿದರೆ, ವಾಸ್ತವವಾಗಿ, ಮನಸ್ಸೆಂಬುದೂ "ಅಹಂ" ಎಂಬುದಲ್ಲ. ಚಿತ್ತವೆಂಬುದೂ ಮತ್ತು ವಾಸನೆಯೆಂಬುದೂ ಕೂಡ "ಆಹಂ" ಎಂಬುದು ಅಲ್ಲವು. ಆದರೆ ಕೇವಲ (ಅದ್ವಿತೀಯ) ಶುದ್ಧ ಚೈತನ್ಯರೂಪವಾಗಿ ಸ್ವಯಂಪ್ರಕಾಶಮಾನನಾದ ಆತ್ಮನೊಬ್ಬನೇ ಸದಾ ಸರ್ವತ್ರ ವಿಜೃಂಭಿಸುತ್ತಿರುವನು.

(ಹೀಗೆ, ಆತ್ಮನು ಸರ್ವಥಾ ಅಹಂಭಾವದಿಂದ ಅಸಂಸ್ಪೃಷ್ಟನಾದವನು ಎಂದು ತಿಳಿಯಬೇಕು.)

ಅಹಮೇವೇಹ ಸರ್ವತ್ರ ನಾಹಂ ಕಿಂಚಿದಪೀಹ ವಾ |
ಇತ್ಯೇವ ಸನ್ಮಯೀ ದೃಷ್ಟಿರ್ನೇತರೋ ವಿದ್ಯತೇ ಕ್ರಮಃ || ೪೫ ||

ಚಿರಮಜ್ಞಾನಧೂರ್ತೇನ ಪ್ರೋಥಿತೋಽಸ್ಮಿ ತ್ವಹಂತಯಾ |
ವೃಕೇಣ ದೃಷ್ಟೇನಾಟವ್ಯಾಂ ಲಬ್ಧೇನ ಪಶುಪೋತಕಃ || ೪೬ ||

ದಿಷ್ಟ್ಯೇದಾನೀಂ ಪರಿಜ್ಞಾತೋ ಮಯೈವಾಜ್ಞಾನತಸ್ಕರಃ |
ಪುನರ್ನಸಂಶ್ರಯಾಮ್ಯೇನಂ ಸ್ವರೂಪಾರ್ಥಾಪಹಾರಿಣಂ || ೪೭ ||

---

೪೫. ಅಂತಹ ಆತ್ಮನಲ್ಲಿ ಅಧ್ಯಾರೋಪ ದೃಷ್ಟಿಯಿಂದ ("ಸೋಽಹಂ" ಆ ಆತ್ಮನೇ ನಾನು ಎಂಬ ತಾದಾತ್ಮ್ಯವನ್ನು ಅಧ್ಯಾರೋಪಮಾಡಿ) ನೋಡಿದಾಗ ನಾನೇ ಸರ್ವತ್ರ ಸರ್ವಾಧಿಷ್ಠಾನವೆಂಬ ಅರಿವು ದೃಢಪಟ್ಟು ಈ ಜಗತ್ತಿನಲ್ಲಿ ಸರ್ವತ್ರ ಸರ್ವವೂ ನಾನೇ (ನನಗಿಂತ ಬೇರೆಯಾಗಿ ಯಾವದೊಂದೂ ಪರಮಾರ್ಥ ಸತ್ಯ ವಾದುದು ಇಲ್ಲ) ಆಗುವೆನು. ಅಥವಾ ಅಪವಾದ ದೃಷ್ಟಿಯಿಂದ ನೋಡಿದಾಗ ಲಾದರೋ ಇಲ್ಲಿ ಯಾವುದೂ "ಅಹಂ" ಎಂಬುದು ಅಲ್ಲವೇ ಅಲ್ಲವಾಗುವದು. ಹೀಗೆಂಬುದೇ ಪರಮಾರ್ಥ ಸತ್ಯವಾದ ಯಥಾರ್ಥ ಜ್ಞಾನವು. ಇನ್ನು ಬೇರೆ ವಿಧ ವಾದ ಏಕದೇಹ ಮಾತ್ರ ಪರಿಚ್ಛಿನ್ನವಾದ ಅಹಂಭಾವವೆಂಬ ಕ್ರಮವು, ಸುತರಾಂ ಇಲ್ಲವು.

(ಎಲ್ಲದರಲ್ಲಿಯೂ ಆತ್ಮ ತಾದಾತ್ಮ್ಯವನ್ನು ಆರೋಪಿಸಿ ಅಹಮೇವೇದಂ ಸರ್ವಂ ಇದೆಲ್ಲವೂ ನಾನೇ ಎಂದು ತಿಳಿಯುವದು ಅಧ್ಯಾರೋಪದೃಷ್ಟಿ ನೇಹ ನಾನಾಸ್ತಿ ಕಿಂಚನ ಆತ್ಮವ್ಯತಿರಿಕ್ತವಾದುದೊಂದೂ ಇಲ್ಲ ಎಂಬುದು ಅಪವಾದ ದೃಷ್ಟಿ.)

೪೬. ಕಾಡಿನಲ್ಲಿ ಒಂಟಿಯಾಗಿ ಸಿಕ್ಕಿದ ಸಾಧುವಾದ ಒಂದು ಜಿಂಕೆಯ ಮರಿ ಯನ್ನು ಮದಿಸಿ ಕೊಬ್ಬಿರುವ ಒಂದು ತೋಳವು ವಂಚಿಸಿ ಹಿಂಸೆಪಡಿಸುವಂತೆ, ಅಜ್ಞಾನವೆಂಬ ವಂಚಕನು ಅಹಂಭಾವವೆಂಬ ಮಾಯೆಯಿಂದ ನನ್ನನ್ನು ಮೋಸ ಗೊಳಿಸಿ ಬಹುಕಾಲದಿಂದಲೂ ಹಿಂಸೆಪಡಿಸಿದನು.

೪೭. ನನ್ನ ಸುಕೃತ ಪರಿಪಾಕದಿಂದ (ಅದೃಷ್ಟವಶಾತ್) ಈಗಲೇ ನನ್ನ ಸರ್ವಸ್ವಾಪಹಾರಕನಾದ, ಅಜ್ಞಾನನೆಂಬ ಈ ಧೂರ್ತನಾದ ಕಳ್ಳನು ನನ್ನ ದೃಷ್ಟಿ

ನಿರ್ದುಃಖೋ ದುಃಖಯೋಗ್ಯಸ್ಯ ನಾಹಂ ತಸ್ಯ ನ ಚೈಷ ಮೇ ।
ಕಶ್ಚಿದ್ಭವತಿ ಶೈಲಸ್ಯ ತತ್ಸ್ಥ ಏವ ಯಥಾಂಬುದಃ ॥ ೪೮ ॥

ಭೂತ್ವಾ ತ್ವಹಮಿದಂ ವಚ್ಮಿ ವೇದ್ಮಿ ತಿಷ್ಠಾಮಿ ಯಾಮಿ ಚ ।
ಆತ್ಮಾವಲೋಕನೇನಾಹಮನಹಂಕಾರತಾಂ ಗತಃ ॥ ೪೯ ॥

ಗೋಚರನಾಗಿ ಸಿಕ್ಕಿಬಿದ್ದಿರುವನು. ಸ್ವಸ್ವರೂಪ ಜ್ಞಾನವೆಂಬ ಪರಮಾರ್ಥ (ಉತ್ತಮವಾದ ಹಣ) ವನ್ನು ಅಪಹರಿಸುವವನಾದ ಇವನನ್ನು ನಾನು ಪುನಃ ಎಂದಿಗೂ ಆಶ್ರಯಿಸುವದಿಲ್ಲ.

೪೮. ನಾನು ಸ್ವಭಾವತಃ ಸಕಲದುಃಖಗಳಿಂದ ಅಸಂಸ್ಪೃಷ್ಟನು. (ಎಂದಿಗೂ ದುಃಖ ಸಂಪರ್ಕವೇ ಇಲ್ಲದವನು.) ಈ ಅಜ್ಞಾನಧೂರ್ತನಾದರೋ ಸರ್ವದಾ ಸರ್ವದುಃಖಭಾಜನನು. ಒಂದು ಪರ್ವತ ಶೃಂಗಾಗ್ರದಲ್ಲಿಯೇ ಮೇಘವು ಅಂಟಿಕೊಂಡಿದ್ದರೂ ಕೂಡ, ಅತಿ ವಿಲಕ್ಷಣಗಳಾದ ಪರ್ವತ ಮೇಘಗಳಿಗೆ (ಆಧಾರಾಧೇಯ ಭಾವದ ಹೊರತು) ಇನ್ನಾವ ಬಗೆಯು ಸಂಬಂಧವೂ ಹೇಗೆ ಸಂಭವಿಸಲಾರದೋ, ಹಾಗೆಯೇ ಅನ್ಯೋನ್ಯ ವಿರುದ್ಧ ಸ್ವಭಾವವುಳ್ಳ ಅತ್ಯಂತ ವಿಲಕ್ಷಣಗಳಾದ ನನಗೂ ಈ ಅಜ್ಞಾನಕ್ಕೂ ಯಾವ ಬಗೆಯ ಸಂಬಂಧವೂ ಸರ್ವಥಾ ಸಂಭವಿಸುವುದಿಲ್ಲ. ಸಂಬಂಧವೇ ಇಲ್ಲದಿರುವಾಗ ಐಕ್ಯವು ಹೇಗೆ ಸಮಂಜಸವಾದೀತು ?

೪೯. (ಒಬ್ಬ ನಟನು ನಾನಾಪಾತ್ರಗಳನ್ನುವಹಿಸಿ ನಾಟಕಾಭಿನಯ ಮಾಡುವಾಗ ಆಯಾ ಕಾಲದಲ್ಲಿ ತನ್ನ ಪಾತ್ರಕ್ಕೆ ಉಚಿತವಾದ ವಿವಿಧ ವೇಷಗಳನ್ನು ಧರಿಸಿ, ವಿವಿಧ ವ್ಯವಹಾರಗಳನ್ನು ಮಿಥ್ಯಾಭೂತವಾದರೂ ಸತ್ಯವಾದವುಗಳಂತೆಯೇ ನಟಿಸುತ್ತಾ ಅಭಿನಯಿಸುವನು. ಇದರಂತೆಯೇ) ನಾನೂ ತಾತ್ಕಾಲಿಕವಾದ ಆಯಾ ಭಾವಕಲ್ಪನಾನುಸಾರವಾಗಿ, ಅಹಂಕಾರರೂಪವಾಗಿದ್ದುಕೊಂಡು ಈ ಮಾತನಾಡುವೆನು. ಅದನ್ನು ತಿಳಿಯುವೆನು. ಇಲ್ಲಿ ನಿಲ್ಲುವೆನು. ಅಲ್ಲಿಗೆ ಹೋಗುವೆನು. ಹೀಗೆ ವ್ಯವಹಾರದಲ್ಲಿ ಎಲ್ಲ ಕಾರ್ಯಗಳನ್ನೂ ನಡೆಸುವೆನು. ಮತ್ತೆ (ಪುನಃ) ಪಾರಮಾರ್ಥಿಕ ಸ್ವಾತ್ಮ ಸಾಕ್ಷಾತ್ಕಾರದಿಂದ ಸರ್ವ ವ್ಯವಹಾರಶೂನ್ಯನಾಗಿ ಅಹಂಕಾರದಿಂದ ಅಸಂಸ್ಪೃಷ್ಟವಾದ ಶುದ್ಧ ಚೈತನ್ಯರೂಪನಾಗುವೆನು.

ನೂನಮೇವಾಹಮೇವೈತೇ ಮನ್ಯೇ ಜ್ಞಾಶ್ಚಕ್ಷುರಾದಯಃ |
ಯಾಂತು ತಿಷ್ಠಂತು ವಾ ದೇಹೇ ಮನ್ಯೇತೇ ತು ನ ಕಿಂಚನ ॥ ೫೦ ॥

ಕಷ್ಟಂ ಕೋಽಯಮಹಂ ನಾಮ ಕಥಂ ಕೇನೋಪಕಲ್ಪಿತಃ |
ಜಗದ್ಬಾಲಕವೇತಾಲಸ್ತಾಲೋತ್ತಾಲಾತುಲಾಕೃತಿಃ ॥ ೫೧ ॥

ಏತಾವಂತಂ ಚಿರಂ ಕಾಲಂ ವ್ಯರ್ಥಮಾಲುಠಿತೋಽವಟೇ |
ಅಹಮತ್ರ ತೃಣೋನ್ಮುಕ್ತೇ ದುರದ್ರೌ ಹರಿಣೋ ಯಥಾ ॥ ೫೨ ॥

---

೫೦. ಈ ಚಕ್ಷುರಾದಿ (ಕಣ್ಣು ಮೊದಲಾದ) ಇಂದ್ರಿಯಗಳೆಲ್ಲವೂ ತತ್ತ್ವತಃ "ನಾನೇ" ಎಂದು ನಿಶ್ಚಿತವಾಗಿಯೇ ಭಾವಿಸಿರುವೆನು. ಆದರೆ ಇವುಗಳು ನನಗಿಂತ ವ್ಯತಿರಿಕ್ತವಾದವುಗಳೇ ಆಗಿರುವ ಪಕ್ಷದಲ್ಲಿ ಜಡಗಳಾದ ಇವು ಎಲ್ಲಿಗಾದರೂ ಹೋಗಲಿ. ಅಥವಾ ದೇಹದಲ್ಲಿಯೇ ಬೇಕಾದರೂ ಇದ್ದುಕೊಂಡಿರಲಿ. ಇವು ನನಗೆ ಏನೂ (ಯಾವದೂ) ಆಗಿಲ್ಲ. ಇವುಗಳಿಗೂ (ಜಡ) ನನಗೂ (ಚೇತನ) ಯಾವ ಸಂಬಂಧವೂ ಇಲ್ಲ. ಇನ್ನು ಐಕ್ಯವೆಲ್ಲಿಯದು?

೫೧. ಅಹಹ! ಇದೀಗ ಅತಿ ಕಷ್ಟವು. ಜಗತ್ ಎಂಬ ಬಾಲಕನಿಗೆ ತಾಳಿಯ ಮರಕ್ಕಿಂತಲೂ ಹೆಚ್ಚು ಎತ್ತರವಾಗಿರುವ ಮತ್ತು ಅನನ್ಯ ಸದೃಶವಾದ ಅದ್ಭುತಾಕಾರವುಳ್ಳ ಬೇತಾಳನಂತೆ ಅತಿ ಭೀಕರವಾದ ಈ "ಅಹಂ" ಎಂಬುದು ಯಾವದು? ಇದು ಯಾರಿಂದ ಯಾವರೀತಿಯಾಗಿ ಕಲ್ಪಿತವಾಗಿ ಸುಳಿಯುತ್ತಾ ಇರುವದು?

೫೨. ಒಂದು ಹುಲ್ಲುಗರಿಕೆಯೂ ಸುತರಾಂ ಮೊಳೆಯದೇ ಇರುವ ಒಂದು ಹಾಳು ಬೆಟ್ಟದ ಮೇಲೆ ಒಂದು ಜಿಂಕೆಯು ಬಹಳ ಹೊತ್ತು ಹುಲ್ಲುಗಾವಲನ್ನು ಹುಡುಕಿಕೊಂಡು ಅಲೆದಲೆದರೂ ಏನೂ ಪ್ರಯೋಜನವಾಗದೆ ಶ್ರಮಿಸುವಂತೆ, ನಾನು ಇಷ್ಟು ದೀರ್ಘಕಾಲ, ಇದುವರೆಗೆ ಈ ಅಹಂಭಾವವೆಂಬ ಪಾಳುಗುಂಡಿಯಲ್ಲಿ ಬಹಳ ಕೆಳಕ್ಕೆ ಬಿದ್ದು, ವ್ಯರ್ಥವಾಗಿ ಹೊರಳಾಡುತ್ತಾ ಕಂಗೆಟ್ಟೆನು.

ಸ್ವಾರ್ಥಮಾಲೋಕನೇ ಚಕ್ಷುರ್ಯದಿ ತೂನ್ಮುಖತಾಂ ಗತಂ |
ತದಹಂ ನಾಮ ಕೋಽಸೌ ಸ್ಯಾದ್ಯೋಽಸ್ಮಿಂದುಃಖೇನ ಮೋಹಿತಃ || ೫೩ ||

ಸ್ಪರ್ಶನಾಯ ನಿಜೇ ತತ್ವೇ ಯದಿ ಜಾತಾ ತ್ವಗುನ್ಮುಖೀ |
ತತ್ಕೋಽಯಂ ಸ್ಯಾದಹಂ ನಾಮ ಕುಪಿಶಾಚ ಇವೋದಿತಃ || ೫೪ ||

ರಸೇಷ್ವಭಿನಿಷಣ್ಣೇಽಸ್ಮಿನ್ಸ್ವಕ್ರಮೇ ರಸನೇಂದ್ರಿಯೇ |
ಅಹಂ ಮೃಷ್ಟಭುಗಿತ್ಯೇಷ ಕುತಸ್ತ್ಯಃ ಕುತ್ಸಿತೋ ಭ್ರಮಃ || ೫೫ ||

ಶಬ್ದಶಕ್ತಿಂ ಗತೇ ಶ್ರೋತ್ರೇ ವರಾಕೇ ಸ್ವಾರ್ಥಪೀಡಿತೇ |
ತದಹಂಕಾರದುಃಖಸ್ಯ ನಿರ್ಬೀಜಸ್ಯ ಕ ಆಗಮಃ || ೫೬ ||

---

೫೩. ಚಕ್ಷುರಿಂದ್ರಿಯವು (ಕಣ್ಣು) ತನಗೆ ವಿಷಯವಾದ ರೂಪವನ್ನು ನೋಡುವುದರಲ್ಲಿ ತಾನಾಗಿ ಅತ್ಯಂತ ಕುತೂಹಲದಿಂದ ಅಭಿಮುಖವಾದರೆ ಆಗ ಈ ವ್ಯಾಪಾರದಲ್ಲಿ "ಅಹಂ" ಎಂಬುದು ಯಾವದಿರುವದು ? ಅದು ಈ ವ್ಯವಹಾರದಲ್ಲಿ ಅಭಿಮಾನವನ್ನು ವಹಿಸಿ, ಮೋಹಪರವಶವಾಗಿ ಅನವರತವೂ ದುಃಖಪಡುವದೇಕೆ ?

೫೪. ಹೀಗೆಯೇ ತ್ವಗಿಂದ್ರಿಯವು (ಚರ್ಮವು) ತನ್ನ ವಿಷಯವಾದ ಸ್ಪರ್ಶದಲ್ಲಿ ಕುತೂಹಲಾವಿಷ್ಟವಾಗಿ ಅಭಿಮುಖವಾದ ಕೂಡಲೇ, ದುಷ್ಟ ಭೀಕರ ಪಿಶಾಚಿಯಂತೆ, ಈ ವ್ಯವಹಾರದಲ್ಲಿ ಉದಯಿಸಿದ "ಅಹಂ" ಎಂಬುದು ಯಾವದಾಗಿರುವದು ?

೫೫. ರಸನೇಂದ್ರಿಯವು (ಜಿಹ್ವೆ=ನಾಲಗೆ) ತನಗೆ ವಿಷಯವಾದ ರಸವನ್ನು ಆಸ್ವಾದಿಸುವದರಲ್ಲಿ ವ್ಯಗ್ರವಾಗಿ (ಆಸಕ್ತವಾಗಿ) ರಲು "ನಾನು ಮೃಷ್ಟಾನ್ನವನ್ನು ಭೋಜನ ಮಾಡಿದೆನು" ಎಂಬ ವ್ಯವಹಾರವು ಉದಯಿಸುವದಲ್ಲಾ! ಈ ಬಗೆಯ ಕುತ್ಸಿತವಾದ ಭ್ರಾಂತಿಯಲ್ಲಿ ಎಲ್ಲಿಯದು ? ಇದಕ್ಕೆ ಕಾರಣವೇನಿರುವದು ?

೫೬. ಶಬ್ದಗ್ರಹಣ ಸಮರ್ಥವಾದ, ತುಚ್ಛವಾದ ಶ್ರವಣೇಂದ್ರಿಯ ತೃಷ್ಣೆಯಿಂದ ಅತಿಯಾದ ಹಿಂಸೆಗೊಳಗಾಗಿ, ತನ್ನ ವಿಷಯವಾದ ಶಬ್ದವನ್ನು ಗ್ರಹಣ ಮಾಡಿದ ಮಾತ್ರದಿಂದಲೇ ಈ ಅಹಂಕಾರಕ್ಕೆ ದುಃಖವು ಎಲ್ಲಿಂದ ಸಂಭವಿಸುವದು ? ದುಃಖಕ್ಕೆ ಕಾರಣವೇ ಯಾವದೂ ಇಲ್ಲವಲ್ಲಾ !

ಆತ್ಮಂಭರಿತ್ವೇನ ನಿಜೇ ಘ್ರಾಣೇ ಸ್ವಂ ಗಂಧಮಾಗತೇ ।
ಅಹಂ ಘ್ರಾತೇತಿ ಯೋ ಮಾತಾ ತಂ ಚೌರಂ ನೈವ ವೇದ್ಮ್ಯಹಂ ॥ ೫೭ ॥

ಮೃಗತೃಷ್ಣಾಕ್ರಮೇಣೈಷಾ ಭಾವನಾ ವ್ಯರ್ಥಭಾವಿನೀ ।
ಭಾವಸ್ತಸ್ಯಾಮಸತ್ಯಾಯಾಂ ಯಃ ಸೋಽಯಮಿತಿ ಸಂಭ್ರಮಃ ॥ ೫೮ ॥

---

೫೭. ಮತ್ತೂ ಹಾಗೆಯೇ ಘ್ರಾಣೇಂದ್ರಿಯವು (ನಾಸಿಕಾ–ಮೂಗು) ತನ್ನ ಹೊಟ್ಟೆ ತುಂಬಿಕೊಳ್ಳುವ ಅತ್ಯಾಶೆಯಿಂದ, ತನಗೆ ವಿಷಯವಾದ ಗಂಧ (ವಾಸನೆ) ವನ್ನು ಗ್ರಹಿಸುವುದರಲ್ಲಿ ಅಭಿರುಚಿಯನ್ನು ವಹಿಸಿರಲಿಕ್ಕಾಗಿ "ನಾನು ಮೂಸಿ ನೋಡುವವನು, ಆಘ್ರಾಣ ಮಾಡುವವನು ನಾನು" ಎಂಬುದಾಗಿ! ಈ ವ್ಯವಹಾರ ದಲ್ಲಿ ಅಭಿಮಾನವನ್ನು ಮಾಡುವನೋ ಅಂಥ ಪರಸ್ವಾಪಹಾರಿಯಾದ ಚೋರನು ಯಾವನೆಂಬುದು ಇನ್ನೂ ನನಗೆ ಗೊತ್ತೇ ಆಗಲಿಲ್ಲ.

[ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಕ್ರಮವಾಗಿ ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು ಎಂಬ ಇಂದ್ರಿಯಗಳ ಸ್ವತ್ತುಗಳು (ಧನಗಳು) ಆದ ವಿಷಯಗಳು. ಆಯಾ ಇಂದ್ರಿಯ ತಮ್ಮ ತಮ್ಮ ಸ್ವತ್ತುಗಳಾದ ಆಯಾ ವಿಷಯಗಳನ್ನು ಅನು ಭೋಗಿಸುತ್ತಿರಲಿಕ್ಕಾಗಿ, ಆ ಸ್ವತ್ತುಗಳನ್ನು ತನ್ನದೆಂದು ಹೇಳಿಕೊಳ್ಳುತ್ತಾ, ಅಹಂ ಕಾರವು "ನಾನು ಕೇಳುವೆನು. ನಾನು ಸ್ಪರ್ಶಿಸುವೆನು. ನೋಡುವೆನು. ಆಸ್ವಾದಿ ಸುವೆನು. ಮೂಸಿನೋಡುವೆನು" ಎಂದು ಅಭಿಮಾನಗೊಳ್ಳುವದು. ಆದಕಾರಣ ಈ ವ್ಯವಹಾರಗಳೆಲ್ಲಾ ಕೇವಲ ಮಿಥ್ಯಾಭ್ರಾಂತಿಗಳೆಂದೂ, ಅಹಂಕಾರವು ಪರಸ್ವಾಪ ಹಾರಕನಾದ ಹಗಲುಗಳ್ಳ (ಪಶ್ಯತೋಹರ) ನೆಂದೂ ಇಲ್ಲಿ ವರ್ಣಿತವಾಗಿದೆ.]

೫೮. ಹೀಗೆ ಪೂರ್ವೋಕ್ತ ದೇಹೇಂದ್ರಿಯಾದಿ ಸ್ಥಳಗಳಲ್ಲಿ ಸರ್ವಜನ ಸಾಧಾ ರಣವಾಗಿ ಪ್ರಸಿದ್ಧವಾದ ಈ ಅಹಂಭಾವ ಕಲ್ಪನೆಯು ಮೃಗತೃಷ್ಣಾ (ಬಿಸಿಲು ಗುದುರೆ) ಶಶವಿಷಾಣ (ಮೊಲದಕೊಂಬು) ಮೊದಲಾದ ಅತ್ಯಂತಾಸದ್ವಸ್ತುಗಳಂತೆ ಅರ್ಥ (ವಸ್ತು=ವಿಷಯ) ವಿಲ್ಲದೆಯೇ (ಅಂದರೆ ನಿರ್ವಿಷಯವಾಗಿಯೇ) ಸುಮ್ಮನೆ ಭ್ರಾಂತಿಯಿಂದ ಉದಯಿಸುವದು. ಹೀಗೆ ಈ ಅಹಂಭಾವ ಭಾವನೆಯು ಅತ್ಯಂತಾ ಸತ್ಯವಾಗಿ ನಿರ್ವಿಷಯಕವಾಗಿರಲು " ಈ ದೇಹವು ನಾನು " ಎಂದು ಅನಾತ್ಮದೇಹ ದಲ್ಲಿ ಆತ್ಮಾಭಿಮಾನವನ್ನಿಡುವುದು ಬರಿಯ ಭ್ರಾಂತಿಯೇ ಅಲ್ಲದೆ ಮತ್ತೇನು?

ವಾಸನಾಹೀನಮಪ್ಯೇತಚ್ಚಕ್ಷುರಾದೀಂದ್ರಿಯೈಃ ಸ್ವತಃ |
ಪ್ರವರ್ತತೇ ಬಹಿಃ ಸ್ವಾರ್ಥೇ ವಾಸನಾ ನಾತ್ರ ಕಾರಣಂ || ೫೯ ||

ವಾಸನಾರಹಿತಂ ಕರ್ಮ ಕ್ರಿಯತೇ ನನು ಚಿತ್ತ ಹೇ |
ಕೇವಲಂ ನಾನುಭೂಯಂತೇ ಸುಖದುಃಖದೃಶೋಗ್ರಗಾಃ || ೬೦ ||

(ಈ ಕಾರಣದಿಂದ ದೇಹಾದಿಗಳಲ್ಲಿರುವ ಅಹಂಭಾವ ವಾಸನೆಯನ್ನು ವಿವೇಕಿಯಾದವನು ಸರ್ವಥಾ ತ್ಯಾಗಮಾಡಲೇಬೇಕು ಎಂದರ್ಥ.)

೫೯. ಈ ಶರೀರವು ತನ್ನ ಜೀವನ ಹೇತುಗಳಾದ ಬಾಹ್ಯ ವ್ಯಾಪಾರಗಳಲ್ಲಿ ಸ್ವಾರ್ಥಸಿದ್ಧಿಗೋಸ್ಕರ, ಅಹಂಭಾವ ವಾಸನಾಹೀನವಾಗಿದ್ದರೂ ಕೂಡ ಸಹಜವಾಗಿ ತಾನಾಗಿಯೇ (ಪರಪ್ರೇರಣೆಯಿಲ್ಲದೆಯೇ) ಚಕ್ಷುರಾದೀಂದ್ರಿಯಗಳ ಮೂಲಕ ಪ್ರವರ್ತಿಸುವದು. ಇದು ಸರ್ವಾನುಭವಸಿದ್ಧವು. ಹೀಗೆ ಶರೀರವು ತಾನಾಗಿ ಜೀವನಾಧಾರಗಳಾದ ಬಾಹ್ಯವೃತ್ತಿಗಳಲ್ಲಿ ಪ್ರವರ್ತಿಸುವ ವಿಷಯದಲ್ಲಿ ಅಹಂಭಾವ ವಾಸನೆಯು ಎಂದಿಗೂ ಕಾರಣವಲ್ಲವೇ ಅಲ್ಲ.

೬೦. ಹೇ ಚಿತ್ತ, ವಾಸನಾರಹಿತವಾಗಿ ಅಭಿಮಾನವನ್ನೂ ಫಲಾಭಿಸಂಧಿಯನ್ನೂ ಪರಿತ್ಯಜಿಸಿ ಕ್ರಮ ಪ್ರಾಪ್ತವಾದ ಕರ್ಮವನ್ನು ಮಾಡಿದರೂ ಕೂಡ, ತಾತ್ಕಾಲಿಕವಾದ ಭೋಗಾಭಾಸದಲ್ಲಿ “ಅಹಂ ದುಃಖೀ” (ನಾನು ದುಃಖಪಡುವೆನು) ಎಂಬ ಅಭಿಮಾನವೂ ಕ್ಲೇಶವೂ ಇಲ್ಲ. ಭವಿಷ್ಯತ್ಕಾಲದಲ್ಲಿ ಇನ್ನು ಮೇಲೆ ಸಂಭವಿಸಬಹುದಾದ ಸುಖದುಃಖಾನುಭವಗಳಿಗೂ ಸುತರಾಂ ಅವಕಾಶವಿಲ್ಲ. ಇದು ಸತ್ಯವು.

(ವಾಸನಾ ಸಹಿತವಾಗಿ ಕರ್ಮಗಳನ್ನು ಮಾಡಿದರೆ ಆ ಕರ್ಮಗಳ ಲೇಪವುಂಟಾಗುವದು. ಸಿದ್ಧಿ ಅಸಿದ್ಧಿಗಳಿಂದ ಹರ್ಷವಿಷಾದಗಳುಂಟಾಗುವವು. ಕರ್ಮಫಲಗಳಲ್ಲಿ ಮಮ ಭಾವವಿರುವ ಕಾರಣ ಈರ್ಷ್ಯಾಸೂಯೆಗಳೂ ಕಾಮ ಕ್ರೋಧ ಲೋಭ ಮೋಹಾದಿಗಳೂ ಸಂಭವಿಸುವವು. ಭಯಭ್ರಾಂತಿ ಸಂತಾಪಗಳೂ ಲಭಿಸುವವು. ಆದರೆ ವಾಸನಾ ಪರಿತ್ಯಕ್ತವಾದ ಕರ್ಮಗಳಿಂದ ಪೂರ್ವೋಕ್ತ ಶೋಕ ಮೋಹ ಭಯ ವಿಷಾದ ಚಿಂತಾದಿ ಸಕಲ ಸಂತಾಪಗಳೂ ಸರ್ವಥಾ ಇರುವದಿಲ್ಲ. ಇದೇ ವಾಸನಾ ಪರಿತ್ಯಾಗದಲ್ಲಿರುವ ವಿಶೇಷವಾದ ಅಸಾಧಾರಣ ಗುಣ

ತಸ್ಮಾನ್ಮೂರ್ಖಾಣೀಂದ್ರಿಯಾಣಿ ತ್ಯಕ್ತ್ವಾಂತರ್ವಾಸನಾಂ ನಿಜಾಂ |
ಕುರುಧ್ವಂ ಕರ್ಮ ಹೇ ಸರ್ವಂ ನ ದುಃಖಂ ಸಮವಾಪ್ಸ್ಯಥ ॥ ೬೧ ॥

ಭವದ್ಭಿರೇವ ದುಃಖಾಯ ವಾಸನಾವಾಸಿತಾ ಮುಧಾ |
ಬಾಲೈಃ ಪಂಕಕ್ರೀಡನಕಂ ವಿನಾಶೇದೇವ ಖಿನ್ನತಾ ॥ ೬೨ ॥

ಎಂದೂ ಈ ಕಾರಣದಿಂದಲೇ ವಾಸನಾ ತ್ಯಾಗವು ಶಾಸ್ತ್ರಗಳಲ್ಲಿ ಉಪದಿಷ್ಟವಾಗಿರುವದೆಂದೂ ತಿಳಿಯಬೇಕು.

ನಿರಾಶೀಃ ಯತಚಿತ್ತಾತ್ಮಾ ತ್ಯಕ್ತ ಸರ್ವಪರಿಗ್ರಹಃ |
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ||
ಯದೃಚ್ಛಾಲಾಭಸಂತುಷ್ಟಃ ದ್ವಂದ್ವಾತೀತಃ ವಿಮತ್ಸರಃ |
ಸಮಃ ಸಿದ್ಧೌ ಅಸಿದ್ಧೌಚ, ಕೃತ್ವಾಪಿ ನ ನಿಬಧ್ಯತೇ ||
ಭಗವದ್ಗೀತಾ ಅಧ್ಯಾಯ ೪, ಶ್ಲೋಕ ೨೧-೨೨)

೬೧. ವಸ್ತುಸ್ಥಿತಿಯು ಹೀಗಿರುವ ಕಾರಣ, ಎಲೈ ಮೂರ್ಖ ಇಂದ್ರಿಯಗಳೇ, ಇನ್ನಾದರೂ ಮುಂದೆ, ನಿಮ್ಮೊಳಗೆ ರೂಢವಾಗಿರುವ ; ನಾನು ಕರ್ತೃ ಭೋಕ್ತೃ ಮುಂತಾದ ಅಭಿಮಾನ ಪ್ರಚುರವಾದ ವಾಸನೆಯನ್ನು ಪರಿತ್ಯಾಗಮಾಡಿ ಸಹಜವಾದ ಕರ್ಮಗಳನ್ನೆಲ್ಲ ಆಚರಿಸಿರಿ. ಇಂತಹ ಕರ್ಮಾಚರಣೆಯಿಂದ ನೀವು ಎಂದಿಗೂ ದುಃಖಪಡುವದೇ ಇಲ್ಲ.

೬೨. ಮಕ್ಕಳುಗಳು ವಿನೋದಾರ್ಥವಾಗಿ ಆಟವಾಡುತ್ತಿರುವಾಗ ಮಣ್ಣಿನಿಂದ ತಾವೇ ಗೊಂಬೆಗಳನ್ನು ಮಾಡಿಕೊಂಡು ಸಂತೋಷಪಡುವರು. ಆಟವೆಲ್ಲಾ ಮುಗಿದ ಮೇಲೆ ತಾವೇ ಆ ಗೊಂಬೆಗಳನ್ನು ಒಡೆದು ಚೂರು ಮಾಡಿ ಖೇದಪಡುವರು. ಇದರಂತೆಯೇ, ಎಲೈ ಇಂದ್ರಿಯಗಳೇ, ನೀವೇ ಸ್ವತಃ ಭೋಗಭ್ರಾಂತಿಯಿಂದ ವಿಷಯಸುಖಗಳನ್ನು ಸಂಪಾದಿಸುವ ಕಾಲದಲ್ಲಿಯೂ ಮುಂದೆ ಅವು ನಾಶಹೊಂದಿದಾಗಲೂ ಕೇವಲ ದುಃಖವನ್ನು ಅನುಭವಿಸುವದಕ್ಕಾಗಿ ಮಾತ್ರವೇ ವ್ಯರ್ಥವಾಗಿ ಅವಿವೇಕದಿಂದ ಅಜ್ಞನಾದ ಆತ್ಮನಲ್ಲಿ ಕರ್ತೃತ್ವ ಭೋಕ್ತೃತ್ವಾದಿ ರೂಪ ವಾಸನೆಯನ್ನು ಅಭಿವೃದ್ಧಿಪಡಿಸಿಕೊಂಡಿರುವಿರಿ.

ವಾಸನಾದ್ಯಾ ದೃಶಃ ಸರ್ವಾ ವ್ಯತಿರಿಕ್ತಾಸ್ತು ನಾತ್ಮನಃ ।
ಜಲಾದಿವ ತರಂಗಾದ್ಯಾ ಜ್ಞಸ್ಯೈವಾನ್ಯಸ್ಯ ನಾನಘ ॥ ೬೩ ॥

ತೃಷ್ಣಯೈವ ವಿನಷ್ಟಾಃ ಸ್ಥ ವ್ಯರ್ಥಮಿಂದ್ರಿಯಬಾಲಕಾಃ ।
ಕೋಶಕಾರಕುಕೃಮಯಸ್ತಂತುನೇವ ಸ್ವಯಂಭುವಾ ॥ ೬೪ ॥

---

೬೩. ನೀರಿನ ಮೇಲೆ ಕಾಣುವ ತರಂಗ ಫೇನ ಬುದ್ಬುದ (ಅಲೆ, ನೊರೆ, ಬೊಬ್ಬೆ) ಮುಂತಾದವು. ಜಲಕ್ಕಿಂತ ವ್ಯತಿರಿಕ್ತವಾದವುಗಳೆಂದು ಮೂಢರು ಅವಿವೇಕದಿಂದ ತಿಳಿದಿರುವರು. ಆದರೆ ಪ್ರಾಜ್ಞರು ಅವುಗಳೆಲ್ಲ ಜಲವೇ ಹೊರತು ಜಲಕ್ಕಿಂತ ವ್ಯತಿರಿಕ್ತವಾದವುಗಳು ಅಲ್ಲವೇ ಅಲ್ಲವೆಂದು ನಿಶ್ಚಿತವಾಗಿ ತಿಳಿದಿರುವರು. ಇದರಂತೆಯೇ, ಈ ಕರ್ತೃತ್ವ ಭೋಕ್ತೃತ್ವಾದಿ ರೂಪ ವಾಸನೆಗಳೂ ಅವುಗಳ ಕಾರ್ಯಗಳಾದ ರಾಗ ದ್ವೇಷ ಪ್ರವೃತ್ತಿ ನಿವೃತ್ತಿ ಇತ್ಯಾದಿ ವ್ಯಾವಹಾರಿಕ ದೃಷ್ಟಿಗಳೆಲ್ಲ ಜ್ಞಾನಬಂಧಿತಗಳಾಗಿರುವ ಕಾರಣ ಶುದ್ಧನಾದ ಆತ್ಮನಿಗಿಂತ ವ್ಯತಿರಿಕ್ತಗಳಾಗಿಲ್ಲವೆಂದು ಜ್ಞಾನಿಗೆ ಮಾತ್ರವೇ ಅನುಭವಗೋಚರವಾಗುವವೇ ಹೊರತು ಅಜ್ಞನಿಗೆ ಎಂದಿಗೂ ಗೋಚರವಾಗುವದಿಲ್ಲ.

(ಜ್ಞಾನಿಗೆ ಸ್ವಾತ್ಮವ್ಯತಿರಿಕ್ತವಾದುದೆಲ್ಲ ತತ್ತ್ವಜ್ಞಾನದಿಂದ ಬಂಧಿತವಾಗಿ ಮಿಥ್ಯಾಭೂತವೆಂದು ನಿಶ್ಚಿತವಾಗಿರುವದು. ಭೇದದೃಷ್ಟಿಗಳೆಲ್ಲ ನಿಶ್ಶೇಷವಾಗಿ ನಾಶ ಹೊಂದುವವು. "ಸರ್ವಂ ಖಲ್ವಿದಂ ಬ್ರಹ್ಮ" "ಇದೆಲ್ಲವೂ ಬ್ರಹ್ಮವೇ" ಎಂದು ದೃಢಪಟ್ಟಿರುವದು. ಆದುದರಿಂದಲೇ ಜ್ಞಾನಿಗಳಿಗೆ ಈ ಪ್ರಪಂಚವೂ ಮತ್ತೂ ವ್ಯವಹಾರಗಳೂ ಇವು ಯಾವದೊಂದೂ ಆತ್ಮವ್ಯತಿರಿಕ್ತವಾಗಿಲ್ಲವೇ ಇಲ್ಲ. ಎಲ್ಲವೂ ಆತ್ಮನೇ ಆಗಿಬಿಟ್ಟಿರುವದು ಎಂದು ತಾತ್ಪರ್ಯ. ಮೂಲದಲ್ಲಿ ಶ್ಲೋಕದ ಕೊನೆಯ ಪದವು ಅನಘ ಎಂದಿರುವದು. ಸಂಬುದ್ಧ್ಯಂತವಾದ ಆ ಪದವನ್ನು ಹೇಗೂ ಅನ್ವಯ ಮಾಡಲಾಗುವದಿಲ್ಲ. ಆದುದರಿಂದ ಅನಘಾತ್ ಎಂದು ತಿದ್ದಿ ಅದನ್ನು ಆತ್ಮನಃ ಎಂಬ ದ್ವಿತೀಯ ಪಾದಾಂತ್ಯ ಪದಕ್ಕೆ ವಿಶೇಷಣವಾಗಿಟ್ಟು ಅರ್ಥಮಾಡಿದೆ.)

೬೪. ಎಲೈ ಇಂದ್ರಿಯಗಳೆಂಬ (ಅವಿವೇಕಿ) ಬಾಲಕರೇ, ರೇಷ್ಮೆ ಹುಳಗಳು ತಾವೇ ತಮ್ಮ ಜೊಲ್ಲಿನಿಂದಲೇ ನಿರ್ಮಿಸಿಕೊಂಡ ದಾರ (ತಂತು) ಗಳಿಂದ ತಮ್ಮನ್ನು ಕಟ್ಟಿ ಹಾಕಿಕೊಂಡು ಕೊನೆಗೆ ಅದರಿಂದ ಅಲ್ಲಿಯೇ ಸಾಯುವಂತೆ ನೀವು ನಿಮ್ಮೊಳಗೇ

ತೃಷ್ಣಯೈವೇಹ ಲುಠಥ ಜರಾಮರಣಸಂಕಟೇ |
ಭ್ರಮದೃಷ್ಟ್ಯೇವ ಶಿಖರಿಪಥಿಕಾಃ ಶ್ವಭ್ರಭೂಮಿಷು || ೬೫ ||

ವಾಸನೈವೇಹ ಭವತಾಂ ಹೇತುರೇಕತ್ರ ಬಂಧನೇ |
ರಜ್ಜುಃ ಶೂನ್ಯಾಶಯಪ್ರೋತಾ ಮುಕ್ತಾನಾಮಾತತಾ ಯಥಾ || ೬೬ ||

ಕಲ್ಪನಾಮಾತ್ರಕಲಿತಾ ಸತ್ಯೈಷಾ ಹಿ ನ ವಸ್ತುತಃ |
ಅಸಂಕಲ್ಪನಮಾತ್ರೇಣ ದಾತ್ರೇಣೇವ ವಿಲೂಯತೇ || ೬೭ ||

ಉದ್ಭವಿಸಿದ ತೃಷ್ಣೆಯಿಂದ (ಭೋಗಾಭಿಲಾಷೆಯಿಂದ) ಬದ್ಧರಾಗಿ ವ್ಯರ್ಥವಾಗಿಯೇ ವಿನಾಶಹೊಂದಿರುವಿರಿ.

೬೫. ಎಲೈ ಇಂದ್ರಿಯಗಳೇ, ಪರ್ವತ ಶಖರಗಳಲ್ಲಿ ಸಂಚರಿಸುತ್ತಿರುವ ಜನರು ಅಕಸ್ಮಾತ್ತಾಗಿ ಪಿತ್ತೋದ್ರೇಕದಿಂದ ಕಣ್ಣುಗಳು ಗಿರ‍್ರನೆ ಸುತ್ತುತ್ತಿರುವಾಗ ಕಣ್ಣು ಕಾಣದೆ ಶಿಖರದ ತುದಿಯಿಂದ ಕೆಳಕ್ಕೆ ಬಿದ್ದು ಹಳ್ಳಕೊಳ್ಳಗಳಲ್ಲಿ ಸಿಕ್ಕಿಕೊಂಡು ಅಲ್ಲಿಂದ ಮೇಲಕ್ಕೆ ಏಳಲಾರದೆ ಅಲ್ಲಿಯೇ ಹೊರಳಾಡುತ್ತಾ ನರಳುವಂತೆ ನೀವೂ ಈ ತೃಷ್ಣೆಯಿಂದಲೇ ಭ್ರಾಂತರಾಗಿ ಕಂಗೆಟ್ಟು ಈ ಸಂಸಾರದಲ್ಲಿ ಜನನ ಜರಾಮರಣ ಗಳೆಂಬ ಶಿಲಾಕಂಟಕ ಪ್ರಚುರವಾದ ವಿಷಮ ಸಂಕಟಗಳಲ್ಲಿ ಸಿಕ್ಕಿಕೊಂಡು ತಪ್ಪಿಸಿ ಕೊಳ್ಳುವ ಉಪಾಯವನ್ನು ಕಾಣದೆ ದಿಙ್ಮೂಢರಾಗಿ ಹೊರಳಾಡುತ್ತಿರುವಿರಿ.

೬೬. ರಂಧ್ರಗಳನ್ನು ಕೊರೆದಿರುವ ಮುತ್ತುಗಳ ಮಧ್ಯದಲ್ಲಿ ಪವಣಿಸಲ್ಪಟ್ಟಿ ರುವ ಉದ್ದವಾದ ತಂತುವೇ ಎಲ್ಲೆಲ್ಲಿಯೋ ಇದ್ದಂಥ ಆ ಮುತ್ತುಗಳನ್ನೆಲ್ಲ ಒಟ್ಟಿಗೆ ಒಂದೇ ಸರದಲ್ಲಿ ಕಟ್ಟಿ ಬಂಧಿಸುವದಕ್ಕೆ ಹೇಗೆ ಕಾರಣವಾಗಿರುವದೋ ಹಾಗೆಯೇ ಎಲೈ ಇಂದ್ರಿಯಗಳೇ, ಪ್ರತ್ಯೇಕವಾಗಿ ಇರುವ ನಿಮ್ಮನ್ನೆಲ್ಲ ಒಟ್ಟುಗೂಡಿಸಿ ಈ ಸಂಸಾರದಲ್ಲಿ ಒಂದೇ ಕಡೆಯಲ್ಲಿ ಬಂಧಿಸಿ ಕಟ್ಟಿಹಾಕಿರುವದಕ್ಕೆ ಈ ವಾಸನೆಯೇ ಕಾರಣವಲ್ಲದೆ ಮತ್ತಾವುದೂ ಅಲ್ಲವು.

೬೭. ಈ ವಾಸನೆಯೆಂಬ ತಂತುವು ಕೇವಲ ಭ್ರಾಂತಿಮಯವಾದ ಕಲ್ಪನಾ

ಏಷಾ ಹಿ ಭವತಾಮೇವ ವಿಮೋಹಾಯ ಕ್ಷಯಾಯ ಚ |
ವಾತಲೇಖೇವ ದೀಪಾನಾಂ ಸ್ಫುರತಾಮಪಿ ತೇಜಸಾಂ || ೬೮ ||

ಹೇ ಚಿತ್ತ ಸರ್ವೇಂದ್ರಿಯಕೋಶ ತಸ್ಮಾ
ತ್ಸವೇಂದ್ರಿಯೈರೈಕ್ಯಮುಪೇತ್ಯ ನೂನಂ
ಆಲೋಕ್ಯ ಚಾತ್ಮಾನಮಸತ್ಸ್ವರೂಪಂ
ನಿರ್ವಾಣಮೇವಾಮಲಬೋಧಮಾಸ್ಸ್ವ || ೬೯ ||

ಮಾತ್ರದಿಂದಲೇ ಸಂಪಾದಿತವಾಗಿ, ಸತ್ಯವಾಗಿರುವಂತೆ ತೋರುವದು. ವಸ್ತುತಃ ಇದು ಸತ್ಯವಲ್ಲ. ಒಂದು ಚೂರಿ (ಕತ್ತಿ) ಯಿಂದ ತಂತುವನ್ನು ಸುಲಭವಾಗಿ ಕತ್ತರಿಸಬಹುದಾಗಿರುವಂತೆ, ಸಂಕಲ್ಪ ಪರಿತ್ಯಾಗ ಮಾತ್ರದಿಂದಲೇ ಈ ವಾಸನೆಯನ್ನು ಅನಾಯಾಸವಾಗಿ ಕತ್ತರಿಸಬಹುದಾಗಿದೆ.

೬೮. ಎಲೈ ಇಂದ್ರಿಯಗಳೇ, ಮೇಲಿಂದ ಮೇಲೆ ಬೀಸುತ್ತಾ ಕ್ರಮೇಣ ವೃದ್ಧಿ ಹೊಂದಿದ (ಬಲಗೊಂಡ) ಗಾಳಿಯು ದೊಡ್ಡ ದೊಡ್ಡ ದೀಪಗಳನ್ನೂ ಅತಿ ಪ್ರಕಾಶಗಳಾದ(ವಿದ್ಯುತ್ ಮೊದಲಾದ) ತೇಜಸ್ಸುಗಳನ್ನೂ ಕೂಡ ಆರಿಸಿಬಿಡುವಂತೆ ಈ ಅಹಂಕಾರ ವಾಸನೆಯು ವೃದ್ಧಿ ಹೊಂದುತ್ತಾ ಬಂದ ಹಾಗೆಲ್ಲ ಅಂತಃಕರಣ ಸಹಿತವಾಗಿ ನಿಮ್ಮನ್ನು (ಇಂದ್ರಿಯಗಳನ್ನು) ವಿಶೇಷ ಮೋಹಗೊಳಿಸಿ ಕೊನೆಗೆ ಮರಣಾದಿ ದುಃಖಗಳಿಗೆ ಗುರಿಪಡಿಸಿ ಸರ್ವನಾಶವನ್ನುಂಟು ಮಾಡಿ ಬಿಡುವದು.

೬೯. ಈ ಕಾರಣಗಳಿಂದ, ಸಕಲೇಂದ್ರಿಯಗಳಿಗೂ ಸಿಧಿಯಂತೆ ಆಧಾರವಾಗಿರುವ ಎಲೈ ಚಿತ್ತವೇ, ನೀನು ನಿನ್ನ ಅನುಚರಗಳಾದ ಸರ್ವೇಂದ್ರಿಯಗಳೊಡನೆಯೂ ಕೂಡಿ ಐಕಮತ್ಯವನ್ನು ಹೊಂದಿ ನಿಶ್ಚಯವಾಗಿಯೂ ನಿನ್ನ ಸ್ವರೂಪವು ಅಸತ್ತಾದುದೇ (ಮಿಥ್ಯಾಭೂತ) ಸರಿಯೆಂದು ತತ್ತ್ವತಃ ನಿರ್ಧರಿಸಿಕೊಂಡು ಬಳಿಕ ಸಕಲ ದೋಷ (ಅವಿದ್ಯಾದಿ) ಗಳಿಂದ ಸದಾ ಅಸಂಸ್ಪೃಷ್ಟವಾಗಿಯೂ ಸರ್ವಸಾಕ್ಷಿಯಾಗಿಯೂ ಸದಾನಂದರೂಪವಾಗಿಯೂ ಇರುವ ಶುದ್ಧ ಕೇವಲ ಚೈತನ್ಯ (ಜ್ಞಾನ) ವಾಗಿದ್ದುಬಿಡು. ಪುನಃ ಚಿತ್ತರೂಪವನ್ನು ಹೊಂದಬೇಡ.

ವಿಷಯವಿಷವಿಷೂಚಿಕಾಮನಂತಾಂ
ನಿಪುಣಮಹಂ ಸ್ಥಿತಿವಾಸನಾಮುಪಾಸ್ಯ |
ಅಭಿಮತಪರಿಹಾರಮಂತ್ರಯುಕ್ತ್ಯಾ
ಭವ ವಿಭವೋ ಭಗವರ್ಜಭಿಯಾಮಭೂಮಿಃ || ೭೦ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ಉಪಶಮಪ್ರಕರಣೇ "ಉದ್ದಾಲಕವಿಚಾರೋ" ನಾಮ
ದ್ವಿಪಂಚಾಶಃ ಸರ್ಗಃ

---

೭೦. ಎಲೈ ಚಿತ್ತವೇ, ಅನಂತ ದುಃಖನಿದಾನವಾದ ಅಹಂಕಾರವಾಸನೆಯೆಂಬುದೇ ಅತ್ಯಂತ ವಿಷಮವಾದ ವಿಷದಿಗ್ಧವಾದ ವಿಷೂಚಿಕೆಯಿಂದು (ಸೂಜಿ) ವಿಚಾರ ಕುಶಲವಾದ ವಿವೇಕ ಬಲದಿಂದ ಸ್ಪಷ್ಟವಾಗಿ ಅವಧರಿಸು. (ದ್ವೈತವಾಸನಾ ಪರಿಹಾರಾತ್ಮಕ) ಅಭಿಮತ ವಸ್ತುಗಳನ್ನು ಪರಿಹರಿಸುತ್ತ ಬರುವಿಕೆಯೇ ಈ ಅಹಂಕಾರ ವಾಸನೆಯೆಂಬ ಸೂಜಿಯನ್ನು ನಿಗ್ರಹಿಸುವದಕ್ಕೆ ತಕ್ಕ ಮಂತ್ರರೂಪ ಯುಕ್ತಿಯು. ಇಂತಹ ಮಂತ್ರ ಶಕ್ತಿಯೆಂಬ ಉಪಾಯದಿಂದ ಅಪಾಯಕರವಾದ ಅಹಂಕಾರ ವಾಸನಾರೂಪ ವಿಷಮಯ ವಿಷೂಚಿಕೆಯನ್ನು ತೊಲಗಿಸಿ ಬಿಟ್ಟು ತರುವಾಯ ಸಂಸಾರ ವಿನಿರ್ಮುಕ್ತನಾಗಿ ಜನನ ಮರಣಾದಿ ಸರ್ವವಿಧ ಭಯ ಭ್ರಾಂತಿಗಳಿಗೂ ಅನಾಸ್ಪದವಾದ ಸಾಕ್ಷಾತ್ ಪರಿಪೂರ್ಣಾನಂದಾತ್ಮನಾಗಿಯೇ ಇರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ಉಪಶಮ ಪ್ರಕರಣದಲ್ಲಿ "ಉದ್ದಾಲಕವಿಚಾರ" ಎಂಬ
ಐವತ್ತೆರಡನೆಯ ಸರ್ಗವು

ತ್ರಿಪಂಚಾಶಃ ಸರ್ಗಃ

ಉದ್ದಾಲಕ ಉವಾಚ—
ಅಪಾರಪರ್ಯಂತವಪುಃ ಪರಮಾಣ್ವಣುರೇವ ಚ |
ಚಿದಚೇತ್ಯಾ ತದಾಕ್ರಾಂತೌ ನ ಶಕ್ತಾ ವಾಸನಾದಯಃ || ೧ ||

ಐವತ್ತಮೂರನೆಯ ಸರ್ಗ

೧. ಉದ್ದಾಲಕನು ಹೇಳಿದನು—ಕೇವಲವಾದ ಶುದ್ಧ ಚೈತನ್ಯವು (ಮುಂದೆ ಹಿಂದೆ) ಉಭಯ ಪಾರ್ಶ್ವಗಳು ಎಂಬ ನಾಲ್ಕು ಕಡೆಗಳಲ್ಲಿಯೂ ಅವಧಿಯಿಲ್ಲದ, ಅಪಾರವಾದ, ಸರ್ವವಿಧ ಪರಿಚ್ಛೇದವಾದುದು. ಪರಮಾಣುವಾದ ಅಪಂಚಾಕೃತ ಆಕಾಶ (ಅವ್ಯಾಕೃತಾಕಾಶ) ಕ್ಕಿಂತಲೂ ಕೂಡ ಸೂಕ್ಷ್ಮತಮವಾದುದು. ಇಂತಹ ಚಿತ್ತನ್ನು ಆಕ್ರಮಿಸುವ ವಿಷಯದಲ್ಲಿ ವಾಸನಾದಿಗಳು ಸರ್ವಥಾ ಅಸಮರ್ಥಗಳಾಗಿರುವವು. ಸಕಲ ಚೇತ್ಯಗಳೂ (ಚೇತನೀಯ=ಚಿತ್ತಿಗೆ ವಿಷಯವಾದ ಜಡವಸ್ತುಗಳು) ಅತ್ಯಂತಾಸತ್ತಾದ ಕಾರಣ, ಪರಮಾರ್ಥಸತ್ಯವಾದ ಚಿತ್ತಿಗೂ, ಚೇತ್ಯಗಳಿಗೂ ಯಾವ ಸಂಬಂಧವೂ ಇಲ್ಲವು. ಆದುದರಿಂದ ಚೇತ್ಯಗಳ ಮೂಲಕವೂ ಕೂಡ, ಈ ವಾಸನಾದಿಗಳು ಚಿತ್ತನ್ನು ಆಕ್ರಮಿಸುವಿಕೆಯೂ ಅತ್ಯಾಂತಾಸಂಭವವಾದುದೇ ಸರಿ.

[ಲೋಕದಲ್ಲಿ ಪರಿಚ್ಛಿನ್ನ ವಸ್ತುಗಳಾದ ತಿಲಾದಿಗಳು ಪುಷ್ಪಾದಿಗಳ ವಾಸನೆಯಿಂದ ವಾಸನಾಮಯವಾಗುವವು. ಹಾಗೆಯೇ ಸ್ಥೂಲಗಳಾದ ಪೃಥಿವೀ, ಜಲ, ತೇಜಸ್ಸು, ವಾಯುಗಳು ಕಸ್ತೂರಿ ಮುಂತಾದ ವಸ್ತುಗಳಿಂದ ವಾಸಿತವಾಗುವವು. ಆತ್ಮಚೈತನ್ಯವಾದರೋ ಪರಿಚ್ಛಿನ್ನವೂ ಅಲ್ಲ, ಸ್ಥೂಲವೂ ಅಲ್ಲ. ಆದಕಾರಣ, ಆತ್ಮಚಿತ್ತನ್ನು ಆಕ್ರಮಿಸುವ ಸಾಮರ್ಥ್ಯವು ವಾಸನಾದಿಗಳಿಗೆ ಸರ್ವಾತ್ಮನಾ ಇಲ್ಲವೆಂದು ತಾತ್ಪರ್ಯ.]

ಮನಃಶೇಮುಷ್ಯಹಂಕಾರಪ್ರತಿಬಿಂಬೈರ್ಜಡೇಂದ್ರಿಯೈಃ |
ವಾಸನಾವಿತತಾಃ ಶೂನ್ಯಾ ವೇತಾಲತ್ರಾಸನೋದ್ಯತಾಃ || ೨ ||

ತತ್ಕೃತೇಭ್ಯೋ ವಿಚಾರೇಭ್ಯೋಽನುಭೂತೇಭ್ಯೋಽಪಿ ಭೂರಿಶಃ |
ಭೂಯೋಽಪ್ಯನುಭವತ್ಯಂತರಹಂ ಹಿ ಚಿದಲೇಪಿಕಾ || ೩ ||

ಸ್ವಾದುಭಿರ್ವಾಪೋಪರಚಿತಾಂ ದೇಹಃ ಸಂಸಾರಸಂಸ್ಥಿತಿಂ |
ಗೃಹ್ಣಾತ್ವಥ ತ್ಯಜತು ವಾಪ್ಯಹಂ ಹಿ ಚಿದಲೇಪಿಕಾ || ೪ ||

---

೨. ಜಡಗಳಾದ ಇಂದ್ರಿಯಗಳು ಶಬ್ದಾದಿ ವಿಷಯಗಳನ್ನು ಸ್ವೀಕರಿಸುವವು. ಅವುಗಳು ಬುದ್ಧಿಯಲ್ಲಿಯೂ ಮತ್ತು ಅಹಂಕಾರದಲ್ಲಿಯೂ ಚಿತ್ಪ್ರತಿಬಿಂಬಗಳಾಗಿ ಪ್ರತಿಫಲಿಸುವವು. ಅದೇ ಕಾರಣವಾಗಿ ಆಯಾ ವಾಸನೆಗಳು ಪ್ರಕಟವಾಗುವವು. ಆದರೂ ಈ ವಾಸನೆಗಳು ಬೇತಾಳಗಳಂತೆ ಕೇವಲ ಭ್ರಾಂತಿಕಲ್ಪಿತಗಳ ಅತ್ಯಂತಾ ಸತ್ಯಗಳು. ಆದರೂ ಮಹಾಭಯ ಪ್ರದಗಳು.

೩. ಅನೇಕಸಲ ಬಹುವಾಗಿ ಮಾಡಿದ ವಿಷಯ ವಿಚಾರಗಳಿಂದಲೂ, ಪುನಃ ಸ್ವಪ್ನದಲ್ಲಿಯೂ [ಕೂಡ, ನಾಡೀರಂಧ್ರಗಳೊಳಗಡೆ ವಾಸನಾಮಯಗಳೇ ಆದ ಆ ವಿಷಯಗಳನ್ನು ಅದೇ ಮನಸ್ಸು ಅನುಭವಿಸುವದು. ಹೀಗೆ ಬುದ್ಧಿಯಿಂದಲೂ, ಅಹಂಕಾರದಿಂದಲೂ ಪ್ರಕಟಿತವಾಗಿ ಮನಸ್ಸಿನಿಂದ ಅನುಭೂತವಾದ ವಾಸನಾದಿ ಗಳಿಂದ ನಿರ್ಲಿಪ್ತನೂ ಶುದ್ಧ ಚಿದ್ರೂಪನೂ ಆದ ನನಗೆ ಯಾವ ಲೇಪವೂ ಹೇಗೂ ಸಂಭವಿಸುವದೇ ಇಲ್ಲ.

["ಸಯತ್ ತತ್ರ ಕಿಂಚಿತ್ ಪಶ್ಯತಿ, ಅನನ್ವಾಗತಃ ತೇನ ಭವತಿ ಅಸಂಗೋ ಹ್ಯಯಂ ಪುರುಷಃ" ಇತ್ಯಾದಿ ಬೃಹದಾರಣ್ಯಕ ಶ್ರುತಿಯು ಇದೇ ಮೇಲಣ ಅರ್ಥ ವನ್ನು ಸಮರ್ಥಿಸುವದು.]

೪. ಈ ದೇಹವು ತನ್ನ ದುಶ್ಚೇಷ್ಟೆಗಳಿಂದ ತಾನಾಗಿಯೇ ರಚಿಸಿಕೊಂಡ ಸಂಸಾರಸ್ಥಿತಿಯನ್ನು ಬೇಕಾದರೆ ಸ್ವೀಕರಿಸಲಿ ಅಥವಾ ಬೇಡವಾದರೆ ಬಿಟ್ಟುಬಿಡಲಿ. ನಾನೇನೋ ಸದಾ ನಿರ್ಲಿಪ್ತನಾದ ಶುದ್ಧ ಚಿದಾತ್ಮನೇ ಆಗಿರುವೆನು. ಇಂತಹ ನನಗೆ ದೇಹಧರ್ಮಗಳ ಲೇಪವೂ ಇಲ್ಲವೇ ಇಲ್ಲ.

ಚಿತೋ ನ ಜನ್ಮಮರಣೇ ಸರ್ವಗಾಯಾಶ್ರಿತಃ ಕಿಲ |
ಕಿಂನಾಮ ಮ್ರಿಯತೇ ಜಂತುರ್ಮಾರ್ಯತೇ ಕೇನ ವಾಪಿ ಕಿಂ ‖ ೫ ‖

ಚಿತೋ ನ ಜೀವತೇನಾರ್ಥಃ ಸರ್ವಾತ್ಮಾ ಸರ್ವಜೀವಿತಂ |
ಕಿಂ ಪ್ರಾಪ್ಸ್ಯತಿ ಕದಾತ್ಮೈಷಾ ಪ್ರಾಯತಾ ಯದಿ ಜೀವಿತಂ ‖ ೬ ‖

---

೫. ಆದುದರಿಂದಲೇ ಚಿದ್ರೂಪನಾದ ನನಗೆ ಜನನ ಮರಣಾದಿ ಯಾವ ವಿಕಾರಗಳೂ ಇಲ್ಲ. (ಸರ್ವಗತನಾಗಿಯೂ ಕೇವಲ ಚಿದ್ರೂಪನಾಗಿಯೂ ಇರುವ ಕಾರಣದಿಂದಲೇ ಆತ್ಮನಿಗೆ ಜನನ ಮರಣಗಳ ಪ್ರಸಕ್ತಿಯೂ ಇಲ್ಲ.) ಹೀಗಿರುವಾಗ ಯಾವನಾದರೂ ಸಾಯುವನೇನು? ಅಥವಾ ಬೇರೆ ಯಾವನಾದರೂ ಕೊಲ್ಲಲ್ಪಡುವನೇನು ?

[ನಾಯಂ ಹಂತಿ ನ ಹನ್ಯತೇ—ಗೀತಾ ೨-೧೯ ಕೊನೆಯ ಪಾದ.

ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್ (ಕದಾಚಿತ್). ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ ನಹನ್ಯತೇ ಹನ್ಯಮಾನೇ ಶರೀರೇ—ಗೀತಾ ೨-೨೦.

ದೇಹೀ ನಿತ್ಯಮವಧ್ಯೋಽಯಂ—ಗೀತಾ ೨-೩೦ ಇತ್ಯಾದಿ.]

[ಅವಿನಾಶಿಯೂ, ನಿತ್ಯನೂ, ಅದ್ವಿತೀಯನೂ ಆದ ಆತ್ಮದರ್ಶನದಿಂದ ವಧ್ಯ ಘಾತುಕಾದಿ ಭೇದಬುದ್ಧಿಯು ನಿರ್ವಿಷಯವಾಗಿಬಿಡುವದರಿಂದ ಆತ್ಯಂತಿಕಾಭಯ ಸ್ಥಿತಿಯು ಸಿದ್ಧಿಸುವದು.]

೬. ಸರ್ವಕ್ಕೂ ಆತ್ಮವು ಚಿತ್. ಅದೇ ಸರ್ವ ವಸ್ತುಗಳ ಜೀವಿತವು. ಆದುದರಿಂದ ಸರ್ವ ದೇಶಕಾಲ ವಸ್ತುಗಳಲ್ಲಿ ಅತಿ ವಿಸ್ತೃತವಾಗಿ ಸರ್ವವ್ಯಾಪಿಯಾದ ಸ್ವರೂಪ ಚಿತ್ತೇ ಸರ್ವಕ್ಕೂ ಜೀವಿತವಾಗಿರುವಾಗ ಈ ಆತ್ಮನು ಯಾವಾಗ ತನಗೆ ಅಪ್ರಾಪ್ತವಾಗಿರುವ ಯಾವ ಬೇರೆ ಅರ್ಥವನ್ನು ಆ ಜೀವಿತದಿಂದ ಪಡೆಯಬೇಕಾಗಿರುವದು ?

[ಅಂದರೆ-ಚಿತ್ತಿಗೆ ಈಗ ಅಪ್ರಾಪ್ತವಾಗಿ ಇನ್ನುಮುಂದೆ ಜೀವಿತದಿಂದ ಪ್ರಾಪ್ಯವಾಗಬೇಕಾದ ಯಾವ ಪ್ರಯೋಜನವೂ ಇಲ್ಲ. ಜೀವಿತದ ಅವಶ್ಯಕತೆಯೂ ಇಲ್ಲವೇ ಇಲ್ಲ. ಯಾರಿಗೆ ಜೀವಿತದಿಂದ ಪ್ರಯೋಜನವಿರುವದೋ ಅವನಿಗೆ ಜೀವಿತವು ಅವಶ್ಯವಾಗಿಬೇಕು.]

ಜೀವ್ಯತೇ ಮ್ರಿಯತೇ ಚೇತಿ ಕುವಿಕಲ್ಪಕಶಾಲಿನೀ |
ಕಲನಾ ಮನಸಾಮೇವ ನಾತ್ಮನೋ ವಿಮಲಾತ್ಮನಃ || ೭ ||

ಯೋ ಹ್ಯಹಂಭಾವತಾಂ ಪ್ರಾಪ್ತೋ ಭಾವಾಭಾವೈಃ ಸ ಗೃಹ್ಯತೇ |
ಆತ್ಮನೋ ನಾಸ್ತ್ಯಹಂಭಾವೋ ಭಾವಾಭಾವಾಃ ಕುತೋಽಸ್ಯ ತೇ || ೮ ||

ಅಹಂಭಾವೋ ಮುಧಾ ಮೋಹೋ ಮನಶ್ಚ ಮೃಗತೃಷ್ಣಿಕಾ |
ಜಡಃ ಪದಾರ್ಥಸಂಸಾರಃ ಕಸ್ಯಾಹಂಕಾರಭಾವನಾ || ೯ ||

---

೭. "ಇವನು ಜೀವಿಸಿರುವನು-ಅವನು ಸಾಯುವನು" ಎಂಬೀ ಮೊದಲಾದ ಅತ್ಯಂತ ಜುಗುಪ್ಸಿತವಾದ ನೀಚವಿಕಲ್ಪ ಜಾಲಗಳಿಂದ ದುರ್ಭೇದ್ಯವಾದ, ಜನನ ಮರಣಾದಿ ರೂಪ ಭಾವನೆಗಳೆಲ್ಲವೂ ಮನಸ್ಸುಗಳಿಗೇ ಉಂಟಾಗುವವು. ಅವಿದ್ಯಾದಿ ದೋಷರಹಿತನಾದ ಶುದ್ಧ ಚಿದ್ರೂಪನಾದ ಆತ್ಮನಿಗೆ ಎಂದಿಗೂ ಸಂಭವಿಸುವದಿಲ್ಲ. ಆದ್ದರಿಂದ ಮನಸ್ಸಿನ ಕಲ್ಪನಾಮಾತ್ರಗಳಾದ ಜೀವನ ಮರಣಗಳಲ್ಲಿ ಆತ್ಮನಿಗೆ ಇಚ್ಛಾದ್ವೇಷಗಳ ಪ್ರಸಕ್ತಿಯೂ ಇಲ್ಲವು.

೮. ಯಾವ ಅಜ್ಞನು ಭ್ರಾಂತಿಯಿಂದ "ದೇಹವೇ ನಾನು" ಎಂದು ಭಾವಿಸಿ, ದೇಹದಲ್ಲಿ ಅಹಂಭಾವನೆಯುಳ್ಳವನಾಗಿರುವನೋ, ಅವನನ್ನು ಜನನ ಮರಣಾದಿ ದೇಹಧರ್ಮಗಳು ಬಿಡದೆ ಬೆನ್ನುಹತ್ತುವವು. ಆತ್ಮನಿಗೆ ಈ ಅಹಂಭಾವವೇ ಇಲ್ಲ. ಹೀಗಿರುವಾಗ, ಇನ್ನು ದೇಹಧರ್ಮಗಳಾದ ಜನನಮರಣಗಳು ಆತ್ಮನಿಗೆ ಎಲ್ಲಿಂದ ಬರುವವು?

೯. ಅಹಂಭಾವವೆಂಬುದು ನಿರರ್ಥಕವಾಗಿಯೇ ಅಜ್ಞಾನ ವಿಜೃಂಭಿತವಾದ ಭ್ರಾಂತಿ ಕಲ್ಪನೆಯು. ಮನಸ್ಸೂ ಕೂಡ ಮೃಗತೃಷ್ಣೆಯೇ ಸರಿ. (ಎರಡೂ ಅಂದರೆ ಮನಸ್ಸೂ ಮೃಗತೃಷ್ಣೆಯೂ ಅತ್ಯಂತಾಸದ್ವಸ್ತುಗಳು=ಭೂತ ಭವಿಷ್ಯದ್ವ ರ್ತಮಾನ ಕಾಲಗಳಲ್ಲಿ ಯಾವಾಗಲೂ ಇಲ್ಲದುದು. ಹೀಗೆ ಎರಡೂ ಸಮಾನ ಧರ್ಮಿಗಳಾದುದರಿಂದ ಅಭೇದವಾಗಿ ನಿರ್ದಿಷ್ಟವಾಗಿವೆ.) ಮಿಕ್ಕ ವಸ್ತುಗಳ ಸಮು ದಾಯವಾದರೋ ಅತ್ಯಂತ ಜಡವು. ಆದಕಾರಣ ಈ ಮೂರಕ್ಕೂ ಅಹಂಕಾರ ಭಾವನೆಯು ಉಪಪನ್ನವಾಗುವದಿಲ್ಲ. ಅಂದಮೇಲೆ ಮತ್ತೆ ಬೇರೆ ಯಾವದಕ್ಕೆ ಇರಬಹುದು ?

ರಕ್ತಮಾಂಸಮಯೋ ದೇಹೋ ಮನೋ ನಷ್ಟಂ ವಿಚಾರಣಾತ್ |
ಜಡಾಶ್ಚಿತ್ತಾದಯಃ ಸರ್ವೇ ಕುತೋಽಹಂಭಾವಭಾವನಾ ॥ ೧೦ ॥

ಆತ್ಮಂಭರಿತಯಾ ನಿತ್ಯಮಿಂದ್ರಿಯಾಣಿ ಸ್ಥಿತಾನ್ಯಲಂ |
ಪದಾರ್ಥಾಶ್ಚ ಪದಾರ್ಥತ್ವೇ ಕುತೋಽಹಂಭಾವಭಾವನಾ ॥ ೧೧ ॥

ಗುಣಾ ಗುಣಾರ್ಥೇ ವರ್ತಂತೇ ಪ್ರಕೃತೌ ಪ್ರಕೃತಿಃ ಸ್ಥಿತಾ|
ಸದೇವ ಸತಿ ವಿಶ್ರಾಂತಂ ಕುತೋಽಹಂಭಾವಭಾವನಾ ॥ ೧೨ ॥

---

೧೦. ಹಾಗೆಯೇ ದೇಹವನ್ನು ನೋಡಿದರೆ, ಅದು ಬರಿಯ ರಕ್ತಮಾಂಸಾದಿ ಮಯವಾಗಿರುವದು. ತತ್ತ್ವ ವಿಚಾರದಿಂದ ವಿವೇಕೋದಯವಾದಾಗ ಮನಸ್ಸೇ ಇಲ್ಲದಂತೆ ನಾಶಹೊಂದಿಬಿಡುವದು. ಚಿತ್ತ ಮುಂತಾದ ಸಕಲ ಇತರ ವಸ್ತುಗಳು ಸರ್ವಥಾ ಜಡಗಳು. ಇನ್ನು ಅಹಂಕಾರ ಭಾವನೆಯು ಯಾವದರ ದೆಸೆಯಿಂದ ಉಂಟಾಗಬೇಕು?

೧೧. ಚಕ್ಷುರಾದೀಂದ್ರಿಯಗಳು ಸರ್ವದಾ ತಮ್ಮ ತಮ್ಮ ವಿಷಯಗಳನ್ನು ಗ್ರಹಿಸುವ ವ್ಯಾಪಾರದಲ್ಲಿ ಮಾತ್ರವೇ ಸಂಪೂರ್ಣವಾಗಿ ಆಸಕ್ತಿಯನ್ನು ವಹಿಸಿ, ತಮ್ಮ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿರುವವೇ ಹೊರತು, ಅಹಂಕಾರವನ್ನು ಪೋಷಿಸುವಷ್ಟುಮಟ್ಟಿಗೆ ಔದಾರ್ಯವನ್ನು ಹೊಂದಿಲ್ಲ. ಇತರ ಪದಾರ್ಥಗಳು ತಮ್ಮತಮ್ಮ ಸ್ವಭಾವರೂಪಗಳನ್ನು ಬಿಡದೆ ಇದ್ದುಕೊಂಡಿವೆ. ಹಾಗಾದರೆ ಈ ಅಹಂಕಾರ ಭಾವನೆಯು ಎಲ್ಲಿಂದ ಬರಬೇಕು ?

೧೨. ಸತ್ವ, ರಜಸ್, ತಮಸ್, ಎಂಬ ಗುಣಗಳನ್ನು ವಿಚಾರಿಸೋಣವೆಂದರೆ ಅವುಗಳು ಕ್ರಮವಾಗಿ, ಪ್ರಕಾಶ, ಪ್ರವೃತ್ತಿ, ಮೋಹಗಳನ್ನುಂಟುಮಾಡುವ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿರುವವು. ಮಾಯೆಯನ್ನು ನೋಡಿದರೆ ಅದು ಗುಣ ತ್ರಯ ಸಾಮ್ಯಾವಸ್ಥೆಯೆಂಬ ಸ್ವಭಾವದಲ್ಲಿ ನಿಂತುಕೊಂಡಿದೆ. ಸದ್ರೂಪ ಬ್ರಹ್ಮವು ಸ್ವಸದ್ರೂಪದಲ್ಲಿಯೇ ಸದಾ ಸ್ವಸ್ಥವಾಗಿರುವದು. ಇನ್ನು ಈ ಅಹಂಕಾರ ಭಾವನೆಗೆ ಅವಕಾಶವಾವದು ? (ಆಧಾರವು ಯಾವದು ?)

ಸರ್ವಗಂ ಸರ್ವದೇಹಸ್ಥಂ ಸರ್ವಕಾಲಮಯಂ ಮಹತ್ ।
ಕೇವಲಂ ಪರಮಾತ್ಮಾನಂ ಚಿದಾತ್ಮೈವೇಹ ಸಂಸ್ಥಿತಃ ॥ ೧೩ ॥

ಏವಂ ಕಿಮಾಕೃತಿಃ ಕೋ ವಾ ಕಿಮಾದೇಶಶ್ಚ ಕಿಂಕೃತಃ ।
ಕಿಂ ರೂಪಃ ಕಿಮಯಃ ಕೋಽಹಂ ಕಿಂ ಗೃಹ್ಣಾಮಿ ತ್ಯಜಾಮಿ ಕಿಂ ॥ ೧೪ ॥

ತೇನಾಹಂ ನಾಮ ನೇಹಾಸ್ತಿ ಭಾವಭಾವೋಪಪತ್ತಿಮಾ೯ ।
ಅನಹಂಕಾರರೂಪಸ್ಯ ಸಂಬಂಧಃ ಕೇನ ಮೇ ಕಥಂ ॥ ೧೫ ॥

---

೧೩. ಈ ದೇಹದೊಳಗಿರುವ ಚಿದ್ರೂಪನಾದ ಆತ್ಮನು, ಸರ್ವಗತನೂ (ಸರ್ವವ್ಯಾಪೀ) ಸರ್ವಭೂತಗಳ ದೇಹಾಂತರ್ವರ್ತಿಯಾಗಿರುವವನೂ (ಸರ್ವಾಂತರ್ಯಾಮಿ) ಸರ್ವಕಾಲಮಯನೂ, ಮಹತ್ತಮನೂ (ಎಲ್ಲಕ್ಕಿಂತ ಬಹು ಹೆಚ್ಚು ದೊಡ್ಡವನೂ) ಅದ್ವಿತೀಯನೂ ಆಗಿರುವ, ಪರಮಾತ್ಮನನ್ನು ನಾನೇ ಎಂದು, (ಸೋಽಹಂ=ಪರಮಾತ್ಮನೇ ನಾನು, ಬೇರೆಯಲ್ಲ.) ಸರ್ವದಾ ಅನುಸಂಧಾನ ಮಾಡಿಕೊಂಡು ಆತ್ಮಾರಾಮನಾಗಿರುವ ಕಾರಣ, ಅವನೂ ಅಹಂಕಾರಾಸ್ಪದನಲ್ಲ.

೧೪. ಹೀಗೆ ಮೇಲೆ ಉದಹರಿಸಿದ ವಸ್ತುಗಳು ಯಾವವೂ ಅಹಂಕಾರಕ್ಕೆ ಆಸ್ಪದಗಳಲ್ಲದಿರಲು ಹಾಗಾದರೆ ಈ ಅಹಂಕಾರವೆಂಬುದು ಯಾವದು? ಇದರ ಆಕಾರವು ಹೇಗಿರುವದು? ಯಾವ ಜಾತಿಗೆ ಸೇರಿದುದು? ಅಥವಾ ಎಂತಹ ಸ್ಥಿತಿಯನ್ನುಳ್ಳದ್ದು? ತತ್ವತಃ ಇದು ಯಾವದಾಗಿರಬಹುದು? ಇದನ್ನು ನಿರ್ದೇಶಿಸುವದು ಏನೆಂಬುದಾಗಿ? ಇದರ ಉತ್ಪತ್ತಿಗೆ ಕಾರಣವೇನು? ಇದರ ಬಣ್ಣವೆಂತಹುದು? ಇದು ಯಾವುದರ ವಿಕಾರವು? ಇದನ್ನು ಪರಿಗ್ರಹಿಸಲು ನಾನು ಯಾರು? ಅಹಂಭಾವದಿಂದ ನಾನು ಯಾವದನ್ನು ಗ್ರಹಿಸಲಿ? ಅಹಂಭಾವವಿಲ್ಲದೆ ನಾನು ಏನನ್ನು ಬಿಡಲಿ?

೧೫. ಹೀಗೆ ಯಾವುದೊಂದನ್ನೂ ಅಹಂಕಾರವೆಂದು ನಿರ್ದೇಶಿಸಿ ನಿರ್ವಚನ ಮಾಡುವುದಕ್ಕೆ ಸಾಧ್ಯವೇ ಇಲ್ಲದ ಕಾರಣ ಭಾವತ್ವದಲ್ಲಿಯಾಗಲಿ ಅಥವಾ ಅಭಾವತ್ವದಲ್ಲಿಯಾಗಲಿ ಉಪಪತ್ತಿಶಾಲಿಯಾದ್ದ ಅಹಂಕಾರವೆಂಬುದು ಈ ದೇಹದಲ್ಲಿ ಯಾವುದೂ ಇಲ್ಲವೇ ಇಲ್ಲ. (ಇದರಿಂದ ಹೀಗೆ ಅಹಂಕಾರವು ಅನಿರ್ವಚನೀಯ ಮಿಥ್ಯೆಯೇ ಎಂದು ಸ್ಥಿರಪಟ್ಟಿತು.) ಆದುದರಿಂದ ನಿರಹಂಕಾರ ರೂಪನಾದ ನನಗೆ

ಅಸತ್ಯಲಮಹಂಕಾರೇ ಸಂಬಂಧಃ ಕಸ್ಯ ಕೇನ ಕಃ |
ಸಂಬಂಧಾಭಾವಸಂಸಿದ್ಧೌ ವಿಲೀನಾ ದ್ವಿತ್ವಕಲ್ಪನಾ ॥ ೧೬ ॥

ಏವಂ ಬ್ರಹ್ಮಾತ್ಮಕಮಿದಂ ಯತ್ಕಿಂಚಿಜ್ಜಗತಿ ಸ್ಥಿತಂ |
ಸದೇವಾಸ್ಮಿ ತದೇವಾಸ್ಮಿ ಪರಿಶೋಚಾಮಿ ಕಿಂ ಮುಧಾ ॥ ೧೭ ॥

ಏಕಸ್ಮಿನ್ನೇವ ವಿಮಲೇ ಪದೇ ಸರ್ವಗತೇ ಸ್ಥಿತೇ |
ಅಹಂಕಾರಕಲಂಕಸ್ಯ ಕಥಂ ನಾಮೋದಯಃ ಕುತಃ ॥ ೧೮ ॥

ಯಾವುದರೊಡನೆಯೂ ಹೇಗೂ ಯಾವೊಂದೂ ಸಂಬಂಧವೂ ಸರ್ವಥಾ ಸಂಘಟಿಸುವುದೇ ಇಲ್ಲ.

೧೬. ಅಂತೂ ಹೀಗೆ ಅಹಂಕಾರವೆಂಬುದು ಆತ್ಯಂತಿಕ ಅಸತ್ತೇ (ಅಸತ್ ಆದುದೇ ಅಂದರೆ ಮೊಲದ ಕೊಂಬು ಬಿಸಿಲ್ಗುದುರೆಗಳಂತೆ ಕಾಲತ್ರಯದಲ್ಲಿಯೂ ಇಲ್ಲದುದೇ) ಎಂದು ಸಿದ್ಧಾಂತವಾದ ಬಳಿಕ, ಯಾವದಕ್ಕೆ, ಯಾವದರೊಡನೆ, ಯಾವ ರೀತಿಯಲ್ಲಿ, ಯಾವ ಸಂಬಂಧವು ಕೂಡುವದು? ಯಾವದೂ ಇಲ್ಲ. ಯಾವ ಸಂಬಂಧವೂ ಇಲ್ಲವೇ ಇಲ್ಲವೆಂದು ಸಿದ್ಧವಾದ ಬಳಿಕ "ನೀನು, ನಾನು" ಎಂಬ ದ್ವೈವಿಧ್ಯ ಕಲ್ಪನೆಯು ಹೇಗೂ ಉಳಿಯುವದಿಲ್ಲ. ಅಡಗಿಯೇ ಹೋಗುವದು.

೧೭. ಹೀಗೆ ಈ ಜಗತ್ತಿನಲ್ಲಿ ಯಾವ ಯಾವದು ಇದೆಯೋ, ಅದು ಅದು ಎಲ್ಲವೂ ಪರಬ್ರಹ್ಮರೂಪವಾದುದೇ. ನಾನು ಸದ್ರೂಪನೇ ಆಗಿದ್ದೇನೆ. ನಾನು ಆ ಪರಬ್ರಹ್ಮವೇ. ಇನ್ನು ನಾನು ಏಕೆ ವ್ಯರ್ಥವಾಗಿ ಶೋಕಿಸಲಿ?

೧೮. ನಿರ್ಮಲವೂ, ಸರ್ವಗತವೂ ಆದ ಅದ್ವಿತೀಯಾತ್ಮ ತತ್ತ್ವವು ಮಾತ್ರವೇ ಪರಮಾರ್ಥ ಸತ್ಯವಾಗಿರುವಾಗ, ಈ ಅಹಂಕಾರವೆಂಬ ಕಳಂಕವು ಮಿಥ್ಯೆಯಾಗಿಯಾದರೂ ಹೇಗೆ ಯಾವ ಕಾರಣದಿಂದ ಉದಯವಾಗುವದು?

[ಸದ್ರೂಪ ಅದ್ವಿತೀಯಾತ್ಮ ಸಿದ್ಧಿ ಬಲದಿಂದ ಅಹಂಕಾರವನ್ನು ನಿರಸನ ಮಾಡಲು ಸಾಧ್ಯವು.]

ನಾಸ್ತ್ಯೇವ ಹಿ ಪದಾರ್ಥಶ್ರೀರಾತ್ಮೈವಾಸ್ತೀಹ ಸರ್ವಗಃ ।
ಪದಾರ್ಥಲಕ್ಷ್ಮ್ಯಾಂ ಸತ್ಯಾಂ ಚ ಸಂಬಂಧೋಽಸ್ತಿ ನ ಕಸ್ಯಚಿತ್ ॥ ೨೯ ॥

ಇಂದ್ರಿಯೈರಿಂದ್ರಿಯೈರಂಗೈರ್ಮನೋ ಮನಸಿ ವಲ್ಗತಿ ।
ಚಿದಲಿಪ್ತವಪುಃ ಕೇನ ಸಂಬಂಧಃ ಕಸ್ಯ ಕಿಂ ಕಥಂ ॥ ೩೦ ॥

ಉಪಲಾಯಃ ಶಲಾಕಾನಾಂ ಸಂಬಂಧೋ ನ ಯಥಾ ಮಿಥಃ ।
ತಥೈಕತ್ರಾಪಿ ದೃಷ್ಟಾನಾಂ ದೇಹೇಂದ್ರಿಯಮನಶ್ಚಿತಾಂ ॥ ೩೧ ॥

---

೨೯. ಈ ಪ್ರಪಂಚದಲ್ಲಿ ಆತ್ಮ ವ್ಯತಿರಿಕ್ತವಾಗಿ ಪದಾರ್ಥಗಳ ಸಮುದಾಯವು ಯಾವದೂ ವಾಸ್ತವವಾಗಿ ಇಲ್ಲವೇ ಇಲ್ಲ. ಸಕಲವೂ ಮಿಥ್ಯೆಯೇ! ಸರ್ವಗತನಾದ ಆತ್ಮನು ಮಾತ್ರವೇ ಪರಮಾರ್ಥ ಸತ್ಯ ಮತ್ತು ಶಾಶ್ವತ. ಇದೇ ಪರಮ ಸಿದ್ಧಾಂತ. ಅಥವಾ ಒಂದುವೇಳೆ ಭ್ರಾಂತ ಜನಸಮ್ಮತವಾದ ದೃಷ್ಟಿಯಿಂದ, ಪದಾರ್ಥಜಾತವು ಇದೆಯೆಂದು ಭಾವಿಸಿದರೂ ಕೂಡ, ಯಾವದಕ್ಕೂ ಯಾವದರೊಡನೆಯೂ, ಯಾವ ಸಂಬಂಧವೂ ಸುತರಾಂ ಇಲ್ಲ.

೩೦. ಮನಸ್ಸು ತನ್ನ ಅವಯವಗಳಾಗಿ ಕ್ಲೃಪ್ತವಾದ ಸಕಲೇಂದ್ರಿಯಗಳೊಡನೆ ತನ್ನೊಳಗೆಯೇ (ಮನಸ್ಸಿನಲ್ಲಿಯೇ) ಸ್ವಪ್ನಾವಸ್ಥೆಯಲ್ಲಿ ಹೇಗೋ ಹಾಗೆ ಸಂಚರಿಸುವದು. ಅಂದರೆ ತನ್ನ ಹೊರಗಡೆ ಇರುವ ಪದಾರ್ಥಗಳನ್ನು ಸ್ಪರ್ಶ ಮಾಡುವದಕ್ಕೆ ಕೂಡ ಮನಸ್ಸಿಗೆ ಶಕ್ತಿಯಿಲ್ಲ. ಚಿದಾತ್ಮನಾದರೋ ಇಂದ್ರಿಯಗಳಿಂದಲೂ, ಬಾಹ್ಯಾರ್ಥಗಳಿಂದಲೂ ಸುತರಾಂ ಲೇಪವನ್ನು ಹೊಂದದೆ (ನಿರ್ಲಿಪ್ತನು) ಅಸಂಗಸ್ವಭಾವನಾಗಿರುವನು. ಹೀಗಿರುವಾಗ ಯಾವದಕ್ಕೆ, ಯಾವದರೊಡನೆ, ಹೇಗೆ, ಯಾವ ಕಾರಣದಿಂದ ಸಂಬಂಧವು ಸಿದ್ಧಿಸುವದು ?

೩೧. ಸೂಜಿಗಲ್ಲೂ, ಸೂಜಿಗಲ್ಲು ಮುಂತಾದ ಉಕ್ಕಿನ ಸಲಾಕೆಗಳೂ ಒಂದಕ್ಕೊಂದು ಅಂಟಿಕೊಂಡಿರುವಾಗ ಒಟ್ಟಾಗಿರುವಂತೆ ಕಂಡುಬಂದರೂ ಕೂಡ, ಹೇಗೆ ಅವುಗಳಿಗೆ ಪರಸ್ಪರ ಸಂಬಂಧವು ಇಲ್ಲವೋ, ಹಾಗೆ—ದೇಹ, ಇಂದ್ರಿಯ, ಮನಸ್ಸು, ಚಿತ್ತುಗಳು ಒಂದೇ ಕಡೆಯಲ್ಲಿರುವಂತೆ ಕಂಡರೂ, ಅವುಗಳಿಗೆ ಪರಸ್ಪರ ಸಂಬಂಧವು ಸಿದ್ಧಿಸುವದಿಲ್ಲ.

ಅಸದಭ್ಯುದಿತೋ ವ್ಯರ್ಥಮಹಂಕಾರಮಹಾಭ್ರಮಃ ।
ಮಮೇದಮಿದಮಸ್ಯೇತಿ ವಿಪರ್ಯಸ್ತಮಿದಂ ಜಗತ್ ॥ ೨೨ ॥

ಅತತ್ತ್ವಾಲೋಕಜಾತೋಯಮಹಂಕಾರಚಮತ್ಕೃತಿಃ ।
ತಾಪೇನ ಹಿಮಲೇಖೇವ ತತ್ತ್ವಾಲೋಕೇ ವಿಲೀಯತೇ ॥ ೨೩ ॥

ಆತ್ಮನೋ ವ್ಯತಿರೇಕೇಣ ನ ಕಿಂಚಿದಪಿ ವಿದ್ಯತೇ ।
ಸರ್ವಂ ಬ್ರಹ್ಮೇತಿ ಮೇ ತತ್ತ್ವಮೇತದ್ವೈ ಭಾವಯಾಮ್ಯಹಂ ॥ ೨೪ ॥

---

೨೨. ಅಹಂಕಾರವೆಂಬ ಮಹಾಭ್ರಾಂತಿಯು ಶಶವಿಷಾಣಾದಿಗಳಂತೆ ಅಸತ್ಯವಾಗಿಯೇ (ವಸ್ತುಶೂನ್ಯವಾಗಿಯೇ) ವ್ಯರ್ಥವಾಗಿ ಉದಯಿಸುತ್ತಿರುವ ಕಾರಣದಿಂದ ಈ ಜಗತ್ತು "ಇದು ನನ್ನದು, ಇದು ಅವನದು" ಎಂಬೀ ಮೊದಲಾದ ಮಿಥ್ಯಾಭಿಮಾನ ಪೂರ್ವಕವಾದ ವ್ಯವಹಾರದಿಂದ ಉನ್ಮತ್ತವಾಗಿರುವದು.

೨೩. ವಿಸ್ಮಯಾವಹವಾದ ಈ ಅಹಂಕಾರವೆಂಬ ಚಮತ್ಕೃತಿಯು ಆತ್ಮೈಕ ಸ್ವರೂಪ ತತ್ತ್ವಜ್ಞಾನಾಭಾವದಿಂದ (ರಜ್ಜುವಿನಲ್ಲಿ ಇದು ರಜ್ಜುವೆಂಬ ಯಥಾರ್ಥ ಜ್ಞಾನವಿಲ್ಲದೆ, ಅದರಲ್ಲಿ ಮಿಥ್ಯಾಭೂತ ಸರ್ಪಭ್ರಾಂತಿಯು ಉದಯಿಸುವಂತೆ) ಉದಯಿಸುವದು. ತತ್ತ್ವಜ್ಞಾನೋದಯವಾದ ಕೂಡಲೇ, ಸೂರ್ಯನ ತಾಪದಿಂದ ಹಿಮದ ರಾಶಿಯು ಕರಗಿ, ಅದರ ಹುಟ್ಟಡಗಿಹೋಗುವಂತೆ, ಅಹಂಕಾರವೂ ನಿರ್ನಾಮವಾಗಿ ಅಡಗಿಹೋಗುವದು.

೨೪. ಸ್ವಾತ್ಮವ್ಯತಿರಿಕ್ತವಾಗಿ ಯಾವದೊಂದೂ ವಾಸ್ತವವಾಗಿ ಇಲ್ಲವೇ ಇಲ್ಲ. ಇದೆಲ್ಲವೂ ಬ್ರಹ್ಮವೇ ಸರಿ. ಇದೇ ನನ್ನ ಅನುಭವಸಿದ್ಧವಾದ ತತ್ತ್ವವು. ಇದನ್ನೇ ನಾನು ಸರ್ವಥಾ ಭಾವನೆ ಮಾಡುತ್ತಾ ಇರುವೆನು.

["ಬ್ರಹ್ಮೈವೇದಗ್ಂ ಸರ್ವಂ", "ಇದಂ ಸರ್ವಂ ಯದಯಮಾತ್ಮಾ", "ಅತೋಽನ್ಯದಾರ್ತಂ"—ನೇಹನಾನಾಸ್ತಿ ಕಿಂಚನ—ಇತ್ಯಾದಿ ಸಾವಿರಾರು ಶ್ರುತಿಗಳೇ ಈ ಅರ್ಥದಲ್ಲಿ ಪ್ರಮಾಣ.]

ಅಹಂಕಾರಭ್ರಮಸ್ಯಾಸ್ಯ ಜಾತಸ್ಯಾಕಾಶವರ್ಣವತ್ |
ಅಪುನಃ ಸ್ಮರಣಂ ಮನ್ಯೇ ನೂನಂ ವಿಸ್ಮರಣಂ ವರಂ || ೨೫ ||

ಸಮೂಲಂ ಸಂಪರಿತ್ಯಜ್ಯ ಚಿರಾಯಾಹಂಕೃತಿಭ್ರಮಂ |
ತಿಷ್ಠಾಮ್ಯಾತ್ಮನಿ ಶಾಂತಾತ್ಮಾ ಶರತ್ಖಂ ಶರದೀವ ಖೇ || ೨೬ ||

ದದಾತ್ಯನರ್ಥನಿಚಯಂ ವಿಸ್ತಾರಯತಿ ದುಷ್ಕೃತಂ |
ವಿಸ್ತಾರಯತಿ ಸಂತಾಪಮಹಂಭಾವೋನುಸಂಹಿತಃ || ೨೭ ||

ಸ್ಫುರತ್ಯಹಂಕಾರಘನೇ ಹೃದ್ವ್ಯೋಮ್ನಿ ಸಲಿಲಾತ್ಮನಿ |
ವಿಕಸತ್ಯಭಿತಃ ಕಾಯಕದಂಬೇ ದೋಷಮಂಜರೀ || ೨೮ ||

---

೨೫. ಈ ಅಹಂಕಾರವೆಂಬ ಭ್ರಾಂತಿಯು ಆಕಾಶದಲ್ಲಿ ನೀಲವರ್ಣ ಭ್ರಾಂತಿಯು ಹೇಗೋ ಹಾಗೆ ಅಕಾರಣವಾಗಿಯೇ ಮಿಥ್ಯೆಯಾಗಿ ಉದ್ಭವಿಸಿರುವದು. ಇದರ ಸ್ಮರಣೆಯು ಪುನಃ ಉಂಟಾಗದಂತೆ ಇದನ್ನು ಸಂಪೂರ್ಣವಾಗಿ ಮರೆತುಬಿಡುವದೇ ಸರ್ವೋತ್ತಮವಾದುದೆಂದು ನಾನು ಭಾವಿಸಿರುವೆನು.

೨೬. ಆದಕಾರಣ, ಬಹುಕಾಲದಿಂದ ಅನುಸರಿಸಿಕೊಂಡು ಬಂದಿರುವ ಈ ಅಹಂಕಾರ ಭ್ರಮೆಯನ್ನು ಸಮೂಲವಾಗಿ ಅಂದರೆ ಇದಕ್ಕೆ ಕಾರಣವಾದ ಅವಿದ್ಯೆ ಸಹಿತ ನಾನು ಪೂರ್ಣವಾಗಿ ಈಗಲೇ ಪರಿತ್ಯಾಗಮಾಡಿ, ಶರದೃತುವಿನಲ್ಲಿ ಸ್ವಚ್ಛವಾದ ಆಕಾಶವು ಪ್ರಶಾಂತವಾಗಿ ನಿರ್ಮಲವಾದ ಸ್ವಸ್ವಭಾವದಲ್ಲಿಯೇ ಇರುವಂತೆ, ಪ್ರಶಾಂತಾತ್ಮನಾಗಿ, ಸ್ವಾತ್ಮರೂಪದಲ್ಲಿ ಸ್ಥಿರವಾಗಿದ್ದುಬಿಡುವೆನು.

೨೭. (ಏಕೆಂದರೆ ಈ ಅಹಂಭಾವವನ್ನು ಸ್ವಲ್ಪಮಟ್ಟಿಗೆ ಅನುಸಂಧಾನ ಮಾಡಿದರೆ ಸಾಕು.) ಆಗಲೇ ಇದು ನಾನಾ ಅನರ್ಥ ಪರಂಪರೆಗಳನ್ನು ತಂದು ನೀಡುವದು. ದುಷ್ಕಾರ್ಯಗಳನ್ನು ಹೆಚ್ಚಾಗಿ ಮಾಡಿಸಿ, ವಾಸನೆಗಳನ್ನು ಹೆಚ್ಚಿಸುವದು. ಮತ್ತು ವಿಶೇಷವಾಗಿ ದುರ್ಭರವಾದ ನಾನಾ ಕ್ಲೇಶಗಳನ್ನು ತಂದು ಒಡ್ಡುವದು.

೨೮. ಅತ್ಯಂತ ತುಚ್ಛವಾದ ವಿಷಯೋಪಭೋಗ ವಾಸನೆಯೆಂಬ ಜಲವನ್ನು ತನ್ನ ಗರ್ಭದಲ್ಲಿ ತುಂಬಿಕೊಂಡಿರುವ ಅಹಂಕಾರವೆಂಬ ಮೇಘವು ಹೃದಯವೆಂಬ ಆಕಾಶದೊಳಗೆ ಸ್ಫುರಿಸಿದ ಕೂಡಲೇ, ಶರೀರವೆಂಬ ಕದಂಬವೃಕ್ಷದಲ್ಲಿ ರಾಗದ್ವೇಷಾದಿ

ಮರಣಂ ಜೀವಿತೋಪಾಂತಂ ಜೀವಿತಂ ಮರಣಾಂತಗಂ |
ಭಾವೋ ಭಾವಾದ್ವ್ಯವಿಚ್ಛಿನ್ನಃ ಕಷ್ಟೋಽಯಂ ದುಃಖವೇದನಾ ॥ ೨೯ ॥

ಇದಂ ಲಬ್ಧಮಿದಂ ಪ್ರಾಪ್ಸ್ಯಾಮೀತ್ಯಾರ್ತಿರ್ದಾಹಕಾರಿಣೀ |
ನ ಶಾಮ್ಯತ್ಯರ್ಕರತ್ನಾನಾಂ ಗ್ರೀಷ್ಮೇಽಗ್ನಿರಿವ ದುರ್ಧಿಯಾಂ ॥ ೩೦ ॥

ನಾಸ್ತೀದಮಿದಮಸ್ತೀತಿ ಚಿಂತಾ ಧಾವತ್ಯಹಂಕೃತಿಂ |
ಜಡಾಶಯಾ ಜಡಾಮಭ್ರಮಾಲಾ ಶೈಲಾವಲೀಮಿವ ॥ ೩೧ ॥

ದೋಷಗಳೆಂಬ ಕುಸುಮ ಮಂಜರಿಗಳು ಸುತ್ತಲೂ ವಿಕಸಿತವಾಗುವವು. (ಚೆನ್ನಾಗಿ ಅರಳುವವು.)

೨೯. ಮರಣ, ದುಃಖ ಮತ್ತು ಅನಂತರ ಭಾವಿ ಪಾರಲೌಕಿಕ ದುಃಖ, ಇವು ಪುನಃ ಜನ್ಮವೆತ್ತುವವರೆಗೂ ಇರುವವು. ಹೀಗೆಯೇ ಪುನರ್ಜನ್ಮದುಃಖ ಮತ್ತು ಅನಂತರ ಉಂಟಾಗುವ ಐಹಿಕ ದುಃಖ, ಇವು ಮರಣಾವಧಿ ಇರುವವು. ಭೋಗ್ಯವಸ್ತು ವರ್ಗವು ಭೋಗದಿಂದ ನಾಶಹೊಂದಿಬಿಡುವವಲ್ಲಾ ಎಂಬ ದುಃಖದಿಂದ (ಸಂತಾಪದಿಂದ) ಅನೇಕ ತುಂಡು (ಚೂರು) ಗಳಾಗಿ ಕತ್ತರಿಸಿ ಹೋಗಿರುವದು. ಅಯ್ಯೋ ಈ ರೀತಿಯಾದ ದುಃಖಾನುಭವವು ಮಹಾ ಕಷ್ಟವಾಗಿರುವುದು.

೩೦. "ಇದು ಈಗ ನನಗೆ ದೊರಕಿತು". "ಇಗೋ, ಈಗಲೇ ನಾನು ಇದನು ಸಂಪಾದಿಸುವೆನು". ಇವೇ ಮುಂತಾದ ನಾನಾ ಪ್ರಕಾರವಾಗಿ ವಿಶೇಷ ದಾಹವನ್ನು ಉಂಟುಮಾಡುವ ಅವಿವೇಕಿಗಳ ವ್ಯಥೆಯು, ಗ್ರೀಷ್ಮ ಋತುವಿನಲ್ಲಿ ಸೂರ್ಯಕಾಂತ ಶಿಲೆಗಳ ಬೆಂಕಿಯೂ ಶಾಂತವಾಗದೆ ದಹಿಸುತ್ತಿರುವಂತೆ, ಎಂದೆಂದಿಗೂ ಶಾಂತವಾಗದೆ ಸಂತಾಪಕರವಾಗಿರುವದು.

೩೧. ಜಲಾಶ್ರಯವಾದ ಮೇಘಪಂಕ್ತಿಯು ಗುರುತರವಾದ ಪರ್ವತ ಶ್ರೇಣಿಯ ಕಡೆಗೆ ಓಡುವಂತೆ "ಇದು ಇಲ್ಲ, ಇದು ಇದೆ" ಎಂಬೀ ಮುಂತಾದ ಜಡ ವಸ್ತುಗಳನ್ನು ಆಶ್ರಯಿಸಿರುವ ಚಿಂತೆಯು ಸರ್ವದಾ ಜಡವಾದ ಅಹಂಕಾರವನ್ನೇ ಹಿಂಬಾಲಿಸಿಕೊಂಡು ಓಡುವದು.

ಅಹಂಭಾವೇ ಪರಿಕ್ಷೀಣೇ ಶುಷ್ಕಂ ಸಂಸಾರಪಾದಪಃ ।
ಭೂಯಃ ಪ್ರಯಚ್ಛತ್ಯರಸೋ ನ ಪಾಷಾಣವದಂಕುರಂ ॥ ೩೨ ॥

ಸ್ವತೃಷ್ಣಾಕೃಷ್ಣಭೋಗಿನ್ಯೋ ದೇಹದ್ರುಮಕೃತಾಲಯಾಃ ।
ಕ್ವಾಪಿ ಯಾಂತಿ ವಿಚಾರಾತ್ಮಾನ್ಯಾಗತೇ ವಿನತಾಸುತೇ ॥ ೩೩ ॥

ಅಸದಭ್ಯುತ್ಥಿತೇ ವಿಶ್ವೇ ತಜ್ಜಾತೇ ಭ್ರಮಸನ್ಮಯೇ ।
ಅಸನ್ಮಯಪರಿಸ್ಪಂದೇ ತ್ವಹಂ ತ್ವಂ ಚೇತಿ ಕಃ ಕ್ರಮಃ ॥ ೩೪ ॥

---

೩೨. ಅಹಂಕಾರವು ಪೂರ್ತಿಯಾಗಿ ಕ್ಷಯವನ್ನು ಹೊಂದಿ ನಾಶವಾಗಿ ಬಿಟ್ಟರೆ ಸಂಸಾರವೆಂಬ ವೃಕ್ಷವು ಒಣಗಿಹೋಗಿ ಬಿಡುವದು. ಏಕೆಂದರೆ ಅದಕ್ಕೆ ಇಚ್ಛಾದ್ವೇಷಾದಿಗಳೆಂಬ ಪಲ್ಲವಗಳನ್ನು (ಅಂಕುರಗಳನ್ನು) ಸೃಜಿಸುವದಕ್ಕೆ ತಕ್ಕ ಶಕ್ತಿದಾಯಕವಾದ ರಸವನ್ನು (ಅನುರಾಗ ಮತ್ತು ನೀರು) ಒದಗಿಸುವ ಅಹಂಕಾರವು ಕ್ಷಯಿಸಿಹೋಗಿರುವದು. ಹೀಗೆ ಅರಸವಾಗಿ (ರಸಹೀನವಾಗಿ) ಪೂರ್ತಿ ಒಣಗಿರುವ ಸಂಸಾರ ವೃಕ್ಷವು ಕಲ್ಲುಬಂಡೆಯಂತೆ ಪುನಃ ಎಂದಿಗೂ ಚಿಗುರುವದಿಲ್ಲ.

೩೩. ವಿವಿಧ ಭೋಗಗಳಲ್ಲಿರುವ ತೃಷ್ಣೆಗಳೆಂಬ ಕೃಷ್ಣಸರ್ಪಗಳು (ಕಪ್ಪು ಬಣ್ಣದ ಹೆಣ್ಣುನಾಗರಹಾವುಗಳು) ದೇಹಗಳೆಂಬ ವೃಕ್ಷಮೂಲಗಳನ್ನು ಆಶ್ರಯಿಸಿ ವಾಸ ಮಾಡಿಕೊಂಡಿರುವವು. ಆತ್ಮತತ್ವ ವಿಚಾರವೆಂಬ ಗರುಡನು ಬಂದು ಬಿಟ್ಟರೆ ಆಗಲೇ ಅವು ಭಯಪಟ್ಟುಕೊಂಡು ಎಲ್ಲಿಯೋ ಬಹುದೂರವಾಗಿ ಓಡಿ ಹೋಗಿ ಬಿಡುವವು.

೩೪. ಈ ವಿಶ್ವವೆಂಬುದು ಅಸತ್ತಾದ (ಮಿಥ್ಯಾಭೂತ) ಅಜ್ಞಾನದ ದೆಸೆಯಿಂದ ಉದ್ಭವಿಸಿರುವದು. ಆದಕಾರಣವೇ ಭ್ರಾಂತಿಯ ಮೂಲಕ ಸದ್ರೂಪವಾಗಿ (ಸತ್ಯವಾದುದಂತೆ) ತೋರುವದು. (ಸದ್ರೂಪನಾದ ಆತ್ಮನಲ್ಲಿ ಅಧ್ಯಸ್ತವಾಗಿರುವ ಕಾರಣ ಭ್ರಾಂತಿಯಿಂದ ಸತ್ಯವಸ್ತುವಾಗಿ ತೋರುವದೇ ಹೊರತು ವಸ್ತುತಃ ಅದು ಸತ್ಯವಲ್ಲ. ಮಿಥ್ಯೆಯೇ ಸರಿ) ಕಾರಣವಾದ ಅಜ್ಞಾನವೂ ಮಿಥ್ಯೆಯು. ಅದರ ಕಾರ್ಯವಾದ ವಿಶ್ವವೂ ಮಿಥ್ಯೆಯೇ ಆಗಿರುವದು. ಹೀಗೆ ಈ ವಿಶ್ವದಲ್ಲಿ ರೂಢವಾದ ಸಕಲ ವ್ಯವಹಾರಗಳೂ ಮಿಥ್ಯಾಭೂತವಾದವುಗಳೇ ಆಗಿರುವವು. ಹೀಗಿರು

ಇದಂ ಜಗದುದೇತ್ಯಾದಾವಕಾರಣಮಕಾರಣಾತ್ |
ಯದಕಾರಣಮುದ್ಭೂತಂ ತತ್ಸದಿತ್ಯುಚ್ಯತೇ ಕಥಂ || ೩೫ ||

ಅಪರ್ಯಂತಪುರಾಕಾಲೇ ಮೃದಿ ಕುಂಭ ಇವಾಕೃತಿಃ |
ದೇಹೋ ಭವದಿದಾನೀಂ ತು ತಥೈವಾಸ್ತಿ ಭವಿಷ್ಯತಿ || ೩೬ ||

ವಾಗ 'ನಾನು-ನೀನು' ಎಂಬೀ ಮೊದಲಾದ ಭೇದ ವ್ಯವಹಾರವು ತಾನೇ ಯಾವ ದಿರುವದು ?

೩೫. ಹೀಗೆ ಈ ಮಿಥ್ಯಾಭೂತವಾದ ಜಗತ್ತು ಅಕಾರಣವಾಗಿ (ಯಾವ ದೊಂದು ಸತ್ಯ ಪ್ರಯೋಜನವೂ ಇಲ್ಲದೆಯೇ) ಕಾರಣವನ್ನಿಸಿಕೊಳ್ಳುವದಕ್ಕೆ ಸರ್ವಥಾ ಅನರ್ಹವಾದ ದೆಸೆಯಿಂದಲೇ ಆದಿಯಲ್ಲಿ ಉದಯಿಸುವದೆಂಬುದು ಸ್ಪಷ್ಟವು. ಯಾವದು ಅಕಾರಣವಾಗಿ ಉತ್ಪನ್ನಿಸಿರುವದೋ ಅದನ್ನು ಸತ್ (ಸತ್ಯ) ವೆಂದು ಹೇಗೆ ಹೇಳಬಹುದು ?

[ಸತ್ಯವೆಂದು ಹೇಳಲಾಗುವದಿಲ್ಲ. ಅಸತ್ಯವೆಂದು ಹೇಳುವದೇ ನ್ಯಾಯ ವೆಂದು ತಾತ್ಪರ್ಯ.]

೩೬. ಮಣ್ಣಿನ ಮುದ್ದೆಯೊಳಗೆ (ಮೃತ್ಪಿಂಡ) ಕುಂಬಾರನು ಘಟಾದ್ಯಾಕಾರ ವನ್ನು ಕೊರೆಯುವದಕ್ಕಿಂತ ಮುಂಚೆಯೂ ಕೂಡ, ಅಲ್ಲಿ ಘಟಾದ್ಯಾಕಾರವು ಇದ್ದೇ ಇರುವದು. ಮೊದಲಿನಿಂದಲೂ ಅವ್ಯಕ್ತವಾಗಿದ್ದ ಘಟಾದ್ಯಾಕಾರವೇ, ಈಗ ಕುಂಬಾರನ ಕೆಲಸದಿಂದ ಹೊರಗೆ ಅಭಿವ್ಯಕ್ತವಾಗುವದು. ಅದರಂತೆಯೇ, ಈ ದೇಹಾದಿಗಳೂ ಉತ್ಪತ್ತಿಯಾಗುವದಕ್ಕಿಂತ ಮುಂಚೆ, ನಿರವಧಿಕವಾದ ಅನಾದಿ ಪೂರ್ವಕಾಲದಲ್ಲಿ ಅವುಗಳಿಗೆ ಯಾವ ಸ್ಥಿತಿಯು ಇದ್ದಿತೋ, ಅದೇ ಸ್ಥಿತಿಯೇ ಈಗಲೂ ಇದೆ. ಮುಂದೆಯೂ ಹಾಗೆಯೇ ಇರುವದು. ಹೀಗೆ ಕಾಲತ್ರಯದಲ್ಲಿಯೂ ಸರ್ವದಾ ಏಕರೂಪತ್ವವೇ ಕಾಣುತ್ತಿರುವದು.

ಮಧ್ಯೇತರಪಯೋಮಾತ್ರಂ ಕಿಂಚಿತ್ಕಾಲಂ ಚಲಾಚಲಂ |
ಆದ್ಯಂತಸೌಮ್ಯತೇ ತ್ಯಕ್ತ್ವಾ ವಾರಿ ವೀಚಿತಯಾ ಯಥಾ || ೩೭ ||

ಅಸ್ಮಿನ್ ಕ್ಷಣಪರಿಸ್ಪಂದೇ ದೇಹೇ ನಿಸರಣೋನ್ಮುಖೇ |
ತರಂಗೇ ಚ ನಿಬದ್ಧಾಸ್ಥಾ ಯೇ ಹತಾಸ್ತೇ ಕುಬುದ್ಧಯಃ || ೩೮ ||

೩೭-೩೮. (ಒಂದು ಅಗಾಧ ಜಲಾಶಯದಲ್ಲಿ ಕಾಣುವ ತರಂಗಗಳ ಸ್ವರೂಪ ವೆಂತಹುದೆಂಬುದನ್ನು ಸ್ವಲ್ಪ ವಿಚಾರ ಮಾಡಿದರೆ ಆಗ ಮೇಲಣ ಅಂಶ ಸುಸ್ಪಷ್ಟವಾಗುವದು. ತರಂಗಗಳು ಉತ್ಪನ್ನವಾಗುವದಕ್ಕಿಂತ ಮುಂಚೆ ಅಲ್ಲಿದ್ದುದು ನೀರು ಮಾತ್ರವೇ, ತರಂಗಗಳು ಶಾಂತವಾದ ನಂತರ ಅಲ್ಲಿರುವದೂ ನೀರು ಮಾತ್ರವೇ.ಆದರೆ ಮಧ್ಯಕಾಲದಲ್ಲಿ ಸ್ವಲ್ಪ ಹೊತ್ತು ಆ ನೀರು ಚಂಚಲವಾಗುವದು. ಆಗ ಪೂರ್ವೋತ್ತರ ಕಾಲಗಳಲ್ಲಿ ನೀರಿನಲ್ಲಿ ಇದ್ದ, ಇರುವ ಸೌಮ್ಯಭಾವವು (ಶಾಂತ ಸ್ಥಿತಿಯು)ಮಾಯವಾಗುವದು. ಆಗ ಆ ನೀರೇ ಅಲೆಗಳ ಆಕಾರದಿಂದ ಕಾಣಿಸಿಕೊಳ್ಳುವದು. ಅಷ್ಟೇ ಹೊರತು, ಅಲೆಗಳೆಂಬುದು ಜಲಕ್ಕಿಂತಲೂ ಬೇರೆಯಾದ ವಸ್ತುವಲ್ಲ. ಈ ದೃಷ್ಟಾಂತದಂತೆಯೇ ಈ ದೇಹಾದಿಗಳು ಉತ್ಪನ್ನವಾಗುವದಕ್ಕಿಂತ ಮುಂಚೆಯೂ, ಮತ್ತು ಇವುಗಳು ನಾಶ ಹೊಂದಿದ ಅನಂತರವೂ, ಬ್ರಹ್ಮವು ಅವಿಕಾರಿಯಾಗಿಯೇ ನಿಜರೂಪದಿಂದ ಇದ್ದು, ಮಧ್ಯದಲ್ಲಿ ಸ್ವಲ್ಪಕಾಲ ಚಾಂಚಲ್ಯವನ್ನು ಪಡೆದು, ದೇಹಾದಿಗಳೆಂಬ ರೂಪಾಂತರದಿಂದ ಕಾಣುತ್ತಾ ವ್ಯವಹರಿಸಲ್ಪಡುತ್ತಿದೆಯೇ ಹೊರತು, ಈ ದೇಹಾದಿಗಳು ಬ್ರಹ್ಮಾತಿರಿಕ್ತ ವಸ್ತ್ವಂತರಗಳಲ್ಲ. ಹೀಗೆ ಕೇವಲ ಅಲ್ಪಕಾಲ ಮಾತ್ರ ಚಲನಹೊಂದಿ ವ್ಯವಹಾರಯೋಗ್ಯವಾಗಿದ್ದುಕೊಂಡು, ಪುನಃ ಕ್ಷಣಾರ್ಧದಲ್ಲಿ ಕಾಣದೇಹೋಗಿ ಬಿಡುವಂಥ, ಈ ದೇಹಾದಿಗಳಲ್ಲಿಯೂ, ತರಂಗಗಳಲ್ಲಿಯೂ ಕೂಡ, ಸತ್ಯತ್ವ ಬುದ್ಧಿಯಿಂದ ಯಾವ ಪಶುಪ್ರಾಯರಾದ ನರಾಧಮರು ಆಸ್ಥೆಯನ್ನು ಇಟ್ಟುಕೊಂಡಿರುವರೋ ಅಂತಹ ಅವಿವೇಕಿಗಳು ನಿಶ್ಚಿತವಾಗಿಯೂ ಅವುಗಳ ಸಂಗಡಲೇ ನಾಶಹೊಂದುವರು. (ಹೀಗೆ ದೇಹಾದಿಗಳು ಕಾಲಪರಿಚ್ಛಿನ್ನವೆಂದು ಸಿದ್ಧವಾಯಿತು.)

[ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ | ಅವ್ಯಕ್ತ ನಿಧನಾನ್ಯೇವ........ಗೀತಾ ||]

ಪ್ರಾಕ್ಪುರಸ್ತಾಚ್ಚ ಸರ್ವಾಣಿ ಸಂತಿ ವಸ್ತೂನಿ ನಾಭಿತಃ |
ಮಧ್ಯೇ ಸ್ಫುಟತ್ವಮೇತೇಷಾಂ ಕೈವಾಸ್ಥಾ ಹತರೂಪಿಣೀ || ೩೯ ||

ಚಿತ್ತಂ ಪೂರ್ವಂ ಪುರಸ್ತಾಚ್ಚ ಚಿದ್ದೇಹಂ ಶಾಂತಮಿತ್ಯಪಿ |
ಸದಸದ್ವಾ ಖಸಂಲೀನಂ ಮಧ್ಯೇಽಸ್ಮಿಂಕಿಂ ತವೋದಿತಂ || ೪೦ ||

---

೩೯. ಪ್ರಾಪಂಚಿಕಗಳಾದ ದೇಹಾದಿ ಈ ಸಕಲ ವಸ್ತುಗಳೂ, ಎಲ್ಲ ಸ್ಥಳ ಗಳಲ್ಲಿಯೂ ಹಿಂದಿನ ಕಾಲದಲ್ಲಿ ಇರಲೂ ಇಲ್ಲ. ಇನ್ನುಮುಂದೆ ಇರುವದೂ ಇಲ್ಲ. ಮಧ್ಯಕಾಲದಲ್ಲಿ ಮಾತ್ರ ಈಗ ಸ್ವಲ್ಪ ಹೊತ್ತು ತಮಗೆ ಅಧಿಕರಣ (ಆಧಾರ) ವಾದ ಒಂದು ಚೋಟುದ್ದದಷ್ಟು (ಅತ್ಯಲ್ಪ) ಪರಿಮಿತ (ಸ್ಥಳ) ದಲ್ಲಿ ಇದ್ದುಕೊಂಡು ಕಾಣಿಸಿಕೊಳ್ಳುವವು. ಇಂತಹ ನಿರ್ವಿಷಯವಾದ, ದೇಶಪರಿಚ್ಛಿನ್ನವಾದ ಪ್ರಾಪಂಚಿಕ ವಸ್ತುಗಳಲ್ಲಿ ಆಸ್ಥೆಯನ್ನು ಇಡುವದು ಸರ್ವಥಾ ಅನುಚಿತವೇ ಸರಿ.

೪೦. ಚಿತ್ತೋಪಲಕ್ಷಿತವಾದ ಲಿಂಗಶರೀರವು ತನ್ನ ಉತ್ಪತ್ತಿಗಿಂತ ಪೂರ್ವದಲ್ಲಿಯೂ ಇರುವಾಗಲೂ ಕೂಡ, ಸ್ವಸಾಕ್ಷಿ ಚಿನ್ಮಾತ್ರ ಸ್ವಭಾವವೇ ಆಗಿರುವದು. ಹೀಗೆ ಉತ್ತರ ಕಾಲದಲ್ಲಿಯೂ, ಬೇರೊಂದು ಸ್ಥಳ (ದೇಶಾಂತರ) ದಲ್ಲಿಯೂ, ಇದು ನಷ್ಟವಾಗಿ ಸಾಕ್ಷಿಚಿನ್ಮಾತ್ರ ಸ್ವಭಾವವೇ ಆಗುವದು. ಈ ರೀತಿಯಾಗಿ ದೇಶಪರಿಚ್ಛಿನ್ನವಾದುದಾಗಿದ್ದರೂ ಆಕಾಶದಲ್ಲಿ ಅಡಗಿಕೊಂಡುಬಿಟ್ಟದ್ದರಂತೆ, ಅತ್ಯಂತ ತಿರೋಹಿತವಾಗಿ, ಕಣ್ಣಿಗೆ ಕಾಣದೆಯೇ ಇರುವ ಈ ಲಿಂಗದೇಹವನ್ನು ಸತ್ ಎಂದಾಗಲೀ, ಅಸತ್ ಎಂದಾಗಲೀ ಹೇಳುವದಕ್ಕೆ ಸಾಧ್ಯವಲ್ಲ. ಈ ಪ್ರಕಾರವಾದ ಲಿಂಗದೇಹವು ಈಗ ಮಧ್ಯಕಾಲದಲ್ಲಿ, ಈ ದೇಶದಲ್ಲಿ ಸತ್‌ಗಿಂತಲೂ ವ್ಯತಿರಿಕ್ತವಾಗಿ ಉದಯಿಸಿರುವರೆಂಬುದು ಹೇಗೆ ?

[ಚಿತ್ತಂ=ಚಿತ್ತೋಪಲಕ್ಷಿತವಾದ ಲಿಂಗದೇಹ.

ಉಪಲಕ್ಷಣ=ಕಾರ್ಯಾನನ್ವಯಿ ಮತ್ತು ವ್ಯಾವರ್ತಕವಾದ ಧರ್ಮ.]

ಯಥಾ ಸ್ವಪ್ನವಿಕಾರೇಷು ಯಥಾ ಸಂಭ್ರಮದೃಷ್ಟಿಷು |
ಯಥಾ ವಾ ಮದಲೀಲಾಸು ಯಥಾ ನೌಯಾನಸಂಭ್ರಮೇ ॥ ೪೧ ॥

ಯಥಾ ಧಾತುವಿಕಾರೇಷು ಯಥಾ ಚೇಂದ್ರಿಯವಿಪ್ಲವೇ |
ಯಥಾತಿಸಂಭ್ರಮಾನಂದೇ ದೋಷಾವೇಶದಶಾಸು ಚ ॥ ೪೨ ॥

ದೃಶ್ಯತೇ ಕ್ಷೀಯತೇ ಚೈವ ರೂಪಂ ಸದಸತೋಽಚ್ಚಲಂ |
ತಥೈವೇಯಮಿಹ ತ್ವೇಷಾ ಕಾಲೇ ನ್ಯೂನಾತಿರಿಕ್ತಯಾ ॥ ೪೩ ॥

೪೧-೪೨-೪೩. ಸ್ವಪ್ನಕಾಲಿಕಗಳಾದ ವಿಕಾರಗಳಲ್ಲಿ ಕೇವಲ ಮಿಥ್ಯಾಭೂತಗಳಾದ ವಸ್ತುಗಳು ಹೇಗೆ ಸದ್ವಸ್ತುಗಳಂತೆ (ಸತ್ಯವಾಗಿರುವಂತೆ) ಮನಸ್ಸಿಗೆ ಹೊಳೆಯುವವೋ, ವ್ಯಾಘ್ರಚೋರಾದಿಗಳ ದೆಸೆಯಿಂದ ಭಯಪಟ್ಟು ಉದ್ವೇಗಗೊಂಡಿರುವಾಗ, ಅವರು ಹೊರಟುಹೋದ ಮೇಲೆಯೂ (ವ್ಯಾಘ್ರಾದಿಗಳು ಇಲ್ಲದಿರುವಾಗಲೂ) ಸರ್ವತ್ರ ವ್ಯಾಘ್ರಾದಿ ಶಂಕೆಯು ಹೇಗೆ ತೋರುವದೋ, ಮದಾಂಧನಾದವನಿಗೆ ಅವನ ವ್ಯವಹಾರಗಳಲ್ಲಿ ಹೇಗೆ ಸತ್ಯತ್ವ ಭ್ರಾಂತಿಯುದಯಿಸುವದೋ, ಹಡಗಿನಲ್ಲಿ ಕುಳಿತು ವೇಗವಾಗಿ ಪ್ರಯಾಣ ಮಾಡುತ್ತಿರುವವನ ದೃಷ್ಟಿಗೆ, ದಡಗಳ ಮೇಲೆ ಬೆಳೆದಿರುವ ಸ್ಥಿರವಾಗಿ ನಿಂತಿರುವ ವೃಕ್ಷಗಳು ಚಲಿಸುತ್ತಾ, ಪ್ರಯಾಣ ಮಾಡುತ್ತಿರುವಂತೆ ಹೇಗೆ ತೋರುವದೋ, ವಾತಪಿತ್ತಾದಿ ಪ್ರಕೋಪದಿಂದ ಶರೀರಸ್ಥಿತಿಯು ಕೆಟ್ಟು ಜ್ವರಾದಿ ರೋಗಗಳು ಸಂಭವಿಸಿದಾಗ (ಸಕ್ಕರೆಯೂ ಕಹಿಯಾಗಿ ತೋರುವಂತೆ) ಹೇಗೆ ವಿಪರೀತ ಜ್ಞಾನವುಂಟಾಗುವದೋ, ಚಕ್ಷುರಾದೀಂದ್ರಿಯಗಳಿಗೆ ತಿಮಿರಾದಿ ದೋಷಗಳು ಸಂಭವಿಸಿದಾಗ ಎರಡು ಚಂದ್ರರು ಮುಂತಾದ ಭ್ರಾಂತಿಯು ತೋರುವಂತೆಯೂ, ಅತ್ಯಂತ ಪ್ರಿಯತಮವಾದ ವಸ್ತುಗಳು ದೊರೆತ ಕಾರಣದಿಂದ ಉಂಟಾಗುವ ಆನಂದ ಸಮಯದಲ್ಲಿ ಹೇಗೆ ನಾನಾ ಮನೋರಥಗಳು ಉದಯಿಸುವವೋ, ಕಾಮಾದಿ ದೋಷಗಳು ಬಂದು ಆವರಿಸಿಕೊಂಡ ಸ್ಥಿತಿಗಳಲ್ಲಿ ಹೇಗೆ ವಿಚಿತ್ರ ಮನೋವೃತ್ತಿಗಳು ಅಂಕುರಿಸುವವೋ ಮತ್ತು ಮೇಲೆ ಹೇಳಿದ (ಭಾವ, ಅಭಾವಾತ್ಮಕ) ಎಲ್ಲ ಸದಸದ್ವಸ್ತುಗಳ ಆಕಾರವು ಪ್ರತೀತಿಕಾಲ ಮಾತ್ರದಲ್ಲಿ ಸ್ಥಾಯಿಯಾಗಿರುವಂತೆ ಕಾಣುತ್ತಾ, ಹೇಗೆ ಉತ್ತರ ಕ್ಷಣದಲ್ಲಿಯೇ (ಕೂಡಲೇ) ಜ್ಞಾನಬಂಧಿತಗಳಾಗಿ ನಾಶ ಹೊಂದಿಬಿಡುವವೋ, ಹಾಗೆಯೇ ಈ ಜಗದ್ಭ್ರಾಂತಿಯೂ ಕೂಡ, ಕ್ಷಣಕಾಲ ಮಾತ್ರ ಸ್ಫುರಿಸುತ್ತಲೂ, ಪುನಃ ಕೂಡಲೆ ನಾಶಹೊಂದುತ್ತಲೂ ಇರುವದು. ಆದರೆ ಪೂರ್ವೋಕ್ತ ಸ್ವಪ್ನಾದಿಗಳು ಕೇವಲ ಸ್ವಲ್ಪಕಾಲ (ಭ್ರಾಂತಿಯಿರುವಷ್ಟು ಕಾಲ ಮಾತ್ರವೇ) ಇರತಕ್ಕವುಗಳು. ಈ ಜಗದ್ಭ್ರಾಂತಿಯಾದರೋ

ಸಾ ನ ತ್ವಯಾ ಕೃತಾ ನಿತ್ಯಂ ಚಿತ್ತ ದುಃಖಸುಖೋದಯೇ |
ಯಥಾ ವಿಯೋಗಯಾನಿನ್ಯೋ ಮತಯೋ ಹಂತಿ ರಾಗಿಣಂ || ೪೪ ||

ಮಯ್ಯೆವೇಹಾಸದಭ್ಯಾಸಾನ್ಮಿಥ್ಯಾ ಸದಿವ ಲಕ್ಷ್ಯಸೇ |
ಮೃಗತೃಷ್ಣೇವ ತೇನೈತತ್ವತ್ಕೃತಂ ಮತ್ಕೃತಂ ಭವೇತ್ || ೪೫ ||

ಇನ್ನೂ ಹೆಚ್ಚು ದೀರ್ಘಕಾಲ ಮೋಕ್ಷಪರ್ಯಂತ (ತತ್ವಜ್ಞಾನದಿಂದ ಬಾಧೆ ಪಡೆಯು ವವರೆಗೆ) ಇರತಕ್ಕುದು.

[ಹೀಗೆ ಕಾಲದಲ್ಲಿ ಹೆಚ್ಚುಕಡಿಮೆಯಾಗಿರುವಿಕೆಯು ಒಂದೇ ಜಗದ್ಭ್ರಾಂತಿಗೂ ಸ್ವಪ್ನಾದಿ ಭ್ರಾಂತಗಳಿಗೂ ಇರುವ ವಿಶೇಷ. ಭ್ರಾಂತಿರೂಪದಿಂದ ಇವೆರಡೂ ಒಂದೇ ವ್ಯತ್ಯಾಸವಿಲ್ಲ.]

೪೪. ಎಲೈ ಚಿತ್ತವೇ, ಒಬ್ಬ ಮನುಷ್ಯನ ಹೆಂಡತಿಯೂ ಮಕ್ಕಳೂ ಗ್ರಾಮಾಂತರದಲ್ಲಿ ಸುಖವಾಗಿ ಬದುಕಿರುವಾಗಲೇ, ಬೇರೆ ಯಾವನೊಬ್ಬನೋ ಮತ್ತೊಬ್ಬ ಮೋಸಗಾರನು ಅವನನ್ನು ಮರುಳು ಮಾಡುವದಕ್ಕಾಗಲೀ, ವಿನೋದ ಕ್ಕಾಗಲೀ ಅವನ ಹೆಂಡತಿ ಮಕ್ಕಳು ಏನೋ ಒಂದು ಕಾರಣದಿಂದ ಸತ್ತುಹೋಗಿ ಬಿಟ್ಟರೆಂದು ಸುಳ್ಳು ಸುದ್ದಿಯೇ ಆದರೂ ನಂಬಿಕೆ ಹುಟ್ಟುವಂತೆ ಹೇಳಿದರೆ, ಆಗ ಅನುರಕ್ತನಾದ ಅವನಿಗೆ ಆ ಸುಳ್ಳು ಸುದ್ದಿಯೂ ಅವರ ವಿಯೋಗ ದುಃಖಮಯ ವಾದ ರಾತ್ರಿಗಳೂ, ನಿಜವಾಗಿ ಅವರು ಬದುಕಿರುವ ವಾಸ್ತವಾಂಶ ಸರಿಯಾಗಿ ಗೊತ್ತಾಗುವವರೆಗೂ ಹೇಗೆ ವಿಶೇಷ ಪೀಡಾಪ್ರದವಾಗಿರುವವೋ, ಹಾಗೆಯೇ ಮೇಲ್ಕಂಡ ನಾನಾ ಭ್ರಾಂತಿಗಳಲ್ಲಿ ಸ್ವಲ್ಪಕಾಲವಿರತಕ್ಕವುಗಳು ಕೆಲವು ಎಂದು, ಕಾಲದಲ್ಲಿನ ಹೆಚ್ಚು ಕಡಿಮೆಯನ್ನು ನೀನೇ, ವ್ಯಾವಹಾರಿಕ ವಸ್ತುಗಳಲ್ಲಿ ನಿನಗೆ ಸಹಜವಾಗಿರುವ ಸತ್ಯತ್ವ ಭ್ರಾಂತಿಯಿಂದ ಅವುಗಳ ಸಂಯೋಗದ ಸುಖವೂ, ವಿಯೋಗದಿಂದ ದುಃಖವೂ ಉದಯಿಸುವದಕ್ಕೆ ಕಾರಣವನ್ನಾಗಿ ಕಲ್ಪಿಸಿಕೊಂಡು, ಅದರಿಂದಲೇ ಸರ್ವದಾ ದುಃಖಕ್ಕೆ ಗುರಿಯಾಗಿರುವೆ.

೪೫. ನಾನೇ ಭ್ರಾಂತಿಯ ಮೂಲಕ, ಅತ್ಯಾಂತಾಸದ್ವಸ್ತುವಾದ ನಿನ್ನಲ್ಲಿ (ಚಿತ್ತ) ಅಹಂಭಾವವನ್ನು ಅಧ್ಯಾಸಮಾಡಿಕೊಂಡು, ಆ ಭಾವನೆಯನ್ನೇ ದೃಢವಾಗಿ ಅಭ್ಯಾಸ ಮಾಡುತ್ತಾ, ಅದೇ ಸಂಸ್ಕಾರದಿಂದ ಕೂಡಿದವನಾಗಿ, ಬಿಸಿಲ್ಗುದುರೆ

ಯದಿದಂ ಕಿಂಚಿದಾಭೋಗಿ ತತ್ಸರ್ವಂ ದೃಶ್ಯಮಂಡಲಂ |
ಅವಸ್ತ್ವಿತಿ ವಿನಿರ್ಣೀಯ ಮನೋ ಯಾತ್ಯಮನಃಪದಂ || ೪೬ ||

ಅವಸ್ತ್ವಿದಮಿತಿ ಸ್ಫಾರೇ ರೂಢೇ ಮನಸಿ ನಿಶ್ಚಯೇ |
ಹೇಮಂತ ಇವ ಮಂಜರ್ಯಃ ಕ್ಷೀಯಂತೇ ಭೋಗವಾಸನಾಃ || ೪೭ ||

ಚಿತಾದೃಷ್ಟಾತ್ಮನಾ ನೂನಂ ಸಂತ್ಯಕ್ತಮನನೌಜಸಾ |
ಮನಸಾ ವೀತರಾಗೇಣ ಸ್ವಯಂ ಸ್ವಸ್ಥೇನ ಭೂತಲೇ || ೪೮ ||

ಯಂತೆ ಅಸತ್ಯವಾಗಿರುವ ನಿನ್ನನ್ನು ಸತ್ಯವಸ್ತುವಿನಂತೆ ಭಾವಿಸಿರುವೆನು. ಈ ಕಾರಣ ದಿಂದ ನೀನು ಮಾಡಿದುದೆಲ್ಲವೂ ನಾನು ಮಾಡಿದಂತೆಯೇ ಆಗಿಬಿಟ್ಟಿರುವದು.

೪೬. ಆದುದರಿಂದ, ಅತ್ಯಂತ ವಿಸ್ತಾರವಾಗಿ ನಾನಾಕಾರವಾಗಿರುವ ಯಾವ ಯಾವ ಈ ದೃಶ್ಯ ಪ್ರಪಂಚವು ಪ್ರತಿಭಾಸಮಾನವಾಗಿರುವದೋ, ಅದು ಸಮಸ್ತವೂ ಕೂಡ ಶಶವಿಷಾಣಾದಿಗಳಂತೆಯೇ ಅತ್ಯಂತಾಸತ್ಯವಾದುದು ಎಂದು ದೃಢ ನಿಶ್ಚಯ ಮಾಡಿಕೊಂಡುಬಿಟ್ಟರೆ, ಆ ಕೂಡಲೇ ಮನಸ್ಸು ಭ್ರಾಂತಿಕಲ್ಪಿತವಾದ ತನ್ನ ಮನೋಭಾವವನ್ನು ಕಳೆದುಕೊಂಡು ಅಸತ್ಯವೇ ಆಗಿಬಿಡುವದು.

[ಅಂದರೆ ಮನೋನಾಶವಾಗುವದೆಂದರ್ಥ.]

೪೭. ಹೀಗೆ ತತ್ತ್ವವಿಚಾರದಿಂದಲೂ, ಶಾಸ್ತ್ರಾಚಾರ್ಯೋಪದೇಶದಿಂದಲೂ, ಮನಸ್ಸಿನ ವಿಷಯದಲ್ಲಿರುವ ಸತ್ಯತ್ವ ಬುದ್ಧಿಯು ನಿರ್ಮೂಲವಾಗಿ, ಇದು ಅಸತ್ಯವಾದುದೇ ಎಂಬ ನಿಶ್ಚಯ ಜ್ಞಾನವು (ಸಂಶಯಗಳಿಗೆ ಅವಕಾಶವಿಲ್ಲದಂತೆ) ದೃಢವಾಗಿ ಬೆಳಗುತ್ತಿರಲಾಗಿ, ಮನಸ್ಸನ್ನು ಉತ್ಪತ್ತಿ ಮಾಡಿ, ಪೋಷಿಸತಕ್ಕ ಭೋಗವಾಸನೆಗಳೂ ಕೂಡ ಮನಸ್ಸಿನ ಸಂಗಡಲೇ ಹೇಮಂತಋತುವಿನಲ್ಲಿ ಪುಷ್ಪಮಂಜರಿಗಳು ತಾವಾಗಿಯೇ ನಾಶವಾಗುವಂತೆ, ನಾಶ ಹೊಂದುವವು.

೪೮. ಅಥವಾ, ಈ ಮನಸ್ಸು ವಿವೇಕ ಜ್ಞಾನದಿಂದ ತನ್ನಲ್ಲಿರುವ ರಾಗಾಭಿಮಾನಾದಿ ದೋಷಗಳನ್ನು ಕಳೆದುಕೊಂಡು, ನಿರ್ಮೂಲವಾಗಿ ತನ್ನೊಳಗೆ ಚಿತ್ತಿನ ಪ್ರತಿಬಿಂಬವನ್ನು ಗ್ರಹಿಸುವದರ ಮೂಲಕ ಚಿದ್ಭಾವವನ್ನು ಹೊಂದುವದು. ಪುನಃ ರಾಗಾದಿಗಳು ಉತ್ಪನ್ನವಾಗುವದಿಲ್ಲ. ಆದಕಾರಣವೇ ಅದು ವಿಷಯೋಪಭೋಗ

ಪರಮಾತ್ಮಾನಲೇ ಕ್ಷಿಪ್ತಂ ಸಂವೃತ್ಯಾವಯವಂ ಸ್ವಯಂ |
ದಗ್ಧ್ವಾತ್ಮಾನಮಲಂ ಚಿತ್ತಂ ಶುದ್ಧತಾಮೇತಿ ಶಾಶ್ವತೀಂ || ೪೯ ||

ದೇಹಮನ್ಯತಯಾ ದೃಷ್ಟ್ವಾ ತ್ಯಕ್ತ್ವಾ ವಿಷಯವಾಸನಾಂ |
ವಿನಾಶಮುರರೀಕೃತ್ಯ ಮನೋ ಜಯತಿ ವೀರವತ್ || ೫೦ ||

ಗಳ ಮನನಾದಿ ವ್ಯಸನಗಳನ್ನು ಸಂಪೂರ್ಣವಾಗಿ ಪರಿತ್ಯಾಗ ಮಾಡಿ, ಆತ್ಮ ಸಾಕ್ಷಾತ್ಕಾರವನ್ನು ಪಡೆದು, ಸ್ವತಏವ ಸ್ವಸ್ವರೂಪವಾದ ನಿರ್ವಿಕಾರಾತ್ಮ ಸ್ಥಿತಿಯಲ್ಲಿ ಸ್ಥಿರವಾಗಿದ್ದುಕೊಂಡು, ಸರ್ವದಾ ವಿಶ್ರಮಿಸಿಕೊಳ್ಳುತ್ತಾ ಆತ್ಮಾನಂದವನ್ನು ಅನುಭವಿಸುವದು.

೪೯. ಈ ಚಿತ್ತವೆಂಬುದು ತತ್ವಜ್ಞಾನದಿಂದ ನಿಷ್ಪ್ರಪಂಚಾದ್ವಿತೀಯಾತ್ಮ ಸ್ವರೂಪವೆಂಬ ಅಗ್ನಿಯನ್ನು ಪ್ರವೇಶಮಾಡಿದ ಕೂಡಲೇ, ವಿಸ್ತಾರವಾಗಿ ಪ್ರಸರಿಸಿಕೊಂಡಿದ್ದ ಅದರ ಚಕ್ಷುರಾದಿ ಅವಯವಗಳೆಲ್ಲವೂ ಮುದುರಿಕೊಂಡು ಸಂಕುಚಿತವಾಗುವವು. ಅದರ ಶರೀರವೆಲ್ಲವೂ ನಿಶ್ಶೇಷವಾಗಿ ಸುಟ್ಟುಹೋಗಿ, ಅದರ ಹೆಸರೂ ಉಳಿಯದಂತಾಗುವದು. ಆಗಲೇ ಅದು ಪುಟಕ್ಕೆ ಹಾಕಿದ ಚಿನ್ನದಂತೆ ಶಾಶ್ವತವಾದ ಪರಿಶುದ್ಧತೆಯನ್ನು ಹೊಂದಿ ನಿರ್ಮಲವಾಗಿ ಸ್ವತಃ ಪ್ರಕಾಶಿಸುವದು.

೫೦. ಮಹಾವೀರ ಕ್ಷತ್ರಿಯನು ರಣರಂಗದಲ್ಲಿರುವಾಗ (ತಾನು ಯುದ್ಧದಲ್ಲಿ ಮಡಿದರೆ ವೀರಸ್ವರ್ಗವನ್ನು ಸೇರತಕ್ಕವನೆಂದೂ ಆವಕಾರಣವೇ–ಆಗಿನ ತನ್ನ ದೇಹ ತನಗಿಂತಲೂ ಬೇರೆ ಯಾದುದೆಂದೂ ದೃಢವಾಗಿ ತಿಳಿದುಕೊಂಡಿರುವನು. ಆತನ ದೇಹ ಸಂಬಂಧಿಗಳಾದ–ಗೃಹಕ್ಷೇತ್ರಾದಿ ಸರ್ವ ವಿಷಯಗಳಲ್ಲಿ ತನಗೆ ಸಹಜವಾಗಿದ್ದ ಅಭಿಮಾನ ರೂಪವಾಸನೆಯನ್ನು ಪರಿತ್ಯಜಿಸುವನು.) ತನ್ನ ದೇಹವು ಮೃತಿ ಹೊಂದುವುದನ್ನೂ ಲಕ್ಷ್ಯಮಾಡದೆ ತೃಣೀಕರಿಸಿ ಮರಣವನ್ನು ಸಂತೋಷದಿಂದ ಅಂಗೀಕರಿಸುವನು. ಕೊನೆಗೆ ಸತ್ಯಲೋಕಾದಿ ಲೋಕಾಂತರಗಳನ್ನೂ ಜಯಿಸುವನು. ಇದರಂತೆಯೇ ವಿಚಾರಪರನಾದ ಜ್ಞಾನಿಯ ಮನಸ್ಸು–ತನಗೆ ಭ್ರಾಂತಿ ಕಲ್ಪಿತನಾದ ದೇಹವು ತನ್ನದಲ್ಲವೆಂದು ತಿಳಿದುಕೊಂಡು–ಶಬ್ದಾದಿ ವಿಷಯಗಳಲ್ಲಿ ತನಗೆ ಸಹಜವಾಗಿದ್ದ ಪೂರ್ವವಾಸನೆಯನ್ನು ಪರಿತ್ಯಜಿಸಿ ತನ್ನ ನಾಶವನ್ನೂ ಅಂಗೀಕರಿಸಿದರೆ ಆಗ ಕೊನೆಗೆ ಸರ್ವತ್ರ ಜಯಹೊಂದಿ ಶತ್ರು ಭಯವಿಲ್ಲದೆ ಸುಖಿಸುವುದು.

ಮನಃ ಶತ್ರುಃ ಶರೀರಸ್ಯ ಶರೀರಂ ಮನಸೋ ರಿಪುಃ ।
ಏಕಾಭಾವೇನ ನಶ್ಯೇತೇ ಆಧಾರಾಧೇಯಕಾರ್ಯವತ್ ॥ ೫೧ ॥

ರಾಗದ್ವೇಷವತೋರ್ನಿತ್ಯಮನ್ಯೋನ್ಯಾತಿವಿರುದ್ಧಯೋಃ ।
ಏತಯೋರ್ಮೂಲಕಾಷೇಣ ವಿನಾಶಃ ಪರಮಂ ಸುಖಂ ॥ ೫೨ ॥

---

೫೧. ಶರೀರಕ್ಕೆ ಮನಸ್ಸು ಶತ್ರು. ಮನಸ್ಸಿಗೆ ಶರೀರವು ಶತ್ರು. ಅಂದರೆ ಶರೀರವೂ ಮನಸ್ಸೂ ಪರಸ್ಪರ ಸಂತಾಪಕಾರಿಗಳು. ಆಧಾರಾಧೇಯಗಳೊಳಗೆ ಯಾವದೊಂದು ನಾಶವಾದರೂ ಅವುಗಳ ಪರಸ್ಪರ ಸಂಯೋಗರೂಪವಾದ ಕಾರ್ಯವೂ ನಾಶವಾಗಿಬಿಡುವಂತೆಯೇ, ಈ ಶರೀರ ಮನಸ್ಸುಗಳೊಳಗೆ ಯಾವದಾದರೊಂದಕ್ಕೆ ಮತ್ತೊಂದರಲ್ಲಿ (ಅನ್ಯೋನ್ಯವಾಗಿ) ಇರುವ ಅಭಿಮಾನವು ನಾಶಹೊಂದಿಬಿಟ್ಟರೆ ಅದರಿಂದಲೇ ಅವುಗಳೆರಡೂ ನಾಶವಾಗಿಬಿಡುವವು.

[ಈ ಶರೀರ ಮನಸ್ಸುಗಳೆರಡೂ ಅನ್ಯೋನ್ಯತಾದಾತ್ಮ್ಯಾಭಿಮಾನದ ಮೂಲಕ ಪರಸ್ಪರ ಅಭಿವೃದ್ಧಿಗೊಂಡಿವೆ. ಪರಸ್ಪರ ಆಶ್ರಯವನ್ನು ಅವಲಂಬಿಸಿಕೊಂಡು ಜೀವಿಸಿರುವವು. ಹೀಗಿರುವ ಕಾರಣ, ಇವೆರಡರಲ್ಲಿ ಯಾವದೊಂದು ಅಭಿಮಾನ ತ್ಯಾಗಮಾಡಿದರೂ ಅದರಿಂದಲೇ ಎರಡೂ ನಾಶಹೊಂದಿಬಿಡುವವು ಎಂದು ತಾತ್ಪರ್ಯ.

ಘಟವು ಜಲಾದಿಗಳಿಗೆ ಆಧಾರ. ಅದರೊಳಗಿರುವ ಜಲಾದಿಗಳು ಆಧೇಯಗಳು—ಎಂದು ತಿಳಿಯಬೇಕು.]

೫೨. ಹೀಗೆ ಸರ್ವದಾ ಪರಸ್ಪರ ರಾಗದ್ವೇಷಗಳನ್ನು ಬೆಳೆಯಿಸಿಕೊಂಡು, ಪರಸ್ಪರ ಸಂತಾಪಕಾರಿಗಳಾಗಿ, ಪರಸ್ಪರ ಅತ್ಯಂತ ವಿರುದ್ಧ ಸ್ವಭಾವವುಳ್ಳ (ಮನಸ್ಸನ್ನೂ ಶರೀರವನ್ನೂ) ಇವೆರಡನ್ನೂ ಇವುಗಳ ಮೂಲಕಾರಣವಾದ ಅಜ್ಞಾನದೊಡನೆ ತತ್ವಜ್ಞಾನದಿಂದ ನಾಶಮಾಡಿಬಿಟ್ಟರೆ ಅದರಿಂದ ನಿರತಿಶಯ ನಿತ್ಯಾನಂದಾವಾಪ್ತಿಯು (ಮೋಕ್ಷವು) ಲಭಿಸುವದರಲ್ಲಿ ಸಂದೇಹವೇ ಇಲ್ಲ.

ಏತಯೋರೇಕಸಂಸ್ಥಾನೇ ವ್ಯತಿರೇತೀತಿ ಯಾ ಕಥಾ |
ಸಾ ವ್ಯೋಮ್ನಯಾ ಸ್ತ್ರಿಯಾ ಭುಕ್ತಾ ಧರೇತಿ ಕಥಯಾ ಸಮಾ || ೫೩ ||

ಅಕೃತ್ತ್ರಿಮಾವಿರೋಧಸ್ಥೌ ಯತ್ರ ಸಂಘಟಿತಾವುಭೌ |
ಧಾರಾ ಇವ ಪತಂತ್ಯೇವ ತತ್ರಾನರ್ಥಪರಂಪರಾಃ || ೫೪ ||

---

೫೩. ಮೇಲ್ಕಂಡ ಮನಸ್ಸು ಮತ್ತು ಶರೀರ ಇವೆರಡರೊಳಗೆ ಭೋಗಾಯತನವಾದ ಶರೀರವು ಮಾತ್ರ ಮರಣ ಹೊಂದಿ ಇನ್ನೊಂದಾದ ಮನಸ್ಸು ಹಾಗೆಯೇ ಸಜೀವವಾಗಿ ಉಳಿದಿರುವಾಗ ಆ ಮನಸ್ಸೇ ದೇಹ ಕಲ್ಪನಾ ಸಮರ್ಥವಾಗಿದ್ದು ಕೊಂಡಿರುವದರಿಂದ ದೇಹಕಲ್ಪನೆಯು ನಿವಾರಣೆಯಾಗುವದೇ ಇಲ್ಲ. ಮನಸ್ಸು ಉಳಿದಿರುವವರೆಗೂ ದೇಹಗಳು ಮೇಲಿಂದ ಮೇಲೆ ತಡೆಯಿಲ್ಲದೆ ಅದರ ಕಲ್ಪನೆಯಿಂದ ಉತ್ಪನ್ನವಾಗುತ್ತಲೇ ಇರುವವು. ಹೀಗಿರುವಲ್ಲಿ " ಭೋಗಾಯತನವಾದ ಶರೀರವು ಮರಣಹೊಂದಿತು. ಇನ್ನು ದೇಹವೇ ನಾಶವಾದ ಬಳಿಕ ಸರ್ವ ದುಃಖಾನುಭವವೂ ಪರಿಹಾರವಾಯಿತು " ಎಂದು ಹೇಳುವ ಮಾತು " ಆಕಾಶದಲ್ಲಿ ಸಂಚಾರ ಮಾಡುತ್ತಿದ್ದ ಒಬ್ಬ ಸ್ತ್ರೀಯು ಭೂಮಂಡಲವನ್ನೆಲ್ಲ ನುಂಗಿಬಿಟ್ಟಳು " ಎಂಬ ಅತ್ಯಂತಾಸಂಭಾವಿತವಾದ ಭ್ರಾಂತಜನ ಪ್ರಲಾಪದಂತೆ ಕೇವಲ ಉಪೇಕ್ಷಣೀಯವೂ ಹಾಸಾಸ್ಪದವೂ ಆದುದೇ ಸರಿ.

[ಅಯಸ್ ಸ್ತ್ರಿಯಾ ಎಂಬ ಪಾಠಾಂತರವೂ ಇದ್ದಂತೆ ಕಾಣುವದು. ಆಗ ಅಯಸ್ ಎಂದರೆ ಕಬ್ಬಿಣ, ಉಕ್ಕು, ಲೋಹ ಎಂದರ್ಥ. ಕಬ್ಬಿಣವೆಂಬ ಲೋಹಮಯವಾದ ಒಂದು ಸ್ತ್ರೀವ್ಯಕ್ತಿಯು ಆಕಾಶದಲ್ಲಿ ಸಂಚರಿಸುವದೂ ಅದು ಭೂಮಂಡಲವನ್ನು ನುಂಗುವದೂ ಅತ್ಯಂತಾಸಂಭಾವಿತವು ಹೇಗೆಯೋ ಹಾಗೆ ಎಂದರ್ಥವಾಗುವದು.]

೫೪. (ಗಜಸಿಂಹಾದಿ ಪ್ರಾಣಿಗಳಂತೆ ಪರಸ್ಪರ ಸಹಜ ದ್ವೇಷಿಗಳಾದ) ಮನಸ್ಸು ಶರೀರಗಳೆರಡೂ ಎಲ್ಲಿ ಒಟ್ಟಿಗೆ ಕಲೆತು ಸೇರಿಕೊಂಡಿರುವವೋ ಅಲ್ಲಿ ಅನುಕೂಲ ವಾತಾವರಣದಿಂದ ಕೂಡಿದ ಮೇಘಗಳಿಂದ ಪರ್ವತಗಳ ಮೇಲೆ ವರ್ಷರ್ತುವಿನಲ್ಲಿ ಸಂತತ ವರ್ಷಧಾರೆಗಳು ಸುರಿಯುವಂತೆ ಅವಿಚ್ಛಿನ್ನವಾಗಿ ಸರ್ವದಾ ಅನರ್ಥ ಪರಂಪರೆಗಳು ಮೇಲಿಂದ ಮೇಲೆ ಬಂದು ಬೀಳುತ್ತಲೇ ಇರುವವು.

ನಿಥೋ ವಿರುದ್ಧಸಂಸರ್ಗೇ ರತಿರ್ಮೇತ್ಯಧಮೋ ಹಿ ಯಃ |
ತ್ಯಕ್ತವ್ಯಃ ಸ ಪತದ್ವಾರಾವಗ್ನಿರಾಶಾವಲೇಪನೇ || ೫೫ ||

ಸಂಕಲ್ಪೇನ ಮನಃ ಪುಷ್ಟ್ವಾ ಶರೀರಂ ಬಾಲಯಕ್ಷವತ್ |
ವಾಯುರೇವಾಶನಾನ್ಯಸ್ಮೈ ಸ್ವದುಃಖಾನಿ ಪ್ರಯಚ್ಛತಿ || ೫೬ ||

ತೈರ್ದುಃಖೈಸ್ತಾಪಿತೋ ದೇಹೋ ಮನೋ ಹಂತುಮಥೇಚ್ಛತಿ |
ಪುತ್ರೋಪಿ ಹಂತಿ ಪಿತರಮಾತತಾಯಿಪದಂ ಗತಂ || ೫೭ ||

---

೫೫. ಹೀಗೆ ಅನ್ಯೋನ್ಯ ವಿರುದ್ಧ ಸ್ವಭಾವವುಳ್ಳ ಮನಶ್ಶರೀರಗಳು ಶಬ್ದಾದಿಗಳೊಡನೆ ಸಂಸರ್ಗವನ್ನು ಹೊಂದಿದಾಗ ಲಭ್ಯವಾಗುವ ವೈಷಯಿಕ ಸುಖಭೋಗಗಳಲ್ಲಿ ಯಾವ ನರಾಧಮನು ವಿಶೇಷವಾದ ಅನುರಾಗವನ್ನು ಇಡುವನೋ, ಅವನನ್ನು ಆವರಣ ರಹಿತವಾಗಿಯೂ, ಸದಾ ಮೇಲೆ ಸುರಿಯುವ ಸಮುದ್ರ ಜಲದ ಮಧ್ಯದಲ್ಲಿ ಅಡಗಿಯೂ ಇರುವ ಬಡಬಾಗ್ನಿಯಲ್ಲಿ ಎಸೆಯಬೇಕು. ಆಗಲೂ ಅಲ್ಲಿಯೂ ಅವನು ಆನಂದಪಡುವವನೇ ಸರಿಯೆಂದು ಹೇಳಬೇಕಾಗುವದು.

೫೬. ಮಕ್ಕಳುಗಳು ಭ್ರಾಂತಿಯಿಂದ ಬೇತಾಳನನ್ನು ಕಲ್ಪಿಸಿಕೊಂಡು, ಅಸತ್ತಾದುದಾದರೂ ಅದರಿಂದ ಹೆದರುತ್ತಾ ಗೋಳಿಡುವರು. ಅಂತೆಯೇ ಮನಸ್ಸು ಸ್ವಸಂಕಲ್ಪದಿಂದ ಮಿಥ್ಯೆಯಾಗಿಯೇ ಶರೀರವನ್ನು ಕಲ್ಪಿಸಿಕೊಂಡು, ತಾನು ಬದುಕಿರುವ ಪರ್ಯಂತವೂ ಅದರ ಬೆಳವಣಿಗೆಗೆ ಅತ್ಯಾವಶ್ಯಕವಾದ ಆಹಾರ ಸಾಮಗ್ರಿಗಳನ್ನು ಒದಗಿಸಿಕೊಟ್ಟು ಅದನ್ನು ಪೋಷಣೆ ಮಾಡಿ, ಕೊನೆಗೆ ತನ್ನ ಸರ್ವದುಃಖಗಳನ್ನೂ ಅದಕ್ಕೆ ಕೊಡುವದು.

೫೭. ಹೀಗೆ ದುಃಖಪರಂಪರೆಗಳಿಂದ ಸಂತಾಪಿತವಾದ ದೇಹವು ಬಳಿಕ, ತನ್ನ ವೈರಿಯಾಗಿದ್ದುಕೊಂಡು ತನಗೆ (ದುಃಖವನ್ನುಂಟುಮಾಡುವ) ದುಃಖಹೇತುವಾಗಿರುವ ಆ ಮನಸ್ಸನ್ನೇ ಕೊಂದು ನಾಶಪಡಿಸಬೇಕೆಂದು ಉತ್ಸಾಹಗೊಳ್ಳುವದು. ತನಗೆ ಜನಕನೇ ಆಗಿದ್ದರೂ, ಅವನು (ತಂದೆಯು) ಬುದ್ಧಿ ಭ್ರಮಣೆ ಮುಂತಾದ ಯಾವದೋ ಕಾರಣದಿಂದ ಪ್ರೇರಿತನಾಗಿ ಮಗನೆಂಬುದನ್ನೂ ಲಕ್ಷಿಸದೆ, ದುರ್ಮಾರ್ಗಗಾಮಿಯಾಗಿ ಮಗನನ್ನು ಕೊಲ್ಲಲು ಉದ್ಯುಕ್ತನಾದರೆ, ಆಗ ಆ ಮಗನೂ ಕೂಡ

ನಾಸ್ತಿ ಶತ್ರುಃ ಪ್ರಕೃತ್ಯೈವ ನ ಚ ಮಿತ್ರಂ ಕದಾಚನ |
ಸುಖಂ ಮಿತ್ರಮಿತ್ಯುಕ್ತಂ ದುಃಖದಾಃ ಶತ್ರವಃ ಸ್ಮೃತಾಃ || ೫೮ ||

ದೇಹೋ ದುಃಖಾನ್ಯನುಭವನ್ಮನೋ ಹಂತುಮಿಚ್ಛತಿ |
ದೇಹಂ ಮನಃ ಖದುಃಖಾನಾಂ ಖಕೇತಂ ಕುರುತೇ ಕ್ಷಣಾತ್ || ೫೯ ||

ಆತತಾಯಿಯಾದ ತಂದೆಯನ್ನಾದರೂ ನಿಗ್ರಹಿಸಲೇಬೇಕಾಗುವುದು. ಇದು ಶಾಸ್ತ್ರ ಸಮ್ಮತವು.

[ಆತತಾಯೀ ಅನ್ಯಾಯದಿಂದ ಪ್ರೇರಿತನಾಗಿ ಇತರರನ್ನು ಕೊಲ್ಲಲು ಬರುವ ಘಾತುಕನೆಂದರ್ಥ. "ಆತತಾಯಿನ ಮಾಯಾಂತಂ ಹನ್ಯಾದೇವಾವಿಚಾರಯರ್| ಆತತಾಯಿವಧೇ ದೋಷೋ ನಾಸ್ತಿ ಹೇತುಃ ಕಥಂಚನ" ಎಂದು ಧರ್ಮಶಾಸ್ತ್ರವಿರುವುದು. ಯಾವುದೊಂದು ವಿಚಾರವನ್ನೂ ಗಣನೆಗೆ ತಾರದೆ ಆತತಾಯಿಯಾದವನನ್ನು ಕೊಂದು ಹಾಕಿದರೂ (ಆತ್ಮರಕ್ಷಣೆಯ ಪ್ರಯತ್ನದಲ್ಲಿ) ಪಾಪವು ಸಂಘಟಿಸುವದಿಲ್ಲ. ಇಲ್ಲಿ ಶರೀರಕ್ಕೆ ಮನಸ್ಸು ತಂದೆ. ತಂದೆಯಾಗಿದ್ದರೂ ನಾನಾ ದುಃಖಗಳಿಂದ ಸಂತಾಪಗೊಳಿಸಿ ತನ್ನ ವಿನಾಶಕ್ಕೇ ಮನಸ್ಸು ಕಾರಣವಾಗಿರುವದರಿಂದ ಆ ಮನಸ್ಸು ಆತತಾಯಿಯೆನ್ನಿಸಿಕೊಂಡ ತಂದೆಯಾಯಿತು. ದೇಹವು ಅಂತಹುದನ್ನು ಕೊಂದರೂ ಪಾಪ ಭಯವಿಲ್ಲ ಎಂಬುದು ತಾತ್ಪರ್ಯ.]

೫೮. ಪ್ರಪಂಚದಲ್ಲಿ ಯಾರಿಗೆ ಯಾರೂ ಸ್ವಭಾವತಃ ಎಂದಿಗೂ ಶತ್ರುವೆನ್ನಿಸುಸುವುದೂ ಇಲ್ಲ, ಮಿತ್ರನೆನ್ನಿಸುವುದೂ ಇಲ್ಲ, ಯಾರು ತಮ್ಮ ಸುಖಕ್ಕೆ ಕಾರಣರಾಗ್ರುವರೋ ಅವರನ್ನು ಮಿತ್ರರೆನ್ನುವರು. ದುಃಖಪ್ರದರಾದವರನ್ನು ಜನರು ಶತ್ರುಗಳೆಂದು ಕರೆಯುವರು.

೫೯. ದೇಹದ ಆವಿರ್ಭಾವಕ್ಕೆ ಕಾರಣವಾದ ಮನಸ್ಸು ತನ್ನ ಪುತ್ರಪ್ರಾಯವಾದ ಸ್ವರೂಪ ನಾಶಕಗಳಾದ ನಾನಾವಿಧ ದುಃಖಗಳನ್ನು ತಂದು ಹೇರುವುದು. ದೇಹವಾದರೋ ಆ ದುಃಖಗಳನ್ನೆಲ್ಲಾ ಅನುಭವಿಸುತ್ತಾ ಬೇಸರಗೊಂಡು ರೋಷದಿಂದ ತನ್ನ ದುಃಖಗಳಿಗೆ ನಿದಾನರಾದ ವೈರಿಯೆನಿಸಿರುವ ಮನಸ್ಸನ್ನೂ ಕೊಂದು ಹಾಕಲು ಪ್ರಯತ್ನಿಸುವುದು. ಹೀಗೆಯೇ, ಮನಸ್ಸೂ ಕೂಡ ತನ್ನ ದುಃಖಗಳಿಗೆಲ್ಲಾ

ಏವಂ ಮಿಥೋ ದುಃಖದಯೋಃ ಶ್ಲಿಷ್ಟಯೋಃ ಕಃ ಸುಖಾಗಮಃ |
ಏತಯೋರ್ದೇಹಮನಸೋರ್ಜಾತ್ಯೈವಾತಿವಿರುದ್ಧಯೋಃ. || ೬೦ ||

ಮನಸ್ಯೇವ ಪರಿಕ್ಷೀಣೇ ನ ದೇಹೋ ದುಃಖಭಾಜನಂ |
ತತ್ ಕ್ಷಯೋತ್ಕತಯಾ ನಿತ್ಯಂ ದೇಹೋಽಪಿ ಪರಿಧಾವತಿ || ೬೧ ||

ನಷ್ಟಾನಷ್ಟಮನರ್ಥಾಯ ಶರೀರಂ ಪದಮಾಪದಾಂ |
ಅಲಬ್ಧಾತ್ಮವಿವೇಕೇನ ಮನಸಾ ಸುಪ್ರಜಾಯತೇ. || ೬೨ ||

ಏತೇ ಮನಃಶರೀರೇ ಹಿ ಮಿಥಃ ಪೀವರತಾಂ ಗತೇ |
ಜಡರೂಪೇ ಹಿ ವಪುಷಾ ಪಯೋದಸರಸೀ ಯಥಾ || ೬೩ ||

ದೇಹವೇ ವಾಸಸ್ಥಾನವೆಂದು (ಮನೆಯೆಂದು) ಭಾವಿಸಿ ಅದನ್ನು ದ್ವೇಷಿಸುತ್ತಾ ಬಲು ಬೇಗನೇ ಅದರ ವಿನಾಶಕ್ಕಾಗಿ ಯತ್ನಿಸುವುದು.

೬೦. ಹೀಗೆ ಒಂದಕ್ಕೊಂದು ದುಃಖವನ್ನುಂಟುಮಾಡುವ, ಒಂದರೊಡನೆ ಒಂದು ಬೆರೆದು ಹೋಗಿರುವ, ಈ ಮನಶ್ಶರೀರಗಳಿಗೆ ಸುಖವು ಬರುವದು ಎನ್ನುವದೇನು? ಇವು ಹುಟ್ಟುವಾಗಲೇ ಒಂದಕ್ಕೊಂದು ವಿರೋಧಿಗಳಾಗಿಯೇ ಹುಟ್ಟುವವು.

೬೧. ಮನಸ್ಸು ಕ್ಷಯವನ್ನು ಹೊಂದಿದರೆ, ದೇಹವು ದುಃಖಪ್ರದವಾಗುವದಿಲ್ಲ. ಮನಸ್ಸು ಕ್ಷಯಮುಖವಾಗಿರಲು ದೇಹವೂ ಅತ್ತಕಡೆಗೇ ಹೋಗುತ್ತಿರುವದು.

೬೨. ಇರುವ, ಹೋಗುವ, ಅನರ್ಥಗಳಿಗೆಲ್ಲ, ಆಪತ್ತುಗಳಿಗೆಲ್ಲ ಶರೀರವೇ ಆಶ್ರಯವು. ಆತ್ಮಜ್ಞಾನ ಸಂಪನ್ನವಲ್ಲದ ಮನಸ್ಸು ದೇಹವನ್ನು ಸೃಷ್ಟಿಸುತ್ತಲೇ ಇರುವದು.

೬೩. ಈ ಮನಸ್ಸೂ ಶರೀರವೂ ಒಂದರಿಂದ ಇನ್ನೊಂದು ಬೆಳೆಯುವದು. ಎರಡೂ ಜಡಗಳು. ಮೋಡವೂ ಸರೋವರವೂ ಒಂದಕ್ಕೊಂದು ಪೋಷಕವಾಗುವಂತೆ ಇವೆರಡೂ ಒಂದರಿಂದ ಒಂದು ನಿಂತಿರುವವು.

ಮಿಥೋ ದುಃಖಾಯ ಸಂಪನ್ನೇ ಏಕರೂಪೇ ದ್ವಿಧಾ ಸ್ಥಿತೇ |
ವ್ಯವಹಾರಪರೇ ಸಾರ್ಥಂ ಲೋಕೇ ವಾರ್ಯನಲಾವಿವ || ೬೪ ||

ಚಿತ್ತೇ ಕ್ಷಯಿಣಿ ಸಂಕ್ಷೀಣೇ ದೇಹೋ ಹ್ಯಾಮೂಲಿತೋ ಭವೇತ್ |
ವರ್ಧಮಾನೇ ತರುರಿವ ಶತಶಾಖಃ ಪ್ರವರ್ತತೇ || ೬೫ ||

ಕ್ಷೀಯತೇ ಮನಸಿ ಕ್ಷೀಣೇ ದೇಹಃ ಪ್ರಕ್ಷೀಣವಾಸನಃ |
ಮನೋ ನ ಕ್ಷೀಯತೇ ಕ್ಷೀಣೇ ದೇಹೇ ತತ್ ಕ್ಷಪಯೇನ್ಮನಃ || ೬೬ ||

---

೬೪. (ಅಗ್ನಿಯಿಂದ ಜಲವು ಸಂಭವಿಸುವುದು. ಅವೆರಡೂ ಪರಸ್ಪರ ವಿರುದ್ಧ ಸ್ವಭಾವವುಳ್ಳ ವಿದ್ವೇಷಿಗಳು. ಅವೆರಡಕ್ಕೂ ಏಕತ್ರ (ಒಂದು ಸ್ಥಳದಲ್ಲಿ) ಸಮಾವೇಶವು ಆಗುವುದಿಲ್ಲ. ಹೀಗಿದ್ದರೂ ಲೋಕದಲ್ಲಿ ಪಾಕರೂಪ ಕ್ರಿಯೆಯು ನೆರವೇರಬೇಕಾದರೆ, (ಆಹಾರ ಪದಾರ್ಥಗಳು ಬೇಯಬೇಕಾದರೆ) ಅಗ್ನಿಯೂ ನೀರೂ ಒಟ್ಟಿಗೆ ಸೇರಲೇಬೇಕು. ಹೀಗೆಯೇ ದೇಹವು ಮನಸ್ಸಿನಿಂದ ಕಲ್ಪಿತವಾದುದು. ದೇಹವೂ ಮನಸ್ಸೂ ಪರಸ್ಪರ ಸಹಜ ವೈರವುಳ್ಳ ಅತ್ಯಂತ ವಿರುದ್ಧ ಸ್ವಭಾವವುಳ್ಳವುಗಳು, ಬೇರೆ ಬೇರೆ ಇದ್ದುಕೊಂಡಿರತಕ್ಕವುಗಳು. ಆದರೂ ಅನ್ಯೋನ್ಯ ತಾದಾತ್ಮ್ಯಾಧ್ಯಾಸದ ಮೂಲಕ ಏಕರೂಪಗಳಾಗಿ ದುಃಖಗಳನ್ನು ಅನುಭೋಗಿಸುವುದಕ್ಕೋಸ್ಕರವೂ ಮತ್ತೂ ಪರಿಹರಿಸಿಕೊಳ್ಳುವುದಕ್ಕೂ ಲೋಕದಲ್ಲಿ ಭೋಗಮೋಕ್ಷಗಳೆಂಬ ವ್ಯವಹಾರಗಳನ್ನು ಸಾಧನಮಾಡಿಕೊಡತಕ್ಕವುಗಳಾಗಿ ಒಂದು ಕಡೆ ಒಟ್ಟಿಗೆ ಪರಸ್ಪರ ಸೇರಿಕೊಂಡಿರುವುವು.

೬೫. ಚಿತ್ತವು ಸಹಜವಾಗಿಯೇ ಕ್ಷೀಣವಾಗತಕ್ಕುದು. ಈ ಚಿತ್ತವು ಚೆನ್ನಾಗಿ (ಸಂಪೂರ್ಣವಾಗಿ) ಆತ್ಮತತ್ತ್ವಜ್ಞಾನದಿಂದ ನಾಶಹೊಂದಿಬಿಟ್ಟರೆ ಆಗಲೇ ಅದರೊಂದಿಗೆ ದೇಹವೂ ನಿರ್ಮೂಲವಾಗಿ ನಾಶಹೊಂದಿದಂತೆಯೇ ಸರಿ. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದರೆ ಅದೇ ಚಿತ್ತವು ಸುಪುಷ್ಟವಾಗಿ ವೃದ್ಧಿಹೊಂದಿದರೋ ಆಗ ದೇಹವೂ ಕೂಡ ನೂರಾರು ಶಾಖೋಪಶಾಖೆಗಳಿಂದ ಅತಿ ವಿಸ್ತಾರವಾಗಿ ಹರಡಿಕೊಂಡಿರುವ ವನಸ್ಪತಿಯಂತೆ ನೂರಾರು ವಿಧಗಳಾಗಿ ವೃದ್ಧಿಹೊಂದಿ ಸರ್ವತ್ರ ಹರಡಿಕೊಳ್ಳುವುದು.

೬೬. ಮನಸ್ಸು ಕ್ಷಯಿಸಿ ನಾಶಹೊಂದಿದರೆ ಕೂಡಲೇ ದೇಹವೂ ತನ್ನಲ್ಲಿರುವ ಭೋಗವಾಸನಾದಿ ನಾನಾ ವಾಸನೆಗಳನ್ನೂ ಸಂಪೂರ್ಣ ಕಳೆದುಕೊಂಡದ್ದಾಗಿ

ಸಂಕಲ್ಪಪಾದಪಂ ತೃಷ್ಣಾಲತಂ ಛಿತ್ವಾ ಮನೋವನಂ ।
ವಿತತಾಂ ಭುವಮಾಸಾದ್ಯ ವಿಹರಾಮಿ ಯಥಾಸುಖಂ ॥ ೬೭ ॥

ಕ್ಷಯಿಸಿ ನಾಶಹೊಂದುವುದು. ಆದರೆ ಹೀಗೆ ಮನೋನಾಶದ ದೆಸೆಯಿಂದ ದೇಹ ನಾಶವು ಸಿದ್ಧಿಸುವಂತೆ ದೇಹವು ನಾಶಹೊಂದಿದರೂ ಕೂಡ ಆ ಕಾರಣದಿಂದಲೇ ಮನಸ್ಸು ಎಂದಿಗೂ ನಾಶವಾಗುವುದಿಲ್ಲ. ಆದ್ದರಿಂದ ಬಹು ಪ್ರಯತ್ನಪೂರ್ವಕವಾಗಿ ಜ್ಞಾನ ಮತ್ತು ಜ್ಞಾನಸಾಧನೋಪಾಯಗಳ ಮೂಲಕ ಅತ್ಯವಶ್ಯವಾಗಿ ಮನಸ್ಸನ್ನು ನಾಶಗೊಳಿಸಲೇ ಬೇಕಾಗಿರುವುದು.

(ಮನೋನಾಶಾರ್ಥವಾಗಿ ಮಾಡಿದ ಪ್ರಯತ್ನ ಒಂದರಿಂದಲೇ ಮನೋ- ನಾಶವೂ ದೇಹನಾಶವೂ ಈ ರೀತಿ ಎರಡೂ ವಿಧ ಪ್ರಯೋಜನಗಳ ಲಾಭ ವಾಗುವದು.)

೬೭. ಮನ[illegible]ದೇ ಒಂದು ಘೋರವಾದ ಮಹಾರಣ್ಯವು. ಇದರಲ್ಲಿ [illegible]ಗೆಬಗೆಯ ಸಂಕ[illegible]ವೆಂಬ ನಾನಾ ವೃಕ್ಷಗಳು ವಿಶೇಷವಾಗಿ ಬೆಳೆದಿವೆ. ಆ ವೃಕ್ಷ ಗಳಿಗೆ ತೃಷ್ಣೆಗಳೆಂಬ ಲತೆಗಳು ದಟ್ಟವಾಗಿ ಕವಿದುಕೊಂಡಿವೆ. (ಇಂತಹ ದುರ್ಗಮ ವಾದ ಮನಸ್ಸೆಂಬ ಮಹಾರಣ್ಯದ ಮಧ್ಯದಲ್ಲಿ ನಾನು ಸಿಕ್ಕಿ ಬಿದ್ದು ದಿಙ್ಮೂಢನಾಗಿ ಕಂಗೆಟ್ಟಿರುವೆನು. ಈಗಲೇ ಈ ಮನೋವನದಲ್ಲಿ ಅಡಗಿರುವ ವಿಷಯವಾಸನೆ ಗಳೆಂಬ ಸಿಂಹವ್ಯಾಘ್ರ[illegible] ಜಂತುಗಳು ನನ್ನನ್ನು ಆಕ್ರಮಿಸಿ ನುಂಗುವುದ ರೊಳಗಾಗಿಯೇ ನಾನು [illegible]ಶಾಸ್ತ್ರಚಾರ್ಯೋಪದೇಶಕ್ರಮದಿಂದ ವಿವೇಕ ವಿಜ್ಞಾನ ಗಳೆಂಬ ಕುಠಾರ (ಮರ ಕಡಿಯುವ ಕೊಡಲಿ ಮುಂತಾದ ಆಯುಧ) ಮುಂತಾದ ಆಯುಧಗಳನ್ನು ಸಂಪಾದಿಸಿಕೊಂಡು ಅವುಗಳಿಂದ) ಆ ಮನಸ್ಸೆಂಬ ವನವನ್ನು ಕತ್ತರಿಸಿ ಹಾಕಿ ಪ್ರಶಾಂತವೂ ಅತಿ ವಿಶಾಲವೂ ಆದ ಸ್ವಸ್ವರೂಪವೆಂಬ ದಿವ್ಯೋ ದ್ಯಾನವನ್ನು ಸೇರಿ ಸ್ವೇಚ್ಛೆಯಾಗಿ ನಿರ್ವಿಕಾರನಾಗಿ ವಿಹರಿಸುತ್ತಾ ನಿರತಿಶಯ ನಿತ್ಯಾನಂದರೂಪ ಮೋಕ್ಷವನ್ನು ಗಳಿಸಿಕೊಳ್ಳುವೆನು.

ಪ್ರಕ್ಷೀಯಮಾಣಮೇವೇದಂ ನ ಮನೋ ಮನಸಿ ಸ್ಥಿತಂ |
ಪ್ರಶಾಮ್ಯದ್ವಾಸನಾಜಾಲಂ ಪ್ರಾವೃಡಂತ ಇವಾಂಬುದಃ ॥ ೬೮ ॥

ಧಾತೂನಾಂ ಸಂನಿವೇಶೋಽಯಂ ದೇಹನಾಮಾ ರಿಪುರ್ಮಮ |
ಪ್ರಕ್ಷೀಯಮಾಣೇ ಮನಸಿ ಗಲತ್ವೇಷೋಽವತಿಷ್ಠತು ॥ ೬೯ ॥

ಯದರ್ಥಂ ಕಿಲ ಭೋಗಶ್ರೀರ್ವಾಂಛತೇ ಸ್ವಕಲೇವರಂ |
ತನ್ಮೇ ನಾಪಿ ನ ತಸ್ಯಾಹಂ ಕೋಽರ್ಥಃ ಸುಖಲವೇನ ಮೇ ॥ ೭೦ ॥

---

೬೮. ಮನಸ್ಸಿನಲ್ಲಿ ಸಹಜವಾಗಿ ಉದ್ಭವಿಸುವ ಸಂಕಲ್ಪಗಳು ನಾಶವಾಗಿ ಬಿಟ್ಟರೆ ಆ ಬಳಿಕ ಅದರ ಭೋಗ ವಾಸನಾಜಾಲಗಳೆಲ್ಲವೂ ತಾವಾಗಿಯೇ ಶಾಂತ ವಾಗಿ ಹೋಗುವವು. (ಅಡಗಿಕೊಳ್ಳುವವು–ವಾಸನೆಗಳು ಸುತರಾಂ ತಲೆದೋರುವ ದಿಲ್ಲ.) ತರುವಾಯ ಈ ಮನಸ್ಸು ತನ್ನ ಮನೋಭಾವವನ್ನು ಬಿಟ್ಟು ಬಿಟ್ಟ ವರ್ಷಾಕಾಲವು ಕಳೆದುಹೋದ ಮೇಲೆ ಮೇಘವು ತನ್ನೊಳಗಿರುವ ಜಲವನ್ನೆಲ್ಲ ಕಳೆದುಕೊಂಡು ಕ್ರಮೇಣ ಕ್ಷಯಹೊಂದುವಂತೆ ಮನಸ್ಸೂ ಕ್ಷಯಿಸಿಹೋಗುವದು.

೬೯. ತ್ವಕ್ (ಚರ್ಮ) ರಕ್ತ, ಮಾಂಸ, ಮೇದಸ್ಸು, ಎಲುಬು,ಅಸ್ಥಿ, ಮಜ್ಜೆ, ರೇತಸ್ಸು ಎಂಬ ಧಾತುಗಳ ಸಮಾವೇಶ (ಒಟ್ಟುಗೂಡಿಕೊಂಡಿರುವಿಕೆ) ರೂಪವಾದ ಈ ದೇಹವೇ ನನಗೆ ಪರಮ ಶತ್ರು. ಮನಸ್ಸು ಪೂರ್ಣವಾಗಿ ನಾಶಹೊಂದಿಬಿಟ್ಟ ತರುವಾಯ ಈ ದೇಹವು ಇದ್ದರೂ ಇರಲಿ. ಅಥವಾ ಅದೂ ಹಾಳಾದರೂ ಆಗಲಿ. ಅದರಿಂದ ನನಗೆ ಯಾವ ಬಾಧೆಯೂ ಇರುವುದಿಲ್ಲ.

[ದೇಹದೊಡಗೆ ಮನಸ್ಸೂ ಸೇರಿಕೊಂಡಿದ್ದರೆ ಆಗಲೇನೇ ಸಕಲಾನರ್ಥ ಹೇತುವಾಗುವದು. ಮನೋನಾಶವಾದ ಮೇಲೆ ದೇಹದ ಆಟವೇನೂ ನಡೆಯು ವದಿಲ್ಲ. ಅದು ಅಕಿಂಚಿತ್ಕರವೆಂದರ್ಥ.]

೭೦. ಮನಸ್ಸಿಗೋಸ್ಕರವಾಗಿಯೇ ಭೋಗ ಸಂಪತ್ತು ಶರೀರವನ್ನು ಅಪೇಕ್ಷಿ ಸುವದು. (ಶರೀರವೇ ಭೋಗಾಯತನವು.) ಆ ಬಗೆಯ ಸಂಬಂಧಹೇತುವಾದ ಮನಸ್ಸೇ ನಾಶವಾಗಿಬಿಡುವದರಿಂದ ಆ ಮನಸ್ಸಿಗೂ ನನಗೂ ಯಾವ ಸಂಬಂಧವೂ ಇಲ್ಲವಾಗಿಬಿಡುವದು. (ನನಗೆ ಮನಸ್ಸೂ ಇಲ್ಲ. ಅದಕ್ಕೆ ನಾನೂ ಇಲ್ಲ.) ಹೀಗೆ

ನಾಹಂ ದೇಹ ಇತಿ ತ್ವಸ್ಮಿನ್ಯುಕ್ತಿಮಾಕರ್ಣಯ ಕ್ರಮೇ |
ಸರ್ವಾಂಗೇಷ್ವಪಿ ಸತ್ಯೇವ ಶವಃ ಕಸ್ಮಾನ್ನ ವಲ್ಗತಿ || ೭೧ ||

ತಸ್ಮಾದ್ದೇಹಾದತೀತೋಽಹಂ ನಿತ್ಯೋಽಸ್ತಮಿತದ್ಯುತಿಃ |
ಯಃ ಸಂಗಂ ಭಾಸ್ವತಾ ಪ್ರಾಪ್ಯ ವೇದ್ಮಿ ವ್ಯೋಮನಿ ಭಾಸ್ಕರಂ || ೭೨ ||

ಸಂಬಂಧವೇ ಸುತರಾಂ ತಪ್ಪಿಹೋದ ಬಳಿಕ ದುಃಖಪ್ರಸಕ್ತಿಯೂ ಕೂಡ ಸರ್ವಥಾ (ಬಹುದೂರಾವಾಸ್ತವಾದುದೇ) ಇಲ್ಲವೇ ಇಲ್ಲ.

[ಹೀಗೆ ದೇಹವಿದ್ದುಕೊಂಡಿದ್ದರೂ ಮನೋನಾಶವಾಗಿಬಿಡುವದರಿಂದ ವೃದ್ಧಿ ಕ್ಷಯುಗಳು ನನಗೆ ಇಲ್ಲವೇ ಇಲ್ಲ. ಇನ್ನೂ ಈ ತುಚ್ಛವಾದ ಸುಖ ಲವದಿಂದ ಏನು ಪ್ರಯೋಜನವಿರುವದು ? ಏತಕ್ಕೋಸ್ಕರ ದೇಹವು ಸುಖಲೇಶ ಪ್ರಾಪ್ತಿಗಾಗಿ ಕಷ್ಟ ಪಡಬೇಕಾಗಿರುವದು ?]

೭೧. "ನಾಹಂ ದೇಹಃ" (ನಾನು ದೇಹವಲ್ಲ) ಎಂಬ ಅವಶ್ಯವಾಗಿ ತಿಳಿಯ ಬೇಕಾದ ವಿಚಾರದಲ್ಲಿ ಉಪಪತ್ತಿಯನ್ನು ಹೇಳುವೆನು, ಕೇಳು. ಹೇಗೆಂದರೆ ಮೊದ ಲಿನಂತೆಯೇ ಚಕ್ಷುರಾದಿ ಸಕಲೇಂದ್ರಿಯಗಳೂ ಇದ್ದುಕೊಂಡಿದ್ದರೂ ಕೂಡ ಶವವು (ಹೆಣ=ಮೃತದೇಹ) ಏತಕ್ಕಾಗಿ ದರ್ಶನ ಶ್ರವಣಾದಿ ವ್ಯವಹಾರಗಳಲ್ಲಿ ಪ್ರವರ್ತಿ ಸುವದಿಲ್ಲ ?

[ಬದುಕಿರುವಾಗ ಇದ್ದ ಅವಯುವಗಳೇ ಇದ್ದಾಗ್ಯೂ ಕೂಡ, ಶವವು ಪೂರ್ವ ದಂತೆ ಯಾವದೊಂದು ವ್ಯವಹಾರವನ್ನೂ ಮಾಡಲು ಅಸಮರ್ಥವಾಗುವದು. ಇದ ರಿಂದ ದೇಹವು ಆತ್ಮನಲ್ಲವೆಂಬುದು ಸಿದ್ಧವಾಯಿತು.)

೭೨. ಈ ಕಾರಣದಿಂದ ನಾನು ದೇಹಕ್ಕಿಂತ ಅತೀತನಾದವನು. ನಿತ್ಯನು. ನಿತ್ಯಪ್ರಕಾಶನಾದ ಚಿದಾತ್ಮನು. ದೇಹವಾದರೋ ಜಡವು. ನಾನು ತದ್ವಿಲಕ್ಷಣ ನಾದ ಚೇತನನು. ದೇಹವಾದರೋ ಪರಿಚ್ಛಿನ್ನವಾದುದು. ನಾನು ವಿಭುವಾಗಿ ರುವದರಿಂದ, ಸೂರ್ಯಮಂಡಲದಲ್ಲಿಯೂ ಇದ್ದುಕೊಂಡು, ಸೂರ್ಯನೊಡನೆ ಸಂಬಂಧ ಪಡೆದು, ಅಂತರಿಕ್ಷದಲ್ಲಿರುವ ಸೂರ್ಯನನ್ನು "ಅವನೇ ಚಿದ್ರೂಪನಾದ ನಾನು" ಎಂದು ತಿಳಿಯುವೆನು.

ನಾಜ್ಞೋಽಹಂ ನ ಚ ಮೇ ದುಃಖಂ ನಾನರ್ಥೋ ನ ಚ ದುಃಖಿತಾ |
ಶರೀರಮಸ್ತು ಮಾವಾಸ್ತು ಸ್ಥಿತೋಽಸ್ಮಿ ವಿಗತಜ್ವರಃ || ೭೩ ||

ಯತ್ರಾತ್ಮಾ ತತ್ರ ನ ಮನಃ ನೇಂದ್ರಿಯಾಣಿ ನ ವಾಸನಾಃ |
ಪಾಮರಾಃ ಪರಿತಿಷ್ಠಂತಿ ನಿಕಟೇ ನ ಮಹೀಭೃತಃ || ೭೪ ||

ಪದಂ ತದನುಯಾತೋಽಸ್ಮಿ ಕೇವಲೋಽಸ್ಮಿ ಜಯಾಮ್ಯಹಂ |
ನಿರ್ವಾಣೋಽಸ್ಮಿ ನಿರಂಶೋಽಸ್ಮಿ ನಿರಹೋಽಸ್ಮಿ ನಿರೀಪ್ಸಿತಃ || ೭೫ ||

---

೭೩. ನಾನು ಎಂದಿಗೂ ಅಜ್ಞನಲ್ಲ (ಸರ್ವಜ್ಞನು). ನನಗೆ ದುಃಖವೂ ಇಲ್ಲ. ನನಗೆ ಅರ್ಥವೂ ಇಲ್ಲ. ನನಗೆ ದುಃಖಾನುಭವವೂ ಇಲ್ಲ. (ದುಃಖಿತ್ವ) ಈ ಶರೀರ ಬೇಕಾದರೆ ಇರಲಿ, ಅಥವಾ ಇಲ್ಲದೆ ಹೋಗಲಿ. ನಾನು ಅದರ ಸಂಪರ್ಕವೇ ಇಲ್ಲದ ನಿರಾತಂಕನಾದ (ನಿರುಪದ್ರವನಾದ) ಸರ್ವೋಪಪ್ಲವರಹಿತನಾದ, ನಿತ್ಯಾನಂದ ಸ್ವರೂಪನಾದ ಬ್ರಹ್ಮವೇ ಆಗಿರುವೆನು.

೭೪. ಅತ್ಯಂತ ಶ್ರೇಷ್ಠರಾದ ಚಕ್ರವರ್ತಿ ಮುಂತಾದವರ ಸನ್ನಿಧಿಯಲ್ಲಿ ಕ್ಷುದ್ರ ಜನರಿಗೆ ನಿಲ್ಲಲು ಕೂಡ ಯೋಗ್ಯತೆಯಿಲ್ಲದಿರುವಂತೆಯೇ, ಸರ್ವತ್ರ ವಿಭುವಾಗಿ, ಭೂಮಾತ್ಮನಾದ ನನಗೆ ಮನಸ್ಸೂ ಇಲ್ಲ. ಇಂದ್ರಿಯಗಳೂ ಇಲ್ಲ. ಮತ್ತು ವಾಸನೆಗಳೂ ಇಲ್ಲ. (ಮನ ಆದಿಗಳ ಸಂಬಂಧ ಪ್ರಸಕ್ತಿಯೇ ಸರ್ವಥಾ ಇಲ್ಲ.)

೭೫. ಈಗ ನಾನು ಅಂತಹ ಸರ್ವೋತ್ತಮವಾದ, ಶಾಶ್ವತವಾದ, ಪರಮ ಪದವನ್ನು (ಸಚ್ಚಿದಾನಂದ ಸ್ವರೂಪವನ್ನು) ಪಡೆದವನಾದೆನು. ನಿಷ್ಕಳಂಕ ಕೇವಲಾದ್ವಿತೀಯಾತ್ಮನಾದೆನು. ಸರ್ವೋತ್ಕೃಷ್ಟನಾಗಿ, ಸರ್ವತ್ರ ಜಯಶೀಲನಾಗಿ ನಿರ್ಭಯಾತ್ಮ ಸ್ಥಿತಿಯಲ್ಲಿರುವೆನು. ಮತ್ತು ಪ್ರಶಾಂತನಾಗಿಯೂ (ಸ್ವರೂಪ ವಿಶ್ರಾಂತನಾಗಿಯೂ), ನಿಷ್ಕ್ರಿಯನಾಗಿಯೂ, ಪರಿಪೂರ್ಣನಾಗಿಯೂ (ನಿರ್ವಿಕಲ್ಪ ನಾಗಿಯೂ), ಇಚ್ಛಾಶೂನ್ಯನಾಗಿಯೂ (ಆತ್ಮಲಾಭದಿಂದ ಆಪ್ತಕಾಮನಾಗಿ ನಿತ್ಯ ತೃಪ್ತನಾಗಿ) ನಿತ್ಯಾನಂದರೂಪನಾಗಿರುವೆನು.

ಇದಾನೀಮಸ್ಮ್ಯಸಂಬದ್ಧೋ ಮನೋದೇಹೇಂದ್ರಿಯಾದಿಭಿಃ |
ಪೃಥಕ್ಕೃತಸ್ಯ ತೈಲಸ್ಯ ತಿಲೈರ್ವಿಗಲಿತೈರಿವ || ೭೬ ||

ಸ್ವಸ್ವಾತ್ಮಪದವರಾದಸ್ಮಾಲ್ಲೀಲಯಾ ಚಲಿತಸ್ಯ ಮೇ |
ಪೃಥಕ್ಕೃತಮತೇಃ ಕಿಂ ಚ ಪರಿವಾರೋ ಹ್ಯಯಂ ಶುಭಃ || ೭೭ ||

---

೭೬. ಎಳ್ಳುಗಳನ್ನು ಗಾಣ ಮೊದಲಾದವುಗಳ ಮೂಲಕ ಚೆನ್ನಾಗಿ ಅರೆದು, ಅವುಗಳಲ್ಲಿರುವ ತೈಲ (ಎಣ್ಣೆಯನ್ನು) ವನ್ನು ಬೇರೆಯಾಗಿ ತೆಗೆದುಬಿಟ್ಟ ಬಳಿಕ, ಆ ಎಣ್ಣೆಗೂ, ಎಳ್ಳುಗಳಿಗೂ ಹೇಗೆ ಸಂಬಂಧವು ಇಲ್ಲದೆ ಹೋಗಿಬಿಡುವದೋ, ಹಾಗೆಯೇ ಈಗ ನನಗೆ ಮನಸ್ಸು, ದೇಹ, ಇಂದ್ರಿಯ-ಮೊದಲಾದ ಅನಾತ್ಮ ಜಡ ವಸ್ತುಗಳೊಂದಿಗೆ ಯಾವೊಂದು ಸಂಬಂಧವೂ ಸುತರಾಂ ಇಲ್ಲವಾಗಿ ಹೋಗಿರುವದು.

೭೭. ಪ್ರಾರಬ್ಧಕರ್ಮ ಶೇಷವನ್ನು ಉಪಭೋಗಿಸುವ ಲೀಲೆಯಿಂದ ನಾನು ಈಗ ಸ್ವಾತ್ಮರೂಪವಾದ ಪರಮಪದದ ದೆಸೆಯಿಂದ ಚಲಿತನಾಗಿ ಪ್ರಾಪಂಚಿಕ ವ್ಯವಹಾರಾಭಾಸದಲ್ಲಿರುವೆನು. ನನಗೆ ಪೂರ್ವವಾಸನಾಬಲದಿಂದ ಬುದ್ಧಿಯು ಪೃಥಕ್ಕಾಗಿರುವದು. ಹೀಗಿದ್ದರೂ ಕೂಡ, ಇಂತಹ ನನಗೆ ಈ ದೇಹೇಂದ್ರಿಯಾದಿಗಳೆಲ್ಲವೂ, ಆಪ್ತರಾದ ಪರಿಜನರಂತೆ ಹಿತಸಾಧಕಗಳಾಗಿದ್ದುಕೊಂಡು ವಿನೋದ ಹೇತುವಾಗಿಯೇ ಇವೆ.

[ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಅರ್ಜುನ-ಎಂಬ ಭಗವದ್ಗೀತಾ ವಚನಾನುಸಾರವೂ, ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ಎಂಬ ಶ್ರುತಿ ಪ್ರಾಮಾಣ್ಯಾನುಸಾರವೂ, ತತ್ವಜ್ಞಾನಿಯು ಸರ್ವವಿಧ ಕರ್ಮಗಳಿಂದ ಮುಕ್ತನಾಗಿರುವೆನು ಎಂದು ಗೊತ್ತಾಗುವದು. ಜ್ಞಾನಾಗ್ನಿಯು ಆಗಾಮಿ ಸಂಚಿತ ಕರ್ಮಗಳನ್ನು ಸುಟ್ಟುಬಿಡುವದು. ಆದರೆ ಪ್ರಾರಬ್ಧ ಕರ್ಮ ಶೇಷವನ್ನು ಪ್ರಾರಬ್ಧ ಕರ್ಮಣಾಂ ಉಪಭೋಗಾದೇವ ಕ್ಷಯಃ ಎಂಬ ನ್ಯಾಯದಂತೆ ಉಪಭೋಗಿಸಿಯೇ ತೀರಬೇಕು. "ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯೇ—ಎಂಬ ಛಾಂದೋಗ್ಯ ಶ್ರುತಿಯೂ ಇದೇ ಅಭಿಪ್ರಾಯವನ್ನೇ ಪೋಷಿಸುತ್ತಿರುವದು. ಹೀಗೆ ಆತ್ಮೈಕನಿಷ್ಠನಾದ ಜ್ಞಾನಿಯು ಪ್ರಾರಬ್ಧ ಕರ್ಮ ಶೇಷವಶದಿಂದ ವ್ಯವಹಾರಾಭಾಸದಲ್ಲಿ ನಿರ್ಮಮನಾಗಿ, ನಿರಹಂಕಾರನಾಗಿ ವರ್ತಿಸುವನು—ಎಂದು ತಾತ್ಪರ್ಯ. ಈ ವಿಚಾರವು ಭಗವದ್ಗೀತೆಯಲ್ಲಿ ಎರಡನೆಯ

ಸ್ವಚ್ಛತೋರ್ಜಿತತಾ ಸತ್ತಾ ಹೃದ್ಯತಾ ಸತ್ಯತಾ ಜ್ಞತಾ |
ಆನಂದಿತೋಪಶಮಿತಾ ಸದಾ ಚ ಮೃದುಭಾಷಿತಾ || ೭೮ ||

ಪೂರ್ಣತೋದಾರತಾ ಸತ್ಯಾ ಕಾಂತಿಮತ್ತೈಕತಾನತಾ |
ಸರ್ವೈಕತಾ ನಿರ್ಭಯತಾ ಕ್ಷೀಣದ್ವಿತ್ವವಿಕಲ್ಪತಾ || ೭೯ ||

ನಿತ್ಯೋದಿತಾಃ ಸಮಾಃ ಸ್ವಸ್ಥಾಃ ಸುಂದರ್ಯಃ ಸುಭಗೋದಯಾಃ |
ಮನ್ಯೈಕಾತ್ಮಮತೇರ್ನಿತ್ಯಂ ಕಾಂತಾ ಹೃದಯವಲ್ಲಭಾಃ || ೮೦ ||

ಅಧ್ಯಾಯದೊಳಗೆ ಸ್ಥಿತಪ್ರಜ್ಞನ ಲಕ್ಷಣವನ್ನು ವರ್ಣಿಸುವ ಸಂದರ್ಭದಲ್ಲಿ ಸ್ಪಷ್ಟವಾಗಿ ಇರುವದು.]

೭೮-೮೦. ಅದ್ವಿತೀಯಾತ್ಮ ತತ್ವದಲ್ಲಿ ಮಾತ್ರ ಪರಿನಿಷ್ಠಿತವಾದ ಬುದ್ಧಿಯುಳ್ಳ ನನಗೆ ಸ್ವಚ್ಛತೆ (ಅವಿದ್ಯಾರಾಹಿತ್ಯ), ಪರಿಪೂರ್ಣ ಕಾಮತೆ, ಸತ್ತೆ (ಸದ್ಭಾವ) ಮನೋಹರತೆ, ಸತ್ಯತೆ (ವಿಕಾರ ಶೂನ್ಯತೆ), ಆತ್ಮಜ್ಞತೆ, ಆನಂದಶಾಲಿತೆ, ಉಪಶಮಶಾಲಿತೆ, ಪೂರ್ಣತೆ, ನಿರ್ಲೋಭತೆ (ಲೋಭರಾಹಿತ್ಯ), ಅಬಾಧಿತಸ್ವರೂಪತೆ, ಕಾಂತಿಶಾಲಿತೆ, (ಸ್ವಪ್ರಕಾಶತೆ), ಸದಾತ್ಮ ಚಿಂತಾರೂಪ ಏಕವ್ಯಾಪಾರ ಪರತೆ, ಸರ್ವೈಕಾತ್ಮತೆ, ನಿರ್ಭಯತೆ, ದ್ವಿತ್ವಾದಿ ಸಂಖ್ಯಾವಿಕಲ್ಪ ಶೂನ್ಯತೆ-ಇತ್ಯಾದಿಗಳೆಲ್ಲವೂ ಸರ್ವದಾ ಪ್ರಕಟವಾಗಿರುವ (ಅಪ್ರಚ್ಯುತವಾದ) ಸಮವಾದ (ಅನ್ಯೋನ್ಯ ವೈಷಮ್ಯ ರಹಿತಗಳಾದ) ಸ್ವಸ್ಥಗಳಾದ (ನನ್ನಲ್ಲಿಯೇ ಸಹಜಾನುರಕ್ತಗಳಾಗಿರುವ) ಸದಾ ಸೌಭಾಗ್ಯಶಾಲಿನಿಯರಾದ, ಸೌಂದರ್ಯಶಾಲಿನಿಯರಾದ, ಮತ್ತು ಮನೋವಲ್ಲಭೆಯರಾದ ಕಾಂತಾಮಣಿಗಳಾಗಿ, ನಿತ್ಯಾನಂದ ಪ್ರದೆಯರಾಗಿರುವರು. (ಸ್ವಚ್ಛತೆ, ಪರಿಪೂರ್ಣ ಕಾಮತೆ ಮುಂತಾದವುಗಳನ್ನೆಲ್ಲ ಸ್ತ್ರೀಲಿಂಗವಲ್ಲಿ ಇಡುವ ಸಲುವಾಗಿ ಕೊನೆಯಲ್ಲಿ "ತೆ" ಎಂಬುದನ್ನು ಸೇರಿಸಿ ಬರೆದಿದೆ. ಸ್ವಚ್ಛತಾ, ಪೂರ್ಣ ಕಾಮತಾ, ಇತ್ಯಾದಿಗಳೇ ಸಂಸ್ಕೃತ ಭಾಷೆಯ ಪದಗಳು. ಭಾವಾರ್ಥದಲ್ಲಿ ತ್ವಂ ಎಂಬುದೂ, ತಾ ಎಂಬುದೂ ಪ್ರತ್ಯಯಗಳು. ಸತ್ಯತ್ವಂ ಅಥವಾ ಸತ್ಯತಾ ಎಂದು ಹೇಳಬಹುದು, ಆ ಸತ್ಯತಾ ಎಂಬುದೇ ಕನ್ನಡದಲ್ಲಿ ಸತ್ಯತೆ ಎಂದಾಗಿದೆ.)

ಸರ್ವಥಾ ಸರ್ವದಾ ಸರ್ವಂ ಸರ್ವಸ್ಮಿನ್ಸಂಭವತ್ಯತಃ |
ಸಮಂ ಪ್ರತಿ ಮಮ ಕ್ಷೀಣೇ ವಾಂಛಾವಾಂಛೇ ಸುಖಾಸುಖೇ || ೮೧ ||

ವಿಗತಮೋಹತಯಾ ವಿಮನಸ್ತಯಾ
ಗತವಿಕಲ್ಪನಚಿತ್ತತಯಾ ಸ್ಫುಟಂ |
ಉಪರಮಾಮ್ಯಹಮಾತ್ಮನಿ ಶೀತಲೇ
ಘನಲವಃ ಶರದೀವ ನಭಸ್ತಲೇ || ೮೨ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮಪ್ರಕರಣೇ "ವಿಚಾರವಿಲಾಸೋ" ನಾಮ ತ್ರಿಪಂಚಾಶಃ ಸರ್ಗಃ

---

೮೧. ಇನ್ನು, ಈಗ ನನಗೆ ನನ್ನ ಕಲ್ಪನೆಯಿಂದ ಸರ್ವವಿಧಗಳಲ್ಲಿಯೂ, ಸರ್ವವಸ್ತುಗಳಲ್ಲಿಯೂ, ಸರ್ವದಾ (ಯಾವಾಗಲೂ), ಸರ್ವವೂ ಸಂಭವಿಸುವವು. ಆದುದರಿಂದಲೇ ನನಗೆ ಸಕಲ ವಿಷಯುಗಳಲ್ಲಿಯೂ ಕೂಡ, ರಾಗದ್ವೇಷಗಳೂ, (ಇಚ್ಛೆ ಮತ್ತು ಅನಿಚ್ಛೆ) ಮತ್ತು ಅವುಗಳ ಫಲಗಳಾದ ಸುಖದುಃಖಗಳೂ ನಾಶ ಹೊಂದಿರುವವು.

೮೨. ಈಗ ನನಗೆ ಪೂರ್ವದಲ್ಲಿ ನನ್ನಲ್ಲಿ ಆವರಿಸಿಕೊಂಡಿದ್ದ ಮೋಹವು ಹಾಳಾಗಿ ತೊಲಗಿಹೋಗಿರುವದು. ನನ್ನ ಮನಸ್ಸು ತನ್ನ ಮನೋಭಾವವನ್ನು ನೀಗಿಕೊಂಡು ಕಾರ್ಯಾಕ್ಷಮವಾಗಿ, ನಿರ್ನಾಮವಾಗಿರುವದು. ಚಿತ್ತದಲ್ಲಿದ್ದ ಸಂಕಲ್ಪ ವಿಕಲ್ಪಾದಿ ವಿಕಾರಗಳೆಲ್ಲವೂ ವಿನಾಶವನ್ನು ಪಡೆದಿರುವವು. ಈ ಕಾರಣದಿಂದ ಶರದೃತುವಿನಲ್ಲಿ ಪ್ರಶಾಂತವಾದ, ಅಂತರಿಕ್ಷದೊಳಗೆ ಒಂದು (ಅಲ್ಪಮೇಘವು) ಉಪಶಾಂತವಾಗಿರುವಂತೆ, ಈಗ ನಾನೂ ಸಕಲ ಸ್ವಾತ್ಮರೂಪದಲ್ಲಿ ದೃಶ್ಯಭಾವವನ್ನು ಪರಿತ್ಯಾಗಮಾಡಿದವನಾಗಿದ್ದುಕೊಂಡು, ಸ್ವಸ್ಥತೆಯಿಂದ ಆತ್ಮಾರಾಮನಾಗಿರುವೆನು" ಎಂದು ಉದ್ದಾಲಕನು ತನ್ನೊಳಗೇನೇ ವಿಚಾರಪರನಾಗಿದ್ದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ ಉಪಶಮ ಪ್ರಕರಣದಲ್ಲಿ "ವಿಚಾರವಿಲಾಸ" ಎಂಬ ಐವತ್ತಮೂರನೆಯ ಸರ್ಗವು

ಚತುಃಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತಿ ನಿರ್ಣೀಯ ತತಯಾ ಧಿಯಾ ಧವಲಯಾ ಮುನಿಃ |
ಬದ್ಧಪದ್ಮಾಸನಸ್ತಸ್ಥಾವರ್ಧೋನ್ಮೀಲಿತಲೋಚನಃ ॥ ೧ ॥

ಓಮಿತ್ಯೇತತ್ಪರಂ ಬ್ರಹ್ಮ ನಿರ್ಣೀಯ ಸ ಮುನಿಸ್ತದಾ |
ಓಂಕಾರೋಚ್ಚಾರಿತೋ ಯೇನ ತೇನಾಪ್ತಂ ಪರಮಂ ಪದಂ ॥ ೨ ॥

ಐವತ್ತನಾಲ್ಕನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಮಚಂದ್ರ, ರಾಗದ್ವೇಷಾದಿ ಮಲಗಳನ್ನು ಹೋಗಲಾಡಿಸಿಕೊಂಡು ವಿಶುದ್ಧವಾದ ಮತ್ತು ಅಕ್ಷುಬ್ಧವಾದ ತನ್ನ ಬುದ್ಧಿಯಿಂದ, ಆ ಉದ್ದಾಲಕ ಮಹಾಮುನಿಯು ಪೂರ್ವಸರ್ಗೋಕ್ತ ಪ್ರಕಾರವಾಗಿ ದೃಢ ನಿರ್ಣಯ ಮಾಡಿಕೊಂಡು, ಅರ್ಧ ಮುಚ್ಚಿಯೂ, ಅರ್ಧ ತೆರೆದುಕೊಂಡೂ ಇರುವ ಕಣ್ಣುಗಳುಳ್ಳವನಾಗಿ, ಪದ್ಮಾಸನ ಹಾಕಿ ಕುಳಿತುಕೊಂಡನು.

೨. "ಓಂ" ಎಂಬ ಅಕ್ಷರವು ಪರಬ್ರಹ್ಮಾಭಿಧಾಯಕವು ಮತ್ತು ಪ್ರತೀಕವು. ಆದುದರಿಂದ ಆ ಉದ್ದಾಲಕಮುನಿಯು ಓಂಕಾರವೇ ಪರಬ್ರಹ್ಮವೆಂದು ನಿರ್ಣಯ ಮಾಡಿಕೊಂಡು ಆಗ ಪುನಃ ಪುನಃ ಸಂತತವಾಗಿ ಓಂಕಾರವನ್ನು ಉಚ್ಚರಿಸುತ್ತಾ ಧ್ಯಾನಾರೂಢನಾದನು. ಹೀಗೆ ಓಂಕಾರವನ್ನು ಪರಬ್ರಹ್ಮವೆಂದು ತಿಳಿದು ಜಪ ಮಾಡಿದ ಕಾರಣ ಆ ಮುನಿಯು ಸ್ವಾತ್ಮಸ್ಥಿತಿರೂಪ ಪರಮಪದವನ್ನು ಪಡೆದವನಾದನು.

[ಪ್ರತೀಕ=(ವಿಷ್ಣುವಿಗೆ ಸಾಲಗ್ರಾಮವು ಪ್ರತೀಕವಾಗಿರುವಂತೆ) ಸಾಕಾರವಾದ ಮೂರ್ತಿ "ಓ ಮಿತ್ಯೇಕಾಕ್ಷರಂ ಬ್ರಹ್ಮ"–"ಓಮಿತಿ ಬ್ರಹ್ಮ" ಓಮಿತೀದಗ್ಂ

ಓಂಕಾರಮುಚ್ಚರನ್ನೋತ್ತಾರಖರಮೂರ್ಧ್ವಗತಧ್ವನಿಂ ।
ಸಮ್ಯಗಾಹತಲಾಂಗೂಲಂ ಘಂಟಾತುಂಡಮಿವಾರವಂ ॥ ೩ ॥

ಓಮುಚ್ಚಾರಯತಸ್ತಸ್ಯ ಸಂವಿತ್ತತ್ತ್ವೇ ತದುನ್ಮುಖೇ ।
ಯಾವದೋಂಕಾರಮೂರ್ಧಸ್ಥೇ ವಿತತೇ ವಿಮಲಾತ್ಮನಿ ॥ ೪ ॥

ಸರ್ವಂ (ತೈತ್ತಿರೀಯ) ಇತ್ಯಾದಿ ಶ್ರುತಿಗಳು. ಓಂಕಾರವು ಪರಬ್ರಹ್ಮದ ಅಭಿಧಾನವೆಂದೂ ಮತ್ತು ಓಂಕಾರ ನಿರ್ಣಯವು ಆತ್ಮತತ್ತ್ವಪ್ರಾಪ್ತಿಗೆ ಉಪಾಯವೆಂದೂ ಸಾರುತ್ತಿರುವವು. ಈ ವಿಚಾರವು ವಿಶದವಾಗಿ ಮಾಂಡೂಕ್ಯೋಪನಿಷತ್ತಿನಲ್ಲಿ ಪ್ರತಿಪಾದಿತವಾಗಿದೆ.]

೩. ಘಂಟೆ ಕಟ್ಟಿರುವ ನಾಲಗೆಯಂತಿರುವ ಲೋಹದ ಸಲಾಕೆಯನ್ನು ಚೆನ್ನಾಗಿ ಹೊಡೆದರೆ ಅದರಿಂದ ಶ್ರಾವ್ಯವಾದ ನಾದವು ಹೊರಡುವದು. ಅದರಂತೆ ಆ ಮುನಿಯು ತನ್ನ ಧ್ವನಿಯು ಮೇಲಕ್ಕೆ ಬಲುದೂರ ಹೋಗುವಷ್ಟು ಘಟ್ಟಿಯಾಗಿ ಉಚ್ಚಧ್ವನಿಯಿಂದ ಓಂಕಾರವನ್ನು ಆವರ್ತಿಸುತ್ತಿದ್ದನು.

೪. ಹೀಗೆ ಪುನಃ ಪುನಃ ಓಂಕಾರವನ್ನು ಜಪಿಸುತ್ತಲಿದ್ದ ಆ ಉದ್ದಾಲಕ ಮುನಿಯು ಮೂಲಾಧಾರದಿಂದ ಮೊದಲುಗೊಂಡು ಬ್ರಹ್ಮರಂಧ್ರದವರೆವಿಗೂ ಪ್ರಸಿದ್ಧವಾಗಿ ವ್ಯಾಪಿಸಿಕೊಂಡಿರುವ ಓಂಕಾರದ ಶಿರೋಭಾಗದಲ್ಲಿರುವ ದೇಶ ಕಾಲಾದಿಗಳಿಂದ ಅಪರಿಚ್ಛಿನ್ನವಾದ ಅವಿದ್ಯಾದಿ ದೋಷರಹಿತವಾದ ಶುದ್ಧಾದ್ವಿತೀಯಾತ್ಮರೂಪ ಪರಬ್ರಹ್ಮನಲ್ಲಿ ಸಂವಿತ್ತು ಮತ್ತು ತತ್ತ್ವಗಳು ಇವೆರಡೂ ಅಖಂಡ ಬ್ರಹ್ಮಚೈತನ್ಯಾಭಿಮುಖವಾಗುವವರೆವಿಗೂ ಅಷ್ಟು ದೀರ್ಘಕಾಲ ಪರ್ಯಂತ ಆ ಮುನಿಯು ಓಂಕಾರವನ್ನು ಆವರ್ತಿಸುತ್ತಿದ್ದನು.

[ಸಂವಿತ್=ಓಂಕಾರವೃತ್ತ್ಯುಪಹಿತವಾದ ಚೈತನ್ಯ ಮತ್ತು ತತ್ತ್ವ=ಕೂಟಸ್ಥ ಜೀವ ಚೈತನ್ಯ,

ಮೂಲಾಧಾರ-ಆಜ್ಞಾಚಕ್ರ ಮಣಿಪೂರ ಮೊದಲಾದುವು ತಂತ್ರ ಶಾಸ್ತ್ರೋಕ್ತವಾದ ದೇಹತತ್ತ್ವಗಳು.]

ಸಾರ್ಧತ್ರ್ಯಂಶಾತ್ಮಮಾತ್ರಸ್ಯ ಪ್ರಥಮೇಂಶೇ ಸ್ಫುಟಾರವೇ |
ಪ್ರಣವಸ್ಯ ಸಮಾಕ್ಷುಬ್ಧಪ್ರಾಣಾರಣಿತದೇಹಕೇ ॥ ೫ ॥

ರೇಚಕಾಖ್ಯೋಽಖಿಲಂ ಕಾಯಂ ಪ್ರಾಣನಿಷ್ಕ್ರಮಣಕ್ರಮಃ |
ರಿಕ್ತೀಚಕಾರ ಪೀತಾಂಬುರಗಸ್ತ್ಯ ಇವ ಸಾಗರಂ ॥ ೬ ॥

೫–೬. "ಓಂ"ಕಾರದಲ್ಲಿ, ಅಕಾರ ಉಕಾರ ಮಕಾರಗಳೆಂಬ ಮೂರು ಮಾತ್ರೆಗಳೂ ಕೊನೆಯಲ್ಲಿ ಒಂದು ಅರ್ಧಮಾತ್ರೆಯೂ ಇರುವವು. ಈ ಉದ್ದಾಲಕ ಮುನಿಯು ಅವುಗಳೊಳಗೆ ಪ್ರಥಮಾಂಶವಾದ (ಉದಾತ್ತ ಸ್ವರವುಳ್ಳ) ಅಕಾರ ಭಾಗವನ್ನು ಉಚ್ಚ ಸ್ವರದಿಂದ ಅತ್ಯಂತ ಸ್ಫುಟವಾಗಿ ಆವರ್ತನೆ ಮಾಡಿದನು. ಅದರಿಂದ ಅವನ ಪ್ರಾಣವಾಯುಗಳು ಮೂಲಾಧಾರದಿಂದ ಮೊದಲ್ಗೊಂಡು ಓಷ್ಠ ಪುಟದವರೆವಿಗೂ ದೇಹದೊಳಗೆ ವಿಶೇಷವಾಗಿ ಧ್ವನಿಮಾಡುತ್ತಾ ಅತಿ ಸಂಭ್ರಮ ಗೊಂಡು ಸಡಗರದಿಂದ ಅನ್ಯೋನ್ಯವಾಗಿ ಸಂಘರ್ಷಣ ಮಾಡುತ್ತಾ ಹೊರಕ್ಕೆ ಹೊರಟವು. ಹೀಗೆ ಪ್ರಾಣವಾಯುಗಳು ದೇಹದಿಂದ ಹೊರಕ್ಕೆ ಹೊರಡುವವನ್ನೇ ಯೋಗಶಾಸ್ತ್ರದಲ್ಲಿ ರೇಚಕವೆಂಬ ಹೆಸರಿನಿಂದ ಕರೆಯುವರು. ಅಗಸ್ತ್ಯಮಹರ್ಷಿಯು ಸಮುದ್ರದ ನೀರನ್ನೆಲ್ಲಾ ಕುಡಿದು ಅದನ್ನು ಬರಿಯದನ್ನಾಗಿ ಮಾಡಿಬಿಟ್ಟಂತೆ ನಿರ್ವಿಕಲ್ಪ ಸಮಾಧಿಲಾಭಕ್ಕಾಗಿ ತಕ್ಕ ಯೋಗ್ಯತೆಯನ್ನು ಪಡೆಯುವ ಉದ್ದೇಶದಿಂದ ಪ್ರಣವ ಜಪದಿಂದಲೇ ತನ್ನ ಸ್ಥೂಲ ದೇಹಕ್ಕೆ ಶೋಷಣ (ಒಣಗಿಸುವಿಕೆ) ದಹನ (ಸುಡುವಿಕೆ) ಮುಂತಾದ ಸಂಸ್ಕಾರಗಳನ್ನುಂಟು ಮಾಡಲು ಆಯಾ ಭಾವನೆಗಳನ್ನೇ ಮಾಡಿಕೊಂಡಿದ್ದ ಆ ಉದ್ದಾಲಕ ಮುನಿಯು ಇಂತಹ "ರೇಚಕ" ದಿಂದ ತನ್ನ ದೇಹ ವನ್ನೆಲ್ಲ ಬರಿದು ಮಾಡಿಕೊಂಡನು.

[ಭೂತಂ ಭವತ್ ಭವಿಷ್ಯದಿತಿ ಸರ್ವಮೋಂಕಾರ ಏವ ಸರ್ವಗ್ಂ ಹ್ಯೇತತ್ ಬ್ರಹ್ಮ ಅಯಮಾತ್ಮಾ ಬ್ರಹ್ಮ ಸೋಽಯಮಾತ್ಮಾ ಚತುಷ್ಪಾತ್ ಎಂಬೀ ಮೊದಲಾದ ಮಾಂಡೂಕ್ಯ ಶ್ರುತಿಯಲ್ಲಿ ಅಕಾರ ಉಕಾರ ಮಕಾರಗಳೆಂಬ ಮೂರು ಮಾತ್ರೆಗಳು ಓಂಕಾರಾಭಿಧೇಯನಾದ ಆತ್ಮನ ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ಪಾದ ಗಳೆಂದೂ, ಕೊನೆಯ ಅರ್ಧಮಾತ್ರೆಯು ಅವಸ್ಥಾತ್ರಯ ವಿಲಕ್ಷಣವಾದ ಅದ್ವೈತಾತ್ಮ ತತ್ತ್ವವೆಂಬ ನಾಲ್ಕನೆಯ ಪಾದವೆಂದೂ ಉಕ್ತವಾಗಿರುವದು. ಪೂರ್ವೋಕ್ತ ವಿಶ್ವ ತೈಜಸ ಪ್ರಾಜ್ಞ ಎಂಬ ಪಾದತ್ರಯಾತ್ಮಕವಾದ ಸ್ವರೂಪವು

ಅತಿಷ್ಠತ್ಪ್ರಾಣಪವನಶ್ಚಿದ್ರಸಾಪೂರಿತಾಂಬರೇ |
ತ್ಯಕ್ತದೇಹಃ ಪರಿತ್ಯಕ್ತನೀಡಃ ಖಗ ಇವಾಂಬರೇ || ೭ ||

ಹೃದಯಾಗ್ನಿರ್ಜ್ವಲಜ್ಜ್ವಾಲೋ ದದಾಹ ನಿಖಿಲಂ ವಪುಃ |
ಉತ್ಪಾತಪವನೋದ್ಧೂತೋ ದಾವಃ ಶುಷ್ಕಮಿವ ದ್ರುಮಂ || ೮ ||

ಅವಿದ್ಯಾಕೃತವಾದ ಅಪರಮಾರ್ಥ ರೂಪವು. ತುರೀಯ ಪಾದವಾದ ನಾಂತಃ ಪ್ರಜ್ಞಂ ನ ಬಹಿಃಪ್ರಜ್ಞಂ ನೋಭಯತಃ ಪ್ರಜ್ಞಂ ನಪ್ರಜ್ಞಾನ ಘನಂ ನಪ್ರಜ್ಞಂ | ಅದೃಷ್ಟಮವ್ಯವಹಾರ್ಯಂ ಅಗ್ರಾಹ್ಯಂ ಅಲಕ್ಷಣಂ ಅಚಿಂತ್ಯಂ ಅವ್ಯಪದೇಶ್ಯಂ ಏಕಾತ್ಮ ಪ್ರತ್ಯಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಂ ಅದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ" ಎಂಬೀ ಶ್ರುತಿ ಪ್ರತಿಪಾದಿತವಾದ ರೂಪವು ಪರಮಾರ್ಥವು. ಇದರ ತತ್ತ್ವವನ್ನು ಮಾಂಡೂಕ್ಯೋಪನಿಷತ್ತಿನಿಂದಲೂ ಶ್ರೀ ಗೌಡಪಾದಾಚಾರ್ಯ ವಿರಚಿತ ಕಾರಿಕೆಗಳಿಂದಲೂ ಅವುಗಳ ಭಾಷ್ಯದಿಂದಲೂ ಚೆನ್ನಾಗಿ ಅರಿಯಬಹುದು.]

೭. ಹೀಗೆ ರೇಚಕ ಕ್ರಮದಿಂದ ಆ ಮುನಿಯ ದೇಹವನ್ನು ಬಿಟ್ಟು ಹೊರಕ್ಕೆ ಹೋದ ಪ್ರಾಣವಾಯುವು ತನ್ನ ಗೂಡನ್ನು ಬಿಟ್ಟು ಹಾರಿ ಹೋದ ಹಕ್ಕಿಯು ಆಕಾಶದಲ್ಲಿ ಹಾರಾಡುತ್ತಾ ಇರುವಂತೆ ಬ್ರಹ್ಮಭಾವನೆಯಿಂದ ಅಭಿವ್ಯಕ್ತವಾದ ಮನಸ್ಸಿನ ಆನಂದರಸದಿಂದ ಪರಿಪೂರ್ಣವಾದ ಬಾಹ್ಯಾಕಾಶದಲ್ಲಿ ವಿಶ್ರಾಂತಿ ಹೊಂದಿತ್ತು.

೮. ಪ್ರಚಂಡವಾದ ಉತ್ಪಾತವಾಯುವಿನ ಬೆಂಬಲದಿಂದ ವೃದ್ಧಿಹೊಂದಿ ಎಲ್ಲೆಲ್ಲೂ ವ್ಯಾಪಿಸಿದ ಕಾಡುಗಿಚ್ಚು ಚೆನ್ನಾಗಿ ಒಣಗಿಹೋಗಿರುವ ಕಾಡುಮರವನ್ನು ಬಲುಬೇಗ ಸುಟ್ಟು ಬೂದಿಮಾಡುವ ರೀತಿಯಲ್ಲಿ ಆಗ ಆ ಉದ್ದಾಲಕ ಮುನಿಯ ಹೃದಯಾಂತರಾಳದಿಂದ ಪ್ರಜ್ವಲಿಸುತ್ತಿರುವ ಜ್ವಾಲೆಗಳೊಡನೆ ಕೂಡಿ ಹೊರಟ ಅಗ್ನಿಯು ಅವನ ದೇಹವನ್ನು ಸುಟ್ಟುಬಿಟ್ಟಿತು.

ಯಾವದಿತ್ಥಮುಪಸ್ಥೈಷಾ ಪ್ರಣವಪ್ರಥಮಕ್ರಮೇ |
ಬಭೂವ ನ ಹಠಾದೇವ ಹಠಯೋಗೋ ಹಿ ದುಃಖದಃ || ೯ ||

ಅಥೇತರಾಂಶಾವಸರೇ ಪ್ರಣವಸ್ಯ ಸಮುಸ್ಥಿತೌ |
ನಿಷ್ಕಂಪಕುಂಭಕೋ ನಾಮ ಪ್ರಾಣಾನಾಮಭವತ್ಕ್ರಮಃ || ೧೦ ||

ನ ಬರ್ಹಿನಾಂತರೇ ನಾಧೋ ನೋರ್ಧ್ವೇ ನಾಶಾಸು ತತ್ರ ತೇ |
ಸಂಕ್ಷೋಭಮಗಮನ್ಪ್ರಾಣಾ ಆಪಃ ಸಂಸ್ತಂಭಿತಾ ಇವ || ೧೧ ||

---

೯. ಹೀಗೆ ಆ ಉದ್ದಾಲಕ ಮುನಿಗೆ ಓಂಕಾರದ ಪ್ರಥಮ ಭಾಗವಾದ ಅಕಾರವನ್ನು ತಾರಸ್ವರದಿಂದ ಉಚ್ಚಾರಣೆ ಮಾಡುತ್ತಿದ್ದಾಗ ಸಂಭವಿಸಿದ ಈ ಸ್ಥಿತಿಯೆಲ್ಲವೂ ಆತನ ಭಾವನಾಬಲದಿಂದಲೇ ಉಂಟಾದುದು. ಹಠಯೋಗದಿಂದ ಉತ್ಪನ್ನವಾದುದಲ್ಲವೇ ಅಲ್ಲ. ಏಕೆಂದರೆ, ಹಠಯೋಗವೆಂಬುದರಿಂದ (ಅಂದರೆ ಹಠಮಾಡಿ ಬಲಾತ್ಕಾರದಿಂದ ಪ್ರಾಣಗಳನ್ನು ದೇಹದ ಹೊರಕ್ಕೆ ಹೊರಡಿಸುವಿಕೆ) ಬಹುತರವಾಗಿ ಮೂರ್ಛೆ, ಮರಣ ಮುಂತಾದ ಅನರ್ಥಗಳೂ ಸಂಭವಿಸುವ ಪ್ರಸಕ್ತಿಯುಂಟು ಎಂದು ತಿಳಿದಿದ್ದ ಆ ಉದ್ದಾಲಕ ಮುನಿಯು ಹಠಯೋಗವನ್ನು ಸಾಧಿಸಲು ಪ್ರಯತ್ನಿಸಲೇ ಇಲ್ಲ.

೧೦. (ಒಂದು ಪೂರ್ಣಕುಂಭದೊಳಗಿರುವ ಉದಕವು ನಿಶ್ಚಯವಾಗಿಯೂ, ಪರಿಪೂರ್ಣವಾಗಿಯೂ ಇರುವಂತೆ, ಪ್ರಾಣಾಯಾಮ ಮಾಡುವಾಗ, ಒಂದು ಸಮಯದಲ್ಲಿ ಪ್ರಾಣವಾಯುಗಳು ನಿಶ್ಚಲವಾಗಿಯೂ, ಪೂರ್ಣವಾಗಿಯೂ ಇರುವವು. ಆಗ ಪ್ರಾಣವಾಯುಗಳು ಸಮುಸ್ಥಿತಿಯಲ್ಲಿರುವವು. ಈ ಸ್ಥಿತಿಗೆ ಯೋಗಶಾಸ್ತ್ರದಲ್ಲಿ ಕುಂಭಕವೆಂದು ಹೆಸರು.) ಅಯ್ಯ ರಾಮ, ಆ ಉದ್ದಾಲಕ ಮುನಿಯು ರೇಚಕದಿಂದ ಶರೀರವನ್ನು ಬರಿಯದನ್ನಾಗಿ ಮಾಡಿಕೊಂಡ ತರುವಾಯ, ಓಂಕಾರದ ದ್ವಿತೀಯ ಭಾಗವಾದ ಅನುದಾತ್ತ ಸ್ವರವುಳ್ಳ ಉಕಾರವನ್ನು ಮಂದ್ರ ಧ್ವನಿಯಿಂದ ಉಚ್ಚಾರಣೆ ಮಾಡುತ್ತಾ ಬಂದನು. ಆಗ ಅವನ ಪ್ರಾಣಗಳು ಸಮುಸ್ಥಿತಿಯಲ್ಲಿದ್ದುವು. ಮತ್ತು ನಿಶ್ಚಲವಾಗಿ ದೇಹದೊಳಗೆಲ್ಲಾ ತುಂಬಿಕೊಂಡವು. ಹೀಗೆ ನಿಶ್ಚಲವಾದ ಕುಂಭಕವೆಂಬ ಸ್ಥಿತಿಯು ಆ ಉದ್ದಾಲಕ ಮುನಿಗೆ ಸಿದ್ಧವಾಯಿತು.

೧೧. ಆ ಸ್ಥಿತಿಯಲ್ಲಿ ಆ ಮುನಿಯ ಪ್ರಾಣಗಳು ನಿಶ್ಚಲವಾದ ಉದಕದಂತೆ

ದಗ್ಧದೇಹಪುರೋ ವಹ್ನಿಃ ಶಶಾಮಾಶನಿವತ್ ಕ್ಷಣಾತ್ |
ಅದೃಶ್ಯತ ಸಿತಂ ಭಸ್ಮ ಶಾರೀರಂ ಹಿಮಪಾಂಡುರಂ || ೧೨ ||

ಯತ್ರ ಪೂರಕಶಯ್ಯಾಯಾಂ ಸುಪ್ತಾನೀವ ಸುಖೋಚಿತಂ |
ಶರೀರಾಸ್ಥೀನಿ ಲಕ್ಷ್ಯಂತೇ ನಿಷ್ಪಂದಾನಿ ಸಿತಾನಿ ಚ || ೧೩ ||

ತದ್ಭಸ್ಮ ಪವನಾನೀತಂ ಸಾಸ್ಥಿ ವಾಯುರಯೋಜಯತ್ |
ಸ್ವದೇಹೇ ಭೃಶಮುತ್ಸನ್ನೇ ತ್ರಿನೇತ್ರವ್ರತವಾನಿವ || ೧೪ ||

ದೇಹದ ಹೊರಗೂ, ಒಳಗೂ, ಕೆಳಗಡೆಯೂ, ಮೇಲುಗಡೆಯೂ ಮತ್ತು ಸಕಲ ದಿಕ್ಕುಗಳಲ್ಲಿಯೂ, ಎಲ್ಲಿಯೂ ಕೂಡ ಚಲನೆಯನ್ನು ಹೊಂದದೆಯೇ ಸ್ಥಿರವಾಗಿ ಇದ್ದವು.

೧೨. ಕೂಡಲೇ ಅಗ್ನಿಯು ಉತ್ಪನ್ನವಾಗಿ ಹೊರಹೊರಟಿತು. ಅದು ಅವನ ಶರೀರವೆಂಬ ಪಟ್ಟಣವನ್ನು ಸಂಪೂರ್ಣವಾಗಿ ದಹಿಸಿ, ಸ್ವಲ್ಪಕಾಲದೊಳಗಾಗಿ ವಿದ್ಯುದಗ್ನಿಯಂತೆ ಶಾಂತವಾಗಿಬಿಟ್ಟಿತು. ಬಳಿಕ, ಅವನ ದೇಹವೆಲ್ಲವೂ ಸುಟ್ಟುಹೋದದ್ದರಿಂದ ಉತ್ಪನ್ನವಾದ ಬಿಳುಪಾದ ಭಸ್ಮವು ಹಿಮದಂತೆ ಶುಭ್ರವಾಗಿ ವಿರಾಜಿಸಿತು.

೧೩. ಆ ಸ್ಥಿತಿಯಲ್ಲಿ ಆ ಋಷಿ ಶರೀರದ ಮೂಳೆಗಳೆಲ್ಲವೂ ಕರ್ಪೂರಧೂಳಿಯಿಂದ ರಚಿತವಾದ ಹಾಸಿಗೆಯ ಮೇಲೆ ತಮಗೆ ಸುಖಕರವಾದ ರೀತಿಯಲ್ಲಿ ಔಚಿತ್ಯದಿಂದ ಮಲಗಿಕೊಂಡು ನಿದ್ರಿಸುತ್ತಿರುವವೋ ಎಂಬಂತೆ, ಅವನ ಭಾವನಾದೃಷ್ಟಿ ನಿಶ್ಚಲಗಳಾಗಿಯೂ, ಬೆಳ್ಳಗೂ ಕಾಣುತ್ತಿದ್ದವು.

೧೪. ಆ ಮೇಲೆ ಆ ಭಸ್ಮವನ್ನು ಮೂಳೆಗಳ ಸಹಿತವಾಗಿ, ಗಾಳಿಯು ಮೇಲಕ್ಕೆ ಹಾರಿಸಿಕೊಂಡುಹೋಯಿತು. ಅಲ್ಲಿ ಮೇಲೆ ಪ್ರವಹಿಸುತ್ತಲಿದ್ದ ಚಂಡಮಾರುತವು ಮೂಳೆಗಳಿಂದ ಯುಕ್ತವಾಗಿದ್ದ ಆ ಭಸ್ಮವನ್ನು ತಪಶ್ಚರ್ಯೆಯಿಂದ ಅತ್ಯಂತ ಕೃಶವಾಗಿ, ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿದ್ದ ಅವನ ದೇಹದ ಮೇಲೆ ಚೆಲ್ಲಿಬಿಟ್ಟಿತು. ಆದುದರಿಂದ ಆಗ ಆ ಮುನಿಯು ಮೂಳೆ, ಭಸ್ಮಗಳನ್ನು ಧಾರಣ ಮಾಡಿಕೊಂಡು, ರುದ್ರನ ವ್ರತವನ್ನು ಆಚರಿಸುತ್ತಿರುವವನೋ ಎಂಬಂತೆ ಕಾಣುತ್ತಿದ್ದನು.

ತಚ್ಚಂಡಪವನೋದ್ಧೂತಮಾವೃತ್ಯ ಗಗನಂ ಕ್ಷಣಾತ್ |
ಶರದೀವಾಭ್ರಮಿಹಿಕಾ ಕ್ವಾಪಿ ಭಸ್ಮಾಸ್ಥಿಮಧ್ಯಯೌ ॥ ೧೫ ॥

ಯಾವದಿತ್ಥಮವಸ್ಥೈಷಾ ಪ್ರಣವಸ್ಯಾಪರೇ ಕ್ರಮೇ |
ಬಭೂವ ನ ಹಠಾದೇವ ಹಠಯೋಗೋ ಹಿ ದುಃಖದಃ ॥ ೧೬ ॥

ತತಸ್ತೃತೀಯಾವಸರೇ ಪ್ರಣವಸ್ಯೋಪಶಾಂತಿದೇ |
ಪೂರಣಾತ್ಪೂರಕೋ ನಾಮ ಪ್ರಾಣಾನಾಮಭವತ್ಕ್ರಮಃ ॥ ೧೭ ॥

ಅಸ್ಮಿನ್ನವಸರೇ ಪ್ರಾಣಾಶ್ಚೇತನಾಮೃತಮಧ್ಯಗಾಃ |
ವ್ಯೋಮ್ನಿ ಶೀತಲತಾಮಾಯುರ್ಹಿಮಸಂಸ್ಪರ್ಶಸುಂದರೀಂ ॥ ೧೮ ॥

---

೧೫. ಪ್ರಚಂಡವಾದ ಗಾಳಿಯಿಂದ ಮೇಲಕ್ಕೆ ಹಾರಿಹೋದ ಮೂಳೆಗಳಿಂದ ಸಹಿತವಾದ ಆ ಭಸ್ಮವು ಸ್ವಲ್ಪಕಾಲ ಗಗನಮಂಡಲವನ್ನೆಲ್ಲ ಆಕ್ರಮಿಸಿಕೊಂಡಿದ್ದು ಬಳಿಕ ಒಂದು ಕ್ಷಣದೊಳಗಾಗಿ, ಶರತ್ಕಾಲದಲ್ಲಿ ಮೇಘಗಳೊಳಗೆ ಜಲಬಿಂದುಗಳು ಲೀನವಾಗುವಂತೆ ಎಲ್ಲಿಯೋ ಅದೃಶ್ಯವಾಗಿ ಹೋಗಿಬಿಟ್ಟಿತು.

೧೬. ಹೀಗೆ ಓಂಕಾರದ ಎರಡನೆಯ ಭಾಗವನ್ನು ಉಚ್ಚಾರಣೆ ಮಾಡಿದ ಸಮಯದಲ್ಲಿ ಆ ಉದ್ದಾಲಕನಿಗೆ ಉಂಟಾದ ಈ ಸ್ಥಿತಿಯೆಲ್ಲವೂ ಅವನ ಭಾವನಾ ವಿಶೇಷದಿಂದಲೇ ಉಂಟಾದುದೇ ಹೊರತು, ಹಠಯೋಗದಿಂದ ಉಂಟಾದುದಲ್ಲ. ಹಠಯೋಗವು ಪ್ರಾಯಶಃ ದುಃಖಪ್ರದವಾದುದೇ ಸರಿ.

೧೭. (ಪ್ರಾಣಾಯಾಮ ಕ್ರಮದಲ್ಲಿ ಪ್ರಾಣವಾಯುಗಳು ಪುನಃ ಹೃದಯ ದೊಳಗೆ ಪೂರ್ಣವಾಗಿ ತುಂಬಿಕೊಳ್ಳುವಿಕೆಗೆ ಯೋಗಶಾಸ್ತ್ರದಲ್ಲಿ ಪೂರಕವೆಂದು ಹೆಸರು.) ಪೂರ್ವೋಕ್ತ ಪ್ರಕಾರವಾಗಿ ಆ ಉದ್ದಾಲಕನು ರೇಚಕ ಕುಂಭಕಗಳನ್ನು ಭಾವನಾ ವಿಶೇಷದಿಂದ ಅಭ್ಯಾಸ ಮಾಡಿದ ಅನಂತರ ಓಂಕಾರದ ಮೂರನೆಯ ಭಾಗವಾದ ಮಕಾರವನ್ನು ಉಚ್ಚಾರಣೆ ಮಾಡುವ ಸಂದರ್ಭದಲ್ಲಿ ಪ್ರಾಣವಾಯು ಗಳೆಲ್ಲ ಪುನಃ ಪೂರ್ಣವಾಗಿ ತುಂಬಿಕೊಂಡ ಕಾರಣ ಆತನಿಗೆ ಪೂರಕವೂ ಸಿದ್ಧಿಸಿತು ಈ ಸ್ಥಿತಿಯು ಉಪಶಾಂತಿಯನ್ನು ಕೊಡತಕ್ಕಂತಹುದು.

೧೮. ಈ ಪೂರಕ ಸ್ಥಿತಿಯಲ್ಲಿ ಜೀವ ಚೈತನ್ಯದೊಳಗೆ ಭಾವನೆ ಮಾಡಲ್ಪಟ್ಟ

ಕ್ರಮಾದ್ಗಗನಮಧ್ಯಸ್ಥಾಶ್ಚಂದ್ರಮಂಡಲತಾಂ ಯಯುಃ |
ಧೂಮಾ ಗಗನಕೋಶಸ್ಥಾಃ ಶೀತಲಾಂಬುದತಾಮಿವ ॥ ೧೯ ॥

ಕಲಾಕಲಾಪಸಂಪೂರ್ಣೇ ತೇ ತಸ್ಮಿಂಶ್ಚಂದ್ರಮಂಡಲೇ |
ಪುಣ್ಯರಾಶಾವಿವಾಪೂರ್ಣೇ ರಸಾಯನಮಹಾರ್ಣವೇ: ॥ ೨೦ ॥

ರಸಾಯನಮಯಾ ಧಾರಾಃ ಸಂಪನ್ನಾಃ ಪ್ರಾಣವಾಯವಃ |
ಮಣಿಯಷ್ಟಿಸಮಾಕಾರಾ ಜಾಲೇಷ್ವಿಂದೋರಿವಾಂಶವಃ ॥ ೨೧ ॥

ಸಾ ಪಪಾತಾಂಬರಾದ್ಧಾರಾ ಶೇಷೇ ಶಾರೀರಭಸ್ಮನಿ |
ರಸಾಯನೀ ಹರಶಿರಃಪತಿತೇವ ಸುರಾಪಗಾ ॥ ೨೨ ॥

ಅಮೃತದ ಮಧ್ಯದಲ್ಲಿದ್ದ ಆತನ ಪ್ರಾಣಗಳು ಬಾಹ್ಯಾಕಾಶದೊಳಗೆ ಹಿಮಸ್ಪರ್ಶದಿಂದ ಲಭ್ಯವಾಗುವಂತಹ ಅತ್ಯಂತ ಹಿತಕರವಾದ ಶೈತ್ಯವನ್ನು (ಶಾಂತಿಯನ್ನು) ಹೊಂದಿದುವು.

೧೯. ಅನಂತರ ಆಕಾಶಮಂಡಲದ ಮಧ್ಯದೊಳಗಿರುವ ಧೂಮಗಳು ಶೀತಲವಾದ ಮೇಘರೂಪವನ್ನು ಹೊಂದುವಂತೆಯೇ ಆ ಉದ್ದಾಲಕನ ಪ್ರಾಣವಾಯುಗಳು ಅಂತರಿಕ್ಷ ಮಧ್ಯದಲ್ಲಿದ್ದುಕೊಂಡು ಕಾಲಕ್ರಮದಿಂದ ಚಂದ್ರಮಂಡಲಾಕಾರವಾಗಿ ಪರಿಣಮಿಸಿದವು.

೨೦–೨೧. ಆ ಬಳಿಕ, ಆ ಪ್ರಾಣವಾಯುಗಳು ಅಮೃತಮಯವಾದ ಕಲೆಗಳ ಸಮೂಹದಿಂದ ಪರಿಪೂರ್ಣವಾಗಿರುವ ಕಾರಣದಿಂದಲೇ ರಸಾಯನದ ಮಹಾ ಸಮುದ್ರಪ್ರಾಯವಾದ ಮತ್ತು ಧರ್ಮಮೇಘವೆಂದು ಹೆಸರುಳ್ಳ ಸಮಾಧಿಯಂತೆ ಆಹ್ಲಾದದಿಂದ ಪರಿಪೂರ್ಣವಾದ ಆ ಚಂದ್ರಮಂಡಲದೊಳಗೆ, ಚಂದ್ರನ ಕಿರಣಗಳು ಗವಾಕ್ಷಗಳ ರಂಧ್ರಗಳೊಳಗೆ ಬಹು ದೀರ್ಘವಾಗಿ ಸ್ಫಟಿಕಮಣಿಮಯವಾದ ಕಿರಣಧಾರೆಗಳಾಗಿ ಪರಿಣಮಿಸಿದವು.

೨೨. ಸಾಕ್ಷಾತ್ ಶ್ರೀ ಪರಮೇಶ್ವರನ ತಲೆಯಮೇಲೆ ದೇವಲೋಕದಿಂದ ಗಂಗೆಯು ಬಿದ್ದಂತೆ, ಅಮೃತಮಯವಾದ ಚಂದ್ರಕಿರಣಧಾರೆಯು ಅವಶಿಷ್ಟವಾಗಿ (ಉಳಿದಿದ್ದ) ಆ ಉದ್ದಾಲಕ ಮುನಿಯ ಶರೀರದ ಭಸ್ಮದಮೇಲೆ ಗಗನಮಂಡಲದಿಂದ ಬಿದ್ದಿತು.

ಉದಭೂದಿಂದುಬಿಂಬಾಭಂ ಚತುರ್ಬಾಹುವಪುಸ್ತ್ರಯಾ |
ಪ್ರಸ್ಫುರನ್ಮಂದರಾದಬ್ಧೇಃ ಪಾರಿಜಾತ ಇವ ದ್ರುಮಃ || ೨೩ ||

ಉದ್ದಾಲಕಶರೀರಂ ತನ್ನಾರಾಯಣತಯೋದಿತಂ |
ಪ್ರಫುಲ್ಲನೇತ್ರವಕ್ತ್ರಾಬ್ಜಮಾಬಭೌ ದೀಪ್ತಿಸುಂದರಂ || ೨೪ ||

ರಸಾಯನಮಯಾಃ ಪ್ರಾಣಾಸ್ತಚ್ಛರೀರಮಪೂರಯನ್ |
ಸಲಿಲೌಘಾ ಇವ ಸರೋ ವೃಕ್ಷಂ ಮಧುರಸಾ ಇವ || ೨೫ ||

ಅಂತಃಕುಂಡಲಿನೀಂ ಪ್ರಾಣಾಃ ಪೂರಯಾಮಾಸುರಾದೃತಾಃ |
ಚಕ್ರಾವರ್ತಪ್ರಸೃತಾಂ ಪಯಾಂಸೀವ ಸರಿದ್ವರಾಂ || ೨೬ ||

---

೨೩. ಪೂರ್ವದಲ್ಲಿ ದೇವಾಸುರರು ಮಂದರ ಪರ್ವತವೆಂಬ ಕಡೆಗೋಲಿಂದ ಸಮುದ್ರ ಮಥನ ಮಾಡಿದ ಮೇಲೆ ಆ ಕ್ಷೀರಸಮುದ್ರದಿಂದ ಪಾರಿಜಾತವೆಂಬ ಕಲ್ಪ ವೃಕ್ಷವು ಆವಿರ್ಭವಿಸಿದಂತೆ, ಅಮೃತಮಯವಾದ ಆ ಚಂದ್ರಕಿರಣಧಾರೆಯಲ್ಲಿ, ಚಂದ್ರಮಂಡಲ ಸದೃಶವಾಗಿ ದಿವ್ಯತೇಜಸ್ಸಿನಿಂದ ವಿರಾಜಮಾನವಾದ ಚತುರ್ಬಾಹು ಗಳನ್ನು ಧರಿಸಿದ ಒಂದು ಭವ್ಯದೇಹವು ಉದ್ಭವಿಸಿತು.

೨೪. ಹೀಗೆ, ಪುಂಡರೀಕಾಕ್ಷನೂ ಚತುರ್ಬಾಹುವೂ ಆಗಿರುವ ಶ್ರೀಮನ್ನಾರಾಯಣನ ರೂಪದಿಂದ ಆವಿರ್ಭವಿಸಿದ ಆ ಉದ್ದಾಲಕನ ದೇಹವು ವಿಕಸಿತವಾದ ಕಮಲಗಳಂತಿರುವ ಕಣ್ಣುಗಳಿಂದಲೂ, ಮುಖಕಮಲದಿಂದಲೂ ಕೂಡಿಕೊಂಡು, ದಿವ್ಯ ತೇಜಸ್ಸಿನಿಂದ ಅತ್ಯಂತ ಸುಂದರವಾಗಿ ಶೋಭಿಸುತ್ತಲಿದ್ದಿತು.

೨೫. ಅನಂತರ ಜಲಪ್ರವಾಹಗಳು ಮಳೆಗಾಲದಲ್ಲಿ ಸರೋವರವನ್ನೂ ಮತ್ತು ವಸಂತಋತುವಿನಲ್ಲಿ ಚಿಗುರೆಲೆಗಳು ಅಂಕುರಿಸುವದಕ್ಕೆ ಕಾರಣಗಳಾದ ಭೂಮಿ ಯೊಳಗಿರುವ ರಸವಿಶೇಷಗಳು ವೃಕ್ಷಗಳನ್ನೂ ತುಂಬಿಕೊಂಡು ಉಲ್ಲಾಸಗೊಳಿಸು ವಂತೆ, ಅಮೃತಮಯಗಳಾದ ಅವನ ಪ್ರಾಣಗಳು ಆ ದಿವ್ಯ ಸುಂದರವಾದ ನೂತನ ದೇಹವನ್ನು ತುಂಬಿಕೊಂಡು ಉಲ್ಲಾಸಗೊಳಿಸಿದುವು.

೨೬. ಚಕ್ರಾಕಾರವಾಗಿ ಗಿರ್ರನೆ ಸುತ್ತುತ್ತಿರುವ ನೀರಿನ ಸುಳಿಗಳಿಂದ ಕೂಡಿ, ವೇಗವಾಗಿ ಪ್ರವಹಿಸುವಂಥ ಗಂಗಾನದಿಯನ್ನು ಜಲಪ್ರವಾಹಗಳು ಪೂರ್ತಿಮಾಡು

ಪ್ರಕೃತಸ್ಥಂ ಬಭೂವಾಸ್ಯ ತಚ್ಛರೀರಂ ದ್ವಿಜನ್ಮನಃ |
ಪ್ರಾವೃಟ್ ಶರೀರವಿಗಮೇ ಧೌತಂ ತಲಮಿವಾವನೇಃ || ೨೭ ||

ಅಥ ಪದ್ಮಾಸನಗತಃ ಕೃತ್ವಾ ದೇಹೇ ಸ್ಥಿತಿಂ ದೃಢಾಂ |
ಆಲಾನ ಇವ ಮಾತಂಗಂ ನಿಬದ್ಧ್ಯೇಂದ್ರಿಯಪಂಚಕಂ || ೨೮ ||

ನಿರ್ವಿಕಲ್ಪಸಮಾಧ್ಯರ್ಥಂ ವ್ಯವಸಾಯಮುಪಾದದೇ |
ಸ್ವಭಾವಂ ಸ್ವಚ್ಛತಾಂ ನೇತುಂ ಶರತ್ಕಾಲ ಇವಾಮಲಂ || ೨೯ ||

ಪ್ರಶಾಂತವಾತಹರಿಣಮಾಶಾದಿಗಣಗಾಮಿನಂ |
ಚಿಂತಯಾ ಹೃದಯಂ ನಿನ್ಯೇ ದೂರಾದ್ರಜ್ಜ್ವೇವ ಕೀಲಕಾಂ || ೩೦ ||

ಪಂತೆಯೇ ಆ ಉದ್ದಾಲಕನ ಶರೀರದೊಳಗಿರುವ ಕುಂಡಲಿನಿಯನ್ನು ಪ್ರಾಣಗಳು ಅತ್ಯಾದರದಿಂದ ಪರಿಪೂರ್ಣ ಮಾಡಿದುವು.

[ಕುಂಡಲಿನೀ ಎಂಬುದು ಶರೀರದಲ್ಲಿ ಮೂಲಾಧಾರದೊಳಗಿರುವ ಒಂದು ಶಕ್ತಿ ವಿಶೇಷ.]

೨೭. (ಶರತ್ಕಾಲದಲ್ಲಿ ಮೇಘಗಳಿಂದ ಸುರಿಯುವ ಕಟ್ಟಕಡೆಯಾದ ಮಳೆಯಿಂದ ಭೂತಲವು ಚೆನ್ನಾಗಿ ತೊಳೆಯಲ್ಪಟ್ಟಂತೆ ನಿರ್ಮಲವಾಗುವದು. ಬಿಸಿಲಿನಿಂದ ಕೂಡಲೇ ಒಣಗಿಹೋಗಿಬಿಡುವದು. ಮತ್ತು ಮಳೆಗಾಲದಲ್ಲಿ ಇದ್ದಂಥ ಕೆಸರು, ಪಾಚಿ-ಮುಂತಾದ ಕಶ್ಮಲಗಳಿಂದ ಮಲಿನವಾದ ಅದರ ಆಕಾರವು ಹೋಗಿ ನಿರ್ಮಲವಾಗುವದು. ಆಗ ಅದು ಎಲ್ಲ ಜನಗಳ ಪ್ರಯಾಣಾದಿ ಕಾರ್ಯಗಳಿಗೆ ಅತ್ಯಂತ ಯೋಗ್ಯವಾಗುವದು.) ಇದರಂತೆಯೇ ಆ ಉದ್ದಾಲಕನೆಂಬ ಬ್ರಾಹ್ಮಣನ ಶರೀರವೂ ಕೂಡ ಶೋಷಣ, ದಹನ, ಪ್ಲಾವನ ಮುಂತಾದ ಭಾವನೆಗಳಿಂದ ತೊಳೆಯಲ್ಪಟ್ಟು, ನಿರ್ಮಲವಾಗಿದ್ದುಕೊಂಡು, ಪುನಃ ಮೊದಲಿನಂತೆ ಪ್ರಕೃತ ಸಮಾಧಿ ಕಾರ್ಯನಿಷ್ಠೆಯುಳ್ಳದ್ದಾಯ್ತು.

೨೮-೨೯-೩೦. ತರುವಾಯ, ಆ ಉದ್ದಾಲಕನು ಪುನಃ ಪದ್ಮಾಸನ ಹಾಕಿಕೊಂಡು, ತನ್ನ ಆಸನದಮೇಲೆ ಸ್ಥಿರವಾಗಿ ಕುಳಿತುಕೊಂಡು, ಬಲವಾದ ಸ್ತಂಭದಲ್ಲಿ ಆನೆಯನ್ನು ಬಿಗಿದು ಕಟ್ಟಿ ನಿಲ್ಲಿಸುವಂತೆ, ತನ್ನ ಚಕ್ಷುರಾದಿ ಪಂಚ ಜ್ಞಾನೇಂದ್ರಿಯ

ಭಾವಮಾನಮಥೋ ಮತ್ತಂ ಚಿತ್ತಂ ವಿಮಲಮಾಕುಲಂ |
ಬಲಾತ್ಸಂರೋಧಯಾಮಾಸ ಸೇತುರ್ಜಲಮಿವ ದ್ರುತಂ ॥ ೩೧ ॥

ನಿಮಿಮೀಲ ದೃಶಾವರ್ಧಂ ಪರಿಪಕ್ಷ್ಮಲಪಕ್ಷ್ಮತೇ |
ನಿಸ್ಪಂದತಾರಾಮಧುರೇ ಸಂಧ್ಯಾಕಾಲ ಇವಾಂಬುಜೇ ॥ ೩೨ ॥

ಗಳನ್ನು ದೇಹದೊಳಗೆಯೇ ಬಲವಾಗಿ ಬಿಗಿದು ಕಟ್ಟಿಹಾಕಿ, ಶರದೃತುವು ಜಗತ್ತನ್ನೆಲ್ಲ ನಿರ್ಮಲವನ್ನಾಗಿ ಮಾಡಲು ಪ್ರಯತ್ನಿಸುವಂತೆ, ಆಶೆ ಲೋಭ, ಉತ್ಕಲಿಕೆ (ತನಗೆ ಇಷ್ಟವಾದ ವಸ್ತುವು ದೊರೆಯಲಿಲ್ಲವಲ್ಲಾ ಎಂಬ ಮನಸ್ಸಿನ ಕಳವಳ) ಮತ್ತು ಪ್ರತೀಕ್ಷೆ (ಇಷ್ಟಾರ್ಥಸಿದ್ಧಿಯಾಗಬಹುದೆಂಬ ನಿರೀಕ್ಷೆ, ಪ್ರತ್ಯಾಶೆ) ಮುಂತಾದವು ಗಳಿಂದ ಜೊತೆಗೂಡಿ, ಹೊರಗೆ ಓಡಿಹೋಗುವ ಸ್ವಭಾವವುಳ್ಳ, ತನ್ನ ಮನಸ್ಸಿಗೆ ಪ್ರಾಣಾಯಾಮಾಭ್ಯಾಸ ಬಲದಿಂದ ಪ್ರಾಣವಾಯುಗಳೆಂಬ ಹರಿಣಗಳ (ಜಿಂಕೆಗಳ) ಓಡಾಟವನ್ನು ಪೂರ್ತಿಯಾಗಿ ಶಮನಗೊಳಿಸಿ, (ನಿಲ್ಲಿಸಿ–ನಿರೋಧಮಾಡಿ) ಅವಿದ್ಯಾ ಕಾಮಕ್ರೋಧಾದಿ ದೋಷಗಳನ್ನೆಲ್ಲ ಚೆನ್ನಾಗಿ ತೊಳೆದುಹಾಕಿ, ಮೆರಗು ಕೊಡುವದ ಕ್ಕೋಸ್ಕರ, ನಿರ್ವಿಕಲ್ಪಕ ಸಮಾಧಿಯಲ್ಲಿ ಪರಿನಿಷ್ಠಿತನಾಗಲು, ತಕ್ಕ ಕಾರ್ಯಕ್ರಮ ವನ್ನು (ವ್ಯವಸಾಯವನ್ನು) ಕೈಗೊಂಡನು. ಆಗ ಒಂದು ದುಷ್ಟವಾದ ಪ್ರಾಣಿಯು (ಕುದುರೆ, ಎತ್ತು, ಮುಂತಾದುದು) ತನ್ನನ್ನು ಕಟ್ಟಿಹಾಕಿರುವ, ದೃಢವಾಗಿ ನೆಡಲ್ಪ ಡದೆ ಶಿಥಿಲವಾಗಿರುವ ಗೂಟವನ್ನು ಕಿತ್ತು, ಹಗ್ಗದ ಸಮೇತ, ಬಹುದೂರ ಎಲ್ಲಿಗೋ ಎಳೆದುಕೊಂಡುಹೋಗಿಬಿಡುವಂತೆ, ಈ ಉದ್ದಾಲಕನ ಮನಸ್ಸನ್ನು ಪೂರ್ವಾನು ಭೂತ, ಗೃಹಕ್ಷೇತ್ರ, ಪುತ್ರಮಿತ್ರಾದಿಗಳ ಚಿಂತೆಯು ಬಲಾತ್ಕಾರದಿಂದ ಬಹುದೂರ ಎಳೆದುಕೊಂಡುಹೋಯಿತು.

೩೧. ಹೀಗೆ ಅತ್ಯಂತ ವ್ಯಾಕುಲತೆಯಿಂದ ಕೂಡಿ, ಅಧೋಮುಖವಾಗಿ ಬಹು ವೇಗದಿಂದ ಓಡಿಹೋಗುತ್ತಿರುವ, ಮದಾಂಧವಾದ ತನ್ನ ಮನಸ್ಸನ್ನು ನೋಡಿ, ಆ ಉದ್ದಾಲಕನು ಕೂಡಲೇ (ವಿವೇಕವೆಂಬ ನೀರಿನಿಂದ ಚೆನ್ನಾಗಿ ತೊಳೆದು, ರಾಗಾದಿ ಮಲಗಳನ್ನು ಹೋಗಲಾಡಿಸುವದರ ಮೂಲಕ) ತನ್ನ ಮನಸ್ಸನ್ನು ನಿರ್ಮಲಗೊಳಿಸಿ ಹರಿದುಹೋಗುವ ನೀರನ್ನು ದೃಢವಾದ ಕಟ್ಟೆಯು ತಡೆದು ನಿಲ್ಲಿಸುವಂತೆ, ಅತಿ ಪ್ರಯತ್ನದಿಂದ ಬಲಾತ್ಕಾರವಾಗಿ ತಡೆದು ತನ್ನೊಳಗೆಯೇ ನಿಲ್ಲಿಸಿಕೊಂಡನು.

೩೨. ಸಾಯಂಕಾಲವು ಒಳಗೆ ಸೇರಿಕೊಂಡು, ಕಟ್ಟಕದಲದೆ ಮಧುಪಾಲನ

ಸೌಮ್ಯತಾಮನಯನ್ಮೌನೀ ಪ್ರಾಣಾಪಾನಜವಂ ಮುಖೇ |
ಶ್ವಸನಂ ಶ್ರೇಯಸೇ ದೇಶೇ ಪ್ರಶಸ್ತಃ ಸುಮಯೋ ಯಥಾ || ೩೩ ||

ದಲ್ಲಿ ಆಸಕ್ತವಾದ ಭ್ರಮರಗಳಿಂದ ಸುಂದರವಾದ ಕಮಲಗಳನ್ನು ಅರ್ಧ ಮುಚ್ಚಿಸಿ ಬಿಡುವಂತೆ, ಆಗ ಉದ್ದಾಲಕನೂ ಕೂಡ, ನಿಶ್ಚಲವಾದ ಕಣ್ಣುಗುಡ್ಡೆಗಳಿಂದ ಕೂಡಿ ಅತಿ ಸುಂದರವಾದ ತನ್ನ ಕಣ್ಣುಗಳನ್ನು ಎರಡು ಕಡೆಗಳ ರೆಪ್ಪೆಗಳೂ ಒಟ್ಟಿಗೆ ಕೂಡಿಕೊಳ್ಳುವಷ್ಟುಮಟ್ಟಿಗೆ ಅರ್ಧವಾಗಿ ಮುಚ್ಚಿಕೊಂಡು, ಧ್ಯಾನಾಸಕ್ತನಾದನು.

೩೩. ಜಗತ್ಕಲ್ಯಾಣಕ್ಕಾಗಿ ಮಹಾತ್ಮರು ಲೋಕದಲ್ಲಿ ಅವತಾರ ಮಾಡುವ ಪ್ರಶಸ್ತವಾದ ಕಾಲವು ಮುಂದೆ ಜಗತ್ತಿಗೆ ಶ್ರೇಯಸ್ಸುಂಟಾಗುವದನ್ನು ಸೂಚಿಸುವದಕ್ಕಾಗಿ ಅವರ ಅವತಾರ ಸ್ಥಳದಲ್ಲಿ ವಾಯುವು ಅತ್ಯಂತ ಹಿತಕರವಾಗಿರುವಂತೆ, ತಣ್ಣಗೂ ನಿಧಾನವಾಗಿಯೂ ಸುಗಂಧಮಯವಾಗಿಯೂ ಒಂದೇ ಸಮನಾಗಿಯೂ ಬೀಸುವಂತೆ ಮಾಡುವದು. ಹಾಗೆಯೇ ಆ ಉದ್ದಾಲಕನೂ ಮೌನವ್ರತವನ್ನು ಆಶ್ರಯಿಸಿ ತನ್ನ ಬಾಯಲ್ಲಿ ಪ್ರಾಣಾಪಾನಗಳ ವೇಗವನ್ನು ಕಡಿಮೆಮಾಡಿ ಅವು ಒಂದೇ ಸಮನಾಗಿ ನಾಸಾಭ್ಯಂತರದಲ್ಲಿ (ಮೂಗಿನ ಒಳಗಡೆ) ಸಂಚರಿಸುವಂತೆ ಸೌಮ್ಯಭಾವವನ್ನುಂಟು ಮಾಡಿದನು.

[ಧರ್ಮಸಂಸ್ಥಾಪನೆಗೋಸ್ಕರ ಶ್ರೀರಾಮಾದ್ಯವತಾರಗಳು ಸಂಭವಿಸಿದಾಗ ಮುಂದೆ ಜಗತ್ಕಲ್ಯಾಣವಾಗುವದೆಂಬ ಶುಭ ಸೂಚನೆಗಳು (ಪ್ರಶಾಂತ ವಾತಾವರಣ ಅಗ್ನಿಯು ಪ್ರದಕ್ಷಿಣಾಕಾರವಾದ ಜ್ವಾಲೆಗಳನ್ನು ಹೊರಡಿಸುವದು. ಉದಕವು ತಿಳಿಯಾಗುವದು ಇತ್ಯಾದಿ) ತಲೆದೋರಿದುವು ಎಂಬುದು ಪುರಾಣ ಪ್ರಸಿದ್ಧವು. ದುರಾತ್ಮರು ಹುಟ್ಟಿದರೆ ಆ ಕಾಲದಲ್ಲಿ ಭೂಮಿಯ ಮೇಲಿರುವ ಮಣ್ಣನ್ನು ಹೊತ್ತ ಬಿರುಗಾಳಿಯು ಜೋರಾಗಿ ಬೀಸುವಿಕೆ ಮುಂತಾಗಿ ಅನರ್ಥ ಸೂಚಕಗಳಾದ ಕೆಟ್ಟ ಶಕುನಗಳು ಕಾಣುವವು ಎಂಬುದೂ ಪ್ರಸಿದ್ಧವು.

ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾನ್ ಚಕ್ಷುಶ್ಚೈವಾಂತರೇ ಭ್ರುವೋಃ | ಪ್ರಾಣಾಪಾನೌ ಸಮೌಕೃತ್ವಾ ನಾಸಾಭ್ಯಂತರ ಚಾರಿಣೌ || ಯತೇಂದ್ರಿಯ ಮನೋ ಬುದ್ಧಿಃ ಮುನಿರ್ಮೋಕ್ಷಪರಾಯಣಃ ವಿಗತೇಚ್ಛಾಭಯಕ್ರೋಧಃ ಯಸ್ಸದಾಮುಕ್ತ ಏವಸಃ || ಗೀತಾ–ಅಧ್ಯಾಯ ೫, ಶ್ಲೋಕ ೨೭–೨೮.]

ತಿಲೇಭ್ಯ ಇವ ತೈಲಾನಿ ಪೃಥಕ್ ಚಕ್ರೇ ಪ್ರಯತ್ನತಃ |
ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ಕೂರ್ಮೋಽಂಗಾನೀವ ಗೋಪರ್ಯ || ೩೪ ||

ಬಾಹ್ಯಸ್ಪರ್ಶಾನಶೇಷೇಣ ಜಹೌ ದೂರೇ ಸ ಧೀರಧೀಃ |
ಸಹಸಾ ಕುಂಡಕಚ್ಛನ್ನೋ ಮಣಿರ್ದೂರತ್ವಿಷೋ ಯಥಾ || ೩೫ ||

ವಿಲೀನಾನಾಂತರಾಂಶ್ಚಕ್ರೇ ಸ್ಪರ್ಶಾನುಜ್ಝಿತದರ್ಶನಾತ್ |
ರಸಾನ್ವಿಟಪಕೋಶಸ್ಥಾನ್ಮಾರ್ಗಶೀರ್ಷ ಇವ ದ್ರುಮಃ || ೩೬ ||

---

೩೪. ಆಮೆಯು ತನ್ನ ಅವಯುವಗಳನ್ನು ಒಳಕ್ಕೆ ಸೆಳೆದುಕೊಂಡು ಮರೆಯಿಸಿಕೊಳ್ಳುವಂತೆ ಆತನೂ ಜಾಗರೂಕನಾಗಿ ತನ್ನ ಕರಚರಣಾದ್ಯವಯುವಗಳನ್ನು ಮರೆಮಾಡಿಕೊಂಡಿರುತ್ತಾ ಎಳ್ಳಿನಿಂದ ಎಣ್ಣೆಯನ್ನು ಬೇರ್ಪಡಿಸುವಂತೆ ಬಹು ಕಷ್ಟದಿಂದ ಪ್ರಯತ್ನಮಾಡಿ ತನ್ನ ಚಕ್ಷುರಾದೀಂದ್ರಿಯುಗಳನ್ನು ಶಬ್ದಾದಿ ವಿಷಯುಗಳ ದೆಸೆಯಿಂದ ಪೃಥಕ್ಕಾಗಿ ಪ್ರತ್ಯೇಕಿಸಿದನು.

[ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ | ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾಪ್ರತಿಷ್ಠಿತಾ || ಗೀತಾ-ಅ.೨, ಶ್ಲೋ. ೫೮]

೩೫. ಒಂದು ದಿವ್ಯವಾದ ವಜ್ರದ ಮೇಲೆ ಒಂದು ಸಣ್ಣ ಮಡಕೆಯನ್ನು ಮುಚ್ಚಿದರೂ ಅದು ಬಹುದೂರ ವ್ಯಾಪಿಸಿದ್ದ ತನ್ನ ತೇಜಸ್ಸಿನ-ಕಿರಣಗಳನ್ನು ಹೇಗೆ ಉಪಸಂಹರಿಸುವದೋ ಹಾಗೆಯೇ ನಿರ್ವಿಕಾರವಾದ ಮನಸ್ಸುಳ್ಳವನಾಗಿದ್ದ ಆ ಉದ್ದಾಲಕನೂ ಬಾಹ್ಯ ಶಬ್ದಾದಿ ವಿಷಯುಗಳನ್ನು ಸಂಪೂರ್ಣವಾಗಿ ಬಹು ದೂರದಲ್ಲಿಯೇ ಉಪಸಂಹಾರ ಮಾಡಿದನು.

೩೬. ಮಾರ್ಗಶೀರ್ಷಮಾಸದಲ್ಲಿ ಮರಗಳು ತಮ್ಮ ತಮ್ಮ ಕೊಂಬೆಗಳೊಳಗಿರುವ ರಸ ವಿಶೇಷಗಳನ್ನು ಒಣಗಿಸಿ ಬಿಟ್ಟು ಕಣ್ಣಿಗೆ ಕಾಣಿಸದಂತೆ ಮಾಡುವವು. ಅಂತೆಯೇ ಆ ಉದ್ದಾಲಕನೂ ತನ್ನ ಮನಸ್ಸಿನೊಳಗೆ ವಾಸನಾರೂಪಗಳಾಗಿ ಅಡಗಿಕೊಂಡಿದ್ದ ವಿಷಯುಗಳನ್ನು ಎಳೆದುಕೊಂಡು ಹೋಗಿ ಅಧಿಷ್ಠಾನ ತತ್ತ್ವದಲ್ಲಿ ಅಡಗಿಸಿ ಬಿಟ್ಟು ಅವುಗಳು ಪುನಃ ಗೋಚರಿಸದೆ ಇರುವದಕ್ಕಾಗಿ ಅವುಗಳ ದರ್ಶನವನ್ನೂ ಬಿಟ್ಟುಬಿಟ್ಟನು.

ರುರೋಧ ಗುದಸಂಕೋಚಾನ್ನವದ್ವಾರಾನಿಲಾನಥ |
ಮುಖಸಂಸ್ಥಿಗಿತಃ ಕುಂಭೋ ರಂಧ್ರಕೋಶಾನಿವೇತರಾ್ || ೩೭ ||

ಸ್ವಾತ್ಮರತ್ನಪ್ರಕಾಶಾಢ್ಯಾಂ ಸ್ಪಷ್ಟಾಂ ಕುಸುಮಲಾಂಛಿತಾಂ |
ದಧಾರ ಕಂಧರಾ ಧೀರೋ ಮೇರುಃ ಶೃಂಗಶಿಖಾಮಿವ || ೩೮ ||

ಬಭಾರ ಹೃದಯಾಕಾಶೇ ಮನಃ ಸಂಯಮಮಾಗತಂ |
ವಿಂಧ್ಯಖಾತ ಇವೋನ್ಮತ್ತಂ ಗಜಂ ಯುಕ್ತಿವಶೀಕೃತಂ || ೩೯ ||

---

೩೭. (ಒಂದು ಪೂರ್ಣಕುಂಭದ ಬಾಯಿಯನ್ನು ಭದ್ರವಾಗಿ ಮುಚ್ಚಿಬಿಟ್ಟು ಅವನ್ನು ಅಧೋಮುಖವಾಗಿ ಇಟ್ಟರೆ ಆಗ ಅದರೊಳಕ್ಕೆ ಹೊರಗಿನ ವಾಯು ಪ್ರವೇಶ ಮಾಡುವದಕ್ಕೆ ಅವಕಾಶವಿಲ್ಲದೆ ಹೋಗುವದು. ಆದಕಾರಣ ಆದರ ಬೇರೆ ರಂಧ್ರಗಳಿಂದಲೂ ನೀರು ಹೊರಹೊರಡುವದಕ್ಕೆ ಆಸ್ಪದವಿಲ್ಲದಂತಾಗಿ ಇತರ ರಂಧ್ರಕೋಶಗಳನ್ನೂ ತಡೆದು ನಿಲ್ಲಿಸುವದು, ಇವರಂತೆಯೇ) ಆ ಉದ್ದಾಲಕನು ತನ್ನ ಹಿಮ್ಮಡಿಯಿಂದ ಅಪಾನವಾಯುವು ಸಂಚರಿಸತಕ್ಕ ಗುದಸ್ಥಾನವನ್ನು ಮುಚ್ಚಿಕೊಂಡು ವಾಯು ಸಂಚಾರವನ್ನು ತಡೆದುಬಿಟ್ಟು ಆ ಬಳಿಕ ಕ್ರಮೇಣ ನವದ್ವಾರಗಳಲ್ಲೂ ವಾಯುವನ್ನು ಸಂಚರಿಸದಂತೆ ತಡೆದು ನಿರೋಧ ಮಾಡಿದನು.

೩೮. ಮೇರುಪರ್ವತವು ತನ್ನಲ್ಲಿರುವ ನಾನಾವಿಧ ರತ್ನಗಳ ಪ್ರಕಾಶಗಳಿಂದ ಪ್ರಚುರವಾಗಿಯೂ ಕಲ್ಪವೃಕ್ಷಗಳ ಹೂಗಳನ್ನು ಧರಿಸಿದುದಾಗಿಯೂ ಪ್ರಕಾಶಮಾನವಾದ ತನ್ನ ಶಿಖರವೆಂಬ ಶಿಖೆಯನ್ನು ಹೇಗೆ ಧರಿಸಿಕೊಂಡಿರುವದೋ ಹಾಗೆಯೇ ಆ ಉದ್ದಾಲಕನು ತನ್ನ ಆತ್ಮವೆಂಬ ದಿವ್ಯರತ್ನದ ಪ್ರಕಾಶದಿಂದ ಕೂಡಿಕೊಂಡು ಪ್ರಸನ್ನವೂ ಸೌಮ್ಯವೂ ಆದ ತನ್ನ ಮುಖಕಮಲದಿಂದ ಶೋಭಿತವಾದ ಮತ್ತು ರಜಸ್ತಮೋಗುಣಗಳ ಆವರಣವಿಲ್ಲದಿರುವ ಕಾರಣ ಅತಿ ಸ್ಪಷ್ಟವಾದ ಕುತ್ತಿಗೆಯನ್ನು ಬಹು ಧೀರನಾಗಿ ಮೇಲಕ್ಕೆತ್ತಿ ಧರಿಸಿದ್ದನು.

೩೯. ವಿಂಧ್ಯ ಪರ್ವತದ ಹತ್ತಿರ ಆನೆಗಳನ್ನು ಕೆಡಹುವದಕ್ಕಾಗಿ ಅಗೆದಿರುವ ಹಳ್ಳವು ಯುಕ್ತಿಯಿಂದ ವಶಗಿ ಸ್ವಾಧೀನವಾದ, ಮದಿಸಿದ ಆನೆಯನ್ನು ಧರಿಸಿರುವಂತೆ, ಆ ಉದ್ದಾಲಕನು ಅದುವರೆಗೂ ಉನ್ಮತ್ತವಾಗಿ ಎಲ್ಲೆಲ್ಲಿಯೋ ಅಲೆಯುತ್ತಾ, ತನ್ನ ಅಧೀನಕ್ಕೆ ಸಿಕ್ಕದೆ, ಬಹುವಿಧವಾಗಿ ತೊಂದರೆಪಡಿಸುತ್ತಿದ್ದ ತನ್ನ ಮನಸ್ಸನ್ನು

ಶರನ್ನಭೋವದಾಸಾದ್ಯ ನಿರ್ಮಲಾಮತಿಸೌಮ್ಯತಾಂ ।
ಜಹಾರ ಪರಿಪೂರ್ಣಾಬ್ಧೇರ್ನಿರ್ವಾತಸ್ಯಾಚಲಾಂ ಶ್ರಿಯಂ　　|| ೪೦ ||

ದುಧಾವಾತಿವಿಕಲ್ಪೌಘಾನ್ಪ್ರತಿಭಾಸಮುಪೇಯುಷಃ ।
ಪುರಃ ಪರಿಸ್ಫುರದ್ರೂಪಾನ್ಮಶಕಾನಿವ ಮಾರುತಃ　　|| ೪೧ ||

ಆಗ ಪ್ರಾಣಾಯಾಮಾಭ್ಯಾಸಾದಿ ವಿವಿಧೋಪಾಯಗಳಿಂದ ಚೆನ್ನಾಗಿ ಪಳಗಿಸಿ, ತನ್ನ ಸ್ವಾಧೀನಪಡಿಸಿಕೊಂಡು (ಸಂಯಮಗೊಳಿಸಿದ) ತನ್ನ ಹೃದಯಾಕಾಶದೊಳಗೆ ಕಟ್ಟಿ ಕದಲದಂತೆ ಮಾಡಿ ಧರಿಸಿದನು.

[ಸಂಯಮವೆಂದರೆ ಒಂದು ವಿಷಯದಲ್ಲಿ ನಿಶ್ಚಲವಾದ ಧಾರಣಾಧ್ಯಾನ ಸಮಾಧಿಗಳೆಂದರ್ಥ.]

೪೦. ಆಗ ಆ ಉದ್ದಾಲಕನು, ಶರದೃತುವಿನ, ಗಗನಮಂಡಲದಂತೆ, ನಿರ್ಮಲವಾದ ಪ್ರಸನ್ನತೆಯನ್ನೂ, ಸೌಮ್ಯತೆಯನ್ನೂ ಪಡೆದು, ಜೋರಾಗಿ ಗಾಳಿಯು ಬೀಸದೆ ಇರುವ ಕಾರಣ ನಿಶ್ಚಲವಾಗಿರುವ, ಜಲಸಮೃದ್ಧವಾದ, ಅಪಾರ ಮಹಾ ಸಮುದ್ರದ ಪ್ರಶಾಂತವಾದ ಸೊಬಗನ್ನು ತಿರಸ್ಕರಿಸುತ್ತಿದ್ದನು.

[ಧಾರಣೆಯಿಂದ ಚಿತ್ತಪ್ರಸಾದವೂ, ಅದರ ಮೂಲಕ ಆತ್ಮಧ್ಯಾನ ವಿಶ್ರಾಂತಿಯೂ ಆಯಿತು.]

೪೧. ವಾಯುವು ತನಗೆ ಅಡ್ಡಲಾಗಿ ಸಿಕ್ಕಿದ ಸೊಳ್ಳೆ (ಮಶಕ) ಗಳನ್ನು ಕೊಡಹಿಬಿಡುವಂತೆ, ಆ ಉದ್ದಾಲಕನು, ತನ್ನ ಬ್ರಹ್ಮಾಕಾರವಾದ ಚಿತ್ತವೃತ್ತಿಧಾರೆಗೆ ವಿಚ್ಛೇದಕಾರಿಗಳಾಗಿ ಮಧ್ಯಮಧ್ಯದಲ್ಲಿ ತಲೆದೋರುತ್ತ, ತನ್ನೆದುರಿನಲ್ಲಿಯೇ ವಿಜೃಂಭಿಸುತ್ತಲಿದ್ದ, ವಿಪರೀತ ಭಾವನೆಗಳ ವಿಕಲ್ಪ ಪರಂಪರೆಗಳನ್ನು ನಿಶ್ಶೇಷವಾಗಿ ಕೊಡಹಿಬಿಟ್ಟನು.

ಆಗಚ್ಛತೋ ಯಥಾಕಾಮಂ ಪ್ರತಿಭಾಸಾನ್ಪುನಃ ಪುನಃ |
ಅಚ್ಛಿನನ್ಮನಸಾ ಶೂರಃ ಖಡ್ಗೇನೇವ ರಣೇ ರಿಪೂನ್ || ೪೨ ||

ವಿಕಲ್ಪೌಘೇ ಪರಾಲೂನೇ ಸೋಽಪಶ್ಯದ್ಧೃದಯಾಂಬರೇ |
ತಮುಚ್ಛನ್ನವಿವೇಕಾರ್ಕಂ ಲೋಲಕಜ್ಜಲಮೇಚಕಂ || ೪೩ ||

ತಮುಪ್ಯನ್ಮಾರ್ಜಯಾಮಾಸ ಸಮ್ಯಕ್ಕ್ಷಾಂತವಿವಸ್ವತಾ |
ಸಮ್ಯಗ್ಜ್ಞಾನೋದಿತೇನಾಶು ಪ್ಲವನೇನೇವ ಕಜ್ಜಲಂ || ೪೪ ||

---

೪೨. ಶೂರನಾದ ರಾಜನು ರಣರಂಗದಲ್ಲಿ ಪ್ರತಿಭಟಿಸಿದ ತನ್ನ ಶತ್ರುಗಳನ್ನು ಕತ್ತಿಯಿಂದ ಕತ್ತರಿಸಿಬಿಡುವಂತೆ, ಅತಿ ಧೀರನಾದ ಉದ್ದಾಲಕನೂ ಯಥೇಚ್ಛವಾಗಿ (ಮೇಲಿಂದಮೇಲೆ) ಉದಯಿಸುತ್ತಲಿದ್ದ ವಿಕಲ್ಪಗಳನ್ನೆಲ್ಲ, ವಿವೇಕಪೂರ್ಣವಾದ ತನ್ನ ಮನಸ್ಸಿನಿಂದಲೇ ಕತ್ತರಿಸಿಹಾಕಿಬಿಟ್ಟನು.

೪೩. ಹೀಗೆ ಎಷ್ಟೋ ಸಲ ಆ ವಿಕಲ್ಪಜಾಲಗಳು ಉದಯವಾಗುತ್ತಿದ ಹಾಗೆಯೇ ಆಗಾಗಲೇ ಅವುಗಳನ್ನು ಕತ್ತರಿಸಿಹಾಕುತ್ತಿದ್ದರೂ ಕೂಡ, ಬಳಿಕಲೂ ಆ ಉದ್ದಾಲಸು ಪುನಃ ತನ್ನ ಹೃದಯಾಕಾಶದೊಳಗೆ ವಿವೇಕವೆಂಬ ಸೂರ್ಯನನ್ನು ಆಚ್ಛಾದನೆ ಮಾಡುತ್ತಾ, ಕಾಡಿಗೆಯಂತೆ ಕಡು ಕಪ್ಪಾಗಿ ಆವರಿಸುತ್ತಲಿದ್ದ, ತಮೋಗುಣದ ಉದ್ರೇಕದಿಂದುಂಟಾದ ಅಂಧಕಾರವನ್ನು ಕಂಡನು.

೪೪. ಆ ಮೇಲೆ ಆ ಅಂಧಕಾರವನ್ನೂ ಕೂಡ ಆ ಉದ್ದಾಲಕನು ಸತ್ವ ಗುಣೋದ್ಭಾವನದಿಂದ ಪ್ರದೀಪ್ತವಾದ ತತ್ತ್ವಜ್ಞಾನದಿಂದ ಉದಯಿಸಿದ ತನ್ನ ಮನಸ್ಸೆಂಬ ಸೂರ್ಯನಿಂದ ಬಲು ಬೇಗನೆ ನಿಶ್ಶೇಷವಾಗಿ ನೀರಿನಲ್ಲಿ ಅದ್ದಿ ಉಜ್ಜಿ ಚೆನ್ನಾಗಿ ತೊಳೆಯುವದರಿಂದ ಕಾಡಿಗೆಯನ್ನು ಹಾರಿಸಿ ಬಿಡುವಂತೆ ಓಡಿಸಿಬಿಟ್ಟನು.

[ಮೂಲದಲ್ಲಿ ಪವನೇನೇವ (ಪವನೇನ+ಇವ) ಎಂದಿದೆ. ಪವನೇನ=ಗಾಳಿಯಿಂದ ಎಂದರ್ಥಮಾಡಬೇಕು. ಗಾಳಿಯಿಂದ ಕಾಡಿಗೆಯನ್ನು ಹೋಗಲಾಡಿಸುವದು ಅಸಂಭವ. ಆದಕಾರಣ ಪ್ಲವನೇನ ಎಂದು ತಿದ್ದಿಕೊಂಡು ಮೇಲಣ ಅರ್ಥವನ್ನು ಹೇಳಿದೆ.]

ತಮಸ್ಯುಪರತೇ ಕಾಂತಂ ತೇಜಃಪುಂಜಂ ದದರ್ಶ ಸಃ ।
ಶಾರ್ವರೇ ತಿಮಿರೇ ಶಾಂತೇ ಪ್ರಾತಃಸಂಧ್ಯಾಮಿವಾಂಬುಜಂ ॥ ೪೫ ॥

ತಲ್ಲುಲಾವ ಸ್ಥಲಾಬ್ಜಾನಾಂ ವನಂ ಬಾಲ ಇವ ದ್ವಿಪಃ ।
ಅಪಿಬಚ್ಛಾಪ್ಯಸೃಕ್ಪೂರಂ ವೇತಾಲ ಇವ ವೇಗತಃ ॥ ೪೬ ॥

ತೇಜಸ್ಯುಪರತೇ ತಸ್ಯ ಘೂರ್ಣಮಾನಂ ಮನೋ ಮುನೇಃ ।
ನಿಶಾಬ್ಜವದಗಾನ್ನಿದ್ರಾಂ ಲೋಲಂ ಕ್ಷೀವವದೇವ ವಾ ॥ ೪೭ ॥

ಮೇಘಮಾಲಾಮಿವ ಮರುದ್ವ್ಯಾಲೋ ನೀಲಾಬ್ಜಿನೀಮಿವ ।
ಯಾಮಿನೀಮಿವ ತೀಕ್ಷ್ಣಾಂಶುಸ್ತಾಮಪ್ಯಾಶು ಲುಲಾವ ಸಃ ॥ ೪೮ ॥

---

೪೫. ಹೀಗೆ ಆ ಅಂಧಕಾರವನ್ನು ಹೋಗಲಾಡಿಸಿಕೊಂಡ ಬಳಿಕ, ಆ ಉದ್ದಾಲಕನು ರಾತ್ರಿಯ ಕತ್ತಲೆಯು ತೀರಿಹೋದ ಮೇಲೆ ಕಮಲವು ಉದಯಿಸುತ್ತಿರುವ ಬಾಲಸೂರ್ಯನಿಂದ ವಿರಾಜಮಾನವಾದ ಪ್ರಾತಸ್ಸಂಧ್ಯೆಯನ್ನು ಕಾಣುವಂತೆ ತನ್ನ ಹೃದಯಾಂತರಾಳದಲ್ಲಿ ಅತ್ಯಂತ ಸುಂದರವಾದ ಪ್ರಶಾಂತ ತೇಜೋರಾಶಿಯನ್ನು ಕಂಡನು.

೪೬. ಅನಂತರ ಒಂದು ಆನೆಯ ಮರಿಯು ನೆಲದಾವರೆಗಳು ಬೆಳೆದಿರುವ ಉದ್ಯಾನವನ್ನು ನಿರ್ಲಕ್ಷ್ಯವಾಗಿ ಕಿತ್ತೊಗೆಯುವಂತೆ ಆ ಮುನಿಯು ಆ ತೇಜೋರಾಶಿಯನ್ನೂ ಕಿತ್ತುಹಾಕಿಬಿಟ್ಟನು. ಮತ್ತು ಬೇತಾಳನು ರಕ್ತಪ್ರವಾಹವನ್ನು ಪಾನಮಾಡುವಂತೆ ಅವನು ಆ ತೇಜೋರಾಶಿಯನ್ನು ಅಧಿಷ್ಠಾನ ತತ್ತ್ವದರ್ಶನದಿಂದ ಮಿಥ್ಯೆಯೆಂದು ನಿಶ್ಚಯಿಸಿ ಒಂದು ಕ್ಷಣದೊಳಗಾಗಿ ಲಯಗೊಳಿಸಿದನು.

೪೭. ಆ ಬಳಿಕ, ಆ ತೇಜಸ್ಸೂ ಶಾಂತವಾಗಲಾಗಿ ರಜೋಗುಣದ ಆವಿರ್ಭಾವದಿಂದ ಸಮಾಧಾನವನ್ನು ಕಳೆದುಕೊಂಡು ಪುನಃ ಅತ್ಯಂತ ಲೋಲವಾಗಿ ಚಪಲತೆಯಿಂದ ಹಾರಾಡುತ್ತಿದ್ದ ಆ ಮುನಿಯ ಮನಸ್ಸು ವಿಷಯಗಳು ಸಿಗದ ಕಾರಣ ವಿಲಯವನ್ನು ಹೊಂದಿ ರಾತ್ರಿ ಕಾಲದ ಕಮಲದಂತೆಯೂ ಮದ್ಯಪಾನದಿಂದ ಉನ್ಮತ್ತನಾದ ನರನಂತೆಯೂ ನಿದ್ರಾಪರವಶವಾಯಿತು.

೪೮. ತರುವಾಯ ಆ ಉದ್ದಾಲಕನು ಆ ನಿದ್ರೆಯನ್ನೂ ಕೂಡ ಮೇಘಗಳ

ನಿದ್ರಾ ವ್ಯಪಗಮೇ ತಸ್ಯ ಭಾವಯಾಮಾಸ ತನ್ಮನಃ |
ವ್ಯೋಮಶ್ಯಾಮಲದೃಗ್ಜಂತುರ್ನಭಸೀವ ಶಿಖಂಡಕಾನ್ || ೪೯ ||

ಪಯೋದ ಇವ ತಾಪಿಚ್ಛಂ ನೀಹಾರಮಿವ ಮಾರುತಃ |
ದೀಪಸ್ತಮ ಇವಾಚ್ಛಾತ್ಮ ತದಪ್ಯಾಶು ಮಮಾರ್ಜ ಸಃ || ೫೦ ||

ವ್ಯೋಮಸಂವಿದಿ ನಷ್ಟಾಯಾಂ ಮೂಢಂ ತಸ್ಯಾಭವನ್ಮನಃ |
ನಿದ್ರಾಯಾಂ ತು ವಿಲೀನಾಯಾಂ ಮೈರೇಯಮದವಾನಿವ || ೫೧ ||

ಸಾಲನ್ನು ಬಿರುಗಾಳಿಯಂತೆಯೂ ಕನ್ನೈದಿಲೆಯ ಬಳ್ಳಿಯನ್ನು ದುಷ್ಟ ವನಗಜ ದಂತೆಯೂ, ರಾತ್ರಿಯನ್ನು ಸೂರ್ಯನಂತೆಯೂ ಬಹು ಬೇಗ ಕೊನೆಗಾಣಿಸಿದನು.

[ವಿವೇಕ ಪ್ರಬೋಧದಿಂದ ಕಳೆದುಕೊಂಡು ಎಚ್ಚೆತ್ತನು.]

೪೯. ಹೀಗೆ ಆ ನಿದ್ರೆಯನ್ನೂ ಕಳೆದುಕೊಂಡ ಬಳಿಕ, ಸೂರ್ಯನ ತೇಜಸ್ಸಿಗೆ ಅಭಿಮುಖವಾಗಿ ನಿಂತು, ಆಕಾಶವನ್ನು ನೋಡಿದ ಕಾಲದಲ್ಲಿ ಸೂರ್ಯಪ್ರಭೆಯಿಂದ ಕತ್ತಲೆಕವಿದು, ಮಸುಕಾದ ದೃಷ್ಟಿಯುಳ್ಳ ಪ್ರಾಣಿಯು ಆಕಾಶದಲ್ಲಿ ನವಿಲುಗರಿ ಮುಂತಾದ ವಿವಿಧಾಕಾರರೇಖಾವಿನ್ಯಾಸಗಳನ್ನು ಕಾಣುವ ರೀತಿಯಲ್ಲಿ, ಅವನ ಮನಸ್ಸು ತನ್ನ ವಿವಿಧ ವಾಸನಾ ಪರಿಕಲ್ಪಿತ ನಾನಾರೂಪಗಳುಳ್ಳ ಆಕಾಶವನ್ನು ಭಾವನೆ ಮಾಡಿತು.

೫೦. ಅನಂತರ, ಮೇಘವು ಮಳೆಗರೆದು ಹೊಂಗೆಯ ಹೂವನ್ನು (ತಮಾಲ ಪುಷ್ಪ) ಕೆಡಿಸುವಂತೆಯೂ, ವಾಯುವು ಹಿಮದ ನೀರನ್ನು ಹೀರುವಂತೆಯೂ, ದೀಪವು ಕತ್ತಲೆಯನ್ನು ಪರಿಹರಿಸುವಂತೆಯೂ, ಆ ಉದ್ದಾಲಕ ಮುನಿಯು ಸ್ವಚ್ಛ ಸ್ವಭಾವವುಳ್ಳ ಆ ಆಕಾಶವನ್ನೂ ಅಳಿಸಿಹಾಕಿದನು.

೫೧. ಹೀಗೆ ಅವನ ಮನಸ್ಸಿನಲ್ಲಿ ಆಕಾಶದ ಸ್ಫುರಣವೂ ನಷ್ಟವಾದ ಬಳಿಕ, ಮದ್ಯಪಾನದಿಂದ ಮತ್ತನಾದ ಮನುಜನು ಬಹಳಹೊತ್ತು ನಿದ್ರೆ ಮಾಡುತ್ತಲಿದ್ದು, ಎಚ್ಚೆತ್ತು ನಿದ್ರೆಯನ್ನು ಕಳೆದುಕೊಂಡಮೇಲೆಯೂ ಸ್ವಲ್ಪಹೊತ್ತು ಮೂಢನಾಗಿರುವಂತೆಯೇ, ಅವನ ಮನಸ್ಸೂ ರಾಗಾಭಿಮಾನಾದಿ ಕಲ್ಮಷಗಳಿಂದ ತುಂಬಿಕೊಂಡು ಬಹಳ ಮೂಢವಾಗಿತ್ತು.

ಮೋಹಮಪ್ಯೇಷ ಮನಸಸ್ತಂ ಮಮಾರ್ಜ ಮಹಾಯಶಃ ।
ಯಾಮಿನೀಜನಿತಂ ಜಾಡ್ಯಂ ಭುವನಾದಿಕ ಭಾಸ್ಕರಃ ॥ ೫೨ ॥

ತತಸ್ತೇಜಸ್ತಮೋನಿದ್ರಾಮೋಹಾದಿಪರಿವರ್ಜಿತಂ ।
ಕಾಮಪ್ಯವಸ್ಥಾಮಾಸಾದ್ಯ ವಿಶಶ್ರಾಮ ಮನಃ ಕ್ಷಣಂ ॥ ೫೩ ॥

ವಿಶ್ರಮ್ಯಾಶು ಪಪಾತಾಂಗಸಂವಿದಂ ವಿಶ್ವರೂಪಿಣೀಂ ।
ಸೇತುರುದ್ಧಂ ಸರೋವಾರಿ ಪ್ರತೀಪಂ ಸ್ವಮಿವಾಸ್ಪದಂ ॥ ೫೪ ॥

---

೫೨. ಲೋಕದಲ್ಲಿ ಸಕಲ ಪ್ರಾಣಿಗಳಿಗೂ ರಾತ್ರಿಯಲ್ಲಿ ಉಂಟಾಗಿದ್ದ ಜಡತ್ವವನ್ನು ಸೂರ್ಯನು ಉದಯಿಸಿದಕೂಡಲೇ ಪರಿಹರಿಸಿ ನವಚೈತನ್ಯವನ್ನುಂಟು ಮಾಡುವಂತೆ, ಆ ಮಹಾಶಯ (ಧೀರ ಚಿತ್ತ) ನಾದ ಉದ್ದಾಲಕನು ತನ್ನ ಮನಸ್ಸಿನಲ್ಲಿ ಉಂಟಾಗಿದ್ದ ಆ ಮೋಹವನ್ನೂ ಸ್ವಲ್ಪ ಹೊತ್ತಿನಲ್ಲಿಯೇ ಕಳೆದುಕೊಂಡು ಸ್ವಸ್ಥವಾಗಿತ್ತು.

೫೩. ಹೀಗೆ ಪುನಃ ಪುನಃ ಉದಯಿಸಿದ ತೇಜಸ್ಸು, ತಮಸ್ಸು (ಕತ್ತಲೆ), ನಿದ್ರೆ, ಮೋಹ ಮುಂತಾದವುಗಳನ್ನು ಪರಿಹರಿಸಿಕೊಂಡ ಬಳಿಕ ಸ್ವಸ್ಥವಾಗಿದ್ದ ಆ ಉದ್ದಾಲಕನ ಮನಸ್ಸು ಒಂದು ಕ್ಷಣಕಾಲ ಅನಿರ್ವಚನೀಯವಾದ ಉತ್ತಮೋತ್ತಮವಾದ ನಿರ್ವಿಕಲ್ಪ ಸಮಾಧಿಸ್ಥಿತಿಯಲ್ಲಿದ್ದುಕೊಂಡು ವಿಶ್ರಮಿಸಿಕೊಂಡಿತ್ತು.

೫೪. ಅಯ್ಯಾ ರಾಮಭದ್ರ, ಆಮೇಲೆ, ಒಂದು ಸರೋವರ (ಅಥವಾ ಕೆರೆಯ) ದ ನೀರು ಸಣ್ಣ ಕಾಲುವೆಯ ಮೂಲಕ ಹೊರಕ್ಕೆ ಹರಿದು ಹೋಗಿ ಗದ್ದೆಯನ್ನು ಹೊಕ್ಕು ಗದ್ದೆಯನ್ನು ತುಂಬಿದ ಮೇಲೆ ಮುಂದಕ್ಕೆ ಕಟ್ಟೆಯನ್ನು ಕಟ್ಟಿ ತಡೆದರೆ ಕೂಡಲೆ ಆ ನೀರು ಮುಂದೆ ಪ್ರವಹಿಸಲು ಅಡ್ಡಿಯಾಗಿ ಹಿಂದಕ್ಕೇ ತಿರುಗಿಕೊಂಡು ಹರಿದು, ಪುನಃ ತನಗೆ ಆಧಾರವಾದ ಸರೋವರವನ್ನೋ ಅಥವಾ ಕೆರೆಯನ್ನೋ ಹೊಂದುವಂತೆ ಆ ಉದ್ದಾಲಕನ ಮನಸ್ಸೂ ಆ ನಿರ್ವಿಕಲ್ಪ ಸಮಾಧಿಯಲ್ಲಿ ಸ್ವಲ್ಪ ಕಾಲ ವಿಶ್ರಮಿಸಿಕೊಂಡಿದ್ದು ಪುನಃ ಹಠಾತ್ತಾಗಿ ವಿಕ್ಷೇಪ ಸಂಸ್ಕಾರ ಪ್ರಾಬಲ್ಯದಿಂದ ಆ ಸಮಾಧಿಯಲ್ಲೇ ಸ್ಥಿರವಾಗಿ ನಿಲ್ಲಲಾರದೆ ಬಾಹ್ಯ ಪ್ರಪಂಚಕ್ಕೆ ಸಮಾನಾಕಾರವುಳ್ಳ ವೃತ್ತಿ ಜ್ಞಾನವನ್ನು ಹೊಂದಿತು.

ಚಿರಾನುಸಂಧಾನವಶಾತ್ಸ್ವದನಾಚ್ಚ ಸ್ವಸಂವಿದಃ |
ತತಶ್ಚಿನ್ಮಯತಾಪೂಗಾದ್ಧೇಮ ನೂಪುರತಾಮಿವ || ೫೫ ||

ಚಿತ್ತತ್ವಮಥ ಸಂತ್ಯಜ್ಯ ಚಿತ್ತಂ ಚಿತ್ತವತಾಂ ಗತಂ |
ಅನ್ಯರೇವ ಬಭೂವಾಶು ಪಂಕಃ ಕುಂಭಸ್ಥಿತೋ ಯಥಾ || ೫೬ ||

ಚೇತ್ಯಂ ಸಂತ್ಯಜ್ಯ ಚಿಚ್ಛುದ್ಧಾ ಚಿತ್ಸಾವಯವ್ಯಮಥಾಯಯೌ |
ತ್ಯಕ್ತವೀಚ್ಯಾದಿಭೇದೋಽಬ್ಧಿರ್ವಾಃಸಾಮಾನ್ಯಮಿವೈಕಧೀಃ || ೫೭ ||

---

೫೫. ಅನಂತರ, ಚಿನ್ನವು, ಕಾಲ್ಗಡಗ (ನೂಪುರ) ಮುಂತಾದ ಆಭರಣಗಳ ಆಕಾರವನ್ನು ಪಡೆಯುವಂತೆ ಹಿಂದೆ ಮಾಡಿದ ಧ್ಯಾನಾದಿಗಳಿಂದ ಚಿರಕಾಲ ಆತ್ಮಾನುಸಂಧಾನ ಮಾಡಿದ ಕಾರಣವೂ ಮತ್ತು ಸಮಾಧಿಯಲ್ಲಿದ್ದಾಗ ಆನಂದಾನುಭವ ಮಾಡಿದ ಕಾರಣವೂ ಪೂರ್ವ ಸಂಸ್ಕಾರವಶದಿಂದ ಅವನ ಮನಸ್ಸು ಪುನಃ ಬಾಹ್ಯ ವೃತ್ತಿಜ್ಞಾನವನ್ನು ಬಿಟ್ಟು ಹಿಂದಿರುಗಿ ಸ್ವಾತ್ಮಜ್ಞಾನ ರೂಪಕ್ಕೆ ಬರುತ್ತಿರುವಾಗ, ಮಧ್ಯದಲ್ಲಿ ಚಿತ್ಪ್ರಚುರವಾದ ಸವಿಕಲ್ಪ ಸಮಾಧಿ ರೂಪವನ್ನು ಪಡೆಯಿತು.

೫೬. ಆ ಬಳಿಕ ಒಂದು ಘಟದೊಳಗಿರುವ ಬುರುದೆಯಾದ ಮಣ್ಣಿನ ಪಂಕವು (ಕೆಸರು) ಅದರ ಜಲಾಂಶವು ಒಣಗಿಹೋದಮೇಲೆ ಆ ಘಟಕ್ಕೆ ಸುತ್ತಲೂ ಬಳಿದುಕೊಂಡು ಘಟ ಭಾವವನ್ನೇ ಹೊಂದುವಂತೆ ಹೀಗೆ ಸವಿಕಲ್ಪಕ ಸಮಾಧಿಯಲ್ಲಿದ್ದ ಆ ಉದ್ದಾಲಕನ ಮನಸ್ಸು ಕ್ರಮೇಣ ಸೌದೆಯೆಲ್ಲಾ ಮುಗಿದ ಮೇಲೆ ಬೆಂಕಿಯು ತಾನಾಗಿ ಶಾಂತವಾಗುವಂತೆ ಕ್ಷೀಣವಾಗುತ್ತಾ ಬಂದು ತನ್ನ ಚಿತ್ತರೂಪವನ್ನು ಬಿಟ್ಟು ಬಿಟ್ಟು ಕ್ಷೀರೋದಕಗಳಂತೆ ಸ್ವಾತ್ಮಚೈತನ್ಯ ತತ್ತ್ವದೊಡನೆ ಬೆರೆತುಕೊಂಡು ಆತ್ಮಚೈತನ್ಯವೇ ಆಗಿರುತ್ತಾ ತನ್ನ ಪೂರ್ವಾವಸ್ಥೆಗಿಂತಲೂ ಬೇರೆ ಹೊಸದೇ ಆಗಿ ಬಿಟ್ಟಿತು.

೫೭. ಆ ಮೇಲೆ ಸಮುದ್ರವು ಅಲೆಗಳು, ನೊರೆ ಮುಂತಾದ ಭೇದಭಾವಗಳನ್ನು ತ್ಯಜಿಸಿ ಜಲ ಸಾಮಾನ್ಯರೂಪವನ್ನು ಪಡೆಯುವಂತೆ ಆ ಉದ್ದಾಲಕನ ಚಿತ್ತವು ತನ್ನ ಚಿತ್ತ ರೂಪವನ್ನು ಕಳೆದುಕೊಂಡ ಅನಂತರ ಅದರ ಪ್ರತಿಬಿಂಬವಾದ ಚಿತ್ತು ತನಗೆ ವಿಷಯವಾದ ವೃತ್ತ್ಯಾಕಾರವನ್ನು ಬಿಟ್ಟು ಶುದ್ಧವಾಗಿ ಏಕರಸವಾದ ಸ್ವೋಪಾಧಿ ಬುದ್ಧಿಯುಳ್ಳದ್ದಾದ ಕಾರಣ ಸರ್ವ ವೃತ್ತಿ ಸಾಧಾರಣವಾದ ಸಾಕ್ಷಿಬಿಂಬ ಚೈತನ್ಯದೊಡನೆ ಸಾಮಾನ್ಯರೂಪವನ್ನು ಅನುಭವಿಸಿತು.

ತ್ಯಕ್ತಭೂತೌಘಮನನಂ ತತೋ ವಿಶ್ವಂಭರಂ ಮಹತ್ |
ಚಿದಾಕಾಶಂ ತತಃ ಶುದ್ಧಂ ಸೋಽಭವದ್ಬೋಧಮಾಗತಃ || ೫೮ ||

ತತ್ರ ಪ್ರಾಪದಥಾನಂದಂ ದೃಶ್ಯದರ್ಶನವರ್ಜಿತಂ |
ಅನಂತಮುತ್ತಮಾಖಾದಂ ರಸಾಯನಮಿವಾರ್ಣವಂ || ೫೯ ||

ಶರೀರಾತ್ಸಮವೇತೋಽಸೌ ಕಾಮಪ್ಯವನಿಮಾಗತಃ |
ಸತ್ತಾಸಾಮಾನ್ಯರೂಪಾತ್ಮಾ ಬಭೂವಾನಂದಸಾಗರಃ || ೬೦ ||

---

೫೮. ಇದಾದ ನಂತರ ನಿರ್ವಿಕಲ್ಪಕ ಸಮಾಧಿಯಲ್ಲಿ ಸ್ಥಿರವಾಗಿ (ಪರಿನಿಷ್ಠಿತನಾಗಿ) ಇದ್ದ ಆ ಉದ್ದಾಲಕನು ಆ ಸಮಾಧಿಯ ಪರಿಪಾಕದಿಂದ ತತ್ವಸಾಕ್ಷಾತ್ಕಾರ (ಪ್ರಬೋಧ) ವನ್ನು ಪಡೆದವನಾಗಿ ‘ಸರ್ವ ಜಗತ್ತಿಗೂ ಅಧಿಷ್ಠಾನವಾದ ಭೂತ ಸಮುದಾಯಾತ್ಮಕ ಸಕಲ ದ್ವೈತ ಪ್ರತಿಭಾಸರಹಿತವಾದ ನಿತ್ಯಶುದ್ಧ (ನಿರವದ್ಯ) ವಾದ ಕಾರ್ಯಾಕಾಶಕ್ಕಿಂತಲೂ ಮಹತ್ತರವಾದ ಚಿದಾಕಾಶವೇ ಆಗಿಬಿಟ್ಟನು.

[ಬ್ರಹ್ಮವಿದ್ ಬ್ರಹ್ಮೈವ ಭವತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ ಬ್ರಹ್ಮವಿದಾಪ್ನೋತಿಪರಂ ಇತ್ಯಾದ್ಯನೇಕ ಶ್ರುತಿಗಳು ಆತ್ಮಜ್ಞಾನದಿಂದಲೇ ಸಂಗಡಲೇ ಬ್ರಹ್ಮವೇ ಆಗಿಬಿಡುವನು ಎಂಬರ್ಥವನ್ನು ಸಾರುವವು.]

೫೯. ಆ ಬಳಿಕ ಆ ಉದ್ದಾಲಕ ಮುನಿಯು ಸ್ವಾತ್ಮರೂಪದಲ್ಲಿಯೇ ದೃಶ್ಯ ದರ್ಶನಾದಿ ಸಕಲ ಭೇದಶೂನ್ಯವಾಗಿಯೂ ಅನಂತವಾಗಿಯೂ ಬ್ರಹ್ಮಾದಿ ದೇವತೆಗಳಿಗೂ ದುರ್ಲಭವಾಗಿರುವ ಕಾರಣ ಅವರಿಂದಲೂ ಆಸ್ವಾದಿಸಲ್ಪಡಲು ಅರ್ಹವಾದಷ್ಟು ಅತಿ ಮಧುರವಾಗಿಯೂ ಸಕಲ ವಿಧ ವಿಷಯ ಸುಖಲೇಶಗಳಿಗೂ ಆಧಾರಭೂತವಾಗಿಯೂ ಮಹಾ ಸಮುದ್ರದಂತೆ ಅಪಾರವಾಗಿಯೂ ಇರುವ ನಿರತಿಶಯಾನಂದವನ್ನು ಅನುಭವಿಸಿದನು.

೬೦. ಆ ಮೇಲೆ ಉದ್ದಾಲಕನು ಶರೀರವನ್ನು ಅವಮಾನಗೊಳಿಸಿ ಅದನ್ನು ಬಿಟ್ಟು ಹೊರಟುಹೋದವನಂತೆ ಶೋಧಿಸಲ್ಪಟ್ಟವನಾಗಿ ಯಾವುದೋ ಒಂದು ಭೂಮಿಕೆಯನ್ನು ಸೇರಿದವನಾಗಿ ಕೇವಲ ಸತ್ತಾ ಸಾಮಾನ್ಯರೂಪಾತ್ಮನಾಗಿ ಆನಂದ ಸಮುದ್ರವೇ ಆಗಿಬಿಟ್ಟನು.

ದ್ವಿಜಚೇತನಹಂಸೋಽಸಾವಾನಂದಸರಸಿ ಸ್ಥಿತಃ |
ಅತಿಸ್ವಚ್ಛಶರದಚ್ಛೇ ಖೇ ಕಲಾಪೂರ್ಣ ಇವೋಡುಪಃ || ೬೧ ||

ಬಭೂವಾವಾತದೀಪಾಭೋ ಲಿಖಿತಾರ್ಪಿತೋಪಮಃ |
ವೀತವೀಚ್ಯಂಬುಧಿಪ್ರಖ್ಯೋ ವೃಷ್ಟಮೂಕಾಂಬುದಸ್ಥಿತಿಃ || ೬೨ ||

ಅಥೈತಸ್ಮಿನ್ಮಹಾಲೋಕೇ ತಿಷ್ಠನ್ನುದ್ದಾಲಕಶ್ಚಿರಂ |
ಅಪಶ್ಯದ್ವ್ಯೋಮಗಾನ್ಸಿದ್ಧಾನಮರಾನಪಿ ಭೂರಿಶಃ || ೬೩ ||

ಆಗತಾನಿ ವಿಚಿತ್ರಾಣಿ ಸಿದ್ಧಿಜಾಲಾನಿ ಚಾಭಿತಃ |
ಶಕ್ರಾರ್ಕಪದದಾತ್ರೂಣಿ ನೀರಂಧ್ರಾಣ್ಯಪ್ಸರೋಗಣೈಃ || ೬೪ ||

---

೬೧. ಆಗ ಈ ಬ್ರಾಹ್ಮಣ ಚೈತ್ಯವೆಂಬ ಹಂಸಪಕ್ಷಿಯು ಸ್ವಾತ್ಮಾನಂದವೆಂಬ ಅಮೃತ ಸರೋವರದಲ್ಲಿ (ಮಾನಸ ಸರೋವರದಲ್ಲಿ) ಇದ್ದುಕೊಂಡು ಶರತ್ಕಾಲದ ನಿರ್ಮಲಾಕಾಶದಲ್ಲಿ ಸಕಲ ಕಲಾಪೂರ್ಣನಾದ ಚಂದ್ರನು ಪ್ರಕಾಶಮಾನನಾಗಿರುವಂತೆ ಪ್ರಶಾಂತನಾಗಿ ಸ್ವಯಂ ಪ್ರಕಾಶಮಾನನಾಗಿದ್ದನು.

೬೨. ಆಗ ಆ ಉದ್ದಾಲಕನು ಗಾಳಿಯು ಹೆಚ್ಚಾಗಿ ಬೀಸದ ಸ್ಥಳದಲ್ಲಿರುವ ದೀಪದಂತೆ ಅಚಲನಾಗಿಯೂ, ಪ್ರಕಾಶಮಾನನಾಗಿಯೂ, ಚಿತ್ರದಲ್ಲಿ ಬರೆಯಲ್ಪಟ್ಟಿರುವವನಂತೆಯೂ, ಅಲೆಗಳ ಉಬ್ಬರವಿಲ್ಲದೆ ಪ್ರಶಾಂತವಾಗಿರುವ ಅಪಾರ ಸಮುದ್ರದಂತೆಯೂ, ತನ್ನೊಳಗಿರುವ ಮಳೆಯನ್ನು ನಿಶ್ಶೇಷವಾಗಿ ಸುರಿದುಬಿಟ್ಟ ಬಳಿಕ, ಗರ್ಜಿಸದೆ ನಿರ್ಮಲವಾಗಿರುವ ಮೇಘದಂತೆ ಮೌನವ್ರತಧಾರಿಯಾಗಿಯೂ ಇದ್ದನು.

೬೩. ಹೀಗೆ ಬಹುದೀರ್ಘಕಾಲ ಈ ಮಹಾಪ್ರಕಾಶಮಾನವಾದ ಸ್ವಾತ್ಮಸ್ವರೂಪದಲ್ಲಿ ಸ್ಥಿರವಾಗಿದ್ದ ಉದ್ದಾಲಕನು ಅನಂತರ ಗಗನಮಂಡಲದಲ್ಲಿ ಸಂಚರಿಸುತ್ತಲಿದ್ದ ಸಿದ್ಧರನ್ನೂ ಇನ್ನೂ ಅನಾಕಾನೇಕ ಇಂದ್ರಾದಿ ದೇವತೆಗಳನ್ನೂ ಸಹ ಕಂಡನು.

೬೪. ಕೂಡಲೇ ಈ ಉದ್ದಾಲಕನಿಗೆ ಅಪ್ಸರಸ್ ಸ್ತ್ರೀಯರ ಸಮೂಹಗಳಿಂದ ನಿಬಿಡಗಳಾಗಿರುವ ಇಂದ್ರ ಪದವಿ, ಸೂರ್ಯಮಂಡಲದ ಪದವಿ ಮುಂತಾದ ಅನೇಕಾನೇಕ ದಿವ್ಯೋನ್ನತ ಸ್ಥಾನಗಳನ್ನು ಕೊಡತಕ್ಕವುಗಳಾದ ಅತಿ ವಿಚಿತ್ರ ಸಿದ್ಧಿಗಳ ಸಮೂಹಗಳು ಎಲ್ಲ ಕಡೆಗಳಿಂದಲೂ ಪ್ರಾಪ್ತವಾದವು.

ತಾನಿ ನಾದರಯಾಂಚಕ್ರೇ ಸಿದ್ಧಿವೃಂದಾನಿ ಸ ದ್ವಿಜಃ |
ಗಂಭೀರಮತಿಮುಕ್ಷಬ್ಧೋ ವಿಲಾಸಾನಿವ ಶೈಶವಾ್ ॥ ೬೫ ॥

ಸಿದ್ಧಿಸಾರ್ಥಮನಾದೃತ್ಯ ತಸ್ಮಿನ್ನಾನಂದಮಂದಿರೇ |
ಅತಿಷ್ಠದಥ ಷಣ್ಮಾಸಾನ್ವಿಕ್ತಟೇಽರ್ಕ ಇವೋತ್ತರೇ ॥ ೬೬ ॥

ಜೀವನ್ಮುಕ್ತಪದಂ ತತ್ತದ್ಯಾವತ್ಸಂಪ್ರಾಪ್ತವಾ್‌ದ್ವಿಜಃ |
ತತ್ರ ಸಿದ್ಧಾಃ ಸುರಾಃ ಸಾಧ್ಯಾಃ ಸ್ಥಿತಾ ಬ್ರಹ್ಮಹರಾದಯಃ ॥ ೬೭ ॥

---

೬೫. ಅತಿ ಗಂಭೀರ ಹೃದಯನಾಗಿ ಬಾಲಲೀಲೆಗಳ ಅಸಾರತೆಯನ್ನು ತಿಳಿದವನಾಗಿರುವ ಒಬ್ಬ ಯುವಕನು ಬಾಲಲೀಲಾ ವಿನೋದಗಳಿಂದ ಬೆರಗಾಗದೆ ಅವುಗಳಲ್ಲಿ ಅನಾದರವನ್ನು ತೋರುವಂತೆ ಅತ್ಯುದಾರ ಹೃದಯನೂ ಪ್ರಾಸಂಚಿಕ ಲೀಲಾ ವಿಲಾಸಗಳ ಮಿಥ್ಯಾತ್ವವನ್ನು ಚೆನ್ನಾಗಿ ಮನಗಂಡಿರುವವನೂ ಆಗಿದ್ದ ಆ ಬ್ರಾಹ್ಮಣನು ತನಗೆ ಸಂಪ್ರಾಪ್ತವಾದ ಆ ಸಿದ್ಧಿ ಜಾಲಗಳನ್ನು ಆದರಿಸದೆ ಉಪೇಕ್ಷೆ ಮಾಡಿದನು.

೬೬. ಹೀಗೆ ಅಂತಹ ಸಿದ್ಧಿ ಸಮೂಹಗಳಿಂದಲೂ ಮನಸ್ಸಿನಲ್ಲಿ ವಿಕಾರಗೊಳ್ಳದೆ ಉಪೇಕ್ಷೆಯಿಂದ ತಿರಸ್ಕರಿಸಿ ಬಳಿಕ ಸೂರ್ಯನು ಆರು ತಿಂಗಳ ಕಾಲ ಉತ್ತರಾಯಣದಲ್ಲಿ ಉತ್ತರ ದಿಗ್ಭಾಗದಲ್ಲಿ ವಿರಾಜಿಸುವಂತೆ ಉದ್ದಾಲಕನೂ ಆರು ತಿಂಗಳ ಕಾಲ ಆನಂದಮಯವಾದ ಸ್ವಾತ್ಮಸ್ವರೂಪದಲ್ಲಿದ್ದುಕೊಂಡು ಸ್ವಯಂ ಪ್ರಕಾಶಮಾನನಾಗಿದ್ದನು.

೬೭. (ಹಿಂದೆ ಉತ್ಪತ್ತಿ ಪ್ರಕರಣದಲ್ಲಿ ವರ್ಣಿತವಾಗಿರುವ) ಉತ್ತರೋತ್ತರೋತ್ಕೃಷ್ಟವಾದ ಸಪ್ತಭೂಮಿಕೆಗಳನ್ನೂ ಅತಿಕ್ರಮಿಸಿ ಆ ಉದ್ದಾಲಕನು (ಬ್ರಾಹ್ಮಣನು) ಯಾವಾಗ ಜೀವನ್ಮುಕ್ತ ಸ್ಥಿತಿಯನ್ನು ಪಡೆದನೋ ಅಲ್ಲಿಯೇ ಆಗಲೇ ಸಿದ್ಧರೂ ಇಂದ್ರಾದಿ ದೇವತೆಗಳೂ ಸಾಧ್ಯರೂ (ಗಣದೇವತೆಗಳೂ) ಹರಿಹರ ಬ್ರಹ್ಮಾದಿಗಳೂ ಇತ್ಯಾದಿ ದಿವ್ಯಪುರುಷರೆಲ್ಲರೂ ಇದ್ದರು.

17

ಆನಂದೇಽಪರಿಣಾಮಿತ್ವಾದನಾನಂದಪದಂ ಗತಃ |
ನಾನಂದೇ ನ ನಿರಾನಂದೇ ತತಸ್ತತ್ಸಂವಿದಾಬಭೌ || ೬೮ ||

ಕ್ಷಣಂ ವರ್ಷಸಹಸ್ರಂ ವಾ ತತ್ರ ಲಬ್ಧ್ವಾ ಸ್ಥಿತಿಂ ಮನಃ |
ರತಿಮೇತಿ ನ ಭೋಗೌಘೈ ದೃಷ್ಟಸ್ವರ್ಗ ಇವಾವನೌ || ೬೯ ||

---

೬೮. ಮತ್ತು ಉದ್ದಾಲಕನು ಆ ಆನಂದದಲ್ಲಿ ಆನಂದರಸಾಸ್ವಾದ ಲಕ್ಷಣ ಮನಃ ಪರಿಣಾಮವಿಲ್ಲದುದರಿಂದ ಅನಾನಂದ ಪದವನ್ನು ಹೊಂದಿದನು. (ಯಾವ ಪದಕ್ಕೆ ಆನಂದವು ಇಲ್ಲವೋ, (ನ ವಿದ್ಯತೇ ಆನಂದಃ ಯಸ್ಯತತ್ ಅನಾನಂದಂ ಪದಂ ಎಂಬುದು ವ್ಯುತ್ಪತ್ತಿ.) (ನಾನು ಆನಂದವನ್ನು ಪಡೆದು ಆನಂದಿಯಾದೆನು ಎಂಬ ಬುದ್ಧಿಯು ಅವನಿಗೆ ಉಂಟಾಗಲಿಲ್ಲ ಎಂದರ್ಥ.) ಈ ಕಾರಣದಿಂದ ಅವನ ಆತ್ಮಚೈತನ್ಯವು ವಿಷಯ ಸುಖಾನುಭವ ಮಾಡುವವರ ಹಾಗೆ ಕ್ಷುದ್ರಾನಂದ ದಲ್ಲಿಯೂ ಪ್ರಕಾಶಿಸಲಿಲ್ಲ. ಮತ್ತು ನಿರಾನಂದ (ದುಃಖ) ದಲ್ಲಿಯೂ ಪ್ರಕಾಶಿಸಲಿಲ್ಲ. ಆದರೆ ಸ್ವಪ್ರಕಾಶವೂ ಕೇವಲಾನಂದರಸಪರಿಪೂರ್ಣವೂ ಆಗಿದ್ದಿತು.

[ಆಸ್ವಾದಕ, ಆಸ್ವಾದ್ಯ, ಆಸ್ವಾದ ಎಂಬ ತ್ರಿಪುಟೀ ರೂಪವಾದ ಭೇದ ಜ್ಞಾನವು ಅದ್ವಿತೀಯಾತ್ಮತತ್ವಜ್ಞಾನದಿಂದ ಮರ್ದನವಾಗಿ ಬಿಟ್ಟಿತ್ತು. ದ್ವೈತ ದೃಷ್ಟಿಯಿರುವಾಗಲೇ "ಇದು ಆಸ್ವಾದ್ಯ. ನಾನು ಆಸ್ವಾದಮಾಡುವವನು. ನಾನು ಈ ರಸವನ್ನು ಆಸ್ವಾದಮಾಡಿ ಸುಖಿಸುವೆನು" ಎಂಬ ವ್ಯವಹಾರವು ಉಂಟಾಗು ವುದು. ಆಗಲೇ ರಸಾಸ್ವಾದ ಮಾಡತಕ್ಕವನು ರಸವನ್ನು ರಸನೇಂದ್ರಿಯದಿಂದ ಆಸ್ವಾದಿಸಿ ಸುಖಪಡುವನು. ಅದ್ವೈತದೃಷ್ಟಿಯಲ್ಲಾದರೋ ದ್ರಷ್ಟೃತ್ವ ಭೋಕ್ತೃತ್ವ ಆಸ್ವಾದಕತ್ವಗಳು ಆತ್ಮನಿಗೆ ಇಲ್ಲ. ಕೇವಲ ಸಚ್ಚಿದಾನಂದರೂಪನೇ ಆಗಿರುವನು. ಅಂತಹ ಸಚ್ಚಿದಾನಂದಾತ್ಮ ಸ್ವರೂಪದಲ್ಲಿ ರಸಾನುಭವರೂಪ ಚಿತ್ತ ವೃತ್ತಿಯು ಹೇಗೂ ಪ್ರಸಕ್ತವಾಗುವದೇ ಇಲ್ಲ.

[ಆನಂದೇ+ಅಪರಿಣಾಮಿತ್ವಾತ್ ಎಂದು ಸಂಧಿ ಬಿಡಿಸಬೇಕು.]

೬೯. ಸ್ವರ್ಗಲೋಕದ ದಿವ್ಯ ವೈಭವಗಳನ್ನೂ ಅನುಭವಿಸಿದ ಮನುಜನು ಪುನಃ ಭೂಲೋಕದ ಸುಖಗಳಿಗೆ ಆಸೆಪಡುವದಿಲ್ಲ. ಇದರಂತೆಯೇ ಎರಡು ಕ್ಷಣ

ತತ್ಪದಂ ಸಾ ಗತಿಃ ಶಾಂತಾ ತಚ್ಛ್ರೇಯಃ ಶಾಶ್ವತಂ ಶಿವಂ |
ತತ್ರ ವಿಶ್ರಾಂತಿಮಾಪ್ತಸ್ಯ ಭೂಯೋ ನೋ ಬಾಧತೇ ಭ್ರಮಃ　　|| ೭೦ ||

ಕಾಲವೇ ಆಗಲಿ ಅಥವಾ ಸಾವಿರಾರು ವರ್ಷಗಳ ಕಾಲವೇ ಆಗಲಿ ಒಂದು ಸಲ ಸಾಧಕನ ಮನಸ್ಸು ಅಂತಹ ನಿತ್ಯನಿರವದ್ಯ ನಿರತಿಶಯಾನಂದ ಸ್ವರೂಪದಲ್ಲಿದ್ದು ಬಿಟ್ಟರೆ ಬಳಿಕ ಪುನಃ ಎಂದೆಂದಿಗೂ ಐಹಿಕಗಳೂ ಪಾರಲೌಕಿಕಗಳೂ ಆದ ಭೋಗ ಸಮುದಾಯಗಳಲ್ಲಿ ಆಸೆಯಿಡುವದೂ ಇಲ್ಲ. ಅದರಿಂದ ತೃಪ್ತಿಯನ್ನು ಹೊಂದು ವದೂ ಇಲ್ಲ.

[ಐಹಿಕಾಮುಷ್ಮಿಕಭೋಗಗಳೆಲ್ಲವೂ ಅತ್ಯಂತ ಕ್ಷಣಿಕ ತುಚ್ಛ ಪರಿಣಾಮದಲ್ಲಿ ದುಃಖಹೇತುಗಳು. ಏಕೆಂದರೆ ಅವು ವಿಷಯೇಂದ್ರಿಯ ಮನಸ್ಸಂಯೋಗ ಜನ್ಯ ವಾದವು ಎಂದು ತಾತ್ಪರ್ಯ. ಇದೇ ಅಭಿಪ್ರಾಯವನ್ನು ಈಶ್ವರ ಕೃಷ್ಣರು ಸಾಂಖ್ಯ ಕಾರಿಕೆಗಳಲ್ಲಿ "ದೃಷ್ಟವದಾನು ಶ್ರವಿಕಃ ಸಹ್ಯವಿಶುದ್ಧಿಕ್ಷಯಾತಿಶಯ ಯುಕ್ತಃ" ಎಂದು ಹೇಳಿರುವರು. ಮತ್ತು ಪಂಚಶಿಖಾಚಾರ್ಯರೂ ಕೂಡ "ಸ್ವಲ್ಪಃ ಸಂಕರಃ ಸಪರಿಹಾರಃ ಸಪ್ರತ್ಯವಮರ್ಷಃ" ಎಂದು ಹೇಳಿ ಆಮುಷ್ಮಿಕ ಫಲವನ್ನು ಕೂಡ ಅಲ್ಲ ಗಳೆದಿರುವರು. "ಯತ್ಕೃತಕಂ ತದನಿತ್ಯಂ" ಎಂಬ ಯುಕ್ತಿ ಸಹಕೃತವಾದ "ತದ್ಯಥೇಹ ಕರ್ಮಚಿತೋ ಲೋಕಃ ಕ್ಷೀಯತೇ ಏವಮೇವಾಮುತ್ರಪುಣ್ಯಚಿತೋ ಲೋಕಃ ಕ್ಷೀಯತೇ" ಎಂಬ ಶ್ರುತಿಯು ಕರ್ಮಫಲವು ಅನಿತ್ಯವೆಂದು ಸಾರುವದು. ಅಂತೆಯೇ "ಯೋವೈಭೂಮಾ ತದಮೃತಂ" "ಅನ್ಯದಾರ್ತಂ" "ಬ್ರಹ್ಮವಿದಾಪ್ನೋತಿ ಪರಂ"ನ ಸ ಪುನರಾವರ್ತತೇ ಬ್ರಹ್ಮವಿತ್ ಬ್ರಹ್ಮೈವ ಭವತಿ" ಇತ್ಯಾದಿ ಶ್ರುತಿಗಳು ಸ್ವಯಂಜ್ಯೋತಿರಾನಂದಾತ್ಮಕ ಮೋಕ್ಷವು ನಿತ್ಯವೆಂದು ಸಾರುತ್ತಲಿವೆ. ಆದಕಾರಣ ಜ್ಞಾನಿಯು ಪುನಃ ಎಂದಿಗೂ ಐಹಿಕಾಮುಷ್ಮಿಕ ಭೋಗಗಳಲ್ಲಿ ಪ್ರೀತಿ ಮಾಡುವ ದಿಲ್ಲವೆಂದು ಇಲ್ಲಿ ಹೇಳಿದೆ.]

೭೦. ಅಹಹ! ಆ ಸರ್ವೋತ್ಕೃಷ್ಟವಾದ ಪದವಿ! ನಿರುಪದ್ರವವೂ ಪ್ರಶಾಂತವೂ ಆದ ಗತಿ!! ಪರಮ ಮಂಗಳಾತ್ಮಕವೂ ಶಾಶ್ವತವೂ ಆದ ಆ ನಿಶ್ಶ್ರೇಯಸವು!! ಇಂತಹ ಪರಮಪದದಲ್ಲಿ ವಿಶ್ರಾಂತಿ ಪಡೆದ ಮಹಾನುಭಾವ ನನ್ನು ಪುನಃ ಎಂದಿಗೂ ಈ ಸಂಸಾರ ಭ್ರಾಂತಿಯು ಬಾಧಿಸುವದು ಇಲ್ಲವೇ ಇಲ್ಲ.

ತತ್ಪದಂ ಸಾಧವಃ ಪ್ರಾಪ್ಯ ದೃಶ್ಯದೃಷ್ಟಿಮಿಮಾಂ ಪುನಃ ।
ನಾಯಂತಿ ಖದಿರೋದ್ಯಾನಂ ಲಬ್ಧಚೈತ್ರರಥಾ ಇವ ॥ ೭೧ ॥

ತಾಂ ಮಹಾನಂದಪದವೀಂ ಚಿತ್ತಾದಾಸಾದ್ಯ ದೇಹಿನಃ ।
ದೃಶ್ಯಂ ನ ಬಹು ಮನ್ಯಂತೇ ರಾಜಾನೋ ದೀನತಾಮಿವ ॥ ೭೨ ॥

[ಅಥಸೋಽಭಯಂಗತೋ ಭವತಿ–ತೈತ್ತರೀಯ.

ಅಭಯಂ ಪ್ರತಿಷ್ಠಾಂ ವಿಂದತೇ–ಛಾಂದೋಗ್ಯ.

ಬ್ರಹ್ಮಪ್ರಾಪ್ತೋ ವಿರಜೋಽಭೂತ್ ವಿಮೃತ್ಯುಃ ನ ಬಿಭೇತಿ ಕುತಶ್ಚನ–ತೈತ್ತರೀಯ.

ಅಭಯಂ ವೈ ಜನಕ ಪ್ರಾಪ್ತೋಽಸಿ–ಬೃಹ ೪–೨–೪.

ಏತದ್ಬುದ್ಧ್ವಾಬುದ್ಧಿಮಾನ್ಸ್ಯಾತ್ ಕೃತಕೃತ್ಯಶ್ಚ ಭಾರತ–ಗೀತಾ ೧೫-೨೦.

—ಇತ್ಯಾದಿ ಪ್ರಮಾಣಗಳಿಂದ ಜ್ಞಾನಿಗೆ ಪುನರ್ಜನ್ಮಾದಿಗಳಿಲ್ಲವೆಂದೂ, ಸರ್ವಾನರ್ಥ ಮೂಲವಾದ ಭಯಂಕರ ಸಂಸಾರದಿಂದ ಪುನಃ ಎಂದಿಗೂ ಭಯವಿಲ್ಲವೆಂದೂ, ಮೋಕ್ಷವು ನಿತ್ಯವೆಂದೂ ಗೊತ್ತಾಗುವದು.]

೭೧. ಚೈತ್ರರಥವೆಂಬ ಕುಬೇರನ ದಿವ್ಯೋದ್ಯಾನದಲ್ಲಿ ವಿಹರಿಸತಕ್ಕ ಪುಣ್ಯಾತ್ಮರು ಕಗ್ಗಲಿವೃಕ್ಷಗಳ ಕಾಡಿನಲ್ಲಿ ಹೇಗೆ ವಿಹಾರಮಾಡುವದಿಲ್ಲವೋ, ಹಾಗೆಯೇ ಇಂತಹ ಪರಮಪದದಲ್ಲಿ ವಿಶ್ರಾಂತಿ ಹೊಂದಿದ ಜೀವನ್ಮುಕ್ತರಾದ ಸಾಧುಗಳು ಆ ಮೇಲೆ ಪುನಃ ಎಂದಿಗೂ ಈ ದೃಶ್ಯಜ್ಞಾನವನ್ನು ಪಡೆಯುವದಿಲ್ಲ.

೭೨. ಒಬ್ಬ ದರಿದ್ರನು ಅಕಸ್ಮಾತ್ ದೈವಯೋಗದಿಂದ ಒಂದು ದೇಶದ ರಾಜನಾಗಿಬಿಟ್ಟು ಆಗ ಅವನು ತನ್ನ ಪೂರ್ವಸ್ಥಿತಿಯಾದ ದೀನತ್ವವನ್ನು ಹೇಗೆ ಬಹುಮಾನಿಸದೆ ಇರುವನೋ ಹಾಗೆ ಶ್ರವಣಮನನ ನಿದಿಧ್ಯಾಸನಗಳಿಂದಲೂ, ಶೋಧಿತವಾಗಿ ಸಂಸ್ಕೃತವಾದ ಚಿತ್ತದ ಮೂಲಕ ಆ ಮಹಾ ನಿರತಿಶಯಾನಂದ ಸ್ವರೂಪ ಸ್ಥಿತಿಯನ್ನು ಅಂದರೆ ಜೀವನ್ಮುಕ್ತಿಯನ್ನು ದೇಹಿಗಳು (ಸ್ಥಿತಪ್ರಜ್ಞರು=

ಚೇತಸ್ತತ್ಪದವಿಶ್ರಾಂತಂ ಬುದ್ಧಂ ದೃಶ್ಯದಶಾಂ ಪ್ರತಿ |
ಕದರ್ಥಾದ್ಬೋಧಮಾಯಾತಿ ನಾಯಾತ್ಯೇವಾಥವಾನಘ || ೭೩ ||

ಉದ್ದಾಲಕೋಽತ್ರ ಷಣ್ಮಾಸಾನ್ದೂರೋತ್ಸಾರಿತಸಿದ್ಧಿಭೂಃ |
ಉಷಿತ್ವೋನ್ಮಿಷಿತೋಽಂಭೋದಕೋಶಾದರ್ಕೋ ಮಧಾವಿವ || ೭೪ ||

ತತ್ವಜ್ಞಾನಿಗಳು) ಅಪರೋಕ್ಷವಾಗಿ ಪಡೆದ ನಂತರ ಈ ದೃಶ್ಯ ಜಗತ್ತನ್ನು ಎಂದಿಗೂ ಆದರಿಸುವದಿಲ್ಲ.

[ಅಥವಾ, ದಿವ್ಯರಾಜ ಭೋಗಗಳನ್ನು ಅನುಭವಿಸುತ್ತಲಿರುವ ರಾಜರುಗಳು ಯಾಚನಾವೃತ್ತಿಯನ್ನು ಹೇಗೆ ಬಹುಮಾನಿಸುವದಿಲ್ಲವೋ, ಹಾಗೆಯೇ ಶ್ರವಣ ಮನನನಿಧಿಧ್ಯಾಸನಗಳಿಂದಲೂ, ಸಮಾಧ್ಯಭ್ಯಾಸದಿಂದಲೂ, ಶೋಧಿತವಾಗಿ ಸುಸಂಸ್ಕೃತವಾದ ಚಿತ್ತದ ಮೂಲಕ, ನಿರತಿಶಯಾನಂದ ಸ್ವರೂಪ ಪರಮ ಪದ ವನ್ನು (ಜೀವನ್ಮುಕ್ತಿಯನ್ನು) ಅಪರೋಕ್ಷವಾಗಿ ಪಡೆದ ನಂತರ ಜ್ಞಾನಿಗಳು ಈ ದೃಶ್ಯ ಜಗತ್ತನ್ನು ಪುನಃ ಎಂದಿಗೂ ಗೌರವಿಸುವದಿಲ್ಲ.]

೭೩. ಅಯ್ಯಾ ಅನಘನಾದ ರಾಮ, ಇಂತಹ ಪರಮಪದದಲ್ಲಿ (ಮುಕ್ತದಶೆ ಯಲ್ಲಿ) ಸ್ಥಿರವಾಗಿ ವಿಶ್ರಾಂತಿ ಪಡೆದಿರುವ ಪ್ರಬೋಧಪೂರ್ಣವಾದ ಜೀವನ್ಮುಕ್ತನ ಚಿತ್ತವು ಇತರರ ಮಹಾಪ್ರಯತ್ನದದೆಸೆಯಿಂದ ಒಂದು ವೇಳೆ ನಿರಭಿಸಂಧಿ ಪೂರ್ವಕವೇ ಈ ದೃಶ್ಯ ಪ್ರಾಪಂಚಿಕ ಸ್ಥಿತಿಯಲ್ಲಿ ಎಚ್ಚರಗೊಂಡು ಅನಿಚ್ಛೆಯಿಂದ ಪರಪ್ರೇರಣಾನುಸಾರವಾಗಿ ವ್ಯವಹಾರದಲ್ಲಿ ಅಭಿಮುಖವಾದರೂ ಆಗಬಹುದು. ಅಥವಾ ಇತರರು ಎಷ್ಟೇ ಕಷ್ಟಪಟ್ಟು ಮಹತ್ಪ್ರಯತ್ನ ಮಾಡಿದರೂ ಬಹಿರ್ವ್ಯಾಪಾ ರೋನ್ಮುಖವಾಗದೆಯೇ ತಟಸ್ಥವಾಗಿಯೇ ಇದ್ದುಬಿಡುವುದು.

[ವ್ಯವಹಾರ ಜ್ಞಾನವೇ ಸುತರಾಂ ಬರುವದಿಲ್ಲ.]

೭೪. ಆ ಉದ್ದಾಲಕನು ಈ ರೀತಿಯಾಗಿ ಸಕಲ ಸಿದ್ಧಿ ವಿಭವಗಳನ್ನೂ ಬಹು ದೂರದಲ್ಲಿ ಪರಿಹರಿಸಿ ಆರು ತಿಂಗಳ ಕಾಲ ಈ ಜೀವನ್ಮುಕ್ತದಶೆಯಲ್ಲಿದ್ದು ಚೈತ್ರ ಮಾಸದಲ್ಲಿ ಸೂರ್ಯನು ಮೇಘಮಧ್ಯದಿಂದ ಹೊರಕ್ಕೆ ಬಂದು ಜಗತ್ತನ್ನು ಬೆಳಗಿ ಸುವ ಸ್ವಕಾರ್ಯದಲ್ಲಿ ಉದ್ಯುಕ್ತನಾಗುವಂತೆ ಪುನಃ ಅವನು ಕ್ರಮೇಣ ಬಹಿರ್ಮುಖ ನಾದನು.

ದದರ್ಶ ಸಂಪ್ರಬುದ್ಧಾತ್ಮಾ ಪುನಃ ಪರಮತೇಜಸಃ |
ಪ್ರಣಾಮಲಾಲಸಾಃ ಸಿದ್ಧಾಂಶ್ಚಂದ್ರಬಿಂಬವಪುರ್ಧರಾಃ || ೭೫ ||

ರಮಣೀರ್ಗೌರಮಂದಾರರೇಣುಭ್ರಮರಚಾಮರಾಃ |
ಸ್ಫುರತ್ಪತಾಕಾ ಪಟಲಾ ದ್ಯುವಿಮಾನಪರಂಪರಾಃ || ೭೬ ||

ಅಸ್ಮದಾದೀನ್ಮುನೀನ್ದರ್ಭಪವಿತ್ರಾಂಕಕರಾಂಬುಜಾನ್ |
ವಿದ್ಯಾಧರೀಭಿರ್ಮಿಲಿತಾನ್ವಿದ್ಯಾಧರಪತೀನಪಿ || ೭೭ ||

ತೇ ತಮೂಚುರ್ಮಹಾತ್ಮಾನಮುದ್ದಾಲಕಮುನಿಂ ತಥಾ |
ಪ್ರಸಾದೇನ ಪ್ರಣಾಮನ್ನೋ ಭಗವನ್ನವಲೋಕಯ || ೭೮ ||

೭೫-೭೭. ಹಾಗೆ ಆ ಉದ್ದಾಲಕನು ಬಹಿರ್ಮುಖನಾದ ಕೂಡಲೇ ಪುನಃ ದಿವ್ಯ ತೇಜಸ್ಸಿನಿಂದ ಶೋಭಿತರಾಗಿಯೂ ದಂಡವತ್ ಪ್ರಣಾಮ ಮಾಡುವುದರಲ್ಲಿ ಅತ್ಯಾಸಕ್ತಿಯುಳ್ಳವರಾಗಿಯೂ ಸ್ನೇಹಪೂರ್ಣರಾಗಿಯೂ ಚಂದ್ರಬಿಂಬದಂತೆ ಆಹ್ಲಾದಕರವಾದ ದೇಹಗಳನ್ನು ಧರಿಸಿದವರಾಗಿಯೂ ಹಳದಿ ಬಣ್ಣವುಳ್ಳ ಮಂದಾರ ಪುಷ್ಪ ಪರಾಗಗಳಿಂದ ಆವೃತವಾದ ಭ್ರಮರಗಳನ್ನೊಳಗೊಂಡ ದಿವ್ಯ ಪುಷ್ಪಮಾಲಿಗಳನ್ನೂ ಚಾಮರಗಳನ್ನೂ ಕೈಗಳಲ್ಲಿ ಧರಿಸಿದವರಾಗಿಯೂ ಇರುವ ಅಮರ ಸುಂದರಿಯರನ್ನೂ ಪ್ರಕಾಶಮಾನವಾದ ಧ್ವಜಪಟಗಳ ಸಾಲುಗಳಿಂದ ಅಲಂಕೃತವಾದ ಗಗನಚಾರಿಗಳಾದ ವಿಮಾನ ಪಂಕ್ತಿಗಳನ್ನೂ ದರ್ಭಮಯ ಪವಿತ್ರಗಳನ್ನು ಧರಿಸಿರುವ ಕರಕಮಲಗಳುಳ್ಳ ನಾನೇ ಪ್ರಧಾನವಾಗಿ ಉಳ್ಳ (ಅಸ್ಮದಾದಿ ಅಂದರೆ ವಸಿಷ್ಠಾದಿ) ಮಹಾಋಷಿಗಳನ್ನೂ ಮತ್ತು ವಿದ್ಯಾಧರಿಯರಿಂದ ಆಲಂಗಿತರಾದ ವಿದ್ಯಾಧರ (ರೆಂಬ ದೇವಯೋನಿಗಳ) ರಾಜರುಗಳನ್ನೂ ಕೂಡ ನೋಡಿದನು. ಆಗ ಅವರೆಲ್ಲರೂ ಮಹಾತ್ಮನಾದ ಆ ಉದ್ದಾಲಕ ಮುನಿಯನ್ನು ಕುರಿತು ಮುಂದೆ ಹೇಳುವ ರೀತಿಯಲ್ಲಿ ಹೀಗೆ ಹೇಳಿದರು.

೭೮. ಸ್ವಾಮಿ, ಭಗವನ್ (ಷಡ್ಗುಣೈಶ್ವರ್ಯ ಸಂಪನ್ನರಾದ ಮಹನೀಯರೇ,) ದಯಮಾಡಿ ನಮ್ಮ ದಂಡವತ್ಪ್ರಣಾಮಗಳನ್ನು ಸ್ವೀಕರಿಸಿ ಪ್ರಸನ್ನರಾಗೋಣವಾ

ಆರುಹ್ಯೇದಂ ವಿಮಾನಂ ತ್ವಮೇಹಿ ತ್ರೈವಿಷ್ಟಪಂ ಪುರಂ |
ಸ್ವರ್ಗ ಏವ ಹಿ ಸೀಮಾಂತೋ ಜಗತ್ಸಂಭೋಗಸಂಪದಾಂ || ೭೯ ||

ಆಕಲ್ಪಮುಚಿತಾರ್ಭುಂಕ್ಷ್ವ ಭೋಗಾನಭಿಮತಾನ್ವಿಭೋ |
ಸ್ವರ್ಗಾದಿಫಲಭೋಗಾರ್ಥಮೇವಾಶೇಷತಪಃಕ್ರಿಯಾಃ || ೮೦ ||

ಹಾರಚಾಮರಧಾರಿಣ್ಯೋ ವಿದ್ಯಾಧರವರಾಂಗನಾಃ |
ಪಶ್ಯೇಮಾಸ್ತ್ವಾಮುಪಾಸೀನಾಃ ಕರಿಣ್ಯಃ ಕರಿಣಂ ಯಥಾ || ೮೧ ||

ಗಲಿ. ತಮ್ಮ ಕರುಣಾರಸಾರ್ದ್ರವಾದ ಕಟಾಕ್ಷವೀಕ್ಷಣದಿಂದ ನಮ್ಮನ್ನು ಕಾಣಬೇಕಾಗಿಯೂ, ತಾವು ಈ ವಿಮಾನವನ್ನು ಹತ್ತಿ ಕುಳಿತುಕೊಂಡು ಸ್ವರ್ಗಲೋಕದ ರಾಜಧಾನಿಯಾದ ಅಮರಾವತೀ ನಗರಕ್ಕೆ ದಯಮಾಡಿಸಬೇಕಾಗಿಯೂ ಪ್ರಾರ್ಥಿಸುವೆವು.

೭೯-೮೦. ಸ್ವಾಮಿನ್, ವಿಭೋ, ಸರ್ವಜ್ಞರಾದ ತಮಗೆ ಹೇಳತಕ್ಕದ್ದೇನಿದೆ? ಸಕಲ ಪ್ರಾಪಂಚಿಕ ಭೋಗ ಸಂಪತ್ತುಗಳಿಗೂ ಸ್ವರ್ಗವೇ ನಿಜವಾಗಿಯೂ ಪರಮಾವಧಿಯೆಂಬುದನ್ನು ವೇದಗಳು ಸಾರುತ್ತಿರುವವಲ್ಲಾ! ತಾವು ಸ್ವರ್ಗಲೋಕಕ್ಕೆ ಬಿಜಯಂಗೈದು, ಅಲ್ಲಿ ಪ್ರಳಯಕಾಲದವರೆವಿಗೂ ತಮಗೆ ಅಭಿಮತಗಳಾದ ಮತ್ತು ಉಚಿತಗಳಾದ ದಿವ್ಯ ಸ್ರಕ್ಚಂದನ ವನಿತಾದಿ ವಿವಿಧ ಭೋಗಗಳನ್ನು ಅನುಭವಿಸಿಕೊಂಡು ಆನಂದದಿಂದ ವಿಹರಿಸೋಣಾಗಲಿ. ಈ ಭೂಲೋಕದಲ್ಲಿ ಧರ್ಮಾತ್ಮರಾದವರು ತಪಸ್ಸು, ಯಾಗ ಮುಂತಾದ ಸಕಲ ವೈದಿಕ ಕರ್ಮಗಳನ್ನು ಸ್ವರ್ಗಾದಿ ಲೋಕಾಂತರಗಳಲ್ಲಿ ದಿವ್ಯ ಫಲೋಪ ಭೋಗಾರ್ಥವಾಗಿಯೇ ಅಲ್ಲವೆ ಆಚರಿಸುವರು?

೮೧. ಇಗೋ ಇಲ್ಲಿ ಪರಾಂಬರಿಸೋಣಾಗಲಿ. ಹೆಣ್ಣಾನೆಗಳು ತಮ್ಮ ಮುಂದೆಯ ಯಜಮಾನನಾದ ಗಂಡಾನೆಯನ್ನು ಸೇವಿಸುವಂತೆ, ಈ ವಿದ್ಯಾಧರ ವರಾಂಗನೆಯರು ಪುಷ್ಪಮಾಲೆಗಳನ್ನೂ, ಚಾಮರಗಳನ್ನೂ ಕೈಗಳಲ್ಲಿ ಹಿಡಿದುಕೊಂಡು ತಮ್ಮನ್ನು ಸೇವಿಸುತ್ತಾ ತಮ್ಮ ಅನುಗ್ರಹವನ್ನು ಬಯಸುತ್ತಿರುವರು.

ಕಾಮೋ ಧರ್ಮಾರ್ಥಯೋಃ ಸಾರಃ ಕಾಮಸಾರಾಃ ಸುಯೋಷಿತಃ |
ವಸಂತ ಇವ ಮಂಜರ್ಯಃ ಸ್ವರ್ಗ ಏವ ಭವಂತಿ ತಾಃ || ೮೨ ||

ಏವಂ ಕಥಯತಃ ಸರ್ವಾನತಿಥೀನಿತ್ಯಸೌ ಮುನಿಃ |
ಪರಿಪೂಜ್ಯ ಯಥಾನ್ಯಾಯಮತಿಷ್ಠದ್ಗತಸಂಭ್ರಮಂ || ೮೩ ||

ನಾಭ್ಯನಂದನ್ನ ತತ್ಯಾಜ ತಾಂ ವಿಭೂತಿಂ ಸ ಧೀರಧೀಃ |
ಭೋಃ ಸಿದ್ಧಾ ವ್ರಜತೇತ್ಯುಕ್ತ್ವಾ ಸ್ವವ್ಯಾಪಾರಪುರೋಽಭವತ್ || ೮೪ ||

---

೮೨. ಧರ್ಮಾರ್ಥಕಾಮಗಳೆಂಬ (ವರ್ಗತ್ರಯಾತ್ಮಕ) ಪುರುಷಾರ್ಥಗಳೊಳಗೆ ಧರ್ಮಾರ್ಥಗಳಿಗಿಂತ ಕಾಮವೇ ಮಿಗಿಲಾದದ್ದು. ಏಕೆಂದರೆ ಅವೆರಡಕ್ಕೂ ಕಾಮವೇ ಫಲವಾದ ಕಾರಣ ಮುಖ್ಯಸಾರವೆನ್ನಿಸಿರುವುದು. ಆ ಕಾಮಕ್ಕೆ ಪುನಃ ಕಾಂತೆಯರಾದ ರಮಣೀಮಣಿಗಳೇ ಸಾರಭೂತರು. ವಸಂತರ್ತುವಿನಲ್ಲಿ ಮಾತ್ರವೇ ಸರ್ವವಿಧ ಪುಷ್ಪ ಮಂಜರಿಗಳೂ ಚೆನ್ನಾಗಿ ವಿಕಾಸ ಹೊಂದಿ ಹೃದಯಂಗಮಗಳಾಗಿ ಕಾಣುವಂತೆ ಅಂತಹ ಕಣ್ಮನಗಳನ್ನು ಸೆಳೆಯುವ ರಮಣಿಯರು ಸ್ವರ್ಗದಲ್ಲಿ ಮಾತ್ರವೇ ಕಾಣಬರುವರು.

(ಅಂತಹ ದಿವ್ಯ ರಮಣೀಮಣಿಗಳು ಮತ್ತೆ ಯಾವ ಲೋಕದಲ್ಲಿಯೂ ಅಷ್ಟು ಸುಂದರರಾಗಿ ಇಲ್ಲವೆಂದು ತಾತ್ಪರ್ಯ.)

೮೩. ಆ ಸಕಲ ಧರ್ಮಜ್ಞನಾದ ಉದ್ದಾಲಕ ಮುನೀಂದ್ರನು ಹೀಗೆಂದು ಹೇಳುತ್ತಲಿದ್ದ ಆ ಸಮಸ್ತರನ್ನೂ ಅತಿಥಿಗಳೆಂದು ಭಾವಿಸಿ "ಅತಿಥಿ ದೇವೋಭವ" ಎಂಬ ಶಾಸ್ತ್ರಾನುಸಾರವಾಗಿ, ಅತಿಥಿ ಸತ್ಕಾರವು ಪರಮ ಧರ್ಮವಾದ ಕಾರಣ ಅತ್ಯವಶ್ಯ ಕರ್ತವ್ಯವೆಂಬ ಬುದ್ಧಿಯಿಂದ ಯಥೋಚಿತವಾದ ಉಪಚಾರಾದಿಗಳಿಂದ ಅವರನ್ನೆಲ್ಲ ಸತ್ಕರಿಸಿ ಯಾವದೊಂದು ಬಗೆಯ ಸಂಭ್ರಮವೂ ಇಲ್ಲದೆ, ನಿರ್ವಿಕಾರನಾಗಿ ಮೊದಲಿನಂತೆಯೇ ಕ್ಷೋಭೆಗೊಳ್ಳದೆ ಸ್ವಸ್ಥನಾಗಿದ್ದನು.

೮೪. ಅತ್ಯಂತ ಧೀರ (ವಿಕಾರಕ್ಕೊಳಗಾಗದ) ಚಿತ್ತನಾದ ಆ ಉದ್ದಾಲಕನು ತನಗೆ ಸಂಪ್ರಾಪ್ತವಾದ ಅಣಿಮಾದ್ಯಷ್ಟಸಿದ್ಧಿಮಯವಾದ ಆ ಮಹಾವಿಭೂತಿಯನು

ಅಥ ಸ್ವಧರ್ಮನಿರತಂ ಭೋಗೇಷ್ವರತಿಮಾಗತಂ |
ತಮುಪಾಪ್ಯ ಯಯುಃ ಸಿದ್ಧಾ ದಿನೈಃ ಕತಿಪಯೈಃ ಸ್ವಯಂ ॥ ೮೫॥

ಜೀವನ್ಮುಕ್ತಃ ಸ ಚ ಮುನಿರ್ವಿಜಹಾರ ಯಥಾಸುಖಂ |
ಯಾವದಿಚ್ಛಂ ವನಾಂತೇಷು ಮುನೀನಾಮಾಶ್ರಮೇಷು ಚ ॥ ೮೬ ॥

ಮೇರುಮಂದರಕೈಲಾಸಹಿಮವದ್ವಿಂಧ್ಯಸಾನುಷು |
ದ್ವೀಪೋಪವನದಿಕ್ಕುಂಜಜಂಗಲಾರಣ್ಯಭೂಮಿಷು ॥ ೮೭ ॥

ಅಭಿನಂದಿಸಲೂ ಇಲ್ಲ, ಪರಿಹರಿಸಲೂ ಇಲ್ಲ. ಅದರಲ್ಲಿ ಕೇವಲ ಉದಾಸೀನಭಾವವನ್ನು ತೋರಿ ಸುಮ್ಮನೆ ಇದ್ದನು. ಬಳಿಕ, ಎಲೈ ಸಿದ್ಧರೇ, ಇನ್ನು ನೀವೆಲ್ಲಾ ಹೊರಡಬಹುದು. ನೀವು ಬಂದ ಕೆಲಸವು ಪೂರೈಸಿತು. ಹೋಗಿ ಬನ್ನಿ ಎಂದು ಮಾತ್ರ ಹೇಳಿ ಮತ್ತೆ ಪೂರ್ವದಂತೆ ತನಗೆ ಅಭಿಮತವಾದ ತನ್ನ ಕೆಲಸದಲ್ಲಿ (ಸಮಾಧಿಯಲ್ಲಿ) ತನ್ನಷ್ಟಕ್ಕೆ ತಾನು ನಿರತನಾದನು.

೮೫. ತರುವಾಯ ತಾವು ಬಹುಮಟ್ಟಿಗೆ ಎಷ್ಟೋ ವಿಧಗಳಿಂದ ಪ್ರಲೋಭಗೊಳಿಸಿ ತಮ್ಮ ಮಾಯಾಜಾಲವನ್ನು ಬೀಸಿ ನಾನಾ ರೀತಿಗಳಲ್ಲಿ ಪ್ರಯತ್ನಿಸಿದರೂ ಬಲೆಗೆ ಬೀಳದೆಯೇ ಸ್ಥಿರಚಿತ್ತನಾಗಿದ್ದ ಐಹಿಕಾಮುಷ್ಮಿಕಗಳಾದ ಸಕಲ ಭೋಗಗಳಲ್ಲಿಯೂ ಅತಿ ತೀವ್ರವಾದ ವೈರಾಗ್ಯವನ್ನು ಪಡೆದು ತನ್ನಷ್ಟಕ್ಕೆ ತಾನೇ ಸ್ವಧರ್ಮದಲ್ಲಿ ನಿರತನಾಗಿದ್ದ ಆ ಉದ್ದಾಲಕ ಮಹಾಮುನಿಯನ್ನು ಆ ಸಿದ್ಧಾದಿಗಳೆಲ್ಲರೂ ಕೆಲವು ದಿವಸಗಳ ಕಾಲ ಸೇವಿಸಿ ತಮ್ಮ ಪಾಡಿಗೆ ತಾವು ಬಂದ ದಾರಿಯನ್ನು ಹಿಡಿದು ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು.

೮೬–೮೭. ಅವರೆಲ್ಲರೂ ಹೊರಟುಹೋದ ಬಳಿಕ, ಜೀವನ್ಮುಕ್ತನಾಗಿದ್ದ ಆ ಉದ್ದಾಲಕ ಮುನಿಯು ತೋಪುಗಳ ಮಧ್ಯಭಾಗಗಳಲ್ಲಿಯೂ ತಪೋವನ ಋಷ್ಯಾಶ್ರಮಗಳಲ್ಲಿಯೂ, ಮೇರು, ಮಂದರ, ಕೈಲಾಸ, ಹಿಮಾಲಯ, ವಿಂಧ್ಯ ಮುಂತಾದ ಪರ್ವತಗಳ ಪ್ರಸ್ಥಭೂಮಿಗಳಲ್ಲಿಯೂ ಜಂಬೂದ್ವೀಪಾದಿ ದ್ವೀಪಗಳಲ್ಲಿಯೂ ಉಪವನಗಳಲ್ಲಿಯೂ, ದಿಗಂತಗಳಲ್ಲಿಯೂ, ಲತಾಮಂಟಪಗಳಲ್ಲಿಯೂ,

ತತಃಪ್ರಭೃತಿಸಂಪ್ರಾಪ್ತಪದಮುದ್ದಾಲಕೋ ದ್ವಿಜಃ |
ಗುಹ್ಯಾಸು ಗಿರಿಕುಕ್ಷೀಣಾಮುವಸದ್ಧ್ಯಾನಲೀಲಯಾ ॥ ೮೮ ॥

ಕದಾಚಿದಹ್ನಾ ಮಾಸೇನ ಕದಾಚಿದ್ವತ್ಸರೇಣ ಚ |
ಕದಾಚಿದ್ವತ್ಸರೌಘೇಣ ಧ್ಯಾನಾಸಕ್ತ್ಯೋ ವ್ಯಬುಧ್ಯತ ॥ ೮೯ ॥

ಉದ್ದಾಲಕಸ್ತದಾರಭ್ಯ ವ್ಯವಹಾರಪರೋಽಪಿ ಸಃ |
ಸುಸಮಾಹಿತ ಏವಾಸೌ ಚಿತ್ತತ್ವೈಕತ್ವಮಾಗತಃ ॥ ೯೦ ॥

ದೊಡ್ಡ ಮತ್ತು ಸಣ್ಣ ಅರಣ್ಯಗಳ ಪ್ರದೇಶಗಳಲ್ಲಿಯೂ ಹೀಗೆ ತನಗೆ ಇಚ್ಛೆ ಬಂದ ಸ್ಥಳಗಳಲ್ಲೆಲ್ಲ ವಿನೋದವಾಗಿ ತನ್ನ ಇಚ್ಛಾಪೂರ್ತಿಯಾಗುವವರೆಗೂ ವಿಹಾರ ಮಾಡಿಕೊಂಡಿದ್ದನು.

೮೮. ಅದು ಮೊದಲುಗೊಂಡು ಜೀವನ್ಮುಕ್ತ ಪದವಿಯನ್ನು ಪಡೆದ ಆ ಉದ್ದಾಲಕನೆಂಬ ಬ್ರಾಹ್ಮಣನು ಪರ್ವತಗಳ ಮಧ್ಯದಲ್ಲಿರುವ ಗುಹೆಗಳಲ್ಲಿ ಸ್ವಾತ್ಮ ತತ್ತ್ವಧ್ಯಾನಾರೂಢನಾಗಿ ವಿನೋದದಿಂದ ವಾಸಮಾಡಿಕೊಂಡಿದ್ದನು.

೮೯. ಹೀಗೆ ಧ್ಯಾನನಿಷ್ಠನಾಗಿರುತ್ತ ನಿಶ್ಚಲನಾಗಿಯೂ ಅಂತರ್ಮುಖಿಯಾಗಿಯೂ ಇದ್ದ ಆತನು ಒಂದೊಂದು ಸಲ ಒಂದೇ ದಿವಸಕ್ಕೂ, ಇನ್ನೊಂದು ಸಲ ಒಂದೊಂದು ತಿಂಗಳಿಗೂ, ಮತ್ತೊಂದು ಸಲ ಒಂದು ಸಂವತ್ಸರಕ್ಕೂ, ಮಗದೊಂದು ಸಲ ಅನೇಕ ವರ್ಷಗಳು ಕಳೆದು ಹೋದನಂತರವೂ ಯಾವಾಗಲೋ ಧ್ಯಾನದಿಂದ ಎಚ್ಚೆತ್ತು ಬಹಿರ್ಮುಖನಾಗುತ್ತಿದ್ದನು.

೯೦. ಅದು ಮೊದಲು ಆ ಉದ್ದಾಲಕನು ಕೆಲವು ವೇಳೆ ಬಾಹ್ಯ ವ್ಯವಹಾರಗಳಲ್ಲಿ ನಿರತನಾಗುತ್ತಿದ್ದರೂ ಕೂಡ ಸ್ಥಿತಪ್ರಜ್ಞರಂತೆಯೇ ಕ್ರಿಯಾಕಾರಕ ಫಲಾದಿ ಅಭಿಸಂಧಿ ಶೂನ್ಯನಾಗಿ, ಸಮಾಧಾನ ಸ್ಥಿತಿಯಲ್ಲಿರುತ್ತ ಸಮಾಧಿನಿಷ್ಠನಾಗಿ ಸಾಕ್ಷಿ ಚೈತನ್ಯರೂಪ ಸ್ವಾತ್ಮ ತತ್ತ್ವದೊಂದಿಗೆ ಐಕ್ಯವನ್ನು ಪಡೆದು ಇದ್ದನು. (ಪುನಃ ವಿಕ್ಷೇಪಕ್ಕೆ ಒಳಗಾಗಲಿಲ್ಲ.)

ಚಿತ್ತತ್ವೈಕಘನಾಭ್ಯಾಸಾನ್ಮಹಾಚಿತ್ವಮುಪೇತ್ಯ ಸಃ |
ಬಭೂವ ಸರ್ವತ್ರ ಸಮಸ್ತೇಜಃ ಸೌರಮಿವಾವನೌ || ೯೧ ||

ಚಿತ್ಸಾಮಾನ್ಯಚಿರಾಭ್ಯಾಸಾತ್ಸತ್ತಾಸಾಮಾನ್ಯಮೇತ್ಯ ಸಃ |
ದೃಶ್ಯೇಽಸ್ಮಿಂಶ್ಚಿತ್ರರವಿವನ್ನಾಸ್ತಮಾಯಾನ್ನ ಚೋದಯಂ || ೯೨ ||

---

೯೧. ಹೀಗೆ ಸಾಕ್ಷಿ ಚೈತನ್ಯಾತ್ಮ ತತ್ತ್ವವನ್ನು ಸಂತತವಾಗಿ ಸಾಕ್ಷಾತ್ಕರಿಸುತ್ತಾ ಸಮಾಧಿರೂಢವಾದ ಅಭ್ಯಾಸಬಲದಿಂದ ಸರ್ವತ್ರ ಪರಿಪೂರ್ಣವಾದ ಅಪರಿಚ್ಛಿನ್ನವಾದ ಚಿದಾತ್ಮವೇ ತಾನು ಆಗಿದ್ದುಕೊಂಡು ಆ ಉದ್ದಾಲಕನು ಭೂಮಿಯ ಮೇಲೆಲ್ಲಾ ಸೂರ್ಯನ ತೇಜಸ್ಸು ಒಂದೇ ಸಮನಾಗಿ (ಯಾವ ಭೇದವೂ ಇಲ್ಲದೆ) ಪ್ರಸರಿಸುವಂತೆ ಸರ್ವಭೂತಗಳಲ್ಲಿಯೂ ಸ್ನೇಹದ್ವೇಷಾದಿಗಳನ್ನು ಬಿಟ್ಟವನಾಗಿಯೂ ಕರುಣೆಯುಳ್ಳವನಾಗಿಯೂ, ವೈಷಮ್ಯರಹಿತವಾದ ಬ್ರಹ್ಮಭಾವವನ್ನು ಕಾಣುವವನಾಗಿಯೂ ಇದ್ದುಕೊಂಡು ಸಮನಾಗಿದ್ದನು. (ಇದು ಆರನೆಯ ಭೂಮಿಕಾ ಸ್ಥಿತಿ.)

[ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಂ |
ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿಪಶ್ಯತಿ || ಗೀತಾ.
ಇತ್ಯಾದಿ ವಾಕ್ಯಗಳು ಸರ್ವತ್ರ ಬ್ರಹ್ಮವು ಸಮವಾಗಿರುವುದೆಂದು ಬೋಧಿಸುವವು.]

೯೨. ಅನಂತರ ಆ ಉದ್ದಾಲಕನು ಬಹು ದೀರ್ಘಕಾಲದವರೆಗೂ ಚಿತ್ಸಾಮಾನ್ಯವನ್ನು ಅಭ್ಯಾಸ ಮಾಡುವದರ ಮೂಲಕ, ಸಕಲ ದೃಶ್ಯಗಳನ್ನೂ ಅವುಗಳ ಸಂಸ್ಕಾರವನ್ನೂ ಸಂಪೂರ್ಣವಾಗಿ ಹೋಗಲಾಡಿಸಿಕೊಂಡನು. ಅದರಿಂದ ಸರ್ವವ್ಯವಹಾರಗಳೂ ಪ್ರಶಾಂತವಾಗಿ ಸ್ವಪ್ರಕಾಶವೂ ನಿರತಿಶಯಾನಂದಾತ್ಮಕವೂ ಆದ ಕೇವಲ ಸದ್ರೂಪವು ಮಾತ್ರ ಪರಿಶಿಷ್ಟವಾಯಿತು. ಹೀಗೆ ಸತ್ತಾಸಾಮಾನ್ಯ ಸ್ಥಿತಿಯನ್ನು ಪಡೆದನು. ಆದಕಾರಣವೇ ಅವನು ಚಿತ್ರಪಟದಲ್ಲಿ ಚಿತ್ರಿತನಾಗಿರುವ ಸೂರ್ಯನಂತೆ ಈ ದೃಶ್ಯ (ಜಗತ್ತು) ದಲ್ಲಿ ಅಸ್ತಮಯವನ್ನಾಗಲಿ (ತಿರೋಭಾವ) ಉದಯವನ್ನಾಗಲಿ ಹೊಂದದವನಾಗಿಯೇ ಇದ್ದನು.

[ಉದಯಾಸ್ತಗಳಿಗೆ ಬೀಜಭೂತಗಳಾದ ಅವಿದ್ಯಾ, ಕಾಮ, ಕರ್ಮ, ವಾಸನೆಗಳು ಆತ್ಯಂತಿಕವಾಗಿ ನಾಶವಾಗಿ ಬಿಟ್ಟಕಾರಣ ಉದಯಾಸ್ತಗಳುಂಟಾಗಲಿಲ್ಲ ಎಂದು ತಾತ್ಪರ್ಯ.] (ಇದು ಏಳನೆಯ ಭೂಮಿಕೆ.)

ಶಮಪರಪದಲಾಭಪ್ರಾಪ್ತಿಸಂಶಾಂತಚೇತಾ
ಗಲಿತಜನನಪಾಶಃ ಕ್ಷೀಣಸಂದೇಹಲೋಲಃ |
ಶರದಿ ಖಮಿವ ಶಾಂತಂ ವ್ಯಾತತಂ ಚೋರ್ಜಿತಂ ಚ
ಸ್ಫುಟಮಮಲಮಚೇತಸ್ತದ್ವಪುಃ ಸಂಬಭಾರ || ೯೩ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಉದ್ದಾಲಕ ವಿಶ್ರಾಂತಿ" ನಾಮ
ಚತುಃಪಂಚಾಶಃ ಸರ್ಗಃ

---

೯೩. ಆಗ ಆ ಉದ್ದಾಲಕನು ಸಕಲ ವಿಕ್ಷೇಪಗಳನ್ನೂ ಕಳೆದುಕೊಂಡು ಪರಮಶಾಂತಿ ಪ್ರಧಾನವಾದ (ನಿರತಿಶಯಾನಂದರೂಪ) ಉತ್ತಮವಾದ ಸ್ವಾತ್ಮ ಸ್ಥಿತಿಯನ್ನು ದೊರಕಿಸಿಕೊಂಡನು. ಅದರಿಂದ ಅವನ ಚಿತ್ತವು ಚೆನ್ನಾಗಿ ಶಾಂತ ವಾಗಿ ಬಿಟ್ಟಿತು. ಆ ಕಾರಣದಿಂದಲೇ ಅವಿದ್ಯಾ ಕಾಮ ಕರ್ಮಾದಿ ಸಕಲ ಬೀಜ ಗಳೂ ಕ್ಷಯಹೊಂದಿಬಿಟ್ಟು ಅವನಿಗೆ ಪುನರ್ಜನ್ಮ ಮರಣಾದಿ ವಿಕಾರಗಳು ಇಲ್ಲದೆ ಹೋದುವು. ಮತ್ತು ಉಯ್ಯಾಲೆಯಂತೆ ಅವನ ಮನಸ್ಸನ್ನು ತೂಗಾಡಿಸುತ್ತಿದ್ದ ಸಕಲ ಸಂದೇಹಗಳೂ ತೊಲಗಿದುವು. ಈ ಸ್ಥಿತಿಯನ್ನು ಪಡೆದ ಉದ್ದಾಲಕನು ಶರದೃತುವಿನ ಗಗನ ಮಂಡಲದಂತೆ ಅವಿದ್ಯಾವಿಲಾಸವೆಂಬ ಮೇಘಾಡಂಬರವಿಲ್ಲದೆ ಪ್ರಶಾಂತವೂ ಅಪರಿಚ್ಛಿನ್ನವೂ (ಸರ್ವತ್ರ ಪರಿಪೂರ್ಣವೂ) ನಿರಂಕುಶ ನಿರವಧಿಕ ನಿರತಿಶಯಾನಂದರೂಪವೂ (ಊರ್ಜಿತವೂ) ಆವರಣಶೂನ್ಯವೂ (ಸ್ಫುಟವೂ) ಅತ್ಯಂತ ನಿರ್ಮಲವೂ (ತನ್ನ ಪೂರ್ವಸ್ಥಿತಿಯನ್ನು ಸಂಪೂರ್ಣವಾಗಿ ಮರೆತುಬಿಟ್ಟ ಕಾರಣ) ಅಮನಸ್ಕವೂ (ಮನಸ್ಸಿಲ್ಲದುದು) ಆದ ಬ್ರಹ್ಮಸ್ವಭಾವವನ್ನು ಪಡೆದು ತನ್ನ ದಿವ್ಯಸ್ವರೂಪವನ್ನು ವಹಿಸಿಕೊಂಡಿದ್ದನು.

ಇಂತಿದು ಆರ್ಷವು ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ನಿರ್ವಾಣಪ್ರಕರಣದ "ಉದ್ದಾಲಕ ವಿಶ್ರಾಂತಿ" ಎಂಬ
ಐವತ್ತನಾಲ್ಕನೆಯ ಸರ್ಗವು

ಪಂಚಪಂಚಾಶಃ ಸರ್ಗಃ

ಶ್ರೀರಾಮ ಉವಾಚ —

ಆತ್ಮಜ್ಞಾನದಿನೈಕಾರ್ಕ ಮತ್ಸಂಶಯತೃಣಾನಲ |
ಅಜ್ಞಾನದಾಹಶೀತಾಂಶೋ ಸತ್ತಾಸಾಮಾನ್ಯಮೀಶ ಕಿಂ ॥ ೧ ॥

ಶ್ರೀ ವಸಿಷ್ಠ ಉವಾಚ—

ಯದಾ ಸಂಕ್ಷೀಯತೇ ಚಿತ್ತಮಭಾವಾತ್ಯಂತ ಭಾವನಾತ್ |
ಚಿತ್ಸಾಮಾನ್ಯಸ್ವರೂಪಸ್ಯ ಸತ್ತಾಸಾಮಾನ್ಯತಾ ತದಾ ॥ ೨ ॥

ಐವತ್ತಐದನೆಯ ಸರ್ಗ

೧. ಶ್ರೀರಾಮನು ಕೇಳಿದನು:—ಆತ್ಮಜ್ಞಾನವೆಂಬ ಹಗಲನ್ನು ಬೆಳಗಿಸತಕ ಕೇವಲ ಸೂರ್ಯಪ್ರಾಯರಾದಂಥ, ನನ್ನ ಸಂಶಯಗಳೆಂಬ ತೃಣರಾಶಿಯನು ಸುಟ್ಟು ನಾಶಮಾಡತಕ್ಕ ಅಗ್ನಿಯಾಗಿರುವಂಥ ಅಜ್ಞಾನಪ್ರಯುಕ್ತಗಳಾದ ತಾಪ ತ್ರಯಗಳೆಂಬ ಸಂತಾಪವನ್ನು ಶಮನಗೊಳಿಸಬಲ್ಲ ಚಂದ್ರನಾಗಿರುವಂಥ, ಮತ್ತು ಈಶ್ವರ ಸ್ವರೂಪರಾದ ಗುರುವರ್ಯರೇ, ತಾವು ಹಿಂದಿನ ಸರ್ಗದಲ್ಲಿ ಈಗಲೇ ಹೇಳಿದ ಸತ್ತಾಸಾಮಾನ್ಯವೆಂಬುದು ಯಾವುದು? ವಿವರಿಸಿ ಬೋಧಿಸಬೇಕೆಂದು ಪ್ರಾರ್ಥಿಸುವೆನು.

೨. ಶ್ರೀ ವಸಿಷ್ಠನು ಹೇಳಿದನು:—ಚಿತ್ತಿನ ಅವಾಂತರ ಭೇದಗಳನ್ನೆಲ್ಲ ತೊಡೆದು ಹಾಕಿ ಚಿತ್ಸಾಮಾನ್ಯ ಸ್ವರೂಪಭೂತವಾದ ಚೇತ್ಯಾಭಾವವನ್ನು ಆತ್ಯಂತಿಕವಾಗಿ ಭಾವನೆಮಾಡುವುದರ ದೆಸೆಯಿಂದ ಚೇತ್ಯ ಸಂಸ್ಕಾರಗಳೂ ಸಂಪೂರ್ಣವಾಗಿ ನಾಶಹೊಂದುವವು. ಇದರ ಮೂಲಕ ಯಾವಾಗ ಚಿತ್ತವು ಚೆನ್ನಾಗಿ ಕ್ಷಯಹೊಂದಿ ಬಿಡುವದೋ ಆಗ ಸ್ವತಃ ಸಿದ್ಧಿಸತಕ್ಕಂತಹ ಚಿತ್ತು ಮತ್ತು ಅಚಿತ್ತುಗಳೆರಡರಲ್ಲಿಯೂ ಅನುಗತವಾದ ಸತ್ತೆಯೇ ಸತ್ತಾಸಾಮಾನ್ಯವೆನ್ನಿಸುವದು.

ನೂನಂ ಚೈತ್ಯಾಂಶರಹಿತಾ ಚಿದ್ಯದಾತ್ಮನಿ ಲೀಯತೇ |
ಅಸದ್ರೂಪವದತ್ಯಚ್ಛಾ ಸತ್ತಾಸಾಮಾನ್ಯತಾ ತದಾ ॥ ೩ ॥

ಯದಾ ಸರ್ವಮಿದಂ ಕಿಂಚಿತ್ಸಬಾಹ್ಯಾಭ್ಯಂತರಾತ್ಮಕಂ |
ಅಪಲಪ್ಯ ವಸೇಚ್ಚ್ರೀತಃ ಸತ್ತಾಸಾಮಾನ್ಯತಾ ತದಾ ॥ ೪ ॥

ಯದಾ ಸರ್ವಾಣಿ ದೃಶ್ಯಾನಿ ಸತ್ತಾ ಸಾಮಾನ್ಯವೇದನಂ |
ಸ್ವರೂಪೇಣ ಸ್ವರೂಪಾಭಂ ಸತ್ತಾ ಸಾಮಾನ್ಯತಾ ತದಾ ॥ ೫ ॥

---

೩. ಸಕಲ ವೃತ್ತಿಗಳಲ್ಲಿಯೂ ಪ್ರತಿಬಿಂಬಿತವಾದ ಚಿತ್ತು ಯಾವಾಗ ಸಮಸ್ತ ದೃಶ್ಯಗಳೂ ತತ್ತ್ವಜ್ಞಾನದಿಂದ ಬಾಧಿತಗಳಾಗಿ ಇಲ್ಲದೆ ಹೋಗಿ ಬಿಡುವ ಕಾರಣ ಚೇತ್ಯಾಂಶಗಳಾದ ವೃತ್ತಿಗಳಿಂದಲೂ ವೃತ್ತಿ ವಿಷಯಗಳಿಂದಲೂ ರಹಿತವಾಗಿ ಸ್ವಾತ್ಮಸ್ವರೂಪದಲ್ಲಿ ಬಿಂಬ ಚೈತನ್ಯದಲ್ಲಿ ಲಯಹೊಂದಿ ಬಿಡುವುದೋ ಆಗ ಆಕಾಶದಂತೆ ಅತ್ಯಂತ ನಿರ್ಮಲವಾದ ಸತ್ತಾಸಾಮಾನ್ಯಸ್ಥಿತಿಯು ಉಂಟಾಯಿತೆಂದು ತಿಳಿಯಬೇಕು.

೪. ಚಿತ್ತವೃತ್ತಿಗಳಲ್ಲಿ ಅಭಿವ್ಯಕ್ತವಾದ ಅಖಂಡ ಚೈತನ್ಯವು ಯಾವಾಗ ಬಾಹ್ಯ ಮತ್ತು ಅಭ್ಯಂತರ ರೂಪ ಸಕಲ ವಸ್ತುಗಳಿಂದ ಕೂಡಿರುವ ಈ ಸಮಸ್ತ ದೃಶ್ಯ ಜಗತ್ತು ಅಧಿಷ್ಠಾನ ಚೈತನ್ಯದಲ್ಲಿ ಅಧ್ಯಸ್ತವಾಗಿರುವ ಕಾರಣ ಮಿಥ್ಯಾಭೂತವಾದುದೇ ಸರಿ ಎಂದು ಅಪಲಾಪ ಮಾಡಿ (ದೃಶ್ಯ ಜಗತ್ತನ್ನು ಲಯಗೊಳಿಸಿ) ಕೇವಲವಾದ ಸ್ವಸ್ವರೂಪದಲ್ಲಿ ವಾಸಮಾಡಿಕೊಂಡಿರುವುದೋ ಆಗ ಸತ್ತಾಸಾಮಾನ್ಯತೆಯುಂಟಾಯಿತೆಂದು ತಿಳಿಯಬೇಕು.

೫. "ಈ ಸಕಲ ದೃಶ್ಯಗಳೂ ತಮ್ಮ ಪಾರಮಾರ್ಥಿಕ ರೂಪದಿಂದ ಸ್ವರೂಪವಾಗಿಯೇ ಪ್ರಸಿದ್ಧವಾಗಿರುವವು. ಬೇರೆಯಲ್ಲವು" ಎಂದು ಸತ್ತಾಸಾಮಾನ್ಯಾತ್ಮಕವಾದ ಅರಿವು (ಜ್ಞಾನವು) ಯಾವಾಗ ಉಂಟಾಗುವದೋ ಆಗ ಎಲ್ಲವೂ ಚಿನ್ಮಾತ್ರವಾಗಿ ಬಿಡುವದು. ಅದೇ ಸತ್ತಾಸಾಮಾನ್ಯತೆಯು.

ಕೂರ್ಮೋಽಂಗಾನಿವ ದೃಶ್ಯಾನಿ ಲೀಯಂತೇ ಸ್ವಾತ್ಮನಾತ್ಮನಿ ।
ಅಭಾವಿತಾನ್ಯೇವ ಯದಾ ಸತ್ತಾಸಾಮಾನ್ಯತಾ ತದಾ ॥ ೬ ॥

ದೃಷ್ಟಿರೇಷಾ ಹಿ ಪರಮಾ ಸದೇಹಾದೇಹಯೋಃ ಸದಾ ।
ಮುಕ್ತಯೋಃ ಸಂಭವತ್ಯೇವ ತುರ್ಯಾತೀತ ಪದೋಪದಾ ॥ ೭ ॥

ವ್ಯುತ್ಥಿತಸ್ಯ ಭವತ್ಯೇಷಾ ಸಮಾಧಿಸ್ಥಸ್ಯ ಚಾನಘ ।
ಜ್ಞಸ್ಯ ಕೇವಲಮಜ್ಞಸ್ಯ ನ ಭವತ್ಯೇವ ಬೋಧಜಾ ॥ ೮ ॥

---

೬. ಆಮೆಯ ದೇಹದೊಳಗೆ ಅದರ ಅವಯವಗಳೆಲ್ಲವೂ ಹೇಗೆ ಸಹಜವಾಗಿಯೇ ಅಡಗಿಬಿಡುವವೋ ಹಾಗೆ ಈ ಸಕಲ ದೃಶ್ಯ ಜಗತ್ತುಗಳೂ ನಮ್ಮ ಭಾವನ ಪ್ರಯತ್ನವಿಲ್ಲದೆಯೇ (ಸಹಜ ದೃಷ್ಟಿಯಿಂದ) ತಾನಾಗಿ ತನ್ನಿಂದಲೇ ತನ್ನ ಆತ್ಮನಲ್ಲಿ ಯಾವಾಗ ಲಯ ಹೊಂದುವವೋ ಆಗ ಸತ್ತಾಸಾಮಾನ್ಯ ಸ್ಥಿತಿಯುಂಟಾಯಿತೆಂದು ತಿಳಿಯಬೇಕು.

೭. ಇದುವರೆವಿಗೆ ನಾನು ಈಗ ಹೇಳಿದ ದೃಷ್ಟಿಯು ಸರ್ವೋತ್ತಮವಾದುದು. (ಮತ್ತು ಏಳನೆಯ ಭೂಮಿಕೆಯಲ್ಲಿ ಪರಿನಿಷ್ಠಿತವಾದುದು.) ತುರ್ಯಾತೀತ ಸ್ಥಿತಿಗೆ (ನಿರ್ವಿಕಲ್ಪ ನಿಷ್ಪ್ರಪಂಚಾದ್ವಿತೀಯಾತ್ಮರೂಪ) ಸಮಾನವಾದುದು. ಇದು ಸದೇಹ ಮುಕ್ತರಿಗೂ (ಜೀವನ್ಮುಕ್ತ) ವಿದೇಹ ಮುಕ್ತರಿಗೂ ಸರ್ವದಾ ಸಮಾನವಾಗಿಯೇ ಸಂಭವಿಸುವದು. ಸಂದೇಹವಿಲ್ಲ.

೮. ಅವಿದ್ಯಾದಿ ಸಕಲ ದೋಷರಹಿತನಾದ ರಾಮನೇ, ಕೇಳು. ತತ್ತ್ವಜ್ಞಾನ ಜನ್ಯವಾದ ಈ ದೃಷ್ಟಿಯು (ಐದನೆಯ ಭೂಮಿಕೆಯಲ್ಲಿ) ಸಮಾಧಿನಿಷ್ಠನಾಗಿರುವ ಜ್ಞಾನಿಗೂ ಸಂಭವಿಸುವದು. ಮತ್ತು (ಏಳನೆಯ ಭೂಮಿಕೆಯಲ್ಲಿರುತ್ತಾ) ಸಮಾಧಿಯಿಂದ ಬಹಿರ್ಮುಖನಾಗಿರುವ ಜ್ಞಾನಿಗೂ ಮಾತ್ರ ಸಂಭವಿಸುವದು. ಆದರೆ ಜ್ಞಾನಶೂನ್ಯನಾದ ಪಶುಪ್ರಾಯನಿಗೆ ಎಂದೆಂದಿಗೂ ಈ ದೃಷ್ಟಿಯು ಸಂಭವಿಸುವದೇ ಇಲ್ಲ.

ಅಸ್ಯಾಂ ದೃಶಿ ಸ್ಥಿತಾಃ ಸರ್ವೇ ಜೀವನ್ಮುಕ್ತಾ ಮಹಾಶಯಾಃ |
ಸಿದ್ಧಾ ರಸಾ ಇವ ಭುವಿ ವ್ಯೋಮವೀಥ್ಯಾಮಿವಾನಿಲಾಃ || ೯ ||

ಅಸ್ಮತ್ಪ್ರಭೃತಯಃ ಸರ್ವೇ ನಾರದಾದ್ಯಾಶ್ಚ ರಾಘವ |
ಬ್ರಹ್ಮವಿಷ್ಣ್ವೀಶ್ವರಾದ್ಯಾಶ್ಚ ದೃಷ್ಟಾವಸ್ಯಾಂ ವ್ಯವಸ್ಥಿತಾಃ || ೧೦ ||

ಏತಾಮಾಲಂಬ್ಯ ಪದವೀಂ ಸಮಸ್ತಭಯನಾಶಿನೀಂ |
ಉದ್ದಾಲಕೋಽಸಾವವಸದ್ಯಾವದಿಚ್ಛಂ ಜಗದ್ಗೃಹೇ || ೧೧ ||

ಅಥ ಕಾಲೇನ ಬಹುನಾ ಬುದ್ಧಿಸ್ತಸ್ಯ ಬಭೂವ ಹ |
ವಿದೇಹಮುಕ್ತಸ್ತಿಷ್ಠಾಮಿ ದೇಹಂ ತ್ಯಕ್ತ್ವೇತಿ ನಿಶ್ಚಲಾ || ೧೨ ||

---

೯. ಜೀವನ್ಮುಕ್ತರಾದ ಸಕಲ ಮಹಾನುಭಾವರೂ ಈ ಸತ್ತಾಸಾಮಾನ್ಯ ದೃಷ್ಟಿಯಲ್ಲಿದ್ದುಕೊಂಡು ಪಾರದಾದಿ ಸಿದ್ಧರಸಗಳೆಲ್ಲವೂ ಭೂಮಿಯೊಳಗೂ ವಾಯುಗಳು ಗಗನ ಮಾರ್ಗದಲ್ಲಿಯೂ ಇರುವಂತೆ ಐಹಿಕಗಳೂ ಆಮುಷ್ಮಿಕಗಳೂ ಆದ ಸಕಲ ಭೋಗಗಳಲ್ಲಿಯೂ ತೃಷ್ಣಾರಹಿತರಾಗಿಯೂ ರಾಗಾದಿಗಳ ಸಂಪರ್ಕವಿಲ್ಲದವರಾಗಿಯೂ, ನಿರ್ಲಿಪ್ತರಾಗಿಯೂ ಇರುವರು.

೧೦. ಅಯ್ಯಾ ರಾಘವ, ಅಸ್ಮದಾದಿ (ವಸಿಷ್ಠಾದಿ) ಸಕಲ ಬ್ರಹ್ಮರ್ಷಿಗಳೂ ನಾರದಾದಿ ದೇವರ್ಷಿಗಳೂ ಮತ್ತು ಬ್ರಹ್ಮ, ವಿಷ್ಣು, ಈಶ್ವರ ಮುಂತಾದ ಸಮಸ್ತ ದೇವತೆಗಳೂ ಈ ದೃಷ್ಟಿಯಲ್ಲಿಯೇ ನಿಶ್ಚಲರಾಗಿ ಪರಿನಿಷ್ಠಿತರಾಗಿರುವೆವು.

೧೧. ಸಂಸಾರ ಭಯ ಮುಂತಾದ ಸಕಲ ವಿಧ ಭಯಗಳನ್ನೂ ನಾಶಗೊಳಿಸತಕ್ಕ ಈ ಉತ್ತಮೋತ್ತಮವಾದ ಪದವಿಯನ್ನು ಆಶ್ರಯಿಸಿಯೇ ಆ ಉದ್ದಾಲಕನು ಈ ಜಗತ್ತೆಂಬ ಮನೆಯಲ್ಲಿ ತನ್ನ ಇಚ್ಛೆಯಿರುವವರೆಗೆ (ಪ್ರಾರಬ್ಧನಾಶಪರ್ಯಂತ) ವಾಸಮಾಡಿಕೊಂಡು ಇದ್ದನು.

೧೨. ಅನಂತರ ಹೀಗೆ ಬಹುಕಾಲ ಕಳೆದುಹೋದ ತರುವಾಯ ಈ ಪಾಂಚಭೌತಿಕವಾದ ದೇಹವನ್ನು ಪರಿತ್ಯಾಗಮಾಡಿ ವಿದೇಹಮುಕ್ತನಾಗಿರಬೇಕೆಂಬ ನಿಶ್ಚಲವಾದ ಸಂಕಲ್ಪವು ಆತನಿಗೆ ತಾನಾಗಿಯೇ ಉಂಟಾಯಿತು.

ಏವಂ ಚಿಂತಿತವಾನದ್ರೇರ್ಗುಹಾಯಾಂ ಪಲ್ಲವಾಸನೇ ।
ಬದ್ಧಪದ್ಮಾಸನಸ್ತಸ್ಥಾವರ್ಧೋನ್ಮೀಲಿತಲೋಚನಃ ॥ ೧೩ ॥

ಸಂಯಮ್ಯ ಗುದಸಂರೋಧಾದ್ದ್ವಾರಾಣಿ ನವ ಚೇತಸಃ ।
ಮಾತ್ರಾಸ್ಪರ್ಶಾನ್ವಿಚಿನ್ವಾನೋ ಭಾವಿತಸ್ವಾಂಗಚಿದ್ಧನಃ ॥ ೧೪ ॥

ಸಂರುದ್ಧಪ್ರಾಣಪವನಃ ಸಮಸಂಸ್ಥಾನ ಕಂಧರಃ ।
ತಾಲುಮೂಲತಲಾಲಗ್ನಜಿಹ್ವಾಮೂಲೋ ಲಸನ್ಮುಖಃ ॥ ೧೫ ॥

---

೧೩. ಈ ಪ್ರಕಾರವಾಗಿ, ತನ್ನ ಮನಸ್ಸಿನಲ್ಲಿ ದೃಢನಿಶ್ಚಯಮಾಡಿದ ಆ ಉದ್ದಾಲಕನು ಅದೇ ಪರ್ವತದ ಗುಹೆಯಲ್ಲಿ ಅದೇ ಪಲ್ಲವಾಸನದ ಮೇಲೆ (ಚಿಗುರೆಲೆಗಳಿಂದ ರಚಿತವಾದ ಪೀಠ) ಪದ್ಮಾಸನವನ್ನು ಹಾಕಿಕೊಂಡು ಸ್ವಲ್ಪಮಟ್ಟಿಗೆ ಮಾತ್ರ ತನ್ನ ಕಣ್ಣುಗಳನ್ನು ತೆರೆದುಕೊಂಡವನಾಗಿ ಕುಳಿತಿದ್ದನು.

೧೪. ಆಗ ಆತನು ತನ್ನ ಗುದಸ್ಥಾನವನ್ನು (ಅಪಾನವಾಯುವಿನ ದ್ವಾರ) ದೃಢವಾಗಿ ಅದುಮಿಕೊಂಡು (ನಿರೋಧಮಾಡಿ) ಹಾಗೆಯೇ ಮನಸ್ಸಿನ ಒಂಭತ್ತು ದ್ವಾರಗಳನ್ನೂ (ಅಂತರಿಂದ್ರಿಯವಾದ ಮನಸ್ಸು ದೇಹದ ಹೊರಗಡೆ ಪ್ರಸರಿಸುವದಕ್ಕೆ ಯೋಗ್ಯವಾದ ಶರೀರದಲ್ಲಿರುವ ನವದ್ವಾರಗಳು) ಬಿಗಿಹಿಡಿದು, ಶಬ್ದಸ್ಪರ್ಶಾದಿ ವಿಷಯಗೋಚರವಾದ ವೃತ್ತಿಗಳನ್ನು ಒಂದೊಂದಾಗಿ ಹುಡುಕಿ, ಅವುಗಳನ್ನೆಲ್ಲ ಕ್ರಮವಾಗಿ ತನ್ನ ಹೃದಯದಲ್ಲಿ ಸೇರಿಸಿಕೊಂಡ ಬಳಿಕ, ಅವುಗಳ ಪರಮಾರ್ಥರೂಪವು ಸ್ವಾತ್ಮಸ್ವರೂಪದೊಡನೆ ಏಕೀಕೃತವಾದ (ಅಭಿನ್ನವಾದ) ಚಿದೇಕರಸರೂಪವೇ ಎಂದು ಭಾವನೆ ಮಾಡುತ್ತಿದ್ದನು.

೧೫. ಪ್ರಾಣಾದಿ ವಾಯುಗಳ ಸಂಚಾರವನ್ನು ನಿರೋಧಮಾಡಿಬಿಟ್ಟನು. (ತಡೆದು ನಿಲ್ಲಿಸಿದನು) ಕಂಠವನ್ನು (ಕುತ್ತಿಗೆ) ಒಂದೇ ಸಮನಾಗಿ ನೆಟ್ಟಗೆ ನಿಲ್ಲಿಸಿಕೊಂಡಿದ್ದನು. ಮತ್ತು ತಾಲು ಮೂಲತಲದಲ್ಲಿ (ಕಂಠಛಿದ್ರ=ಗಂಟಲು) ಜಿಹ್ವಾಮೂಲವನ್ನು (ನಾಲಗೆಯ ಮೊದಲು) ಇರಿಸಿ ಅದರಿಂದ ಆ ದ್ವಾರವನ್ನು ಮುಚ್ಚಿಕೊಂಡು ತನ್ನ ತೇಜೋಮಯವಾದ ಮುಖವು ಉನ್ನತವಾಗಿರುವಂತೆ ಮಾಡಿಕೊಂಡಿದ್ದನು.

ನ ಬಹಿರ್ನಾಂತರೇ ನಾಥೋ ನೋರ್ಧ್ವೇ ನಾರ್ಥೇ ನ ಶೂನ್ಯಕೇ |
ಸಂಯೋಜಿತ ಮನೋದೃಷ್ಟಿರ್ದಂತೈರ್ದಾಂತಾನಸಂಸ್ಪೃಶನ್ || ೧೬ ||

ಪ್ರಾಣಪ್ರವಾಹಸಂರೋಧಸಮಃ ಸ್ವಚ್ಛಾನನಚ್ಛವಿಃ |
ಅಂಗಚಿತ್ಸಂವಿದುತ್ಥಾನರೋಮಕಂಟಕಿತಾಂಗಭೂಃ || ೧೭ ||

ಅಂಗಚಿತ್ಸಂ ವಿದಾಭ್ಯಾಸಾಚ್ಚಿತ್ಸಾಮಾನ್ಯಮುಪಾದದೇ |
ತದಭ್ಯಾಸಾದವಾಪಾಂತರಾನಂದಸ್ಪಂದಮುತ್ತಮಂ || ೧೮ ||

---

೧೬. ಆಗ ಆತನ ಮನಸ್ಸೂ ಮತ್ತು ದೃಷ್ಟಿಯೂ ಹೊರಗಡೆಯೂ ಸೇರುತ್ತಿರಲಿಲ್ಲ. ಒಳಗಡೆಯೂ ಸೇರಲಿಲ್ಲ. ಕೆಳಗೂ ಸೇರಲಿಲ್ಲ. ಮೇಲೆಯೂ ಸೇರಲಿಲ್ಲ. ರೂಪಾದಿ ವಿಷಯಗಳಲ್ಲಿಯೂ ಒಟ್ಟಿಗೆ ಸೇರಿರಲಿಲ್ಲ. ಮತ್ತು ಶೂನ್ಯದಲ್ಲಿಯೂ ಕೂಡಿರಲಿಲ್ಲ. ತನ್ನ ದಂತಗಳಿಂದ ದಂತಗಳನ್ನು ಸೋಕಿಸಿಕೊಳ್ಳದಂತೆ ನಿಶ್ಚಲನಾಗಿ ಕುಳಿತಿದ್ದನು.

೧೭. ಅಯ್ಯಾ ರಾಮ, ಪ್ರಾಣಾದಿ ವಾಯುಗಳ ಉಚ್ಛ್ವಾಸನಿಶ್ವಾಸ ರೂಪ ಸಂಚಾರವನ್ನು ಪೂರ್ತಿಯಾಗಿ ನಿರೋಧಮಾಡಿದವನಾಗಿದ್ದರೂ ಆತನು ಒಂದೇ ಸಮನಾಗಿಯೇ (ಶರೀರ, ಮನಸ್ಸು—ಇಂದ್ರಿಯಾದಿಗಳ ಚಾಂಚಲ್ಯಶೂನ್ಯನಾಗಿಯೇ) ಕದಲದೆ ಕುಳಿತಿದ್ದನು. ಆತನ ಮುಖಕಾಂತಿಯು ಅತ್ಯಂತ ಸ್ವಚ್ಛವಾಗಿ ವಿರಾಜಮಾನವಾಗಿತ್ತು. (ಅವನ ಮುಖವು ಸೌಮ್ಯವಾಗಿಯೂ ಪ್ರಸನ್ನವಾಗಿಯೂ ಇತ್ತು.) ಮತ್ತು ಆತನು ಚಿದ್ರೂಪ ಬ್ರಹ್ಮಾನಂದವನ್ನು ಅನುಭವಿಸುತ್ತಿದ್ದ ಕಾರಣ ಆತನ ಮೈಮೇಲೆಲ್ಲ ನೆಟ್ಟಗೆ ಊರ್ಧ್ವಮುಖವಾಗಿ ರೋಮಾಂಚವುಂಟಾಗಿದ್ದಿತು.

೧೮. ಮೊದಲು ಅಂತಃಕರಣೈಕದೇಶಭೂತಗಳಾದ ವೃತ್ತಿ ಭೇದಗಳಲ್ಲಿ ಪ್ರತಿಬಿಂಬಿಸಿದ ಮತ್ತು ವೃತ್ತಿಜ್ಞಾನದಿಂದ ಪರಿಚ್ಛಿನ್ನವಾದ ಚಿತ್ತು, ತನಗೆ ಉಪಾಧಿಗಳಾಗಿರುವ ವೃತ್ತಿಭೇದಗಳನ್ನು ಕ್ರಮವಾಗಿ ಲಯಗೊಳಿಸುತ್ತಾ ಬಂದು ಅದರ ಅಭ್ಯಾಸ ಬಲದಿಂದ ಬಿಂಬವಾದ ಚಿತ್ಸಾಮಾನ್ಯವನ್ನು ಪ್ರವೇಶಮಾಡಿತು. ಬಳಿಕ, ಹೀಗೆ ಬಿಂಬಭೂತವಾದ ಚಿತ್ಸಾಮಾನ್ಯವನ್ನು ಸಂತತವಾಗಿ ಅನುಸಂಧಾನ ಮಾಡುವದರಿಂದಲೂ ಅದೇ ಅಭ್ಯಾಸದಿಂದಲೂ ತನ್ನ ಹೃದಯದೊಳಗೆ ಸರ್ವೋತ್ಕೃಷ್ಟವಾದ (ನಿರತಿಶಯ) ಆನಂದಾವಿರ್ಭಾವವನ್ನು ಅನುಭವಿಸಿತು.

ತದಾಸ್ವಾದನತೋ ಲೀನಚಿತ್ಸಾಮಾನ್ಯದಶಾಕ್ರಮಂ |
ವಿಶ್ವಂಭರ ಮನಂತಾತ್ಮಾ ಸತ್ತಾಸಾಮಾನ್ಯಮಾಯಯೌ ॥ ೧೯ ॥

ತಸ್ಥೌ ಸಮಸಮಾಭೋಗಃ ಪರಾಂ ವಿಶ್ರಾಂತಿಮಾಗತಃ |
ಅನಾನಂದ ಸಮಾನಂದ ಮುಗ್ಧಮುಗ್ಧ ಮುಖದ್ಯುತಿಃ ॥ ೨೦ ॥

---

೧೯. ಇಂತಹ ನಿರತಿಶಯ ಬ್ರಹ್ಮಾತ್ಮಾನಂದರಸವನ್ನು ಆಸ್ವಾದನೆಮಾಡು ವದರಿಂದ ಅದರಲ್ಲಿಯೇ ಮಗ್ನವಾದ ಆತನ ಚಿತ್ತವು ಕ್ರಮೇಣ ಚಿತ್ಸಾಮಾನ್ಯದಶೆ ಯನ್ನೂ ಅಡಗಿಸಿಕೊಂಡು ಬಿಟ್ಟು ನಿರವಧಿಕ (ಅಪರಿಚ್ಛಿನ್ನ) ಸ್ವರೂಪವೂ ಸಕಲ ವಿಶ್ವವನ್ನೂ ತನ್ನೊಳಗೆ ಅಡಗಿಸಿಕೊಂಡು ಅದಕ್ಕೆ ಆಧಾರಭೂತವೂ ಆದ ಸತ್ತಾ ಸಾಮಾನ್ಯದಶೆಯನ್ನು ಪಡೆಯಿತು.

[ನಿರತಿಶಯ ಬ್ರಹ್ಮಾನಂದರಸವನ್ನು ಆಸ್ವಾದಿಸದೆ ಇರುವಷ್ಟು ಕಾಲದವರೆಗೆ ಮಾತ್ರವೇ ಸಾಧಕನ ಮನಸ್ಸು-ಪ್ರಾಣವಾಯುಗಳ ನಿರೋಧದಿಂದುಂಟಾಗುವ ಕ್ಲೇಶಗಳನ್ನು ಸಹಿಸಲಾರದೆ ಹೊರಗೆ ಪ್ರವರ್ತಿಸುವದು. ನಿರತಿಶಯಾನಂದರಸ ವನ್ನು ಆಸ್ವಾದನೆ ಮಾಡಿಬಿಟ್ಟರೋ ಮನಸ್ಸು ಆ ಆನಂದರಸಾಸ್ವಾದನೆಯಲ್ಲಿಯೇ (ಗುಡಪಿಪೀಲಿಕಾ ನ್ಯಾಯದಂತೆ) ಮಗ್ನವಾಗಿ ಅದನ್ನು ಬಿಡದೆ ಅಂಟಿಕೊಂಡಿದ್ದು ಕಾಲಾಂತರದಲ್ಲಿ ತನ್ನ ಸ್ವರೂಪವನ್ನೂ. ಮರೆತುಬಿಟ್ಟು ಸ್ವಾನುಗತವಾದ ಚಿತ್ಸಾಮಾನ್ಯವು ನಿರತಿಶಯ, ಸ್ವಪ್ರಕಾಶ, ಸತ್ತಾಸಾಮಾನ್ಯಭಾವವನ್ನು ಹೊಂದುವದು. ಹೀಗೆ ಚಿತ್ಸಾಮಾನ್ಯ ದಶಾಕ್ರಮದ ಲಯವೇ ಸತ್ತಾಸಾಮಾನ್ಯ ಪ್ರಾಪ್ತಿಯೆನ್ನಿಸುವದು ಎಂದು ಭಾವ.]

[ಗುಡಪಿಪೀಲಿಕಾ ನ್ಯಾಯ. ಬೆಲ್ಲವನ್ನು ಮುತ್ತಿದ ಇರುವೆಯು ಅದಕ್ಕೆ ಅಂಟಿಕೊಂಡು ಅದನ್ನೇ ಸವಿಯುತ್ತಾ ಏನೇ ಆದರೂ ಅದನ್ನು ಬಿಡದೆ ಮಗ್ನವಾಗಿ ರುವದು. ಕೊನೆಗೆ ತನ್ನನ್ನೇ ಮರೆತು ಬಿಡುವದು. ಅದರಂತೆ]

೨೦. ಇಂತಹ ಸತ್ತಾಸಾಮಾನ್ಯಸ್ಥಿತಿಯಲ್ಲಿ ಆ ಉದ್ದಾಲಕನು ಆತ್ಯಂತಿಕ ವಿಕ್ಷೇಪ ವೈಷಮ್ಯ ಶೂನ್ಯವಾದ ಸ್ವರೂಪವುಳ್ಳವನಾಗಿ ಮತ್ತು ಅಸದೃಶವೂ ನಿರತಿಶ ಯವೂ ಆದ ಬ್ರಹ್ಮಾತ್ಮಾನಂದಾನುಭವದಿಂದ ಅತ್ಯಂತ ಪ್ರಸನ್ನವಾದ ಸುಂದರತಮ ವಾದ ಮುಖಕಾಂತಿಯುಳ್ಳವನಾಗಿ ಉತ್ತಮೋತ್ತಮವಾದ ವಿಶ್ರಾಂತಿಯನ್ನು ಪಡೆದವನಾಗಿದ್ದನು.

ಸಂಶಾಂತಾನಂದಪುಲಕಃ ಪದಂ ಪ್ರಾಪ್ಯಾಮಲಂ ಗತಃ |
ಚಿರಕಾಲಪರಿಕ್ಷೀಣ ಮನನಾದಿಭವಭ್ರಮಃ ॥ ೨೧ ॥

ಬಭೂವ ಸ ಮಹಾಸತ್ವೋ ಲಿಪಿಕರ್ಮಾರ್ಪಿತೋಪಮಃ |
ಸಮಃ ಕಲಾವಪೂರ್ಣೇನ ಶರದಚ್ಛಾಂಬರೇಂದುನಾ ॥ ೨೨ ॥

[ಬ್ರಹ್ಮಾನಂದವು ಸ್ವಭಾವಸಿದ್ಧವು. ಆದುದರಿಂದಲೇ ನಿತ್ಯವು, ನಿರತಿಶಯವು. ಉಳಿದವುಗಳೆಲ್ಲ ವಿಷಯೇಂದ್ರಿಯ ಸಂಯೋಗಜನ್ಯವು. ಆದಕಾರಣವೇ ಅನಿತ್ಯವು, ಸಾತಿಶಯವು. (ಹೆಚ್ಚುಕಡಿಮೆಯುಳ್ಳವುಗಳು.) ಸುಖಾಭಾಸಗಳು.

ಸತ್ಯಂ ಜ್ಞಾನಮನಂತಂ ಬ್ರಹ್ಮ | ವಿಜ್ಞಾನಮಾನಂದಂ ಬ್ರಹ್ಮ | "ರಸೋ ವೈಸಃ"|ರಸಗ್ಂ ಹ್ಯೇವಾಯಂ ಲಬ್ಧ್ವಾಽಽನಂದೀ ಭವತಿ|.ಕೋಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್–ಏಷಹ್ಯೇವಾನಂದಯತಿ ಇತ್ಯಾದಿ ಶ್ರುತಿ ಸಹಸ್ರಗಳು ಈ ವಿಷಯದಲ್ಲಿ ಪ್ರಮಾಣವು.

ಏತಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ
ಬೃಹದಾರಣ್ಯ ೪–೩–೩೨]

೨೧. ಜೀವಿಸಿರುವಾಗಲೇ ಮುಕ್ತಾವಸ್ಥೆಯನ್ನು ಪಡೆದು ಅಂದರೆ ಜೀವನ್ಮುಕ್ತನಾಗಿದ್ದಂಥ ಆ ಉದ್ದಾಲಕನು ಪ್ರಾರಬ್ಧಭೋಗಹೇತುವಾದ ಮಲಶೇಷಗಳನ್ನು ಹೀಗೆ ನಿಶ್ಶೇಷವಾಗಿ ಲಯಗೊಳಿಸಿ ಅತ್ಯಂತ ನಿರ್ಮಲನಾಗಿದ್ದಾಗ ಹಿಂದೆ ಆನಂದ ರಸಾಸ್ವಾದ ಸಮಯದಲ್ಲಿ ಅವನ ಮೈಮೇಲೆ ಕಾಣಿಸಿಕೊಂಡ ರೋಮಾಂಚವೆಲ್ಲವೂ ಪೂರ್ತಿಯಾಗಿ ಶಾಂತವಾಯಿತು. ಮತ್ತು ಚಿರಕಾಲದಿಂದ ಅನುಗತವಾಗಿದ್ದ ಮನನವೇ ಮೊದಲಾದ ಸಕಲ ಸಂಸಾರ ಭ್ರಾಂತಿಗಳೂ ನಿಶ್ಶೇಷವಾಗಿ ಕ್ಷೀಣವಾಗಿ ಕಳೆದುಹೋದುವು.

೨೨. ಮಹಾ ಸಾತ್ತ್ವಿಕನಾದ ಆ ಉದ್ದಾಲಕ ಮುನೀಂದ್ರನು ಆಗ ಚಿತ್ರಪಟದಲ್ಲಿ ಬರೆದಿರುವ ನಾನಾ ವರ್ಣಮಯವಾದ ಒಂದು ಮನುಷ್ಯಾಕೃತಿಯಂತೆ ನಿಶ್ಚಲನಾಗಿದ್ದನು. ಮತ್ತು ಶರತ್ಕಾಲದ ನಿರ್ಮಲಾಕಾಶದಲ್ಲಿ ಬೆಳಗುವ ಷೋಡಶಕಲಾ ಪರಿಪೂರ್ಣನಾದ ಪೂರ್ಣಿಮಾ ಚಂದ್ರನಿಗೆ ಸಮನಾಗಿ ಕಣ್ಗೊಳಿಸುತ್ತಿದ್ದನು.

ಉಪಶಶಾಮ ಶನೈರ್ದಿವಸೈರಸೌ-
    ಕತಿಪಯೈಃ ಸ್ವಪದೇ ವಿಮಲಾತ್ಮನಿ |
ತರುರಸಃ ಶರದಂತ ಇವಾಮಲೇ-
    ರವಿಕರೌಜಸಿ ಜನ್ಮದಶಾಂತಿಗಃ || ೨೩ ||

ಗತಸಕಲವಿಕಲ್ಪೋ ನಿರ್ವಿಕಾರೋಽಭಿರಾಮಃ-
    ಸಕಲಮಲವಿಲಾಸೋಪಾಧಿನಿರ್ಮುಕ್ತಮೂರ್ತಿಃ |
ವಿಗಲಿತಸುಖಮಾದ್ಯಂ ತತ್ಸುಖಂ ಪ್ರಾಪ ಯಸ್ಮಿಂ-
    ಸ್ತೃಣಮಿವ ಜಲರಾಶಾವೂಹ್ಯತೇ ಶಕ್ರಲಕ್ಷ್ಮೀಃ || ೨೪ ||

---

೨೩. ಅನಂತರ ಹೇಮಂತ ಋತುವಿನಲ್ಲಿ ವೃಕ್ಷಗಳ ರಸವು ಸೂರ್ಯಕಿರಣಗಳ ನಿರ್ಮಲವಾದ ತೇಜಸ್ಸಿನೊಳಗೆ ಅಡಗುವಂತೆ ಆ ಉದ್ದಾಲಕಮುನಿಯು ಪುನರ್ಜನ್ಮ ಪ್ರವಾಹರೂಪವಾದ ಅವಸ್ಥೆಯನ್ನು ಅತಿಕ್ರಮಿಸಿದವನಾಗಿ ಕ್ರಮೇಣ ಕೆಲವು ದಿನಗಳೊಳಗಾಗಿಯೇ ಅವಿದ್ಯಾದಿ ಸಕಲ ಮಲ (ದೋಷ) ಶೂನ್ಯವಾದ ತನ್ನ ಆತ್ಮಸ್ವರೂಪದಲ್ಲಿ ಶಾಂತಿಪಡೆದು ಐಕ್ಯಹೊಂದಿದನು.

["ನ ತಸ್ಯ ಪ್ರಾಣಾಃ ಉತ್ಕ್ರಾಮಂತಿ-ಅತ್ರೈವ ಸಮವನೀಯಂತೇ ಎಂಬ ಬೃಹದಾರಣ್ಯಕ ಶ್ರುತಿಗೆ ಅನುಸಾರವಾಗಿ ಆತ್ಮಜ್ಞನಾದ ಮುಕ್ತನ ಪ್ರಾಣಗಳು ಇತರ ಪ್ರಾಣಿಗಳ ಹಾಗೆ ಉತ್ಕ್ರಮಿಸುವದಿಲ್ಲವೆಂದು ಭಾವ.]

೨೪. ಕೂಡಲೆ, ಅವನ ಮನಸ್ಸಿನಲ್ಲಿ ಸಕಲ ವಿಕಲ್ಪಗಳು ಮಾಯವಾದುವು. ಜನನಮರಣಾದಿ ವಿಕಾರಗಳೆಲ್ಲವೂ ಇಲ್ಲವಾದವು. ದಿವ್ಯವಾದ ಬ್ರಹ್ಮ ತೇಜಸ್ಸಿನಿಂದ ಸೌಮ್ಯನಾಗಿ ವಿರಾಜಿಸುತ್ತಿದ್ದನು. ಸಕಲ ವಿಧವಾದ ದೋಷಗಳಿಗೂ ವಿಲಾಸ ಸ್ಥಾನವಾದ ದೇಹಾದ್ಯುಪಾಧಿಗಳ ಸಂಬಂಧದಿಂದ ಮುಕ್ತವಾದ ಶುದ್ಧಾತ್ಮರೂಪನಾದನು. ಮತ್ತು ಅವನು ಯಾವ ಆನಂದದ ದೆಸೆಯಿಂದ ಹೈರಣ್ಯಗರ್ಭಾಂತವಾದ ಸಕಲ ವಿಷಯ ಸುಖಗಳೂ ಮಹಾ ಅಗ್ನಿಯ ದೆಸೆಯಿಂದ ಕಿಡಿಗಳು ಹೊರಡುವಂತೆ ಉತ್ಪನ್ನವಾಗಿ ಹೊರಡುವವೋ ಅಂತಹ ಅನಿರ್ವಾಚ್ಯವಾದ ಆದ್ಯವಾದ ನಿತ್ಯನಿರವಧಿಕ ನಿರತಿಶಯವಾದ ಸ್ವಾತ್ಮರೂಪ ಆನಂದವನ್ನು ಪಡೆದನು. ದೊಡ್ಡ ಜಲರಾಶಿಯಲ್ಲಿ (ಸಮುದ್ರದಲ್ಲಿ) ಸಣ್ಣ ಹುಲ್ಲುಕಡ್ಡಿಯು ತೇಲಿಹೋಗುವಂತೆ ಆ ನಿರವಧಿಕ ಪರಮಾನಂದದಲ್ಲಿ ದೇವೇಂದ್ರನ ಸಂಪತ್ತೂ ಕೂಡ ಅತ್ಯಂತ ತುಚ್ಛವಾಗಿ ಕೊಚ್ಚಿ ಹೋಗುತ್ತಿರುವದು.

ಅಪರಿಮಿತನಭೋಽಂತರ್ವ್ಯಾಪಿದಿಗ್ವ್ಯಾಪಿ ಪೂರ್ಣಂ
ಭುವನಭರಣಶೀಲಂ ಭೂರಿಭವ್ಯೋಪಸೇವ್ಯಂ |
ಕಥನಗುಣಮತೀತಂ ಸತ್ಯಮಾನಂದಮಾದ್ಯಂ
ಪರಮಸುಖಮನಂತಂ ಬ್ರಾಹ್ಮಣೋಽಸೌ ಬಭೂವ ॥ ೨೫ ॥

[ತೈತ್ತಿರೀಯೋಪನಿಷತ್ತಿನ ಆನಂದವಲ್ಲೀ ಎಂಬ ದ್ವಿತೀಯಾಧ್ಯಾಯದಲ್ಲಿ ಮನುಷ್ಯಾನಂದ ಮೊದಲುಗೊಂಡು ದೇವ, ಇಂದ್ರ, ಬೃಹಸ್ಪತಿ, ಪ್ರಜಾಪತಿಗಳ ಆನಂದದವರೆವಿಗೆ ನೂರು ನೂರು ಭಾಗದಷ್ಟು ಹೆಚ್ಚು ಎಂದು ಹೇಳಿ ಕೊನೆಗೆ ಪ್ರಜಾಪತಿಯ ನೂರು ಆನಂದಗಳು ಸ ಏಕೋ ಬ್ರಹ್ಮಣ ಆನಂದಃ ಎಂದು ಪ್ರತಿಪಾದಿತವಾಗಿರುವದು. ಇದರಿಂದ ಬ್ರಹ್ಮಾನಂದವು ಸ್ವರೂಪವಾದ ಕಾರಣ ನಿತ್ಯ ನಿರತಿಶಯವೆಂದೂ ನಿರವಧಿಕವಾದುದೆಂದೂ ಉಕ್ತವಾಗಿದೆ.]

೨೫. ಆ ಉದ್ದಾಲಕನೆಂಬ ಬ್ರಾಹ್ಮಣನು ಆಗ ಒಂದೊಂದು ಬ್ರಹ್ಮಾಂಡದಲ್ಲಿಯೂ ವಿಭಿನ್ನವಾಗಿರುವ ಅನಂತಾಕಾಶಗಳನ್ನೂ ಕೂಡ ತನ್ನೊಳಗೆ ಅಳವಡಿಸಿ ವ್ಯಾಪಿಸಿಕೊಂಡಿರುವ ಸಕಲ ದಿಕ್ಕುಗಳನ್ನೂ ಕೂಡ ವ್ಯಾಪಿಸಿರುವುದಾಗಿಯೂ (ಅಂದರೆ ದೇಶಕೃತ ಪರಿಚ್ಛೇದ ಶೂನ್ಯ) ಸರ್ವದಾ ಸರ್ವವಸ್ತುಗಳಲ್ಲಿ ಪರಿಪೂರ್ಣವಾಗಿಯೂ ಸಕಲ ಭೂತಗಳಿಗೂ ವಸ್ತುಗಳಿಗೂ ಆಧಾರಗಳಾದ ಸಮಸ್ತ ಭುವನಗಳನ್ನೂ ಧರಿಸುವ ಮತ್ತು ಪೋಷಿಸುವ ಸ್ವಭಾವವುಳ್ಳದ್ದಾಗಿಯೂ (ಅಂದರೆ ಸರ್ವಾಧಿಷ್ಠಾನವಾಗಿರುವ ಕಾರಣ ವಸ್ತುಕೃತ ಭೇದಶೂನ್ಯ) ಅನೇಕಾನೇಕ ಪೂರ್ವಜನ್ಮ ಸುಕೃತ ಪರಿಪಾಕಗಳಿಂದಲೂ ಮತ್ತು ಉತ್ತಮ ಜ್ಞಾನಿಗಳಿಂದಲೂ ಸಂಸೇವ್ಯವಾಗಿಯೂ (ಸೇವಿಸಲ್ಪಡತಕ್ಕುದಾಗಿಯೂ) ವಾಕ್ಪ್ರವೃತ್ತಿ ನಿಮಿತ್ತ ಧರ್ಮಗಳನ್ನು ಅತಿಕ್ರಮಿಸಿದುದಾಗಿಯೂ (ಮನಸ್ಸಿಗೂ ವಾಕ್ಕಿಗೂ ಅಗೋಚರವಾಗಿಯೂ) ಅನಂತವಾಗಿಯೂ (ಅನವಧಿಕವೂ ಅಪರಿಮಿತವೂ ಶಾಶ್ವತವೂ) ಆದ್ಯವಾಗಿಯೂ (ಅಂದರೆ ಕಾಲಕೃತ ಪರಿಚ್ಛೇದ ರಹಿತವಾಗಿಯೂ) ಆದಕಾರಣವೇ ಸತ್ಯವಾಗಿಯೂ (ಚ್ಯುತಿಯಿಲ್ಲದುದು) ಆನಂದರೂಪವಾಗಿಯೂ ಸಕಲವನ್ನೂ ಆನಂದಗೊಳಿಸತಕ್ಕದ್ದಾಗಿಯೂ) ಇರುವ ಪರಮ ಸುಖಸ್ವರೂಪನಾಗಿ ಸಚ್ಚಿದಾನಂದರೂಪನಾಗಿ ಬಿಟ್ಟನು.

ಗತವತಿ ಪದಮಾದ್ಯಂ ಚೇತಸಿ ಸ್ವಚ್ಛಭಾವಂ
ದ್ವಿಜತನುರಥ ಮಾಸೈಃ ಸೋಪವಿಷ್ಟೈವ ಷಡ್ಭಿಃ |
ರವಿಕರಪರಿತಪ್ತಾ ವಾತಭಾಂಕಾರರಮ್ಯಾ-
ತನುತರುಭುಜತಂತ್ರೀ ಶೈಲವೀಣಾ ಬಭೂವ || ೨೬ ||

ಅಥ ಬಹುತರಕಾಲೇನೈತದದ್ರೇರ್ಭುವಂ ತಾ-
ಮುಪಯಯುರಗ ಕನ್ಯಾಸಂಯುತಾ ಮಾತರಃ ಸ್ವಾತ್ |
ಅಭಿಮತಫಲಸಿದ್ಧ್ಯೈ ಸಂಯುತಾ ಏವ ಸರ್ವಾ-
ಅನಲಮಿವ ಶಿಖಾನಾಂ ಪಂಕಯಃ ಪಿಂಗಕೇಶ್ಯಃ || ೨೭ ||

---

೨೬. ಹೀಗೆ ಆ ಉದ್ದಾಲಕನ ದೇಹವೆಂಬ ಉಪಾಧಿಯಿಂದ ಉಪಹಿತವಾದ ಚೈತನ್ಯವು ನಿರ್ಮಲ ಸ್ವರೂಪವಾದ ಆದ್ಯಪದವನ್ನು ಹೊಂದಿಬಿಡಲಾಗಿ ಬಳಿಕ ಆ ಬ್ರಾಹ್ಮಣ ದೇಹವು ಆರು ತಿಂಗಳುಗಳ ಕಾಲ ಕೂತಲ್ಲಿಯೇ ಕದಲದೆ ಕುಳಿತಿದ್ದು ಸೂರ್ಯಕಿರಣಗಳಿಂದ ಚೆನ್ನಾಗಿ ಪರಿತಪಿಸಿ ಕ್ರಮೇಣ ಕೊನೆಗೆ ಪೂರ್ತಿ ಒಣಗಿ ಹೋಗಿಬಿಟ್ಟಿತು. ಆ ಪ್ರದೇಶದಲ್ಲಿ ಬೀಸುತ್ತಿದ್ದ ವಾಯುವು ಆ ಶುಷ್ಕ ದೇಹದ ಇಂದ್ರಿಯ ದ್ವಾರಗಳ ಮೂಲಕ ಒಳಗೆ ಹೋಗುತ್ತಲೂ ಆಚೆಗೆ ಬರುತ್ತಲೂ ಇದ್ದುದ ರಿಂದ ಉತ್ಪನ್ನವಾದ ಭಾಂಕಾರ ಧ್ವನಿಗಳಿಂದ ಅತ್ಯಂತ ರಮ್ಯವಾಗಿತ್ತು. ಅತಿ ಕೃಶವಾದ ಬಾಹುಗಳು ಸೂಕ್ಷ್ಮವಾದ ತಂತಿಗಳಂತೆ ಕಾಣುತ್ತಿದ್ದವು. ಈ ಕಾರಣ ಗಳಿಂದ ಅವನ ಆ ಶುಷ್ಕ ದೇಹವು ಆ ಪರ್ವತಕ್ಕೆ ವೀಣೆಯ ಹಾಗೆ ತೋರುತ್ತಿದ್ದಿತು.

[ಆ ಪರ್ವತರಾಜನು ಧರಿಸಿರುವ ವಿಲಾಸಮಯವಾದ ವೀಣೆಯೋ ಎಂಬ ಭ್ರಾಂತಿಯನ್ನುಂಟು ಮಾಡುತ್ತಿದ್ದಿತು ಎಂದರ್ಥ.]

೨೭. ಅನಂತರ ಬಹಳ ಕಾಲ ಕಳೆದು ಹೋದ ತರುವಾಯ ಸರ್ವದಾ ನಿಯತವಾಗಿ ಪರಸ್ಪರ ಒಟ್ಟಿಗೆ ಸಂಚರಿಸುವ ಸ್ವಭಾವವುಳ್ಳ ಬ್ರಾಹ್ಮ್ಯಾದಿ ಸಪ್ತ ಮಾತೃಕೆಯರು ಪಾರ್ವತೀದೇವೀ ಸಮೇತರಾಗಿ ಒಟ್ಟುಗೂಡಿಕೊಂಡವರಾಗಿಯೇ ಕೆಂಪು ಮಿಶ್ರವಾದ ಹೊಂಬಣ್ಣದ ಅಗ್ರಭಾಗಗಳುಳ್ಳ ಜ್ವಾಲಾಮಾಲೆಗಳು ಅಗ್ನಿ ಯನ್ನು ಸೇರುವಂತೆ ಯಾವನೋ ಒಬ್ಬ ಭಕ್ತನ ವಾಂಛಿತಾರ್ಥ ಫಲವನ್ನು ಕೊಡು ವದಕ್ಕೋಸ್ಕರ, ಅಂತರಿಕ್ಷದಿಂದ ಇಳಿದು ಆ ಪರ್ವತ ಪ್ರದೇಶದ ಸಮೀಪಕ್ಕೆ ಬಂದು ಸೇರಿದರು.

ದಿನಕರಕರಶುಷ್ಕಂ ವಿಪ್ರಕಂಕಾಲಕಂ ತ-
ಜ್ಝಟಿತಿ ಮುಕುಟಕೋಟೌ ಖಡ್ಗಖಟ್ವಾಂಗಮಧ್ಯೇ |
ಸಕಲವಿಬುಧವಂದ್ಯಾ ಖಿಂಖಿನೀ ದೇವದೇವೀ-
ನಿಶಿ ನವತರವೃತ್ತಾ ಕಾಂತಕಾಂತಿ ಚಕಾರ ॥ ೨೮ ॥

ಇತ್ಯುದ್ದಾಲಕದೇಹಕಂ ಸುವಿಲಸನ್ಮಾಯೂರಬರ್ಹವ್ರಜ-
ವ್ಯಾಲೋಲಾಬ್ಧಲವೇ ನವೈರ್ವಿವಲಿತೇ ಮಂದಾರಮಾಲಾಗಣೈಃ |
ಶೇತೇ ಖಿಂಖಿನಿಕಾ ಮಹಾಭಗವತೀ ಲೀಲಾಲಲಾಭೇ ಲತಾ-
ಜಾಲೇಭೃಂಗ ಇವಾಂತಪುಷ್ಪಪಟಲೇ ಪಶ್ಚಾದುಪಾಗಚ್ಛತಿ ॥ ೨೯ ॥

---

೨೮. ಆ ಸಪ್ತಮಾತೃಕೆಯರ ಮಧ್ಯದಲ್ಲಿದ್ದ ಬ್ರಹ್ಮಾದಿ ಸಮಸ್ತ ದೇವತೆಗಳಿಂದ ವಂದ್ಯಳೂ ಸಕಲ ದೇವಪೂಜ್ಯಳೂ ಆದ ಚಾಮುಂಡಾಂಬಿಕೆಯು ಆಗ ಆ ರಾತ್ರಿಯಲ್ಲಿ ಹೊಸಹೊಸದಾದ ನೂಪುರಾದಿ ಆಭರಣಗಳ ವೈಚಿತ್ರ್ಯ ವಶದಿಂದ ಹೊಸಹೊಸದಾದ ನಾನಾವಿಧ ನರ್ತನಗಳನ್ನು ಮಾಡುತ್ತಾ ಸೂರ್ಯಕಿರಣಗಳಿಂದ ಬಹಳವಾಗಿ ಒಣಗಿಹೋಗಿ ಗುಹಾದ್ವಾರದಲ್ಲಿ ಬಿದ್ದಿದ್ದ ಆ ಉದ್ದಾಲಕನೆಂಬ ಬ್ರಾಹ್ಮಣನ ಅಸ್ಥಿಪಂಜರವನ್ನು ಖಡ್ಗ-ಖಟ್ವಾಂಗಗಳೆಂಬ ಆಯುಧ ವಿಶೇಷಗಳ ಮಧ್ಯದಲ್ಲಿ ಸಿಕ್ಕಿಸಿಕೊಂಡು ಆ ಕ್ಷಣವೇ ತನ್ನ ಕಿರೀಟದ ಅಗ್ರಭಾಗದಲ್ಲಿ ಅದನ್ನು ಇಟ್ಟು ಅಲಂಕರಿಸಿಕೊಂಡು ಅದಕ್ಕೆ ರಮ್ಯವಾದ ಸೊಬಗನ್ನು (ಕಾಂತಿಯನ್ನು) ಉಂಟುಮಾಡಿದಳು.

೨೯. ಈ ಪ್ರಕಾರವಾಗಿ ಆ ಉದ್ದಾಲಕನ (ಮಲಮಾಂಸಾದಿಮಯವಾದ ತುಚ್ಛ) ಸ್ಥೂಲದೇಹವೂ ಕೂಡ ಮೇಘ ಖಂಡಗಳಂತೆ ಅತಿ ಚಂಚಲವಾಗಿ ಹಾರಾಡುತ್ತಿರುವ ನವಿಲು ಗರಿಗಳ ಸಮೂಹಗಳಿಂದ ಅಲಂಕೃತವಾಗಿ ಹೊಸಹೊಸದಾದ ಮಂದಾರ ಪುಷ್ಪಮಾಲೆಗಳ ರಾಶಿಗಳನ್ನು ಧರಿಸಿ ಚೆನ್ನಾಗಿ ಕಣ್ಗೊಳಿಸುತ್ತಲಿದ್ದ ಮಹಾಭಗವತಿ ಚಾಮುಂಡಾಂಬೆಯ ಶಿರೋಭೂಷಣವಾಗಿ ಅತಿ ವಿಲಾಸಮಯವಾಗಿರುವ ಹೂಗಳ ಮಧ್ಯದಲ್ಲಿ ಭೃಂಗದಂತೆ, ಆ ಮಹಾದೇವಿಯ ಬೆನ್ನಿನಮೇಲೆ ಹಾರಾಡುತ್ತಲಿದ್ದ ವೇಣಿಯನ್ನು (ಕೇಶಪಾಶವನ್ನು) ಅಲಂಕರಿಸಿತು.

ಏಷೋದ್ದಾಲಕ ಚಿತ್ತವೃತ್ತಿಕಲನಾವಲ್ಲೀ ವಿವೇಕಸ್ಫುರ-
ತ್ಸ್ವಾನಂದಪ್ರವಿಕಾಸಭಾಸಿಕುಸುಮಾಹೃತ್ಕಾನನೇ ವಿಸ್ತೃತಾ |
ರೂಢಾ ಯಸ್ಯ ಕದಾಚಿದೇವ ವಿಹರನ್ನಪ್ಯೇವ ಸಚ್ಛಾಯಯಾ-
ನಾಸಾವೇತಿ ವಿಯೋಗಮೇತಿ ಸಫಲೇನೋಚ್ಚೈಸ್ತರಾಂ ಸಂಗಮಂ || ೩೦ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಉದ್ದಾಲಕ ನಿರ್ವಾಣಂ" ನಾಮ
ಪಂಚಪಂಚಾಶಃ ಸರ್ಗಃ

---

೩೦. ಉದ್ದಾಲಕನ ಚಿತ್ತವೃತ್ತಿಗಳೆಲ್ಲವನ್ನೂ ಚಿತ್ರಿಸುವ ಈ ಕಥೆಯೇ ಒಂದು ಬಳ್ಳಿಯು. ವಿವೇಕದಿಂದ ಸ್ಫುರಿಸುವ ಆತ್ಮಾನಂದವೇ ಈ ಬಳ್ಳಿಯಲ್ಲಿ ಆಗುವ ಸುಂದರವಾದ ಹೂ. ಈ ಬಳ್ಳಿಯು ಏನಾದರೂ ಆಗಲಿ ಒಮ್ಮೆಯಾದರೂ ಯಾವನಾದರೊಬ್ಬನ ಹೃದಯಾರಣ್ಯದಲ್ಲಿ ಬೆಳೆದು ಹರಡಿದರೆ, ಯಾವನಾದರೊಬ್ಬನ ಇದರ ನೆರಳಿನಲ್ಲಿ ವಿಹರಿಸಿದರೆ, ಅವನಿಗೆ ಈ ಕಥಾ ಶ್ರವಣಾದಿಗಳಿಂದ ಆದ ಸಂತೋಷವು ಎಂದಿಗೂ ಇದ್ದೇ ಇರುವುದು. ಅಂಥವನಿಗೆ ಎಲ್ಲಕ್ಕಿಂತ ದೊಡ್ಡದಾದ ಬ್ರಹ್ಮವು ಲಭಿಸುವದು.

ಇಂತಿದು ಆರ್ಷವು ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ಉಪಶಮ ಪ್ರಕರಣದ "ಉದ್ದಾಲಕ ನಿರ್ವಾಣ" ಎಂಬ
ಐವತ್ತೈದನೆಯ ಸರ್ಗವು

ಷಟ್‌ಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಕ್ರಮೇಣಾನೇನ ವಿಹರನ್ವಿಚಾರ್ಯಾತ್ಮಾನಮಾತ್ಮನಾ |
ವಿಶ್ರಾಂತಿಮೇಹಿ ವಿತತೇ ಪದೇ ಪದ್ಮದಲೇಕ್ಷಣ || ೧ ||

ಶಾಸ್ತ್ರಾರ್ಥಗುರುಚೇತೋಭಿಸ್ತಾವತ್ತಾವದ್ವಿಚಾರ್ಯತೇ |
ಸರ್ವದೃಶ್ಯಕ್ಷಯಾಭ್ಯಾಸಾದ್ಯಾವದಾಸಾದ್ಯತೇ ಪದಂ || ೨ ||

ಐವತ್ತಾರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು :—ಅಯ್ಯಾ ಕಮಲನಯನನಾದ ರಾಮಚಂದ್ರ, ನೀನೂ ಕೂಡ ಆ ಉದ್ದಾಲಕ ಮಹರ್ಷಿಯಂತೆಯೇ ನಾನು ಇದುವರೆವಿಗೂ ವಿವರಿಸಿದ ಮೇರೆಗೆ ಶಾಸ್ತ್ರಾರ್ಥ ವಿಚಾರ ವೈರಾಗ್ಯ ಸಮಾಧ್ಯಭ್ಯಾಸ ಕ್ರಮದಿಂದ ವಿಹರಿಸುತ್ತಾ ಆತ್ಮಸ್ವರೂಪವನ್ನು ನಿನ್ನಲ್ಲಿಯೇ ಸಂತತ ವಿಚಾರ ಮಾಡುತ್ತ ಸ್ವಾತ್ಮತತ್ತ್ವಜ್ಞಾನವನ್ನು ಪಡೆದು ಅಖಂಡವಾದ ಪರಮಪದದಲ್ಲಿ ವಿಶ್ರಾಂತಿಯನ್ನು ಪಡೆದು ಸ್ವಸ್ಥನಾಗಿರು.

೨. ದೃಶ್ಯವಾದ ಸಮಸ್ತ ಪ್ರಪಂಚವೂ ದೃಗ್ರೂಪನಾದ ಆತ್ಮನಲ್ಲಿ ಅವಿದ್ಯೆಯಿಂದ ಅಧ್ಯಸ್ತವಾಗಿರುವ ಕಾರಣ ಇದೆಲ್ಲವೂ ಮಿಥ್ಯೆಯೇ ಸರಿ. ಈ ವಿಕಾರಗಳಿಗೆಲ್ಲ ಅಧಿಷ್ಠಾನಭೂತವಾದ ಆತ್ಮವೊಂದೇ ಪರಮಾರ್ಥ ಸತ್ಯವೆಂದು ಪುನಃ ಪುನಃ ಜ್ಞಾನವು ದೃಢವಾಗುವ ಪರ್ಯಂತವೂ ಅಭ್ಯಾಸ ಮಾಡುವುದರ ಮೂಲಕ, ಸಕಲ ದೃಶ್ಯಗಳನ್ನೂ ತತ್ತ್ವಜ್ಞಾನದಿಂದ ಬಾಧೆಗೊಳಿಸಿದರೆ ಆ ಪರಮಪದ ಪ್ರಾಪ್ತಿಯು ಲಭಿಸುವದು. ಪರಮಪದವು ಪ್ರಾಪ್ತವಾಗುವವರೆವಿಗೂ ಸಚ್ಛಾಸ್ತ್ರಗಳ ಶ್ರವಣ ಮಾಡುತ್ತಲೂ ಅರ್ಥ ತತ್ತ್ವಗಳನ್ನು ಯುಕ್ತ್ಯನುಭವಗಳೊಡನೆ ಸರಿಗೂಡಿಸಿ ಪರೀಕ್ಷಿಸುತ್ತಲೂ ಗುರೂಪದೇಶಗಳಲ್ಲಿ ಶ್ರದ್ಧೆಯನ್ನಿರಿಸುವುದರಿಂದಲೂ ತನ್ನ ಮನಸ್ಸಿನಲ್ಲಿ ಬೇರೂರಿಕೊಂಡಿರುವ ಸಂಶಯಗಳೆಂಬ ಮಲಗಳನ್ನು ತೊಡೆದು ಹಾಕಿಕೊಂಡು ಚಿತ್ತಶುದ್ಧಿಯನ್ನು ಉಂಟುಮಾಡಿಕೊಳ್ಳುತ್ತಲೂ ವಿಚಾರಪರನಾಗಿರಬೇಕು.

ವೈರಾಗ್ಯಾಭ್ಯಾಸಶಾಸ್ತ್ರಾರ್ಥಪ್ರಜ್ಞಾಗುರುಮಯಕ್ರಮೈಃ ।
ಪದಮಾಸಾದ್ಯತೇ ಪುಣ್ಯಂ ಪ್ರಜ್ಞಯೈವೈಕಯಾಥಾವಾ ॥ ೩ ॥

ಸಂಪ್ರಬೋಧವತೀ ತೀಕ್ಷ್ಣಾ ಕಳಂಕರಹಿತಾ ಮತಿಃ ।
ಸರ್ವಸಾಮಗ್ರ್ಯಹೀನಾಪಿ ಪದಂ ಪ್ರಾಪ್ನೋತಿ ಶಾಶ್ವತಂ ॥ ೪ ॥

---

೩. ಹೀಗೆ ವೈರಾಗ್ಯಾಭ್ಯಾಸ, ಶಾಸ್ತ್ರಾರ್ಥವಿಚಾರ, ಪ್ರಜ್ಞಾನೈರ್ಮಲ್ಯ, ಗುರೂಪದೇಶದಲ್ಲಿ ಪರಮ ವಿಶ್ವಾಸ ಮುಂತಾದ ಸಾಧನಗಳನ್ನು ಚಿರಕಾಲ ಸಂತತವಾಗಿ ಆಚರಿಸಿದರೆ ಪವಿತ್ರತಮವಾದ ಆ ಪರಮಪದವು ಲಭಿಸುವದು. ಅಥವಾ ಅನೇಕ ಹಿಂದಣ ಜನ್ಮಗಳಲ್ಲಿ ಅನುಷ್ಠಾನಮಾಡಿದ ಪೂರ್ವೋಕ್ತ ಸತ್ಕರ್ಮಗಳಿಂದ ಸುಸಂಸ್ಕೃತನಾಗಿ ಪರಿಪಕ್ವವಾದ ಆಶಯವುಳ್ಳವನು ಈ ಜನ್ಮದಲ್ಲಿ ದೃಢವಾದ ಆತ್ಮತತ್ತ್ವಜ್ಞಾನವನ್ನು ಪಡೆದು ಅದೊಂದರಿಂದಲೇ ನಿಶ್ಶ್ರೇಯ ಸ್ವರೂಪವಾದ ಆ ಪರಮಪದವನ್ನು ಗಳಿಸಿಕೊಳ್ಳುವನು.

[ಅಂತೂ-"ತಮೇವಂ ವಿದ್ವಾನ್ ಅಮೃತ ಇಹ ಭವತಿ ನಾನ್ಯಃ ಪಂಥಾಃ ವಿದ್ಯತೇ ಅಯನಾಯ" ಎಂಬೀ ಮೊದಲಾದ ಶ್ರುತಿಗಳು ಸಾರುತ್ತಿರುವಂತೆ "ಜ್ಞಾನವೊಂದರಿಂದಲೇ ಮೋಕ್ಷವು ಲಭಿಸುವದು. ಬೇರೆ ಯಾವ ಮಾರ್ಗವೂ ಇಲ್ಲ. ಆ ಜ್ಞಾನಲಾಭಕ್ಕಾಗಿಯೇ ವಿವೇಕ ವೈರಾಗ್ಯಾದಿ ಸಾಧನಗಳು ಅತ್ಯವಶ್ಯಕವೆಂದು ಭಾವ.]

೪. ಚೆನ್ನಾಗಿ ದೃಢಪಟ್ಟಿರುವ ತತ್ತ್ವಜ್ಞಾನವುಳ್ಳದ್ದಾಗಿಯೂ ಅತ್ಯಂತ ಚುರುಕಾಗಿಯೂ (ಯಾವದಾದರೂ ಆತಂಕಗಳು ಬಂದರೆ ಅವುಗಳನ್ನು ಪ್ರತಿಭಟಿಸಿ ಕತ್ತರಿಸಿ ಬಿಡುವಷ್ಟು ಹರಿತವಾಗಿಯೂ) ಸರ್ವ ಸಂಶಯಗಳೆಂಬ ಕಳಂಕಗಳನ್ನು ತೊಳೆದು ಹಾಕಿಕೊಂಡು ಅತ್ಯಂತ ಸ್ವಚ್ಛವಾಗಿರುವ ಬುದ್ಧಿಯನ್ನೇ ಶಾಸ್ತ್ರಜ್ಞರು ಪ್ರಜ್ಞೆಯೆಂದು ವ್ಯವಹರಿಸುವರು. ಇಂತಹ ಪ್ರಜ್ಞೆಯೊಂದಿದ್ದರೆ ಸಾಕು, ಇನ್ನು ಬೇರೆ ಯಾವ ಸಾಮಗ್ರಿಗಳು ಸಹಾಯಕಗಳಾಗಿ ಇಲ್ಲದಿದ್ದರೂ ಕೂಡ ಆ ಪ್ರಜ್ಞೆಯೊಂದೇ ಶಾಶ್ವತವಾದ ಪರಮಪದ ಪ್ರಾಪ್ತಿಗೆ ಸಾಕಾದ ಉತ್ತಮ ಸಾಧನವಾಗಿರುವದು.

ಶ್ರೀರಾಮ ಉವಾಚ —

ಭಗವನ್ಭೂತಭವ್ಯೇಶ ಕಶ್ಚಿಜ್ಜ್ಞಾತಸಮಾಧಿಕಃ ।
ಪ್ರಬುದ್ಧ ಇವ ವಿಶ್ರಾಂತೋ ವ್ಯವಹಾರಪರೋಽಪಿ ಸನ್ ॥ ೫ ॥

ಕಶ್ಚಿದೇಕಾಂತಮಾಶ್ರಿತ್ಯ ಸಮಾಧಿನಿಯತಃ ಸ್ಥಿತಃ ।
ತಯೋಸ್ತು ಕತರಃ ಶ್ರೇಯಾನಿತಿ ಮೇ ಭಗವಾನ್ವದ ॥ ೬ ॥

ಶ್ರೀ ವಸಿಷ್ಠ ಉವಾಚ —

ಇಮಂ ಗುಣಸಮಾಹಾರಮನಾತ್ಮತ್ವೇನ ಪಶ್ಯತಃ ।
ಅಂತಃಶೀತಲತಾ ಯಾಸೌ ಸಮಾಧಿರಿತಿ ಕಥ್ಯತೇ ॥ ೭ ॥

೫–೬. ಶ್ರೀ ರಾಮನು ಕೇಳಿದನು :—ಸ್ವಾಮಿ, ಭೂತಭವಿಷ್ಯಗಳಿಗೆಲ್ಲಾ ಭಗವತ್ಸ್ವರೂಪರಾದ ಪರಮ ಗುರುಗಳೇ, ಒಬ್ಬಾನೊಬ್ಬ ಪ್ರಬುದ್ಧನು (ಜ್ಞಾನಿಯು) ಪ್ರಾಪಂಚಿಕ ವ್ಯವಹಾರಗಳಲ್ಲಿ ನಿರತನಾಗಿದ್ದರೂ ಕೂಡ ಸಮಾಧಿನಿಷ್ಠನಾದವನಂತೆಯೇ ನಿರ್ಲಿಪ್ತನಾಗಿ, (ವಿಕ್ಷೇಪಶೂನ್ಯನಾಗಿ) ಪರಮಪದದಲ್ಲಿ ಸರ್ವದಾ ವಿಶ್ರಾಂತನಾಗಿಯೇ ಇರುವನು. ಮತ್ತೊಬ್ಬನಾದರೆ, ಏಕಾಂತದಲ್ಲಿದ್ದುಕೊಂಡು ಪ್ರಪಂಚ ವ್ಯವಹಾರಗಳನ್ನು ಪರಿತ್ಯಜಿಸಿ ಸದಾ ಸಮಾಧಿನಿಷ್ಠನಾಗಿಯೇ ಇದ್ದುಕೊಂಡಿರುವನು ಎಂದು ಭಾವಿಸೋಣ. ಇವರಿಬ್ಬರಲ್ಲಿ ಯಾವನು ಶ್ರೇಷ್ಠನು ? (ಯಾರ ಸ್ಥಿತಿಯು ಹೆಚ್ಚು ಶ್ರೇಯಸ್ಕರವಾದುದು ?) ಈ ವಿಚಾರವನ್ನು ಯಥಾರ್ಥವಾಗಿ ನನಗೆ ಉಪದೇಶಿಸಬೇಕೆಂದು ಪ್ರಾರ್ಥಿಸುವೆನು.

೭–೯. ಶ್ರೀ ವಸಿಷ್ಠನು ಹೇಳಿದನು :—ಅಯ್ಯಾ ರಾಮ, ಗುಣತ್ರಯಾತ್ಮಕವಾದ ಈ ಪ್ರಾಪಂಚಿಕ ಸ್ಥಿತಿಯೆಲ್ಲವೂ ಕೇವಲ ಅವಿದ್ಯಕವಾದ (ಭ್ರಾಂತಿಕಲ್ಪಿತವಾದ) ಅನಾತ್ಮವೇ. (ಆತ್ಮನಲ್ಲಿ ಅಧ್ಯಸ್ತವಾದುದೇ) ಎಂದು ದೃಢವಾಗಿ ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು ಪರಿಪೂರ್ಣಕಾಮನಾಗಿ (ಆಪ್ತಕಾಮ) ಮಿಥ್ಯಾಭೂತವಾದ ಪ್ರಪಂಚದಲ್ಲಿ ಯಾವದೊಂದರಲ್ಲಿಯೂ ಆಸ್ಥೆಯನ್ನಿಡದೆ ವ್ಯವಹರಿಸುತ್ತಾ ಶಾಂತನಾಗಿರುವಿಕೆಯೇ ಸಮಾಧಿಯೆನ್ನಿಸುವದು.

[ಪೂರ್ಣಕಾಮತ್ವವು ಜ್ಞಾನನಿಷ್ಠೆಯ ಫಲ. ಅದು ಲಬ್ಧವಾದ ಬಳಿಕ, ಮನೋವಿಕ್ಷೇಪಕ್ಕೆ ಪ್ರಸಕ್ತಿಯೇ ಇರುವದಿಲ್ಲ. ಅದೇ ಸಮಾಧಿಯೆಂದು ಭಾವ.]

ದೃಶ್ಯೈರ್ಮನಸಿ ಸಂಬಂಧ ಇತಿ ನಿಶ್ಚಿತ್ಯ ಶೀತಲಃ ।
ಕಶ್ಚಿತ್ಸಂವ್ಯವಹಾರಸ್ಥಃ ಕಶ್ಚಿಧ್ಯಾನೇ ವ್ಯವಸ್ಥಿತಃ ॥ ೮ ॥

ದ್ವಾವೇತೌ ರಾಮ ಸುಖಿತಾವಂತಶ್ಚೇತ್ಪರಿಶೀತಲೌ ।
ಅಂತಃಶೀತಲತಾ ಯಾ ಸ್ಯಾತ್ತದಂತತಪಃಫಲಂ. ॥ ೯ ॥

["ಮನಸ್ಸೆಂಬುದು ಇದ್ದರೆ ಅದಕ್ಕೆ ವಿಕ್ಷೇಪಹೇತುವಾದ ಸಂಬಂಧವು ಈ ದೃಶ್ಯಗಳೊಡನೆ ಉಂಟಾಗುವದು. ಕೇವಲ ದೃಗ್ರೂಪನಾದ ನನಗೆ ವಸ್ತುತಃ ಯಾವದೊಂದು ದೃಶ್ಯಸಂಬಂಧವೂ ಸುತರಾಂ ಇಲ್ಲವೇ ಇಲ್ಲ" ಎಂದು ದೃಢವಾಗಿ ನಿಶ್ಚಯಿಸಿಕೊಂಡು ಒಬ್ಬ ಜ್ಞಾನನಿಷ್ಠನು ಅಂತಃ ಅಭಿಮಾನ ಶೂನ್ಯನಾಗಿ (ಪರಿಪೂರ್ಣ ಕಾಮನಾಗಿ) ಶರೀರ ಸ್ಥಿತಿ ಹೇತುವಾದ ಕೇವಲ ಯಾದೃಚ್ಛಿಕ ಪ್ರಾಪಂಚಿಕ ವ್ಯವಹಾರದಲ್ಲಿ ನಿರತನಾಗಿರುವನು. ಮತ್ತೊಬ್ಬನು ಧ್ಯಾನನಿಷ್ಠನಾಗಿಯೇ ಸಮಾಧಿಯಲ್ಲಿದ್ದುಗೊಂಡಿರುವನು. ಇವರಿಬ್ಬರೂ ಕೂಡ ವಸ್ತುತಃ ಆತ್ಮಾರಾಮರಾದ ಆನಂದರೂಪರೇ. ಅದರಲ್ಲಿ ಸಂದೇಹವಿಲ್ಲ. ಆದರೆ ಮನಸ್ಸು ಮಾತ್ರ ನಿಸ್ಪೃಹವಾಗಿ (ಆಪ್ತಕಾಮನಾಗಿ) ಯೂ ಪ್ರಶಾಂತವಾಗಿಯೂ ಇರಬೇಕು.]

[ಮನಸ್ಸು ವಿಷಯೋಪಭೋಗಗಳಲ್ಲಿ ಆಸೆಯನ್ನು ಮಾಡಿದಾಗಲೇ ಅದಕ್ಕೆ ವಿಕ್ಷೇಪವುಂಟಾಗುವದು. ವಿಷಯ ವೈರಾಗ್ಯದ ಮೂಲಕ ಅವುಗಳ ಆಸೆಯನ್ನು ತೊರೆದು ಅಭಿಮಾನಶೂನ್ಯವಾಗಿ ಸ್ವಾತ್ಮಲಾಭದಿಂದ ಪರಿಪೂರ್ಣಕಾಮವಾಗಿ ವ್ಯವಹಾರ ನಿರತನಾಗಿದ್ದರೂ ಅಥವಾ ವ್ಯವಹಾರ ಮಾಡದೆ ಇದ್ದರೂ ಕೂಡ ಫಲವು ಒಂದೇ. ಮನಸ್ಸಿಗೆ ಸ್ವಲ್ಪವೂ ವಿಕ್ಷೇಪವೇ ಇಲ್ಲದೆ ಅದು ಪ್ರಶಾಂತವಾಗಿರುವದು. ಇಂತಹ ಮನಸ್ಸಿನ ಪ್ರಶಾಂತವಾದ ಸ್ಥಿತಿಯೇ ಅನೇಕ ಜನ್ಮಾಂತರಗಳಿಂದ ಆರ್ಜಿಸಿದ ಅನಂತ ತಪಸ್ಸುಗಳ ಫಲವು ಎಂಬುದು ಶಾಸ್ತ್ರ ಸಮ್ಮತವಾದ ಸಿದ್ಧಾಂತವು.]

["ಆಪ್ತಕಾಮಸ್ಯಕಾಸ್ಪೃಹಾ ?"
ಕಿಮಿಚ್ಛನ್ ಕಸ್ಯಕಾಮಾಯ ಶರೀರಮನುಸಂಜ್ವರೇತ್ ।
ಆತ್ಮಲಾಭಾನ್ನ ಪರಂ ಕಿಂಚಿತ್ ಸಾಕಾಷ್ಠಾಸಾ ಪರಾಗತಿಃ ॥
ಇತ್ಯಾದಿ ಪ್ರಮಾಣಗಳನ್ನು ಗಮನದಲ್ಲಿಂಸಿ.]

ಸಮಾಧಿಸ್ಥಾನಕಸ್ಥಸ್ಯ ಚೇತಶ್ಚೇದ್ವೃತ್ತಿಚಂಚಲಂ |
ತತ್ತಸ್ಯ ತತ್ಸಮಾಧಾನಂ ಸಮಮುನ್ಮತ್ತತಾಂಡವೈಃ ॥ ೧೦ ॥

ಉನ್ಮತ್ತತಾಂಡವಸ್ಥಸ್ಯ ಚೇತಶ್ಚೇತ್ ಕ್ಷೀಣವಾಸನಂ |
ತದಸ್ಯೋನ್ಮತ್ತವೃತ್ತಂ ತತ್ಸಮಂ ಬುದ್ಧಸಮಾಧಿನಾ ॥ ೧೧ ॥

ವ್ಯವಹಾರೀ ಪ್ರಬುದ್ಧೋ ಯಃ ಪ್ರಬುದ್ಧೋ ಯೋ ವನೇ ಸ್ಥಿತಃ |
ದ್ವಾವೇತೌ ಸುಸಮೌ ನೂನಮಸಂದೇಹಂ ಪದಂ ಗತೌ ॥ ೧೨ ॥

---

೧೦. ಒಬ್ಬನು ಬಾಹ್ಯ ವ್ಯವಹಾರಗಳನ್ನು ಬಿಟ್ಟು ಕಟ್ಟಕಡಲಡಿ ಏಕಾಂತದಲ್ಲಿ ಕುಳಿತು ಧ್ಯಾನಮಾಡುತ್ತಾ ಸಮಾಧಿಸ್ಥಿತಿಯಲ್ಲಿರುವವನಾದರೂ ಅವನ ಮನಸ್ಸು ಪ್ರಾಪಂಚಿಕ ವೃತ್ತಿಗಳಲ್ಲಿ ಮಗ್ನವಾಗಿ ಅತಿ ಚಾಂಚಲ್ಯದಿಂದ ವಿಕ್ಷೇಪಕ್ಕೆ ಒಳಗಾಗಿದ್ದ ಪಕ್ಷದಲ್ಲಿ ಅವನ ಆ ಸಮಾಧಿಸ್ಥಿತಿಯಿಂದ ಏನು ಪ್ರಯೋಜನವಾದೀತು? ಅವನ ಆ ಸಮಾಧಿಯು ಉನ್ಮತ್ತನ (ಹುಚ್ಚನ) ಕುಣಿತಕ್ಕೆ ಸಮಾನವಾದುದೇ ಅಲ್ಲವೆ?

೧೧. ಒಬ್ಬನು ಹುಚ್ಚನಂತೆ ಕುಣಿದಾಡುತ್ತಾ ಪ್ರಪಂಚ ವ್ಯವಹಾರದಲ್ಲಿ ನಿರತನಾಗಿದ್ದರೂ ಕೂಡ ಅವನ ಮನಸ್ಸು ಸರ್ವ ವಾಸನಾ ಶೂನ್ಯವಾಗಿ ನಿಸ್ಸ್ಪೃಹವಾಗಿ ವಿಕ್ಷೇಪಕ್ಕೆ ಸಿಕ್ಕಿಹಾಕಿಕೊಳ್ಳದೆ ನಿರ್ಲಿಪ್ತವಾಗಿದ್ದುಕೊಂಡಿದ್ದರೆ ಅದರಿಂದ ಅವನಿಗೆ ಏನು ಬಾಧಕವಿರುವುದು ? ಅಂತಹ ಪ್ರಶಾಂತಚಿತ್ತನ (ಉನ್ಮತ್ತ ನೃತ್ತ ಸದೃಶ) ವ್ಯವಹಾರವು ಜ್ಞಾನನಿಷ್ಠನಾದವನ ಸಮಾಧಿಸ್ಥಿತಿಗೆ ಸಮಾನವಾದುದೇ ಸರಿ.

೧೨. ತಾನು ಜ್ಞಾನನಿಷ್ಠನಾಗಿ (ಸ್ಥಿತಪ್ರಜ್ಞನಾಗಿ) ಅಭಿಮಾನರಾಹಿತದಿಂದ ಪ್ರಪಂಚ ವ್ಯವಹಾರದಲ್ಲಿ ನಿರತನಾಗಿರುವವನೂ ಮತ್ತು ಜ್ಞಾನಿಷ್ಠನಾಗಿಯೇ ಏಕಾಂತ ಸ್ಥಿತಿಯನ್ನುದ್ದೇಶಿಸಿ (ವಾನಪ್ರಸ್ಥನಾಗಿ) ನಿರ್ಜನವಾದ ಅರಣ್ಯದಲ್ಲಿದ್ದುಗೊಂಡು ವ್ಯವಹಾರ ಪರಾಂಗ್ಮುಖನಾಗಿರುವವನೂ ಇವರಿಬ್ಬರೂ ಒಂದೇ ಸ್ಥಿತಿಯಲ್ಲಿರುವ ಸಮಾನರೇ ಸರಿ. ಇದು ನಿಶ್ಚಯ.

ಅಕರ್ತೃಕುರ್ವದಪ್ಯೇತಚ್ಚೇತಃ ಪ್ರತನುವಾಸನಂ ।
ದೂರಂ ಗತಮನಾ ಜಂತುಃ ಕಥಾಸಂಶ್ರವಣೇ ಯಥಾ ॥ ೧೩ ॥

ಅಕುರ್ವದಪಿ ಕರ್ತೇವ ಚೇತಃ ಪ್ರಘನವಾಸನಂ ।
ನಿಸ್ಪಂದಾಂಗಮಪಿ ಸ್ವಪ್ನೇ ಸ್ವಭ್ರಪಾತಸ್ಥಿತಾವಿವ ॥ ೧೪ ॥

[ಅವರಿಬ್ಬರ ಸ್ಥಿತಿಗಳಲ್ಲಿ ಸ್ವಲ್ಪವೂ ತಾರತಮ್ಯವಿಲ್ಲವು. ಅವರಿಬ್ಬರೂ ನಿಸ್ಸಂದೇಹವಾಗಿಯೂ ಸರ್ವ ಸಂಶಯೋಚ್ಛೇದಕವಾದ ಪರಮಪದವನ್ನು ಪಡೆದು ಅದರಲ್ಲಿ ಪರಿನಿಷ್ಠಿತರಾಗಿ ಆತ್ಮಾರಾಮರಾಗಿರುವ ಮಹಾತ್ಮರೇ ಸರಿ.]

೧೩. ತಾನು ಕುಳಿತಿರುವ ಸ್ಥಳದಿಂದ ಮತ್ತೆಲ್ಲಿಗೋ ಬಹುದೂರ ತನ್ನ ಮನಸ್ಸನ್ನು ಓಡಿಸಿ ಬಿಟ್ಟಿರುವ ಒಬ್ಬ ಮನುಷ್ಯನು ಸನ್ನಿಹಿತವಾದ ತನ್ನ ಶ್ರವಣೇಂದ್ರಿಯದಿಂದ ಸಂಗೀತ, ಕಥೆ, ಪಾಠ ಮುಂತಾದವುಗಳನ್ನು ಕೇಳಿಸಿಕೊಳ್ಳುತ್ತಿದ್ದರೂ ಕೂಡ (ಅವನ ಮನಸ್ಸಿನ ಅನವಧಾರತೆಯಿಂದ) ಸಂಗೀತಾದಿಗಳನ್ನು ಗ್ರಹಿಸದೆ ಹೇಗೆ ಆ ವ್ಯವಹಾರದಲ್ಲಿ ಕರ್ತೃವಾಗದೆ ಇರುವನೋ ಹಾಗೆಯೇ ಈ ಮನಸ್ಸು ಪ್ರಪಂಚ ವ್ಯವಹಾರಗಳನ್ನು ನಡೆಯಿಸುತ್ತಾ ಕರ್ತೃವಾಗಿರುವಂತೆ ಕಂಡರೂ ಸುತರಾಂ ಸಕಲ ವಾಸನಾಶೂನ್ಯವಾಗಿ ಬಿಟ್ಟಿರುವ ಪಕ್ಷದಲ್ಲಿ ಅದು ಯಾವದೊಂದು ವ್ಯವಹಾರವನ್ನು ಮಾಡದಿರುವದೊಂದೇ ಅಕರ್ತೃವೆಂದು ತಿಳಿಯಬೇಕು.

[ದೃಷ್ಟಾಂತದಲ್ಲಿರುವ ಅಂಶವು ಉಪಾಧ್ಯಾಯ ವೃತ್ತಿಯಲ್ಲಿರುವವರಿಗೆ ನಿತ್ಯಾನುಭವಸಿದ್ಧವು. ಮನಸ್ಸು ದೂರ ಓಡಿ ಹೋಗಿರುವಾಗ ಕಿವಿಯು ತನ ವಿಷಯವನ್ನು ಗ್ರಹಿಸದಿರುವಂತೆಯೇ ಇತರ ಜ್ಞಾನೇಂದ್ರಿಯಗಳೂ ತಮ್ಮ ತಮ್ಮ ವಿಷಯಗಳನ್ನು ಗ್ರಹಿಸದೆ ಹೋಗುವವು. ಇದು ಸರ್ವಾನುಭವಗೋಚರವು. ಆದಕಾರಣ ವಾಸನಾಶೂನ್ಯವಾಗಿರುವ ಮನಸ್ಸು ವ್ಯವಹಾರ ಮಾಡುತ್ತಿದ್ದರೂ ರಾಗದ್ವೇಷಾದಿಗಳಿಗೆ ಒಳಗಾಗದೆ ನಿರ್ಲಿಪ್ತವಾಗಿ ಬಂಧಕ್ಕೆ ಸಿಲುಕದೆ ಇರುವದು ಎಂದು ಭಾವ.]

೧೪. ಸ್ವಪ್ನಕಾಲದಲ್ಲಿ ಪ್ರಾಣಿಗಳ ದೇಹಾವಯವಗಳು ಕಟ್ಟಕದಲದೆ ಮಲಗಿಕೊಂಡಿರುವ ಸ್ಥಳದಲ್ಲಿಯೇ ಇದ್ದರೂ ಕೂಡ ವಾಸನಾಮಯವಾದ ಮನಶ್ಶಕ್ತಿಯಿಂದ ಎಲ್ಲಿಗೋ ಹೋದಂತೆಯೂ ಹಳ್ಳದಲ್ಲಿ ಬಿದ್ದು ಅಲ್ಲಿಯೇ ಗೋಳಾಡುತ್ತಿರುವಂತೆಯೂ ಇದೇ ಮೊದಲಾದ ನಾನಾ ಪ್ರಕಾರಗಳಾದ ಕನಸುಗಳನ್ನು ಕಾಣು

ಚೇತಸೋ ಯದಕರ್ತೃತ್ವಂ ತತ್ಸಮಾಧಾನಮುತ್ತಮಂ |
ತಂ ವಿದ್ಧಿ ಕೇವಲೀಭಾವಂ ಸಾ ಶುಭಾ ನಿರ್ವೃತಿಃಪರಾ || ೧೫ ||

ಚೇತಶ್ಚಲಾಚಲತ್ವೇನ ಪರಮಂ ಕಾರಣಂ ಸ್ಮೃತಂ |
ಧ್ಯಾನಾಧ್ಯಾನದೃಶೋಸ್ತೇನ ತದೇಪಾನಂಕುರಂ ಕುರು || ೧೬ ||

ತ್ತಲೂ ಅವುಗಳಿಗೆ ತಕ್ಕಂತೆ ದುಃಖವನ್ನೋ ಸುಖವನ್ನೋ ಅನುಭವಿಸುತ್ತಲೂ ವಸ್ತುತಃ ಯಾವ ವ್ಯವಹಾರವನ್ನೂ ನಡೆಯಿಸದೇ ಇದ್ದರೂ ಎಲ್ಲವನ್ನೂ ಮಾಡು ತ್ತಿರುವವನಂತೆಯೇ ಭಾವನೆಯಾಗುವದು. ಇದರಂತೆಯೇ ದುರ್ಭೇದ್ಯವಾಗಿ ಅತ್ಯಂತ ಘನವಾದ ವಾಸನೆಯಿಂದ ಪ್ರಚುರವಾಗಿರುವ ಮನಸ್ಸು ಹೊರಗಡೆಯಲ್ಲಿ ಯಾವ ವ್ಯವಹಾರವನ್ನೂ ಮಾಡದೆ ಅಕರ್ತೃವಾಗಿ ಕಂಡುಬಂದರೂ ಸಕಲ ವ್ಯವಹಾರಗಳಿಗೂ ಕರ್ತೃವಾಗಿರುವುದೆಂದೇ ಭಾವಿಸಬೇಕು.

[ಈ ವಿಚಾರವು ಭಗವದ್ಗಿತೇಯ ಕರ್ಮಣ್ಯ ಕರ್ಮಯಃ ಪಶ್ಯೇತ್, ಅಕರ್ಮಣಿ ಚ ಕರ್ಮಯಃ | ಸ ಬುದ್ಧಿಮಾ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನ ಕರ್ಮ ಕೃತ್ ಎಂಬ ಚತುರ್ಥಾಧ್ಯಾಯದ ೧೮ನೆಯ ಶ್ಲೋಕದ ವ್ಯಾಖ್ಯಾನಾವಸರ ದಲ್ಲಿ ಶ್ರೀಮದ್ಭಗವತ್ಪೂಜ್ಯಪಾದರಿಂದ ಸುಸ್ಪಷ್ಟವಾಗಿ ಪ್ರತಿಪಾದಿತವಾಗಿರುವದು.]

೧೫. ಈ ಮೇರೆಗೆ ಮನಸ್ಸು ಯಾವ ಕೆಲಸವನ್ನೂ ಮಾಡದೆ ಪ್ರಶಾಂತವಾಗಿ, ಸ್ವಸ್ಥವಾಗಿ ಸುಮ್ಮನೆ ಇರುವಿಕೆಯೆಂಬುದೇ ಉತ್ತಮೋತ್ತಮವಾದ ಸಮಾಧಿ ಸ್ಥಿತಿಯು. ಅದನ್ನೇ ಕೈವಲ್ಯವೆಂದು ತಿಳಿ. ಅದೇ ಸರ್ವೋತ್ತಮವಾದ ನಿಶ್ರೇ ಯಸಕರವಾದ (ಪರಮ ಮಂಗಳರೂಪವಾದ) ಸುಖವಿಶ್ರಾಂತಿಯು (ನಿರತಿಶಯವೂ ನಿತ್ಯವೂ, ನಿರವಧಿಕವೂ, ನಿರುಪದ್ರವವೂ ಆಗಿರುವ ಪರಮಾನಂದ ಸ್ವರೂಪವು.)

೧೬. ಈ ಮನಸ್ಸೇ ಅತಿ ಚಂಚಲವಾಗಿದ್ದುಕೊಂಡು ಸಮಾಧಿವಿಚ್ಛೇದಕ್ಕೂ ಪ್ರಧಾನ ಕಾರಣವಾಗಿರುವಂತೆ ಅದೇ ಮನಸ್ಸೇ ನಿಗೃಹೀತವಾಗಿ ಚಲಿಸದೆ ಸ್ಥಿರ ವಾಗಿದ್ದುಕೊಂಡಿದ್ದರೆ ಸಮಾಧಿನಿಷ್ಠೆಗೂ ಮುಖ್ಯ ಕಾರಣವಾಗುವದು. ಆದಕಾರಣ ಅಯ್ಯಾ ರಾಮ, ನೀನು ಪ್ರಥಮತಃ ಆ ಮನಸ್ಸಿನ ಬೆಳೆವಣಿಗೆಗೆ ಬೀಜಭೂತವಾದ ಸಕಲ ವಾಸನೆಗಳನ್ನೂ ನಿಶ್ಶೇಷವಾಗಿ ನಾಶಗೊಳಿಸಿ ಅದನ್ನು (ವಾಸನಾಶೂನ್ಯವಾಗಿ ಮಾಡುವದರ ಮೂಲಕ, ಪುನಃ ಅದು ಮೊಳೆಯದೆ ಇರುವಂತೆ ಮಾಡಲು ಪ್ರಯ ತ್ನಿಸುವವನಾಗು.

ಶ್ರವಾಸನಂ ಸ್ಥಿರಂ ಪ್ರೋಕ್ತಂ ಮನೋಧ್ಯಾನಂ ತದೇವ ತು |
ಸ ಏವ ಕೇವಲೀಭಾವಃ ಶಾಂತತೈವ ಚ ಸಾ ಸದಾ || ೧೭ ||

ತನುವಾಸನಮುತ್ಯುಜ್ಚೈಃ ಪದಾಯೋದ್ಯತಮುಚ್ಯತೇ |
ಅವಾಸನಂ ಮನೋಽಕರ್ತೃಪದಂ ತಸ್ಮಾದವಾಪ್ಯತೇ || ೧೮ ||

ಘನವಾಸನಮೇತತ್ತು ಚೇತಃ ಕರ್ತೃತ್ವಭಾಜನಂ |
ಸರ್ವದುಃಖಪ್ರದಂ ತಸ್ಮಾದ್ವಾಸನಾಂ ತನುತಾಂ ನಯೇತ್ || ೧೯ ||

---

೧೭. ಮನಸ್ಸು ಯಾವಾಗ ವಾಸನಾಶೂನ್ಯವಾಗಿ ಬಿಡುವದೋ ಆಗ ಅದು ಸ್ಥಿರವಾದುದು ಎನ್ನಿಸುವದು. ಅದಕ್ಕೆ ಧ್ಯಾನವೆಂದು (ಸಮಾಧಿಯೆಂದು) ಹೆಸರು. ಕೈವಲ್ಯವೆಂಬುದೂ ಅದೇಯೆ. ಸಾರ್ವಕಾಲಿಕವಾದ (ಎಂದೆಂದಿಗೂ ವಿಕ್ಷೇಪಕ್ಕೆ ಒಳಪಡದ) ಶಾಶ್ವತವಾದ ಪರಮ ಪ್ರಶಾಂತ ಸ್ಥಿತಿಯೆಂಬುದೂ ಇದೇಯೆ.

೧೮. ಈ ಮನಸ್ಸು–ಯಾರಿಗೆ ತನ್ನ ಘನವಾದ ವಾಸನಾಜಾಲದಲ್ಲಿ ಸ್ವಲ್ಪ ಮಾತ್ರವಾದರೂ ಕಳೆದುಕೊಂಡು ಕೃಶವಾಗುವುದೋ ಆಗಲೇ ಅದು (ಸ್ವಲ್ಪ ಮಾತ್ರ ವಾಸನಾವಶದಿಂದಲೇ) ಅತ್ಯುನ್ನತವಾದ ಪುನರಾವೃತ್ತಿರಹಿತವಾದ ಪರಮ ಪದ ಆರಂಭಕ್ಕೋಸ್ಕರ ಉದ್ಯುಕ್ತವಾಗುವುದು ಎಂದು ಪ್ರಾಜ್ಞರು ಹೇಳುವರು. ಹೀಗಿರುವಲ್ಲಿ ಸರ್ವಾನರ್ಥಮೂಲವಾದ ಸಕಲ ವಾಸನೆಗಳನ್ನು ನಿಶ್ಶೇಷವಾಗಿ ಆ ಮನಸ್ಸು ಕಳೆದುಕೊಂಡು ಸುತರಾಂ ವಾಸನಾಶೂನ್ಯವಾಗಿಬಿಟ್ಟರೋ ಆಗ ಅದು ಅಕರ್ತೃವೇ ಆಗಿಬಿಡುವದು. ಹೀಗೆ ಇಂತಹ ಕರ್ತೃತ್ವಶೂನ್ಯವಾದ ಮನಸ್ಸಿನಿಂದಲೇ ಶಾಶ್ವತವಾದ ಪರಮಪದ ಪ್ರಾಪ್ತಿಯು ಸಿದ್ಧಿಸುವುದು.

೧೯. ಆದರೆ ಯಾವಾಗ ಈ ಮನಸ್ಸಿನಲ್ಲಿ ಸಕಲ ವಾಸನೆಗಳೂ ತುಂಬಿಕೊಂಡು ಘನವಾಗಿಬಿಡುವುದೋ ಆಗ ಆ ಮನಸ್ಸು (ವ್ಯವಹಾರ ಮಾಡದೆ ಇರವಂತೆ ಕಂಡುಬಂದರೂ) ಎಲ್ಲ ವ್ಯವಹಾರಗಳ ಕರ್ತೃತ್ವಕ್ಕೂ ಗುರಿಯಾಗಿ ಸಕಲವಿಧ ದುಃಖಗಳಿಗೂ ಕಾರಣವಾಗಿ ಅನರ್ಥಪ್ರದವಾಗುವುದು. ಆದುದರಿಂದ ಅವಿವೇಕಿಯಾದವನು ಪ್ರಥಮತಃ ಕ್ರಮೇಣ ಪ್ರಯತ್ನಪಟ್ಟು, ತನ್ನ ಮನಸ್ಸನ್ನು ನಿಶ್ಶೇಷವಾಗಿ ಸರ್ವ ವಾಸನಾಶೂನ್ಯವನ್ನಾಗಿ ಮಾಡಿಕೊಳ್ಳಬೇಕು.

ಪ್ರಶಾಂತಜಗದಾಸ್ಥೋಽಂತರ್ವೀತಶೋಕಭಯೈಷಿಣಃ |
ಸ್ವಸ್ಥೋ ಭವತಿ ಯೇನಾತ್ಮಾ ಸ ಸಮಾಧಿರಿತಿ ಸ್ಮೃತಃ || ೨೦ ||

ಚೇತಸಾ ಸಂಪರಿತ್ಯಜ್ಯ ಸರ್ವಭಾವಾತ್ಮಭಾವನಾಂ |
ಯಥಾ ತಿಷ್ಠಸಿ ತಿಷ್ಠ ತ್ವಂ ತಥಾ ಶೈಲೇ ಗೃಹೇಽಥ ವಾ || ೨೧ ||

ಗೃಹಮೇವ ಗೃಹಸ್ಥಾನಾಂ ಸುಸಮಾಹಿತಚೇತಸಾಂ |
ಶಾಂತಾಹಂಕೃತಿದೋಷಾಣಾಂ ವಿಜನಾವನಭೂಮಯಃ || ೨೨ ||

---

೨೦. ಸಾಧಕನು ಯಾವುದರ ಪ್ರಭಾವದಿಂದ, ತನಗೆ ಸ್ವಾಭಾವಿಕನಾಗಿ ಪ್ರಪಂಚ ವ್ಯವಹಾರದಲ್ಲಿ (ದೇಹಾದಿರೂಪ) ದೃಶ್ಯಗಳಲ್ಲಿ ನಾನು ನನ್ನದು ಎಂಬ ಆಸ್ಥೆಯನ್ನೆಲ್ಲ ಪೂರ್ತಿಯಾಗಿ ಶಾಂತಿಗೊಳಿಸಿ ಮನಸ್ಸಿನಲ್ಲಿರುವ ಶೋಕ, ಭಯ, ಏಷಣಾತ್ರಯಗಳು ಮುಂತಾದುವುಗಳನ್ನೆಲ್ಲ ನಿಶ್ಶೇಷವಾಗಿ ಪರಿಹರಿಸಿಕೊಂಡು ಸ್ವಸ್ಥನಾಗಿ (ಸ್ವಸ್ವರೂಪದಲ್ಲಿ ಅಚಲನಾಗಿ) ನಿಲ್ಲುವನೋ ಅದನ್ನೇ ಸಮಾಧಿಯೆಂಬ ಹೆಸರಿನಿಂದ ಜ್ಞಾನಿಗಳು ವ್ಯವಹರಿಸುವರು.

೨೧. ಆದುದರಿಂದ, ಅಯ್ಯ ರಾಮಚಂದ್ರ, ನೀನು ಈ ಪ್ರಾಪಂಚಿಕಗಳಾದ, ದೇಹ, ಪುತ್ರ, ಪಶು, ಆರಾಮಾದಿ ಸಕಲ ದೃಶ್ಯಗಳಲ್ಲಿಯೂ ನಾನು, ನನ್ನದು (ಅಹಂ ಮಮ) ಎಂಬೀ ಅಧ್ಯಾಸರೂಪವಾದ ಆತ್ಮಭಾವನೆಯನ್ನು ಮನಃಪೂರ್ವಕವಾಗಿ ಪೂರ್ತಿಯಾಗಿ ಬಿಟ್ಟುಬಿಟ್ಟು ನಿನ್ನ ಇಚ್ಛೆ ಬಂದಂತೆ ಪರ್ವತದಲ್ಲಾದರೂ ಸರಿಯೇ ಅಥವಾ ಮನೆಯಲ್ಲಾದರೂ ಸರಿಯೇ ಹೇಗೆ ಬೇಕಾದರೂ ಎಲ್ಲಿಯಾದರೂ ವಾಸ ಮಾಡಿಕೊಂಡಿರು.

[ಪರ್ವತದ ಮೇಲೆಯೇ ಇದ್ದುಕೊಂಡು ಸಮಾಧಿಸ್ಥನಾಗಿಯಾದರೂ ಇರು. ಅಥವಾ ಮನೆಯಲ್ಲಿದ್ದುಕೊಂಡು ವ್ಯವಹಾರಪರನಾಗಿಯಾದರೂ ಇರು. ಅದರಿಂದ ನಿನಗೆ ಬಂಧನವು ಇಲ್ಲ.]

೨೨. ಚೆನ್ನಾಗಿ ಸಮಾಧಿನಿಷ್ಠೆಯಿಂದ ಸ್ಥಿರವಾದ ಚಿತ್ತವೃತ್ತಿಯುಳ್ಳವರಾಗಿ ಪ್ರಾಪಂಚಿಕ ದೃಶ್ಯಗಳಲ್ಲಿ ಸರ್ವತ್ರ ಅಹಂ ಮಮಾಧ್ಯಾಸರೂಪ ಮಾಲಿನ್ಯವನ್ನು ಕಳೆದುಕೊಂಡಿರುವ ಪವಿತ್ರಾತ್ಮರು ಗೃಹಸ್ಥರಾಗಿದ್ದರೂ ಕೂಡ ಅವರು ವಾಸವಾಗಿರುವ ಮನೆಗಳೇ. ಅವರಿಗೆ ನಿರ್ಜನವಾದ ತಪೋವನ ಪ್ರಾಂತಗಳಂತೆ ಸಮಾಧಿ ಪ್ರತಿಷ್ಠಾನುಕೂಲಗಳಾಗಿರುವವೇ ಹೊರತು ಪ್ರತಿಕೂಲಗಳಾಗುವದಿಲ್ಲ.

ಆರಣ್ಯಸದನೇ ತುಲ್ಯೇ ಸಮಾಹಿತಮನೋದೃಶಾಂ |
ಭವತಾಮಿಹ ಭೂತಾನಾಂ ಭೂತಾನಾಂ ಮಹತಾಮಿವ || ೫೩ ||

ಶಾಂತಚಿತ್ತಮಹಾಭ್ರಸ್ಯ ಜನಜ್ವಾಲೋಜ್ವಲಾನ್ಯಪಿ |
ನಗರಾಣ್ಯಽಪಿ ಶೂನ್ಯಾನಿ ವನಾನ್ಯವನಿಪಾತ್ಮಜ || ೫೪ ||

ವೃತ್ತಿಮಚ್ಚಿತ್ತಮತ್ತಸ್ಯ ವಿಜನಾನಿ ವನಾನ್ಯಪಿ |
ನಗರಾಣಿ ಮಹಾಲೋಕಪೂರ್ಣಾನಿ ಪರವೀರಹ || ೫೫ ||

ವೃತ್ತಿಂ ಚಿತ್ತಮಭ್ಯೇತಿ ಭ್ರಮಸ್ಯಾಂತಃ ಸುಷುಪ್ತತಾಂ |
ನಿರ್ವಾಣಮೇತಿ ನಿರ್ವಾಣಂ ಯಥೇಚ್ಛಸಿ ತಥಾಕುರು || ೫೬ ||

---

೫೩. ಆಕಾಶಾದಿ ಪಂಚ ಮಹಾಭೂತಗಳಿಗೆ, ಗ್ರಾಮ, ಅರಣ್ಯ, ಗೃಹ ಮುಂತಾದ ಸ್ಥಾನಗಳ ವಿಷಯದಲ್ಲಿ ಹೇಗೆ ಭೇದವು ಇರುವದಿಲ್ಲವೋ ಹಾಗೆಯೇ ಸಮಾಧಿಯಲ್ಲಿದ್ದುಕೊಂಡು ಚಿತ್ತೈಕಾಗ್ರತೆಯಿಂದ ತತ್ತ್ವಸಾಕ್ಷಾತ್ಕಾರಮಾಡಿ ನಿತ್ಯಾಪರೋಕ್ಷ ಪ್ರತ್ಯಗಾತ್ಮ ಸ್ವರೂಪದಲ್ಲಿ ಪರಿನಿಷ್ಠಿತರಾದ ನಿನ್ನಂತಹ ಮಹಾ ಜ್ಞಾನಿಗಳಿಗೆ ಅರಣ್ಯವೂ ಮನೆಯೂ ಒಂದೇ ಸಮನಾಗಿಯೇ ಇರುವವು.

೫೪. ಅಯ್ಯಾ ಚಕ್ರವರ್ತಿತನೂ ಜಾತನಾದ ರಾಮಚಂದ್ರ, ಆಕಾಶವನ್ನು ಮುಸುಕಿಕೊಂಡಿದ್ದ ಮೇಘಗಳ ಓಡಾಟವು ಪ್ರಶಾಂತವಾಗಲು ನಿರ್ಮಲವಾಗಿ ವಿರಾಜಿಸುವ ಮಹಾಕಾಶದಂತೆ ಅವಿದ್ಯಾರಾಗದ್ವೇಷಾದಿ ಮಲಶೂನ್ಯವಾಗಿ ನಿರ್ವಾಸನವಾದ ಪ್ರಶಾಂತಚಿತ್ತವುಳ್ಳ ಮಹಾತ್ಮನಿಗೆ ಜನಗಳ ಗುಂಪುಗಳಿಂದ ನಿಬಿಡವಾದ ನಗರಗಳೂ ಕೂಡ ನಿರ್ಜನಗಳಾದ ತಪೋವನಗಳಂತೆಯೇ ಸಮಾಧ್ಯನುಕೂಲ ವಾದ ಪ್ರಶಾಂತ ವಾತಾವರಣವುಳ್ಳವುಗಳಾಗುವವು.

೫೫. ಹಾಗಾಗದೆ, ರಾಗದ್ವೇಷಾದಿ ಮಲಿನಮಯವಾದ ವೃತ್ತಿಗಳಿಂದ ಕಲುಷಿತ ಚಿತ್ತನಾಗಿ, ಮದಾಂಧನಾಗಿರುವ ನರಾಧಮನಿಗಾದರೋ, ನಿರ್ಜನವಾಗಿ ರತಕ್ಕ ವನಭೂಮಿಗಳೂ ಕೂಡ (ಎಲೈ ಶತ್ರುವೀರರನ್ನು ನಿಗ್ರಹಿಸತಕ್ಕ ಸಾಮರ್ಥ್ಯ ಶಾಲಿಯೇ,) ಬಹುಜನಭರಿತಗಳಾದ ಮಹಾನಗರಗಳಂತೆಯೇ ಮನಶ್ಯಾಂತಿಗೆ ಭಂಗಕಾರಿಗಳಾಗುವವು.

೫೬. ರಾಗದ್ವೇಷಾದಿ ವಾಸನಾಮಯವಾಗಿ ಅತ್ಯಂತ ವಿಕ್ಷಿಪ್ತವಾದ ಚಿತ್ತವು ನಾನಾವಿಧ ವಿಷಯ ಭ್ರಾಂತಿಯೊಳಗಡೆ ಲಯವನ್ನು ಹೊಂದಿ ಪುನಃ ಸಹಸ್ರಮುಖ

ಸರ್ವಭಾವಪದಾತೀತಂ ಸರ್ವಭಾವಾತ್ಮಕಂ ಚ ವಾ |
ಯಃ ಪಶ್ಯತಿ ಸದಾತ್ಮಾನಂ ಸ ಸಮಾಹಿತ ಉಚ್ಯತೇ ॥ ೨೭ ॥

ಈಹಿತಾನೀಹಿತೇ ಕ್ಷೀಣೇ ಯಸ್ಯಾಂತರ್ವರ್ತಿತಾಕೃತೇಃ |
ಸರ್ವೇ ಭಾವಾಃ ಸಮಾ ಯಸ್ಯ ಸ ಸಮಾಹಿತ ಉಚ್ಯತೇ ॥ ೨೮ ॥

ಗಳಾದ ವಿಕ್ಷೇಪಗಳಿಗೆ ಬೀಜಭೂತವಾಗಿರುವ ಅಜ್ಞಾನ ನಿದ್ರೆಯನ್ನು ಪಡೆದು ಕಂಗೆಟ್ಟು ಕೃತ್ಯಾಕೃತ್ಯ ವಿವೇಕಶೂನ್ಯವಾಗಿ ಕೊನೆಗೆ ನಾಶವನ್ನೈದುವದು. ರಾಗಾದಿ ವಾಸನೆಗಳನ್ನು ಸಂಪೂರ್ಣವಾಗಿ ಶಾಂತಪಡಿಸಿಕೊಂಡಿರತಕ್ಕ ಚಿತ್ತ ವಾದರೋ ಮೋಕ್ಷ ಸುಖದಲ್ಲಿ ಸ್ಥಿರವಾಗಿ ವಿಶ್ರಾಂತಿಯನ್ನೈದುವದು. ನಿನಗೆ ಹೇಗೆ ಇರಲು ಇಚ್ಛೆಯಿರುವದೋ ಹಾಗೆ ಮಾಡು.

೨೭. ಯಾವ ತತ್ತ್ವಜ್ಞಾನಿಯು ತಾನು ಸರ್ವಭಾವ (ಪದಾರ್ಥ) ಗಳ ಸ್ಥಿತಿಯನ್ನು ಅತಿಕ್ರಮಿಸಿರತಕ್ಕವನೆಂದೂ ಅಥವಾ ತಾನೇ ಸರ್ವಭಾವ ಸ್ವರೂಪ ನೆಂದೂ ತನ್ನನ್ನು ತಿಳಿದುಕೊಂಡಿರುವನೋ ಅವನನ್ನು ಸರ್ವದಾ ಸಮಾಧಿನಿಷ್ಠ ನೆಂದೇ ಹೇಳಬೇಕು.

[ತತ್ತ್ವಜ್ಞಾನಿಯು ಸಮಾಧಿದಶೆಯಲ್ಲಿ ತಾನು ಸಕಲ ದೃಶ್ಯ ವಿಲಕ್ಷಣನಾಗಿ ಸರ್ವ ಭಾವಾತೀತನೆಂದು ತಿಳಿದಿರುವನು. ವ್ಯವಹಾರದಶೆಯಲ್ಲಿಯಾದರೋ ತಾನೇ ಸರ್ವಭಾವ ಸ್ವರೂಪನೆಂದೂ ತಿಳಿಯುವನು. ಹೀಗೆ ಅವನಿಗೆ ಏಕದೇಶದಲ್ಲಿ (ಕೆಲವು ವ್ಯಕ್ತಿಗಳಲ್ಲಿ ಮಾತ್ರವೇ) ಅಹಂಕಾರ ಮಮಕಾರಗಳು ಇಲ್ಲವಾಗಿ ಹೋಗುವದ ರಿಂದ ಅವನಿಗೆ ರಾಗದ್ವೇಷಾದಿಗಳಾಗಲಿ, ಅಥವಾ ತನ್ಮೂಲಕವಾದ ವಿಕ್ಷೇಪವಾಗಲಿ ಪ್ರಸಕ್ತವಾಗುವದಿಲ್ಲ ಎಂಬುದೇ ಇಲ್ಲಿನ ಭಾವವು.]

೨೮. ವಿಶಾಲವಾದ ಹೃದಯವುಳ್ಳ ಮಹಾನುಭಾವನಿಗೆ ರಾಗದ್ವೇಷಗಳು ಸುತರಾಂ ಇಲ್ಲವಾಗಿ ನಾಶಹೊಂದಿರುವವೋ ಮತ್ತು ಸಕಲ ಭಾವಗಳೂ ಸಮಾನ ವಾಗಿರುವವೋ (ಸಕಲ ಭಾವಗಳಲ್ಲಿಯೂ ಒಂದೇ ಸಮನಾದ ದೃಷ್ಟಿಯಿರುವದೋ) ಅವನು ಸಮಾಹಿತನೆಂದು ವ್ಯವಹರಿಸಲ್ಪಡುವನು.

ಸಮಾತ್ಮನಾ ಸದೇವೇದಂ ಜಗತ್ಪಶ್ಯತಿ ನೋ ಮನಃ |
ಯಥಾಸ್ವಪ್ನೇ ತಥೈವಾಸ್ಮಿನ್ ಜಾಗ್ರತ್ಯಪಿ ಜನೇಶ್ವರ || ೨೯ ||

ಯಥಾ ವಿಪಣಿಕಾ ಲೋಕಾ ಬಹಿರಂತೋಽಪ್ಯಸತ್ಸಮಾ |
ಅಸಬಂಧಾತ್ತಥಾ ಜ್ಞಸ್ಯ ಗ್ರಾಮೋಽಪಿ ವಿಪಿನೋಪಮಃ || ೩೦ ||

ಅಂತಮುಖಮನಾ ನಿತ್ಯಂ ಸುಪ್ತೋ ಬುದ್ಧೋ ವ್ರಜನ್ನಪಿ |
ಪುರಂ ಜನಪದಂ ಗ್ರಾಮಮರಣ್ಯಮಿವ ಪಶ್ಯತಿ || ೩೧ ||

---

೨೯. ಅಯ್ಯ ಚಕ್ರವರ್ತಿಯಾದ ರಾಮ, ಸರ್ವತ್ರ ಸಮಬುದ್ಧಿಯುಳ್ಳ ಉದಾರ ಹೃದಯನ ಮನಸ್ಸು ಈ ದೃಶ್ಯವು ಸ್ವಪ್ನದಲ್ಲಿ ಹೇಗೆಯೋ ಹಾಗೆ ಈ ಜಾಗ್ರತ್ತಿನಲ್ಲಿಯೂ ಕೂಡ ಸದ್ರೂಪದಿಂದ ಸತ್ ಆಗಿಯೇ ಇರುವುದೆಂದು ಕಾಣುವುದು ಈ ಜಗತ್ತು ಸದ್ವ್ಯತಿರಿಕ್ತವಾದ ರೂಪವುಳ್ಳದ್ದೆಂದು ಎಂದಿಗೂ ಕಾಣುವುದಿಲ್ಲ.

["ಯಸ್ಯ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ | ತಸ್ಯಕೋ ಮೋಹಃ ಕಃ ಶೋಕಃ ಏಕತ್ವಮನು ಪಶ್ಯತಃ || ಬೃಹದಾರಣ್ಯಕ.]

೩೦. ಅಂಗಡಿಬೀದಿಯಲ್ಲಿ ಒಟ್ಟಿಗೆ ಗುಂಪು ಕೂಡಿಕೊಂಡಿರತಕ್ಕ ಅನೇಕ ಜನಗಳು ತಮ್ಮ ತಮ್ಮ ವ್ಯವಹಾರಗಳಲ್ಲಿ ನಿರತನಾಗಿದ್ದರೂ ಕೂಡ ಪರಸ್ಪರ ಸಂಬಂಧವಿಲ್ಲದ ಕಾರಣ ಉದಾಸೀನವಾಗಿಯೂ ಅನ್ಯೋನ್ಯ ಉಪಕಾರ ಮಾಡದೆ ಇರುವವರಾಗಿಯೂ ಇದ್ದುಕೊಂಡು ಹೇಗೆ ಅಸತ್ಪ್ರಾಯರೇ (ಇದ್ದರೂ ಇಲ್ಲದವರಂತೆಯೇ) ಆಗುವರೋ ಹಾಗೆಯೇ ಜ್ಞಾನಿಯಾದವನಿಗೆ ಜನಭರಿತವಾದ ಗ್ರಾಮ ನಗರಾದಿ ಪ್ರದೇಶಗಳೂ ಕೂಡ ನಿರ್ಜನವಾದ ಅರಣ್ಯಭೂಮಿಗೆ ಸಮಾನಗಳಾಗಿಯೇ ಇರುವವು.

೩೧. ಸರ್ವದಾ ಅಂತರ್ಮುಖವಾದ ಮನಸ್ಸುಳ್ಳ (ಬಾಹ್ಯದಲ್ಲಿ ದೃಶ್ಯಗಳ ಕಡೆಗೆ ಸಹಜವಾಗಿಯೇ ಅಭಿಮುಖವಾಗಿ ಓಡುವ ಮನಸ್ಸನ್ನು ಹಿಂದಿರುಗಿಸಿ ಆತ್ಮ ದರ್ಶನದಲ್ಲಿ ಪ್ರವರ್ತಿಸುವಂತೆ ಮಾಡಿಕೊಂಡಿರುವ) ತತ್ತ್ವಜ್ಞನು ತಾನು ಮಲಗಿಕೊಂಡಿದ್ದರೂ ಅಥವಾ ಎಚ್ಚರದಿಂದಿದ್ದರೂ ಅಥವಾ ಪ್ರಯಾಣ ಮಾಡುತ್ತಿದ್ದರೂ ಕೂಡ ನಗರ, ದೇಶ, ಗ್ರಾಮ ಮುಂತಾದ ಜನಭರಿತವಾದ ಸ್ಥಳಗಳನ್ನೂ ನಿರ್ಜನವಾದ ಅರಣ್ಯದಂತೆಯೇ ಕಾಣುವನು.

ಸರ್ವದಾಕಾಶತಾಮೇತಿ ನಿತ್ಯಮಂತರ್ಮುಖಸ್ಥಿತೇಃ |
ಸರ್ವಥಾನುಪಯೋಗ್ಯತ್ವಾದ್ಭೂತಾಕುಲಮಿದಂ ಜಗತ್ || ೩೨ ||

ಅಂತಃಶೀತಲತಾಯಾಂ ತು ಲಬ್ಧಾಯಾಂ ಶೀತಲಂ ಜಗತ್ |
ವಿಜ್ವರಾಣಾಮಿವ ನೃಣಾಂ ಭವತ್ಯಾಜೀವಿತಸ್ಥಿತೇಃ || ೩೩ ||

ಅಂತಸ್ತೃಷ್ಣೋಪತಪ್ತಾನಾಂ ದಾವದಾಹಮಯಂ ಜಗತ್ |
ಭವತ್ಯಖಿಲಜಂತೂನಾಂ ಯದಂತಸ್ತದ್ಬಹಿಃ ಸ್ಥಿತಂ || ೩೪ ||

---

೩೨. ಸರ್ವದಾ ಅಂತರ್ಮುಖಿಯಾಗಿ ಆತ್ಮಾಭಿಮುಖವಾದ ಸ್ಥಿತಿಯುಳ್ಳ ಜ್ಞಾನಿಗೆ ಸಕಲ ಪ್ರಾಣಿಗಳಿಂದಲೂ ಪೃಥಿವ್ಯಾದಿ ಪಂಚಭೂತಗಳಿಂದಲೂ ನಿಬಿಡವಾಗಿರುವ ಈ ಸಕಲ ಜಗತ್ತು ಸರ್ವವಿಧಗಳಿಂದಲೂ ಸ್ವಲ್ಪಮಾತ್ರವಾದರೂ ಉಪಯೋಗಕಾರಿಯಲ್ಲವಾಗಿರುವದರಿಂದ (ಅನುಪಯೋಗಕರ–ನಿಷ್ಪ್ರಯೋಜಕ) ಇಡಿಲ್ಲವೂ ಜ್ಞಾನಬಾಧಿತವಾಗಿ ಶೂನ್ಯವಾಗಿಯೇ ತೋರುವದು. (ಜ್ಞಾನಿಗೆ ಈ ಜಗತ್ತಿನಿಂದ ಸ್ವಲ್ಪಮಾತ್ರವೂ ಯಾವ ಪ್ರಯೋಜನವೂ ಇಲ್ಲದ ಕಾರಣ ಅದನ್ನು ಗಮನಿಸುವದೇ ಇಲ್ಲ. ಅವನ ಪಾಲಿಗೆ ಈ ಜಗತ್ತು ಶೂನ್ಯವೇ ಸರಿ.)

೩೩. ಔಷಧ ಸೇವನೆ–ಉಪಚಾರ, ಪಥ್ಯ ಮೊದಲಾದವುಗಳಿಂದ ದೇಹದೊಳಗೆ ಹುಟ್ಟಿದ ಜ್ವರದ ಸಂತಾಪವನ್ನು ಪರಿಹರಿಸಿಕೊಂಡು ಬಿಟ್ಟರೆ ಆಗ ಜ್ವರವಿನಿರ್ಮುಕ್ತರಾದ ಜನಗಳಿಗೆ ಹೊರಗೂ ತಾಪ ಪರಿಹಾರವಾಗುವಂತೆಯೇ ವೈರಾಗ್ಯ ಸಮಾಧ್ಯಭ್ಯಾಸಾದಿಗಳಿಂದ ವಾಸನಾಶೂನ್ಯವಾದ ಮನಸ್ಸಿನೊಳಗೆ ಅತ್ಯಂತ ಶೀತಲವಾದ ಶಾಂತಿರಸವು ಆವಿರ್ಭವಿಸಲಾಗಿ ಆಗ ತತ್ತ್ವಜ್ಞಾನಿಗಳಿಗೆ ಯಾವಜ್ಜೀವವೂ ಸಮಸ್ತ ಜಗತ್ತೂ ಸರ್ವದಾ ಪ್ರಶಾಂತವಾಗಿಯೇ ಇರುವದು.

[ಸಂತಾಪಹೇತುವಾದುದಾದರೂ ಜಗತ್ತು, ಜ್ಞಾನಿಗಳಿಗೆ ಸ್ವಲ್ಪವೂ ಸಂತಾಪಕಾರಿಯಾಗುವದಿಲ್ಲ ಎಂದರ್ಥ.]

೩೪. ಹಾಗಲ್ಲದೆ ಮನಸ್ಸಿನಲ್ಲಿ ವಿವಿಧ ಭೋಗತೃಷ್ಣೆಗಳೆಂಬ ಜ್ವರಗಳು ವೃದ್ಧಿಹೊಂದುವದಕ್ಕೆ ಅವಕಾಶವನ್ನುಂಟುಮಾಡಿ ಬಿಟ್ಟರೋ ಅಂತಹ ತೃಷ್ಣಾಜ್ವರಗಳ ಸಂತಾಪದಿಂದ ಮನಸ್ಸು ಸಂತಪ್ತವಾಗಿರುವ ಕಾರಣ ಈ ಜಗತ್ತು ಸಕಲ ಜಂತುಗಳಿಗೂ ಒಂದೇ ಸಮನಾಗಿ ಕಾಡುಗಿಚ್ಚಿನ ದಾಹದಿಂದ ಬೆಂದು ಬೇಗುದಿಗೊಂಡಿರ

ದ್ಯೌಃ ಕ್ಷಮಾ ವಾಯುರಾಕಾಶಂ ಪರ್ವತಾಃ ಸರಿತೋ ದಿಶಃ |
ಅಂತಃಕರಣತತ್ವಸ್ಯ ಭಾಗಾ ಬಹಿರಿವ ಸ್ಥಿತಾಃ || ೩೫ ||

ವಟಧಾನಾ ಬಟಇವ ಯದಂತಸ್ಥಂ ಸದಾತ್ಮನಃ |
ತದ್ಬಹಿರ್ಭಾಸತೇ ಭಾಸ್ವದ್ವಿಕಾಸೇ ಪುಷ್ಪಗಂಧವತ್ || ೩೬ ||

ನ ಬಹಿಸ್ಥಂ ನ ವಾಂತಸ್ಥಂ ಕ್ವಚಿತ್ಕಿಂಚನ ವಿದ್ಯತೇ |
ಯದ್ಯಥಾ ಕಚಿತಂ ಚಿತ್ವಾತ್ತ್ತಥಾ ತತ್ವಮುತ್ಥಿತಂ || ೩೭ ||

ವಂತೆಯೇ ಸಂತಾಪಕರವಾಗಿ ತೋರುವದು. ಏಕೆಂದರೆ ಶರೀರದೊಳಗೆ ಮನಸ್ಸು ಹೇಗೆ ಶೀತಲವಾಗಿಯೋ ಅಥವಾ ತಪ್ತವಾಗಿಯೋ ಇರುವದೋ ಹಾಗೆಯೇ ಹೊರಗೆ ಅದೇ ಮನಸ್ಸು ಜಗತ್ತಿನ ಆಕಾರದಿಂದ ಶೀತಲವಾಗಿಯೋ ಅಥವಾ ತಪ್ತವಾಗಿಯೋ ತೋರುವದು ಸ್ವಾಭಾವಿಕವೇ.

೩೫. ಸ್ವರ್ಗ, ಭೂಮಿ, ವಾಯು, ಆಕಾಶ, ಪರ್ವತಗಳು, ನದಿಗಳು, ದಿಕ್ಕುಗಳು ಇತ್ಯಾದಿಗಳೆಲ್ಲವೂ ಅಂತಃಕರಣ ತತ್ತ್ವದ ಭಾಗಗಳಾಗಿಯೇ ಹೊರಗೆ ಇರುವ ಹಾಗೆ ತೋರುವವು.

೩೬. ವಟಬೀಜದಲ್ಲಿ ವಟವೃಕ್ಷವು ಅಡಗಿಕೊಂಡಿದ್ದು ಕಾಲಾಂತರದಲ್ಲಿ ಜಲ ಸೇಕಾದಿ ನಾನಾ ಸಂಸ್ಕಾರಗಳಿಂದ ಅದು ಬಹಿಃ ಪ್ರಕಟವಾಗುವದು. ಅದರಂತೆಯೇ ಈ ಜಗತ್ತು ತನ್ನ ಅಧಿಷ್ಠಾನವಾದ ಸದ್ರೂಪ ಆತ್ಮನಲ್ಲಿ ಅನಭಿವ್ಯಕ್ತವಾಗಿ ಒಳಗೆ ಅಡಗಿರುವದು. ಅದೇ ಕಾಲಾಂತರದಲ್ಲಿ ಸೃಜ್ಯಮಾನ ಪ್ರಾಣಿ ಕರ್ಮವಶದಿಂದ ಹೊರಗೆ ಅಭಿವ್ಯಕ್ತವಾಗಿ (ಪ್ರಕಾಶಮಾನವಾಗಿ) ಸೂರ್ಯ ತೇಜಸ್ಸಿನಿಂದ ಹೂಗಳು ಅರಳಿದ ಕೂಡಲೆ ಆದರ ವಾಸನೆಯು ಹೊರಗೆ ಪ್ರಸರಿಸುವಂತೆ ಪ್ರಕಟವಾಗುವದು.

[ಇದು ಸತ್ಕಾರ್ಯವಾದಿಗಳ ಮತವು ವೇದಾಂತಿಗಳಿಗೆ ಅಭಿಮತವೂ ಆದ್ಯತವೂ ಆದುದು.]

೩೭. ವಸ್ತುತಃ ಯಾವದೊಂದು ವಸ್ತುವೂ ಎಲ್ಲಿಯೂ ಯಾವಾಗಲೂ ಹೊರಗೆ ಇರತಕ್ಕುದೂ ಅಲ್ಲ. ಮತ್ತು ಒಳಗೆ ಇರತಕ್ಕುದಾಗಿಯೂ ಇಲ್ಲ. ಆದರೆ ಸಕಲವೂ ಚಿದ್ರೂಪವೇ ಆಗಿರುವದರಿಂದ ಯಾವ ವಸ್ತುವು ವಾಸನಾಬಲದಿಂದ

ಆತ್ಮತತ್ತ್ವಾಂತರಂ ಭಾತಿ ಬಹಿಷ್ಟೇನ ಜಗತ್ತಯಾ |
ಕರ್ಪೂರಮಿವ ಗಂಧೇನ ಸಂಕೋಚೇ ಪ್ರವಿಕಾಶಿ ಚ || ೩೮ ||

ಆತ್ಮೈವ ಸ್ಫುರತಿ ಸ್ಫಾರಂ ಜಗತ್ವೇನಾಪ್ಯಹಂತಯಾ |
ಬಾಹ್ಯತ್ವೇನಾಂತರತ್ವೇನ ಸ ಚ ನಾಸನ್ನ ಸನ್ವಿಭುಃ || ೩೯ ||

ಬಹಿಷ್ಠೇನಾಂತರಂ ಬಾಹ್ಯಮಂತಸ್ಥೇನಾಂತರಸ್ಥಿತಂ |
ಯಥಾವಿಧಿತಮಾತ್ಮಾನಂ ಸ್ವಚಿತ್ತಮನುಪಶ್ಯತಿ || ೪೦ ||

ಚೈತನ್ಯದ ದೆಸೆಯಿಂದ ಯಾವ ರೂಪದಲ್ಲಿ ಪ್ರಕಟವಾಗುವದೋ ಆ ಪ್ರಕಾರದಲ್ಲಿಯೇ ಅದೇ ರೂಪದಿಂದ ಪರಮಾರ್ಥ ತತ್ತ್ವವೇ ಎದ್ದು ಗೋಚರವಾಗುತ್ತಿರುವದು.

೩೮. ಒಂದು ಸಂಪುಟದೊಳಗೆ ಇರುವ ಕರ್ಪೂರವು ಸಂಕುಚಿತವಾದ ಅತ್ಯಲ್ಪ ಸ್ಥಳದಲ್ಲಿದ್ದರೂ ತನ್ನಲ್ಲಿರುವ ಗಂಧರೂಪದಿಂದ ಹೇಗೆ ಹೊರಗೆ ವ್ಯಾಪಿಸಿಕೊಂಡಿರ್ರುವದೋ ಹಾಗೆಯೇ ಆತ್ಮತತ್ವರೂಪವಾದ ಆಂತರವಸ್ತುವೇ ಹೊರಗೆ ಪ್ರಕಟವಾಗಿ ಜಗದ್ರೂಪವಾಗಿ ಭಾಸಿಸುತ್ತಿರುವದು. ಆಯಾ ನಾನಾ ಉಪಾಧಿಗಳಿಗೆ ಅನುಸಾರವಾದ ಸಂಕೋಚ ಭಾವವು ಇದ್ದಾಗ್ಯೂ ಕೂಡ ಸ್ವಚೈತನ್ಯರೂಪದಿಂದ ಸರ್ವತ್ರ ವ್ಯಾಪಿಸಿರುವದು.

೩೯. ಆತ್ಮನೇ ಬಾಹ್ಯರೂಪದಿಂದ ಅತಿ ವಿಸ್ತಾರವಾದ ಜಗದಾಕಾರನಾಗಿಯೂ ಆಂತರ ರೂಪದಿಂದ ಅಹಂಕಾರಾಕಾರನಾಗಿಯೂ ಸ್ಫುರಿಸುತ್ತಲಿರುವನು. ಆ ಆತ್ಮನು ಚಕ್ಷುರಾದೀಂದ್ರಿಯಗಳಿಗೆ ಅದೃಶ್ಯವಾದ ಅಹಂಕಾರಾದಿ . ರೂಪನು ಅಲ್ಲವು. ಮತ್ತು ಚಕ್ಷುರಾದಿಗಳಿಗೆ ದೃಶ್ಯವಾದ ಬಾಹ್ಯ ಸ್ಥೂಲರೂಪನೂ ಅಲ್ಲ. ಆದರೆ ವಿಭುವಾಗಿರುವನು. ಅಂದರೆ ದೃಶ್ಯವೂ ಅದೃಶ್ಯವೂ .ಆದ ಉಭಯ ವಿಧ ವಸ್ತುಗಳಲ್ಲಿ ಸರ್ವದಾ ಅನುಸ್ಯೂತವಾದ ಸನ್ಮಾತ್ರೈಕ ರೂಪನು ಆಗಿರುವನು.

೪೦. ಆದುದರಿಂದಲೇ ಈ ಆತ್ಮನು ಆಂತರವಾದ ತನ್ನ ಚಿತ್ತವನ್ನೇ ಪೂರ್ವ ಪೂರ್ವ ಜ್ಞಾನಾನುಸಾರವಾಗಿ ಬಹಿರ್ಮುಖಗಳಾದ ಚಕ್ಷುರಾದೀಂದ್ರಿಯಗಳಿಂದ ಬಾಹ್ಯ ಜಗದಾಕಾರವನ್ನಾಗಿಯೂ ಮತ್ತು ಅಂತಃಸ್ಥವಾದ ಜಾಗ್ರದ್ವಾಸನಾದಿಗಳಿಂದ ಹೃದಯದೊಳಗೆ ಅಂತರ್ಗತವಾಗಿರುವ ಸ್ವಪ್ನರಾಜ್ಯಾದಿಗಳನ್ನೂ ಅನುಸರಿಸಿ ನೋಡುವನು.

ಸಬಾಹ್ಯಾಂತರಂ ಶಾಂತಮಾತ್ಮನೋ ಭೇದಿತಂ ಜಗತ್ |
ಅಹಂತ್ವಾದಿಸ್ಥಿತೇ ಭೇದೇ ಭೂರಿಭಂಗಭಯಂ ತು ತತ್ || ೪೧ ||

ದ್ಯೌಃ ಕ್ಷಮಾ ವಾಯುರಾಕಾಶಂ ಪರ್ವತಾಃ ಸರಿತೋ ದಿಶಃ |
ಕಲ್ಪಾದಿರೇವ ಜ್ವಲಿತಂ ಸರ್ವಮಾಧಿಹತಾತ್ಮನಃ || ೪೨ ||

---

೪೧. ಬಾಹ್ಯ ಮತ್ತು ಅಭ್ಯಂತರಗಳಿಂದ ಸಹಿತವಾದ (ದ್ವಿವಿಧವಾಗಿರುವ) ಈ ಜಗತ್ತು ದೃಶ್ಯಾದೃಶ್ಯಗಳೆಂಬ ಉಭಯ ವಿಧ ವಸ್ತುಗಳಲ್ಲಿ ಸರ್ವದಾ ಅನುಸ್ಯೂತವಾಗಿರುವ ಸದ್ರೂಪನಾದ ಆತ್ಮನಿಗಿಂತ ಪೃಥಕ್ಕಾಗಿ (ಪ್ರತ್ಯೇಕವಾಗಿ) ಇರುವಂತೆ ಮಾಡಲ್ಪಟ್ಟಿರುವ ಪಕ್ಷದಲ್ಲಿ, ಅದು ಸತ್ತೂ ಅಲ್ಲದೆ ಅಸತ್ತೂ ಅಲ್ಲದೆ ಸದಸತ್ ಆಗಿಯೇ ಇರುವುದೆಂಬ ಕಾರಣದಿಂದ ಆಗ ಅದು ಸದಸದ್ವಿಲಕ್ಷಣರೂಪ ಅನಿರ್ವಚನೀಯ ಮಿಥ್ಯಾಭೂತವಾಗಿ ಮೃತಪ್ರಾಯವೇ ಆಗಿಬಿಡುವದು. ಜಗತ್ತು ಸದ್ರೂಪನಾದ ಆತ್ಮನಿಗಿಂತ ಪೃಥಕ್ಕಾಗಿ ಮಾಡಲ್ಪಡಲಿಲ್ಲ ಎಂದು ಹೇಳುವ ಪಕ್ಷದಲ್ಲಿ ಯಾದರೋ ಆ ಆತ್ಮಸತ್ತೆಯಿಂದಲೇ ಬಾಹ್ಯಾಂಭ್ಯಂತರಗಳೆಂಬ ಭೇದವು ಇದ್ದು ಕೊಂಡಿರಲು ಅದರಲ್ಲಿ ಅಹಂಕಾರ ಮಮಕಾರಗಳನ್ನು ಅಧ್ಯಾಸ ಮಾಡಬೇಕಾಗಿರುವದು. ಹೀಗೆ ಅಧ್ಯಸ್ತವಾದ ಅಹಂಕಾರ ಮಮಕಾರಗಳಿಗೆ ಭಂಗವುಂಟಾದಾಗ ಈ ಜಗತ್ತೂ ಅನೇಕ ಭಂಗವುಳ್ಳದ್ದಾಗುವದು.

[ಸದ್ರೂಪನಾದ ಆತ್ಮನಿಗಿಂತ ಪೃಥಕ್ಕಾಗಿ ಕೃತವೆಂದು ಹೇಳುವದರಿಂದ ಅದು ಸದ್ಭಿನ್ನವೇ ಆಗಿಬಿಡುವದು ಸತ್ ಆಗುವದಿಲ್ಲ. ಜಗತ್ತು ವ್ಯವಹಾರ ವಿಷಯವಾಗಿರುವದರಿಂದ ಶಶವಿಷಾಣ, ವಂಧ್ಯಾಪುತ್ರಾದಿಗಳಂತೆ ಅಸತ್ ಆಗುವದಿಲ್ಲ. ಆದಕಾರಣ ಸದಸದಾತ್ಮಕ ಮಿಥ್ಯೆಯೆಂದರ್ಥ.]

೪೨. ಭೂರಿಭಂಗ ಭಯವೇಕೆಂದರೆ ಆಯಾ ಆಧಿಗಳಿಂದ (ಮನೋವ್ಯಥೆಗಳಿಂದ) ನಷ್ಟವಾದ ಬುದ್ಧಿಯುಳ್ಳವನಿಗೆ ಸ್ವರ್ಗ, ಭೂಮಿ, ವಾಯು, ಆಕಾಶ, ಪರ್ವತಗಳು, ನದಿಗಳು, ದಿಕ್ಕುಗಳು ಇತ್ಯಾದಿ ವಸ್ತುಜಾತವೆಲ್ಲವೂ ತಾಪತ್ರಯವೆಂಬ ಅಗ್ನಿಗಳ ಜ್ವಾಲೆಗಳಿಂದ ಜ್ವಲಿತವಾಗಿ (ಉರಿದುಹೋಗಿ) ಅದೇ ಪ್ರಕಾರವಾದ ಪ್ರಳಯಾರಂಭ ಸಮಯವೇ ಸರ್ವದಾ ಸಂಪನ್ನವಾಗುವದು.

ಯಸ್ತ್ವಾತ್ಮರತಿರೇವಾಂತಃ ಕುರ್ವನ್ಕರ್ಮೇಂದ್ರಿಯೈಃಕ್ರಿಯಾಃ |
ನ ವಶೋ ಹರ್ಷಶೋಕಾಭ್ಯಾಂ ಸ ಸಮಾಹಿತ ಉಚ್ಯತೇ || ೪೩ ||

ಯಃ ಸರ್ವಗತಮಾತ್ಮಾನಂ ಪಶ್ಯನ್ಸಮುಪಶಾಂತಧೀಃ |
ನ ಶೋಚತಿ ಧ್ಯಾಯತಿ ವಾ ಸ ಸಮಾಹಿತ ಉಚ್ಯತೇ || ೪೪ ||

[ಪ್ರಳಯಾರಂಭದಲ್ಲಿ ಸಕಲ ವಿಧ ಜಗತ್ತೂ ಪ್ರಳಯಾಗ್ನಿ ಜ್ವಾಲೆಗಳಿಂದ ಉರಿದುಹೋಗುವದು ನಿಶ್ಚಯವು. ಸ್ವರ್ಗಾದಿ ಸಕಲ ವಸ್ತುಗಳೂ ಪ್ರಳಯ ಭಿನ್ನ ಕಾಲದಲ್ಲಿ ಪೂರ್ವೋಕ್ತ ಪ್ರಕಾರವಾಗಿ ತಾಪತ್ರಯ ಜ್ವಾಲೆಗಳಿಂದ ಜ್ವಲಿತವಾಗುವ ಕಾರಣ ಪ್ರಳಯಾರಂಭ ಸಮಯವೇ ಆಗುವದೆಂದು ಇಲ್ಲಿ ಹೇಳಿದೆ,]

೪೩. ಹೀಗಾಗದೆ ಯಾವಾತನಾದರೆ ತಾನು ಆತ್ಮಾರಾಮನಾಗಿಯೇ ಇರುತ್ತ ಕರ್ಮೇಂದ್ರಿಯಗಳಿಂದ ಕರ್ಮಗಳನ್ನು ಮಾಡುತ್ತ ಇದ್ದರೂ ಮನಸ್ಸಿನೊಳಗೆ ಹರ್ಷಶೋಕಗಳಿಗೆ ಎಡೆಗೊಡದೆಯೂ ಅವುಗಳಿಂದ ಪರವಶನಾಗದೆಯೂ ಇರುವನೋ ಅವನನ್ನು ಸಮಾಹಿತನೆಂದು (ಸಮಾಧಿನಿಷ್ಠನೆಂದು) ಜ್ಞಾನಿಗಳು ಹೇಳುವರು.

[ಸನ್ಮಾತ್ರಾತ್ಮ ದರ್ಶನದಲ್ಲಿಯಾದರೋ ಕರ್ಮೇಂದ್ರಿಯಗಳ ಮೂಲಕ ವ್ಯವಹಾರವು ನಡೆಯುತ್ತಿದ್ದರೂ ಕೂಡ ಅದರಲ್ಲಿ ಅಭಿಮಾನವಿಲ್ಲದ ಕಾರಣ ಹರ್ಷ ಶೋಕಾದಿ ವಿಕ್ಷೇಪಗಳ ಪ್ರಸಕ್ತಿಯು ಕೂಡ ಇಲ್ಲದೆ ಹೋಗುವದು. ಆದಕಾರಣ ಸದಾ ಸಮಾಧಿನಿಷ್ಠನ ಸಾದೃಶ್ಯವೇ ಫಲತಃ ಸಿದ್ಧಿಸುವದು ಎಂದು ಭಾವ.]

೪೪. ಯಾವ ಮಹಾತ್ಮನು ಚೆನ್ನಾಗಿ ಉಪಶಾಂತವಾದ ಮನಸ್ಸುಳ್ಳವನಾಗಿ ಸದಾ ಸರ್ವತ್ರ ವ್ಯಾಪಿಸಿರುವ (ಸರ್ವಗತನಾದ) ಸ್ವಾತ್ಮಸ್ವರೂಪವನ್ನು ಕಾಣುತ್ತ ಯಾವ ಬಗೆಯ ದುಃಖಕ್ಕೆ ಒಳಗಾಗದೆಯೂ ಯಾವುದನ್ನೂ ಮನಸ್ಸಿನಲ್ಲಿ ಚಿಂತಿಸ ದೆಯೂ ಇರುವನೋ ಅವನು ಸಮಾಹಿತನೆನ್ನಿಸುವನು.

ಸ ಪೂರ್ವಾಪರಪರ್ಯಂತಾಂ ಯಃ ಪಶ್ಯನ್ನ ಗತೀಂ ಗತಿಂ |
ದೃಷ್ಟಿಷ್ವೇತಾಸು ಹಸತಿ ಸ ಸಮಾಹಿತ ಉಚ್ಯತೇ　　　　|| ೫೫ ||

ಸಮೇ ಪರೇಽಪಿ ನಾಹಂತಾ ನ ಜಗಜ್ಜನ್ಮನೋ ಮಯಿ |
ವೀಚಿವೃಂದೇಷ್ವಿವಾತಪ್ತಾ ನಾಕಾಶೇ ಫಲಧಾತವಃ　　　　|| ೫೬ ||

---

೫೫. ಯಾವನು ಈ ಪ್ರಾಪಂಚಿಕ ಸ್ಥಿತಿಯನ್ನು (ಜಗತ್ತಿನ ಗತಿಯನ್ನು) ಉತ್ಪತ್ತಿ ವಿನಾಶಗಳಿಂದ ಕೂಡಿದುದನ್ನಾಗಿ ಚೆನ್ನಾಗಿ ಮನಗಂಡು ಇಂತಹ ಜಗತ್ತಿನಲ್ಲಿ ಮೂಢಜನರು ಅವಿವೇಕದಿಂದ ಇಡುವ ಈ ಅಹಂಕಾರ ಮಮಕಾರ ರೂಪ ದೃಷ್ಟಿಗಳನ್ನು ಪರಿಹಾಸ ಮಾಡುವನೋ ಅವನು ಸಮಾಹಿತನು ಎನ್ನಿಸುವನು.

[ಉತ್ಪತ್ತಿ ವಿನಾಶಗಳಿಂದ ಕೂಡಿ ಕೇವಲ ಕ್ಷಣಿಕವಾದ ಈ ಜಗದ್ವ್ಯವಹಾರದಲ್ಲಿ ಇದು ನನ್ನದು, ಇವನು ನಾನು ಎಂಬುದಾಗಿ ಮೂಢಜನರು ಮಾತ್ರವೇ ಭ್ರಮಿಸುವರು. ಅಂತಹವರನ್ನು ನೋಡಿ ಪ್ರಪಂಚ ಮಿಥ್ಯಾತ್ವವನ್ನು ಮನಗಂಡ ಜ್ಞಾನಿಯು ಪರಿಹಾಸ ಮಾಡುವನು ಎಂದು ಭಾವ.]

[ದ್ವಂದ್ವಸಮಾಸಾಂತವಾದ ಪರ್ಯಂತಾಂ ಎಂಬ ಪದವನ್ನು ಸಮಾಸಾವಯವಗಳಾದ ಪೂರ್ವ ಮತ್ತು ಅಪರ ಎಂಬ ಶಬ್ದಗಳೊಡನೆ ಸಂಬಂಧಿಸಿ, ಪೂರ್ವಪರ್ಯಂತಾ=(ಉತ್ಪತ್ತಿ), ಅಪರಪರ್ಯಂತಾ (ವಿನಾಶ) ಎಂದು ಸಮನ್ವಯ ಮಾಡಿದೆ.]

೫೬. ಸಾಧಾರಣವಾಗಿ, ಈ ಜಗತ್ತಿನಲ್ಲಿ ಎಲ್ಲರಿಗೂ ನಾನು-ನನ್ನದು (ಅಹಂಕಾರ ಮತ್ತು ಮಮತಾ) ಎಂಬ ಭ್ರಾಂತಿಯು ಹುಟ್ಟುತ್ತದೆ. ಅದರಲ್ಲಿ ನಾನು ಎಂಬ ಅಭಿಮಾನವೇ ಅಹಂಕಾರವು. ನನ್ನದು ಎಂಬ ಅಭಿಮಾನಕ್ಕೆ ವಿಷಯವಾದುದು ಈ ಜಗತ್ತು. ವಸ್ತುತತ್ವವನ್ನು ವಿಚಾರಮಾಡಿ ತಿಳಿದಿರುವ ಜ್ಞಾನಿಗೆ ಈ ಅಹಂಕಾರ ಜಗತ್ತುಗಳ ಆಶ್ರಯವೇ ಸಿದ್ಧಿಸದೆ ಹೋಗುವದರಿಂದ ಇವು ಕೇವಲ ಮಿಥ್ಯೆಯೆಂದೇ ಜ್ಞಾನವುಂಟಾಗಿರುವದು.

ಅದು ಹೇಗೆಂದರೆ--ಶರದೃತುವಿನ ಆತಪದಿಂದ ಸಂಭಿನ್ನಗಳಾಗಿ ಬಲುದೂರದಲ್ಲಿ ಕಾಣುತ್ತಿರುವ ಅಲೆಗಳ ಸಮುದಾಯಗಳಲ್ಲಿ (ವೀಚಿವೃಂದಗಳಲ್ಲಿ) ಕಾಣು

ಯಸ್ಯಾಂತರಸ್ಥಿತಾಹಂತ್ವಂ ನ ವಿಭಾಗಾದಿ ನೋ ಮನಃ |
ನ ಚೇತನಾಚೇತನತ್ವೇ ಸೋऽಪ್ಸಿ ನಾಸ್ತೀತರೋ ಜನಃ ॥ ೪೭ ॥

ವಂತಹ ಚೆನ್ನಾಗಿ ಕಾಯಿಸಿ ಕರಗಿಸಿದ ಬೆಳ್ಳಿಗೆ ಸಮಾನವಾಗಿ ಹೊಳೆಯುತ್ತಿರುವ ಪುಂಜೀಭೂತವಾದ ಕಾಂತಿಯು (ಹತ್ತಿರಕ್ಕೆ ಹೋಗಿ ಅವುಗಳಲ್ಲಿ ಒಳಕ್ಕೆ ಮುಳುಗಿ ಹುಡುಕಿ ನೋಡಿದರೂ ಕಾಣಿಸದೆ ಇರುವ ಕಾರಣ) ಹೇಗೆ ವೀಚಿವೃಂದಗಳ ಒಳಗೂ ಇರುವದಿಲ್ಲವೋ ಮತ್ತು ಅಸಂಗವೂ ಕೂಟಸ್ಥವೂ ಆಗಿರುವ ಬಾಹ್ಯಾಕಾಶದಲ್ಲಿಯೂ ಚತುರ್ವಿಧ ಕ್ರಿಯಾಫಲ ಧಾತುಗಳು ಕಾಣಿಸದೇ ಇರುವ ಕಾರಣ ಹೇಗೆ ಇರುವು ದಿಲ್ಲವೋ ಹಾಗೆಯೇ ಈ ಅಹಂಕಾರ ಮಮಕಾರಗಳು ಸರ್ವಸಮನಾದ ಅಸಂಗ ಕೂಟಸ್ಥ ಅದ್ವಯ ಪರಮಾತ್ಮನಲ್ಲಿಯೂ ಇರುವದಿಲ್ಲ. (ಏಕೆಂದರೆ ಪರಬ್ರಹ್ಮನಲ್ಲಿ ಅಹಂಕಾರ, ಜಗಜ್ಜನ್ಮಾದಿ ವೈಷಮ್ಯಗಳಿಗೆ ಆಧಾರತ್ವವನ್ನೂ ಕಲ್ಪಿಸುವದು ನ್ಯಾಯ ವಾದುದಲ್ಲ) ಮತ್ತು ದೃಗ್ರೂಪನಾದ ಆತ್ಮನಿಗೆ ದೃಶ್ಯಾಶ್ರಯತ್ವವು ಸಂಘಟಿಸುವದಿಲ್ಲ ವಾದ ಕಾರಣ ಸರ್ವಾನುಭವಸಿದ್ಧ ಪ್ರತ್ಯಗಾತ್ಮ ಸ್ವಭಾವನಾದ ನನ್ನಲ್ಲಿಯೂ ಈ ಅಹಂಕಾರ ಮಮಕಾರಗಳು ಇರುವದಿಲ್ಲ. ಹೀಗೆ ಅವುಗಳಿಗೆ ಆಶ್ರಯವೇ ಅಸಿದ್ಧ ವಾದ ಕಾರಣ ಅವು ಕೇವಲ ಮಿಥ್ಯೆಯೇ ಸರಿ. ಇಂತಹ ಮಿಥ್ಯಾಭೂತವಾದ ಜಗತ್ತಿನ ಗತಿಗಳಲ್ಲಿ ಮೂಢರು ಅವಿವೇಕದಿಂದ ಅಹಂಕಾರ ಮಮಕಾರಗಳನ್ನಿಟ್ಟು ತೊಳಲುತ್ತಿರುವದನ್ನು ನೋಡಿ, ಜ್ಞಾನಿಗಳು (ಅವುಗಳ ಮಿಥ್ಯಾತ್ವವನ್ನು ಮನ ಗಂಡಿರುವ ಕಾರಣ) ಪರಿಹಾಸ ಮಾಡುವದರಲ್ಲಿ ಆಶ್ಚರ್ಯವೇನಿರುವದು ?

೪೭. ಯಾವ ಜ್ಞಾನಿಯು ಹೃದಯದೊಳಗೆ (ಆಂತರವಾದ) ಪ್ರತ್ಯಗಾತ್ಮ ರೂಪವಾದ ಅಹಂತಾಭಿಮಾನವು ಇಲ್ಲದೆ ಹೋಗಿ ಬಿಟ್ಟಿರುವದೋ ಮತ್ತು ದೃಶ್ಯ ಜಗದ್ವಿಭಾಗಾದಿಗಳೂ ಮನಸ್ಸೂ ಇಲ್ಲದೆ ಹೋಗಿರುವವೋ ಅಂತಹ ಜ್ಞಾನಿಗೆ ಮನೋಧೀನ ಕಲ್ಪನೆಗಳಿಂದ ಚೇತನತ್ವ, ಅಚೇತನತ್ವಗಳೂ ಸರ್ವಥಾ ಇಲ್ಲವಾಗಿ ಬಿಡುವವು. ಆದ್ದರಿಂದ ಸರ್ವಾತ್ಮನಾದ ಆ ಜ್ಞಾನಿಯು ಒಬ್ಬನು ಮಾತ್ರವೇ ವಾಸ್ತವವಾಗಿ ಇರತಕ್ಕವನು. ಅಂತಹ ಜ್ಞಾನಿಗಿಂತ ಬೇರೆಯಾದ ಚೇತನಧಾತುವು ಇಲ್ಲವೇ ಇಲ್ಲವು.

[ನಾನ್ಯೋऽತೋऽಸ್ತಿ ದ್ರಷ್ಟಾ, ಶ್ರೋತಾ, ಮಂತಾ, ವಿಜ್ಞಾತಾ ಇತ್ಯಾದಿ ಶ್ರುತಿಯು ಈ ಅರ್ಥದಲ್ಲಿ ಪ್ರಮಾಣವು.]

ವ್ಯೋಮಸ್ವಚ್ಛೋ ಬಹಿಷ್ಠೇಹಾಂ ಸಮ್ಯಗಾಚರತೀಹ ಯಃ |
ಹರ್ಷಾಮರ್ಷವಿಕಾರೇಷು ಕಾಷ್ಠಲೋಷ್ಟಸಮಃ ಶಮಃ　　　　|| ೪೮ ||

ಆತ್ಮವತ್ಸರ್ವಭೂತಾನಿ ಪರದ್ರವ್ಯಾಣಿ ಲೋಷ್ಟವತ್ |
ಸ್ವಭಾವಾದೇವ ನ ಭಯಾದ್ಯಃ ಪಶ್ಯತಿ ಸ ಪಶ್ಯತಿ　　　　|| ೪೯ ||

ಅಥೋಽತನುಸ್ತನುರ್ವಾಪಿ ನಾಸದ್ರೂಪೇಣ ಚೇತ್ಯತೇ |
ಸದ್ರೂಪೋ ನಾನುಭೂತೋಽಜ್ಞೇ ನ ಜ್ಞೇನ್ಯೈವ ನ ತತ್ತಯಾ　　　　|| ೫೦ ||

೪೮–೪೯. ಯಾವ ಮಹಾತ್ಮನು ಮನಸ್ಸಿನೊಳಗೆ ಮಹಾಕಾಶದಂತೆ ಅತ್ಯಂತ ನಿರ್ಮಲನಾಗಿದ್ದುಕೊಂಡು ಹೊರಗೆ ಪ್ರಾಪಂಚಿಕ ವ್ಯವಹಾರಗಳನ್ನು ಶಾಸ್ತ್ರ ಶಿಷ್ಟಾಚಾರಗಳಿಗೆ ವಿರೋಧವಿಲ್ಲದ ರೀತಿಯಲ್ಲಿ ನಡೆಯಿಸುತ್ತಿರುವನೋ ಮತ್ತು ಹರ್ಷ, ಕ್ರೋಧಾದಿ ವಿಕಾರಗಳುಂಟಾದ ಕಾಲಗಳಲ್ಲಿ ಕಾಷ್ಠದಂತೆಯೂ ಲೋಷ್ಟದಂತೆಯೂ ಸಮನಾಗಿ ನಿರ್ವಿಕಾರನಾಗಿ ವರ್ತಿಸುವನೋ ಅವನು ಶಾಂತಸ್ವಭಾವನೆನ್ನಿಸುವನು. ಮತ್ತು ಯಾವಾತನು ಯಾರೊಬ್ಬರ ಭಯದಿಂದಲೂ ಅಲ್ಲದೆ ಸ್ವಭಾವದಿಂದಲೇ ಸರ್ವಾತ್ಮತಾ ಬುದ್ಧಿಯಿಂದ ಸಮಸ್ತ ಭೂತಗಳನ್ನು ಸ್ವಾತ್ಮನಂತೆಯೂ ಮತ್ತು ಜಗನ್ಮಿಥ್ಯಾತ್ವ ಬುದ್ಧಿಯಿಂದ ಪರದ್ರವ್ಯಗಳನ್ನು ಲೋಷ್ಟದಂತೆಯೂ ಕಾಣುವನೋ ಅವನೇ ನಿಜವಾದ ಸಮ್ಯಗ್ದರ್ಶಿಯಾದ ತತ್ತ್ವಜ್ಞಾನಿಯು.

[ಕಾಷ್ಠ=ಮರದ ತುಂಡು ಲೋಷ್ಟ=ಮಣ್ಣಿನ ಹೆಂಟೆ.]

೫೦. ಹಿರಣ್ಯಗರ್ಭನ ಐಶ್ವರ್ಯದವರೆವಿಗೆ ಪ್ರಪಂಚದಲ್ಲಿ ಪ್ರಸಿದ್ಧವಾದ ಮಹದೈಶ್ವರ್ಯಗಳಾಗಲೀ ಅಥವಾ ಒಂದು ಕವಡೆ ಮಾತ್ರದ ಕನಕಕಾಮಿನ್ಯಾದಿ ಅಲ್ಪ ವಿಷಯಕವಾದ ತುಚ್ಛ ಸಂಪತ್ತಾಗಲೀ ಅದೆಲ್ಲವೂ ಮಿಥ್ಯೆಯೇ ಎಂಬುದಾಗಿ ಅಜ್ಞನಾದ ಮೂಢನಿಗೆ ತೋರುವದಿಲ್ಲ. ಮತ್ತು ಅದರ ಅಧಿಷ್ಠಾನಭೂತವಾದ ಸದ್ರೂಪವು ಅವನಿಗೆ ಅನುಭವ ಗೋಚರವಾಗದಿರುವ ಕಾರಣ ಅದು ಸನ್ಮಾತ್ರ ಸ್ವಭಾವದಿಂದಲೂ ಕೂಡ ಕಾಣುವದಿಲ್ಲ. ತತ್ವಜ್ಞನಿಗೆ ಮಾತ್ರವೇ ಪ್ರಾಪಂಚಿಕವಾದ ಮಹತ್ತಾದ ಮತ್ತು ಅಲ್ಪವಾದ ವಿಷಯಗಳೆಲ್ಲವೂ ಕೇವಲ ಮಿಥ್ಯಾಭೂತವಾದವುಗಳೆಂದೂ ಆದರ ಅಧಿಷ್ಠಾನವು ಸದ್ರೂಪವೆಂದೂ ಅನುಭವದಿಂದ ಗೋಚರಿಸುವ ಕಾರಣ ತತ್ತ್ವಜ್ಞನು ಮಾತ್ರ ಸರ್ವತ್ರ ಸಮದರ್ಶಿಯಾಗಿರುವನು ಎಂಬುದು ಉಪಪನ್ನವಾದುದು.

ಈದೃಶಾಶಯಸಂಪನ್ನೋ ಮಹಾಸತ್ವಪದಂ ಗತಃ |
ತಿಷ್ಠತೂದೇತು ವಾ ಯಾತು ಮೃತಿಮೇತು ನ ತತ್ಸ್ಥಿತಿಂ || ೫೧ ||

ವಸತೂತ್ತಮಭೋಗಾಢ್ಯೇ ಸ್ವಗೃಹೇ ವಾ ಜನಾಕುಲೇ |
ಸರ್ವಭೋಗೋಜ್ಝಿತಾಭೋಗೇ ಸುಮಹತ್ಯಥವಾ ವನೇ || ೫೨ ||

ಉದ್ದಾಮ ಮನ್ಮಥಂ ಪಾನತತ್ಪರೋ ವಾಪಿ ನೃತ್ಯತು |
ಸರ್ವಸಂಗಪರಿತ್ಯಾಗೀ ಸಮಮಾಯಾತು ವಾ ಗಿರೌ || ೫೩ ||

ಚಂದನಾಗುರುಕರ್ಪೂರೈರ್ವಪುರ್ವಾ ಪರಿಲಿಂಪತು |
ಜ್ವಾಲಾಜಟಿಲವಿಸ್ತಾರೇ ನಿಪತತ್ವಥವಾಽನಲೇ || ೫೪ ||

ಪಾಪಂ ಕರೋತು ಸುಮಹದ್ಬಹುಲಂ ಪುಣ್ಯಮೇವ ಚ |
ಅದ್ಯ ವಾ ಮೃತಿಮಾಯಾತು ಕಲ್ಪಾಂತನಿಚಯೇನ ವಾ || ೫೫ ||

ನಾಸೌ ಕಿಂಚಿನ್ನ ತತ್ಕಿಂಚಿತ್ಕೃತಂ ತೇನ ಮಹಾತ್ಮನಾ |
ನಾಸೌ ಕಲಂಕಮಾಪ್ನೋತಿ ಹೇಮ ಪಂಕಗತಂ ಯಥಾ || ೫೬ ||

೫೧-೫೬. ನಿರೂಢವಾದ ಸಮದರ್ಶನವುಳ್ಳ ಇಂತಹ ಶುಭಾಶಯದಿಂದ ಸಂಪನ್ನನಾಗಿ, ಜೀವನ್ಮುಕ್ತ ಸ್ಥಿತಿಯನ್ನು ಪಡೆದಿರುವ ತತ್ತ್ವಜ್ಞನಾದ ಮಹಾತ್ಮನು ಕೇವಲ ದರಿದ್ರನೇ ಆಗಿರಲಿ ಅಥವಾ ಮಹದೈಶ್ವರ್ಯ ಸಂಪನ್ನನಾಗಿ ಅಭ್ಯುದಯವನ್ನು ಹೊಂದಲಿ ಅಥವಾ ಪುತ್ರಮಿತ್ರಾದಿ ಬಂಧುಗಳ ಮರಣ ದುಃಖವನ್ನು ಅನುಭವಿಸಿರಲಿ ಅಥವಾ ಅಭ್ಯುದಯ ಸ್ಥಿತಿಯನ್ನು ಹೊಂದದೆ ಇರಲಿ ಅಥವಾ ಅತ್ಯಂತ ಪ್ರಶಸ್ತವಾದ ಉತ್ತಮ ಭೋಗ ಸಾಧನಗಳಿಂದ ಪರಿಪೂರ್ಣವಾಗಿ ಪತ್ನೀ ಪುತ್ರ ಮಿತ್ರಾದಿ ಸಕಲ ಆಪ್ತೇಷ್ಟ ಜನಭರಿತವಾದ ತನ್ನ ಸ್ವಂತ ದಿವ್ಯ ಪ್ರಾಸಾದದಲ್ಲಿಯೇ ವಾಸಮಾಡಿಕೊಂಡಿರಲಿ ಅಥವಾ ಯಾವುದೊಂದೂ ಭೋಗಸಾಧನ ಸಾಮಗ್ರಿಯೂ ಇಲ್ಲದೆ ಅತಿ ವಿಶಾಲವಾಗಿರುವ ನಿರ್ಜನ ಮಹಾಘೋರಾರಣ್ಯದಲ್ಲಿ ಯಾದರೂ ವಾಸಮಾಡಲಿ, ಅಥವಾ ಸುಂದರಿಯರ ಮಧ್ಯದಲ್ಲಿದ್ದುಕೊಂಡು ಮಧು ಪಾನಾದಿ ರಸಾಸ್ವಾದನದಲ್ಲಿ ಆಸಕ್ತನಾಗಿ ಕಾಮೋದ್ರೇಕ ಪರವಶತೆಯಿಂದ, ಉನ್ಮತ್ತನಾಗಿ ನರ್ತನಮಾಡಲಿ, ಅಥವಾ ಸರ್ವವಿಧ ಸಂಗಗಳನ್ನೂ ಪರಿತ್ಯಾಗ ಮಾಡಿದವನಾಗಿ ಯಾವದೊಂದು ವಿಕಾರಕ್ಕೂ ಸಿಕ್ಕಿಹಾಕಿಕೊಳ್ಳದೆ (ನಿರ್ವಿಕಾರ

ನಾಗಿ) ಪರ್ವತದ ಮೇಲೆ ಹೋಗಿದ್ದುಕೊಂಡು ಏಕಾಂತದಲ್ಲಿ ಧ್ಯಾನಾರೂಢ ನಾಗಿರಲಿ, ಅಥವಾ ಚಂದನ, ಅಗುರು, ಕರ್ಪೂರ ಮುಂತಾದ ಸುಗಂಧ ದ್ರವ್ಯಗಳ ಗಂಧದಿಂದ ತನ್ನ ದೇಹವನ್ನು ಲೇಪನ ಮಾಡಿಕೊಂಡು ವಿಹರಿಸಲಿ, ಅಥವಾ ಅನೇಕಾನೇಕ ಜ್ವಾಲೆಗಳಿಂದ ವಿಶೇಷವಾಗಿ ಉರಿಯುತ್ತಾ ಅತಿ ವಿಸ್ತಾರವಾಗಿ ಹರಡಿ ಕೊಂಡಿರುವ ಕಾಡುಗಿಚ್ಚಿನಲ್ಲಿ ಬಿದ್ದು ಸಂತಾಪಗೊಳ್ಳಲಿ, ಅಥವಾ ಬಹು ಹೆಚ್ಚಾಗಿ ಬ್ರಹ್ಮಹತ್ಯಾದಿ ಮಹಾಪಾಪಕರ್ಮಗಳನ್ನು ಮಾಡಲಿ, ಅಥವಾ ಅನೇಕ ಪುಣ್ಯಕರ ವಾದ ಧರ್ಮಕಾರ್ಯಗಳಲ್ಲಿ ನಿರತನಾಗಿರಲಿ, ಅಥವಾ ಈಗಲೇ ಮರಣವನ್ನು ಹೊಂದಲಿ, ಅಥವಾ ಅನೇಕ ಕಲ್ಪಗಳ ಕಾಲ ಜೀವಿಸಿಕೊಂಡಿದ್ದು ಬಹು ಕಾಲಾ ನಂತರ ಮರಣ ಹೊಂದಲಿ, ಹೇಗಾದರೂ ಇರಲಿ, ಏನಾದರೂ ಆಗಲಿ, ಈ ಸಮ ದರ್ಶಿಯಾದ ಜ್ಞಾನನಿಷ್ಠನು ಅಹಂಭಾವಕ್ಕೆ ಆಶ್ರಯವಾಗಿರುವ ಮರಣ ದುಃಖಾದಿ ಸರ್ವವಿಕಾರಗಳಿಗೆ ಒಳಪಡುವ ದೇಹ, ಮನಸ್ಸು ಮುಂತಾದ ಯಾವದೊಂದೂ ಆಗಿರುವದಿಲ್ಲ. ಆದಕಾರಣವೇ, ಆ ಮಹಾತ್ಮನು ಯಾವದೊಂದನ್ನೂ ಮಾಡಿದವ ನಾಗಿ ಕರ್ತೃವೆನ್ನಿಸಿಕೊಳ್ಳುವದಿಲ್ಲ.

[ಕರ್ತೃತ್ವವೇ ಇಲ್ಲದೆ ಹೋದಬಳಿಕ, ಸರ್ವತ್ರ ಸರ್ವಾವಸ್ಥೆಗಳಲ್ಲಿಯೂ ಹರ್ಷ, ವಿಷಾದಾದಿ ಫಲಗಳಿಂದ ಲಿಪ್ತನಾಗದೆ ನಿರ್ವಿಕಾರನಾಗಿ ಏಕರೀತಿಯಾಗಿರು ವನು. ಅಹಂ, ಮಮಾಭಿಮಾನ ಪುರಸ್ಸರವಾಗಿ ಆಚರಿಸಿದ ವ್ಯವಹಾರದಿಂದಲೇ ಕರ್ತೃತ್ವವು ಸಿದ್ಧಿಸುವದು. ತನ್ಮೂಲಕವಾಗಿ ಫಲ ಭೋಕ್ತೃತ್ವವೂ ಅವುಗಳಿಂದ ರಾಗದ್ವೇಷಾದಿ ವಿಕಾರಗಳೂ ಉದ್ಭವಿಸುವವು. ಸರ್ವತ್ರ ಸಮದರ್ಶಿಯಾದ ಜ್ಞಾನಿಗೆ ಸರ್ವಾನರ್ಥ ಮೂಲವಾದ ಅಹಂ ಮಮಾಭಿಮಾನವೇ ಇಲ್ಲದ ಕಾರಣ ತನ್ಮೂಲಕವಾದ ಇತರ ಯಾವ ವಿಕಾರಗಳೂ ಪ್ರಸಕ್ತವಾಗುವದಿಲ್ಲ ಎಂಬ ಶಾಸ್ತ್ರ ಸಿದ್ಧಾಂತವು ಇಲ್ಲಿ ವರ್ಣಿತವಾಗಿರುವದು.]

ಮತ್ತು ಕೆಸರಿನ ಮಧ್ಯದಲ್ಲಿ ಬಿದ್ದಿರುವ ಸುವರ್ಣವು ಹೇಗೆ ಕಳಂಕವನ್ನು ಹೊಂದುವದಿಲ್ಲವೋ ಹಾಗೆ ಸಮದರ್ಶಿಯಾದ ಮಹಾತ್ಮನು ತನ್ನ ಸರ್ವ ವ್ಯವಹಾರ ಗಳಿಂದಲೂ ಸ್ವಲ್ಪವಾದರೂ ಕಳಂಕವನ್ನು ಹೊಂದದೆ ನಿಷ್ಕಳಂಕನಾಗಿಯೇ ಇರುವನು.

ಸಂವಿತ್ಪುರುಷ ಶಬ್ದಾರ್ಥೈಃ ಸ ಕಲಂಕೈಃ ಕಲಂಕ್ಯತೇ |
ಅಹಂತ್ವಂವಾಸನಾರೂಪೈಃ ಶುಕ್ತಿಕಾರಜತೋಪಮೈಃ ॥ ೫೭ ॥

ಸಮಸ್ತವಸ್ತುಪ್ರಶಮಾತ್ಸಮ್ಯಗ್ ಜ್ಞಾನಾದ್ಯಥಾ ಸ್ಥಿತೇಃ |
ಸ್ವಭಾವಸ್ಯೋಪಶಾಂತೋಽಂತಃ ಕಲಂಕೋಽಸತ್ತಯಾ ಸ್ವತಃ ॥ ೫೮ ॥

---

೫೭. ಸಕಳಂಕಗಳಾದ (ಅಂದರೆ ಶಾಸ್ತ್ರಗಳಲ್ಲಿ ಅನುಮೋದಿಸಲ್ಪಡದೆ ನಿಷಿದ್ಧವಾಗಿರುವ ಅಭಕ್ಷ್ಯಗಳನ್ನು ಅಪೇಯಗಳನ್ನೂ ಸೇವಿಸುವದರಿಂದ ಅತ್ಯಂತ ದೂಷಿತಗಳಾದ) ವಾಸನಾರೂಪಗಳಾದ ಚಕ್ಷುರಾದೀಂದ್ರಿಯ ಸಂಬದ್ಧವಾದ ಸಂವಿತ್ತುಗಳಿಂದಲೂ ಅವುಗಳಿಗೆ ಅಧಿಷ್ಠಾನವಾದ ದೇಹದಿಂದಲೂ ಅದರ ಭೋಗ್ಯವಸ್ತುಗಳಾದ ಶಬ್ದಾರ್ಥರೂಪ ವಿಷಯಗಳಿಂದಲೂ ಕೂಡ ಅಹಂಕಾರ ಪ್ರಧಾನವಾದ ಲಿಂಗದೇಹವು ಕಳಂಕಿತವಾಗುವದು. (ಇದು ಅಜ್ಞರ ದೃಷ್ಟಿಯಿಂದ ಉಕ್ತವಾದುದು.)

[ಅಹಂತ್ವಂ=ಅಹಂಕಾರ ಪ್ರಧಾನಲಿಂಗಾತ್ಮಾ]

೫೮. ಆತ್ಮವ್ಯತಿರಿಕ್ತಗಳಾದ ಐಹಿಕಾಮುಷ್ಮಿಕಗಳೆಂಬ ಸಕಲ ಪ್ರಾಪಂಚಿಕ ದೃಶ್ಯವಸ್ತುಗಳನ್ನೂ ಅತ್ಯಂತ ಮಿಥ್ಯಾಭೂತವಾದವುಗಳೆಂಬ ನಿಶ್ಚಯದಿಂದ ಶಾಂತಿಗೊಳಿಸಿ (ಪರಿಹಾರ ಮಾಡಿಕೊಂಡು) ಸುದೃಢವಾದ ಆತ್ಮೈಕತ್ವರೂಪ ಪರಮಾರ್ಥ ತತ್ತ್ವಜ್ಞಾನನಿಷ್ಠನಾಗಿ ಪರಿಪೂರ್ಣಕಾಮನಾಗಿ ಅಭಿಮಾನಶೂನ್ಯನಾಗಿರುವ ಮಹಾತ್ಮನು ಪೂರ್ವದಂತೆಯೇ ವ್ಯವಹಾರ ನಿರತನಾಗಿದ್ದರೂ ಕೂಡ ಅವನ ಚಿತ್ತದೊಳಗಿರುವ ಕಳಂಕವು ತತ್ತ್ವಜ್ಞಾನದಿಂದ ಬಾಧಿತವಾಗಿ ಬಿಡುವ ಕಾರಣ ಅಸದ್ರೂಪದಿಂದ (ಶಶವಿಷಾಣ ಮುಂತಾದವುಗಳಂತೆ ಅತ್ಯಂತ ಅಸತ್ತಾಗಿಯೇ) ಸ್ವತಏವ ಪ್ರಶಾಂತವಾಗಿ ಬಿಡುವದು.

[" ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವ ಸಂಶಯಾಃ | ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ " ॥ ಮುಂಡಕೋಪನಿಷತ್]

ಅಹಂತ್ವವಾಸನಾನರ್ಥ ಪ್ರಸೂತೇಃ ಸಂವಿದಾತ್ಮನಃ |
ಪುರುಷಸ್ಯ ವಿಚಿತ್ರಾಣಿ ಸುಖದುಃಖಾನಿ ಜನ್ಮನಿ || ೫೯ ||

ರಜ್ವಾಂ ಸರ್ಪಭ್ರಮೋ ಶಾಂತೇಽಹಿರ್ನೇತಿ ನಿವೃತಿರ್ಯಥಾ |
ಅಹಂತ್ವಭಾವಸಂಶಾಂತೌ ತಥಾಂತಃ ಸಮತಾ ಮತಾ || ೬೦ ||

---

೫೯. ಅನಾತ್ಮಗಳಾದ (ತನ್ನ ಮತ್ತು ಇತರರ) ದೇಹೇಂದ್ರಿಯಾದಿಗಳಲ್ಲಿ ಅಹಂತೆಯನ್ನು ಅಧ್ಯಾಸ ಮಾಡುವದರ ದೆಸೆಯಿಂದ ನಾನಾ ವಿಷಯ ವಾಸನೆಗಳೆಂಬ ಸಕಲಾನರ್ಥ ಪರಂಪರೆಗಳು ಉದ್ಬುದ್ಧವಾಗುವವು. ಆದರಿಂದ ಕೇವಲ ಚಿದ್ರೂಪನಾದ (ಜ್ಞಾನಾತ್ಮನಾದ) ಪುರುಷನಿಗೂ ಅತ್ಯಂತ ವಿಚಿತ್ರಗಳಾದ ಸುಖ ದುಃಖಗಳು ಈ ಸಂಸಾರದಲ್ಲಿ ಸಂಭವಿಸುವವು.

[ಹೀಗೆ ಅಹಂತೆಯ ಅಧ್ಯಾಸವೇ ಸಂಸಾರದಲ್ಲಿ ಸಕಲಾನರ್ಥ ನಿದಾನವು. ಆ ಅಹಂತೆಯನ್ನು ನಾಶಪಡಿಸಿಕೊಂಡರೆ ಭ್ರಾಂತಿ ಕಲ್ಪಿತಗಳಾದ ಸಕಲಾನರ್ಥಗಳೂ ಸ್ವತಏವ ಪರಿಹಾರವಾಗುವವು. (ಉದ್ಭವಿಸುವದೇ ಇಲ್ಲ ಎಂದರ್ಥ.)

ಅಧ್ಯಾಸವೆಂದರೆ ಅತಸ್ಮಿನ್ ತದ್ಬುದ್ಧಿಃ ಅದಲ್ಲದುದರಲ್ಲಿ ಅದು ಎಂಬ ಬುದ್ಧಿಯನ್ನಿಡುವದು. ಸರ್ಪವಲ್ಲದುದರಲ್ಲಿ (ರಜ್ಜುವಿನಲ್ಲಿ) ಸರ್ಪವೆಂಬ ಬುದ್ಧಿಯನ್ನಿಡುವದು. ಇದೇ ಅಧ್ಯಾಸ.]

೬೦. ಒಬ್ಬ ಮೂಢನು ಭ್ರಾಂತಿಯಿಂದ ಮಂದಾಂಧಕಾರದಲ್ಲಿ ಬಿದ್ದಿರುವ ಒಂದು ಹಗ್ಗವನ್ನು ನೋಡಿ ತಪ್ಪಾಗಿಯೇ ಅದು ಒಂದು ಸರ್ಪವೆಂದು ತಿಳಿದುಕೊಂಡು ಭಯ ತಾಪಗಳಿಗೆ ಸಿಕ್ಕಿ ನರಳುವನು. ಹೀಗಿರುವಾಗ ಸರ್ಪ ಭ್ರಾಂತಿ ರೂಪ ವಿಕಾರಕ್ಕೆ ಅಧಿಷ್ಠಾನವಾಗಿರುವ ವಸ್ತುವಿನ ಯಥಾರ್ಥವಾದ ತತ್ತ್ವಸ್ವರೂಪವನ್ನು ಚೆನ್ನಾಗಿ ಅರಿತಿರುವ ಆಪ್ತೇಷ್ಟರಾದ ಜ್ಞಾನಿಗಳು ಕರುಣೆಯಿಟ್ಟು ಅವನನ್ನು ಉದ್ದೇಶಿಸಿ ಪ್ರಮಾಣ ಪುರಸ್ಸರವಾಗಿ ಅಧಿಷ್ಠಾನವಾದ ರಜ್ಜುವಿನ ಸ್ವರೂಪವನ್ನು ಬೋಧಿಸಿ ಅದರ ನಿಜವಾದ ರಜ್ಜುಸ್ವರೂಪಜ್ಞಾನವನ್ನು ನಿಸ್ಸಂದೇಹವಾಗಿ ಉಂಟುಮಾಡಿ ಬಳಿಕ "ಇದು ಸರ್ಪವಲ್ಲ, ಹಗ್ಗವೇ. ನೀನು ಇದುವರೆಗೆ ತಪ್ಪಾಗಿ ಭ್ರಾಂತಿಯಿಂದ ಈ ಹಗ್ಗವನ್ನು ಸರ್ಪವೆಂದು ತಿಳಿದು ಮೋಸಹೋಗಿ ದುಃಖಿತನಾಗಿರುವೆ. ಇದೋ ಚೆನ್ನಾಗಿ ನೋಡು" ಎಂದು ಉಪದೇಶಮಾಡಿ ರಜ್ಜು ಸ್ವರೂಪದ ಸಾಕ್ಷಾ

ಯತ್ಕರೋತಿ ಯದಶ್ನಾತಿ ಯದ್ದದಾತಿ ಜುಹೋತಿ ವಾ |
ನ ತಜ್ಞಸ್ಯ ನ ತತ್ರ ಜ್ಞೋ ಮಾ ಕರೋತು ಕರೋತು ವಾ ॥ ೬೧ ॥

ತ್ಕಾರವನ್ನುಂಟುಮಾಡಲಾಗಿ ಆಗ ಆ ರಜ್ಜುವಿನಲ್ಲಿ ಮೊದಲು ಅವನಿಗಿದ್ದ ಸರ್ಪ ಭ್ರಾಂತಿಯು ತೊಲಗಿಹೋಗಿ ಬಿಡುವದು. ಇದು ರಜ್ಜುವೇ–ಸರ್ಪವಲ್ಲ ಎಂದು ದೃಢಪಟ್ಟಮೇಲೆ ಅವನು ಪೂರ್ವದಂತೆ ಭಯ ದುಃಖಗಳಿಂದ ಪೀಡಿತನಾಗದೆ ಧೈರ್ಯದಿಂದ ಸ್ವೇಚ್ಛೆಯಾಗಿ ವ್ಯವಹರಿಸುವನು. ಭ್ರಾಂತಿಯಿಂದುಂಟಾಗಿದ್ದ ಭಯದುಃಖಗಳೆಲ್ಲವೂ ತೊಲಗಿಹೋಗಿ ಸುಖಪಡುವನು. ಈ ದೃಷ್ಟಾಂತದಂತೆಯೇ ಶಾಸ್ತ್ರಾಚಾರ್ಯೋಪದೇಶ ವಾಕ್ಯಗಳಿಂದ ಪ್ರಮಾಣ ಪುರಸ್ಸರವಾಗಿ ಸುದೃಢವಾದ ಪರಮಾರ್ಥ ಆತ್ಮೈಕತ್ವಜ್ಞಾನವು ರೂಢವಾಗಲಾಗಿ ಆ ಜ್ಞಾನ ಪ್ರಭಾವದಿಂದ ಮಿಥ್ಯಾಭೂತವಾದ ಅಹಂ ಮಮಾಧ್ಯಾಸರೂಪ ಭ್ರಾಂತಿಯು ನಿಶ್ಶೇಷವಾಗಿ ಪುನಃ ಉದಯವಾಗದ ರೀತಿಯಲ್ಲಿ ನಾಶವಾಗಿ ಹೋಗುವದು. ಆಗಲೇ ಆ ಅಧ್ಯಾಸ ಮೂಲಕವಾದ ಸಾಂಸಾರಿಕ ಸುಖದುಃಖಾದಿ ಸಕಲ ವಿಕಾರಾನರ್ಥಗಳೂ ನಿವೃತ್ತಿಯಾಗಿ ಸರ್ವ ದುಃಖ ವೈಷಮ್ಯ ಶೂನ್ಯವಾದ ಸಮತ್ವರೂಪ ನಿತ್ಯನಿರತಿಶಯಾನಂದ ಪ್ರಾಪ್ತಿಯು ಲಭಿಸುವದು. ಇದು ಶಾಸ್ತ್ರಸಮ್ಮತ ಸಿದ್ಧಾಂತವು.

೬೧. ತತ್ತ್ವಜ್ಞಾನನಿಷ್ಠನು ಯಾವ ಕೆಲಸವನ್ನು ಮಾಡಿದರೂ ಯಾವುದನ್ನು ಉಪಭೋಗಿಸಿದರೂ, ಯಾವುದನ್ನು ದಾನಮಾಡಿದರೂ, ಅಥವಾ ಯಾವುದಾದರೂ ಹೋಮ ಮಾಡಿದರೂ ಅದೊಂದೂ ಆ ಜ್ಞಾನಿಗೆ ಸಾಧಕವೂ ಆಗುವದಿಲ್ಲ, ಬಾಧಕವೂ ಆಗುವದಿಲ್ಲ. ಅಂದರೆ ಆಯಾ ವ್ಯವಹಾರಗಳ ಫಲಗಳಾಗಲಿ ಅವುಗಳಿಂದ ಹಾನಿವೃದ್ಧಿಗಳಾಗಲಿ ವಾಸ್ತವವಾಗಿ ಉಂಟಾಗುವದೇ ಇಲ್ಲ. ಅವನು ಯಾವದನ್ನಾದರೂ ಮಾಡಲಿ ಅಥವಾ ಬಿಡಲಿ ಅದರಲ್ಲಿ ತತ್ತ್ವಜ್ಞನು ಅಭಿಮಾನವನ್ನಿಟ್ಟುಕೊಳ್ಳುವದಿಲ್ಲ.

[ಶ್ರೀಮಚ್ಛಂಕರ ಭಗವತ್ಪೂಜ್ಯ ಪಾದಾಚಾರ್ಯರು ತಮ್ಮ ಭಾಷ್ಯದಲ್ಲಿ ಹೇಳಿರುವಂತೆ ("ಅಲಂಕಾರೋಹ್ಯಯಮಸ್ಮಾಕಂ ಯತ್ ಬ್ರಹ್ಮಾತ್ಮಾವಗತೌ ಸತ್ಯಾಂ ಸರ್ವ ಕರ್ತವ್ಯತಾ ಹಾನಿಃ ಕೃತಕೃತ್ಯತಾ ಚೇತಿ") ತತ್ತ್ವಜ್ಞನಿಗೆ ದುಷ್ಕರ್ಮಫಲದಂತೆಯೇ ಸತ್ಕರ್ಮ ಫಲವೂ (ಸಂಸಾರ ಹೇತುವಾಗಿರುವ ಕಾರಣ) ಇಲ್ಲವು. ಸರ್ವ ಕರ್ತವ್ಯತಾ ಹಾನಿಯೇ ಶಾಸ್ತ್ರ ಸಮ್ಮತವು ಎಂದು ತಾತ್ಪರ್ಯ.) ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥ ಗೀತಾ]

ಕರ್ಮಣಾಸ್ತಿ ನ ತಸ್ಯಾರ್ಥೋ ನಾರ್ಥಸ್ತಸ್ಯಾಸ್ತ್ಯಕರ್ಮಣಾ |
ಯಥಾಸ್ವಭಾವಾವಗಮಾತ್ಸ ಆತ್ಮನ್ಯೇವ ಸಂಸ್ಥಿತಃ ॥ ೬೨ ॥

ಇಚ್ಛಾಸ್ತತಃ ಸಮುದ್ಯಂತಿ ನ ಮಂಜರ್ಯ ಇವೋಪಲಾತ್ |
ಯಾಶ್ಚೋದ್ಯಂತಿ ಚ ತಾಃ ಸರ್ವಾಃ ಷ ಏವಾಪ್ಸ್ವಿವ ವೀಚಯಃ ॥ ೬೩ ॥

---

೬೨. ಕರ್ಮಾಚರಣೆಯಿಂದ ಆಗಬೇಕಾಗಿರುವ ಪ್ರಯೋಜನವು ತತ್ತ್ವ ಜ್ಞಾನನಿಷ್ಠನಿಗೆ ಯಾವದೊಂದೂ ಇಲ್ಲವು. ಕರ್ಮ ಪರಿತ್ಯಾಗದಿಂದಲೂ ಅವನಿಗೆ ಯಾವದೊಂದು ಪ್ರಯೋಜನವೂ ಇಲ್ಲ. ಏಕೆಂದರೆ ಅವನು ಪರಿಪೂರ್ಣಕಾಮನು ಆಗಿರುವನು. ಮತ್ತು ನಿಷ್ಕ್ರಿಯವೂ ಅವಿಕ್ರಿಯವೂ ಆಗಿರುವ ಸ್ವಾತ್ಮಸ್ವರೂಪ ವನ್ನು ಯಥಾರ್ಥವಾಗಿ ಸಾಕ್ಷಾತ್ಕರಿಸಿಕೊಂಡು ದೃಢನಿಶ್ಚಯವುಳ್ಳವನಾಗಿರುವ ಕಾರಣ ಅವನು ನಿಷ್ಕ್ರಿಯಾತ್ಮಸ್ವರೂಪದಲ್ಲಿಯೇ ಸ್ವಸ್ಥನಾಗಿ ನೆಲೆಯಾಗಿ ಪ್ರತಿಷ್ಠಿತ ನಾಗಿರುವನು.

[ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ| ಇತ್ಯಾದಿ ಗೀತಾ ವಾಕ್ಯಗಳನ್ನೂ "ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್" "ನ ಕರ್ಮಣಾ ವರ್ಧತೇ ನೋಕನೀಯಾನ್ |" ಇತ್ಯಾದಿ ಶ್ರುತಿ ವಾಕ್ಯಗಳನ್ನೂ "ಗೌಣ ಮಿಥ್ಯಾತ್ಮನೋಽಸತ್ವೇ ಪುತ್ರ ದೇಹಾದಿ ಬಂಧನಾತ್| ಸದ್ಬ್ರಹ್ಮಾತ್ಮಾಹಮಿತ್ಯೇವಂ ಬೋಧೇ ಕಾರ್ಯಂ ಕಥ ಭವೇತ್ ॥ ದೇಹಾತ್ಮಪ್ರತ್ಯಯೋ ಯದ್ವತ್ ಪ್ರಮಾಣ ತ್ವೇನ ಕಲ್ಪಿತಃ | ಲೌಕಿಕಂ ತದ್ವದೇವೇದಂ ಪ್ರಮಾಣಂತು ಆತ್ಮನಿಶ್ಚಯಾತ್ ॥ ಇತ್ಯಾದಿ ಅಭಿಯುಕ್ತೋಕ್ತಿಗಳನ್ನೂ ನೆನಪಿನಲ್ಲಿಡಬೇಕು. ಇದರ ಅರ್ಥವನ್ನು ಮೊದಲೇ ವಿವರಿಸಿದೆ.]

೬೩. ಲೋಕದಲ್ಲಿ ಎಲ್ಲ ಜನರೂ ಯಾವುದೋ ಒಂದು ಫಲಾಪೇಕ್ಷೆಯಿಂದ ಪ್ರೇರಿತರಾಗಿ ಆ ಫಲಸಾಧಕೋಪಾಯಗಳಾದ ಕರ್ಮಗಳಲ್ಲಿ ಪ್ರವರ್ತಿಸುವರು. ತತ್ತ್ವಜ್ಞಾನನಿಷ್ಠನಾದರೋ ಪರಿಪೂರ್ಣಕಾಮನಾಗಿರುವ ಕಾರಣ ("ಆಪ್ತ ಕಾಮಸ್ಯಕಾಸ್ಪೃಹಾ") ಕಲ್ಲುಬಂಡೆಯದೆಸೆಯಿಂದ ಲತೆಗಳು ಹೇಗೆ ಎಂದಿಗೂ ಉದಯವಾಗುವದಿಲ್ಲವೋ ಹಾಗೆಯೇ ಅವನಿಗೆ ಇಚ್ಛೆಗಳೇ ಉದಯಿಸುವದಿಲ್ಲ. ಆದುದರಿಂದ ಅವನಿಗೆ ಕರ್ಮಪ್ರವೃತ್ತಿಯೂ ಇಲ್ಲವು. ಯಾವುದೋ ಒಂದು ಸಮಯದಲ್ಲಿ ಒಂದು ಪಕ್ಷ ಪೂರ್ವ ವಾಸನಾಭ್ಯಾಸದಿಂದ ಇಚ್ಛೆಗಳು ಉದಯಿಸಿ ದರೂ ಕೂಡ ಅವುಗಳೆಲ್ಲವೂ ಅವನಿಗೆ (ಅಲೆ ಮುಂತಾದವು ನೀರಿಗಿಂತ ಹೇಗೆ

ಸಕಲಮಿದಮಸಾವಸೌ ಚ ಸರ್ವಂ–
ಜಗದಖಿಲ ನ ವಿಭಾಗಿತಾತ್ರ ಕಾಚಿತ್ |
ಪರಮಪುರುಷಪಾವನೈಕರೂಪೀ–
ಸ ಸದಿತಿ ತತ್ಸದಕಿಂಚಿದೇವ ನಾಸೌ || ೬೪ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಧ್ಯಾನವಿಚಾರೋ" ನಾಮ
ಷಟ್‌ಪಂಚಾಶಃ ಸರ್ಗಃ

ಪೃಥಕ್ಕಾದವುಗಳಲ್ಲವೋ ಹಾಗೆಯೇ) ಪರಮಾರ್ಥ ದೃಷ್ಟಿಯಿಂದ ಸ್ವಾತ್ಮಭೂತಗಳಾಗಿಯೇ ಇದ್ದುಕೊಂಡು ಸಕಲ ವಿಧ ಪ್ರವೃತ್ತಿ ನಿವೃತ್ತಿರೂಪ ವಿಕಾರಗಳಿಗೆ ಕಾರಣವಾಗದೆ ಅಕಿಂಚಿತ್ಕರಗಳಾಗಿರುವವು.

೬೪. ಈ ಸಕಲ ದೃಶ್ಯವೂ ತತ್ತ್ವಜ್ಞಾನನಿಷ್ಠಾತ್ಮಕವಾದುದೇ ಮತ್ತು ತತ್ತ್ವಜ್ಞಾನನಿಷ್ಠನು ಈ ಅಖಂಡವಾದ ಸರ್ವ ಜಗದಾತ್ಮಕನೇ ಏಕೆಂದರೆ ಇವುಗಳನ್ನು ಬೇರ್ಪಡಿಸುವ ಧರ್ಮವು ಯಾವದೊಂದೂ ಇಲ್ಲವು. ಹೀಗೆ ಭೇದಕಾರಿಗಳಾದ ಕಾರ್ಯಕಾರಣೋಪಾಧಿಗಳು ಆಯಾ ಸಾಕ್ಷಿ ಚಿನ್ಮಾತ್ರರೂಪವಾಗಿರಲಿಕ್ಕಾಗಿ ತತ್ತ್ವಜ್ಞನು ಸಕಲ ಜಗದಧಿಷ್ಠಾನವಾದ ಸನ್ಮಾತ್ರರೂಪನಾಗಿಯೇ ಇದ್ದುಕೊಂಡಿರುವನು. ಏಕೆಂದರೆ ಈ ತತ್ತ್ವಜ್ಞನು ಪರಮನೂ (ಸರ್ವೋತ್ಕೃಷ್ಟನು) ಪುರುಷನೂ (ಸರ್ವತ್ರ ಪರಿಪೂರ್ಣನು) ಪಾವನನೂ (ಅವಿದ್ಯಾದಿ ಸಕಲ ದೋಷಗಳಿಂದ ಅಸ್ಪೃಷ್ಟನಾಗಿರುವದರಿಂದ ಪರಮಪವಿತ್ರನೂ)ಆದ ಪರಮಾತ್ಮೈಕರೂಪಿಯಾಗಿರುವನು. ಈ ರೀತಿಯಾಗಿ ತತ್ತ್ವಜ್ಞನು ಸರ್ವ ದ್ವೈತಬಂಧ ವಿನಿರ್ಮುಕ್ತವಾದ ಸತ್ಸ್ವರೂಪ ಮಾತ್ರ ಪರಿಶಿಷ್ಟವೂ ನಿತ್ಯಶುದ್ಧಬುದ್ಧ ಮುಕ್ತರೂಪವೂ ಆದ ಪರಬ್ರಹ್ಮವೇ ಆಗಿ ಬಿಟ್ಟಿರುವನು. ವಸ್ತುತಃ ಇವನಲ್ಲದುದು ಬೇರೆ ಯಾವುದೊಂದೂ ಇಲ್ಲವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ಉಪಶಮ ಪ್ರಕರಣದ "ಧ್ಯಾನವಿಚಾರ" ಎಂಬ
ಐವತ್ತಾರನೆಯ ಸರ್ಗವು

ಸಪ್ತಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಯದಾತ್ಮಮರಿಚಸ್ಯಾಂತಶ್ಚಿತ್ತ್ವಾತ್ತೀಕ್ಷ್ಣತ್ವವೇದನಂ ।
ತದಹಂತಾದಿ ಭೇದಾದಿ ದೇಶಕಾಲಾದಿ ಚೇತ್ಯತಃ ॥ ೧ ॥

ಯದಾತ್ಮಲವಣಸ್ಯಾಂತಶ್ಚಿತ್ತ್ವಾಲ್ಲವಣವೇದನಂ ।
ತದಹಂತಾದಿಭೇದಾದಿ ದೇಶಕಾಲಾದಿ ಮತ್ ಸ್ಥಿತಂ ॥ ೨ ॥

ಐವತ್ತೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು —ಅಯ್ಯ ರಾಮ, ಪರಮಾರ್ಥ ಸದ್ರೂಪನಾದ ಈ ಆತ್ಮವೇ ಸ್ವಪ್ರಕಾಶವೆಂಬ ತೀಕ್ಷ್ಣತ್ವವುಳ್ಳ ಒಂದು ಮೆಣಸು ಎಂದು ಭಾವಿಸು. ಆತ್ಮವು ಚಿದ್ರೂಪವಾಗಿರುವ ಕಾರಣ, ಅದರಿಂದ ಈ ಮೆಣಸಿನೊಳಗೆ ತೀಕ್ಷ್ಣತ್ವ ಪ್ರಥಾರೂಪವಾದ ಜ್ಞಾನವು ಉದಯಿಸುವುದು. ತತ್ಸ್ಥಾನೀಯವಾದ ಅಜ್ಞಾತ ಬ್ರಹ್ಮ ಸ್ವಬಾವವೇ, ಅಹಂಕಾರ, ತ್ವಂಕಾರ (ನಾನು, ನೀನು) ಇವೇ ಮೊದಲಾದ ರೂಪವಾಗಿಯೂ, ಘಟ, ಪಟ, ಗೋಡೆಗಳೆಂಬ ಭೇದಾದಿರೂಪವಾಗಿಯೂ, ಇವೆಲ್ಲಕ್ಕೂ ಆಧಾರವಾದ ದೇಶಕಾಲಾದಿ ರೂಪವಾಗಿಯೂ ಇರುವ ಜಗತ್ ಆಗಿರುವುದು. ಹೀಗೆ ಸಮಸ್ತ ಜಗತ್ತೂ ಪರಮಾರ್ಥತಃ ಚಿತ್ತಿಗಿಂತ ಅಭಿನ್ನವಾದುದು. (ಪೃಥಕ್ಕಾಗಿರುವುದಲ್ಲ) ಎಂಬುದನ್ನು ಸಾಧಿಸಿದುದರಿಂದ ವ್ಯವಹಾರ ದೆಸೆಯಲ್ಲಿಯೂ ಈ ಜಗದ್ವೈಚಿತ್ರ್ಯವೆಲ್ಲವೂ ಚಿತ್ಸ್ವಭಾವವೇ ಎಂಬುದು ಫಲಿಸಿತು.

೨. ಇದರಂತೆಯೇ ಆತ್ಮವನ್ನು ಲವಣ (ಉಪ್ಪು) ವೆಂದು ಭಾವಿಸಿದಾಗ, ಅದರೊಳಗೆ ರಸಜ್ಞಾನವು (ಅದರ ಚಿದ್ರೂಪತ್ವದಿಂದ) ಉದಯಿಸುವದು. ಅದೇ ಅಹಂತಾದಿ, ಭೇದಾದಿ, ದೇಶಕಾಲಾದಿಗಳನ್ನೊಳಗೊಂಡ ಜಗದ್ರೂಪವಾಗಿ ಇರುವುದು.

ಸ್ವತೋ ಯದಂತರಾತ್ಮೇಕ್ಷೋಶ್ಚಿತ್ತ್ವಾನ್ಮಾಧುರ್ಯವೇದನಂ |
ತದಹಂತಾದಿ ಭೇದಾದಿ ಜಗತ್ತತ್ತ್ವಾದಿ ಜೃಂಭಿತಂ ॥ ೩ ॥

ಸ್ವತೋ ಯದಾತ್ಮದೃಷದಶ್ಚಿತ್ತ್ವಾತ್ಕಾಠಿನ್ಯವೇದನಂ |
ತದಹಂತಾದಿಭೇದಾದಿದೇಶಕಾಲಾದಿತಾಂ ಗತಂ ॥ ೪ ॥

ಸ್ವತೋ ಯದಾತ್ಮಶೈಲಸ್ಯ ಜ್ಞತಯಾ ಜಾಡ್ಯವೇದನಂ |
ತದಹಂತಾದಿ ಭೇದಾದಿ ಭುವನಾದೀತಿ ಸಂಸ್ಥಿತಂ ॥ ೫ ॥

ಸ್ವತೋ ಯದಾತ್ಮತೋಯಸ್ಯ ಚಿದ್ರವತ್ವಾದಿವರ್ತನಂ |
ತದಾವರ್ತಾದ್ಯಹಂತಾದಿಭೇದಾದ್ಯಾಕಾರಿತಾ ಇವ ॥ ೬ ॥

---

೩. ಆತ್ಮವೆಂಬ ಕಬ್ಬಿನ ಚಿದ್ಭಾವದ ದೆಸೆಯಿಂದ ಅದರೊಳಗೆ ಸ್ವತಃ ಯಾವ ಮಾಧುರ್ಯವಿರುವುದೆಂಬ ಜ್ಞಾನವುಂಟಾಗುವದೋ, ಅದೇ ಅಹಂತಾದಿ ರೂಪವಾಗಿಯೂ, ಭೇದಾದಿರೂಪವಾಗಿಯೂ, ಇರುವ ಜಗತ್ತಾಗಿ ಆಯಾ ಆಕಾರಭೇದದಿಂದ ಅಭಿವ್ಯಕ್ತವಾಗಿರುವುದು.

೪. ಅದೇ ಚಿದ್ರೂಪದಿಂದಲೇ ಆತ್ಮವೆಂಬ ಒಂದು ಶಿಲೆಯೊಳಗೆ ಸ್ವತಃ ಕಾಠಿಣ್ಯವಿರುವುದೆಂಬ ತಿಳಿವೇ ಅಹಂತಾದಿ, ಭೇದಾದಿ, ದೇಶಕಾಲಾದಿ ಜಗದ್ಭಾವವನ್ನು ಹೊಂದಿದುದಾಗಿರುವದು.

೫. ಅಂತೆಯೇ ಆತ್ಮನೆಂಬ ಪರ್ವತದೊಳಗೆ ಚಿದ್ರೂಪತ್ವದಿಂದ ಸ್ವತಃ ಗುರುತ್ವವು (ಭಾರವು) ಇರುವದೆಂದುಂಟಾಗುವ ತಿಳಿವಳಿಕೆಯೇ ಅಹಂಕಾರಾದಿ, ಭೇದಾದಿ, ಪ್ರಪಂಚಾದಿ ನಾನಾ ರೂಪದಲ್ಲಿ ವಿಜೃಂಭಿಸುವದು.

೬. ಆತ್ಮನೆಂಬ ಉದಕದೊಳಗೆ ಚಿದ್ರೂಪತ್ವದಿಂದ ಸ್ವತಃ ದ್ರವತ್ವವಿರುವದೆಂದು ಉದಯಿಸುವ ಜ್ಞಾನವೇ ಆವರ್ತಾದಿ ಅಹಂತಾದಿ, ಭೇದಾದಿ ಆಯಾ ಆಕಾರವುಳ್ಳದ್ದಾಗಿರುವಂತೆ ತೋರುವದು.

[ಆವರ್ತ=ನೀರಿನ ಸುತ್ತುವಿಕೆ=ಸುಳಿ]

ಸ್ವತೋ ಯದಾತ್ಮವೃಕ್ಷಸ್ಯ ಶಾಖಾದಿಸ್ತಸ್ಯ ವೇದನಂ |
ತದಹಂತಾದಿ ಭೇದಾದಿ ಭುವನಾದೀವ ಸಸ್ಫುರತ್ ‖ ೭ ‖

ಯದಾತ್ಮಗಗನಸ್ಯಾಂತಶ್ಚಿತ್ವಾಚ್ಛೂನ್ಯತ್ವವೇದನಂ |
ತದಹಂತಾದಿ ಭೇದಾದಿ ಭುವನಾದೀತಿ ಭಾವನಂ ‖ ೮ ‖

ಯದಾತ್ಮಗಗನಸ್ಯಾಂತಶ್ಚಿತ್ತ್ವಾತ್ಸೌಷಿರ್ಯವೇದನಂ |
ತದಹಂತಾದಿ ಭೇದಾದಿ ಶರೀರಾದಿ ಚ ದೀಪಿತಂ ‖ ೯ ‖

ಸ್ವತೋ ಯದಾತ್ಮಕುಡ್ಯಸ್ಯ ನೈರಂತರ್ಯಂ ನಿರಂತರಂ |
ತದಹಂತಾದಿಭೇದೇನ ಚಿತ್ತಾದ್ಬಹಿರಿವಸ್ಥಿತಂ ‖ ೧೦ ‖

---

೭. ಆತ್ಮವೆಂಬ ವೃಕ್ಷದೊಳಗೆ ಸ್ವತಃ ಚಿದ್ರೂಪತ್ವದ ದೆಸೆಯಿಂದ ಕೊಂಬೆಗಳು, ಎಲೆಗಳು ಮುಂತಾದವು ಇರುವವು ಎಂಬ ಜ್ಞಾನವೇ ಅಹಂತಾದಿ, ಭೇದಾದಿ, ಭುವನ (ಜಗತ್) ಮೊದಲಾದುವುಗಳಂತೆ ಇದ್ದುಕೊಂಡು ಭಾಸಮಾನವಾಗುವದು.

೮. ಆತ್ಮವೆಂಬ ಆಕಾಶದೊಳಗೆ ಚಿದ್ಭಾವದ ದೆಸೆಯಿಂದ ಶೂನ್ಯತ್ವವಿರುವದೆಂಬ ಅರಿವೇ ಅಹಂತಾದಿ, ಭೇದಾದಿ, ಪ್ರಪಂಚಾದಿ ಭೇದರೂಪದಿಂದ ಗೋಚರವಾಗುವದು.

೯. ಆತ್ಮನೆಂಬ ಅಂತರಿಕ್ಷದೊಳಗೆ ಚಿತ್ತ್ವದ ದೆಸೆಯಿಂದಲೇ ರಂಧ್ರವಿರುವದೆಂಬ ಭಾವನೆಯೇ ಅಹಂಕಾರಾದಿ, ಘಟಪಟಭೇದಾದಿ, ಶರೀರಾದಿ ರೂಪದಿಂದ ಪ್ರಕಾಶಿಸುವದು.

[ದ್ರವ್ಯದ ಹೊರಗೆ ಏನೂ ಇಲ್ಲದಿರುವದಕ್ಕೆ ಶೂನ್ಯವೆಂದೂ ಒಂದು ಮೂರ್ತ ದ್ರವ್ಯದೊಳಗೆ ಓಟೆಯು (ರಂಧ್ರವು) ಇರುವದಕ್ಕೆ ಸೌಷಿರ್ಯವೆಂದೂ ಸಂಜ್ಞೆ.]

೧೦. ಆತ್ಮವೆಂಬ ಗೋಡೆಯೊಳಗೆ ಸ್ವತಃ (ಚಿತ್ತ್ವದ ದೆಸೆಯಿಂದ) ನಿರಂತರವೂ ನೈರಂತರ್ಯವು ಇರುವದೆಂಬ ಪರಿಜ್ಞಾನವೇ ಅಹಂತಾದಿ ಭೇದದಿಂದ ಹೊರಗೆ ದೃಶ್ಯವಾಗಿರುವ ಕಾರಣ ಚಿತ್ತಿಗಿಂತ ವ್ಯತಿರಿಕ್ತವಾಗಿರುವಂತೆ ಕಾಣುತ್ತಿರುವದು.

[ನಿಬಿಡತೆಯು=ನೀರಂಧ್ರತೆಯು ಅಂದರೆ ರಂಧ್ರವಿಲ್ಲದೆ ತುಂಬಿರುವಿಕೆಯು]

ಸ್ವತೋ ಯದಾತ್ಮಸತ್ತಾಯಾಶ್ಚಿತ್ತ್ವಾತ್ಸತ್ವೈಕವೇದನಂ |
ತದಹಂತಾದಿಭೇದಾದಿ ಚೇತನಾನೀತಿವತ್ಸ್ಥಿತಂ ॥ ೧೧ ॥

ಅಂತರಾತ್ಮಪ್ರಕಾಶಸ್ಯ ಸ್ವತೋ ಯದವಭಾಸನಂ |
ತದಹಂತಾದಿ ಚಿತ್ತ್ವಾದಿ ಜೀವ ಇತ್ಯೇವ ವೇದ ಸಃ ॥ ೧೨ ॥

ಅಂತರಸ್ತಿ ಯದಾತ್ಮೇಂದೋಶ್ಚಿದ್ರೂಪಂ ಚಿದ್ರಸಾಯನಂ |
ಸ್ವತ ಆಸ್ವಾದಿತಂ ತೇನ ತದಾಹಂತಾದಿನೋದಿತಂ ॥ ೧೩ ॥

ಪರಮಾತ್ಮಗುಡಸ್ಯಾಂತರ್ಯಚ್ಚಿತ್ತ್ವಾಸ್ವದೂದಯಾತ್ಮಕಂ |
ತದೇವಾಸ್ವಾದ್ಯತೇ ತೇನ ಸ್ವತೋಽಹಂತಾದಿನಾಂತರೇ ॥ ೧೪ ॥

---

೧೧. ಚಿತ್‌ತ್ವದ ದೆಸೆಯಿಂದಲೇ ಆತ್ಮಸತ್ತೆಯು (ಸತ್‌ತಾ=ಸದ್ಭಾವ, ಪರಮಾರ್ಥತಃ ಸದಾ ಇರುವಿಕೆ) ಸ್ವತಃ ಕೇವಲ ಸತ್ತಾಮಾತ್ರವೇ ಎಂದು ತಿಳಿಯುವಿಕೆಯು ಅಹಂತಾದಿ, ಭೇದಾದಿ, ಚಿದಾಭಾಸಗಳು ಇತ್ಯಾದಿ ಭೇದಗಳುಳ್ಳದ್ದಾಗಿರುವದು.

೧೨. ಕೇವಲ ಚಿದ್ರೂಪನಾಗಿ ಸ್ವಯಂ ಪ್ರಕಾಶಮಾನನಾದ ಆತ್ಮನ ತೇಜಸ್ಸು ಹೃದಯಾಂತರಾಳದಲ್ಲಿ ಸ್ವತಃ ಭಾಸಿಸುವದು ಯಾವದುಂಟೋ ಅದನ್ನೇ ಜೀವನು ಅಹಂತಾದಿ ಮತ್ತು ನಾನಾ ವೃತ್ತಿಭೇದಗಳಿಂದ ವಿಭಿನ್ನಗಳಾದ ಚಿದಾಭಾಸಗಳಲ್ಲಿ ಅನುಗತವಾದ ಸಾಮಾನ್ಯ ಚೈತನ್ಯ ಜೀವ ಇತ್ಯಾದಿ ಭೇದಗಳಾಗಿಯೇ ಕಲ್ಪಿಸಿಕೊಳ್ಳುವನು.

೧೩. ಆತ್ಮನೆಂಬ ಚಂದ್ರನೊಳಗೆ ಯಾವ ಚಿತ್ ಎಂಬ ರಸಾಯನ (ಅಮೃತ) ವಿರುವದೋ ಆ ಚಿದ್ರೂಪವು ಸ್ವಪ್ರಕಾಶತ್ವದಿಂದ ಸ್ವತಏವ ಅನುಭವಗೋಚರವಾಗಿರುವದು. ಆದಕಾರಣ ಅದು ಅಹಂತಾದಿ ರೂಪಭೇದದಿಂದಲೂ ಆವಿರ್ಭವಿಸಿರುವದು.

೧೪. ಪರಮಾತ್ಮನೆಂಬ ಬೆಲ್ಲದೊಳಗೆ ಚಿತ್ತೆಂಬ ಮಧುರ ರಸದ ಆವಿರ್ಭಾವಾತ್ಮಕವಾದ ಅರಿವು ಯಾವದುಂಟೋ ಅದೇ ಸ್ವತಏವ ಅಹಂತಾದಿ ನಾನಾ ಭೇದದಿಂದಲೂ ಸ್ವಾತ್ಮನಲ್ಲಿಯೇ ಆಸ್ವಾದಿಸಲ್ಪಡುವದು.

ಪರಮಾತ್ಮಮಣೇಶ್ಚಿತ್ತ್ವಾದ್ಯದಂತಃ ಕಚನಂ ಸ್ವಯಂ |
ಚೇತನಾತ್ಮಪದೇ ಚಾಂತರಹಮಿತ್ಯಾದಿ ವೇತ್ತ್ಯಸೌ ॥ ೧೫ ॥

ನಚ ಕಿಂಚನ ವೇತ್ತ್ಯಂತರ್ವೇದ್ಯಸ್ಯಾಸಂಭವಾದಿಹ |
ನ ಚಾಸ್ವಾದಯತಿ ಸ್ವಾದು ಸ್ವಾದ್ಯಸ್ಯಾಸಂಭವಾದಯಂ ॥ ೧೬ ॥

---

೧೫. ಸ್ವಯಂ ಚಿದ್ರೂಪನಾಗಿರುವ ಕಾರಣ ಪರಮಾತ್ಮನೆಂಬ ಒಂದು ದಿವ್ಯ ರತ್ನದೊಳಗೆ ಸ್ವತಃ ಯಾವ ಹೊಳಪು (ಥಳಥಳನೆ ಹೊಳೆಯುವ ಪ್ರಕಾಶ) ಇರುವದೋ ಅದನ್ನೇ ಈ ಜೀವನು ಚೈತನ್ಯಾತ್ಮಕವಾದ ಸ್ವರೂಪದಲ್ಲಿಯೇ ಅಹ ಮಿತ್ಯಾದಿ ಭೇದದಿಂದ ತನ್ನೊಳಗೆ ಕಾಣುವನು.

೧೬. ವಾಸ್ತವವಾಗಿಯೂ ಜ್ಞೇಯವಾದ ವಸ್ತ್ವಂತರವೇ ಪರಮಾರ್ಥತಃ ಅಸಂಭವವಾಗಿರುವ ಕಾರಣ ಈ ಜೀವನು ಈ ಜಗತ್ತಿನೊಳಗೆ ಯಾವದೊಂದನ್ನೂ ತಿಳಿಯುವದೇ ಇಲ್ಲ. ಅಂತೆಯೇ ಆಸ್ವಾದಿಸಬೇಕಾಗಿರುವ ಪದಾರ್ಥವೇ ಸರ್ವಥಾ ಅಸಂಭವವಾಗಿರುವ ಕಾರಣ ಅವನು ಯಾವದೊಂದನ್ನೂ ಆಸ್ವಾದನೆ ಮಾಡುವದೂ ಇಲ್ಲ.

[ಜ್ಞಾನ, ಜ್ಞಾತೃ, ಜ್ಞೇಯಗಳೆಂಬ ಭೇದಗಳೆಲ್ಲವೂ ವ್ಯವಹಾರದಶೆಯಲ್ಲಿಯೇ ಹೊರತು ಪರಮಾರ್ಥವಾದ ಆತ್ಮೈಕತ್ವಜ್ಞಾನದಲ್ಲಿ ಇಲ್ಲವೇ ಇಲ್ಲ. ಏಕೆಂದರೆ ನಾನಾ ಭೇದಮಯವಾದ ಜಗತ್ತು ಜ್ಞಾನ ಬಾಧಿತವಾಗಿ ತೊಲಗುವದು. ಸರ್ವವೂ ಆತ್ಮವೇ ಆಗಿಬಿಡುವದು. ಹೀಗೆ ಜ್ಞೇಯವೇ ಇಲ್ಲವಾಗಿ ಬಿಟ್ಟರೆ ಜ್ಞಾತೃತ್ವವು ತಾನೇ ಹೇಗೆ ಉಂಟಾದೀತು ? "ಯತ್ರತು ಅಸ್ಯ ಸರ್ವಂ ಆತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್, ಕೇನ ಕಂ ಶೃಣುಯಾತ್, ಕೇನ ಕಂ ವಿಜಾನೀಯಾತ್ (ಬೃಹದಾರಣ್ಯಕ ೨-೪-೧೪) ಇತ್ಯಾದಿ ಶ್ರುತಿಯು ಪರಮಾರ್ಥ ದೃಷ್ಟಿಯಲ್ಲಿ ಕ್ರಿಯಾಕಾರಕಫಲಾದಿ ಸಕಲ ಭೇದ ವ್ಯವಹಾರಗಳನ್ನೂ ನಿರಾಕರಿಸುತ್ತಿರುವದು.]

ನ ಚ ಕಿಂಚಿಚ್ಚಿನೋತ್ಯಂತಶ್ಚೇತ್ಯಸ್ಯಾಸಂಭವೇ ಸತಿ |
ವಿಂದತೇ ನ ಚ ವಾ ಕಿಂಚಿದ್ವೇದ್ಯಸ್ಯಾಸಂಭವಾದಸೌ || ೧೭ ||

ಅಸದಾಭಾಸ ಏವಾತ್ಮಾ ಅನಂತೋ ಭರಿತಾಕೃತಿಃ |
ಸ್ಥಿತಃ ಸರ್ವೈವೈಕಘನೋ ಮಹಾಶೈಲ ಇವಾತ್ಮನಿ || ೧೮ ||

ಅನಯಾ ತು ವಚೋಭಂಗ್ಯಾ ಮಯಾ ತೇ ರಘುನಂದನ |
ನಾಹಂತಾದಿಜಗತ್ತಾದಿಭೇದೋಽಸ್ತೀತಿ ನಿದರ್ಶಿತಂ || ೧೯ ||

ನ ಚಿತ್ತಮಸ್ತಿ ನೋ ಚೇತಾ ನ ಜಗತ್ತಾದಿವಿಭ್ರಮಃ |
ವೃತವಮೂಕಾಂಬುದಸಿತಂ ಶಾಂತಂ ಶಾಮ್ಯತಿ ಕೇವಲಂ || ೨೦ ||

---

೧೭. ಹೀಗೆಯೇ ಚೇತ್ಯ (ಚೇತನೀಯವಾದ) ವಾದುದೂ ಅಸಂಭವವಾಗಿರುವಲ್ಲಿ ಇವನು ಯಾವದೊಂದನ್ನೂ ಚೈತನ್ಯಾಂತರಾತ್ಮನಿಂದ ವಿಕಾರಗೊಳಿಸುವದಿಲ್ಲ. ಲಭ್ಯವಾಗಲಿರುವದೊಂದೂ ಇಲ್ಲದಿರುವ ಕಾರಣ ಆತ್ಮನು ಯಾವದೊಂದನ್ನೂ ಪಡೆಯುವುದೂ ಇಲ್ಲ.

೧೮. ನಾನಾ ಭೇದಮಯವಾಗಿ ಆಭಾಸಮಾನವಾದ ಈ ಜಗದಾಕಾರವು ಆತ್ಮನಲ್ಲಿ ಎಂದಿಗೂ ಇಲ್ಲವೇ ಇಲ್ಲವು. ಈ ಆತ್ಮನು ಅನಂತನು. ಸರ್ವತ್ರ ಸದಾ ಪರಿಪೂರ್ಣನು. ಮಹಾಕುಲ ಪರ್ವತದಂತೆ ಕೇವಲ (ಪ್ರಜ್ಞಾನ) ಘನ ಸ್ವರೂಪನೂ ಅಚಲನೂ ಅವಿಕ್ರಿಯನೂ ಆಗಿರುವನು.ಅದ್ವಿತಿಯನುಆತನು ಸರ್ವದಾ ತನ್ನಲ್ಲಿ ತಾನೇ ಇರುವವನು.

೧೯. ಅಯ್ಯಾ ರಘುನಂದನ, ಇದುವರೆವಿಗೆ ನಾನು ವಿವರಿಸಿದ ಉಪದೇಶ ಕ್ರಮದಿಂದ (ಅಹಂತ್ವತ್ವಂತ್ವ) ನಾನು, ನೀನು ಮುಂತಾದ ಭೇದವೂ ಪ್ರಪಂಚ ಮೊದಲಾದ ಭೇದವೂ ಪರಮಾರ್ಥತಃ ಇಲ್ಲವೇ .ಇಲ್ಲವೆಂಬ ವಿಚಾರವನ್ನು ನಿನಗೆ ಸೋಪಪತ್ತಿಕವಾಗಿ ಪುನಃ ಸಂದೇಹವುಂಟಾಗದಂತೆ ಬೋಧಿಸಿರುವೆನು. ಇದನ್ನು ಮರೆಯದಿರು.

೨೦. ಹೀಗೆ ಚಿತ್ತವೆಂಬುದೂ ಇಲ್ಲ. ಚೇತನ ಮಾಡತಕ್ಕವನೂ ಇಲ್ಲ. ಜಗತ್ತು ಮೊದಲಾದ ಭ್ರಾಂತಿಯೂ ಇಲ್ಲ. ಮೊದಲೇ ವರ್ಷರ್ತುವಿನಲ್ಲಿ ಚೆನ್ನಾಗಿ ಮಳೆಯ ರೂಪವಾಗಿ ತನ್ನಲ್ಲಿರುವ ನೀರನ್ನೆಲ್ಲ ಸುರಿಯಿಸಿ ಆಮೇಲೆ ಶರತ್ಕಾಲದಲ್ಲಿ

ಯಥಾವರ್ತಾದಿತಾಮೇತಿ ದ್ರವತ್ವಾದ್ವಾರಿ ವಾರಿಣಿ |
ತಥಾಹಂತ್ವಾದಿತಾಮೇತಿ ಜ್ಞಪ್ತಾ ಜ್ಞಪ್ತೌ ಜ್ಞ ಆತ್ಮನಿ || ೨೧ ||

ಯಥಾ ದ್ರವತ್ವಂ ಪಯಸಿ ಯಥಾ ಸ್ಪಂದಃ ಸದಾಗತೌ |
ಅಹಂತಾದೇಶಕಾಲಾದಿ ತಥಾ ಜ್ಞೇ ಜ್ಞಪ್ತಿಮಾತ್ರಕೇ || ೨೨ ||

ಜ್ಞೋ ಜ್ಞತಾಯಾಂ ಶಿವಜ್ಞಾನಂ ಜಾನಾತಿ ಜ್ಞಾನಬೃಂಹಯಾ |
ಜ್ಞಾಯತೇಽಹಂತಾದಿ ಜ್ಞೇನ ಜೀವಾದೀತ್ಯಭಿಜೀವನೈಃ || ೨೩ ||

ಅತ್ಯಂತ ಸ್ವಚ್ಛವಾಗಿ ಗರ್ಜಿಸದೆ ಮೌನದಿಂದಿರುವ ಮೇಘದಂತೆ ನಿತ್ಯ ಶುದ್ಧವೂ, ನಿರುಪದ್ರವವೂ, ಅದ್ವಿತೀಯವೂ ಆಗಿರುವ ಆತ್ಮವು ಮಾತ್ರವೇ ಪರಮಾರ್ಥ ಸತ್ಯನಾಗಿ ಪ್ರಶಾಂತವಾಗಿ ಸದಾ ಇರುವದು.

೨೧. ಜಲವು ದ್ರವವಸ್ತುವಾಗಿರುವದರಿಂದ ಜಲದೊಳಗೆಯೇ ಹೇಗೆ ಆವರ್ತ (ಸುಳಿ) ತರಂಗ ಮುಂತಾದ ಭೇದವನ್ನು ಹೊಂದುವದೋ, ಹಾಗೆಯೇ ಮಾಯಾಶ್ರಯನೂ, ಸರ್ವಜ್ಞನೂ ಆದ ಪರಮಾತ್ಮನು ತನ್ನ ಮಾಯೆಯಿಂದ ಆವೃತವಾದ ಜ್ಞಪ್ತಿರೂಪ ಆತ್ಮನಲ್ಲಿ ಜೀವ ಜಗತ್ತು ಮುಂತಾದ ಭಾವವನ್ನು ಪಡೆಯುವದು.

೨೨. ಜಲದಲ್ಲಿ ದ್ರವತ್ವವಿರುವಂತೆಯೂ ಮತ್ತು ವಾಯುವಿನಲ್ಲಿ ಚಲನವಿರುವಂತೆಯೂ ಪರಮಾರ್ಥತಃ ಕೇವಲ ಜ್ಞಪ್ತಿ ಮಾತ್ರ ರೂಪನಾದ ಸರ್ವಜ್ಞನಾದ ಪರಮೇಶ್ವರನಲ್ಲಿ ಅಹಂಭಾವ, ದೇಶ, ಕಾಲ ಮುಂತಾದ ಜಗತ್ತು ಇರುವದು.

೨೩. ಸರ್ವಜ್ಞನಾದ ಪರಮೇಶ್ವರನು ಪರಮೇಶ್ವರ ಭಾವದಲ್ಲಿಯೇ ನಿರತಿಶಯಾನಂದ ರೂಪವಾದ ಸ್ವರೂಪ ಜ್ಞಾನವನ್ನು ಅವಿದ್ಯಾದ್ಯಾವರಣ ಶೂನ್ಯವೂ ಅಪರಿಚ್ಛಿನ್ನವೂ ಆದ ಜ್ಞಾನಾಭಿವೃದ್ಧಿಯಿಂದ ಸರ್ವದಾ ಅವಿಚ್ಛಿನ್ನವಾಗಿ ಅರಿಯುವನು. ಅಹಂಕಾರ ಸ್ಥೂಲ ದೇಹರೂಪ ಜೀವಭಾವದಲ್ಲಿಯಾದರೋ ಪರಮೇಶ್ವರನು ಚೇತನಭೂತನಾಗಿದ್ದರೂ ಕೂಡ ಜೀವನ ಹೇತುಗಳಾದ ಘ್ರಾಣೇಂದ್ರಿಯ ವಿಷಯ ಸಂಬಂಧಾಧ್ಯಾಸಗಳಿಂದ ಅಹಂಭಾವಾದಿ ರೂಪವಾಗಿಯೇ ಆತ್ಮನನ್ನು ಅರಿಯುವನು. ತಾತ್ತ್ವಿಕವಾಗಿ ಅರಿಯುವದಿಲ್ಲ.

[ಹೀಗೆ ಜೀವ ಜಗದ್ರೂಪಗಳು ಜ್ಞಪ್ತಿಗಿಂತ ಅನನ್ಯಗಳಾಗಿದ್ದರೂ ಕೂಡ ಜೀವೇಶ್ವರ ಭಾವಗಳಿಗೆ ಇಷ್ಟು ಮಾತ್ರವೇ ವಿಶೇಷವೆಂದು ತಿಳಿಯಬೇಕು.]

ಯಥೋದೇತಿ ಯಯೋಽಜ್ಞಸ್ಯ ತೃಪ್ತಿರ್ಜ್ಞಾನೇನ ಯಾದೃಶೀ |
ಅನನ್ಯೇವಾನ್ಯಥಾ ಬುದ್ಧ್ವಾ ಸ ತಥಾ ಜೃಂಭತೇ ತಯಾ || ೨೪ ||

ಜೀವನಂ ಜ್ಞಾತತಾ ಜ್ಞಾತಾ ಜೀವನಂ ಜೀವಜೀವನಂ |
ಅತ್ಯಂತಮಸ್ತಿ ನೋ ಭೇದಶ್ಚಿದ್ರೂಪತ್ವೇ ಜ್ಞಜೀವಯೋಃ || ೨೫ ||

ಯಥಾಜ್ಞಜೀವಯೋರ್ನಾಸ್ತಿ ಭೇದೋ ನಾಮ ತಥೈತಯೋಃ |
ಭೇದೋಽಸ್ತಿ ನ ಜ್ಞಶಿವಯೋರ್ವಿದ್ಧಿ ಶಾಂತಮಖಂಡಿತಂ || ೨೬ ||

---

೨೪. ಯಾವ ಯಾವ ಕಾಮುಕರ್ಮಾದಿ ವಾಸನಾ ಬಲದಿಂದ ಎಂತೆಂತಹ ವಿಷಯ ಜ್ಞಾನದಿಂದ, ಅಜ್ಞನಿಗೆ ಯಾವ ಯಾವ (ದರ್ಶನ, ಲಾಭ, ಉಪಭೋಗ) ಇತ್ಯಾದಿ ನಾನಾ ವಿಚಿತ್ರ ಪ್ರಕಾರದಿಂದ ಪ್ರಿಯಮೋದಾದಿ ನಾನಾ ಪ್ರಕಾರಗಳುಳ್ಳ ಎಂತಹ ಉಪಭೋಗವು ಉದಯಿಸುವದೋ ಅದನ್ನನುಸರಿಸಿಯೇ ಸರ್ವಜ್ಞನಾದ ಆ ಪರಮೇಶ್ವರನೂ ಅನನ್ಯವಾದ ಸ್ವರೂಪದಲ್ಲಿಯೇ ಭೋಕ್ತೃ ಭೋಗ್ಯ ಭೋಗ ಮುಂತಾದ ವೈಚಿತ್ರ್ಯಗಳಿಂದ ಕೂಡಿದ ಅನ್ಯತ್ವವನ್ನು ಅರಿಯುವನು. ಮತ್ತು ಆಯಾ ಕಾಮುಕರ್ಮಾದಿ ವಾಸನೆಯಿಂದಲೇ ಆಯಾ ನಾನಾ ಪ್ರಕಾರದಲ್ಲಿಯೇ ಹಾಗೆಹಾಗೆಯೇ ಅವುಗಳಿಗೆ ಅನುಗುಣವಾಗಿ ತನ್ನ ದೇಹಾವಯವಗಳನ್ನು ವಿನಿಮಯ ಮಾಡಿಕೊಳ್ಳುವನು.

[ಜೀವನಿಗೆ ಹೇಗೆ ಹೇಗೆ ಭ್ರಾಂತಿಯುದಯಿಸುವದೋ ಹಾಗೆಹಾಗೆಯೇ ಈಶ್ವರನೂ ವಿವರ್ತನಾಗುವನು ಎಂದು ಭಾವ.]

೨೫. ಆದರೆ ಯಾವಾಗ ಜೀವನು ಸಚ್ಛಾಸ್ತ್ರಾಭ್ಯಾಸ, ಸದ್ಗುರೂಪದೇಶಾದಿ ಗಳಿಂದ ಸುಸಂಸ್ಕೃತನಾಗಿ ಭೋಗ್ಯವಾದ ಈ ಜಗತ್ತಿನ, ಅಧಿಷ್ಠಾನ ಸನ್ಮಾತ್ರರೂಪ ಸ್ಫೂರ್ತಿಯೇ ಜೀವನವು ಎಂಬ ಪರಮಾರ್ಥ ಸ್ಥಿತಿಯನ್ನು ತಿಳಿಯುವನೋ ಮತ್ತು ಸಕಲ ಜೀವಗಳ ಜೀವನವೂ ಯಾವ ನಿರತಿಶಯ ನಿತ್ಯಾನಂದರೂಪ ಪರಮಾತ್ಮನ ಅಧೀನವಾಗಿರುವದೋ ಅಂತಹ ಆತ್ಮಾನಂದರೂಪವೇ ಭೋಕ್ತೃವಿನ ಸಾರವು ಎಂದು ತಿಳಿಯುವನೋ ಆಗಲೇ ಭೋಗ್ಯಭೋಕ್ತ್ರಧಿಷ್ಠಾನಗಳೆರಡೂ ಕೇವಲ ಚಿದ್ರೂಪವೇ ಎಂಬುದು ಪರಿಶಿಷ್ಟವಾಯಿತು. ಈ ಸ್ಥಿತಿಯಲ್ಲಿ ಜೀವೇಶ್ವರರಿಗೆ ಭೇದ ವೆಂಬುದು ಆತ್ಯಂತಿಕವಾಗಿ ಸರ್ವಥಾ ಇಲ್ಲವೇ ಇಲ್ಲವು.

೨೬. ಈಶ್ವರ ಜೀವರಿಗೆ ಭೇದವನ್ನು ಕಲ್ಪಿಸುವ ಅಜ್ಞಾನವು ಪೂರ್ಣಿಯಾಗಿ

ಸರ್ವಂ ಪ್ರಶಾಂತ ಮಜಮೇಕಮನಾದಿಮಧ್ಯ
ಮಾಭಾಸ್ವರಂ ಸ್ವದನಮಾತ್ರಮಚೇತ್ಯಚಿಹ್ನಂ ।
ಸರ್ವಂ ಪ್ರಶಾಂತಮಿತಿ ಶಬ್ದಮಯೀ ತು ದೃಷ್ಟಿ
ರ್ಬೋಧಾರ್ಥಮೇವ ಹಿ ಮುಧೈವ ತದೋಮಿತೀದಂ ॥ ೨೭ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಭೇದನಿರಾಸೋ" ನಾಮ ಸಪ್ತಪಂಚಾಶಃ ಸರ್ಗಃ

ನಷ್ಟವಾಗಿ ಬಿಟ್ಟಿದ್ದರಿಂದ ಹೇಗೆ ಜೀವೇಶ್ವರರಿಗೆ ಭೇದಪ್ರಸಕ್ತಿಯೆಂಬುದೇ ಸುತರಾಂ ಇಲ್ಲವಾಯಿತೋ ಹಾಗೆಯೇ ಈ ಪ್ರಾಜ್ಞತುರ್ಯರಿಗೂ ಭೇದವೆಂಬುದು ಸರ್ವಥಾ ಇಲ್ಲವೇ ಇಲ್ಲವು. ಹೀಗೆ ಅಖಂಡವೂ ಪರಿಪೂರ್ಣವೂ ನಿರುಪಪ್ಲವವೂ ಆನಂದೈಕ ರಸವೂ ಆದ ಕೇವಲ ಚಿತ್ಸ್ವರೂಪವೇ ಸರ್ವತ್ರ ಸರ್ವದಾ ಅಬಾಧಿತವಾಗಿ ಇರುವ ದೆಂದು ತಿಳಿ.

೨೭. ಈ ಸಕಲ ಜಗತ್ತು ಸರ್ವತಃ ಪೂರ್ಣ ಸ್ವಪ್ರಕಾಶರೂಪವೂ ಅನಂದೈಕ ರಸವೂ ವಿಷಯಗಳಿಂದಲೂ ಮತ್ತು ವ್ಯಾವರ್ತಕ ಧರ್ಮಗಳಿಂದಲೂ ಕೂಡ ರಹಿತ ವಾದುದೂ (ಚೇತ್ಯಗಳೂ ಚಿಹ್ನಗಳೂ ಇಲ್ಲದೆ) ಸರ್ವೋಪದ್ರವರಹಿತವೂ ಜನ್ಮಾದಿ ವಿಕ್ರಿಯಾರಹಿತವೂ ಅದ್ವಿತೀಯವೂ (ಸಜಾತೀಯ ವಿಜಾತೀಯ ಮತ್ತು ಸ್ವಗತವೆಂಬ ತ್ರಿವಿಧ ಭೇದರಹಿತವೂ) ಆದಿಮಧ್ಯಾಂತ ರಹಿತವೂ (ಕಾಲತ್ರಯಾ ಬಾಧಿತವೂ ಆದ ಬ್ರಹ್ಮವೇ. (ಬೇರೆಯಿಲ್ಲ.) ಸರ್ವವೂ ಪ್ರಶಾಂತವಾದ ಬ್ರಹ್ಮವೇ ಎಂಬ ತಾತ್ಕಾಲಿಕ ಶಬ್ದಮಯವಾದ ಭೇದದೃಷ್ಟಿಯು ಕೇವಲ ಲಕ್ಷ್ಯಾರ್ಥವಾದ ಅಖಂಡ ಜ್ಞಾನಾರ್ಥವಾಗಿಯೇ ಉಪದೇಶಕ್ಕೆ ಮಾತ್ರವೇ ಹೊರತು ಸಾಕ್ಷಾತ್ತಾಗಿ ಅದರಿಂದ ಏನೂ ಪ್ರಯೋಜನವಿಲ್ಲ. ಆದೂ ವ್ಯರ್ಥವೇ!

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದಲ್ಲಿ
ಉಪಶಮ ಪ್ರಕರಣದಲ್ಲಿ "ಭೇದನಿರಾಸ" ಎಂಬ ಐವತ್ತೇಳನೆಯ ಸರ್ಗವು

ಅಷ್ಟಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ |
ಕಿರಾತೇಶಸ್ಯ ಸುರಘೋರ್ವೃತ್ತಾಂತಂ ವಿಸ್ಮಯಾಸ್ಪದಂ ‖ ೧ ‖

ಉತ್ತರಸ್ಯಾ ದಿಶೋ ವೇದಃ ಕರ್ಪೂರಪಟಲಂ ಭುವಃ |
ಸಂಭೂತಂ ಹಸನಂ ಶಾರ್ವಂ ಶುಕ್ಲೋ ವಾ ಚಾಂದ್ರ ಆತಪಃ ‖ ೨ ‖

ಹಿಮಾದ್ರೇಃ ಶೃಂಗಮಸ್ತೀಹ ಕೈಲಾಸೋ ನಾಮ ಪರ್ವತಃ |
ಶೈಲಕುಂಜರನಿರ್ಮುಕ್ತಕಲಾಪಸ್ಯೇವ ನಾಯಕಃ ‖ ೩ ‖

ಐವತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—"ಶಬ್ದಮಯವಾದ ಭೇದ ದೃಷ್ಟಿಯು ಅಖಂಡ ಬೋಧಾರ್ಣವೇ" ಎಂಬೀ ಪೂರ್ವ ಸರ್ಗಾಂತದಲ್ಲಿ ಉಕ್ತವಾದ ವಿಷಯದಲ್ಲಿ ಅತ್ಯಾಶ್ಚರ್ಯ ಪ್ರಚುರವಾದ ಕಿರಾತರಾಜನಾದ ಸುರಘುವಿನ ವೃತ್ತಾಂತವೆಂಬ ಅತಿ ಪುರಾತನವಾದ ಇತಿಹಾಸವನ್ನು ಪ್ರಾಜ್ಞರು ಉದಹರಿಸುವರು.

೨-೩. ಉತ್ತರ ದಿಕ್ಕಿನ ಸಾರವೋ ಎಂಬಂತೆಯೂ, ಭೂಮಿಯೊಳಗಿನಿಂದ ಉದ್ಭವಿಸಿರುವ ಕರ್ಪೂರಖಂಡಗಳ ರಾಶಿಯೋ ಎಂಬಂತೆಯೂ ಈಶ್ವರನ ಅಟ್ಟಹಾಸವೋ ಎಂಬಂತೆಯೂ, ಶುಕ್ಲಪಕ್ಷದ ಪೂರ್ಣಚಂದ್ರನ ಬೆಳದಿಂಗಳೋ ಎಂಬಂತೆಯೂ ಕಂಗೊಳಿಸುವ ಹಿಮಾಲಯ ಪರ್ವತದ ಒಂದಾನೊಂದು ಉನ್ನತ ಶಿಖರವು ಇರುವದು. ಅಲ್ಲಿ ಕೈಲಾಸವೆಂದು ಪ್ರಸಿದ್ಧವಾದ ಒಂದು ಪರ್ವತವುಂಟು. ಅದು ಪರ್ವತಶ್ರೇಷ್ಠನಾದ ಹಿಮವಂತನು ಧರಿಸಿರುವ ಶಿಖರಗಳ ಪರಂಪರೆ (ಶಿಖರಮಾಲೆ) ಯೆಂಬ ಮುತ್ತಿನ ಸರದ ನಾಯಕಮಣಿಯಂತೆ ಶೋಭಿಸುತ್ತಿರುವದು.

ವಿಷ್ಣೋಃ ಕ್ಷೀರೋದಕ ಇವ ಸ್ವರ್ಗಃ ಸುರಪತೇರಿವ |
ಅಬ್ಜಜಸ್ಯೇವ ನಾಭ್ಯಬ್ಜಂ ಗೃಹಂ ಯಃ ಶಶಿಮೌಲಿನಃ ॥ ೪ ॥

ರುದ್ರಾಕ್ಷವೃಕ್ಷದೋಲಾಭಿಃ ಸಾಪ್ಸರೋಭಿರ್ವಿಭಾತಿ ಯಃ |
ಲೋಲರತ್ನಶಲಾಕಾಭಿರ್ಲಹರೀಭಿರಿವಾರ್ಣವಃ ॥ ೫ ॥

ಗಣಾಂಗನಾನಾಮನಿಶಂ ಮತ್ತಾನಾಂ ಚರಣೈರ್ಹತಾಃ |
ಅಶೋಕಾ ಇವ ರಾಜಂತೇ ಯತ್ರಾಶೋಕಾ ವಿಲಾಸಿನಃ ॥ ೬ ॥

---

೪. ಅದು ವಿಷ್ಣುವಿಗೆ ಕ್ಷೀರಸಮುದ್ರದಂತೆಯೂ, ದೇವರಾಜನಿಗೆ ಸ್ವರ್ಗದಂತೆಯೂ, ಚತುರ್ಮುಖ ಬ್ರಹ್ಮನಿಗೆ ವಿಷ್ಣುವಿನ ನಾಭಿಕಮಲದಂತೆಯೂ, ಚಂದ್ರಶೇಖರನಾದ ಪರಮಶಿವನಿಗೆ ಮಾವನಾದ ಹಿಮವಂತನು ಏರ್ಪಡಿಸಿದ ಸುಖ ವಿಶ್ರಾಂತಿದಾಯಕವಾದ ಬಿಡಾರದಂತೆ ವಿರಾಜಿಸುತ್ತಿರುವದು.

೫. (ತೂಗಾಡುತ್ತಿರುವ ಉಯ್ಯಾಲೆಯ ಕಂಬಿಗಳಂತೆ ಅತಿ ಚಂಚಲವಾದ ತರಂಗಮಾಲೆಗಳಿಂದ ಒಪ್ಪುವ ಸಮುದ್ರದಂತೆ) ಆ ಕೈಲಾಸ ಪರ್ವತವು ಅದರಲ್ಲಿ ಬೆಳೆದಿರುವ ರುದ್ರಾಕ್ಷ ವೃಕ್ಷಗಳ ಶಾಖೆಗಳಲ್ಲಿ ರತ್ನಮಯಗಳಾದ ಸಲಾಕೆಗಳಿಂದ ಬಿಗಿದು ಕಟ್ಟಿರುವ ತೂಗಾಡುವ ಉಯ್ಯಾಲೆಗಳಲ್ಲಿ ವಿನೋದದಿಂದ ವಿಲಾಸಪಡುತ್ತಿರುವ ಅಪ್ಸರಸ್ ಸ್ತ್ರೀಯರಿಂದ ಕಂಗೊಳಿಸುತ್ತಿರುವದು.

೬. ಆ ಪರ್ವತದಲ್ಲಿ ವಿಲಾಸಪುರುಷರಾದ ಪ್ರಮಥ ಗಣಗಳು ಅತ್ಯಧಿಕವಾದ ಮಧುಪಾನಾದಿಗಳಿಂದ ಉನ್ಮತ್ತರಾದ ತಮ್ಮ ತಮ್ಮ ಕಾಂತೆಯರ ಪಾದಗಳಿಂದ ಒದೆಸಿಕೊಂಡರೂ ಅದನ್ನು ಗಮನಿಸದೆ ವಿನೋದದಿಂದ ಸಂತತವೂ ಅಶೋಕವೃಕ್ಷಗಳಂತೆ ಶೋಕ ಲೇಶವೂ ಇಲ್ಲದವರಾಗಿ ವಿಹರಿಸುತ್ತಾ ಇರುವರು.

[ಅಶೋಕ ವೃಕ್ಷಗಳಿಗೆ ಮುಗ್ಧಾಂಗನೆಯರ ಪಾದ ಪ್ರಹಾರವು ಅತ್ಯುತ್ತಮವಾದ ದೋಹದವು (ಕೆಸಿಮಾಡುವಿಕೆ) ಎಂದು ತಿಳಿದವರು ಹೇಳುವರು. ಅದನ್ನನುಸರಿಸಿಯೇ ಇಲ್ಲಿ ಪ್ರಮಥ ಗಣಗಳ ಪುರುಷರು ತಮ್ಮ ತಮ್ಮ ಪತ್ನಿಯರ ಪಾದಾಹತರಾದರೂ ಅಶೋಕ ವೃಕ್ಷಗಳು ವಿಕಸಿಸುವಂತೆಯೇ ಉಲ್ಲಾಸಗೊಂಡಿದ್ದರು ಎಂದು ಹೇಳಿದೆ.]

ಸಂಚರನ್ಯಂಕರೋ ದಿಕ್ಷು ಭೃಗುಷ್ವಿಂದುಮಣಿದ್ರವೈಃ. |
ನಿವರ್ತಂತೇ ಪ್ರವರ್ತಂತೇ ಯತ್ರಾಜಸ್ರಂ ಚ ನಿರ್ಝರಾಃ ॥ ೭ ॥

ಯೋ ಲತಾವೃಕ್ಷಗುಲ್ಮೌಘವಾಪೀಹ್ರದನದೀನದೈಃ |
ಮೃಗೈರ್ಮೃಗಗಣೈರ್ಭೂತೈರ್ಬ್ರಹ್ಮಾಂಡವದಿವಾವೃತಃ ॥ ೮ ॥

ತಸ್ಯ ಹೇಮಜಟಾ ನಾಮ ಕಿರಾತಾಃ ಸಂಸ್ಥಿತಾಃ ಸ್ಥಲೇ |
ಪಿಪೀಲಿಕಾವಟತರೋರ್ಮೂಲಕೋಶಗತಾ ಇವ ॥ ೯ ॥

ಕೈಲಾಸಪಾದಾರಣ್ಯಾನಾಂ ರುದ್ರಾಕ್ಷೈಸ್ತರುಗುಲ್ಮಕೈಃ |
ವಸಂತಿ ಘೂಕವತ್ ಕ್ಷುದ್ರಾಸ್ತೇ ವೈ ನಿಕಟಜೀವಿನಃ ॥ ೧೦ ॥

---

೭. ಆ ಪರ್ವತದ ಯಾವ ಯಾವ ದಿಕ್ಕುಗಳ ಪ್ರದೇಶಗಳಲ್ಲಿ ಯಾವಾಗ ಯಾವಾಗ ಸಾಕ್ಷಾಚ್ಚಂದ್ರಶೇಖರನಾದ ಪರಮೇಶ್ವರನು ಸಂಚರಿಸುವನೋ ಆಗಾಗ ಲೆಲ್ಲ ಆಯಾ ದಿಗ್ಭಾಗದಲ್ಲಿರುವ ಜಲಪ್ರಪಾತಗಳಲ್ಲಿ (ಈಶ್ವರನ ತಲೆಯಲ್ಲಿರುವ ಚಂದ್ರನ ಕಿರಣ ಸಂಪರ್ಕದಿಂದ) ಚಂದ್ರಕಾಂತ ಶಿಲೆಗಳ ದೆಸೆಯಿಂದ ದ್ರವವು ಉಕ್ಕುವದು. ಅದು ಅವಿಚ್ಛಿನ್ನವಾಗಿ ಪ್ರವಾಹರೂಪವಾಗಿ ಹರಿಯುವದು. ಮಿಕ್ಕ ಕಡೆಗಳಲ್ಲಿ ಅಂದರೆ ಪರಮಶಿವನು ಸಂಚರಿಸದೆ ಇರತಕ್ಕ ದಿಗ್ವಿಭಾಗಗಳಲ್ಲಿ ವಾರಿ ಪ್ರವಾಹಗಳು ನಿಂತು ಹೋಗಿ ಬಿಡುವವು.

೮. ಆ ಪರ್ವತವು ಬ್ರಹ್ಮಾಂಡದಂತೆ ಲತೆಗಳಿಂದಲೂ, ವೃಕ್ಷಗಳಿಂದಲೂ, ಪೊದೆಗಳ ಸಮುದಾಯಗಳಿಂದಲೂ, ಭಾವಿಗಳಿಂದಲೂ, ಅಗಾಧ ಜಲಾಶಯ ಗಳಿಂದಲೂ, ನದೀನದಗಳಿಂದಲೂ, ಜಿಂಕೆಗಳಿಂದಲೂ, ವ್ಯಾಘ್ರಾದಿ ಹಿಂಸ್ರ ಜಂತು ಗಳ ಗುಂಪುಗಳಿಂದಲೂ ಇತರ ವಿಧ ನಾನಾ ಭೂತಗಳಿಂದಲೂಆವರಿಸಲ್ಪಟ್ಟಿದ್ದಿತು.

೯. ಒಂದು ವಟವೃಕ್ಷದ ಬುಡದಲ್ಲಿರುವ ಕೋಟರದೊಳಗೆ ಇರುವೆಗಳು ಗುಂಪುಗುಂಪಾಗಿ ಮುತ್ತಿಕೊಂಡಿರುವಂತೆ ಆ ಹಿಮವಂತನ ಶಿಖರದ ಬುಡದಲ್ಲಿ ಹೇಮಜಟರೆಂಬ ಕಿರಾತರು ಗುಂಪುಗುಂಪಾಗಿ ಸುಖದಿಂದ ವಾಸವಾಗಿರುವರು.

೧೦. ಆ ನೀಚರಾದ ಕಿರಾತರು ಗೂಬೆಗಳಂತೆಯೇ ಆ ಕೈಲಾಸ ಪರ್ವತದ ಸಮೀಪದಲ್ಲಿರುವ ಅನೇಕ ಗುಡ್ಡಗಳಿಗೆ ಸಂಬಂಧಪಟ್ಟ ಅರಣ್ಯಗಳಲ್ಲಿ ಬೆಳೆದಿರುವ

ಆಸೀತ್ತೇಷಾಮುದಾರಾತ್ಮಾ ರಾಜಾ ಪುರಪುರಂಜಯಃ |
ಜಯಲಕ್ಷ್ಮ್ಯಾ ಭುಜ ಇವ ಯಃ ಪ್ರಜಾಯಾಶ್ಚ ಪಕ್ಷಿಣಃ ॥ ೧೧ ॥

ಸುರಘುರ್ನಾಮ ಬಲವಾನ್ಸುರಘೋರಾರಿದರ್ಪಹಾ |
ಅರ್ಕಃ ಪ್ರರಾಕ್ರಮ ಇವ ಮೂರ್ತಿಮಾನಿವ ಮಾರುತಃ ॥ ೧೨ ॥

ಜಿತೋ ಯೈ ರಾಜ್ಯವಿಭವೈರ್ಧನೈರ್ಗುಹ್ಯಕನಾಯಕಃ |
ಶತಕ್ರತುಗುರುರ್ಬೋಧೈಃ ಕಾವ್ಯೈರಸುರದೇಶಿಕಃ ॥ ೧೩ ॥

ಸ ಚಕ್ರೇ ರಾಜಕಾರ್ಯಾಣಿ ನಿಗ್ರಹಾನುಗ್ರಹಕ್ರಮೈಃ |
ಯಥಾ ಪ್ರಾಪ್ತಾನ್ಯಖಿನ್ನಾಂಗೋ ದಿನಾನೀವ ದಿವಾಕರಃ ॥ ೧೪ ॥

ರುದ್ರಾಕ್ಷ ವೃಕ್ಷಗಳ, ಇತರ ವಿಧ ಮರಗಳ ಮತ್ತು ಪೊದೆಗಳ ಫಲ ಪುಷ್ಪ ಕಾಷ್ಠ ಮುಂತಾದವುಗಳನ್ನು ಮಾರಿ ಜೀವನ ಮಾಡಿಕೊಂಡು ಹತ್ತಿರ ಹತ್ತಿರ ಒಟ್ಟಿಗೆ ವಾಸ ಮಾಡಿಕೊಂಡಿರುವರು.

೧೧-೧೨. ಅಂತಹ ಹೇಮಜಟರೆಂಬ ಕಿರಾತರಿಗೆ ಮಹಾತ್ಮನೂ ಉದಾರಿಯೂ ಆದ ಸುರಘುವೆಂಬ ಒಬ್ಬ ರಾಜನಿದ್ದನು. ಅವನು ಶತ್ರುಗಳ ರಾಜಧಾನಿಗಳನ್ನು ಗೆದ್ದವನಾಗಿಯೂ ತನ್ನ ಪ್ರಜೆಗಳನ್ನು ರಕ್ಷಿಸುವದರಲ್ಲಿ ಬಹು ಸಮರ್ಥನಾಗಿಯೂ ಬಲಿಷ್ಠನಾಗಿಯೂ ಅತಿ ಭಯಂಕರರಾದ ರಾಕ್ಷಸರ ದರ್ಪವನ್ನು ಮುರಿದವನಾಗಿಯೂ, ಪರಾಕ್ರಮದಲ್ಲಿ ಸೂರ್ಯನಂತೆಯೂ, ಬಲದಲ್ಲಿ ದೇಹವನ್ನು ಧರಿಸಿದ ವಾಯುವಿನಂತೆಯೂ, ಜಯಲಕ್ಷ್ಮಿಯ ಭುಜವೋ ಎಂಬಂತೆಯೂ ಇದ್ದನು.

೧೩. ಅವನು ತನ್ನ ರಾಜವೈಭವಗಳಿಂದಲೂ, ಧನ ಸಂಪತ್ತಿಯಿಂದಲೂ ರಾಜರಾಜನಾದ ಕುಬೇರನನ್ನೂ ಹಿಂದೆ ಹಾಕಿದ್ದನು. ಮತ್ತು ತನ್ನ ವಿಜ್ಞಾನಾತಿಶಯದಿಂದ ಬೃಹಸ್ಪತಿಯನ್ನೂ, ಕಾರ್ಯರಚನಾ ಕೌಶಲದಿಂದ ಶುಕ್ರಾಚಾರ್ಯರನ್ನೂ ಮೀರಿಸಿದ್ದನು.

೧೪. ಅಂತಹ ಸುರಘುರಾಜನು ಆಯಾ ಕಾಲಗಳಲ್ಲಿ ಸಂಪ್ರಾಪ್ತವಾದ ರಾಜಕಾರ್ಯಗಳನ್ನು ಸೂರ್ಯನು ದಿವಸಗಳನ್ನು ನಡೆಯಿಸುವಂತೆಯೇ ಸ್ವಲ್ಪವೂ

ತಜ್ಞಾಯಾಂ ಸುಖದುಃಖಾಭ್ಯಾಮಥ ತಸ್ಯಾಭ್ಯಭೂಯತ |
ಸ್ವಗತಿರ್ವಾಗುರಾಬಂಧೈಃ ಶ್ಲಿಷ್ಟಾಂಗಸ್ಯೇವ ಪಕ್ಷಿಣಃ || ೧೫ ||

ಕಿಮರ್ಥಂ ಪೀಡಯಾಮ್ಯೇನಂ ತಿಲಾನ್ಯತ್ರಮಿವೌಜಸಾ |
ಸರ್ವೇಷಾಮೇವ ಭೂತಾನಾಂ ಮಮೇವಾರ್ತಿಃ ಪ್ರಜಾಯತೇ || ೧೬ ||

ಧನಮಸ್ಮೈ ಪ್ರಯಚ್ಛಾಮಿ ಧನೇನಾನಂದ ವಾನ್ಜನಃ |
ಭವತ್ಯಹಮಿವಾಶೇಷಸ್ತದಲಂ ಮೇಽತಿನಿಗ್ರಹೈಃ || ೧೭ ||

ದೇಹಕ್ಕೆ ಆಯಾಸವಿಲ್ಲದಂತೆ ದುಷ್ಟರನ್ನು ನಿಗ್ರಹಿಸಿ ಸನ್ಮಾರ್ಗಕ್ಕೆ ತರುತ್ತಲೂ ಶಿಷ್ಟರನ್ನು ಅನುಗ್ರಹಿಸಿ ಪ್ರೋತ್ಸಾಹಿಸುತ್ತಲೂ ನಡೆಯಿಸಿಕೊಂಡು ಬರುತ್ತಿದ್ದನು.

೧೫ ಹೀಗಿರುತ್ತಿರಲು ಸ್ವಲ್ಪ ಕಾಲಾನಂತರ ಬಲೆಯಲ್ಲಿ ಸಿಕ್ಕಿಸಿಕೊಂಡು ಬಂಧಿಸುವದರಿಂದ ಮುದುರಿಕೊಂಡ ಅಂಗೋಪಾಂಗಗಳುಳ್ಳ ಹಕ್ಕಿಯ ಸಂಚಾರವು ಹೇಗೆ ಅಡ್ಡಿಯಾಗಿ ನಿಂತು ಹೋಗುವದೋ ಹಾಗೆಯೇ ದುಷ್ಟರನ್ನು ನಿಗ್ರಹಿಸುವಾಗಲೂ ಶಿಷ್ಟರನ್ನು ಅನುಗ್ರಹಿಸುವಾಗಲೂ ಉಂಟಾದ ದುಃಖಸುಖಗಳಿಂದ ಅವನ ರಾಜನೀತಿಯ ವ್ಯವಹಾರವು ಬಹುಮಟ್ಟಿಗೆ ಕುಂಠಿತವಾಯಿತು.

೧೬. (ಆಗ ಅವನು ಈ ರೀತಿಯಾಗಿ ಯೋಚಿಸತೊಡಗಿದನು.—) ಗಾಣವು ಎಳ್ಳನ್ನು ಚೆನ್ನಾಗಿ ಅರೆದು ಹಿಂಡಿಬಿಡುವಂತೆ ಮೊದಲೇ ನಾನಾ ದುಃಖಗಳಿಂದ ಖಿನ್ನರಾಗಿರುವ ಈ ನನ್ನ ಪ್ರಜೆಗಳನ್ನು ನನ್ನ ಪ್ರಭಾವದಿಂದ ಇನ್ನೂ ಹೆಚ್ಚಾಗಿ ಏತಕ್ಕೋಸ್ಕರ ಪೀಡಿಸಲಿ ? ಇತರರು ನನ್ನನ್ನು ಹಿಂಸಿಸಿದರೆ ನನಗೆ ದುಃಖವುಂಟಾಗುವಂತೆಯೇ ಅಲ್ಲವೆ ಸಕಲ ಪ್ರಾಣಿಗಳಿಗೂ ಕೂಡ ಒಂದೇ ಸಮನಾಗಿ ವ್ಯಸನವುಂಟಾಗುವದು ?

೧೭. ಆದಕಾರಣ ದುಃಖಿತರಾಗಿರುವ ನನ್ನ ಪ್ರಜೆಗಳಿಗೆ ಬೇಕಾದಷ್ಟು ಹಣವನ್ನು ಕೊಡುವೆನು. ನನ್ನಂತೆಯೇ ಸಮಸ್ತ ಜನಗಳೂ, ಧನಲಾಭದಿಂದ ನಿಜವಾಗಿ ಆನಂದಪಡುವರು ಇನ್ನುಮೇಲೆ ನನ್ನ ಪ್ರಜೆಗಳನ್ನು ಅತಿಯಾಗಿ ನಿಗ್ರಹಮಾಡದೆ ಅವರನ್ನು ಆದರಿಸುವೆನು.

ಅಥವಾ ನಿಗ್ರಹಂ ಪ್ರಾಪ್ತಂ ಕರೋಮ್ಯೇತೇನ ವೈ ವಿನಾ ।
ವರ್ತತೇ ನ ಪ್ರಜೈವೇಯಂ ವಿನಾ ವಾರಿಸರಿದ್ಯಥಾ ॥ ೧೮ ॥

ಹಾ ಕಷ್ಟಮೇಷ ನಿಗ್ರಾಹ್ಯೋ ನಿತ್ಯಾನುಗ್ರಾಹ್ಯ ಏಷ ಮೇ ।
ದಿಷ್ಟ್ಯಾದ್ಯ ಸುಖವಾನಸ್ಮಿ ಕಷ್ಟಮದ್ಯಾಸ್ಮಿ ದುಃಖವಾನ್ ॥ ೧೯ ॥

ಇತಿ ಲೋಲಾಯಿತಂ ಚೇತೋ ನ ವಿಶಶ್ರಾಮ ಭೂಪತೇಃ ।
ಏಕತ್ರಾಂಬುಮಹಾವರ್ತೇ ಚಿರತ್ತೃಷ್ಣಮಿವ ಭ್ರಮತ್ ॥ ೨೦ ॥

ಅಥೈಕದಾ ಗೃಹಂ ತಸ್ಯ ಮಾಂಡವ್ಯೋ ಮುನಿರಾಯಯೌ ।
ಭ್ರಾಂತಾಶೇಷಕಕುಪ್ಕುಂಜೋ ವಾಸವಸ್ಯೇವ ನಾರದಃ ॥ ೨೧ ॥

---

೧೮. ಅಥವಾ, ಅಪರಾಧಿಗಳ ದೋಷಾನುಸಾರವಾಗಿ ಆಯಾ ಕಾಲದಲ್ಲಿ ನಿಗ್ರಹ ಮಾಡಲೇಬೇಕಾದ ಸಂದರ್ಭದಲ್ಲಿ ನಿಗ್ರಹವನ್ನು ಮಾಡಿಯೇ ಮಾಡುವೆನು. ನಿಗ್ರಾಹ್ಯರನ್ನು ನಿಗ್ರಹಮಾಡದೆ ಬಿಟ್ಟುಬಿಟ್ಟರೆ, ನೀರಿಲ್ಲದಿದ್ದರೆ ನದಿಯೇ ಇಲ್ಲವಾಗುವಂತೆ ಈ ನನ್ನ ಪ್ರಜೆಗಳೆಲ್ಲರೂ ತಮ್ಮ ತಮ್ಮ ಮರ್ಯಾದೆಯಲ್ಲಿ (ಇರಬೇಕಾದ ಸನ್ಮಾರ್ಗಸ್ಥಿತಿ) ಇರುವದೇ ಇಲ್ಲ.

೧೯. ಹಾ! ಅಯ್ಯೋ, ಕಷ್ಟ! ನಾನು ಈಗ ಇವನನ್ನು ದಂಡಿಸಬೇಕಾಗಿ ಬಂದಿತು. ಇಗೋ ಇಲ್ಲಿ ಇನ್ನೊಬ್ಬನು ನನ್ನ ಸಾರ್ವಕಾಲಿಕವಾದ ಅನುಗ್ರಹಕ್ಕೆ ಪಾತ್ರನಾಗಿರುವನು. ಈಗಲೇ ನಾನು ನನ್ನ ಸುಕೃತ ಪರಿಪಾಕದಿಂದ ಸುಖಿಯಾಗಿದ್ದೇನೆ. ಅಯ್ಯೋ ಕಷ್ಟ! ಕಷ್ಟ!! ಈಗ ನನಗೆ ಅಷ್ಟರಲ್ಲಿ ದುಃಖವು ಬಂದೊದಗಿತು.

೨೦. ಇದೇ ಮೊದಲಾದ ನಾನಾ ಚಿಂತಾಕ್ರಾಂತವಾಗಿ ದೋಲಾಯಮಾನವಾದ ಆ ಸುರಘುರಾಜನ ಮನಸ್ಸು ದೊಡ್ಡ ಸುಳಿಯ ಮಧ್ಯದಲ್ಲಿ ನೀರು ಅತಿಯಾಗಿ ಗಿರ್ರನೆ ಸುತ್ತುತ್ತಿರುವಂತೆ ದೀರ್ಘ ತೃಷ್ಣೆಯಿಂದ ಪೀಡಿತವಾಗಿ ಸ್ವಲ್ಪವೂ ವಿಶ್ರಾಂತಿಯಿಲ್ಲದೆ ಒಂದೆಡೆಯಲ್ಲಿಯೂ ಸ್ವಲ್ಪ ಹೊತ್ತೂ ನಿಲ್ಲದೆ ವಿಶೇಷವಾಗಿ ಭ್ರಮಿಸುತ್ತಲಿದ್ದಿತು.

೨೧. ಬಳಿಕ, ಒಂದಾನೊಂದು ಸಮಯದಲ್ಲಿ ನಾರದಮುನಿಯು ದೇವೇಂದ್ರನ ಅರಮನೆಗೆ ಬರುವಂತೆ ಮಾಂಡವ್ಯನೆಂಬ ಋಷಿಯು ಸಮಸ್ತ ದಿಗ್ಮಂಡಲಗಳಲ್ಲಿಯೂ ಕ್ರಮವಾಗಿ ಸಂಚಾರಮಾಡಿಕೊಂಡು ಬರುತ್ತಾ ಹಾಗೆಯೇ ಆ ಸುರಘುರಾಜನ ಅರಮನೆಗೂ ಬಂದನು.

ತಮಸೌ ಪೂಜಯಾಮಾಸ ಪಪ್ರಚ್ಛ ಚ ಮುನೀಮುನಿಂ |
ಸಂದೇಹದುದ್ರುಮಸ್ತಂಭಪರಶುಂ ಸರ್ವಕೋವಿದಂ || ೨೨ ||

ಸುರಘುರುವಾಚ —

ಭವದಾಗಮನೇನಾಸ್ಮಿ ಮುನೇ ನಿರ್ವೃತಿಮಾಗತಃ |
ಪರಮಾಂ ವಸುಧಾಪೀಠಂ ಸಂಪ್ರಾಪ್ತ ಇವ ಮಾಧವೇ || ೨೩ ||

ಅದ್ಯ ತಿಷ್ಠಾಮ್ಯಹಂ ನಾಥ ಧನ್ಯಾನಾಂ ಧುರಿ ಧರ್ಮತಃ |
ವಿಕಾಸಿರವಿಣೇವಾಬ್ಜಂ ಯತ್ತ್ವಯಾಸ್ಮ್ಯವಲೋಕಿತಃ || ೨೪ ||

ಭಗವನ್ಸರ್ವಧರ್ಮಜ್ಞ ಚಿರಂ ವಿಶ್ರಾಂತವಾನಸಿ |
ತದಮುಂ ಸಂಶಯಂ ಛಿಂದಿ ಮಮಾರ್ಕಸ್ತಿಮಿರಂ ಯಥಾ || ೨೫ ||

---

೨೨. ತನ್ನ ಮನೆಗೆ ಬಂದಂಥ ಆ ಮಾಂಡವ್ಯ ಮಹಾಮುನಿಯನ್ನು ಆ ಸುರಘುರಾಜನು ಯಥಾವಿಧಿಯಾಗಿ ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಉಚಿತಾಸನದ ಮೇಲೆ ಕುಳ್ಳಿರಿಸಿದನು. ಅನಂತರ ಸಂದೇಹಗಳೆಂಬ ದುಷ್ಟ ವೃಕ್ಷಸ್ತಂಭಕ್ಕೆ ಪರಶುಪ್ರಾಯನಾಗಿ ಸಕಲ ಶಾಸ್ತ್ರ ವಿಶಾರದನಾಗಿ ಸರ್ವಜ್ಞನಾಗಿರುವ ಆ ಮುನಿಯನ್ನು ತನ್ನ ಸಂದೇಹ ಪರಿಹಾರಾರ್ಥವಾಗಿ ಮುಂದೆ ವಿವರಿಸುವ ರೀತಿಯಲ್ಲಿ ಪ್ರಶ್ನೆ ಮಾಡಿದನು.

೨೩. ಸುರಘುವು ಹೇಳಿದನು :— ಸ್ವಾಮಿ ಪೂಜ್ಯರಾದ ಮುನೀಂದ್ರರೇ, ವಸಂತಋತುವು ಸಂಪ್ರಾಪ್ತವಾದ ಕೂಡಲೇ ಭೂಮಂಡವೆಲ್ಲವೂ ಅತ್ಯಂತ ವಿಕಾಸವನ್ನು ಪಡೆದು ನಲಿಯುವ ರೀತಿಯಲ್ಲಿ ಈಗ ನಾನು ತಮ್ಮ ಆಗಮನದಿಂದ ಪರಮಾನಂದಭರಿತನಾದೆನು.

೨೪. ಸ್ವಾಮಿ, ನನ್ನೊಡೆಯ (ನಾಥ), ಈಗ ತಾವು ನನ್ನನ್ನು ಕೃಪಾಕಟಾಕ್ಷದಿಂದ ನೋಡಿದ ಮಾತ್ರದಿಂದಲೇ ನಾನು ಸೂರ್ಯನಿಂದ ವಿಕಾಸಹೊಂದಿದ ಕಮಲ ಪುಷ್ಪವು ನಲಿಯುವಂತೆ ಪರಮಾನಂದಭರಿತನಾದುದೂ ಅಲ್ಲದೆ ಪ್ರಪಂಚದಲ್ಲಿ ಧರ್ಮಾಚರಣೆಯಿಂದ ಧನ್ಯರಾದ ಮಹಾತ್ಮರಿಗೆಲ್ಲ ಮಿಗಿಲಾಗಿ ಅಗ್ರಭಾಗದಲ್ಲಿ ನಿಂತಿರುವೆನು.

೨೫. ಸಕಲ ಧರ್ಮ ಸೂಕ್ಷ್ಮಗಳನ್ನು ಚೆನ್ನಾಗಿ ತಿಳಿದಿರತಕ್ಕ ಭಗವಂತರಾದ ಪೂಜ್ಯರೇ, ಇದುವರೆವಿಗೆ ತಾವು ಬಹಳ ಹೊತ್ತು ಚೆನ್ನಾಗಿ ಮಾರ್ಗಾಯಾಸವನ್ನು

ಮಹತಾಂ ಸಂಗಮೇನಾರ್ತಿಃ ಕಸ್ಯ ನಾಮ ನ ನಶ್ಯತಿ |
ಸಂದೇಹಂ ತು ಪರಾಮಾರ್ತಿರಾಹುರಾರ್ತಿವಿದೋ ಜನಾಃ || ೨೬ ||

ಮನ್ನಿಗ್ರಹಾನುಗ್ರಹಜಾ ಮದ್ಭೃತ್ಯವಪುಷಿ ಸ್ಥಿತಾಃ |
ಕಷಂತಿ ಮಾಮಲಂ ಚಿಂತಾ ಗಜಂ ಹರಿನಖಾ ಇವ || ೨೭ ||

ತದ್ಯಥಾ ಸಮತೋದೇತಿ ಸೂರ್ಯಾಂಶುರಿವ ಸರ್ವದಾ |
ಮತೌ ಮಮ ಮುನೇ ನಾಸ್ಯಾ ತಥಾ ಕರುಣಯಾ ಕುರು || ೨೮ ||

ಪರಿಹರಿಸಿಕೊಂಡು ವಿಶ್ರಮಿಸಿಕೊಂಡಿರಲ್ಲವೆ? ಸೂರ್ಯನು ಕತ್ತಲೆಯನ್ನು ಓಡಿಸಿ ಬಿಡುವಂತೆ ಈಗ ತಾವು ನನ್ನ ಮನಸ್ಸಿನೊಳಗೆ ಉದಯಿಸಿರುವ ಈ ಸಂಶಯವನ್ನು (ಮತ್ತೆ ಮೇಲಕ್ಕೆ ಏಳದ ಹಾಗೆ ಬೇರು ಸಹಿತ) ಕತ್ತರಿಸಿ ಬಿಡಬೇಕೆಂದು ಪ್ರಾರ್ಥಿಸುವೆನು.

೨೬. ಮಹಾತ್ಮರ ಸಹವಾಸದಿಂದ ಯಾರಿಗೆ ತಾನೇ ಪೀಡೆಯು ನಾಶ ಹೊಂದುವದಿಲ್ಲ? ಲೋಕದಲ್ಲಿ ಪೀಡೆಯ ಸ್ವರೂಪವನ್ನು ಬಲ್ಲಂಥ ಜನರೆಲ್ಲರೂ ಸಂದೇಹವೆಂಬುದೇ ಮಹಾ ಆರ್ತಿ (ಪೀಡೆ) ಯೆಂದು ಹೇಳುವರು.

[ಅಂತಹ ಮಹಾ ಪೀಡಾಕರವಾದ ದೊಡ್ಡ ಸಂದೇಹವು ನನ್ನ ಮನಸ್ಸಿನಲ್ಲಿ ಬೇರೂರಿಕೊಂಡಿರುವದು. ಅದನ್ನು ದಯಿಮಾಡಿ ನಿರ್ಮೂಲವಾಗಿ ಕತ್ತರಿಸಿಬಿಡಿ ಎಂದರ್ಥ.]

೨೭. ನನ್ನ ಶತ್ರು, ಮಿತ್ರ, ಭೃತ್ಯವರ್ಗ ಮುಂತಾದವರ ವಿಷಯದಲ್ಲಿ ನಾನು ತೋರಿದ ನಿಗ್ರಹಾನುಗ್ರಹಗಳಿಂದ ಕಷ್ಟಸುಖಗಳು ನಿರೂಢವಾಗಿರುವವು. ಈ ಕಾರಣದಿಂದ ನನ್ನ ಮನಸ್ಸಿನಲ್ಲಿ ಅತ್ಯಧಿಕವಾದ ನಾನಾ ಚಿಂತೆಗಳು ತಲೆದೋರಿ ಸಿಂಹದ ಉಗುರುಗಳು ಆನೆಯನ್ನು ಭೇದಿಸಿ ಪೀಡಿಸುವಂತೆ ನನ್ನನ್ನು ಬಹಳ ಹೆಚ್ಚಾಗಿ ಪೀಡಿಸುತ್ತಲಿರುವವು.

೨೮. ಸ್ವಾಮಿ, ಮಹರ್ಷಿಗಳೇ, ಉಚ್ಚ ನೀಚಗಳೆಂಬ ಭೇದವಿಲ್ಲದೆ ಎಲ್ಲ ಸ್ಥಳಗಳಲ್ಲಿಯೂ ಒಂದೇ ಸಮನಾಗಿ ಹೇಗೆ ಸರ್ವದಾ ಸೂರ್ಯನ ತೇಜಸ್ಸು ಪ್ರಸರಿಸುವದೋ ಹಾಗೆಯೇ ನನ್ನ ಮನಸ್ಸಿನೊಳಗೂ ದುಷ್ಟಶಿಷ್ಟರೆಂಬ ಭೇದ

ಮಾಂಡವ್ಯ ಉವಾಚ—

ಸ್ವಯತ್ನೇನ ಸ್ವಸಂಸ್ಥೇನ ಸ್ವೇನೋಪಾಯೇನ ಭೂಪತೇ |
ಏಷಾ ಮನಃಪೇಲವತಾ ಹಿಮವತ್ಪ್ರವಿಲೀಯತೇ ‖ ೨೯ ‖

ಸ್ವವಿಚಾರಣಯೈವಾಶು ಶಾಮ್ಯತ್ಯಂತರ್ಮನೋಜ್ವರಃ |
ಶರದಾಗಮಮಾತ್ರೇಣ ಮಿಹಿಕಾ ಮಹತೀ ಯಥಾ ‖ ೩೦ ‖

ಸ್ವೇನೈವ ಮನಸಾ ಸ್ವಾನಿ ಸ್ವಶರೀರಗತಾನಿ ಚ |
ವಿಚಾರಯೇಂದ್ರಿಯಾಣ್ಯಂತಃ ಕೀದೃಶಾನ್ಯಥ ಕಾನಿ ಚ ‖ ೩೧ ‖

ಭಾವವೇ ತಲೆದೋರದೆ ಇರುವಂತೆಯೂ ಸರ್ವದಾ ಸರ್ವತ್ರ ಸಮದೃಷ್ಟಿಯೇ ಮೂಡುವಂತೆಯೂ ತಾವು ದಯೆಮಾಡಿ ಅನುಗ್ರಹಿಸಬೇಕು.

೨೯. ಮಾಂಡವ್ಯನು ಹೇಳಿದನು :—ಎಲೈ ರಾಜನೇ, ಹರ್ಷ ಶೋಕಗಳೆಂಬ ಕಂಟಕಗಳ ನಾನಾ ಬಗೆಯ ಹಿಂಸೆಗಳನ್ನು ಸಹಿಸುವಷ್ಟು ಅರ್ಹತೆಯುಳ್ಳ ನಿನ್ನ ಮನಸ್ಸಿನ ಈ ಮೃದುತ್ವವು ಸೂರ್ಯನ ತಾಪದಿಂದ ಹಿಮವು ಅಡಗುವಂತೆ)ಸ್ವಾತ್ಮ ತತ್ತ್ವಜ್ಞಾನದಲ್ಲಿ ಪರ್ಯವಸಿತವಾದ ಶ್ರವಣ ಮನನಾದಿ)ಸ್ವಾತ್ಮದರ್ಶನೋಪಾಯ ಗಳಿಂದಲೂ(ವಿವೇಕ ವೈರಾಗ್ಯಾಭ್ಯಾಸ,ಭೋಗೇಚ್ಛಾತ್ಯಾಗ ಮುಂತಾದ)ಸ್ವಪ್ರಯತ್ನ ದಿಂದಲೂ ತಾನಾಗಿಯೇ ಅದೃಶ್ಯವಾಗಿ ಹೋಗುವದು.

೩೦. ಶರದೃತುವು ಆವಿರ್ಭವಿಸಿದ ಮಾತ್ರದಿಂದಲೇ, (ನಿರ್ಮಲವಾದ ಆಕಾಶ ದಲ್ಲಿ ಸೂರ್ಯನು ಚೆನ್ನಾಗಿ ಬೆಳಗುವನು. ಅವನ ತಾಪದಿಂದ) ದೊಡ್ಡ ದೊಡ್ಡ ಮಂಜಿನಗಡ್ಡೆಗಳೂ ತಾವಾಗಿಯೇ ಕರಗಿ ಕಾಣದೆ ಹೋಗುವವು. ಇದರಂತೆಯೇ ಆತ್ಮತತ್ತ್ವಸ್ವರೂಪದ ವಿಚಾರ ಒಂದರಿಂದಲೇ ನಿನ್ನ ಮನಸ್ಸಿನೊಳಗೆ ಬಹು ಸಂತಾಪಕರವಾಗಿರುವ ಈ ಚಿಂತೆಯೆಂಬ ಜ್ವರವು ಬಲು ಬೇಗನೆ ಶಾಂತವಾಗಿ ಹೋಗುವದು.

೩೧. ಈಗ. ನೀನು, ಪ್ರಥಮತಃ ನಿನ್ನ ಮನಸ್ಸಿನಿಂದಲೇ ನಿನ್ನೊಳಗೆಯೇ ಈ ನಿನ್ನ ಆತ್ಮೀಯರಾದ ಪುತ್ರಮಿತ್ರಾದಿಗಳೂ, ನಿನ್ನ ದೇಹವೂ, ಇಂದ್ರಿಯಗಳೂ ಮತ್ತು ಇತರ ಇಷ್ಟಾನಿಷ್ಟರೂಪ ವಿಷಯ ಮುಂತಾದವುಗಳೂ ತತ್ತ್ವತಃ ಇವು ಯಾವವು? ಮತ್ತು ಎಂತಹವು? ಇವುಗಳಿಗೂ ನನಗೂ ಇರುವ ಸಂಬಂಧವು

ಕೋಽಹಂ ಕಥಮಿದಂ ಕಿಂ ವಾ ಕಥಂ ಮರಣಜನ್ಮನೀ ।
ವಿಚಾರಯಾಂತರೇವಂ ತ್ವಂ ಮಹತ್ತ್ವಾಮಲಮೇಷ್ಯಸಿ ॥ ೩೭ ॥

ವಿಚಾರಣಾ ಪರಿಜ್ಞಾತಸ್ವಭಾವಸ್ಯ ಸತಸ್ತವ ।
ಹರ್ಷಾಮರ್ಷದಶಾಶ್ಚೇತಸ್ತೋಽಲಯಿಷ್ಯಂತಿ ನಾಚಲಂ ॥ ೩೩ ॥

ಮನಃಸ್ವರೂಪಮುತ್ಸೃಜ್ಯ ಶಮಮೇಷ್ಯತಿ ವಿಜ್ವರಂ ।
ಭೂತಪೂರ್ವವಪುರ್ಭೂತ್ವಾ ತರಂಗಃ ಪಯಸೀವ ತೇ ॥ ೩೪ ॥

ಯಾವದು ? ಅದು ವಾಸ್ತವವೇ ? ಎಂಬೀ ಮೊದಲಾಗಿ ಯುಕ್ತಿಯಿಂದಲೂ ಅನುಭವದಿಂದಲೂ ವಿಚಾರಮಾಡುವವನಾಗು.

೩೨. ಅಹಂ ಎಂಬುದು ಯಾರು ? ಈ ದೃಶ್ಯ ದೇಹವು ಹೇಗೆ ಆವಿರ್ಭವಿಸಿತು ? ಅಥವಾ ಇದು ಯಾವದು ? ಮರಣ ಜನ್ಮಗಳೆಂಬುದು ಹೇಗೆ ? ಇದು ಯಾರಿಗೆ ? ಇದೇ ಮೊದಲಾದ ರೀತಿಯಲ್ಲಿ ನಿನ್ನ ಮನಸ್ಸಿನೊಳಗೇ ನೀನು ವಿಚಾರಮಾಡು. ಹೀಗೆ ತತ್ತ್ವ ವಿಚಾರಮಾಡುವದರಿಂದ ನೀನು ಇದುವರೆವಿಗೆ ಅವಿಚಾರಪೂರ್ವಕ ಭ್ರಾಂತಿಯಿಂದ ಅಧ್ಯಾಸ ಮಾಡಿಕೊಂಡಿರುವ ಪರಿಚ್ಛಿನ್ನವಾದ ಆತ್ಮಭಾವವನ್ನು ನೀಗಿಕೊಂಡು ಅಪರಿಚ್ಛಿನ್ನವಾದ ಅಖಂಡಾತ್ಮ ಸ್ವರೂಪವನು ನಿಸ್ಸಂದೇಹವಾಗಿಯೂ ಪಡೆಯುವೆ.

೩೩. ಆತ್ಮತತ್ತ್ವವನ್ನು ಸರಿಯಾಗಿ ವಿಚಾರ ಮಾಡಿದರೆ ಅದರಿಂದ ಅಸಂಗವೂ ಅವಿಕ್ರಿಯವೂ ಅದ್ವಿತೀಯವೂ ಆದ ಸ್ವಸ್ವರೂಪ ಜ್ಞಾನವು ನಿಸ್ಸಂದೇಹವಾಗಿಯೂ ದೃಢವಾಗಿಯೂ ಆವಿರ್ಭವಿಸುವದು. ಹೀಗೆ ಆತ್ಮಜ್ಞಾನಸಂಪನ್ನನಾಗಿ ಪರಮಾರ್ಥ ಸದ್ರೂಪನಾದ ನಿನ್ನ ಜ್ಞಾನನಿಷ್ಠವಾದ ಅಚಲವಾದ ಮನಸ್ಸನ್ನು ಬಳಿಕ, ಪುನಃ ಎಂದಿಗೂ ಹರ್ಷಕ್ರೋಧಾದಿ ವಿಕಾರಾವಸ್ಥೆಗಳು ಕೆಳಕ್ಕೂ ಮೇಲಕ್ಕೂ ತೂಗಾಡಿಸಿ ಚಂಚಲಗೊಳಿಸುವದಿಲ್ಲ.

೩೪. ಆತ್ಮತತ್ತ್ವವಿಚಾರದಿಂದ ಸಂತಾಪರಹಿತವಾದ ಈ ನಿನ್ನ ಮನಸ್ಸು ತನ್ನ ಮನೋರೂಪವನ್ನು ಪರಿತ್ಯಾಗಮಾಡಿ ಬಳಿಕ ಅನಾದಿ ಪೂರ್ವಸಿದ್ಧವಾದ ಬ್ರಹ್ಮ ಸ್ವಭಾವವನ್ನು ಹೊಂದಿ ಅಲೆಗಳು ನೀರಿನಲ್ಲಿ ಶಾಂತವಾಗುವಂತೆ ಶಾಶ್ವತವಾದ ಶಾಂತಿಯನ್ನೈದುವದು.

ಶಿಷ್ಯದೇವ ಮನೋರೂಪಂ ಪರಿತ್ಯಕ್ಷತಿ ಶೇಽನಘ ।
ಕಲಂಕವಿಕಲಂ ಕಾಲಂ ಮನ್ವಂತರಗತಾವಿವ ॥ ೩೫ ॥

ಅನುಕಂಪ್ಯಾ ಭವಿಷ್ಯಂತಿ ಶ್ರೀಮಂತಃ ಸರ್ವ ಏವ ತೇ ।
ದೃಷ್ಟತತ್ವಸ್ಯ ತುಷ್ಟಸ್ಯ ಜನಾಃ ಪಿತುರಿವಾವನೌ ॥ ೩೬ ॥

ವಿವೇಕದೀಪದೃಷ್ಟಾತ್ಮಾ ಮೇರ್ವಬ್ಧಿನಭಸಾಮಪಿ ।
ಅಧೋಕರಿಷ್ಯಸಿ ನೃಪ ಮಹತ್ತಾಮುತ್ತಮಾರ್ಥದಾಮ್ ॥ ೩೭ ॥

---

೩೫. ಹಿಂದಿನ ಮನ್ವಂತರದ ಕೊನೆಯಲ್ಲಿ ಜಗತ್ತು ಕಲಿಕಾಲವನ್ನು ಸೇರಿ ಪಾಪಗಳಿಂದ ಕಲುಷಿತವಾಗಿದ್ದು ಪುನಃ ಮನ್ವಂತರಾರಂಭದಲ್ಲಿ ಸೇರಿದಾಗ, ತಾನು ಇದ್ದುಕೊಂಡೇ ಹೇಗೆ ಕಳಂಕವನ್ನು ಬಿಟ್ಟುಬಿಟ್ಟು ಪುಣ್ಯಭೂಯಿಷ್ಠವಾಗುವದೋ ಹಾಗೆಯೇ, ಅಯ್ಯಾ ದೋಷರಹಿತನಾದ ಸುರಘುರಾಜ, ನಿನ್ನ ಮನಸ್ಸೂ ಕೂಡ ಜೀವನ್ಮುಕ್ತ ಸ್ಥಿತಿಗೆ ಅನುಗುಣವಾದ ವ್ಯವಹಾರಗಳಿಗೆ ಯೋಗ್ಯವಾಗಿ ತಾನು ಇದ್ದುಕೊಂಡೇ ತನ್ನ ಮೊದಲಿನ ಅವಿದ್ಯಕವಾದ ದೋಷದುಷ್ಟ ಮನೋರೂಪವನ್ನು ಬಿಟ್ಟುಬಿಟ್ಟು ಶುದ್ಧವಾಗಿ ಪರಿಣಮಿಸುವದು.

೩೬. ಹಾಗೆಯೇ ಆತ್ಮತತ್ತ್ವಸಾಕ್ಷಾತ್ಕಾರದಿಂದ ಸಕಲ ವಿವಿಧ ದುಃಖಗಳನ್ನೂ ನಿಶ್ಶೇಷವಾಗಿ ಧ್ವಂಸಗೊಳಿಸಿಕೊಂಡು ನಿತ್ಯ ನಿರತಿಶಯಾನಂದ ಸಾಮ್ರಾಜ್ಯಪದ ಲಾಭದಿಂದ ಸಂತುಷ್ಟನಾಗಿ ಪರಿಪೂರ್ಣ ಸಕಲ ಮನೋರಥನಾಗಿರುವ ಜೀವನ್ಮುಕ್ತನ ದಯೆಗೆ ಭೂಲೋಕದಲ್ಲಿರುವ ಶ್ರೀಮಂತರನ್ನು ಮೊದಲ್ಗೊಂಡು ಬ್ರಹ್ಮ, ಇಂದ್ರಾದಿಗಳವರೆವಿಗೂ ಇರುವ ಸಕಲ ಭಾಗ್ಯಶಾಲಿಗಳೂ ಪಾತ್ರರಾಗಿರುವರು.

೩೭. ಎಲೈ ರಾಜನೇ, ವಿವೇಕಜನ್ಯವಾದ ಜ್ಞಾನದೀಪದಿಂದ ನೀನೂ ಕೂಡ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿಕೊಂಡು ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿದವನಾದರೆ ಆಗ ಉತ್ತಮಾರ್ಥ ಪ್ರದಾಯಕವಾದ ಮೇರು, ಸಾಗರ, ಆಕಾಶ ಮೊದಲಾದವುಗಳ ಮಹತ್ವವನ್ನೂ ಕೂಡ ಕೀಳಾಗಿ ಎಣಿಸುವೆ. (ಆಕಾಶಾದಿಗಳ ಮಹತ್ವವು ಆತ್ಮಸತ್ತೆಗೆ ಅಧೀನವಾದುದಾದ ಕಾರಣ ಆತ್ಮಸತ್ತೆಯು ಆಕಾಶಾದಿಗಳಿಗಿಂತಲೂ ಮಹತ್ತಮವಾದುದೆಂದು ತಾತ್ಪರ್ಯ.)

ಮಹತ್ತಾಮಾಗತೇ ಜೇತಸ್ತವ ಸಂಸಾರವೃತ್ತಿಷು |
ನ ನಿಮಜ್ಜತಿ ಹೇ ಸಾಧೋ ಗೋಷ್ಪದೇಷ್ವಿವ ವಾರಣಃ ‖ ೩೮ ‖

ಕೃಪಣಂ ತು ಮನೋ ರಾಜನ್ಸ್ವಲ್ಪೇಽಪಿ ನಿಮಜ್ಜತಿ |
ಕಾರ್ಯೇ ಗೋಷ್ಪದತೋಯೇಽಪಿ ಜೀರ್ಣಾಂಗೋ ಮಶಕೋ ಯಥಾ ‖ ೩೯ ‖

ಚೇತೋವಾಸನಯಾ ಪಂಕೇ ಕೀಟವತ್ಪರಿಮಜ್ಜಸಿ |
ದೃಶ್ಯಮಾತ್ರಾವಲಂಬಿನ್ಯಾ ಸ್ವಯಾ ದೀನತಯಾ ತಯಾ ‖ ೪೦ ‖

---

೩೮. ಅಯ್ಯಾ ಸಾಧುವೇ, ಅತ್ಯಂತ ಮಹತ್ತ್ವವಾದ ಆತ್ಮಲಾಭದಿಂದ ಮಹತ್ತ್ವವನ್ನು ದೊರಕಿಸಿಕೊಂಡ ಬಳಿಕ, ನಿನ್ನ ಮನಸ್ಸು ಒಂದು ದೊಡ್ಡ ಮದ್ದಾನೆಯು ಒಂದು ಗೋವಿನ ಪಾದದಷ್ಟು ಮಾತ್ರ ಅಗಲವಾಗಿರುವ ಜಲಾಶಯಗಳಲ್ಲಿ ಹೇಗೆ ಮುಳುಗಿ ಹೋಗುವದಿಲ್ಲವೋ ಹಾಗೆಯೇ ಪುನಃ ಎಂದಿಗೂ ಈ ಅಲ್ಪ ಸಾಂಸಾರಿಕ ವ್ಯವಹಾರಗಳಲ್ಲಿ ಮುಳುಗುವದಿಲ್ಲ.

೩೯. ಎಲೈ ರಾಜನೇ! ಅತ್ಯಂತ ಮುದಿಯಾದ ಅವಯವಗಳುಳ್ಳ ಮಶಕವು (ಸೊಳ್ಳೆಯು) ಗೋಷ್ಪದದಷ್ಟು ನೀರಿನಲ್ಲಿಯೂ ಕೂಡ ಮುಳುಗಿ ಹೋಗುವಂತೆಯೇ ಕಾಮೋಪಭೋಗೇಚ್ಛೆಯಿಂದ ಬಹುವಾಗಿ ಕಂಗೆಟ್ಟು ದೈನ್ಯದಿಂದ, ಕೂಡಿರುವ ಮನಸ್ಸಾದರೋ ಅತ್ಯಂತ ಕ್ಷುದ್ರವಾದ ಕಾರ್ಯದಲ್ಲಿಯೂ ಭ್ರಾಂತಿ ಪಡೆದು ತೊಳಲುವದು.

೪೦. ಅಯ್ಯಾ ರಾಜನೇ, ದೃಗ್ರೂಪವಾದ ಸ್ವಾತ್ಮತತ್ತ್ವದ ಕಡೆಗೆ ಗಮನ ಕೊಡದೆ ಪ್ರಾಪಂಚಿಕ ದೃಶ್ಯ ವಿಷಯಗಳನ್ನು ಮಾತ್ರವೇ ಆಶ್ರಯಿಸಿಕೊಂಡು ಅಭಿಮುಖವಾಗಿ ಓಡುತ್ತಿರುವ ನಿನ್ನ ಮನಸ್ಸಿನ ಕಾಮಕರ್ಮ ವಾಸನೆಯಿಂದ ಪ್ರೇರಿತನಾದರೆ ನೀನು ಸ್ವಭಾವಸಿದ್ಧವಾದ ಸ್ವಕೀಯ ದೈನ್ಯವನ್ನು ಕೈಗೊಂಡವನಾಗಿ ಒಂದು ಸಣ್ಣ ಹುಳುವು ಕೆಸರಿನಲ್ಲಿ ಸಿಕ್ಕಿಕೊಂಡು ಮೇಲಕ್ಕೆ ತಪ್ಪಿಸಿಕೊಂಡು ಬರಲಾರದೆ ಅಲ್ಲಿಯೇ ಮುಳುಗಿ ನಾಶಹೊಂದುವಂತೆ ಪುನಃ ಕ್ಷುದ್ರಗಳಾದ ಸಾಂಸಾರಿಕ ವ್ಯವಹಾರಗಳಲ್ಲಿ ಸಿಕ್ಕಿಹಾಕಿಕೊಂಡು ಹಾಳಾಗುವೆ.

ತಾವತ್ತ್ಯಾವನ್ಮಹಾಬಾಹೋ ಸ್ವಯಂ ಸಂತ್ಯಜತೇಽಖಿಲಂ |
ಯಾವದ್ಯಾವತ್ಪರಾಲೋಕಃ ಪರಮಾತ್ಮೈವ ಶಿಷ್ಯತೇ || ೪೧ ||

ತಾವತ್ಪ್ರಕ್ಷಾಲ್ಯತೇ ಧಾತುರ್ಯಾವದ್ಧೇಮ್ನೈವ ಶಿಷ್ಯತೇ |
ತಾವದಾಲೋಕ್ಯತೇ ಸರ್ವಂ ಯಾವದಾತ್ಮೈವ ಲಭ್ಯತೇ || ೪೨ ||

ಸರ್ವಃ ಸಾರ್ವಿಕಯಾ ಬುದ್ಧ್ಯಾ ಸರ್ವಂ ಸರ್ವತ್ರ ಸರ್ವದಾ|
ಸರ್ವಥಾ ಸಂಪರಿತ್ಯಜ್ಯ ಸ್ವಾತ್ಮನಾತ್ಮೋಪಲಭ್ಯತೇ || ೪೩ ||

---

೪೧. ಅಯ್ಯಾ ಮಹಾಬಾಹುವೇ, ಅನುಪಮ ಸ್ವಯಂ ಜ್ಯೋತಿಃಸ್ವರೂಪ ಪರಮಾತ್ಮ ತತ್ತ್ವವು ಒಂದು ಮಾತ್ರವೇ ಪರಮಾರ್ಥ ಸತ್ಯವಾಗಿ ಕೊನೆಗೆ ಅವಶಿಷ್ಟವಾಗುವದೆಂದು (ಜಗದ್ದೃಶ್ಯಗಳನ್ನೆಲ್ಲಾ ಒಂದೊಂದನ್ನಾಗಿ ಪರಿಹರಿಸಿದ ಬಳಿಕ) ಚೆನ್ನಾಗಿ ಅನುಭವಾರೂಢವಾಗುವ ಪರ್ಯಂತವೂ ಈ ಸಮಸ್ತ ದೃಶ್ಯ ಜಗತ್ತಿನಲ್ಲಿಯೂ ಮಿಥ್ಯಾತ್ವ ಬುದ್ಧಿಯಿಂದ ವೈರಾಗ್ಯವನ್ನು ಬಲಪಡಿಸಿಕೊಂಡು ಕ್ರಮೇಣ ಸ್ವೇಚ್ಛೆಯಾಗಿಯೇ ಒಂದೊಂದನ್ನಾಗಿ ಸಮಸ್ತ ವಿಷಯ ಜಾಲವನ್ನೂ ಬಿಡುವವನಾಗು.

೪೨. ಚಿನ್ನವು ಮಾತ್ರವೇ ಉಳಿಯುವವರೆಗೂ ಚಿನ್ನದ ಗಣಿಗಳಲ್ಲಿ ಸಿಕ್ಕುವ ಧಾತುಗಳನ್ನೂ ಜನರು ಚೆನ್ನಾಗಿ ತೊಳೆದು ಶೋಧಿಸುವರು. ಅದರಲ್ಲಿರುವ ಚಿನ್ನವನ್ನು ಪೂರ್ತಿಯಾಗಿ ತೆಗೆದುಕೊಂಡಬಳಿಕ, ಯಾವ ಮೂಢನೂ ಕೂಡ ಅದನ್ನು ತೊಳೆಯುವ ಗೋಜಿಗೆ ಹೋಗುವದಿಲ್ಲ. ಇದರಂತೆಯೇ ಸ್ವಾತ್ಮದರ್ಶನ ಲಾಭವಾಗುವ ಪರ್ಯಂತ ಮಾತ್ರವೇ ಸಕಲ ಅಧ್ಯಾತ್ಮಶಾಸ್ತ್ರವನ್ನೂ ಅವಲೋಕಿಸಿ ವಿಚಾರಮಾಡಬೇಕಾಗಿರುವದು.

[ನದಿಯನ್ನು ದಾಟಿ ಆಚೆ ದಡವನ್ನು ಸುಖವಾಗಿ ಸೇರಿದಮೇಲೆ ದೋಣಿಯನ್ನು ಏತಕ್ಕೆ ಹಿಡುಕಿಕೊಂಡು ಶ್ರಮಿಸಬೇಕು? ಅದರಂತೆ ಆತ್ಮದರ್ಶನವೇ ಅತ್ಯಂತ ಪ್ರಧಾನವಾದ ಫಲ. ಅದೇ ಸಿಕ್ಕ ಬಳಿಕ, ಉಪಾಯಾನ್ವೇಷಣದಿಂದ ಫಲವೇನು?]

೪೩. ಸಕಲ ದೃಶ್ಯವಸ್ತುಗಳಲ್ಲಿಯೂ ಸದ್ರೂಪನಾದ ಆತ್ಮನು ಅನುಗತನಾಗಿರುವನು ಎಂಬ ಸರ್ವ ವಸ್ತುಭೂತವಾದ ಸದ್ಬುದ್ಧಿಯಿಂದ ಸರ್ವ ದೃಶ್ಯ ಜಗತ್ತನ್ನೂ ಸರ್ವ ಕಾಲಗಳಲ್ಲಿಯೂ ಸರ್ವ ಸ್ಥಳಗಳಲ್ಲಿಯೂ ಸರ್ವ ಪ್ರಕಾರದಿಂದಲೂ

ಯಾವತ್ಸರ್ವಂ ನ ಸಂತ್ಯಕ್ತಂ ತಾವದಾತ್ಮಾ ನ ಲಭ್ಯತೇ |
ಸರ್ವಾವಸ್ಥಾಪರಿತ್ಯಾಗೇ ಶೇಷ ಆತ್ಮೇತಿ ಕಥ್ಯತೇ || ೪೪ ||

ಯಾವದನ್ಯನ್ನ ಸಂಯುಕ್ತಂ ತಾವತ್ಸಾಮಾನ್ಯ ಮೇವ ಹಿ |
ವಸ್ತು ನಾಸಾದ್ಯತೇ ಸಾಧೋ ಸ್ವಾತ್ಮಲಾಭೇತು ಕಾ ಕಥಾ || ೪೫ ||

ಸಂಪೂರ್ಣವಾಗಿ ಪರಿತ್ಯಾಗ ಮಾಡಿದರೆ ಸರ್ವ ಸ್ವರೂಪನಾಗಿ ಸರ್ವತ್ರ ಪರಿಪೂರ್ಣನಾದ ಅಖಂಡಾದ್ವಿತೀಯ ಪರಮಾತ್ಮನನ್ನು ಸ್ವಾತ್ಮನಿಂದಲೇ ದೊರಕಿಸಿಕೊಳ್ಳುವೆ.

[ಯಾವಾಗಲೋ ಒಂದು ಸಮಯದಲ್ಲಿ ಕೆಲವೆಡೆಗಳಲ್ಲಿ ಆಶೆಯನ್ನು ಉಳಿಸಿಕೊಂಡು ಬಲಾತ್ಕಾರವಾಗಿ ಬಹು ಕಷ್ಟಪಟ್ಟುಕೊಂಡು ಕೆಲವು ವಿಷಯಗಳನ್ನು ಮಾತ್ರ ಪರಿತ್ಯಾಗ ಮಾಡಿದರೆ ಆತ್ಮದರ್ಶನ ಲಾಭವಾಗುವದೇ ಇಲ್ಲವೆಂದರ್ಥ.]

೪೪. ಎಷ್ಟು ಕಾಲದವರೆವಿಗೆ ಮುಮುಕ್ಷುವು ಸರ್ವ ದೃಶ್ಯಗಳನ್ನೂ ವೈರಾಗ್ಯದ ದೆಸೆಯಿಂದ ಪರಿತ್ಯಾಗ ಮಾಡುವದಿಲ್ಲವೋ ಅಷ್ಟು ಕಾಲದವರೆವಿಗೂ ಆತ್ಮಲಾಭವಾಗುವದೇ ಇಲ್ಲ. ಮಿಥ್ಯಾಭೂತಗಳಾದ ಸಕಲ ದೃಶ್ಯ ಜಗತ್ತುಗಳ ಸ್ಥಿತಿಗತಿಗಳನ್ನೂ ಪರಿತ್ಯಾಗ ಮಾಡಿದನಂತರವೇ ಅವೆಲ್ಲಕ್ಕೂ ಅಧಿಷ್ಠಾನವಾದ ಸದ್ರೂಪ ಪರಮಾರ್ಥ ತತ್ತ್ವವು ಕೊನೆಯಲ್ಲಿ ಉಳಿಯುವದು. ಅದೇ ಆತ್ಮವು ಎಂದು ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿದೆ.

೪೫. ಅಯ್ಯಾ, ಸಾಧುವೇ, ಪ್ರಪಂಚ ವ್ಯವಹಾರದಲ್ಲಿ ಸಾಧಾರಣವಾದ ಗೋಧನಾದಿ ವಸ್ತುಗಳನ್ನೂ ಕೂಡ ಮನುಷ್ಯನು ಅದಕ್ಕೆ ವಿರೋಧಿಯಾದ ಇತರ ವಸ್ತುಗಳನ್ನು ಬಿಟ್ಟುಬಿಡುವವರೆವಿಗೂ ಪಡೆಯಲಾಗುವದೇ ಇಲ್ಲ. ಹೀಗಿರುವಾಗ, ಸ್ವಾತ್ಮಲಾಭದ ವಿಚಾರದಲ್ಲಿ ಅತ್ಯಂತಿಕವಾಗಿ ಸಕಲ ಅನಾತ್ಮ ದೃಶ್ಯವಸ್ತುಗಳನ್ನು ಬಿಟ್ಟುಬಿಟ್ಟ ಹೊರತು ಆತ್ಮಲಾಭವಾಗುವದೇ ಇಲ್ಲವೆಂದು ಹೇಳತಕ್ಕದ್ದೇನಿರುವದು.

ಯತ್ರ ಸರ್ವಾತ್ಮನೈವಾತ್ಮಾ ಲಾಭಾಯ ಯತತೇ ಸ್ವಯಂ |
ತೈಕಾನ್ತಕಾರ್ಯಂ ಪ್ರಾಪ್ನೋತಿ ತನ್ನಾಮ ನೃಪ ನೇತರತ್ || ೪೬ ||

ಸ್ವಾತ್ಮಾವಲೋಕನಾರ್ಥಂ ತು ತಸ್ಮಾತ್ಸರ್ವಂ ಪರಿತ್ಯಜೇತ್ |
ಸರ್ವಂ ಕಿಂಚಿತ್ಪರಿತ್ಯಜ್ಯ ಯದ್ದೃಷ್ಟಂ ತತ್ಪರಂ ಪದಂ || ೪೭ ||

---

೪೬. ಎಲೈ ರಾಜನೇ, ಪ್ರಪಂಚದಲ್ಲಿ ಯಾವನಾದರೂ ಸರಿಯೇ, ತಾನಾಗಿಯೇ ಸರ್ವ ಪ್ರಯತ್ನದಿಂದಲೂ ಯಾವ ವಸ್ತುವಿನ ವಿಷಯದಲ್ಲಿ ಅದನ್ನು ಪಡೆಯುವದಕ್ಕೋಸ್ಕರ ಅದಕ್ಕೆ ವಿರೋಧಿಯಾದ ಕಾರ್ಯಾಂತರಗಳನ್ನೆಲ್ಲಾ ಪರಿತ್ಯಾಗ ಮಾಡುವದರ ಮೂಲಕ ತದೇಕಾಯತ್ತ ಚಿತ್ತನಾಗಿ ಹೆಚ್ಚಾದ ಶ್ರದ್ಧೆ ವಹಿಸಿ ಕಾರ್ಯ ತತ್ಪರನಾಗುವನೋ ಆಗಲೇ ಆವನು ಆ ತನ್ನ ಉದ್ದಿಷ್ಟ ವಸ್ತುವನ್ನು ದೊರಕಿಸಿ ಕೊಂಡು ಕೃತಕೃತ್ಯನಾಗುವನೇ ಹೊರತು ಬೇರೊಂದನ್ನು ಎಂದಿಗೂ ಪಡೆಯು ಲಾಗುವದೇ ಇಲ್ಲ.

೪೭. ಆದಕಾರಣ ಮುಮುಕ್ಷುವಾದ ಪುರುಷನು ಸ್ವಾತ್ಮಸಾಕ್ಷಾತ್ಕಾರಕ್ಕೋಸ್ಕರವಾಗಿ ಸರ್ವ ದೃಶ್ಯ ಜಗತ್ತನ್ನೂ ಸಂಪೂರ್ಣವಾಗಿ ಪರಿತ್ಯಾಗ ಮಾಡಲೇಬೇಕಾಗಿರುವದು. ಸರ್ವ ದೃಶ್ಯವನ್ನೂ ಬಿಟ್ಟಬಳಿಕ, ಯಾವ ಒಂದು ಸರ್ವಥಾ ಪರಿತ್ಯಾಗ ಮಾಡುವದಕ್ಕೆ ಅಶಕ್ಯವಾದ ಆತ್ಮತತ್ತ್ವವು ಉಳಿದು ಕಾಣುವದೋ ಅದೇ ಸರ್ವೋಪಪ್ಲವರಹಿತವಾದ ನಿತ್ಯನಿರತಿಶಯಾನಂದ ಸಾಮ್ರಾಜ್ಯರೂಪ ಪರಮ ಪದವು.

[ಯಾವನು ಪರಿತ್ಯಾಗ ಮಾಡಬೇಕೆಂದಿರುವನೋ ಅವನಿಗೇ ಆತ್ಮಸ್ವರೂಪವಾಗಿರುವ ಕಾರಣ ಆತ್ಮವನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಸರ್ವರೂ ಆತ್ಮಾಸ್ತಿತ್ವವನ್ನು ಸಮ್ಮತಿಸಲೇಬೇಕು. ಏಕೆಂದರೆ "ನಾನು ಇಲ್ಲವು." ("ನಾಹಮಸ್ಮಿ") ಎಂದು ಯಾವ ಹುಚ್ಚನೂ ಎಂದಿಗೂ ಹೇಳಲಾರನು. ಒಂದು ವೇಳೆ ಹೇಳಿದರೂ ಯಾವನೂ ಅದನ್ನು ಪ್ರಮಾಣವೆಂದು ಅಂಗೀಕರಿಸುವದು? ಅನಾತ್ಮ ದೃಶ್ಯಜಾಲವಾದರೋ ಸರ್ವಾಧಿಷ್ಠಾನ ಭೂತ ಆತ್ಮನಲ್ಲಿ (ಶುಕ್ತ್ಯಾದಿಗಳಲ್ಲಿ ರಜತಾದಿಗಳಂತೆ) ಭ್ರಾಂತಿಯಿಂದ ಮಿಥ್ಯೆಯಾಗಿ ಅಧ್ಯಸ್ತವಾಗಿರುವ ಕಾರಣ ತತ್ತ್ವ ಜ್ಞಾನದಿಂದ ಬಂಧಿತವಾಗಿ ವಿನಾಶಹೊಂದುವದು. ಆತ್ಮನಾದರೋ ಸರ್ವ ವಿಕಾರಗಳಿಗೂ ಅಧಿಷ್ಠಾನವು, ಅವಿಕಾರಿಯು, ಅವಿನಾಶಿಯು, ಪರಮಾರ್ಥ ಸತ್ಯವು ಎಂಬುದು ಸಿದ್ಧಾಂತ. "ಸರ್ವೋಪಿ ಆತ್ಮಾಸ್ತಿತ್ವಂ ಪ್ರತ್ಯೇತಿ. ನ ನಾಹಮಸ್ಮೀತಿ

ಸಕಲಕಾರಣಕಾರ್ಯಪರಂಪರಾ
ಸ್ಮೃಯಜಗದ್ಗತವಸ್ತುವಿಜೃಂಭಿತಂ ।
ಅಲಮುಪಾಸ್ಯ ಮನಃ ಸ್ವವಪುಸ್ತತಃ
ಪರಿವಿಲಾಪ್ಯ ಯದೇತಿ ತದೇವ ತತ್ ॥ ೫೮ ॥

ಇತ್ಯಾರ್ಷೇ ಶ್ರೀವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಸುರಘುವೃತ್ತಾಂತೇ "ಮಾಂಡವ್ಯೋಪದೇಶೋ" ನಾಮ ಅಷ್ಟಪಂಚಾಶಃ ಸರ್ಗಃ

ಬ್ರೂಯಾತ್" ಇತ್ಯಾದಿ ಸೂತ್ರಭಾಷ್ಯದಲ್ಲಿ ಶ್ರೀಮಚ್ಛಂಕರ ಭಗವತ್ಪೂಜ್ಯಪಾದಾಚಾರ್ಯರವರು ಈ ಸಿದ್ಧಾಂತವನ್ನು ಸ್ಪಷ್ಟವಾಗಿ ವಿವರಿಸುವರು.

೫೮. ಮನಸ್ಸು-ಕಾರ್ಯಕಾರಣಭಾವ, ಸ್ವಸ್ವಾಮಿ ಸಂಬಂಧ ಮುಂತಾದ ಸಮಸ್ತ ನಾನಾ ಭೇದ ಪರಂಪರೆಗಳಿಂದ ನಿಬಿಡವಾಗಿರುವ ಜಗತ್ತಿನಲ್ಲಿ (ಒಂದು ಮುಕ್ತಾಹಾರದಲ್ಲಿರುವ ಮುತ್ತುಗಳೊಳಗೆ ಸೂತ್ರದಂತೆ) ಅನುಗತವಾಗಿರುವ ಸನ್ಮಾತ್ರದಲ್ಲಿ ಸ್ವಕಲ್ಪನೆಯಿಂದಲೇ ವಿಜೃಂಭಿತವಾಗಿ ಸದ್ವ್ಯತಿರಿಕ್ತ ಸರ್ವರೂಪವನ್ನೂ ನಿಶ್ಶೇಷವಾಗಿ ಕಳೆದುಕೊಂಡು ಅನಂತರ ಸ್ವಕೀಯವಾದ ಮನೋರೂಪವನ್ನು ಕೂಡ ಆತ್ಮತತ್ತ್ವಜ್ಞಾನದಲ್ಲಿ ಲಯಗೊಳಿಸಿ ಯಾವ ಸಚ್ಚಿನ್ಮಾತ್ರೈಕರಸವಾದ ಸ್ವರೂಪವನ್ನು ಅನುಭವಿಸುವದೋ ಅದೇ ಆ ಪರಬ್ರಹ್ಮರೂಪವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀವಾಸಿಷ್ಠ ರಾಮಾಯಣದಲ್ಲಿ ಉಪಶಮ ಪ್ರಕರಣದಲ್ಲಿ "ಮಾಂಡವ್ಯೋಪದೇಶ" ಎಂಬ ಐವತ್ತೆಂಟನೆಯ ಸರ್ಗವು

ಏಕೋನಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತ್ಯುಕ್ತ್ವಾ ಭಗವಾನೇನಂ ಸುರಘುಂ ರಘುನಂದನ ।
ಯಯೌ ಸ್ವಮೇವ ರುಚಿರಂ ಮಾಂಡವ್ಯೋ ಮೌನಮಂಡಲಂ ॥ ೧ ॥

ಗತೇ ವರಮುನೌ ರಾಜಾ ಗತ್ವೈಕಾಂತಮನಿಂದಿತಂ ।
ಧಿಯಾ ಸಂಚಿಂತಯಾಮಾಸ ಕೋ ನಾಮಾಹಮಿತಿ ಸ್ವಯಂ ॥ ೨ ॥

ನಾಹಂ ಮೇರುರ್ನ ಮೇ ಮೇರುರ್ಜಗನ್ನಾಹಂ ನ ಮೇ ಜಗತ್ ।
ನಾಹಂ ಶೈಲಾ ನ ಮೇ ಶೈಲಾ ಧರಾ ನಾಹಂ ನ ಮೇ ಧರಾ ॥ ೩ ॥

ಐವತ್ತೊಂಭತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಎಲೈ ರಘುನಂದನನೇ, ಭಗವಂತನಾದ ಆ ಮಾಂಡವ್ಯನೆಂಬ ಮಹಾಮುನಿಯು ಈ ಸುರಘುರಾಜನನ್ನುದ್ದೇಶಿಸಿ, ಪೂರ್ವ ಸರ್ಗೋಕ್ತಕ್ರಮದಿಂದ ಆತ್ಮತತ್ತ್ವವನ್ನು ಉಪದೇಶ ಮಾಡಿದ ಬಳಿಕ, ಅತಿ ಮನೋಹರವಾದ ಸ್ವಕೀಯ ತಪೋವನವನ್ನು ಕುರಿತು ಹೊರಟುಹೋದನು.

೨. ಆ ಮುನಿಶ್ರೇಷ್ಠನು ಹೊರಟುಹೋದನಂತರ ಸುರಘುರಾಜನು ಅತಿ ಪ್ರಶಸ್ತವಾದ ಒಂದು ಏಕಾಂತ ಸ್ಥಳಕ್ಕೆ ಹೋಗಿ "ನಾನು ಯಾರಾಗಿರುವೆನು ?" ಎಂಬುದಾಗಿ ತನ್ನ ಸೂಕ್ಷ್ಮಬುದ್ಧಿಯಿಂದ ತಾನೇ ಮನಸ್ಸಿನಲ್ಲಿ ವಿಚಾರಮಾಡಲಾರಂಭಿಸಿದನು.

[ಈ ದೇಹ, ಇಂದ್ರಿಯ, ಅಂತಃಕರಣ, ರಕ್ತ, ಮಾಂಸ, ಪ್ರಾಣಗಳು, ಜೀವ ಇವುಗಳೊಳಗೆ ನಾನು ಎಂಬುದು ಯಾವದು ?]

೩-೮. ಮೇರುಪರ್ವತವು ನಾನು ಅಲ್ಲ. ಮೇರುವು ನನ್ನದೂ ಅಲ್ಲ. ಈ ಜಗತ್ತು ನಾನಲ್ಲ, ಜಗತ್ತು ನನ್ನದೂ ಅಲ್ಲ. ಬೆಟ್ಟಗಳು ನಾನಲ್ಲ. ಬೆಟ್ಟಗಳು

ಕಿರಾತಮಂಡಲಂ ನೇದಂ ಮಮ ನಾಹಂ ಚ ಮಂಡಲಂ ।
ನಿಜಸಂಕೇತಮಾತ್ರೇಣ ಕೇವಲಂ ದೇಶ ಏವ ಮೇ ॥ ೫ ॥

ತ್ಯಕ್ತೋ ಮಯೈಷ ಸಂಕೇತೋ ನಾಹಂ ದೇಶೋ ನ ವೈಷ ಮೇ ।
ಇದಾನೀಂ ನಗರಂ ಶಿಷ್ಟಮೇಷ ಏವಾತ್ರ ನಿಶ್ಚಯಃ ॥ ೬ ॥

ಪತಾಕಾವನಪಕ್ತ್ಯಾಢ್ಯಾ ಭೃತ್ಯೋಪವನಸಂಕುಲಾ ।
ಗಜಾಶ್ವಸಾಮಂತಯುತಾ ಪುರೀ ನಾಹಂ ನ ಮೇ ಪುರೀ ॥ ೭ ॥

ವ್ಯರ್ಥಸಂಕೇತಸಂಬಂಧಂ ಸಂಕೇತವಿಗಮೇ ಕ್ಷತಂ ।
ಭೋಗವೃಂದಂ ಕಲತ್ರಂ ಚ ನಾಹಂ ನೈತನ್ಮಮಾಖಿಲಂ ॥ ೮ ॥

ಏವಂ ಸಂಭೃತ್ಯ ಸಬಲಂ ಸವಾಹನಮನಾತುರಂ ।
ನಾಹಂ ರಾಜ್ಯಂ ನ ಮೇ ರಾಜ್ಯಂ ಸಂಕೇತೋ ಹ್ಯಯಮಾಕುಲಃ ॥ ೯ ॥

ನನ್ನವೂ ಅಲ್ಲ. ನಾನು ಭೂಮಿಯೂ ಅಲ್ಲ. ಭೂಮಿಯೂ ನನ್ನದಲ್ಲ. ನಾನು ಈ ಕಿರಾತಮಂಡಲವೂ ಅಲ್ಲ. ಈ ಕಿರಾತ ಮಂಡಲವು ನನ್ನದೂ ಅಲ್ಲ. ಸಕಲ ಪ್ರಜೆಗಳೂ ಸಮ್ಮತಿಸಿ ನನ್ನನ್ನು ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ರಾಜನನ್ನಾಗಿ ಮಾಡಿರುವರು. ಇಷ್ಟು ಮಾತ್ರ ಕಲ್ಪನೆಯಿಂದಲೇ ಈ ದೇಶವು ಕೇವಲ ನನ್ನದೆಂದೇ ಪ್ರತೀತವಾಗಿರುವದು. ಹೀಗೆ ನಾನು ರಾಜನು ಎಂದು ಜನರಲ್ಲಿ ರೂಢವಾಗಿರುವ ಈ ಸಂಕೇತವನ್ನು ಇಗೋ ನಾನು ಈಗಲೇ ಬಿಟ್ಟುಬಿಟ್ಟೆನು. ಆದಕಾರಣ ನಾನು ಈ ದೇಶವೂ ಅಲ್ಲ. ಈ ದೇಶವು ನನ್ನದೂ ಅಲ್ಲ. ಇನ್ನು ಈಗ ಈ ರಾಜಧಾನಿಯೊಂದು ಮಾತ್ರ ಉಳಿಯಿತು. ಈ ನಗರದ ವಿಷಯದಲ್ಲಿಯೂ ಸಂಕೇತತ್ಯಾಗದಿಂದ ದೇಶದ ವಿಷಯದಲ್ಲಿ ಹೇಗೆಯೋ ಹಾಗೆ ಅದು ನಾನಲ್ಲ-ನನ್ನದು ಅದಲ್ಲ ಎಂಬುದೇ ದೃಢವಾದ ನಿಶ್ಚಯವು. ಧ್ವಜಪಟಗಳಿಂದ ವಿರಾಜಮಾನವಾಗಿ ಕಾಡುಗಳ ಸಾಲುಗಳಿಂದ ಸಮೃದ್ಧವಾಗಿರುವ, ಅನೇಕ ಭೃತ್ಯವರ್ಗಗಳಿಂದಲೂ ಉದ್ಯಾನವನಗಳಿಂದಲೂ ನಿಬಿಡವಾಗಿರುವ ಮತ್ತು ಆನೆ, ಕುದುರೆ ಮುಂತಾದ ಚತುರಂಗ ಸೇನೆಗಳಿಂದಲೂ ಸಾಮಂತರಾಜರಿಂದಲೂ ಸುರಕ್ಷಿತವಾಗಿರುವ ಈ ನಗರಿಯೂ ನಾನಲ್ಲ. ಆ ನಗರಿಯು ನನ್ನದೂ ಅಲ್ಲ. ಈ ದೇಶ, ಕೋಶ, ರಾಜ್ಯ ಮುಂತಾದುದೆಲ್ಲ ನಿಷ್ಪ್ರಯೋಜನವಾದ ಪ್ರಜಾಸಂಕೇತದಿಂದ ಮಾತ್ರವೇ ನನಗೆ ಸಂಬಂಧಿಸಿಕೊಂಡಿದೆ. ಆ ಅಭಿಮಾನರೂಪವಾದ ಸಂಕೇತವು ಕಳೆದುಹೋಗಿ ಬಿಟ್ಟರೆ ಇದೆಲ್ಲವೂ ನನ್ನ ಪಾಲಿಗೆ ಇಲ್ಲದೆ ಹೋಗಿ ನಷ್ಟಪ್ರಾಯವಾದವುಗಳೇ ಆಗುವವು. ಈ ಸಮಸ್ತ

ದೇಹಮಾತ್ರಮಹಂ ಮನ್ಯೇ ಹಸ್ತಪಾದಾದಿಸಂಯುತಂ |
ತದಿದಂ ತಾವದಾಶ್ವಂತರಲಮಾಲೋಕಯಾಮ್ಯಹಂ ॥ ೯ ॥

ತದತ್ರ ತಾವನ್ಮಾಂಸಾಸ್ಥಿ ನಾಹಮೇತದಚೇತನಂ |
ನ ಚೈತನ್ಮಮ ಸಂಶ್ಲೇಷಮೇತ್ಯಮಬ್ಜಸ್ಯ ಯಥಾ ಜಲಂ ॥ ೧೦ ॥

ವಾದ ವಿವಿಧ ಭೋಗಸಾಮಗ್ರಿಗಳೂ ಮತ್ತು ಪತ್ನೀವರ್ಗವೂ ನಾನಲ್ಲ. ಮತ್ತು ಅವುಗಳು ನನ್ನವೂ ಅಲ್ಲ. ಹೀಗೆ ನಾನಾ ಭೃತ್ಯವರ್ಗಗಳಿಂದಲೂ ಚತುರಂಗ ಸೇನಾ ಸಮೂಹಗಳಿಂದಲೂ ಗಜಾಶ್ವರಥಾದಿ ಅನೇಕ ವಾಹನಗಳಿಂದಲೂ ಇನ್ನೂ ಬೇರೆ ಬೇರೆ ಅನೇಕಾನೇಕ ನಗರಗಳಿಂದಲೂ ಸಕಲ ವಿಧ ಸಂಪತ್ತುಗಳಿಂದ ಸಮೃದ್ಧ ವಾಗಿರುವ ಈ ರಾಜ್ಯವು ನಾನಲ್ಲ. ರಾಜ್ಯವು ನನ್ನದೂ ಅಲ್ಲ. ಪ್ರಜಾಸಮ್ಮತ ವಾಗಿ ಲೋಕರೂಢವಾದ ನಾನು ರಾಜನೆಂಬ ಈ ಸಂಕೇತವು. ಅಂಥ ಪರಂಪರೆ ಯಾಗಿ ಬಂದ ಕೇವಲ ವ್ಯವಹಾರದಿಂದ ಸಿದ್ಧವಾದುದೇ ಸರಿ. ಇದು ವ್ಯರ್ಥ ವಾದುದೂ ಮಹಾ ಅನರ್ಥ ಹೇತುವೂ ಆದುದು.

[ಎಂಬ ಮೊದಲಾದ ರೀತಿಯಲ್ಲಿ ಆ ಸುರಘುರಾಜನು ಸಂಕೇತ ಮಾತ್ರತ್ವಾ ಗೋಪಾಯದಿಂದ ಅತ್ಯಂತ ಬಾಹ್ಯ ದೃಶ್ಯವಸ್ತುಗಳಲ್ಲಿ ಭ್ರಾಂತಿಯಿಂದ ರೂಢವಾದ ಆತ್ಮಭಾವನೆಯನ್ನೂ ಆತ್ಮೀಯ ಭಾವನೆಯನ್ನೂ (ಅಹಂಕಾರ, ಮಮಕಾರ ಗಳನ್ನು) ಚೆನ್ನಾಗಿ ವಿಮರ್ಶಾಪೂರ್ವಕವಾಗಿ ವಿಚಾರಮಾಡಿ ನಿರಾಸಮಾಡಿದನು.]

[ಜಗತ್ ಎಂದರೆ ಊರ್ಧ್ವಲೋಕಗಳು ಏಳು. ಅಧೋಲೋಕಗಳು ಏಳು. ಇವೆಲ್ಲ ಒಟ್ಟುಗೂಡಿಪ ಸಮಗ್ರವಾದ ಪ್ರಪಂಚವೆಂದು ಅರ್ಥ.]

೯. ಈಗ ಕರಚರಣಾದಿ ನಾನಾ ಅವಯವಗಳಿಂದ ಕೂಡಿರುವ ಈ ನನ್ನ ಸ್ವಂತ ದೇಹ ಮಾತ್ರವನ್ನು ನಾನು ಎಂಬುದಾಗಿ ತಿಳಿಯಬಹುದಾಗಿದೆಯಲ್ಲವೇ ! ಈ ವಿಚಾರವನ್ನೂ ಕೂಡ ನಾನು ಈಗಲೇ ತಡಮಾಡದೆ ಚೆನ್ನಾಗಿ ನನ್ನ ಮನಸ್ಸಿ ನಲ್ಲಿ ವಿಚಾರಮಾಡಿ ಅದರ ಯಥಾರ್ಥವಾದ ಸ್ಥಿತಿಯನ್ನು (ದೇಹಕ್ಕೂ ನನಗೂ ಎಂತಹ ಸಂಬಂಧವಿರುವದೆಂಬುವನ್ನೂ) ಕಂಡು ಹಿಡಿಯುವೆನು

೧೦. ಪ್ರಥಮತಃ ಈ ದೇಹದಲ್ಲಿ ತುಡಗಿರುವ ಮಾಂಸಖಂಡಗಳು ಎಲುಬು ಗಳು ಇವುಗಳನ್ನು ವಿಚಾರಮಾಡಿ ನೋಡುವೆನು. ಇವು ಅತ್ಯಂತ ಅಚೇತನಗಳಾದ

ಮಾಂಸಂ ಜಡಂ ನ ತದಹಂ ನೈವಾಹಂ ರಕ್ತಮಪ್ಯಲಂ ।
ಜಡಾನ್ಯಸ್ಥೀನಿ ನೈವಾಹಂ ನ ಚೈತಾನಿ ಮಮ ಕ್ವಚಿತ್ ॥ ೧೧ ॥

ಕರ್ಮೇಂದ್ರಿಯಾಣಿ ನೈವಾಹಂ ನ ಚ ಕರ್ಮೇಂದ್ರಿಯಾಣಿ ಮೇ ।
ಜಡಂ ಯತ್ಕಿಲ ದೇಹೇಽಸ್ಮಿನ್ ತದಹಂ ನೈವ ಚೇತನಃ ॥ ೧೨ ॥

ನಾಹಂ ಭೋಗಾ ನಮೇ ಭೋಗಾ ನಮೇ ಬುದ್ಧೀಂದ್ರಿಯಾಣಿಚ ।
ಜಡಾನ್ಯಸತ್ಸ್ವರೂಪಾಣಿ ನ ಚ ಬುದ್ಧೀಂದ್ರಿಯಾಣ್ಯಹಂ ॥ ೧೩ ॥

ಕಾರಣ, ಅವುಗಳು ನಾನು ಅಲ್ಲ ಮತ್ತು ಇವು ಚೇತನನಾದ ನನ್ನೊಡನೆ ಯಾವ ವಿಧವಾದ ಸಂಬಂಧವನ್ನು ಪಡೆಯುವುದಕ್ಕೂ ಯೋಗ್ಯವಲ್ಲ. ತಾವರೆಯು ನೀರಿನೊಳಗೆ ಹುಟ್ಟಿ ಬೆಳೆದುಕೊಂಡಿದ್ದರೂ ನೀರು ಅದರೊಡನೆ ಹೇಗೆ ಸಂಪರ್ಕವನ್ನು ಪಡೆಯುವುದಿಲ್ಲವೋ ಹಾಗೆಯೇ ನಾನು (ಆತ್ಮನು) ಅಸಂಗನಾದ ಕಾರಣ, ಅಚೇತನಗಳಾದ ಮಾಂಸಾಸ್ಥಿಗಳೊಡನೆ ಯಾವುದೊಂದು ಸಂಬಂಧವನ್ನೂ ಪಡೆದವನಾಗಿಲ್ಲ.

೧೧. ಜಡವಾದ ಮಾಂಸವು ನಾನು ಅಲ್ಲವಾಗಿರುವಂತೆಯೇ ಜಡವಾದ ರಕ್ತವೂ ವಾಸ್ತವವಾಗಿ ನಾನು ಅಲ್ಲವೇ ಅಲ್ಲ. ಅಂತೆಯೇ ಮೂಳೆಗಳೂ ಜಡವಾದ ಕಾರಣದಿಂದಲೇ, ಅವೂ ನಾನಲ್ಲವೇ ಅಲ್ಲ. ಇವುಗಳು ನನಗೆ ಎಲ್ಲಿಯೂ, ಎಂದಿಗೂ ಸರ್ವಥಾ ಸಂಬಂಧಪಟ್ಟವುಗಳಾಗಿಯೂ ಇಲ್ಲವು.

೧೨. ಹಸ್ತಪಾದಾದಿ ಕರ್ಮೇಂದ್ರಿಯಗಳೂ ನಾನಲ್ಲವೇ ಅಲ್ಲ. ಮತ್ತು ಅವು ನನಗೆ ಸಂಬಂಧಪಟ್ಟವೂ ಅಲ್ಲ. ಮತ್ತು ಈ ದೇಹದೊಳಗೆ ಅತ್ಯಂತ ಜಡವಸ್ತುಗಳಾದ ಯಾವ ಯಾವ ಬಗೆಯ ಬೇರೆ ತತ್ತ್ವಗಳಿರುವುವೋ, ಅವೊಂದೂ ಕೇವಲ ಚೈತನ್ಯರೂಪನಾದ ನಾನಲ್ಲವೇ ಅಲ್ಲ.

೧೩. ನಾನು ಭೋಗಗಳೂ ಅಲ್ಲ. ಭೋಗಗಳು ನನ್ನವೂ ಅಲ್ಲ. ಮತ್ತು ಜಡಗಳೂ ಅಸತ್ಸ್ವರೂಪಗಳೂ ಆಗಿರುವ ಕಿವಿ, ಕಣ್ಣು ಮುಂತಾದ ಜ್ಞಾನೇಂದ್ರಿಯಗಳೂ ಕೂಡ-ಸದ್ರೂಪನೂ, ಚೇತನನೂ ಆಗಿರುವ ನಾನಲ್ಲ. ಅದು ಕಾರಣವೇ. ಅವುಗಳಿಗೂ, ನನಗೂ ಯಾವ ಸಂಬಂಧವೂ ಕೂಡುವುದಿಲ್ಲ.

ಮೂಲಂ ಸಂಸೃತಿ ದೋಷಸ್ಯ ಮನೋನಾಹಂ ಜಡಂ ಹಿ ತತ್ ।
ಅಥ ಬುದ್ಧಿರಹಂಕಾರ ಇತಿ ದೃಷ್ಟಿರ್ಮನೋಮಯೀ ॥ ೧೪ ॥

ಮನೋ ಬುದ್ಧೀಂದ್ರಿಯಾದ್ಯಂತೋ ಭೂತಕೋಶಶ್ಚಲ ದ್ವಪುಃ ।
ನಾಹ ಮೇವಂ ಶರೀರಾದಿ ಶಿಷ್ಟಮಾಲೋಕಯಾಮ್ಯಹಂ ॥ ೧೫ ॥

ಶೇಷಸ್ತು ಚೇತನೋ ಜೀವಃ ಸಚೇಚ್ಚೇತ್ಯೇನ ಚೇತತಿ ।
ಅನ್ಯೇನ ಬೋಧ್ಯಮನೋಽಸೌ ನಾತ್ಮತತ್ವವಪುರ್ಭವೇತ್ ॥ ೧೬ ॥

---

೧೪. ಸಂಸಾರವೆಂಬ ಮಹಾ ಅನರ್ಥಕ್ಕೆ ಆದಿಕಾರಣವಾಗಿರುವ ಈ ಮನಸ್ಸೆಂಬುದೂ ಜಡವೇ ಆಗಿರುವ ಕಾರಣ ಅದೂ ನಾನು ಅಲ್ಲ. ಮತ್ತು ಬುದ್ಧಿ, ಅಹಂಕಾರ, ಚಿತ್ತ ಎಂದು ಬೇರೆ ಹೆಸರುಗಳಿಂದ ವ್ಯವಹಾರ ಯೋಗ್ಯವಾದ ದೃಷ್ಟಿಯೂ ಕೂಡ ಅಂತಃಕರಣದ ಅವಸ್ಥಾ ಭೇದರೂಪವಾಗಿ ಮನೋಮಯಿಯಾಗಿರುವ ಕಾರಣ, ಅದು ನಾನೂ ಅಲ್ಲ. ಅದು ನನ್ನದೂ ಅಲ್ಲ.

೧೫. ಹೀಗೆ, ಸ್ಥೂಲದೇಹ ಮೊದಲುಗೊಂಡು ಮನಸ್ಸು, ಬುದ್ಧಿ, ಇಂದ್ರಿಯ ಮುಂತಾದವುಗಳ ವರೆವಿಗೂ, ಈ ಶರೀರಸ್ಥವಾದ ಸ್ಥೂಲ ಮತ್ತು ಸೂಕ್ಷ್ಮರೂಪ ಪಂಚ ಭೂತಗಳ ಸಮುದಾಯವೂ ಕೂಡ ಅತ್ಯಂತ ಅಸ್ಥಿರವೂ, ಜಡವೂ ಆಗಿರುವ ಕಾರಣವೇ. ನಾನು ಅಲ್ಲ ಎಂಬುದು ಸ್ಥಿರಪಟ್ಟಿತು. ಈಗ ಇನ್ನು ಳಿದಿರುವುದನ್ನು ಹಾಗೆಯೇ ವಿಚಾರಮಾಡಿ ಅದರ ಸ್ವರೂಪವನ್ನೂ ಕಂಡುಹಿಡಿಯುವೆನು.

೧೬. ಇನ್ನು ವಿಚಾರ ಮಾಡಬೇಕಾಗಿ, ಉಳಿದಿರುವುದಾದರೋ, ಚೇತನನಾದ ಜೀವನೊಬ್ಬನೇ! ಚೇತನನಾದ ಪ್ರಮಾತೃವು ಚೇತ್ಯವಾದ ಪ್ರಮೇಯದೊಡನೆ (ಅಹಂ ಇದಂ ಚೇತಯಾಮಿ) ನಾನು ಇದನ್ನು ಪ್ರತ್ಯಕ್ಷವಾಗಿ ಅರಿಯುವೆನು ಎಂದು ವ್ಯವಹರಿಸುವವನಾದ ಪಕ್ಷದಲ್ಲಿ ಆಗ ಪ್ರಮಾತೃ, ಪ್ರಮೇಯ ಪ್ರಮಾಣಗಳೆಂಬ ತ್ರಿಪುಟ್ಯಾತ್ಮಕವಾದ ವ್ಯವಹಾರವನ್ನು ಅರಿಯುವ ಸಾಕ್ಷಿಯಿಂದ ಈ ಪ್ರಮಾತೃವೂ ಅರಿಯಲ್ಪಡುವವನಾಗಿರುವನು. ಇಂತಹ ಪ್ರಮಾತೃತ್ವವು ಎಂದಿಗೂ ಆತ್ಮನ ತಾತ್ತ್ವಿಕವಾದ ರೂಪವೆಂದು ಎಣಿಸಲ್ಪಡುವುದಿಲ್ಲ.

ಏವಂ ತ್ಯಜಾಮಿ ಸಂವೇದ್ಯಂ ಚೇತ್ಯಂ ನಾಹಂ ಹಿ ತತ್ಕಿಲ ।
ಶೇಷೋ ವಿಕಲ್ಪರಹಿತೋ ವಿಶುದ್ಧ ಚಿದಹಂ ಸ್ಥಿತಃ ॥ ೧೭ ॥

ಚಿತ್ರಮೇಷೋಽಸ್ಮಿ ಲಬ್ಧಾತ್ಮಾ ಜಾತಃ ಕಾಲೇನ ಕಾರ್ಯವಾನ್ ।
ಏಷ ಸೋಽಹ ಮನಂತಾತ್ಮಾ ನಾಂತೋಽಸ್ಯ ಪರಮಾತ್ಮನಃ ॥ ೧೮ ॥

---

೧೭. ಹೀಗೆ ಇದೇ ಯುಕ್ತಿಯಿಂದಲೇ (ಪ್ರಮಾತೃವು ಸಾಕ್ಷಿಯಿಂದ ಅರಿಯಲ್ಪಡುವ ಕಾರಣ ಆತ್ಮನಲ್ಲವೆಂದು ನಿರಾಕರಿಸಿದಂತೆಯೇ) ಸಾಕ್ಷಿ ಸಂವೇದ್ಯವಾದ ಕಾರಣ-ಪ್ರಮಾಣವನ್ನೂ ಪ್ರಮೇಯವನ್ನೂ ಕೂಡ ಅನಾತ್ಮವೆಂದು ಪರಿತ್ಯಾಗ ಮಾಡುವೆನು. ಏಕೆಂದರೆ ಆ ಚೇತ್ಯವಾದ ಪ್ರಮೇಯವೆಂಬುವು ನಾನು ಅಲ್ಲವೆಂದು ಪ್ರಸಿದ್ಧವಾಯಿತು ಹೀಗೆ ಎಲ್ಲವನ್ನೂ ನಾನು ಅಲ್ಲ (ಆತ್ಮವಲ್ಲ) ವೆಂದು ನಿರಾಕರಿಸಿ ಬಿಟ್ಟ ಬಳಿಕ, ಕೊನೆಯಲ್ಲಿ ಪರಿಶಿಷ್ಟವಾದ-ಸರ್ವ ವಿಕಲ್ಪ ರಹಿತವಾದ ನಿತ್ಯ ಶುದ್ಧ ಸರ್ವಸಾಕ್ಷಿರೂಪ ಚೈತನ್ಯವೇ ಅಹಂ (ನಾನು= ಆತ್ಮವು) ಎಂದು ನಿಸ್ಸಂದೇಹವಾಗಿ ಪರಿನಿಶ್ಚಿತವಾಯಿತು.

೧೮ ಅಹಾ-ಇದೇನು ಮಹಾದಾಶ್ಚರ್ಯವು! ಹೀಗೆ ಬಾಹ್ಯವಸ್ತುಗಳನ್ನೂ ತನ್ನ ದೇಹೇಂದ್ರಿಯಾದಿಗಳನ್ನೂ ಜಡ, ಅನಾತ್ಮ, ದೃಶ್ಯಗಳೆಂದು ಪರಿಹರಿಸಿಬಿಡಲಾಗಿ - ಅವಶಿಷ್ಟವಾದ ನಿತ್ಯ ಶುದ್ಧ ಚಿದ್ರೂಪ ಆತ್ಮದರ್ಶನ ವುಂಟಾಯಿತು ಇಷ್ಟು ಮಾತ್ರದಿಂದ (ತನ್ನ ಕೊರಳಲ್ಲೇ ಇರುವ ಚಿನ್ನದ ಸರವನ್ನು ಮರೆತು ಅದು ಕಳೆದು ಹೋಯಿತೆಂಬ ಭ್ರಾಂತಿಯಿಂದ ಕೊರಗುತ್ತಲಿರುವ ಮನುಷ್ಯನು-ಆಪ್ತ ವಾಕ್ಯದಿಂದ ಉತ್ತೇಜಿತನಾಗಿ-ಮೊದಲಿನಿಂದಲೂ ತನ್ನ ಕಂಠದಲ್ಲಿಯೇ ಇದ್ದಂಥ ತನ್ನ ಚಿನ್ನದ ಸರವನ್ನೇ-ಪ್ರತ್ಯಕ್ಷವಾಗಿ ಕಂಡಾಗ-ಅದನ್ನು ಹೊಸದಾಗಿ ಸಂಪಾದಿಸಿದಂತೆಯೇ ಭಾವಿಸಿ-ಅತ್ಯಾಶ್ಚರ್ಯದಿಂದಲೂ ಅತ್ಯಾನಂದದಿಂದಲೂ ನಲಿಯುವಂತೆ) ಈಗ ಈ ನಾನು ಆತ್ಮಲಾಭವನ್ನು ಪಡೆದೆನು. ಎಷ್ಟೋ ಅನಾದಿ ಕಾಲದಿಂದಲೂ, ಸಂತತವೂ ವಿಶೇಷವಾಗಿಪ್ರಯತ್ನ ಪಡುತ್ತಿದ್ದರೂ ಕೂಡ, ಈಗಲೇ ಪರಮ ಪುರುಷಾರ್ಥ ಫಲಪ್ರಾಪ್ತಿಯಿಂದ ಕೃತಕೃತ್ಯನಾದೆನು. ಈಗ ಈ ನಾನು ಅನಾದ್ಯಂತನೂ ಅಪರಿಚ್ಛಿನ್ನನೂ ಆದ ಆ ಪರಮಾತ್ಮನೊಬ್ಬನೇ ಆಗಿದ್ದೇನೆ. ಪರಮಾತ್ಮನಾದ ಈ ನನಗೆ ಅಂತವೇ ಇಲ್ಲವು.

ಬ್ರಹ್ಮಣೀಂದ್ರೇ ಯಮೇ ವಾಯೌ ಸರ್ವಭೂತಗಣೇ ತಥಾ ।
ಸಏಷ ಭಗವಾನಾತ್ಮಾ ತಂತುರ್ಮುಕ್ತಾಸ್ವಿವ ಸ್ಥಿತಃ ॥ ೧೯ ॥

ಚಿಚ್ಛಕ್ತಿರಮಲಾ ಸೈಷಾ ಚೇತ್ಯಾಮಯ ವಿವರ್ಜಿತಾ ।
ಭರಿತಾಶೇಷದಿಕ್ಕುಂಜಾ ಭೈರವಾಕಾರ ಧಾರಿಣೀ ॥ ೨೦ ॥

ಸರ್ವಭಾವಗತಾ ಸೂಕ್ಷ್ಮಾ ಭಾವಾಭಾವ ವಿವರ್ಜಿತಾ ।
ಆಬ್ರಹ್ಮ ಭುವನಾಂತಸ್ಥಾ ಸರ್ವಶಕ್ತಿ ಸಮುದ್ಗಿಕಾ ॥ ೨೧ ॥

---

೧೯. ಮುಕ್ತಾಹಾರದ-ಮುತ್ತುಗಳೊಳಗೆ ನಾದದಾರವು (ತಂತುವು) ಅನುಗತನಾಗಿರುವಂತೆ ಭಗವಂತನಾದ ಪರಮಾತ್ಮರೂಪ ಈ ನಾನೇ. ಚತುರ್ಮುಖ ಬ್ರಹ್ಮ, ಇಂದ್ರ, ಯಮ, ವಾಯು ಮುಂತಾದ ಸಕಲ ದೇವಗಣಗಳಲ್ಲಿಯೂ, ಹಾಗೆಯೇ ಸಮಸ್ತ ಭೂತ ಸಮುದಾಯಗಳಲ್ಲಿಯೂ ಕೂಡ, ಅನುಸ್ಯೂತನಾಗಿರುವೆನು.

೨೦. ಈ ನಾನೇ ವಾಚಾಮಗೋಚರನೂ, ನಿತ್ಯ ಶುದ್ಧವೂ ಆದ ಚಿಚ್ಛಕ್ತಿಯು. ಇದರಲ್ಲಿ ಚೇತ್ಯಗಳೆಂಬ ಉಪದ್ರವಗಳು ಲೇಶಮಾತ್ರವೂ ಸುತರಾಂ ಇಲ್ಲವೇ ಇಲ್ಲವು. ಇದು ಸಮಸ್ತ ದಿಙ್ಮಂಡಲಗಳನ್ನೂ ತುಂಬಿಕೊಂಡು ಸರ್ವತ್ರ ಪರಿಪೂರ್ಣವಾಗಿ ಅಪರಿಚ್ಛಿನ್ನವಾಗಿರುವುದು. ಆತ್ಮತತ್ತ್ವ ಜ್ಞಾನಶೂನ್ಯರಾದ ಮೂಢರಿಗೆ ಮಾತ್ರವೇ ಅತಿ ಭಯಂಕರವಾದ ಆಕಾರವುಳ್ಳದ್ದಾಗಿ ತೋರುವುದು. (ವಸ್ತುತಃ ಅಭಯವೂ, ಪ್ರಸನ್ನವೂ, ಪರಮ ಮಂಗಳವೂ, ಪರಮಾನಂದ ರೂಪವೂ ಆದುದು. ಎಂದರ್ಥ.)

೨೧. ಇದು ಸಕಲ ಮನೋವೃತ್ತಿಗಳಲ್ಲಿಯೂ ಇರುವುದು. ಅತಿ ಸೂಕ್ಷ್ಮವಾದುದು. ಭಾವಾಭಾವ ವಿವರ್ಜಿತವಾದುದು. ಆ ಬ್ರಹ್ಮಸ್ತಂಬ ಪರ್ಯಂತವಾದ ಸಮಸ್ತ ಭುವನಗಳಲ್ಲಿಯೂ ಅಂತರ್ಯಾಮಿಯಾಗಿ ಅಂತರ್ಗತವಾಗಿರುವುದು. ಸಮಸ್ತ ವಿಧ ಶಕ್ತಿಗಳಿಗೂ ಆಕರವಾದ ಪೆಟ್ಟಿಗೆಯಾಗಿರುವುದು.

ಸರ್ವಸೌಂದರ್ಯ ಸುಭಗಾ ಸರ್ವ ಪ್ರಾಕಾಶ್ಯದೀಪಿಕಾ ।
ಸರ್ವ ಸಂಸಾರ ಮುಕ್ತಾನಾಂ ತಂತು ರಾತತ ರೂಪಿಣೀ　　॥ ೨೨ ॥

ಸರ್ವಾಕಾರ ವಿಕಾರಾಢ್ಯಾ ಸರ್ವಾಕಾರ ವಿವರ್ಜಿತಾ ।
ಸರ್ವಭೂತೌಘತಾಂ ಯಾತಾ ಸರ್ವದಾ ಸರ್ವತಾಂ ಗತಾ　　॥ ೨೩ ॥

ಚತುರ್ದಶ ವಿಧಾನ್ಯೇಷಾ ಭೂತಾನಿ ಭುವನೋದರೇ ।
ಏತನ್ಮಯೀಯಂ ಕಲನಾ ಜಾಗತೀ ವೇದನಾತ್ಮಿಕಾ　　॥ ೨೪ ॥

---

೨೨. ಸರ್ವ ಸೌಂದರ್ಯರೂಪ ನಿತ್ಯ ನಿರತಿಶಯಾನಂದ ಪರಿಪೂರ್ಣವಾಗಿ ಅತ್ಯಂತ ಸೌಭಾಗ್ಯಶಾಲಿಯಾಗಿರುವುದು. ಸೂರ್ಯ ಚಂದ್ರಾದಿ ದಿವ್ಯ ತೇಜಸ್ಸುಗಳನ್ನು ಮೊದಲ್ಗೊಂಡು ಸರ್ವ ಜಗತ್ತುಗಳಿಗೂ ಪ್ರಕಾಶವನ್ನು ಕೊಟ್ಟು ಬೆಳಗಿಸತಕ್ಕ ಸ್ವಯಂ ಪ್ರಕಾಶಮಾನವಾದ ಮಹಾ ಪ್ರದೀಪವಾಗಿರುವುದು. ನಾನಾ ಬಗೆಗಳಾದ ಸಂಸಾರಗಳೆಂಬ ಮುತ್ತುಗಳನ್ನು (ಮುಕ್ತಾಫಲ) ಒಟ್ಟುಗೂಡಿಸಿ ಒಂದು ಸರವಾಗಿ ಪವಣಿಸುವುದಕ್ಕೆ (ಕಟ್ಟುವುದಕ್ಕೆ) ಯೋಗ್ಯವಾದ, ಬಹು ಉದ್ದವಾದ ತಂತುವಾಗಿರುವುದು.

೨೩. ಮತ್ತು ನಾನಾ ಆಕಾರಗಳುಳ್ಳ ಸರ್ವ ವಿಕಾರಗಳಿಂದಲೂ ಕೂಡಿರುವುದು. ಸರ್ವ ವಿಧ ಆಕಾರಗಳಿಂದ ರಹಿತವಾಗಿ ಎಂದರೆ ನಿರಾಕಾರವಾಗಿಯೂ ಇರುವುದು. ಸಕಲ ಭೂತ ಸಮೂಹರೂಪವಾಗಿಯೂ ಇರುವುದು. ಸರ್ವದಾ ಸರ್ವಾತ್ಮಕವಾಗಿಯೂ ಇರುವುದು.

[ಅನಂತವೀರ್ಯಾಮಿತ ವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ-ತತೋಽಸಿ ಸರ್ವಃ. —ಭಗವದ್ಗೀತಾ.]

೨೪. ಈ ಚಿಚ್ಛಕ್ತಿಯೇ ಚತುರ್ದಶ ಭುವನ ಮಧ್ಯವರ್ತಿಗಳಾದ (ಹದಿನಾಲ್ಕು ಲೋಕಗಳೊಳಗಿರುವ) ಹದಿನಾಲ್ಕು ವಿಧ ಸಮಸ್ತ ಭೂತಗಳನ್ನೂ ಸದಾ ಧರಿಸಿಕೊಂಡಿರುವುದು. ಸಕಲ ಲೌಕಿಕ ವ್ಯವಹಾರ ಜ್ಞಾನಾತ್ಮಕವಾದ ಈ ಕಲ್ಪನಗಳೆಲ್ಲವೂ ಚಿಚ್ಛಕ್ತಿಮಯವಾದುವುಗಳೇ ಸರಿ!

ಮಿಥ್ಯಾವಭಾಸಮಾತ್ರಂತು ಸುಖದುಃಖ ದಶಾಗತಿಃ ।
ನಾನಾಕಾರ ಮಯಾಭಾಸಃ ಸರ್ವಮಾತ್ಮೈವ ಚಿತ್ಪರಾ ॥ ೨೫ ॥

ಸೋಽಯಮಾತ್ಮಾ ಮಮವ್ಯಾಪೀ ಸೇಯಂ ಯದವಬೋಧನಂ ।
ಸೇಯಮಾಕಲಿತಾಂಗಾಭಾ ಕರೋತಿ ನೃಪವಿಭ್ರಮಂ ॥ ೨೬ ॥

ಅಸ್ಯಾ ಏವ ಪ್ರಸಾದೇನ ಮನೋ ದೇಹರಥೇ ಸ್ಥಿತಂ ।
ಸಂಸಾರಜಾಲ ಲೀಲಾಸು ಯಾತಿ ವಲ್ಗತಿ ನೃತ್ಯತಿ ॥ ೨೭ ॥

ಇದಂ ಮನಶ್ಶರೀರಾದಿ ನ ಕಿಂಚಿದಪಿ ವಸ್ತುತಃ ।
ನಷ್ಟೇ ನ ಕಿಂಚಿದಪ್ಯಸ್ಮಿನ್ ಪರಿನಶ್ಯತಿ ಪೇಲವೇ ॥ ೨೮ ॥

---

೨೫. ವಿವಿಧಾಕಾರ ಮಯವಾಗಿ ಪ್ರತಿಭಾಸಮಾನವಾದ ನಾನಾವಿಧ ಸುಖ ದುಃಖಗಳ ಅವಸ್ಥೆಗಳು ಬರುವುದೂ, ಹೋಗುವುದೂ ಕೂಡ ಕೇವಲ ಮಿಥ್ಯೆಯಾಗಿಯೇ (ಸುಳ್ಳಾಗಿಯೇ) ತೋರುವುವು. ಅಷ್ಟೇ ಹೊರತು ವಾಸ್ತವವಲ್ಲ. ಇದೆಲ್ಲವೂ ಆತ್ಮವೇ! ಅದೇ ಅನುಪಮಾದ್ವಿತೀಯ ಚಿತ್ತು.

೨೬. ಸುರಘು ರಾಜನೆಂಬ ಅಭಿಮಾನವುಳ್ಳ ಈ ನನ್ನ ಆತ್ಮವು ಸಕಲ ಜಗತ್ತಿನಲ್ಲಿಯೂ ಅನುಗತವಾದ (ಸರ್ವ ವ್ಯಾಪಿಯಾದ) ಅಪರಿಚ್ಛಿನ್ನ ಪರಮಾತ್ಮನೇ ಈ ನನ್ನ ಬುದ್ಧಿ ಸಾಕ್ಷಿಯೂ ಕೂಡ ಆ ಚಿಚ್ಛಕ್ತಿಯೇ (ಚಿತ್ತೇ)! ಈ ಚಿಚ್ಛಕ್ತಿಯೇ ದ್ರಷ್ಟೃದೃಶ್ಯಭೇದದಿಂದ ದೇಹೇಂದ್ರಿಯಾದಿ ಕಲ್ಪನೆಯನ್ನು ಮಾಡಿಕೊಂಡು, ನಾನು ರಾಜನೆಂಬ ಸಂಕೇತದಿಂದ ಬಹು ವಿಧ ಭ್ರಾಂತಿಗಳನ್ನುಂಟುಮಾಡಿರುವುದು.

೨೭. ದೇಹವೆಂಬ ರಥದಲ್ಲಿ ಕುಳಿತಿರುವ ಮನಸ್ಸು, ಈ ಚಿತ್ತಿನ ಅನುಗ್ರಹದಿಂದಲೇ, ಬಹುವಿಧ ಸಂಸಾರ ಜಾಲಗಳೆಂಬ ಕ್ರೀಡೆಗಳಲ್ಲಿ ವಿನೋದದಿಂದ ವಿಹರಿಸಿಕೊಂಡಿರುವುದು. ನೆಗೆದಾಡುವುದು (ಹೆಮ್ಮೆಪಡುವುದು) ಮತ್ತು ಕುಣಿಯುತ್ತಲೂ ಇರುವುದು.

೨೮. ಈ ಮನಸ್ಸು ದೇಹ ಇವೇ ಮೊದಲಾದ ಯಾವುದೊಂದು ದೃಶ್ಯ ಜಡ ವಸ್ತುವೂ ವಸ್ತುತಃ ಇಲ್ಲ (ಅವುಗಳಿಗೆ ಸ್ವತಃ ಸತ್ತೆಯೇ ಇಲ್ಲ. ಅಸತ್ ಮಿಥ್ಯೆ, ಎಂದರ್ಥ.) ಅತ್ಯಂತ ತುಚ್ಛವಾದ ಈ ಮನಶ್ಶರೀರಾದಿಗಳು ನಾಶ ಹೊಂದಿದರೂ ಕೂಡ, ಅದರಿಂದ ನಮಗೆ ಯಾವುದೊಂದು ನಷ್ಟವೂ ಆಗುವುದಿಲ್ಲ.

ಜಗಜ್ಜಾಲಮಯಂ ನೃತ್ತಮಿದಂ ಚಿತ್ತ ನಟೈಸ್ತತಂ ।
ಏತಯೋವೈಕಯಾ ಬುದ್ಧ್ಯಾ ದೃಶ್ಯತೇ ದೀಪಲೇಖಯಾ ॥ ೨೯ ॥

ಕಷ್ಟಂ ಮುಧೈವ ಮೇ ಚಿಂತಾ ನಿಗ್ರಹಾನುಗ್ರಹಸ್ಥಿತಾ ।
ಬಭೂವ ದೇಹನಿಷ್ಠೇಹ ನ ಕಿಂಚಿದಪಿ ದೇಹಕಂ ॥ ೩೦ ॥

ಅಹೋತ್ವಹಂ ಪ್ರಬುದ್ಧೋಽಸ್ಮಿ ಗತಂ ದುರ್ದರ್ಶನಂ ಮಮ ।
ದೃಷ್ಟಂ ದ್ರಷ್ಟವ್ಯಮಖಿಲಂ ಪ್ರಾಪ್ತಂ ಪ್ರಾಪ್ಯಮಿದಂ ಮಯಾ ॥ ೩೧ ॥

("ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ॥
ತಥಾ ದೇಹಾಂತರ ಪ್ರಾಪ್ತಿಃ ಧೀರಸ್ತತ್ರನಮುಹ್ಯತಿ. ಗೀತಾ. ೨. ೧೩.)

೨೯. ಚಿತ್ತಗಳೆಂಬ ನಾಟ್ಯಕಾರರು ಜಗಜ್ಜಾಲಮಯವೆಂಬ ನೃತ್ಯವನ್ನು ಮಾಡುತ್ತಾ ಜಗತ್ತನ್ನೆಲ್ಲ ಭ್ರಾಂತಿಗೊಳ್ಳಿಸಿ ಆಕ್ರಮಿಸಿಕೊಂಡಿರುವರು. ಈ ನರ್ತನವನ್ನು ದೊಡ್ಡ ದೊಡ್ಡ ದೀಪಗಳ ಮಾಲೆಯಂತೆ ಅತ್ಯಂತ ಪ್ರಕಾಶಮಾನವಾದ ಸಾಕ್ಷಿರೂಪ ಚಿತ್ತಿನಿಂದ ಒಂದರಿಂದ ಮಾತ್ರವೇ ಕಾಣಲಾಗುವುದು. (ಬುದ್ಧಿ ಎಂಬುದಕ್ಕೆ ಚಿತ್ ಎಂದು ಇಲ್ಲಿ ಅರ್ಥ.)

೩೦. ಅಯ್ಯೋ ಕಷ್ಟವು, ಇದುವರೆವಿಗೂ ನನಗೆ ನನ್ನ ಪ್ರಜೆಗಳ ದೇಹಗಳನ್ನು ದಂಡಿಸುವ ಅಥವಾ ಅನುಗ್ರಹಿಸುವ ಸ್ಥಿತಿಯು ವಿಚಾರದಲ್ಲಿ ವ್ಯರ್ಥವಾಗಿಯೇ ಚಿಂತೆಯುಂಟಾಗಿದ್ದಿತು. (ಸಮೀಚೀನವಾದ ವಸ್ತುತತ್ತ್ವ ವಿವೇಕವಿಲ್ಲದ ಕಾರಣವೆಂದರ್ಥ.) ಆದರೆ ಈಗ ವಿಚಾರಮಾಡಿ ನೋಡಲಾಗಿ ತುಚ್ಛ ದೇಹವೆನ್ನಿಸಿಕೊಂಡಿರುವುದು ವಸ್ತುತಃ ಯಾವುದೊಂದೂ ಇಲ್ಲವೇ ಇಲ್ಲವಲ್ಲಾ !

೩೧. ಅತ್ಯಾಶ್ಚರ್ಯವು ! ಈಗಲಾದರೋ ನಾನು ಪ್ರಬುದ್ಧನಾದೆನು. (ಪರಿನಿಷ್ಠಿತ ಆತ್ಮತತ್ತ್ವಜ್ಞಾನ ಸಂಪನ್ನನಾಗಿ, ಅಜ್ಞಾನವೆಂಬ ಗಾಢ ನಿದ್ರೆಯಿಂದ ಎಚ್ಚೆತ್ತೆನು.) ಇದುವರೆವಿಗೆ ನನ್ನ ವಿವೇಕವನ್ನು ಮರೆಯಿಸಿಕೊಂಡಿದ್ದ ದುಷ್ಟ ಭ್ರಾಂತಿ ಜ್ಞಾನವು ಎಲ್ಲವೂ ತೊಲಗಿಹೋಯಿತು. ಕಾಣಬೇಕಾದುದೆಲ್ಲವನ್ನೂ ಚೆನ್ನಾಗಿ ಅನುಭವದಿಂದ ಸಾಕ್ಷಾತ್ಕರಿಸಿದೆನು. ಹೊಂದಬೇಕಾಗಿದ್ದ ಈ ದಿವ್ಯ ಪರಮ ಪದವನ್ನೂ ಹೊಂದಿ ಧನ್ಯನಾದೆನು.

ಸರ್ವಂ ಕಿಂಚಿದಿದಂ ದೃಶ್ಯಂ ದೃಶ್ಯತೇ ಯಜ್ಜಗದ್ಗತಂ ।
ಚಿನ್ನಿಷ್ಪಂದಾಂಶ ಮಾತ್ರಾಂಶಾ ನ್ನಾನ್ಯತ್ಕಿಂಚಿನ ಶಾಶ್ವತಂ ॥ ೩೨ ॥

ಕ್ವ ತೌ ಕೀದೃಗ್ವಿಧಾವಾಸಿ ಕಿಂನಿಷ್ಠೌ ವಾ ಕಿಮಾತ್ಮಕೌ ।
ನಿಗ್ರಹಾನು ಗ್ರಹೌ ಲೋಕೇ ಹರ್ಷಾಮರ್ಷಕ್ರಮೌ ತಥಾ ॥ ೩೩ ॥

ಕಿಂ ಸುಖಂ ಕಿಂನುವಾ ದುಃಖಂ ಸರ್ವಂ ಬ್ರಹ್ಮೇದಮಾತತಂ ।
ಅಹಮಾಸಂ ಮುಧಾ ಮೂಢೋ ದಿಷ್ಟ್ಯಾ ಮೂಢೋಽಸ್ಮ್ಯಹಂ ಸ್ಥಿತಃ ॥ ೩೪ ॥

---

೩೨. ಈ ಪ್ರಪಂಚಗತವಾದ ಯಾವಯಾವ ದೃಶ್ಯ ವಸ್ತುವು ಕಾಣಿಸುತ್ತಿರುವುದೋ, ಅದದೆಲ್ಲವೂ ಕೂಡ ಜಾಗ್ರತ್ತಿನಲ್ಲಿಯೂ (ಎಚ್ಚರ) ಸ್ವಪ್ನ (ಕನಸು) ದಲ್ಲಿಯೂ ಕಾಣಿಸುವ ಮಿಥ್ಯಾ ಭ್ರಾಂತಿಯಿಂದಲೇ ಪ್ರತಿಭಾಸಮಾನವಾಗಿರುವುದು. ಆದುಕಾರಣ ಚಿತ್ತಿಗಿಂತಲೂ ಬೇರೆಯಾದ ಕಾಲತ್ರಯಾಬಾಧ್ಯವಾದ ದೃಶ್ಯ ವಸ್ತುವು ಯಾವುದೊಂದೂ ಸರ್ವಥಾ ಇಲ್ಲವೇ ಇಲ್ಲ.

[ಚಿನ್ನಿಷ್ಪಂದಾಂಶ ಮಾತ್ರಾಂಶಾತ್ ಎಂಬುದಕ್ಕೆ ಚಿತ್ತಿನ ನಿಷ್ಪಂದವೆಂಬುದೇ ಮಾಯಾ ಮೂಲಕವಾದ ಜೀವಭಾವ ಭ್ರಮವು ಅದರ ಅಂಶವು ಲಿಂಗಭ್ರಮವು. ಅದರ ಮಾತ್ರೆಗಳು ಬಾಹ್ಯಾಂತಃಕರಣ ಭೇದ ಭ್ರಮಗಳು. ಅದರ ಅಂಶವೇ ಜಾಗ್ರತ್ಸ್ವಪ್ನದೃಶ್ಯ ಭ್ರಮವು. ಎಂದು ತಾತ್ಪರ್ಯ ಪ್ರಕಾಶ ಟೀಕಾಕಾರರು ಅರ್ಥ ಹೇಳಿರುವರು.]

೩೩. ಹೀಗೆ ಜಗತ್ತೇ ಮಿಥ್ಯೆಯಾಗಿರಲು, ನಾನು ಪೂರ್ವದಲ್ಲಿ ನನ್ನ ಪ್ರಜೆಗಳಿಗೆ ಮಾಡಿದ ಆ ನಿಗ್ರಹಾನುಗ್ರಹಗಳೂ ಅವುಗಳಿಂದ ನನಗುಂಟಾದ ಹರ್ಷ ಕ್ರೋಧಗಳೂ, ಅವೆಲ್ಲ ಈಗ ಈ ಲೋಕದಲ್ಲಿ ಎಲ್ಲಿರುವುವು? ಎಂತಹ ಪ್ರಕಾರ ವಾಗಿರುವುವು? ಅವುಗಳಿಗೆ ಆಶ್ರಯುವಾವುದು? ಮತ್ತು ಯಾವ ರೂಪವಾಗಿರುವುವು? (ಅಂದರೆ ಅವು ಈಗ ನಿರಾಶ್ರಯಗಳೂ, ನಿಷ್ಪ್ರಕಾರಗಳೂ, ನಿರ್ವಿಷಯ ಗಳೂ ಮತ್ತು ನಿಃಸ್ವರೂಪಗಳೂ ಆಗಿಬಿಟ್ಟವು ಎಂದರ್ಥ.)

೩೪. ಇನ್ನು ನನಗೆ ಸುಖವೆಂಬುದು ಯಾವುದಿರುವುದು? ಅಥವಾ ದುಃಖವಾವುದು? ಇದೆಲ್ಲವೂ ಸರ್ವವ್ಯಾಪಿಯಾದ ಬ್ರಹ್ಮವೇ ಆಗಿರುವುದು. ನಾನು ಇದುವರೆವಿಗೆ ವ್ಯರ್ಥವಾಗಿಯೇ ಅತ್ಯಂತ ಮೂಢನಾಗಿದ್ದೆನು. ಈಗ

ಕಿಮಸ್ಮಿನ್ನೇವ ಮಾಲೋಕೇ ಶೋಚ್ಯತೇ ಕಿಂ ವಿಮುಹ್ಯತೇ ।
ಕಿಂ ಪ್ರೇಕ್ಷ್ಯತೇ ಕಿಂ ಕ್ರಿಯತೇ ಸ್ಥೀಯತೇ ವಾಥ ಗಮ್ಯತೇ ॥ ೩೫ ॥

ಕಿಂಚಿದೇವಮಿದಂ ನಾಮ ಚಿದಾಕಾಶಂ ವಿರಾಜತೇ ।
ನಮೋ ನಮಸ್ತೇ ನಿಸ್ತತ್ವ ದಿಷ್ಟ್ಯಾ ದೃಷ್ಟೋಽಸಿ ಸುಂದರ ॥ ೩೬ ॥

ಅಹೋ ನು ಸಂಪ್ರಬುದ್ಧೋಽಸ್ಮಿ ಸಮ್ಯಗ್ಜ್ಞಾತ ಮಲಂಮಯಾ ।
ನಮೋ ಮಹ್ಯಮನಂತಾಯ ಸಮ್ಯಗ್ ಜ್ಞಾನೋದಯಾಯಚ ॥ ೩೭ ॥

ಸುದೈವ ಯೋಗದಿಂದ ನನ್ನ ಆ ಮೌಢ್ಯವು ತೊಲಗಿಹೋಗಿರುವುದು. ಅದು ಕಾರಣ, ನಾನು ಸಚ್ಚಿದಾನಂದ ಸ್ವರೂಪದಲ್ಲಿ ಪರಿನಿಷ್ಠಿತನಾಗಿರುವೆನು.

೩೫. ಹೀಗೆ ಸಚ್ಚಿದಾನಂದೈಕರಸ ಪೂರ್ಣ ಸ್ವಭಾವದಿಂದ ಸ್ವಾತ್ಮತತ್ವ ಸಾಕ್ಷಾತ್ಕಾರವು ಅನುಭವಾ ರೂಢವಾಗಲಾಗಿ ಯಾವುದನ್ನು ಕುರಿತು ಶೋಕ ಪಡಬೇಕು? ಯಾವ ವಿಷಯದಲ್ಲಿ ಮೋಹಗೊಳ್ಳಬೇಕು? ಯಾವುದನ್ನು ನೋಡ ಬೇಕು? ಏನು ಮಾಡಬೇಕಾಗಿರುವುದು? ಎಲ್ಲಿ ನಿಲ್ಲಬೇಕು? ಅಥವಾ ಎಲ್ಲಿಗೆ ಹೋಗಬೇಕು?

["ತತ್ರಕೋ ಮೋಹಃ ಕಃಶೋಕಂ ಏಕತ್ವಮನುಪಶ್ಯತಃ" ಈಶಾವಾಸ್ಯ ೭. ಮತ್ತು ಯತ್ರತು ಅಸ್ಯ ಸರ್ವಮಾತ್ಮೈವಾಭೂತ್, ತತ್ ಕೇನ ಕಂ ಪಶ್ಯೇತ್, ಕೇನ ಕಂ ಶೃಣುಯಾತ್, ಬೃಹದಾರಣ್ಯಕ. ೨-೪-೧೩. ಇತ್ಯಾದಿ ಶ್ರುತಿ ಸಹಸ್ರ ಗಳು. ಅದ್ವಿತೀಯಾತ್ಮದರ್ಶಿಯಾದ ಮುಕ್ತನಿಗೆ ಕ್ರಿಯಾಕಾರಕ ಫಲಾದಿ ಸಕಲ ವ್ಯವಹಾರಗಳೂ ಇಲ್ಲವೆಂದು ಸಾರುವುವು.]

೩೬. ಇಗೋ, ಹೀಗೆ ಅಲೌಕಿಕ ಚಮತ್ಕಾರವಾದ ಈ ಚಿದಾಕಾಶವು ತಾನೇ ತಾನಾಗಿ ವಿರಾಜಿಸುತ್ತಿರುವುದು. ಶಬ್ದ, ಸ್ಪರ್ಶ, ರೂಪಾದಿ ತತ್ತ್ವಶೂನ್ಯನಾದ, ಅವಿಕ್ರಿಯನಾದ, ನಿಷ್ಕಳಂಕನಾದ ಆತನ್ಮೇ, ನಿನಗೆ ಅನಂತ ವಂದನೆಗಳು. ಅಭಯ ಸ್ವರೂಪನೂ, ಆನಂದ ರೂಪನೂ ಆದ ಸುಂದರನೇ, ನನ್ನ ಪೂರ್ವ ಪುಣ್ಯ ಪರಿಪಾಕ ದಿಂದ ನನಗೆ ನಿನ್ನ ಸಾಕ್ಷಾತ್ಕಾರವಾಯಿತು.

೩೭. ಆಹಾ, ನಿನಗೆ ನನ್ನ ವಂದನೆಗಳು ಎಂದು ಹೇಳಿದುದು ತಪ್ಪು. ಈಗ ತಿಳಿಯಿತು. ಸುಸ್ಪಷ್ಟವಾಗಿಯೂ, ಸುದೃಢವಾಗಿಯೂ ಆತ್ಮೈಕತ್ವ ಜ್ಞಾನ ವುಂಟಾಗಿ, ಸಂಪೂರ್ಣವಾಗಿ ಪ್ರಬುದ್ಧನಾದೆನು. ಅನಂತ ರೂಪನಾದ ನನಗೆ

ವಿಗತರಂಜನ ನಿರ್ವಿಷಯ ಸ್ಥಿತಿ ।
ರ್ಗತ ಭವಭ್ರಮಃ ರಂಜಿತ ವರ್ಜಿತೇ ।
ಸ್ಥಿರ ಸುಷುಪ್ತ ಕಲಾಭಿಗತ ಸ್ತತಃ ।
ಸಮುಸಮಂ ನಿವಸಾಮ್ಯಹಮಾತ್ಮನಿ ॥ ೩೮ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಸುರಘು ವೃತ್ತಾಂತೇ "ಸುರಘು ವಿಶ್ರಾಂತಿ" ರ್ನಾಮ ಏಕೋನ ಷಷ್ಠಿತಮಃ ಸರ್ಗಃ.

ನಮಸ್ಕಾರವು. ಉತ್ತಮವಾದ ಆತ್ಮಜ್ಞಾನವೆಂಬ ಪರಮ ನಿಶ್ಶ್ರೇಯಸರೂಪ ವಾದ ಮೋಕ್ಷಕ್ಕೂ ನಮಸ್ಕಾರವು.

೩೮. ಈಗ ನಾನು ವಿಕಾರಹೇತುಗಳಾದ ಸಕಲ ಕಾಮ ಕರ್ಮಾದಿ ವಾಸನೆ ಗಳನ್ನೂ ಕಳೆದುಕೊಂಡಿರುವೆನಾದ ಕಾರಣ, ಜಾಗ್ರದಾದಿ ಅವಸ್ಥಾತ್ರಯ ವಿಷಯ ಗಳಿಂದ ಅಸಂಸ್ಪೃಷ್ಟವಾದ ನಿರ್ವಿಕಲ್ಪಾತ್ಮ ಸ್ಥಿತಿಯನ್ನು ಪಡೆದಿರುವೆನು. ಮತ್ತು ಸಕಲ ಸಾಂಸಾರಿಕ ಭ್ರಾಂತಿಗಳನ್ನು ಪರಿಹರಿಸಿಕೊಂಡಿರುವೆನಾದ ಕಾರಣ, ಆಕಾಶಾದಿ ಗಳ ಅಧ್ಯಾರೋಪಾತ್ಮಕವಾದ ಕಳಂಕರಹಿತನಾದ ಅದ್ವೈತಾತ್ಮನಲ್ಲಿ ಸ್ಥಿರವಾದ ಸುಷುಪ್ತಿ ಕಾಲಿಕವಾದ (ಸ್ವಂಹಿ ಅಪೀತೋ ಭವತಿ ಎಂಬ ಶ್ರುತ್ಯನುಸಾರವಾಗಿ) ಸ್ವಾಪ್ಯಯ (ಸ್ವರೂಪದಲ್ಲಿಯೇ ಲಯಹೊಂದುವ) ಯುಕ್ತಿಯಿಂದ ಹೇಗೋ ಹಾಗೆ ಉಪಾಧಿಗಳನ್ನೆಲ್ಲ ಲಯಗೊಳಿಸಿ, ಐಕ್ಯವನ್ನು ಪಡೆದೆನು ಅದು ಕಾರಣ. ನಾನು ಪ್ರತ್ಯಗಾತ್ಮನಲ್ಲಿ ಆತ್ಯಂತಿಕಾಭೇದರೂಪ ಪರಮ ಸಾಮ್ಯದಿಂದ ವಾಸ ಮಾಡಿಕೊಂಡು ಸ್ವಸ್ಥನಾಗಿರುವೆನು. ಇನ್ನು ಮುಂದೆ ಎಂದೆಂದಿಗೂ ನನಗೆ ಪುನಃ ವೈಷಮ್ಯ ಪ್ರಸಕ್ತಿಯೇ ಇಲ್ಲವು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಸುರಘು ವಿಶ್ರಾಂತಿವರ್ಣನ" ವೆಂಬ ಐವತ್ತೊಂಭತ್ತನೆಯ ಸರ್ಗವು.

ಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಇತಿ ಹೇಮಜಟಾಧೀಶೋ ಲೇಭೇ ಪದಮನುತ್ತಮಂ,।
ವಿವೇಕಾಧ್ಯವಸಾಯೇನ ಬ್ರಾಹ್ಮಣ್ಯಮಿವ ತಾಧಿಜಃ ॥ ೧ ॥

ಅನರ್ಥಾರ್ಕಾರ್ಯಕಾರ್ಯಾಸು ನಾಸೀಚ್ಛೇಷ್ಟಾಸು ಖೇದವಾನ್ ।
ಭೂಯೋ ಭೂಯಃ ಪ್ರಯುಕ್ತಾಸು ದಿನಮಾಲಾಸ್ವಿವೇಶ್ವರಃ ॥ ೨ ॥

ತತಃ ಪ್ರಭೃತಿ ಸೋಽತಿಷ್ಠತ್ಸರ್ವದಾ ವಿಗತಜ್ವರಃ ।
ಸಮಾಸಮೇ ಸ್ವಕೇ ಕಾರ್ಯೇ ಜಲೌಘೌಗ್ರ ಇವಾಚಲಃ ॥ ೩ ॥

ಅರವತ್ತನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ಅಯ್ಯ, ರಾಮಚಂದ್ರ, ಈ ಪ್ರಕಾರವಾಗಿ ಹೇಮಜಟರೆಂಬ ಕಿರಾತರಿಗೆ ಅಧೀಶ್ವರನಾದ ಸುರಘು ರಾಜನು ತನ್ನ ಆತ್ಮಾನಾತ್ಮ ವಿವೇಕ ಪೂರ್ವಕವಾದ, ದೃಢವಾದ ಆತ್ಮೈಕತ್ವ ನಿಶ್ಚಯ ಜ್ಞಾನದಿಂದ ಉತ್ತಮೋತ್ತಮವಾದ ನಿತ್ಯಾನಂದ ರೂಪ ಪರಮ ಪದವನ್ನು ವಿಶ್ವಾಮಿತ್ರ ಮಹಾ ಮುನಿಯು ಬ್ರಹ್ಮರ್ಷಿತ್ವವನ್ನು ಪಡೆದಂತೆ ಪಡೆದನು.

೨. ಕಾಲಕ್ರಮೇಣ ದಿನಗಳು ಒಂದೊಂದರಂತೆ ಅನೇಕವಾಗಿ ಕಳೆದು ಹೋಗುತ್ತಿದ್ದರೂ, ಅವುಗಳಿಂದ ಸೂರ್ಯನು ಸ್ವಲ್ಪಮಾತ್ರವೂ ಹೇಗೆ ಶೋಕಾಕ್ರಾಂತನಾಗುವುದಿಲ್ಲವೋ, ಹಾಗೆಯೇ ಆತನು ಪುನಃ ಪುನಃ ಆಚರಿಸುತ್ತಲಿದ್ದ ಧರ್ಮಾರ್ಥಪ್ರಾಪ್ತಿಗೆ ಉಪಾಯಗಳಾದ ಸಕಲ ವ್ಯವಹಾರಗಳೂ ಅನರ್ಥಾಕಾರಗಳೂ ದುಃಖದಲ್ಲಿ ಪರ್ಯವಸಿತಗಳೂ ಆದ ಫಲಗಳುಳ್ಳವುಗಳಾದಾಗ್ಯೂ ಕೂಡ-ಅವುಗಳಿಂದ ಲೇಶವೂ ಖೇದಗೊಂಡವನಾಗಲಿಲ್ಲ.

೩. ಅದು ಮೊದಲುಗೊಂಡು-ನದಿಯು ಪ್ರವಾಹದ ಮಧ್ಯದಲ್ಲಿದ್ದರೂ

ಹರ್ಷಾಮರ್ಷವಿನಿರ್ಮುಕ್ತಃ ಪ್ರತ್ಯಹಂ ಕಾರ್ಯಮಾಹರನ್ ।
ಉದಾರಗಂಭೀರವಪುರ್ಜಹಾರಾಂಬುನಿಧೇಃ ಶ್ರಿಯಂ ॥ ೪ ॥

ಸುಷುಪ್ತಪದಧರ್ಮಿಣ್ಯಾ ಚಿತ್ತವೃತ್ತ್ಯಾ ವ್ಯರಾಜತ ।
ನಿಕಂಪಯಾ ಪ್ರಕಾಶಿನ್ಯಾ ದೀಪಃ ಸ್ವಶಿಖಯೇವ ಸಃ ॥ ೫ ॥

ನ ನಿರ್ಘೃಣೋ ದಯಾವಾನ್ನೋ ನ ದ್ವಂದೀ ನಾಥ ಮತ್ಸರೀ
ನ ಸುಧೀರ್ನಾಸುಧೀರ್ನಾರ್ಥೀ ನಾನರ್ಥೀ ಸ ಬಭೂವಹ ॥ ೬ ॥

ಪರ್ವತವು ಹೇಗೆ ಅಚಲವಾಗಿಯೇ (ಕಟ್ಟೆಕದಲದೆ) ನಿಂತುಕೊಂಡಿರುವುದೋ ಹಾಗೆಯೇ ಆ ಸುರಘುವು, ಪ್ರಜೆಗಳ ಅನುಗ್ರಹ ನಿಗ್ರಹರೂಪವಾದ ರಾಜೋಚಿತ ವಾದ ತನ್ನ ವ್ಯವಹಾರದಲ್ಲಿ ಸರ್ವದಾ ಸಂತಾಪಲೇಶವೂ ಇಲ್ಲದವನಾಗಿ ವರ್ತಿಸುತ್ತಿದ್ದನು.

೪. ಆತನು ಪ್ರತಿದಿನವೂ ವಿಶೇಷವಾಗಿ ಧನವನ್ನು ಸಂಪಾದಿಸುತ್ತಲೂ, ವೆಚ್ಚ ಮಾಡುತ್ತಲೂ ಆಯಾ ವ್ಯವಹಾರಗಳನ್ನು ಮಾಡುತ್ತಿದ್ದರೂ ಕೂಡ, ಹರ್ಷ, ಕ್ರೋಧ, ವಿಷಾದ ಮುಂತಾದ ವಿಕಾರಗಳೊಂದೂ ಇಲ್ಲದೆ, ಉದಾರ ಮನಸ್ಕನಾಗಿಯೂ (ಮಹಾತ್ಮನಾಗಿ) ಅತಿ ಗಂಭೀರನಾಗಿಯೂ ಇರುತ್ತಾ ಸಮುದ್ರದ ಸೊಬಗನ್ನೂ ಕೂಡ ಅಪಹರಿಸಿನವನಾದನು.

೫. ನಿಶ್ಚಲವಾಗಿಯೂ (ಅಲುಗಾಡದೆ ಒಂದೇ ಸಮನಾಗಿ ಉರಿಯುವ) ಪ್ರಕಾಶಮಾನವಾಗಿಯೂ ಇರುವ ತನ್ನ ಜ್ವಾಲೆಯಿಂದ ದೀಪವು ವಿರಾಜಿಸುವಂತೆ ಆ ರಾಜನು ಸುಷುಪ್ತ ಸ್ಥಿತಿಗೆ ಸಮಾನವಾದ ಧರ್ಮವುಳ್ಳ ಅಂದರೆ ಅತ್ಯಂತ ನಿಶ್ಚಲ ವಾದ ತನ್ನ ಚಿತ್ತವೃತ್ತಿಯಿಂದ ವಿರಾಜಿಸಿದನು.

೬. ಆತನು ಸರ್ವರನ್ನೂ ಒಂದೇ ಸಮನಾಗಿ ಕಾಣುತ್ತಾ (ಸಮದರ್ಶಿ) ಇದ್ದನು. ಯಾರಲ್ಲಿಯೂ ನಿಷ್ಕರುಣವಾಗಿ ವರ್ತಿಸಲಿಲ್ಲ. ಅಥವಾ ಪಕ್ಷಪಾತದಿಂದ ದಯಾವಂತನಾಗಿಯೂ ಇರಲಿಲ್ಲ. ಶೀತೋಷ್ಣ-ಸುಖ ದುಃಖ ಮುಂತಾದ ದ್ವಂದ್ವ ಗಳಿಗೆ ಒಳಪಡಲೂ ಇಲ್ಲ. ಅಥವಾ ಯಾವುದರಲ್ಲಿಯೂ ಮಾತ್ಸರ್ಯವುಳ್ಳವ

ಸಮದರ್ಶನಯಾ ನಿತ್ಯಂ ವೃತ್ತ್ಯಾ ಚಾಪಲಧೀರಯಾ ।
ಅಂತಃಶೀತಲಯಾ ರೇಜೇ ಪರಿಪೂರ್ಣಾರ್ಣವೇಂದುವತ್ ॥ ೭ ॥

ಸರ್ವಂ ಚಿತ್ತತ್ವಕಲನಂ ಜಗದಿತ್ಯವಲೋಕ್ಯ ಸಃ ।
ಪ್ರಶಾಂತಸುಖದುಃಖಶ್ರೀಸ್ತಸ್ಯ ಪೂರ್ಣಾ ಮತಿರ್ಬಭೌ ॥ ೮ ॥

ಉಲ್ಲಸನ್ ವಿಕಸನ್ ಪೂರ್ಣಸ್ತಿಷ್ಠನ್ಗಚ್ಛನ್ವಿಶನ್ ಸ್ವಪನ್ ।
ಅಭೂತ್ಸಮಸಮಾಧಿಸ್ಥಃ ಪ್ರಬುದ್ಧಶ್ಚಿಲ್ಲಯಂ ಗತಃ ॥ ೯ ॥

ನಾಗಿಯೂ ಇರಲಿಲ್ಲ. ಒಳ್ಳೆಯ ಪ್ರಜ್ಞಾವಂತನಾಗಿಯೂ ಇರಲಿಲ್ಲ. ಅಥವಾ ದುಬು–ದ್ಧಿಯುಳ್ಳವನೂ ಆಗಿರಲಿಲ್ಲ. ಆತನು ಯಾವುದೊಂದನ್ನೂ ಅಪೇಕ್ಷಿಸುವವನೂ ಆಗಿರಲಿಲ್ಲ. ಮತ್ತು ಅಪೇಕ್ಷಾರಹಿತನಾಗಿ ಉದಾಸೀನನೂ ಆಗಿರಲಿಲ್ಲ.

೭. ಆಗ, ಆತನು ಸರ್ವತ್ರ ಸಮದೃಷ್ಟಿಯುಳ್ಳದ್ದಾಗಿಯೂ, ಚಾಪಲ್ಯರಹಿತವಾಗಿರುವದರಿಂದ ಅತ್ಯಂತ ಧೀರವಾಗಿಯೂ ಅಂತಃ ಸಂತಾಪ ಶೂನ್ಯವಾಗಿಯೂ ಇರುವ ತನ್ನ ವರ್ತನದಿಂದ ಪರಿಪೂರ್ಣವಾದ ಸಮುದ್ರದಂತೆ ಅತಿ ಗಭೀರನಾಗಿಯೂ, ಷೋಡಶಕಲಾಪೂರ್ಣನಾದ ಚಂದ್ರನಂತೆ ಪ್ರಸನ್ನನಾಗಿಯೂ ಸದಾ ವಿರಾಜಿಸಿದನು.

೮–೯. ಆತನ ಪರಿಪೂರ್ಣವಾನ ಉದಾರ ಬುದ್ಧಿಯು ಸುಖದುಃಖಾದಿ ನಾನಾ ದ್ವಂದ್ವ ವಿಕಾರಗಳನ್ನು ಶಾಂತಿಗೊಳಿಸಿ ವಿರಾಜಿಸಿತು. ಆದುದರಿಂದ ಆತನು ಈ ಸರ್ವ ಜಗತ್ತು ಚಿತ್ತತ್ತ್ವದಿಂದ ಕಲ್ಪಿತವಾಗಿ ಮಿಥ್ಯಾಭೂತವಾದುದೆಂದು ಚೆನ್ನಾಗಿ ಮನಗಂಡವನಾಗಿ, ಪ್ರಬುದ್ಧನಾಗಿಯೂ, ಪರಿಪೂರ್ಣನಾಗಿಯೂ ಇರುತ್ತಾ, ಉಲ್ಲಾಸಪಡುವಾಗಲೂ, ಮನೋವಿಕಾಸವನ್ನು ಹೊಂದುವಾಗಲೂ, ನಿಂತಿರುವಾಗಲೂ, ಸಂಚರಿಸುವಾಗಲೂ, ಪ್ರವೇಶಿಸುವಾಗಲೂ, ಮಲಗಿ ನಿದ್ರಿಸುವಾಗಲೂ, ಇತ್ಯಾದಿ ಸಕಲ ಕಾರ್ಯಗಳಲ್ಲಿಯೂ ಕೂಡ, ಸರ್ವದಾ ನಿರ್ವಿಕಲ್ಪ ಸಮಾಧಿನಿಷ್ಠನಾಗಿಯೇ ಸರ್ವಾಧಿಷ್ಠಾನವಾನ ಪರಮಾರ್ಥ ಚಿತ್ತಿನಲ್ಲಿ ಲೀನನಾಗಿದ್ದನು.

ಸ ಕುರ್ವನ್ವಿಗತಾಸಂಗಂ ರಾಜ್ಯಂ ರಾಜೀವಲೋಚನಃ ।
ಆತಿಷ್ಠದಕ್ಷತಾಕಾರೋ ಭೂರಿವರ್ಷಶತಾನಘ ॥ ೧೦ ॥

ಸಂನಿವೇಶಮಿಮಂ ದೇಹನಾಮಕಂ ತದನು ಸ್ವಯಂ ।
ಸ ಜಹೌ ತೇಜಸಾಕ್ರಾಂತೋ ರೂಪಂ ಹಿಮಕಣೋ ಯಥಾ ॥ ೧೧ ॥

ವಿವೇಶ ಪರಮಾದ್ಯಂತಕಾರಣಂ ಕಾರಣೇಶ್ವರಂ ।
ಪ್ರಜ್ಞಯಾ ಸರಿತಾಂ ವಾರಿ ಪರಿಪೂರ್ಣಮಿವಾಂಬುಧಿಂ ॥ ೧೨ ॥

---

೧೦. ಅಯ್ಯ ಕಮಲನೇತ್ರನಾದ ರಾಮಚಂದ್ರ, ಈ ರೀತಿಯಾಗಿ ಆ ಸುರಘುರಾಜನು ಯಾವುದೊಂದು ಉಪಹತಿಯೂ ಇಲ್ಲದೆ ಅಕ್ಷತವಾದ (ನಿರ್ಬಾಧ) ದೇಹವುಳ್ಳವನಾಗಿ ಅನೇಕ ನೂರಾರು ವರ್ಷಗಳಕಾಲ ಪರ್ಯಂತ (ಅತಿ ದೀರ್ಘ ಕಾಲ) ಅನಾಸಕ್ತನಾಗಿ, ಅತ್ಯವಶ್ಯಕರ್ತವ್ಯವಾದ ಸ್ವಧರ್ಮವೆಂದು ತಿಳಿದು ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದನು.

೧೧. ಅನಂತರ ಆತನು ಸೂರ್ಯಾತಪದಿಂದ ಶೋಷಿತವಾದ ಹಿಮಜಲದ ಬಿಂದುವು ತನ್ನ ಮೂರ್ತರೂಪವನ್ನು ಅಡಗಿಸಿಕೊಂಡು ಅದೃಶ್ಯವಾಗುವಂತೆ ಈ ಪಾಂಚಭೌತಿಕ ದೇಹವೆಂದು ಹೆಸರುಳ್ಳ ಆಕಾರವನ್ನು ತಾನಾಗಿಯೇ ಪರಿತ್ಯಾಗ ಮಾಡಿ ಅನುಪಮ ದಿವ್ಯಬ್ರಹ್ಮತೇಜಸ್ಸಿನಿಂದ ದೇದೀಪ್ಯಮಾನನಾದನು.

೧೨. ಆಕಾಶದಿಂದ ಭೂಮಿಯ ಮೇಲೆ ಬಿದ್ದ ನೀರು ನದಿಗಳ ಮೂಲಕ ಹರಿದು ಹೋಗಿ ಪರಿಪೂರ್ಣವಾದ ಸಮುದ್ರವನ್ನು ಪ್ರವೇಶಿಸುವಂತೆಯೇ ಆ ರಾಜನು-ಹಿರಣ್ಯಗರ್ಭಾದಿ, ಸಕಲ ಜಗತ್ಸೃಷ್ಟಿಕರ್ತರಿಗೂ ನಿಯಾಮಕವಾಗಿರುವ ಸಕಲ ಜಗತ್ತುಗಳ ಸೃಷ್ಟಿ ಲಯಗಳಿಗೆ ಕಾರಣನಾಗಿರುವ ಅಖಂಡವಾದ ಪರಿಪೂರ್ಣವಾದ ಪರಬ್ರಹ್ಮವನ್ನು-ಬ್ರಹ್ಮತತ್ತ್ವ ಸಾಕ್ಷಾತ್ಕಾರ ವೃತ್ತಿಯಿಂದ ಪುನರ್ಜನ್ಮ ಹೇತುವಾದ ಅವಿದ್ಯಾವರಣವನ್ನು ಪರಿಹರಿಸಿಕೊಳ್ಳುವುದರ ಮೂಲಕ ಪ್ರವೇಶಿಸಿದನು. ಅಂದರೆ ಐಕ್ಯ ಹೊಂದಿದನು.

ಅಧಿಗತವಿಮಲೈಕರೂಪತೇಜಾ
ವಿಜನದಶಾಂ ಸಮುಪೇತ್ಯ ಶಾಂತಶೋಕಃ
ಅಲಮಭವದಸೌ ಪರಸ್ವರೂಪಂ
ಘಟಕಮಿವಾಂಬರಸಂಯುತಂ ಮಹಾತ್ಮಾ　　|| ೧೩ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಸುರಘು ವೃತ್ತಾಂತೇ "ಸುರಘು ನಿರ್ವಾಣಂ" ನಾಮ ಷಷ್ಟಿತಮಃ ಸರ್ಗಃ.

---

೧೩. ಮಹಾತ್ಮನಾದ ಆ ಸುರಘುರಾಜನು ಉಪಾಧಿಯಾದ ಘಟದಿಂದ ಪ್ರತ್ಯೇಕವಾಗಿರುವಂತೆ ತೋರುತ್ತಿದ್ದ ಘಟಾಕಾಶವು ಘಟರೂಪ ಉಪಾಧಿ ನಾಶವಾದೊಡನೆಯೇ ಮಹಾಕಾಶದೊಡನೆ ಕೂಡಿಕೊಂಡು ಐಕ್ಯವನ್ನು ಹೊಂದುವಂತೆಯೇ ನಿತ್ಯಶುದ್ಧವೂ ಸದಾ ಏಕರೂಪವೂ ಆನಂದೈಕರಸವೂ ಆದ ಸ್ವಪ್ರಕಾಶಾತ್ಮ ಚಿದ್ರೂಪವನ್ನು ಪರಿನಿಶ್ಚಿತವಾದ ಆತ್ಮೈಕತ್ವಜ್ಞಾನದ ದೆಸೆಯಿಂದ ಸ್ವಾತ್ಮಭಾವದಿಂದ ಪಡೆದವನಾಗಿ, ಜನ್ಮಾದಿ ಸರ್ವವಿಕಾರ ರಹಿತವಾದ ಕೈವಲ್ಯ ಸ್ಥಿತಿಯಲ್ಲಿರುತ್ತಾ ಸರ್ವವಿಧ ಶೋಕ ಸಂತಾಪಗಳಿಂದ ವಿಮುಕ್ತನಾಗಿ ಪರಬ್ರಹ್ಮ ಸ್ವರೂಪವೇ ಆಗಿಬಿಟ್ಟನು.

[ಲೋಕದಲ್ಲಿ ಅಜ್ಞನು ತಾನು ಪರಬ್ರಹ್ಮನಿಗಿಂತ ಬೇರೆಯೆಂದೂ ದುಃಖಿಯೆಂದೂ, ಪರಿಚ್ಛಿನ್ನನೆಂದೂ ದೇಹಗಳೊಡನೆ ಹುಟ್ಟುತ್ತಲೂ ಸಾಯುತ್ತಲೂ ಇರುವವನೆಂದೂ ದುಃಖಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ ಸತ್ಕರ್ಮಗಳನ್ನು ಆಚರಿಸಿ ಆ ಕರ್ಮ ಫಲಗಳನ್ನು ಅನುಭವಿಸುವವನೆಂದೂ ಇತ್ಯಾದಿ ನಾನಾ ಭಾವನೆಗಳಿಂದ ನಾನಾ ವ್ಯಾಪಾರಗಳಲ್ಲಿ ವ್ಯವಹಾರ ಮಾಡುತ್ತಿರುವ ಕಾಲದಲ್ಲಿಯೂ ಕೂಡ ನಿತ್ಯ ಶುದ್ಧ ಬುದ್ಧ ಮುಕ್ತನೂ ಅಸಂಸಾರಿಯೂ ಅಕರ್ತೃವೂ, ಅಭೋಕ್ತೃವೂ ಆನಂದೈಕರಸನೂ ಆದ ಸಚ್ಚಿದಾನಂದ ಪರಬ್ರಹ್ಮವೇ ಸದಾ ಆಗಿರುವನು. ಸ್ವಸ್ವರೂಪದಿಂದ ಭ್ರಷ್ಟನಾಗಿರುವುದಿಲ್ಲ. ಆದರೆ ಆ ಸ್ವರೂಪವು ಅಭಿವ್ಯಕ್ತವಾಗಿಲ್ಲ. ಅಜ್ಞಾನದಿಂದ ಆವೃತವಾಗಿರುವುದು ಅಷ್ಟೇ! ಆತ್ಮಸ್ವರೂಪ ಯಥಾರ್ಥ ಜ್ಞಾನವು ಆವರಣವಾದ ಅಜ್ಞಾನವನ್ನು ಮಾತ್ರವೇ ತೊಲಗಿಸುವುದು. ಬೇರೆ ಯಾವುದೊಂದನ್ನು ಇಲ್ಲದ್ದನ್ನು ಹೊಸದಾಗಿ ಕಲ್ಪಿಸಿ ತೋರಿಸುವುದಿಲ್ಲ. ಆವರಕವಾದ ಅಜ್ಞಾನವು ನಿವಾರಣೆಯಾದ ಕೂಡಲೆ ಸ್ವತಃ ನಿತ್ಯಸಿದ್ಧವಾದ ಸ್ವರೂಪದ ಲಾಭವೇ ಆಗುವುದು. ಅದು ನಿತ್ಯಾಪ್ತವು. ವ್ಯಾಪ್ಯವಾದ ಕರ್ಮಸಾಧ್ಯವಾದ ಬೇರೊಂದು

ವಿಭಿನ್ನ ಫಲವಲ್ಲ. ಮೋಕ್ಷವು ಆತ್ಮನಿಗಿಂತ ವ್ಯತಿರಿಕ್ತವಾಗಿದ್ದಿದ್ದ ಪಕ್ಷದಲ್ಲಿ ಮತ್ತು ಜ್ಞಾನಸಾಧ್ಯವಾಗಿದ್ದಿದ್ದ ಪಕ್ಷದಲ್ಲಿ ಅದು ಸ್ವರ್ಗಾದಿ ಫಲಗಳಂತೆ ಅನಿತ್ಯವೇ ಆಗುತ್ತಿತ್ತು. ಆದರೆ ಹಾಗಲ್ಲ.ಮೋಕ್ಷವು ನಿತ್ಯ. "ನಹ್ಯಾಗಮಾಃ ಸಹಸ್ರಮಪಿ ಘಟಂ ಪಟಯಿತುಮೀಶತೇ" ಎಂದು ಪೂಜ್ಯ ವಾಚಸ್ಪತಿಮಿಶ್ರರು ಅಪ್ಪಣೆ ಕೊಡಿಸಿರುವಂತೆ ಸಾವಿರಾರು ಶ್ರುತಿಗಳಾಗಲಿ ಶಾಸ್ತ್ರಗಳಾಗಲಿ ಅಥವಾ ಎಂತಹ ಸಾಧನ ಸಂಪನ್ನರಾದ ಪ್ರತಿಭಾಶಾಲಿಗಳಾಗಲಿ ಘಟವನ್ನು ಎಂದಿಗೂ ಪಟವನ್ನಾಗಿ ಮಾಡಲಾರರು. ವಸ್ತು ಸ್ವಭಾವವು ಹೇಗೂ ಬದಲಾಯಿಸುವುದೇ ಇಲ್ಲ. ವಸ್ತುತಃ ಸಂಸಾರಿಯಾಗಿರುವವನು ಅಸಂಸಾರಿಯಾಗುವನೇನು? ಸ್ವಭಾವತಃ ಬದ್ಧನೂ, ದುಃಖಿಯೂ ಆದವನು ಮುಕ್ತನೂ ಸುಖಿಯೂ ಆಗುವುದೆಂತು? ವೇದಾಂತ ಶಾಸ್ತ್ರವು ಇಂತಹ ಇಂದ್ರಜಾಲ ವಿದ್ಯೆಗಳಿಂದ ಅಸಂಭವವಾದ ಕೇವಲ ಅಂಧ ಶ್ರದ್ಧೆಯಿಂದ ಮಾತ್ರ ನಂಬಲಾಗುವ ಅಸಂಬದ್ಧವಾದ ಮಾಯಾಜಾಲ ಗಳನ್ನು ಪ್ರತಿಪಾದಿಸುವುದಿಲ್ಲ. ಯುಕ್ತಿಗೆ ಒಪ್ಪುವ ಅನುಭವಾರೂಢವಾಗುವ, ಅವಿರುದ್ಧವಾದ, ಸಮಂಜಸವಾದ ವಾದಗಳನ್ನು ಮಾತ್ರವೇ ಪುಷ್ಟೀಕರಿಸುವುದು. ಎಷ್ಟು ಚಮತ್ಕಾರವಾಗಿ, ನೈಪುಣ್ಯದಿಂದ ಹೇಳಿದರೂ ಏನೇ ಮಾಡಿದರೂ ಒಂದು ಸ್ಥಾಣುವನ್ನು ಪುರುಷನೆಂದು ಭಾವಿಸಬಹುದೇ? ಒಂದು ವೇಳೆ ಪುರುಷ ನೆಂದು ತಿಳಿದರೆ ಅದು ಪ್ರಮಾಣವಾದೀತೇ? ಎಂದಿಗೂ ಇಲ್ಲ. ಅನುಭವಕ್ಕೆ ನೇರ ವಾಗಿ ವಿರುದ್ಧವಾದುದನ್ನು ನಂಬುವುದೆಂತು? ಶುಕ್ತಿಯು ರಜತವಾಗುವುದೆಂತು? ಶುಕ್ತಿಯನ್ನು ರಜತವೆಂದು ತಿಳಿದು ಅಕ್ಕಸಾಲೆಗೆ ಕೊಟ್ಟರೆ ಅವನು ಅದರಿಂದ ಆಭರಣವನ್ನೂ ಮಾಡಲಾಗುವುದೇನು? ಹೀಗೆ ಮನಬಂದಂತೆ ಹೇಳಿದರೆ ಅದು ಅಸಂಬದ್ಧವಾದ ಉನ್ಮತ್ತ ಪ್ರಲಾಪಕ್ಕೆ ಸಮಾನವೇ ಸರಿ. ವೇದಾಂತ ಶಾಸ್ತ್ರವು ಭ್ರಾಂತಿಯಿಂದ ಪರಮಾರ್ಥವಾದ ಸ್ವ ಸ್ವರೂಪವನ್ನೂ ಮರೆತು-ಪತ್ನೀ ಪುತ್ರ ಗೃಹ ಕ್ಷೇತ್ರಾದಿ ಬಾಹ್ಯಾನಾತ್ಮ ವಸ್ತುಗಳಲ್ಲಿಯೂ ನಾನು ನನ್ನದು ಎಂಬ ಅಭಿಮಾನ ವನ್ನು ಅಧ್ಯಾಸಮಾಡಿಕೊಂಡು, ದುಃಖಿಸುವವನನ್ನೂ ಕುರಿತು ಆ ಮೇಲ್ಕಂಡ ಜಡ ಅನಾತ್ಮ ದೃಶ್ಯ ವಸ್ತುಗಳೊಂದೂ ಆತ್ಮವಲ್ಲವೆಂದೂ ತದ್ವಿಲಕ್ಷಣವಾದ ಸಚ್ಚಿದಾ ನಂದ ರೂಪ ನಿತ್ಯ ಶುದ್ಧ ಮುಕ್ತ ಪರಬ್ರಹ್ಮವೇ ನೀನು ಆಗಿರುವೆ ಬೇರೆಯಲ್ಲವೆಂದೂ ಬೋಧಿಸಿ, ಮೊದಲು ಉಂಟಾಗಿದ್ದ ಮಿಥ್ಯಾ ಜ್ಞಾನವನ್ನು ಕಳೆಯುವುದು ಆಗ ಪರಮಾರ್ಥ ನಿತ್ಯಸಿದ್ಧ ಸ್ವರೂಪವು ಸಾಕ್ಷಾತ್ಕೃತವಾಗುವುದು. ಅವಿದ್ಯಾಸ್ತಮ ಯವೇ ಮೋಕ್ಷವು. ಅದು ಹೊಸದೂ ಅಲ್ಲ ಪ್ರಾಪ್ಯವೂ ಅಲ್ಲ. ಹೀಗೆ ಅಜ್ಞಾನಾವರಣ ವನ್ನೂ ಪರಿಹರಿಸಿ, ಯಥಾರ್ಥವಾದ ವಸ್ತು ಜ್ಞಾನವನ್ನುಂಟುಮಾಡಿ, ಆನಂದೈಕರಸ ರೂಪ ಮೋಕ್ಷಕ್ಕೆ ಹೇತುವಾಗಿರುವದರಿಂದಲೇ ಶಾಸ್ತ್ರಕ್ಕೆ ಪ್ರಾಮಾಣ್ಯವು. ಇದಕ್ಕೆ

ಒಂದು ದೃಷ್ಟಾಂತವೇನೆಂದರೆ, ವೀರರಾದ ರಾಜ ದಂಪತಿಗಳ ಪುತ್ರನಾಗಿ ಜನಿಸಿದ ಒಬ್ಬ ಕ್ಷತ್ರಿಯ ಬಾಲಕನು ಹೇಗೋ ದುರ್ದೈವ ವಶದಿಂದ ತನ್ನ ಮಾತಾಪಿತೃ ಗಳಿಂದ ಶೈಶವದಲ್ಲಿಯೇ ವಿಯುಕ್ತನಾಗಿ, ಎಲ್ಲಿಯೋ ಬಹು ದೂರ ದೇಶದಲ್ಲಿದ್ದ ಒಬ್ಬ ಕುರುಬನ ಕೈಗೆ ಸಿಕ್ಕಿದನು. ಆ ಅನಾಥ ಶಿಶುವನ್ನು ಕಾರುಣಿಕನಾದ ಆ ಕುರುಬನು ಮನೆಗೆ ಒಯ್ದು, ಅಲ್ಲಿ ತನ್ನ ಮಕ್ಕಳ ಜೊತೆಯಲ್ಲಿಯೇ ಪೋಷಿಸಿ ದನು. ತಕ್ಕ ವಯಸ್ಸು ಬಂದಮೇಲೆ ಅವನನ್ನೂ ತನ್ನ ಮಕ್ಕಳ ಜೊತೆಯಲ್ಲಿ ಕುರಿ ಕಾಯುವುದಕ್ಕೆ ಕಳುಹಿಸಿದನು. ಹೀಗಿರುವಾಗ ಆ ಬಾಲನು ನಿಜವಾಗಿಯೂ ಕ್ಷತ್ರಿಯನೇ ಆಗಿದ್ದರೂ, ಅವನಲ್ಲಿ ಶೌರ್ಯವೂ, ತೇಜಸ್ಸೂ ಅಡಗಿಕೊಂಡಿದ್ದರೂ, ಅವನಿಗೆ ತಾನು ಕ್ಷತ್ರಿಯನೆಂದೂ ಅಭಿಮನ್ಯುವಿನಂತಹ ವೀರ ಬಾಲನೆಂದೂ ಗೊತ್ತಿರಲಿಲ್ಲ ತಾನು ಕುರುಬನೆಂದೇ ಭಾವಿಸಿಕೊಂಡು, ಆ ಜಾತಿಗೆ ತಕ್ಕ ಉದ್ಯೋಗದಲ್ಲಿಯೇ ನಿರತನಾಗಿ ವ್ಯವಹಾರ ಮಾಡುತ್ತಿದ್ದನು. ಹೀಗಿರುವಲ್ಲಿ, ಒಂದಾನೊಂದು ದಿನ, ಈ ವೃತ್ತಾಂತವನ್ನೆಲ್ಲ ಚೆನ್ನಾಗಿ ತಿಳಿದಿದ್ದಂತಹ ಅವನ ಆಪ್ತ ಸಮೀಪ ಬಂಧುವೊಬ್ಬನು ದೇಶ ದೇಶಗಳಲ್ಲಿಯೂ ಅವನನ್ನೇ ಹುಡುಕುತ್ತಾ ಬಂದು ಕೊನೆಗೆ ಅಕಸ್ಮಾತ್ತಾಗಿ ಅನೇಕ ವರ್ಷಗಳ ಮೇಲೆ, ಕಾಡಿನಲ್ಲಿ ಕುರುಬರ ಜೊತೆಗೂಡಿ ಕುರಿ ಮಂದೆಯನ್ನು ಕಾಯುತ್ತಿದ್ದ ಅತಿ ತೇಜಸ್ವಿಯಾದ ಬಾಲನನ್ನು ನೋಡಿ ಆಶ್ಚರ್ಯ ಚಕಿತನಾಗಿ ಅವನ ವೃತ್ತಾಂತವನ್ನು ಕೇಳಿ ತಿಳಿದನು. ಆಮೇಲೆ, "ಅಪ್ಪಾ ಮಗು, ನಿಜವಾಗಿಯೂ ನೀನು ಕುರುಬನಲ್ಲ. ಉತ್ತಮನಾದ ಕ್ಷತ್ರಿಯ ವೀರನು. ನಿನ್ನ ಮಾತೆಯು ವೀರ ಜನನಿಯಾದ ಒಬ್ಬ ಕ್ಷತ್ರಿಯ ರಮಣಿ. ನಿಮ್ಮ ತಂತೆ ಒಂದು ದೇಶಕ್ಕೆ ರಾಜನಾಗಿದ್ದನು. ನಿನ್ನ ದೇಶವನ್ನು ಶತ್ರುಗಳು ಆಕ್ರಮಿಸಿಕೊಂಡಿರುವರು. ಏಳು. ಇವರ ಸಹವಾಸವನ್ನು ಬಿಡು. ನಿನ್ನ ಸಹಜ ವಾದ ವೀರತ್ವವನ್ನು ಆಶ್ರಯಿಸು. ಶತ್ರುಗಳ ಮೇಲೆ ಮುಯ್ಯಿ ತೀರಿಸಿಕೊಂಡು, ಯುದ್ಧದಲ್ಲಿ ಅವರನ್ನು ಸಂಹರಿಸಿ, ಸುಖವಾಗಿ " ರಾಜ್ಯಭಾರ ಮಾಡಿಕೊಂಡಿರು. ಇದೇ ಮೊದಲಾಗಿ ಹುರಿದುಂಬಿಸಿ ಸ್ವಸ್ವರೂಪ ಜ್ಞಾನವನ್ನು ಉಂಟುಮಾಡಿದ ಬಳಿಕ, ಅವನು ಆಪ್ತ ವಾಕ್ಯದಂತೆಯೇ ತನಗೆ ಉಪದಿಷ್ಟವಾದ ರೀತಿಯಲ್ಲಿ ಪ್ರಯತ್ನ ಪಟ್ಟು ಶತ್ರುಗಳನ್ನು ಗೆದ್ದು, ಪಿತ್ರಾರ್ಜಿತವಾದ ಸ್ವಕೀಯ ರಾಜ್ಯವನ್ನು ಪಡೆದು ವಿರಾಜಿಸಿದನು. ಅವನು ಕುರುಬರ ಜೊತೆಯಲ್ಲಿದ್ದು ತಾನು ಕುರುಬನಂತೆ ತಿಳಿದು ವರ್ತಿಸುತ್ತಿದ್ದರೂ, ಅವನು ಆಗ ನಿಜವಾಗಿಯೂ ಕುರುಬನಾಗಿರಲಿಲ್ಲ. ಕ್ಷತ್ರಿಯನೇ ಆಗಿದ್ದನು. ಅವನಿಗೆ ಕ್ಷತ್ರಿಯತ್ವವೂ, ವೀರತ್ವವೂ ಶೌರ್ಯ ತೇಜಸ್ಸು ಮೊದಲಾದವೆಲ್ಲಾ ಹುಟ್ಟು ಗುಣಗಳು ಹೊಸದಾಗಿ ಸಂಪಾದಿಸಿದವುಗಳಲ್ಲ.

ಆದರೆ, ಅವನು ತಾನು ರಾಜನೆಂದು ತಿಳಿಯದೆ, ಅಜ್ಞಾನದಿಂದ ಕುರುಬನೆಂದು ತಿಳಿದುಕೊಂಡಿದ್ದ ಕಾರಣ, ಸ್ವಸ್ವರೂಪ ಜ್ಞಾನವು ಆವೃತವಾಗಿ ಆ ಹುಟ್ಟು ಗುಣ ಗಳೆಲ್ಲವೂ ಅನಭಿವ್ಯಕ್ತವಾಗಿ ಒಳಗೇ ಅಡಗಿದ್ದುವು. ಆಪ್ತೋಪದೇಶ ಕ್ರಮದಿಂದ ಅವನ ತಪ್ಪು ಭ್ರಾಂತಿಯು (ತಾನು ಕುರುಬನು ಎಂಬುದು) ನಿಸ್ಸಂದೇಹವಾಗಿ ತೊಲಗಿ ತಾನು ಕ್ಷತ್ರಿಯನು ಎಂಬ ತಾತ್ವಿಕವಾದ ಜ್ಞಾನವು ಉದಯವಾಯಿತು.

[ಶಾಸ್ತ್ರಾಚಾರ್ಯೋಪದೇಶ ಕ್ರಮದಿಂದ ಆಗುವ ಪ್ರಯೋಜನವೂ ಇಷ್ಟು ಮಾತ್ರವೇ. ಅಲ್ಲಿ ಕ್ಷತ್ರಿಯನಲ್ಲದ ಕುರುಬನಿಗೆ ಆ ಹೊಸ ಉಪದೇಶಕರು, ಇಲ್ಲದ ರಾಜತ್ವವನ್ನುಂಟುಮಾಡಲಿಲ್ಲ. ವಸ್ತುತಃ ಕ್ಷತ್ರಿಯನೇ ಆಗಿದ್ದು, ತನ್ನ ಸ್ಥಿತಿಯನ್ನು ಮರೆತಿದ್ದ ನಿಜವಾದ ಕ್ಷತ್ರಿಯನಿಗೆ ಮಿಥ್ಯಾ ಭ್ರಾಂತಿಯನ್ನು ತೊಲಗಿಸಿ, ಅವನ ನಿಜ ಸ್ವರೂಪ ಜ್ಞಾನವು ಉದಯಿಸುವಂತೆ ಮಾಡಿದನು. ಕೂಡಲೆ ಅವನ ಕ್ಷತ್ರಿಯತ್ವ ಸಹಜವಾದ ಶೌರ್ಯ ಪ್ರತಾಪಾದಿಗಳು ಸ್ವತಏವ ತಲೆದೋರಿದುವು. ಈ ದೃಷ್ಟಾಂತ ವನ್ನು ದಾರ್ಷ್ಟಾಂತದಲ್ಲಿಯೂ ಸಮನ್ವಯ ಮಾಡಿಕೊಳ್ಳಬೇಕು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಸುರಘು ನಿರ್ವಾಣ ವರ್ಣನ" ಎಂಬ
ಅರವತ್ತನೆಯ ಸರ್ಗವು.

ಏಕಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ

ಏವಮುತ್ಪಲಪತ್ರಾಕ್ಷ ರಾಘವಾಘವಿಪರ್ಯಯೇ ।
ಪದಮಾಸಾದಯಾದ್ವಂದ್ವಂ ವಿಶೋಕೋ ಭವ ಭೂತಯೇ ॥ ೧ ॥

ಏತಾಂ ದೃಷ್ಟಿಮವಷ್ಟಭ್ಯ ನ ಮನಃ ಪರಿತಪ್ಯತೇ ।
ಘೋರೇ ತಮಸಿ ನಿರ್ಮಗ್ನಂ ಲಬ್ಧದೀಪಂ ಶಿಶುರ್ಯಥಾ ॥ ೨ ॥

ಅರವತ್ತೊಂದನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ಅಯ್ಯ, ನೈದಿಲೆಯ ದಳಗಳಂತೆ ಅತಿ ಸುಂದರವಾದ ಕಣ್ಣುಗಳುಳ್ಳ ರಾಘವ, ಪೂರ್ವೋಕ್ತ ಸುರಘುಮಹಾರಾಜನಂತೆ ನೀನೂ ಕೂಡ ಹರ್ಷ ಶೋಕಾದಿ ವಿಕಾರಗಳೆಂಬ ದೋಷಗಳನ್ನು ತತ್ತ್ವಜ್ಞಾನದಿಂದ ನಿರ್ಮೂಲವಾಗಿ ಕಳೆದುಕೊಂಡವನಾಗಿ ದ್ವಂದ್ವರಹಿತವಾದ ಪರಮಪದವನ್ನು ಪಡೆಯುವವನಾಗು ಮತ್ತು ನಿರತಿಶಯಾತ್ಮಾನಂದರೂಪ ನಿಃಶ್ರೇಯಸ ಲಾಭಕ್ಕೋಸ್ಕರ ಸರ್ವದಾ ಶೋಕರಹಿತನಾಗಿರು.

೨. ಕತ್ತಲೆಯಲ್ಲಿರುವ ಮಗುವು ಬೆಳಕನ್ನು ಕಂಡು ಪರಿತಾಪವನ್ನು ಬಿಡುವಂತೆ ಅತಿ ಭಯಂಕರವಾದ ಅಜ್ಞಾನಾಂಧಕಾರದಲ್ಲಿ ಸರ್ವಾತ್ಮನಾ ಬಿದ್ದು ಮುಳುಗಿ ಹೋದ ಮನಸ್ಸು, ಈ ಪಾರಮಾರ್ಥಿಕವಾದ ದೃಷ್ಟಿಯನ್ನು ಆಶ್ರಯಿಸಿ ಪರೆ ಜ್ಞಾನವೆಂಬ ದೀಪದ ಸಹಾಯದಿಂದ ಸ್ವಪ್ರಕಾಶವೆಂಬ ಬೆಳಕನ್ನು ದೊರಕಿಸಿಕೊಂಡು ಮತ್ತೆ ಪರಿತಪಿಸುವುದಿಲ್ಲ.

ವಿವೇಕಾವಸ್ಥಯಾ ಚೇತಸ್ತಥೈವಾಯಾತಿ ನಿರ್ವೃತಿಂ ।
ಪತಚ್ಛ್ವಭ್ರೇ ದೃಢತೃಣಪ್ರಚಯಾಲಂಬನಾದಿವ ॥ ೩ ॥

ಅಥೈತಾಂ ಪಾವನೀಂ ದೃಷ್ಟಿಂ ಭಾವಯಿತ್ವಾಪ್ಯುದಾಹರನ್ ।
ನಿತ್ಯಮೇಕಸಮಾಧಾನೋ ಭವ ಭೂಷಿತಭೂತಲಃ ॥ ೪ ॥

ಶ್ರೀರಾಮ ಉವಾಚ :—
ಕಥಮೇಕಸಮಾಧಾನಂ ಕೀದೃಶಂ ವಾ ಮುನೀಶ್ವರ ।
ವಾತಾಹತಮಯೂರಾಂಗರುಹಲೋಲಂ ಮನೋ ಭವೇತ್ ॥ ೫ ॥

---

೩. ಒಂದು ಆಳವಾದ ಹಾಳು ಭಾವಿಯಲ್ಲಿ ಬೀಳುತ್ತಿರುವವನು ಬೇರು ಬಿಟ್ಟುಕೊಂಡು ದೃಢವಾಗಿರುವ ಹುಲ್ಲುಗಳ ಸಮೂಹದ ಆಸರೆಯಿಂದ ಬೀಳುವಿಕೆಯನ್ನು ತಪ್ಪಿಸಿಕೊಂಡು ಸುಖಪಡುವಂತೆ, ಅಗಾಧವಾದ ಮೋಹವೆಂಬ ಭಾವಿಯಲ್ಲಿ ಬೀಳುತ್ತಿರುವ ಮನಸ್ಸು ಈ ಸುರಘುಮಹಾರಾಜನು ವರ್ಣಿಸಿರುವ ಪ್ರಕಾರವೇ ಆದ ವಿವೇಕಾವಸ್ಥೆಯ ಆಸರೆಯನ್ನು ಪಡೆದರೆ ಅವನಂತೆಯೇ ಸರ್ವದಾ ಶಾಶ್ವತವಾದ ವಿಶ್ರಾಂತಿ ಸುಖವನ್ನು ಪಡೆಯುವುದು.

೪. ಆದುದರಿಂದ, ರಾಮಚಂದ್ರ, ನೀನೂ ಕೂಡ ಪವಿತ್ರತಮವಾದ ಈ ಆಧ್ಯಾತ್ಮಿಕ ದೃಷ್ಟಿಯನ್ನು ಪುನಃ ಪುನಃ ಪರಿಶೀಲಿಸುವುದರಿಂದ ನಿನ್ನ ಮನಸ್ಸಿನಲ್ಲಿ ಮೊದಲು ದೃಢಪಡಿಸಿಕೊಂಡು ಇತರರಿಗೂ ಅದನ್ನು ಉಪದೇಶ ಮಾಡುತ್ತಾ ಸಂತತವೂ ಏಕ ಸಮಾಧಾನನಾಗಿ ಭೂಮಂಡಲಕ್ಕೆಲ್ಲ ಭೂಷಣಪ್ರಾಯನಾಗಿರು.

ಶ್ರೀರಾಮನು ಕೇಳಿದನು :—

೫. ಸ್ವಾಮಿ, ಮುನೀಶ್ವರರೇ, ತಾವು ಈಗ ಹೇಳಿದ ಏಕ ಸಮಾಧಾನವೆಂಬುದು ಎಂತಹುದು ? ಮತ್ತು ಗಾಳಿಯ ಹೊಡೆತಕ್ಕೆ ಸಿಕ್ಕಿದ ನವಿಲುಗರಿಯಂತೆ ಅತ್ಯಂತ ಚಂಚಲವಾದ ಈ ಮನಸ್ಸು ಯಾವ ಪ್ರಕಾರದಿಂದ ಏಕಸಮಾಧಾನವು ಆಗುವುದು ?

ಶ್ರೀ ವಸಿಷ್ಠ ಉವಾಚ :—

ಶೃಣು ತಸ್ಯೈವ ಸುರಘೋಃ ಪ್ರಬುದ್ಧಸ್ಯ ಸತಸ್ತದಾ।
ಪರ್ಣಾದಸ್ಯ ಚ ರಾಜರ್ಷೇಃ ಸಂವಾದಮಿಮಮದ್ಭುತಂ ॥ ೬ ॥

ರಾಘವೈಕಸಮಾಧಾನಬೋಧಿತಾಯೋಜಿತಾತ್ಮನೋಃ ।
ಪರಸ್ಪರಂ ಸಮಾಲಾಪಮಿಮಂ ಪ್ರಕಥಯಾಮಿ ತೇ ॥ ೭ ॥

ಬಭೂವ ಪಾರಸೀಕಾನಾಂ ಪಾರ್ಥಿವಃ ಪರವೀರಹಾ ।
ಪರಿಘೋ ನಾಮ ವಿಖ್ಯಾತಃ ಪರಿಘಃ ಸ್ಯಂದನೇ ಯಥಾ ॥ ೮ ॥

ಸ ಬಭೂವ ಪರಂ ಮಿತ್ರಂ ಸುರಘೋ ರಘುನಂದನ ।
ನಂದನೋದ್ಯಾನಸಂಸ್ಥಸ್ಯ ಮದನಸ್ಯೇವ ಮಾಧವಃ ॥ ೯ ॥

ಶ್ರೀ ವಸಿಷ್ಠನು ಹೇಳಿದನು :—

೬. ಅಯ್ಯಾ ರಾಘವ, ಅದೇ ಸುರಘುರಾಜನು ಪ್ರಬುದ್ಧನಾಗಿರುವಾಗ-ಅವನಿಗೂ ಮತ್ತು ಪರ್ಣಾದನೆಂಬ ರಾಜರ್ಷಿಗೂ-ನೀನು ಈಗ ಪ್ರಶ್ನೆ ಮಾಡಿದ ವಿಷಯದಲ್ಲಿಯೇ ಅದ್ಭುತವಾದ ಸಂವಾದವು ನಡೆದಿರುವುದು. ಅದನ್ನು ನಿನಗೋಸ್ಕರ ವಿವರಿಸುವೆನು ಕೇಳು.

೭. ರಾಘವ, ಏಕಸಮಾಧಾನದ ತಾತ್ತ್ವಿಕವಾದ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡು ಅದರಲ್ಲಿ ತಮ್ಮ ಬುದ್ಧಿಯನ್ನು ನಿಲ್ಲಿಸಿ ಲೀನರಾಗಿದ್ದ ಆ ಸುರಘು ಪರ್ಣಾದರಿಗೆ ಅನ್ಯೋನ್ಯವಾಗಿ ನಡೆದ ಈ ಸಲ್ಲಾಪವನ್ನು ನಿನಗೋಸ್ಕರ ಸ್ಪಷ್ಟವಾಗಿ ವಿವರಿಸುವೆನು.

೮. ಪೂರ್ವಕಾಲದಲ್ಲಿ, ಶತ್ರುವೀರರನ್ನು ನಿಗ್ರಹ ಮಾಡುವುದರಲ್ಲಿ ಬಹು ಸಮರ್ಥನಾದ ಪರಿಘನೆಂಬ ಹೆಸರಿನಿಂದ ಪ್ರಸಿದ್ಧನಾದ ಒಬ್ಬ ರಾಜನು ಪಾರಸೀಕ ದೇಶದ ದೊರೆಯಾಗಿದ್ದನು. ಒಂದು ರಥಕ್ಕೆ ಅಚ್ಚು ಆಧಾರವಾಗಿರುವಂತೆ ಆ ರಾಜನು ಆ ದೇಶಕ್ಕೆಲ್ಲ ಆಧಾರವಾಗಿದ್ದನು.

೯. ಅಯ್ಯಾ ರಘುನಂದನ, ನಂದನೋದ್ಯಾನವನದಲ್ಲಿ ವಾಸ ಮಾಡಿಕೊಂಡಿರುವ ಮನ್ಮಥನಿಗೆ ವಸಂತಋತುವು ಪರಮ ಮಿತ್ರನಾಗಿರುವಂತೆ ಆ ಪರಿಘರಾಜನು ಈ ಸುರಘುರಾಜನಿಗೆ ಅತ್ಯಂತ ಆಪ್ತ ಸ್ನೇಹಿತನಾಗಿದ್ದನು.

ಕದಾಚಿತ್ಪರಿಘಸ್ಯಾಭೂದವರ್ಷಂ ಮಂಡಲೇ ಮಹತ್ ।
ಕಲ್ಪಾಂತ ಇವ ಸಂಸಾರೇ ಪ್ರಜಾದುಷ್ಕೃತದೋಷಜಂ ॥ ೧೦ ॥

ನನೇಶುರ್ಜನತಾಸ್ತತ್ರ ಬಹ್ವ್ಯಃ ಕ್ಷುತ್ಕ್ಷಾಮಜೀವಿತಾಃ ।
ಜ್ವಲಿತೇ ವಿಪಿನೇ ವಹ್ನೌ ಯಥಾ ಭೂತಪರಂಪರಾಃ ॥ ೧೧ ॥

ತದ್ದುಃಖಂ ಪರಿಘೋ ದೃಷ್ಟ್ವಾ ವಿಷಾದಮತುಲಂ ಯಯೌ ।
ತತ್ಯಾಜಾಶ್ವಖಿಲಂ ರಾಜ್ಯಂ ದಗ್ಧಂ ಗ್ರಾಮಮಿವಾಧ್ವಗಃ ॥ ೧೨ ॥

ಪ್ರಜಾನಾಶಪ್ರತೀಕಾರೇಷ್ವಸಮರ್ಥೋ ವಿರಾಗವಾನ್ ।
ಜಗಾಮ ಪಿಪಿನೇ ಕರ್ತುಂ ತಪೋಜಿನಮುನೀಂದ್ರವತ್ ॥ ೧೩ ॥

---

೧೦. ಹೀಗಿರುವಾಗ, ಒಂದಾನೊಂದು ಕಾಲದಲ್ಲಿ ಆ ಪರಿಘರಾಜನ ದೇಶದಲ್ಲಿ-ಪ್ರಳಯಾಂತ ಕಾಲದಲ್ಲಿ ಮಹೋತ್ಪಾತಗಳು ಜಗತ್ತಿನಲ್ಲಿ ತಲೆದೋರುವಂತೆ-ಪ್ರಜೆಗಳ ದುಷ್ಕಾರ್ಯಗಳೆಂಬ ಪಾಪದೋಷಗಳ ದೆಸೆಯಿಂದ ಅತ್ಯಾಧಿಕವಾದ ಅನಾವೃಷ್ಟಿಯು ಅತಿ ಭಯಂಕರವಾಗಿ ಉದ್ಭವಿಸಿ ಆ ದೇಶವನ್ನೆಲ್ಲ ನಾಶಗೊಳಿಸಿತು.

೧೧. ಮಹಾರಣ್ಯದಲ್ಲಿ - ಕಾಡುಗಿಚ್ಚು ಜಾಜ್ವಲ್ಯಮಾನವಾಗಿ ಸರ್ವತ್ರ ಆವರಿಸಿಕೊಂಡು ಸುಡುತ್ತಿರಲು ಅರಣ್ಯದೊಳಗಿರುವ ಪ್ರಾಣಿ ಸಮುದಾಯಗಳೆಲ್ಲವೂ ಆ ಕಿಚ್ಚಿನಿಂದ ಸುಟ್ಟು ಬೂದಿಯಾಗಿ ನಾಶ ಹೊಂದುವಂತೆ, ಆ ರಾಜನ ದೇಶದಲ್ಲಿ ಆಗ ಸಂಭವಿಸಿದ ಅನಾವೃಷ್ಟಿಯ ದೆಸೆಯಿಂದ ಬಹು ಸಂಖ್ಯಾಕ ಪ್ರಜಾ ಸಮುದಾಯಗಳು ಹೊಟ್ಟೆಗೆ ಆಹಾರವಿಲ್ಲದೆ ಹಸಿವೆಯಿಂದ ಕಂಗೆಟ್ಟು ಬಲಗುಂದಿ ಕೊನೆಗೆ ತಮ್ಮ ಪ್ರಾಣಗಳನ್ನು ನೀಗಿಕೊಂಡು ನಾಶ ಹೊಂದಿದರು.

೧೨. ಹೀಗೆ ತನ್ನ ಪ್ರಜಾನಾಶದಿಂದುಂಟಾದ ದುಃಖವನ್ನು ನೋಡಿ ರಾಜನಾದ ಪರಿಘನು ಅಪರಿಮಿತವಾದ ವಿಷಾದದಿಂದ ಪೀಡಿತನಾಗಿ ಪ್ರಯಾಣಿಕರು ಸುಟ್ಟು ಹಾಳಾಗಿ ಹೋಗಿರುವ ಗ್ರಾಮವನ್ನು ಬಿಡುವಂತೆ, ಕೂಡಲೆ ತನ್ನ ಸಕಲ ರಾಜ್ಯವನ್ನು ತ್ಯಾಗಮಾಡಿದನು.

೧೩. ಪ್ರಜೆಗಳು ನಾಶವಾಗದಂತೆ ತಕ್ಕ ಪ್ರತಿ ಕ್ರಿಯೆಗಳನ್ನೂ ಮಾಡುವುದರಲ್ಲಿ ಸ್ವಲ್ಪವೂ ಸಾಮರ್ಥ್ಯವಿಲ್ಲದವನಾಗಿದ್ದ ಕಾರಣ, ಆ ಪರಿಘ ರಾಜನು ಬಹುಮಟ್ಟಿಗೆ ವೈರಾಗ್ಯವನ್ನು ತಾಳಿ, ರಾಜಪದವಿಗೆ ಉಚಿತವಾದ ದಿವ್ಯ ವಸ್ತ್ರಾಭರಣಾದಿ

ಪೌರಾಣಾಮುಪರಿಜ್ಞಾತೇ ಕಸ್ಮಿಂಶ್ಚಿದ್ದೂರಕಾನನೇ ।
ಸಮುವಾಸ ವಿರಕ್ತಾತ್ಮಾ ಲೋಕಾಂತರ ಇವಾಪರೇ ॥ ೧೪ ॥

ತಪಶ್ಚರನ್ಪ್ರಾಂತಮತಿರ್ದಾಂತಃ ಕಂದರಮಂದಿರೇ ।
ಸ್ವಯಂ ಶೀರ್ಣಾನಿ ಶುಷ್ಕಾಣಿ ತತ್ರ ಪರ್ಣಾನ್ಯ ಭಕ್ಷಯತ್ ॥ ೧೫ ॥

ಚಿರಂ ಹುತಾಶವಚ್ಛುಷ್ಕಪರ್ಣಾನ್ಯೇವಾಥ ಭಕ್ಷಯನ್ ।
ಪರ್ಣಾದ ಇತಿ ನಾಮಾಸೌ ಪ್ರಾಪ ಮಧ್ಯೇ ತಪಸ್ವಿನಾಂ ॥ ೧೬ ॥

ಗಳನ್ನು ಕಿತ್ತೊಗೆದು ಕೃಷ್ಣಾಜಿನ ಧಾರಿಯಾಗಿ ಕಾಡಿನಲ್ಲಿ ಜೈನ ಋಷಿಗಳಂತೆ ತಪಸ್ಸು ಮಾಡುವುದಕೋಸ್ಕರ ಹೊರಟನು.

೧೪. ಹೀಗೆ, ತನ್ನ ಅಸಾಮರ್ಥ್ಯದಿಂದಲೇ ಜುಗುಪ್ಸಿತನಾಗಿ ವೈರಾಗ್ಯವನ್ನು ತಾಳಿ ರಾಜ್ಯವನ್ನೂ ಪರಿತ್ಯಾಗಮಾಡಿದ ಬಳಿಕ, ಆ ಪರಿಘನು ಪ್ರಜಾನಾಶ ಜನ್ಯವಾದ ಪಾಪ ಪರಿಹಾರಾರ್ಥವಾಗಿ ತಪಸ್ಸು ಮಾಡುವುದಕ್ಕೋಸ್ಕರ ಎರಡನೆಯದಾದ ಪರಲೋಕವೋ ಎಂಬಂತೆ ನಾಗರಿಕರಿಗೆ ಎಷ್ಟು ಹುಡುಕಿದರೂ ಸರ್ವಥಾ ಗೋಚರವಾಗದೆಯೇ ಅತಿ ಗೋಪ್ಯವಾಗಿರುವ ಒಂದಾನೊಂದು ಬಹು ದೂರದಲ್ಲಿದ್ದ ನಿರ್ಜನವಾದ ಅರಣ್ಯದಲ್ಲಿ ವಾಸಮಾಡತೊಡಗಿದನು.

೧೫. ಪ್ರಶಾಂತ ಮನಸ್ಕನಾಗಿಯೂ ಜಿತೇಂದ್ರಿಯನಾಗಿಯೂ, ಇದ್ದು ಕೊಂಡು ಆ ಪರಿಘನು, ಅತಿ ವಿರಕ್ತನಾಗಿದ್ದ ಕಾರಣ ತನ್ನ ವಾಸಕ್ಕೆ ಯೋಗ್ಯವಾದ ಒಂದು ಪರ್ಣಶಾಲೆಯನ್ನು ಕೂಡ ರಚಿಸಿಕೊಳ್ಳದೆ ಅಲ್ಲಿಯೇ ಇದ್ದ ಯಾವುದೋ ಒಂದು ಗುಹೆಯನ್ನು ಪ್ರವೇಶಿಸಿ ಅತ್ಯುಗ್ರವಾದ ತಪಸ್ಸನ್ನು ಏಕಾಗ್ರಚಿತ್ತನಾಗಿ ಮಾಡುತ್ತಾ ವೃಕ್ಷಗಳಿಂದ ತಾನಾಗಿ ಕೆಳಕ್ಕೆ ಉದುರಿದ ಒಣಗಿದ ಎಲೆಗಳನ್ನು ಮಾತ್ರವೇ ತಿಂದು ದೇಹವನ್ನು ಧರಿಸಿಕೊಂಡಿದ್ದನು.

೧೬. ಅನಂತರವೂ ಈ ಪರಿಘನು ಬಹು ದೀರ್ಘಕಾಲ ಅಗ್ನಿಯಂತೆ ಒಣಗಿದ ಎಲೆಗಳನ್ನು ಮಾತ್ರವೇ ತಿನ್ನುತ್ತಿದ್ದನಾದ ಕಾರಣ ತಪಸ್ವಿ ಜನಗಳ ಸಮೂಹದ ಮಧ್ಯದಲ್ಲಿ ಇವನಿಗೆ ಪರ್ಣಾದನೆಂಬ ಹೆಸರೇ ಅಂದಿನಿಂದ ರೂಢವಾಯಿತು.

ತತಃ ಪ್ರಭೃತಿ ಪರ್ಣಾದನಾಮಾ ರಾಜರ್ಷಿಸತ್ತಮಃ ।
ಜಂಬೂದ್ವೀಪೇ ಬಭೂವಾಸೌ ವಿಖ್ಯಾತೋ ಮುನಿಸದ್ಮಸು ॥ ೧೭ ॥

ತತೋ ವರ್ಷ ಸಹಸ್ರೇಣ ತಪಸಾ ದಾರುಣಾತ್ಮನಾ ।
ಪ್ರಾಪದಭ್ಯಾಸವಶತೋ ಜ್ಞಾನಮಾತ್ಮ ಪ್ರಸಾದಜಂ ॥ ೧೮ ॥

ಬಭೂವ ವಿಗತದ್ವಂದ್ವೋ ನಿರಾಶಃ ಶಾಂತಮಾನಸಃ ।
ನೀರಾಗೋ ನಿರನುಕ್ರೋಶೋ ಜೀವನ್ಮುಕ್ತಃ ಪ್ರಬುದ್ಧಧೀಃ ॥ ೧೯ ॥

[ಪರ್ಣ-ಎಲೆಗಳನ್ನು-ಅದಃ= ತಿನ್ನುವವನ= ಪರ್ಣಾದಃ ಎಂಬ ಅನ್ವರ್ಥ ನಾಮಧೇಯ]

೧೭. ಪೂರ್ವದಲ್ಲಿ ಬಹು ಧರ್ಮಾತ್ಮನಾಗಿ ರಾಜರ್ಷಿಯೆನ್ನಿಸಿಕೊಂಡಿದ್ದ ಆ ಪರಿಘನು ಅಂದಿನಿಂದ ಮೊದಲುಗೊಂಡು ಪರ್ಣಾದನೆಂಬ ನಾಮಾಂತರ ದಿಂದಲೇ ಜಂಬೂದ್ವೀಪದೊಳಗೆ ಸರ್ವತ್ರ ಸಕಲ ಋಷ್ಯಾಶ್ರಮಗಳಲ್ಲಿಯೂ ಕೂಡ, ಪ್ರಖ್ಯಾತನಾದನು.

೧೮-೧೯. ಬಳಿಕ, ಹೀಗೆ ತಪಶ್ಚರ್ಯೆಯಲ್ಲಿಯೇ ಈ ಪರ್ಣಾದನಿಗೆ ಸಾವಿರಾರು ವರ್ಷಗಳು ಕಳೆದುಹೋದವು. ಆಗ ಆತನ, ಫಲಾಭಿಸಂಧಿರಹಿತ ವಾಗಿ ಕೇವಲ ಪರಮೇಶ್ವರ ಪ್ರೀತ್ಯರ್ಥವಾದ ಅತ್ಯುಗ್ರವಾದ ನಿಷ್ಕಾಮ ತಪಶ್ಚರ್ಯೆ ಯಿಂದ ಆತನಿಗೆ ಚಿತ್ತಶುದ್ಧಿಯೂ ಈಶ್ವರಾನುಗ್ರಹವೂ ಲಭಿಸಿದುವು. ಅದರಿಂದ ಆತನು ಅಧ್ಯಾತ್ಮವಿಚಾರ ಮಗ್ನನಾಗಿ, ಪುನಃ ಪುನಃ ಶ್ರವಣ, ಮನನಾದಿಗಳ ಮೂಲಕ ಶಾಸ್ತ್ರಾರ್ಥವನ್ನು ಅಭ್ಯಾಸ ಮಾಡುತ್ತಾ ಬಂದು, ಕೊನೆಯಲ್ಲಿ ಅಭ್ಯಾಸ ದಾರ್ಢ್ಯ ಸ್ವರೂಪ ಪರಮಾರ್ಥ ಜ್ಞಾನವನ್ನು ಅನುಭವಕ್ಕೆ ತಂದುಕೊಂಡು ಸಾಕ್ಷಾತ್ಕರಿಸಿದನು. ಅದು ಕಾರಣ ಆತನು ದ್ವಂದ್ವಾತೀತನಾಗಿಯೂ ಆಶಾರಹಿತ ನಾಗಿಯೂ ಶಾಂತ ಮನಸ್ಕನಾಗಿಯೂ ಇದ್ದನು. ಮತ್ತು ಆತನು ಸರ್ವ ವಿಷಯ ಗಳಲ್ಲಿಯೂ ವಿರಕ್ತನಾಗಿಯೂ ರಾಗದ್ವೇಷಾದಿ ವಿಕಾರಗಳಿಗೆ ಮೂಲವಾದ ದಯಾ ದಾಕ್ಷಿಣ್ಯಾದಿಗಳನ್ನು ತೊರೆದವನಾಗಿಯೂ ಅಂದರೆ ಸರ್ವಸಮನಾಗಿಯೂ ಆತ್ಮಜ್ಞಾನ ನಿಷ್ಠೆಯಲ್ಲಿ ಸರ್ವದಾ ಅಪ್ರಮತ್ತನಾಗಿಯೂ ಇದ್ದುಕೊಂಡು ಜೀವನ್ಮುಕ್ತನೇ ಆಗಿಬಿಟ್ಟನು.

ವಿಜಹಾರ ಯಥಾಕಾಮಂ ತ್ರಿಲೋಕೀ ಮಠಿಕಾಮಿಮಾಂ ।
ಸಿದ್ಧಸಾಧ್ಯೈಃ ಸಮಂ ಸಾಧೋ ಸಹಂಸಾಲಿ ರಿವಾಬ್ಜಿನೀಂ ॥ ೨೦ ॥

ಏಕದಾ ತಸ್ಯ ಸದನಂ ಹೇಮಚೂಡಮಹೀಪತೇಃ ।
ಪ್ರಾಪ ರತ್ನನಿರ್ಮಾಣಂ ಮೇರೋಃ ಶೃಂಗಮಿವಾಪರಂ ॥ ೨೧ ॥

ತೇ ತತ್ರ ಪ್ರಾಕ್ತನೇ ಮಿತ್ರೇ ಪೂಜಾಮಕುರುತಾಂ ಮಿಥಃ ।
ಪೂರ್ಣೌ ವಿಜ್ಞಾತ ವಿಜ್ಞೇಯೌ ಮೌಖ್ಯಗರ್ಭಾ ದ್ವಿನಿರ್ಗತೌ ॥ ೨೨ ॥

---

೨೦. ಅಯ್ಯ ಸಾಧುವಾದ ರಾಮಚಂದ್ರ, ಜೀವನ್ಮುಕ್ತನಾದ ಈ ಪರ್ಣಾದನು ಹಂಸಪಕ್ಷಿಗಳಿಂದೊಡಗೂಡಿದ ಭ್ರಮರವೂ ಸ್ವೇಚ್ಛೆಯಾಗಿ ಕಮಲ ಲತೆಗಳಲ್ಲಿ ವಿಹರಿಸುವಂತೆ ಒಂದಾನೊಂದು ಕಾಲದಲ್ಲಿ ಸಿದ್ಧ ಸಾಧ್ಯ ಮುಂತಾದ ಸಜ್ಜನರಿಂದೊಡಗೂಡಿ ತನ್ನ ಇಚ್ಛಾನುಸಾರ ನಿರಾತಂಕವಾಗಿ, ಲೋಕತ್ರಯಾತ್ಮಕವಾದ ಈ ಜಗತ್ತಿನಲ್ಲೆಲ್ಲ ವಿನೋದದಿಂದ ವಿಹಾರ ಮಾಡುತ್ತಿದ್ದನು.

೨೧. ಹೀಗೆ ವಿಹರಿಸುತ್ತಿರುವಾಗ, ಒಂದಾನೊಂದು ಸಮಯದಲ್ಲಿ ಆ ಪರ್ಣಾದನು ಯಾದೃಚ್ಛಿಕವಾಗಿ ಹೇಮ ಜಟಾಧೀಶ್ವರನಾದ ಆ ಸುರಘು ರಾಜನ ನಾನಾ ರತ್ನವಿನಿರ್ಮಿತವಾಗಿ ವಿರಾಜಿಸುತ್ತಿರುವ ಮೇರು ಪರ್ವತದ ಬೇರೊಂದು ಶಿಖರವೋ ಎನ್ನುವಂತಿದ್ದ ಅರಮನೆಯನ್ನು ಹೊಕ್ಕನು.

೨೨. ಅಲ್ಲಿ ಆಗ ಆ ಹಳೆಯ ಸ್ನೇಹಿತರಿಬ್ಬರೂ ಪರಮಾನಂದ ಭರಿತರಾಗಿ ಪರಸ್ಪರ ಅಭ್ಯುತ್ಥಾನ, ಆಸನ ಪ್ರದಾನ, ಕುಶಲ ಪ್ರಶ್ನ ಮುಂತಾದ ಉಪಚಾರಗಳಿಂದ ಯಥೋಚಿತವಾಗಿ ಒಬ್ಬರನೊಬ್ಬರು ಸತ್ಕರಿಸಿದರು. ಅವರಿಬ್ಬರೂ ಪರಿಪೂರ್ಣರೂ (ಆಪ್ತ ಸರ್ವಕಾಮರು) ಪರಮಾರ್ಥ ಆತ್ಮ ತತ್ತ್ವವನ್ನು ಅನುಭವದಿಂದ ಸಾಕ್ಷಾತ್ಕರಿಸಿದವರೂ ಆಗಿ ಸಂಸಾರಬಂಧದಿಂದ ತಪ್ಪಿಸಿಕೊಂಡ ಜೀವನ್ಮುಕ್ತರೇ ಆಗಿದ್ದರು.

ಅಹೋ ನು ಬತ ಕಲ್ಯಾಣೈಃ ಫಲಿತಂ ಮಮ ಪಾವನೈಃ ।
ಸಂಪ್ರಾಪ್ತವಾನಹಂ ಯತ್ವಾಮಿತ್ಯನ್ಯೋನ್ಯಮೂಚತುಃ ॥ ೨೩ ॥

ಆಲಿಂಗಿತಶರೀರೌ ತಾವನ್ಯೋನ್ಯಾನಂದಿತಾಕೃತೀ ।
ಏಕಾಸನೇ ವಿವಿಶತು ಶ್ಚಂದ್ರಾರ್ಕಾವಿವ ಭೂಧರೇ ॥ ೨೪ ॥

ಪರಿಘ ಉವಾಚ :—
ಪರಮಾನಂದಮಾಯಾತಂ ಚೇತಸ್ತ್ವದ್ದರ್ಶನೇನ ಮೇ ।
ಇಂದುಬಿಂಬ ಇವೋನ್ಮಗ್ನಂ ಮನಃ ಶೀತಲತಾಂ ಗತಂ ॥ ೨೫ ॥

೨೩-೨೪. "ಆಹಾ, ಇದೇನು ? ಪರಮಾಶ್ಚರ್ಯವೇ ಸರಿ. ನನ್ನ ಅದೃಷ್ಟ ವಶದಿಂದ ಈಗ ನನಗೆ ತಮ್ಮ ದರ್ಶನ ಲಾಭವಾಯಿತು. ತಾವು ನನಗೆ ಈಗ ದೊರೆತುದು ಬಹಳ ಸಂತೋಷಕರವಾಗಿದೆ. ಆದರಿಂದ ಅನೇಕ ಜನ್ಮಾಂತರಾರ್ಜಿತ ಗಳಾದ ನನ್ನ ಪೂರ್ವ ಪುಣ್ಯಗಳು ಈಗಲೇ ಫಲಿಸಿದವು ಎಂದು ಭಾವಿಸಿರುವೆನು" ಇವೇ ಮೊದಲಾದ ರೀತಿಯಲ್ಲಿ ಒಬ್ಬರಿಗೊಬ್ಬರು ಆದರದಿಂದ ಉಪಚಾರೋಕ್ತಿ ಗಳನ್ನು ಹೇಳುತ್ತ ಬಳಿಕ, ಒಬ್ಬರನ್ನೊಬ್ಬರು ತಮ್ಮತಮ್ಮ ದೇಹಗಳಿಂದ ಆಲಿಂಗನ ಮಾಡಿಕೊಂಡು ಪರಮಾನಂದ ಭರಿತರಾಗಿ ಚಂದ್ರ ಸೂರ್ಯರು ಪರ್ವತದ ಮೇಲೆ ಕುಳಿತು ವಿಶ್ರಮಿಸಿಕೊಳ್ಳುತ್ತಿರುವರೋ ಎನ್ನುವಂತೆ ಅವರಿಬ್ಬರೂ ಒಂದೇ ಆಸನದ ಮೇಲೆ ಕುಳಿತು ವಿಶ್ರಮಿಸಿಕೊಳ್ಳುತ್ತಲೂ ತಮ್ಮ ತಮ್ಮ ಪ್ರೇಮಾತಿಶಯವನ್ನೂ ನಗುಮೊಗದಿಂದ ಸೂಚಿಸುತ್ತಲೂ ಸಂಲಪಿಸುತ್ತಿದ್ದರು.

ಪರಿಘನು (ಪರ್ಣಾದಮುನಿ) ಹೇಳಿದನು.

೨೫. ಎಲೈ ಮಿತ್ರರತ್ನವಾದ ಸುರಘುವೇ, ನಿನ್ನ ಸಂದರ್ಶನದಿಂದ ನನ್ನ ಚೇತವು ಪರಮಾನಂದವನ್ನು ಪಡೆಯಿತು. ಮತ್ತು ನನ್ನ ಮನಸ್ಸಾದರೋ ಚಂದ್ರ ಮಂಡಲದೊಳಗೆ ಮುಳುಗಿ ಎದ್ದಂತೆ ಸಕಲ ವಿಧ ತಾಪೋಪಶಾಂತಿಯನ್ನು ಪಡೆದು ಅತ್ಯಂತ ಶೀತಲವಾಗಿರುವುದು. (ಮೂಲ ಶ್ಲೋಕದಲ್ಲಿ ಚೇತಃ ಮತ್ತು ಮನಂ ಎಂಬ ಎರಡು ಭಿನ್ನ ಪದಗಳನ್ನೂ ಒಂದೇ ಅರ್ಥದಲ್ಲಿ ಪ್ರಯೋಗಿಸಿರುವು ದಕ್ಕೆ ಹೃದಯದಲ್ಲಿ ಚಿತ್ ಶಕ್ತಿಯು ಪ್ರಧಾನವಾಗಿರುವಾಗ ಆನಂದ ರಸಾ ವಿರ್ಭಾವ ವಾಗುವುದು. ಮನನ ಶಕ್ತಿ ಪ್ರಧಾನವಾಗಿರುವಾಗ ತಾಪೋಪ ಶಾಂತಿಯಾಗು ವುದು ಎಂಬ ಕಾರಣದಿಂದ ಒಂದೊಂದಕ್ಕೂ ವೈಶೇಷ್ಯವನ್ನೂ ಸೂಚಿಸುವುದೇ ಮುಖ್ಯ ತಾತ್ಪರ್ಯವೆಂದು ತಾತ್ಪರ್ಯ ಪ್ರಕಾಶ ಟೀಕಾಕಾರರ ಅಭಿಪ್ರಾಯ.)

ಅಕೃತ್ರಿಮಸುಖಂ ಪ್ರೇಮ ವಿಯೋಗೇ ಶತಶಾಖತಃ ।
ಪ್ರಯಾತಿ ಪಲ್ವಲತಟೇಽಚ್ಛಿನ್ನಮೂಲ ಇವ ದ್ರುಮಃ ॥ ೨೬ ॥

ವಿಶ್ರಬ್ಧಾಸ್ತಾನ್ಕಥಾಲಾಂಪಾಸ್ತಾ ಲೀಲಾಸ್ತಚ್ಚ ಚೇಷ್ಟಿತಂ ।
ಸಂಸ್ಮೃತ್ಯ ಪ್ರಾಕ್ತನಂ ಸಾಧೋ ಹೃಷ್ಯಾಮಿ ಚ ಪುನಃ ಪುನಃ ॥ ೨೭ ॥

ಜ್ಞಾನಮೇತನ್ಮಯಾ ಪ್ರಾಪ್ತಂ ತ್ವಯಾ ಜ್ಞಾತಂ ಯಥಾಽನಘ ।
ಮಾಂಡವ್ಯಸ್ಯ ಪ್ರಸಾದೇನ ಪರಮಾತ್ಮ ಪ್ರಸಾದಜಂ ॥ ೨೮ ॥

---

೨೬. ನಿಷ್ಕಪಟವಾದ ಸ್ನೇಹವು ಸಹಜವಾಗಿ ಅತ್ಯಂತ ಸುಖಾಹವಾದುದು. ಸ್ನೇಹಿತರು ಒಬ್ಬರನ್ನೊಬ್ಬರು ಅಗಲಿರುವ ಕಾಲದಲ್ಲಿ ಆ ಸ್ನೇಹವು ಮೇಲಣ ಕೊಂಬೆಗಳನ್ನೆಲ್ಲ ಕಡಿದು ಹಾಕಿಬಿಟ್ಟು ಬೇರುಗಳನ್ನೂ ಕತ್ತರಿಸದೆ ಹಾಗೆಯೇ ಬಿಟ್ಟಿರುವ, ಏರಿಯ ದಡದ ಮೇಲೆ ಬೆಳೆದಿರುವ ಒಂದು ಮರವು ದಿನಕ್ರಮೇಣ ನೂರಾರು ಶಾಖೆಗಳಾಗಿ ಕವಲೊಡೆದು ಬಲು ಸೊಂಪಾಗಿ ಬಹುದೂರ ಹರಡಿಕೊಳ್ಳುವಂತೆ, ನೂರಾರು ಶಾಖೋಪಶಾಖೆಗಳಾಗಿ ಬಹುದೂರ ವ್ಯಾಪಿಸಿಕೊಂಡು ದೊಡ್ಡದಾಗುವುದು.

೨೭. ಅಯ್ಯ ಸಾಧುವೇ, ಪೂರ್ವಕಾಲದಲ್ಲಿ ನಾವಿಬ್ಬರೂ ಒಟ್ಟಿಗೆ ಜೊತೆಯಲ್ಲಿದ್ದಾಗ ಅನುಭವಿಸಿದ ಅಂತಹ ವಿಶ್ವಾಸಪೂರ್ಣಗಳಾದ ವಿವಿಧ ಕಥಾಲಾಪಗಳನ್ನೂ ಆ ಲೀಲೆಗಳನ್ನೂ ಆ ನಾನಾ ವ್ಯವಹಾರಗಳನ್ನೂ ಪದೇ ಪದೇ ಮನಸ್ಸಿನಲ್ಲಿ ಜ್ಞಾಪಕಕ್ಕೆ ತಂದುಕೊಂಡು ಆಗಾಗಲೆಲ್ಲ ಬಹಳವಾಗಿ ಸಂತೋಷಪಡುವೆನು.

೨೮. ಅಯ್ಯ ಅನಘನಾದ ಸ್ನೇಹಿತನೇ, ನೀನು ಮಾಂಡವ್ಯ ಮಹರ್ಷಿಗಳ ಅನುಗ್ರಹದಿಂದ ಹೇಗೆ ಆತ್ಮತತ್ತ್ವಜ್ಞಾನವನ್ನು ಸಾಕ್ಷಾತ್ಕರಿಸಿದೆಯೋ ಹಾಗೆ ನಾನೂ ತಪಸ್ಸಿನಿಂದ ಪರಮೇಶ್ವರನನ್ನು ಮೆಚ್ಚಿಸಿ ಆ ದೇವದೇವನ ಅನುಗ್ರಹದಿಂದ, ಆತ್ಮತತ್ತ್ವಸ್ವರೂಪ ಜ್ಞಾನವನ್ನು ಪಡೆದೆನು.

ಅದ್ಯ ಕಚ್ಚಿದದುಃಖಸ್ತ್ವಂ ಕಚ್ಚಿದ್ವಿಶ್ರಾಂತವಾನಸಿ ।
ಪರಮೇ ಕಾರಣೇ ಮೇರಾವಿವ ಭೂಮಂಡಲಾಧಿಪಃ ॥ ೨೯ ॥

ಕಚ್ಚಿತ್ಪರಮಕಲ್ಯಾಣ ಆತ್ಮಾರಾಮತಯಾ ತವ ।
ಪ್ರಸಾದೋ ಜಾಯತೇ ಚಿತ್ತೇ ಶರದೀವ ಸರೋಂಭಸಿ ॥ ೩೦ ॥

ಕಚ್ಚಿತ್ಕರೋಷಿ ಸಮಯಾ ಸುಪ್ರಸನ್ನ ಗಭೀರಯಾ ।
ದೃಷ್ಟ್ಯಾ ಸುಭಗ ಕಾರ್ಯಾಣಿ ಕಾರ್ಯಾಣ್ಯೇವ ನರಾಧಿಪ ॥ ೩೧ ॥

ನಿರಾಧಿವ್ಯಾಧಯೋ ಧೀರಾಃ ಕಚ್ಚಿತ್ಸಂಪನ್ನಶಾಲಯಃ ।
ಜನತಾಸ್ತವ ದೇಶೇಷು ತಿಷ್ಠಂತಿ ವಿಗತಜ್ವರಂ ॥ ೩೨ ॥

---

೨೯. ಅಯ್ಯ ಮಿತ್ರರತ್ನವೇ, ಈಗ ನೀನು ಅದುಃಖನು ಆಗಿರುವೆಯೇನು ? ಭೂಮಂಡಲಾಧಿಪತಿಯಾದ ಚಕ್ರವರ್ತಿಯು ಮೇರುಪರ್ವತ ತುಲ್ಯವಾದ ತನ್ನ ಅರಮನೆಯಲ್ಲಿ ವಿಶ್ರಾಂತನಾಗಿರುವಂತೆ ನೀನು ಈಗ, ಸರ್ವ ಜಗದಧಿಷ್ಠಾನ ಭೂತವಾಗಿ ಪರಮ ಕಾರಣನೆನ್ನಿಸಿರುವ ಪರಬ್ರಹ್ಮನಲ್ಲಿ ಸ್ವಸ್ವರೂಪದಿಂದ ವಿಶ್ರಮಿಸಿ ಕೊಳ್ಳುತ್ತಾ ಸದಾ ಸ್ವಸ್ಥನಾಗಿರುವೆಯಾ ?

೩೦. ಪರಮಕಲ್ಯಾಣ ಪುರುಷನೇ, ನೀನು ಸರ್ವದಾ ಆತ್ಮಾರಾಮನಾಗಿ ರುವುದರಿಂದ ಶರತ್ಕಾಲದಲ್ಲಿ ಸರೋವರಗಳ ನೀರಿನಲ್ಲಿ ಪ್ರಸನ್ನತೆಯು ಮೂಡು ವಂತೆ ನಿನ್ನ ಮನಸ್ಸಿನೊಳಗೆ ಪ್ರಸಾದವು ಮೂಡಿರುವುದೇ ಏನು ?

೩೧. ಎಲೈ ಭಾಗ್ಯಶಾಲಿಯಾದ ರಾಜನೇ, ಶತ್ರುಮಿತ್ರರೆಂಬ ಭೇದವಿಲ್ಲದೆ ಎಲ್ಲ ಪ್ರಜೆಗಳಲ್ಲಿಯೂ ಒಂದೇ ಸಮನಾದ-ರಾಗದ್ವೇಷಾದಿ ದೋಷರಹಿತವಾಗಿ ಅತ್ಯಂತ ಪ್ರಸನ್ನವೂ ಗಭೀರವೂ ಆದ ದೃಷ್ಟಿಯನ್ನಾಶ್ರಯಿಸಿ ಸರ್ವಜನಹಿತಕಾರಿ ಗಳಾಗಿ ಅತ್ಯವಶ್ಯ ಕರ್ತವ್ಯಗಳಾಗಿ ಸಂಪ್ರಾಪ್ತವಾದ ಕಾರ್ಯಗಳನ್ನು ಮಾತ್ರ ಅಭಿಮಾನರಹಿತನಾಗಿ ಮಾಡುತ್ತಿರುವೆಯೇನು ?

೩೨. ನಿನ್ನ ಆಳ್ವಿಕೆಗೆ ಒಳಪಟ್ಟ ದೇಶಗಳಲ್ಲಿ-ಪ್ರಜಾ ಸಮುದಾಯಗಳೆಲ್ಲವೂ ಆಧಿವ್ಯಾಧಿಗಳಿಂದ ಪೀಡಿತರಾಗದೆಯೂ ಧೀರರಾಗಿಯೂ ಧನ, ಕನಕ, ವಸ್ತು,

ಕಚ್ಚಿದುದ್ಯಾಮಃ ಫಲಿನೀ ಫಲಿನೀವ ಫಲಾನತಾ ।
ಧರಾ ತವ ಫಲಾಪೂರ್ಯೈರ್ಭೃಶಂ ಧಾರಯತಿ ಪ್ರಜಾಃ ॥ ೩೩ ॥

ಕಚ್ಚಿತ್ತವ ದಿಗಂತೇಷು ಚಂದ್ರಸ್ಯೇವಾಂಶು ಪಂಜರಂ ।
ತುಷಾರನಿಕರಾಕಾರಂ ಪ್ರಸೃತಂ ಪಾವನಂ ಯಶಃ ॥ ೩೪ ॥

ಕಚ್ಚಿದ್ಗುಣಗಣೈರೇತಾ ದಿಶೋ ನಿರ್ವಿವರೀಕೃತಾಃ ।
ತ್ವಯಾ ಸರೋಂಭಸಾಽಬಾಹ್ಯಾ ವಿಸಾನಾವಿವ ಭೂಮಯಃ ॥ ೩೫ ॥

ಕಚ್ಚಿತ್ಕಲಮಕೇದಾರಕೋಣಸ್ಥಾನೇಷು ಹೃಷ್ಯತೀಃ ।
ಪ್ರತಿಗ್ರಾಮಂ ಕುಮಾರ್ಯಸ್ತೇ ಗಾಯಂತ್ಯಾನಂದನಂ ಯಶಃ ॥ ೩೬ ॥

ಪಾಹನಾದಿ ಸಕಲ ವಿಧ ಸಂಪತ್ತುಗಳಿಂದ ಕೂಡಿ ಮೆರೆಯುವವರಾಗಿಯೂ ಸಂತಾಪ ರಹಿತರಾಗಿಯೂ ನೆಮ್ಮದಿಯಾಗಿಯೂ ಇರುವರೇನು ?

೩೩. ಉತ್ತಮರಾಜನಾದ ನೀನು ಆಳುತ್ತಿರುವ ಭೂಮಿಯು ಉತ್ಕೃಷ್ಟಗಳಾದ ಸಕಲ ವಿಧ ಸಸ್ಯಾದಿ ನಾನಾ ಫಲಗಳ ಸಮೃದ್ಧಿಯಿಂದ ಸಂಪೂರ್ಣವಾಗಿ ಕಲ್ಪಲತೆಯಂತೆ ಫಲಭಾರದಿಂದ ಕುಗ್ಗಿಕೊಂಡು ನಿನ್ನ ಪ್ರಜೆಗಳಿಗೆಲ್ಲಾ ಆಯಾಕಾಲಗಳಲ್ಲಿ ಅವರವರು ಅಪೇಕ್ಷಿಸುವ ಸಕಲ ವಸ್ತುಗಳನ್ನೂ ಯಥೇಚ್ಛವಾಗಿ ಒದಗಿಸುತ್ತಾ-ನಿರತಿಶಯವಾಗಿ ಪ್ರಜೆಗಳನ್ನು ಪೋಷಿಸುತ್ತಿರುವುದೇನು ?

೩೪. ಸಕಲದಿಗಂತಗಳಲ್ಲಿಯೂ ಚಂದ್ರನ ಕಿರಣಾವಳಿಗಳು ಪ್ರಸರಿಸಿಕೊಂಡು ಬೆಳಗುತ್ತಿರುವಂತೆ-ಅತಿ ಪವಿತ್ರವಾದ ನಿನ್ನ ಕೀರ್ತಿಯು ಹಿಮದ ರಾಶಿಯಂತೆ ಬಹು ಶುಭ್ರವಾಗಿದ್ದುಕೊಂಡು-ಎಲ್ಲ ದಿಗಂತಗಳಲ್ಲಿಯೂ ವ್ಯಾಪಿಸಿ, ವಿರಾಜಿಸುತ್ತಿರುವುದೇನು ?

೩೫. ಒಂದು ಕೆರೆಯೊಳಗಿರುವ ನೀರು ತನ್ನೊಳಗೇ ಇರುವ ತಾವರೆ ಬಳ್ಳಿಗಳು ಬೆಳೆದಿರುವ ಭೂಮಿಗಳನ್ನೆಲ್ಲ ಸ್ವಲ್ಪವೂ ಇಂಬುಗೊಡದೆ ತುಂಬಿಕೊಳ್ಳುವಂತೆ ನಿನ್ನ ಶೌರ್ಯೌದಾರ್ಯಾದಿ ಸದ್ಗುಣಗಳ ಸಮುದಾಯಗಳು ದಶ ದಿಕ್ಕುಗಳಲ್ಲಿಯೂ ನೀರಂಧ್ರವಾಗಿ ತುಂಬಿಕೊಂಡಿರುವುವೇನು ?

೩೬. ನಿನ್ನ ದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ-ಬತ್ತದ ಗದ್ದೆಗಳ

ಕುಶಲಂ ತವ ಧಾನ್ಯೇಷು ಧನೇಷು ವಿಭವೇಷು ಚ ।
ಭೃತ್ಯೇಷು ಚ ಕಲತ್ರೇಷು ಪುತ್ರೇಷು ನಗರೇಷು ಚ ॥ ೩೭ ॥

ಆಧಿವ್ಯಾಧಿ ವಿಹೀನೇಯಂ ಕಚ್ಚಿತ್ಕಾಯಲತಾ ತವ ।
ಫಲಂ ಫಲತಿ ಪುಣ್ಯಾಖ್ಯಂ ಯದಿಹಾಮುತ್ರ ಚೋದಿತಂ ॥ ೩೮ ॥

ಆಪಾತರ ಮಣೀಯೇಷು ವರ್ತೇತಾತ್ಯಂತವೈರಿಷು ।
ಕಚ್ಚಿದ್ವಿಷಯ ಸರ್ಪೇಷು ಸವಿರಾಗಂ ಮನಸ್ತವ ॥ ೩೯ ॥

ಸಮೀಪದಲ್ಲಿರುವ ಚಚ್ಚೌಕವ ದ ಪ್ರದೇಶಗಳಲ್ಲಿ ಕುಳಿತು ಆನಂದ ಪರವಶರಾಗಿರುವ ಹೆಣ್ಣು ಮಕ್ಕಳು ಸಕಲ ಪ್ರಜೆಗಳಿಗೂ ಆನಂದದಾಯಕವಾದ-ನಿನ್ನ ಕೀರ್ತಿಯನ್ನು ವಿನೋದವಾಗಿ ಹಾಡುತ್ತಲಿರುವರೇನು ?

೩೭. ನಿನಗೆ, ಧಾನ್ಯಗಳಲ್ಲಿಯೂ, ಧನಗಳಲ್ಲಿಯೂ ಭೃತ್ಯಾದಿ ಪರಿವಾರದ ವೈಭವಗಳಲ್ಲಿಯೂ, ರಾಣಿವಾಸದ ಸ್ತ್ರೀಯರಲ್ಲಿಯೂ, ಪುತ್ರರಲ್ಲಿಯೂ, ನಗರ ಗಳಲ್ಲಿಯೂ, ಹೀಗೆ ಸರ್ವತ್ರವೂ ಕುಶಲವೇ ಏನು ?

೩೮. ನಿನ್ನ ಈ ದೇಹವೆಂಬ ಲತೆಯು ಆಧಿವ್ಯಾಧಿಗಳಿಂದ ನೊಂದು ಕೃಶ ವಾಗದೆ (ಅಂದರೆ ಮಾನಸಿಕ ಮತ್ತು ಶರೀರಕರೋಗಗಳೊಂದೂ ಇಲ್ಲದೆ) ಆರೋಗ್ಯ ದಿಂದಿದ್ದುಕೊಂಡು ಐಹಿಕಾಮುಷ್ಮಿಕ ಫಲಗಳಾಗಿ ಶಾಸ್ತ್ರವಿಹಿತವಾದ ಪುಣ್ಯವೆಂಬ ಫಲವನ್ನೂ ಫಲಿಸಲು ಯೋಗ್ಯವಾಗಿರುವುದೇನು ?

೩೯. ಆಪಾತತಃ ಅತ್ಯಂತ ರಮಣೀಯಗಳಾದರೂ ಸಹಜವಾಗಿಯೇ ಪರಮ ಶತ್ರುಗಳಾಗಿ ನಿನ್ನ ಸರ್ವನಾಶಕ್ಕಾಗಿ ಸಮಯ ನಿರೀಕ್ಷಣೆ ಮಾಡುತ್ತಿರುವ ಶಬ್ದಾದಿ ವಿಷಯಗಳೆಂಬ ಕೃಷ್ಣಸರ್ಪಗಳ ವಿಚಾರದಲ್ಲಿ ನಿನ್ನ ಮನಸ್ಸು ಉತ್ಕಟವಾದ ವೈರಾಗ್ಯ ವೆಂಬ ಗಾರುಡ ಮಣಿಯನ್ನೂ ಧರಿಸಿಕೊಂಡು ಬಹು ಜಾಗರೂಕವಾಗಿ ವರ್ತಿಸುತ್ತಿ ರುವುದೇನು ?

ಅಹೋ ಬತ ಚಿರಂ ಕಾಲಮಾವಾಂ ವಿಶ್ಲೇಷಮಾಗತೌ ।
ಕಾಲೇನ ಶ್ಲೇಷಿತೋ ಭೂಯೋ ವಸಂತಾದ್ರಿ ತಟಾವಿವ ॥ ೪೦ ॥

ನ ತಾ ಜಗತಿ ವಿದ್ಯಂತೇ ಸುಖದುಃಖದಶಾಃ ಸಖೇ ।
ಜೀವದ್ಭಿರ್ಯಾ ನ ದೃಶ್ಯಂತೇ ಸಂಯೋಗಜ ವಿಯೋಗಜಾಃ ॥ ೪೧ ॥

ತಥೈತಾಸ್ವತಿ ದೀರ್ಘಾಸು ದಶಾಸ್ವನ್ಯತ್ವಮಾಗತಾಃ ।
ಭೂಯೋ ವಯಮಪಿ ಶ್ಲಿಷ್ಟಾಶ್ಚಿತ್ರೋ ಹಿ ನಿಯತೇರ್ವಿಧಿಃ ॥ ೪೨ ॥

---

೪೦. ಅಹಹ, ಇದೀಗ ಪರಮಾಶ್ಚರ್ಯವು. ಬಹುಕಾಲದಿಂದ ನಾವಿಬ್ಬರೂ ಪರಸ್ಪರ ಸಮಾಗಮವೇ ಇಲ್ಲದೆ ವಿಯುಕ್ತರಾಗಿದ್ದೆವು. ಈಗ ಪುನಃ-ಬಹು ದೀರ್ಘ ಕಾಲಾನಂತರ ದೈವ ವಶದಿಂದ-ವಸಂತ ಋತುವೂ ಪರ್ವತ ಪ್ರಾಂತ ಪ್ರದೇಶವೂ ಒಟ್ಟಿಗೆ ಸೇರುವಂತೆ ನಾವಿಬ್ಬರೂ ಇಲ್ಲಿ ಒಟ್ಟಿಗೆ ಕಲೆತಿರುವೆವು.

೪೧. ಅಯ್ಯ ಮಿತ್ರನೇ, ಈ ಪ್ರಪಂಚದಲ್ಲಿ ಬಂಧು ಮಿತ್ರಾದಿ ಇಷ್ಟ ಜನರ ಸಂಯೋಗದಿಂದ ಸುಖ ಸಂತೋಷಗಳೂ ಅವರ ವಿಯೋಗದಿಂದ ದುಃಖ ಸಂತಾಪ ಗಳೂ ಉದ್ಭವಿಸುವುವು. ಹಾಗೆಯೇ ಶತ್ರುಗಳು ಮುಂತಾದ ಅನಿಷ್ಟ ಜನರ ಸಂಯೋಗದಿಂದ ದುಃಖ ಸಂತಾಪಗಳೂ ಅವರ ವಿಯೋಗದಿಂದ ಸುಖ ಸಂತೋಷ ಗಳೂ ಉಂಟಾಗುವುದು ಸಹಜ. ತಮ್ಮ ಜೀವಿತ ಕಾಲದಲ್ಲಿ ಇಂತಹ ಸುಖ ದುಃಖ ದಶೆಗಳನ್ನು ಸಕಲ ಪ್ರಾಣಿಗಳೂ ಕಂಡು ಅನುಭವಿಸಿಯೇ ಇರುವರು. ಹಾಗೆ ಪ್ರಾಣಿಗಳ ಅನುಭವಕ್ಕೆ ಬಾರದ ಸುಖದುಃಖ ದಶೆಗಳಾವುವೂ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ.

೪೨. ಅದೇ ಪ್ರಕಾರದಲ್ಲಿ ನಾವುಗಳೂ ಕೂಡ ಅತಿ ದೀರ್ಘಗಳಾದ ಸುಖ ದುಃಖ ದಶೆಗಳಲ್ಲಿ ವಿಯೋಗ ಜನ್ಯವಾದ ದುಃಖವನ್ನೂ ಅನುಭವಿಸಿದೆವು. ಈಗ ಮತ್ತೆ ಒಟ್ಟಿಗೆ ಸೇರಿಕೊಂಡೆವು. ಅಹಾ! ನಿಜವಾಗಿಯೂ ಪ್ರಾಣಿಕರ್ಮಾನು ಸಾರಿ ಯಾದ ಈಶ್ವರ ಸಂಕಲ್ಪದ ವಿಲಾಸವು ಎಷ್ಟು ಅದ್ಭುತವಾದು ! ! !

ಸುರಘುರುವಾಚ :—

ಭಗವನ್ನಿಯತೇರಸ್ಯಾ ಗತಿಂ ಸರ್ಪಗತೇರಿವ ।
ದೈವಿಕ್ಯಾಃ ಕೋ ಹಿ ಜಾನಾತಿ ಗಂಭೀರಾಂ ವಿಸ್ಮಯಪ್ರದಾಂ ॥ ೪೩ ॥

ತ್ವಮಹಂ ಚ ವ್ಯಪೋಹ್ಯೇತಿ ದೂರೇ ದೂರದಶಾಸು ಚ ।
ಅದ್ಯ ಸಂಘಟಿತೌ ಭೂಯಃ ಕಿಮಸಾಧ್ಯಮಹೋ ವಿಧೇಃ ॥ ೪೪ ॥

ವಯಂ ತ್ವದ್ಯ ಮಹಾಸತ್ವ ಭೃಶಂ ಕುಶಲಿನಃ ಸ್ಥಿತಾಃ ।
ತ್ವದಾಗಮನಪುಣ್ಯೇನ ಪರಾಂ ಪಾವನತಾಂ ಗತಾಃ ॥ ೪೫ ॥

ಪಶ್ಯ ತ್ವದಾಗಮಕ್ಷೀಣಪಾಪಾನಾಂ ಪುಣ್ಯಪಾದಪೈಃ ।
ತಥಾ ಫಲಿತಮಸ್ಮಾಕಂ ನ ಯಥಾ ವಯಮಾಕುಲಾಃ ॥ ೪೬ ॥

ಸುರಘುವು (ಪರ್ಣಾದನಿಗೆ) ಹೇಳಿದನು.

೪೩. ಭಗವಂತನಂತೆ ಷಡ್ಗುಣೈಶ್ವರ್ಯ ಸಂಪನ್ನನೂ ಮಹಾತ್ಮನೂ ಆದ ಮಿತ್ರವರೇಣ್ಯ, ಈ ಈಶ್ವರೇಚ್ಛಾ ರೂಪವಾದ ದೈವದ ಗತಿಯು ಸರ್ಪದ ಗತಿಯಂತೆ ಅತಿ ದುರ್ಜ್ಞೇಯವಾದುದು. ಗಂಭೀರವಾದುದು. ಇಂತಹ ನಿಯತಿಯ ಗತಿಯನ್ನೂ ಅರಿಯ ಬಲ್ಲವನು ಯಾವನುಇರುವನು ?

೪೪. ನೀನೂ ನಾನೂ ಇದುವರೆವಿಗೆ ಈ ನಿಯತಿಗೊಳಗಾಗಿಯೇ ಅತ್ಯಂತ ದೂರ ದೇಶಗಳಲ್ಲಿ ಅತಿ ದೀರ್ಘಕಾಲ ವಿಯೋಗ ಜನ್ಯವಾದ ದುಃಖ ದಶೆಯಲ್ಲಿ ಇದ್ದೆವು. ಈಗ ಪುನಃ ಅದೇ ನಿಯತಿಯು ನಮ್ಮಿಬ್ಬರನ್ನೂ ಇಲ್ಲಿ ಒಟ್ಟುಗೂಡಿಸಿರುವುದು. ವಿಧಿ ವಿಲಾಸವನ್ನೂ ಎಷ್ಟು ಹೇಳಿದರೂ ಸಾಲದು. ವಿಧಿಗೆ ಅಸಾಧ್ಯವಾದುದು ಯಾವುದಿರುವುದು. ಇದರಲ್ಲಿ ಆಶ್ಚರ್ಯವೇನು ?

೪೫. ಮಹಾ ಸತ್ತ್ವಗುಣ ಸಂಪನ್ನನಾದ ಪರ್ಣಾದ ಮುನಿಯೇ, ಈಗ ನಾವಾದರೋ ಸಂಪೂರ್ಣವಾಗಿ ಸಕಲ ವಿಚಾರಗಳಲ್ಲಿಯೂ ಸುಕ್ಷೇಮದಿಂದ ಸುರಕ್ಷಿತರಾಗಿರುವೆವು. ಮಹಾತ್ಮರಾದ ತಾವು ಇಲ್ಲಿಗೆ ದಯಮಾಡಿಸಿ ತಮ್ಮ ದರ್ಶನಲಾಭವನ್ನೂ ನಮಗೆ ಕೊಟ್ಟದ್ಧರಿಂದ ನಾವೂ ಪುಣ್ಯ ಭಾಗಿಗಳಾದೆವು. ಮತ್ತು ವಶೇಷವಾಗಿ ಪವಿತ್ರರಾದೆವು.

೪೬. ಮಹಾನುಭಾವ, ತಮ್ಮ ಬರುವಿಕೆಯಿಂದ ನಮ್ಮ ಪಾಪಗಳೆಲ್ಲವೂ

ಸರ್ವಾಃ ಸಂಪತ್ತಯೋಽಸ್ಮಾಕಂ ರಾಜರ್ಷೇ ಸಂಸ್ಥಿತಾಃ ಪುರೇ ।
ಭವದಾಗಮನೇನಾದ್ಯ ಪ್ರಯಾತಾಃ ಶತಶಾಖತಾಂ ॥ ೪೭ ॥

ವಿಕಿರತಿ ಪರಿತೋ ರಸಾಯನಾನಾ
ಮಿವ ನಿಕರಂ ಮಧುರಂ ಮಹಾನುಭಾವ ।
ತವ ವಚನಮವೇಕ್ಷಣಂ ಚ ಪುಣ್ಯಂ
ಪರಮಪದಪ್ರತಿಮೋ ಹಿ ಸಾಧುಸಂಗಃ ॥ ೪೮ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಸುರಘು ಪರಿಘ ಸಮಾಗಮೋ" ನಾಮ ಏಕಷಷ್ಟಿತಮಃ ಸರ್ಗಃ

ತೊಲಗಿಹೋದವು. ಪವಿತ್ರರಾದೆವು-ತಮ್ಮ ಸಂದರ್ಶನದಿಂದ ನಮಗೆ ಪುಣ್ಯವು ಲಭಿಸಿತು. ಇದೋ ಪರಾಂಬರಿಸಿರಿ. ಈಗ ನಮ್ಮ ಪುಣ್ಯಗಳೆಂಬ ಫಲ ವೃಕ್ಷಗಳು-ನಮ್ಮ ಮನೋವ್ಯಾಕುಲತೆಗಳೆಲ್ಲಾ ನಿಶ್ಶೇಷವಾಗಿ ಕಳೆದುಹೋಗಿ ನಾವುಗಳು ಕೃತ ಕೃತ್ಯರಾಗುವ ತೆರದಲ್ಲಿ-ಚಿತ್ತ ಸಮಾಧಾನವೆಂಬ ಫಲಗಳನ್ನು ಕೊಡುತ್ತಿರುವುವು.

೪೭. ಸ್ವಾಮಿ, ರಾಜರ್ಷಿಗಳೇ, ನಮ್ಮ ನಗರದಲ್ಲಿ ಸಕಲ ವಿಧ ಸಂಪತ್ತುಗಳೂ ಸಮೃದ್ಧವಾಗಿ ಸರ್ವದಾ ನೆಲೆಸಿರುವುವು. ಈಗಲಾದರೋ-ತಮ್ಮ ಆಗಮನದಿಂದ ಸಾವಿರಾರು ಶಾಖೋಪಶಾಖೆಗಳಾಗಿ ಪ್ರಸರಿಸಿ ವೃದ್ಧಿ ಹೊಂದಿರುವುವು.

೪೮. ಮಹಾನುಭಾವ, ತಮ್ಮ ಸೂಕ್ತಿಯೂ ದರ್ಶನವೂ—ಇವೆರಡೂ ಪರಮ ಪುಣ್ಯ ಪ್ರದವಾದವುಗಳು. ಮತ್ತು ಅವು ಅತಿ ಮಧುರವಾದ ಅಮೃತಧಾರೆಗಳನ್ನು ಸಂತತವಾಗಿ ಸುತ್ತಲೂ ವರ್ಷಿಸುತ್ತಲಿರುವಂತೆ ತೋರುವುವು. ವಾಸ್ತವವಾಗಿಯೂ ಪ್ರಪಂಚದಲ್ಲಿ ಸಾಧುಗಳ ಸಮಾಗಮವು ಸಾಧಾರಣವಾಗಿ-ಸಾಮಾನ್ಯ ಜನರಿಗೆ ಸುಲಭವಲ್ಲ. ಅದು-ಪರಮ ಪದಪ್ರಾಪ್ತಿಗೆ ಸದೃಶವಾದುದು-ಅಂದರೆ ನಿಃಶ್ರೇಯಸ ರೂಪವಾದುದು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದೊಳಗೆ ಸುರಘು ವೃತ್ತಾಂತದಲ್ಲಿ "ಸುರಘು ಪರಿಘ ಸಮಾಗಮ ವರ್ಣನ"ವೆಂಬ ಅರವತ್ತೊಂದನೆಯ ಸರ್ಗವು

ದ್ವಿಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಅಥೈವಂಪ್ರಾಯಯಾ ತತ್ರ ವಿಶ್ರಂಭಕಥಯಾ ಚಿರಂ ।
ಪ್ರಾಕ್ತನಸ್ನೇಹಗರ್ಭಿಣ್ಯಾ ಸ್ಥಿತ್ವೋವಾಚಾಯುಧಾಭಿಧಃ ॥ ೧ ॥

ಪರಿಘ ಉವಾಚ :—

ಯದ್ಯತ್ಸಂಸಾರಜಾಲೇಽಸ್ಮಿನ್ಕ್ರಿಯತೇ ಕರ್ಮ ಭೂಮಿಪ ।
ತತ್ಸಮಾಹಿತಚಿತ್ತಸ್ಯ ಸುಖಾಯಾನ್ಯಸ್ಯ ನಾನಘ ॥ ೨ ॥

ಕಚ್ಚಿತ್ಸಂಕಲ್ಪರಹಿತಂ ಪರಂ ವಿಶ್ರಮಣಾಸ್ಪದಂ
ಪರಮೋಪಶಮಂ ಶ್ರೇಯಃ ಸಮಾಧಿಮನುತಿಷ್ಠಸಿ ॥ ೩ ॥

ಅರವತ್ತೆರಡನೆಯ ಸರ್ಗ

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮ, ಆ ಪರಿಘನು ಸುರಘುವಿನೊಡನೆ ಪೂರ್ವೋಕ್ತ ಪ್ರಕಾರವಾದ ಅತಿ ಪುರಾತನ ಸ್ನೇಹ ಗರ್ಭಿತವಾದ ಸರಸ ಸಂಭಾಷಣಗಳನ್ನು ವಿನೋದವಾಗಿ ಮಾಡುತ್ತಾ-ಅಲ್ಲಿಯೇ ಬಹುಕಾಲವಿದ್ದು,-ಬಳಿಕ ಇಂತೆಂದನು.

ಪರಿಘನು ಹೇಳಿದನು :—

೨. ಅಯ್ಯ ಅನಘನಾದ ಸುರಘುರಾಜನೇ, ಈ ಸಂಸಾರ ಜಾಲದಲ್ಲಿ. ಯಾವ ಯಾವ ಕರ್ಮವನ್ನು ಮಾಡಿದರೂ ಕೂಡ-ಅದೆಲ್ಲವೂ ಸಮಾಧಿ ನಿಷ್ಠನಾದ ಆತ್ಮಜ್ಞನಿಗೆ ನಿರತಿಶಯವಾದ ಸುಖಕ್ಕೆ ಕಾರಣವಾಗುವುದು. ಅವ್ಯವಸ್ಥಿತ ಚಿತ್ತನಾದ ಅನಾತ್ಮಜ್ಞನಿಗಾದರೋ ಎಂದಿಗೂ ಸುಖ ಹೇತುವಾಗುವುದಿಲ್ಲ.

೩. ಆದುದರಿಂದ, ಮಿತ್ರನೇ, ನೀನೂಕೂಡ-ಸಕಲವಿಧ ಸಂಕಲ್ಪ ವಿಕಲ್ಪ ಜಾಲಗಳಿಂದ ರಹಿತವಾಗಿಯೂ, ಸಮಸ್ತ ತಾಪಗಳನ್ನೂ ಪರಿಹರಿಸಿಕೊಳ್ಳುವುದಕ್ಕ

ಸುರಘುರುವಾಚ :—

ಏತನ್ಮೇ ಬ್ರೂಹಿ ಭಗವನ್ಸರ್ವಸಂಕಲ್ಪವರ್ಜಿತಂ ।
ಪರಮೋಪಶಮಂ ಶ್ರೇಯಃ ಸಮಾಧಿರ್ಹಿ ಕಿಮುಚ್ಯತೇ ॥ ೪ ॥

ಯೋ ಜ್ಞೋ ಮಹಾತ್ಮನ್ಸತತಂ ತಿಷ್ಠನ್ವ್ಯವಹರಂಶ್ಚ ವಾ ।
ಅಸಮಾಹಿತಚಿತ್ತೋಽಸೌ ಕದಾ ಭವತಿ ಕಃ ಕಿಲ ॥ ೫ ॥

ಯೋಗ್ಯವಾಗಿ-ಶಾಶ್ವತವಾದ ವಿಶ್ರಾಂತಿ ಸ್ಥಾನವಾಗಿಯೂ-ಸಂಸಾರದಲ್ಲಿ ಪ್ರಾಪ್ತವಾಗುವ ನಾನಾ ವಿಕ್ಷೇಪ ದುಃಖಗಳನ್ನು ಉಪಶಮನಗೊಳಿಸುವ ಪರಮ ಸಾಧನವಾಗಿಯೂ, ಮತ್ತು ಸಾಂಸಾರಿಕ ಸುಖಗಳಿಗಿಂತ ಪ್ರಶಸ್ಯತರವಾಗಿಯೂ ಪರಮ ಶ್ರೇಯಃ ಪದವಾಗಿಯೂ ಇರುವ ಸಮಾಧಿ ಸ್ಥಿತಿಯನ್ನು- ಆಚರಿಸುತ್ತಿರುವೆಯಾ ? ಏನು ?

ಸುರಘುವು ಹೇಳಿದನು :—

೪. ಪೂಜ್ಯರೇ, ಸಮಾಧಿಯೆಂಬುದು ಸರ್ವ ಸಂಕಲ್ಪ ಶೂನ್ಯವಾದುದು. ಸಾಂಸಾರಿಕನಾನಾ ವಿಕ್ಷೇಪ ದುಃಖಗಳನ್ನೂ ಪರಿಹರಿಸತಕ್ಕ ಪರಮ ಸಾಧನವು. ಮತ್ತು ಶ್ರೇಯಸ್ಸಿಗೆ ಕಾರಣವಾದುದು-ಎಂಬೀ ಮೊದಲಾದ ತಮ್ಮ ಅನುಭವವೂ ನನ್ನ ಅನುಭವವೂ ಒಂದೇ ವಿಧವಾಗಿರುವ ಕಾರಣ-ಆ ತಮ್ಮ ಸಮಾಧ್ಯನುಭವವನ್ನು ನನಗೆ ನೀವೇನೋ ಹೇಳಿದಿರಿ ಸರಿ ಅದು ಉಚಿತವೇ ಆಯಿತು. ಆದರೆ, ಆತ್ಮೈಕತ್ವ ರೂಪ ತತ್ತ್ವ ಜ್ಞಾನದಿಂದ ನನ್ನ ಮನಸ್ಸು ಬಾಧಿತವಾಗಿ ಬಿಟ್ಟಿರುವ ಕಾರಣ, ನನಗೆ ಮನಸ್ಸೇ ಇಲ್ಲವಾಗಿ ಬಿಟ್ಟಿರುವುದು- ಅದೇ ಇಲ್ಲದಿರುವಾಗ-ಅದರ ಸಮಾಧಾನ ಸ್ಥಿತಿಗಾಗಿ-ಸಮಾಧಿಯನ್ನು ಆಚರಿಸಬೇಕಾದ ಅವಶ್ಯಕತೆಯೇನಿರುವುದು ?

ಹೀಗಿರುವಾಗ, ತಾವು ನನ್ನನ್ನು ಕುರಿತು, ಸಮಾಧಿಯನ್ನು ಆಚರಿಸುತ್ತಿರುವೆಯೇನು ? ಎಂದು ಪ್ರಶ್ನೆ ಮಾಡುವುದರ ಔಚಿತ್ಯವಾದರೂ ಯಾವುದು ? ಹಾಗೆ ಏಕೆ ಪ್ರಶ್ನೆ ಮಾಡಿದಿರಿ ?

೫. ಸ್ವಾಮಿ, ಮಹಾತ್ಮರೇ, ಯಾನಾತನು ಸ್ವಾತ್ಮ ತತ್ತ್ವ ಜ್ಞಾನದಲ್ಲಿ ಪರಿನಿಷ್ಠಿತನಾಗಿರುವನೋ ಅಂತಹ ಜ್ಞಾನಿಯು ಸರ್ವದಾ ಲೌಕಿಕ ವ್ಯವಹಾರಗಳಲ್ಲಿ

ನಿತ್ಯಂ ಪ್ರಬುದ್ಧಚಿತ್ತಾಸ್ತು ಕುರ್ವಂತೋಽಪಿ ಜಗತ್ಕ್ರಿಯಾಃ
ಆತ್ಮೈಕತತ್ವಸಂನಿಷ್ಠಾಃ ಸದೈವ ಸುಸಮಾಧಯಃ ॥ ೬ ॥

ಬದ್ಧಪದ್ಮಾಸನಸ್ಯಾಪಿ ಕೃತಬ್ರಹ್ಮಾಂಜಲೇರಪಿ ।
ಅವಿಶ್ರಾಂತಸ್ವಭಾವಸ್ಯ ಕಃ ಸಮಾಧಿಃ ಕಥಂ ಚ ಪಾ ॥ ೭ ॥

ನಿರತನಾಗಿರಲಿ ಅಥವಾ ಯಾವ ವ್ಯವಹಾರವನ್ನೂ ಮಾಡದೆ ಸುಮ್ಮನಿರಲಿ ಆಗ ಅವನು ನಿಜವಾಗಿಯೂ ಯಾವ ಸ್ವರೂಪವುಳ್ಳವನಾಗಿರುವನು? ಹೇಳಿ. ಜ್ಞಾನ ನಿಷ್ಠನು ಸರ್ವದಾ ಅನಾವೃತವಾದ ಅದ್ವಿತೀಯ ಪರಮಾರ್ಥ ಚಿತ್ಸ್ವರೂಪನಾಗಿರುವುದರಿಂದ ಇವನು ಯಾವಾಗ ಅಸಮಾಹಿತಚಿತ್ತನಾಗುವನು? ಎಂದಿಗೂ ಇಲ್ಲವಷ್ಟೆ.

೬. ಪ್ರಬುದ್ಧ ಚಿತ್ತರಾದ ಮಹಾತ್ಮರಾದರೋ ಜಗತ್ತಿನಲ್ಲಿ ಕ್ರಮ ಪ್ರಾಪ್ತ ಗಳಾದ ಸಕಲ ವ್ಯಾಪಾರಗಳನ್ನು ಮಾಡುತ್ತಿದ್ದಾಗ್ಯೂ ಕೂಡ, ಅವರು ಸರ್ವದಾ ಆತ್ಮತತ್ತ್ವ ಸ್ವರೂಪದಲ್ಲಿ ಮಾತ್ರವೇ ನಿಶ್ಚಲವಾದ ನಿಷ್ಠೆಯುಳ್ಳವರೇ ಆಗಿರುವುದರಿಂದ ಯಾವಾಗಲೂ ಉತ್ತಮವಾದ ಸಮಾಧಿಯುಳ್ಳವರೇ ಆಗಿರುವರು. ಅವರು ಸಮಾಧಿ ಭ್ರಷ್ಟರಾಗುವರೆಂದು ಹೇಳುವ ಪ್ರಸಕ್ತಿಯೇ ಎಂದಿಗೂ ಸಂಭವಿಸುವುದಿಲ್ಲ.

[ಹೀಗೆ, ಆತ್ಮ ಸ್ವರೂಪದಲ್ಲಿ ನಿಶ್ಚಲವಾದ ಸ್ಥಿತಿಯನ್ನು ಪಡೆದಿರುವಿಕೆಯೇ ಸಮಾಧಿಯೆಂಬುದು ತಮಗೆ ಅಭಿಮತವಾಗಿದ್ದರೆ ಅಂತಹ ಸಮಾಧಿಯು ನನಗೆ ಸರ್ವದಾ ಇದ್ದೇಇರುವುದರಿಂದ, "ನೀನು ಸಮಾಧಿಯನ್ನು ಆಚರಿಸುತ್ತಿರುವೆಯಾ? ಎಂಬ ತಮ್ಮ ಪ್ರಶ್ನೆಗೆ ಅವಕಾಶವೇ ಇಲ್ಲ.]

೭. ಲೋಕದಲ್ಲಿ ಆರುರುಕ್ಷುವಾದ ಸಾಧಕನು ದೃಢವಾಗಿ ಒಂದೆಡೆಯಲ್ಲಿ ಪದ್ಮಾಸನವನ್ನು ಹಾಕಿಕೊಂಡು ಕದಲದೆ ಕುಳಿತುಕೊಂಡು ತನ್ನ ಕೈಗಳನ್ನು ಜೋಡಿಸಿ ಪರಮಾತ್ಮನಿಗೆ ವಂದನೆ ಮಾಡುತ್ತಲೂ ಜಪತಪಗಳನ್ನು ಆಚರಿಸುತ್ತಲೂ ಇದ್ದಾಗ್ಯೂ ಕೂಡ ಅವನು ಎದುವರೆವಿಗೆ ತನ್ನ ಚಿತ್ತವೃತ್ತಿಗಳನ್ನು ಲಯಗೊಳ್ಳಿಸಿ ಸ್ವಾತ್ಮ ಸ್ವರೂಪದಲ್ಲಿ ಅವಿಶ್ರಾಂತನಾಗಿ ಸ್ವಸ್ಥನಾಗುವುದಿಲ್ಲವೋ, ಅದುವರೆವಿಗೂ,

ತತ್ತ್ವಾವಬೋಧೋ ಭಗವನ್ ಸರ್ವಾಶಾತೃಣ ಪಾವಕಃ ।
ಪ್ರೋಕ್ತಃ ಸಮಾಧಿಶಬ್ದೇನ ನತು ತೂಷ್ಣೀಮವಸ್ಥಿತಿಃ ॥ ೮ ॥

ಸಮಾಹಿತಾ ನಿತ್ಯತೃಪ್ತಾ ಯಥಾಭೂತಾರ್ಥದರ್ಶಿನೀ ।
ಸಾಧೋ ಸಮಾಧಿಶಬ್ದೇನ ಪರಾ ಪ್ರಜ್ಞೋಚ್ಯತೇ ಬುಧೈಃ ॥ ೯ ॥

ಅವನಿಗೆ ಸಮಾಧಿಯೆಂಬುದು ಎಲ್ಲಿರುವುದು ? ಅಥವಾ ಅದು ಹೇಗೆ ಲಭಿಸುವುದು ? ಇಲ್ಲವೇ ಇಲ್ಲ.

[ಅದುಕಾರಣ. ಒಂದುವೇಳೆ ತಾವು ನನ್ನನ್ನು ಅಪ್ರಬುದ್ಧನಾದ ಅಜ್ಞನೆಂದು ತಿಳಿದಿದ್ದರೆ, ಆಗಲೂ ಸಮಾಧಿಯನ್ನು ಮಾಡಬೇಕೆಂದು ತಾವು ನನಗೆ ಹೇಳಿದುದು ಉಪಪನ್ನವಲ್ಲ.]

೮. ಪೂಜ್ಯರೇ, ಅನುಭವಾರೂಢವಾದ ಆತ್ಮತತ್ತ್ವ ಸಾಕ್ಷಾತ್ಕಾರವು ಸಕಲವಿಧ ಆಶೆಗಳೆಂಬ ಹುಲ್ಲು ಮೆದೆಗೆ ಅಗ್ನಿಪ್ರಾಯವಾದುದು. ಅದನ್ನೇ ಪ್ರಾಜ್ಞರು ಸಮಾಧಿಯೆಂಬುದಾಗಿ ಶಾಸ್ತ್ರದಲ್ಲಿ ಕರೆದಿರುವರು. ಅಷ್ಟೇ ಹೊರತು ದೇಹೇಂದ್ರಿಯಗಳನ್ನು ಕದಲಿಸದೆ ಸುಮ್ಮನೆ ಕುಳಿತಿರುವುದಕ್ಕೆ ಸಮಾಧಿಯೆಂಬ ಹೆಸರು ಎಂದಿಗೂ ಸರ್ವಥಾ ಸಲ್ಲುವುದಿಲ್ಲ.

[ಸಮ್ಯಕ್ ಅಂದರೆ ತತ್ತ್ವಜ್ಞಾನದಿಂದ ಎಲ್ಲ ವಿಧಗಳಾದ ಆಶೆಗಳನ್ನೂ ವಿಷಯಗಳನ್ನೂ ಸಮೂಲವಾಗಿ ಬಾಧೆಗೊಳಿಸಿ, ಚಿತ್ತಂ= ತನ್ನ ಚಿತ್ತವನ್ನು ಆತ್ಮನಃ ಪರಮಾರ್ಥ ಸ್ವರೂಪೇ= ತಾತ್ತ್ವಿಕವಾದ ತನ್ನ ಸಚ್ಚಿದಾನಂದ ಸ್ವರೂಪದಲ್ಲಿ, ಆಧಾನಂ= ಅಚಲವಾಗಿ ನಿಲ್ಲಿಸುವಿಕೆ ಎಂದು ಸಮಾಧಿ ಶಬ್ದಕ್ಕೆ ವ್ಯುತ್ಪತ್ತಿ.]

೯. ಸ್ವಾಮಿ ಸಾಧುಗಳೇ, ಸರ್ವದಾ ಸಮಾಹಿತವಾದ ನಿತ್ಯ ತೃಪ್ತವಾದ ಮತ್ತು ಆತ್ಮ ತತ್ತ್ವ ಸ್ವರೂಪವನ್ನು ಯಥಾರ್ಥವಾಗಿ ಸಾಕ್ಷಾತ್ಕರಿಸತಕ್ಕ ಕಾಲತ್ರಯಾ ಬಾಧಿತಾತ್ಮ ದರ್ಶನರೂಪ ಅತಿ ಪ್ರಶಸ್ತವಾದ ಪ್ರಜ್ಞೆಯನ್ನೇ ಪ್ರಾಜ್ಞರು ಸಮಾಧಿಯೆಂಬ ಶಬ್ದದಿಂದ ಕರೆಯುವರು.

ಅಕ್ಷುಬ್ಧಾ ನಿರಹಂಕಾರಾ ದ್ವಂದ್ವೇಷ್ವನನುಪಾತಿನೀ ।
ಪ್ರೋಕ್ತಾ ಸಮಾಧಿಶಬ್ದೇನ ಮೇರೋಃ ಸ್ಥಿರತರಾಕೃತಿಃ ॥ ೧೦ ॥

ನಿಶ್ಚಿಂತಾಧಿಗತಾಭೀಷ್ಟಾ ಹೇಯೋಪಾದೇಯವರ್ಜಿತಾ ।
ಪ್ರೋಕ್ತಾ ಸಮಾಧಿಶಬ್ದೇನ ಪರಿಪೂರ್ಣಾ ಮನೋಗತಿಃ ॥ ೧೧ ॥

ಯತಃ ಪ್ರಭೃತಿ ಬೋಧೇನ ಯುಕ್ತಮಾತ್ಯಂತಿಕಂ ಮನಃ ।
ತದಾರಭ್ಯ ಸಮಾಧಾನಮವ್ಯುಚ್ಛಿನ್ನಂ ಮಹಾತ್ಮನಃ ॥ ೧೨ ॥

---

೧೦. ರಾಗಾದಿಗಳಿಂದ ಎಂದಿಗೂ ಸ್ವಲ್ಪವಾದರೂ ಕ್ಷೋಭೆಯನ್ನು ಪಡೆಯುದೆಯೇ ಅಹಂಕಾರ ಶೂನ್ಯವಾಗಿಯೂ ಶೀತೋಷ್ಣ ಸುಖ ದುಃಖಾದಿ ದ್ವಂದ್ವಗಳಲ್ಲಿ ಪ್ರವೇಶಿಸದೆಯೂ ಅವುಗಳನ್ನು ಅನುಸರಿಸದೆಯೂ ತಟಸ್ಥ ಭಾವದಿಂದಿರುವುದಾಗಿಯೂ ಮೇರು ಪರ್ವತಕ್ಕಿಂತಲೂ ಹೆಚ್ಚು ಸ್ಥೈರ್ಯವನ್ನು ಹೊಂದಿದ ನಿಶ್ಚಲಾಕಾರವುಳ್ಳದ್ದಾಗಿಯೂ ಇರುವ ಸ್ಥಿತಿಯೇ ಸಮಾಧಿಯೆನ್ನಿಸುವುದು.

೧೧. ಯಾವುದೊಂದು ಚಿಂತೆಯೂ ಸುತರಾಂ ಇಲ್ಲದುದಾಗಿಯೂ ಸಕಲ ಮನೋರಥಗಳನ್ನೂ ಸಂಪೂರ್ಣವಾಗಿ ಪಡೆದಿರುವುದಾಗಿಯೂ, ಇದು ತ್ಯಾಜ್ಯ ಅದು ಗ್ರಾಹ್ಯ ಎಂಬೀ ಮೊದಲಾದ ಭೇದ ದೃಷ್ಟಿ ವಿವರ್ಜಿತವಾಗಿಯೂ ಇರುವ ಪರಿಪೂರ್ಣವಾದ ಮನಸ್ಸಿನ ಗತಿಯನ್ನೇ ಸಮಾಧಿಯೆಂದು ಪ್ರಾಜ್ಞರು ವ್ಯವಹರಿಸುವರು

೧೨. ಎಂದಿನಿಂದ ಮೊದಲು ಮನಸ್ಸು ಆತ್ಯಂತಿಕವಾಗಿ ತತ್ತ್ವ ಜ್ಞಾನದಿಂದ ಕೂಡಿಕೊಂಡು ಅದರಲ್ಲಿಯೇ ಅಚಲವಾಗಿ ನಿಂತು ಬಿಡುವುದೋ ಅಂದಿನಿಂದಲೇ ಆ ಮಹಾತ್ಮನಿಗೆ ವಿಕ್ಷೇಪ ಶೂನ್ಯವಾದ ಸಮಾಧಿ ನಿಷ್ಠೆಯು ಅವಿಚ್ಛಿನ್ನವಾಗಿರುವುದೆಂದು ಭಾವಿಸಬೇಕು. (ಆ ಸ್ಥಿತಿಯು ನನಗೆ ಈಗಾಗಲೇ ಮೊದಲಿನಿಂದಲೂ ಸಿದ್ಧವಾಗಿದೆ.)

ನಹಿ ಪ್ರಬುದ್ಧಮನಸೋ ಭೂತ್ವಾ ವಿಚ್ಛಿದ್ಯತೇ ಪುನಃ ।
ಸಮಾಧಿರ್ದೂರಮಾಕೃಷ್ಟೋ ಬಿಸತಂತುಃ ಶಿತೋರಿವ ॥ ೧೩ ॥

ಸಮಗ್ರಂ ದಿನಮಾಲೋಕಾದ್ವಿರಮತ್ಯಕ್ಷಯೋ ಯಥಾ ।
ಅಜೀವಿತಾಂತಂ ನೋ ಪ್ರಜ್ಞಾ ತಥಾ ತತ್ವಾವಲೋಕನಾತ್ ॥ ೧೪ ॥

ಅಜಸ್ರಮಂಬುವಹನಾದ್ಯಥಾ ನದ್ಯಾ ನ ರುಧ್ಯತೇ ।
ತಥಾ ವಿಜ್ಞಾನದೃಗ್ಬೋಧಾತ್ ಕ್ಷಣಮಾತ್ರಂ ನ ರುಧ್ಯತೇ ॥ ೧೫ ॥

---

೧೩. ಆಟವಾಡುತ್ತಿರುವ ಮಗುವಿನ ಕೈಯಲ್ಲಿರುವ ತಾವರೆ ದಂಟಿನ ದಾರವನ್ನು ದೂರವಾಗಿ ಸೆಳೆದ ಕೂಡಲೆ ಅದು ಹೇಗೆ ಅವನ ಕೈಯಿಂದ ತಪ್ಪಿ ವಿಚ್ಛಿನ್ನವಾಗುವುದೋ ಹಾಗೆ ಆತ್ಮ ಜ್ಞಾನ ಪರಿನಿಷ್ಠಿತವಾದ ಚಿತ್ತ ವೃತ್ತಿಯುಳ್ಳ ಮಹಾತ್ಮನಿಗೆ ಒಂದು ಸಲ ಸಮಾಧಿ ನಿಷ್ಠೆಯುಂಟಾದ ಬಳಿಕ, ಅದು ಪುನಃ ಎಂದಿಗೂ ವಿಚ್ಛಿತ್ತಿ ಹೊಂದುವುದೇ ಇಲ್ಲ.

೧೪. ಸೂರ್ಯನು ಸಮಗ್ರವಾಗಿ ಹಗಲು ಹೊತ್ತಿನಲ್ಲೆಲ್ಲ ತನ್ನ ಕಾಂತಿಯನ್ನು ಜಗತ್ತಿನೊಳಗೆ ಪ್ರಸಾರ ಮಾಡುತ್ತಾ ಇರುತ್ತಾನೆಯೇ ಹೊರತು ಒಂದು ಕ್ಷಣವಾದರೂ ಕಾಂತಿ ಪ್ರಸಾರ ಮಾಡುವುದನ್ನು ಬಿಟ್ಟು ವಿರಾಮ ಹೊಂದುವುದಿಲ್ಲ. ಅಂತೆಯೇ ಸ್ಥಿತ ಪ್ರಜ್ಞನ ಪ್ರಜ್ಞೆಯು ಆ ಪ್ರಾರಬ್ಧ ದೇಹ ಪಾತ ಪರ್ಯಂತವೂ ಎಂದಿಗೂ ಸ್ವಲ್ಪ ಹೊತ್ತಾದರೂ ಆತ್ಮ ತತ್ತ್ವ ಸಾಕ್ಷಾತ್ಕಾರವನ್ನು ಬಿಟ್ಟು ಅದರಿಂದ ವಿರಾಮ ಪಡೆಯುವುದಿಲ್ಲ. ದೃಢ ಸಂಸ್ಕಾರ ಬಲದಿಂದ ಬಿಡದೆ ಅನುವರ್ತಿಸಿಕೊಂಡೇ ಬರುವುದು.

೧೫. ಯಾವಾಗಲೂ ವಿಚ್ಛಿತ್ತಿಯಿಲ್ಲದೆ ಹರಿಯುತ್ತಿರುವ ಗಂಗಾದಿ ಜೀವನದಿಗಳು ಒಂದು ಕ್ಷಣ ಕಾಲವಾದರೂ ಕೂಡ ಹೇಗೆ ಜಲ ಪ್ರವಾಹವನ್ನು ಹರಿಯಿಸದೆ ಪ್ರತಿ ಬಂಧಿತವಾಗುವುದಿಲ್ಲವೋ ಹಾಗೆಯೇ ಸ್ವರೂಪಾಚ್ಛಾದಕವಾದ ಅಜ್ಞಾನ

ನ ವಿಸ್ಮರತ್ಯವಿರತಂ ಯಥಾ ಕಾಲಃ ಕಲಾಗತಿಂ ।
ನ ವಿಸ್ಮರತ್ಯವಿರತಂ ಸ್ವಾತ್ಮಾನಂ ಪ್ರಾಜ್ಞಧೀಸ್ತಥಾ ॥ ೧೬ ॥

ನ ವಿಸ್ಮರತಿ ಸರ್ವತ್ರ ಯಥಾ ಸತತಗೋ ಗತಿಂ ।
ನ ವಿಸ್ಮರತಿ ನಿಶ್ಚೇಯಂ ಚಿನ್ಮಾತ್ರಂ ಪ್ರಾಜ್ಞಧೀಸ್ತಥಾ ॥ ೧೭ ॥

ಗತಿಂ ಕಾಲಕಲಾ ಯದ್ವಚ್ಚಿನ್ವಾನಾ ಸಮವಸ್ಥಿತಾ ।
ಚಿಚ್ಚಿತಿಶ್ಚೇತ್ಯರಹಿತಾ ಚಿನ್ವಾನಾ ಗತಯಸ್ತಥಾ ॥ ೧೮ ॥

ವೆಂಬ ಆವರಣವು ತತ್ತ್ವಜ್ಞಾನದಿಂದ ನಿಶ್ಶೇಷವಾಗಿ ಒಂದು ಸಲ ನಾಶಹೊಂದಿ ಬಿಟ್ಟ ತರುವಾಯ ಪುನಃ ಸ್ವರೂಪವನ್ನು ಮರೆಯಿಸುವ ಆವರಣವೇ ಇಲ್ಲವಾಗಿ ಬಿಡುವ ಕಾರಣ ತತ್ತ್ವದರ್ಶಿಯಾದ ಜ್ಞಾನನಿಷ್ಠನಿಗೆ ಒಂದು ಕ್ಷಣ ಮಾತ್ರವೂ ತತ್ತ್ವಸಾಕ್ಷಾತ್ಕಾರದ ವಿಷಯದಲ್ಲಿ ಪ್ರತಿಬಂಧಕವೇ ಇರುವುದಿಲ್ಲ. ಅಂದರೆ ಸ್ವರೂಪ ನಿರೋಧವೆಂಬ ಸಮಾಧಿ ಭಂಗ ಪ್ರಸಕ್ತಿಯೇ ಇಲ್ಲ.

೧೬-೧೭. ಕಾಲವು ಹೇಗೆ ಸರ್ವದಾ ಕಲೆ ಮುಂತಾದ ತನ್ನ ಭಾಗಗಳ ಗತಿಯನ್ನು ಮರೆಯುವುದಿಲ್ಲವೋ ಹಾಗೆ ತತ್ತ್ವಜ್ಞನ ಬುದ್ಧಿಯೂ ಸ್ವರೂಪವನ್ನು ಯಾವಾಗಲೂ ಮರೆಯುವುದೇ ಇಲ್ಲ. ಮತ್ತು ಸದಾಗತಿಯಾದ ವಾಯುವು ಎಲ್ಲೆಡೆಗಳಲ್ಲಿಯೂ ಸಂಚರಿಸುತ್ತಾ ಸರ್ವದಾ ತನ್ನ ಗತಿಯನ್ನು ಮರೆಯದೆ ಇರುವಂತೆ ಪ್ರಾಜ್ಞನ ಬುದ್ಧಿಯು ಸುದೃಢ ನಿಶ್ಚಯವಾದ ಜ್ಞಾನದಿಂದ ಸಾಕ್ಷಾತ್ಕಾರ ಮಾಡಿಕೊಂಡಿರುವ ಚಿನ್ಮಾತ್ರ ಸ್ವರೂಪವನ್ನು ಮರೆಯುವುದು ಸಾಧ್ಯವೇ ಇಲ್ಲ. ಸ್ವಭಾವವನ್ನು ಬಿಟ್ಟಿರುವುದಾಗಲಿ, ಮರೆಯುವುದಾಗಲಿ ಜ್ಞಾನನಿಷ್ಠನಿಗೆ ಸರ್ವಾತ್ಮನಾ ಅಸಂಭವವೆಂದರ್ಥ. ಏಕೆಂದರೆ ಆತ್ಮ ಸ್ವರೂಪವು ಪರಮ ಪ್ರೇಮಾಸ್ಪದವು.

೧೮. ಕಾಲ ಮೂರ್ತಿಗಳಾದ ಸೂರ್ಯಾದಿಗಳು ಹೇಗೆ ಸರ್ವದಾ ಗಮನವನ್ನು ಪಡೆಯುತ್ತಿರುವರೋ ಹಾಗೆಯೇ ಚೈತನ್ಯ ಸ್ಫೂರ್ತಿಯು ಚೇತ್ಯ ರಹಿತವಾಗಿದ್ದರೂಕೂಡ ಸ್ವಾಕಾರ ವೃತ್ತಿಗಳನ್ನೂ ಹೊಂದುತ್ತಾ ಇದ್ದುಕೊಂಡಿರುವುದು.

(ಚೇತ್ಯ= ಚಿತ್ತಿಗೆ ಗೋಚರವಾಗುವ ವಿಭಿನ್ನ ವಿಷಯ.)

ಯಥಾ ಸತ್ತಾವಿಹೀನಾತ್ಮಾ ಪದಾರ್ಥೋ ನೋಪಲಭ್ಯತೇ ।
ತಥಾತ್ಮಜ್ಞಾನಹೀನಾತ್ಮಾ ಕಾಲೋ ಹ್ಯಸ್ಯ ನ ಲಭ್ಯತೇ ॥ ೧೯ ॥

ನ ಸಂಭವತಿ ಸಂಸಾರೇ ಗುಣಹೀನೋ ಗುಣೀ ಯಥಾ ।
ನ ಸಂಭವತ್ಯಾತ್ಮಸಂವಿದ್ವರ್ಜಿತೋ ಹ್ಯಾತ್ಮವಾಂಸ್ತಥಾ ॥ ೨೦ ॥

ಸರ್ವದೈವಾಸ್ಮಿ ಸಂಬುದ್ಧಃ ಸರ್ವದೈವಾಸ್ಮಿ ನಿರ್ಮಲಃ ।
ಸರ್ವದೈವಾಸ್ಮಿ ಶಾಂತಾತ್ಮಾ ಸರ್ವದಾಸ್ಮಿ ಸಮಾಹಿತಃ ॥ ೨೧ ॥

---

೧೯. ಲೋಕದಲ್ಲಿ ಸಚ್ಚಿದ್ರೂಪಾತ್ಮನ ಸತ್ತಾ ವಿಹೀನವಾದ ಪದಾರ್ಥವೊಂದಾದರೂ ಸಿಗದಿರುವಂತೆ ಆತ್ಮ ಜ್ಞಾನ ವಿಹೀನವಾದ ಕಾಲವೂ ತತ್ತ್ವ ಜ್ಞಾನ ನಿಷ್ಠನಿಗೆ ಸಿಗುವುದಿಲ್ಲ. [ತತ್ತ್ವ ಜ್ಞಾನವು ಜ್ಞಾನಿಯ ಜೀವನ ಕಾಲದ ಧರ್ಮವು ಅದು ಕಾರಣವೂ ಜ್ಞಾನ ನಿಷ್ಠೆಗೆ ವಿಚ್ಛೇದವು ಎಂದಿಗೂ ಸಂಭವಿಸುವುದಿಲ್ಲ.]

೨೦. ಈ ಜಗತ್ತಿನಲ್ಲಿ ಗುಣಹೀನನಾದವನನ್ನು ಗುಣವಂತನೆಂದು ಹೇಳುವುದು ಹೇಗೆ ಎಷ್ಟು ಅಸಂಭವವೋ ಹಾಗೆ ಆತ್ಮ ಜ್ಞಾನ ವಿಹೀನನಾದ ನರಪಶುವು ಆತ್ಮವಂತನೆನ್ನಿಸುವುದೂ ನಿಜವಾಗಿಯೂ ಅಷ್ಟೇ ಅಸಂಭವವಾದುದೇ ಸರಿ.

[ಅಗ್ನಿಗೆ ಉಷ್ಣತ್ವವು ಹೇಗೆ ಸ್ವಭಾವವೋ ಹಾಗೆ ಜ್ಞಾನಿಗೆ ಜ್ಞಾನವೂ ಸ್ವಭಾವ ಈ ಕಾರಣದಿಂದಲೂ ಜ್ಞಾನಿಗೆ ಸಮಾಧಿ ವಿಚ್ಛಿತ್ತಿಯಿಲ್ಲ.]

೨೧. ನಾನು ಸರ್ವದಾ ಸಂಪೂರ್ಣವಾಗಿ ಸುದೃಢವಾದ ಆತ್ಮ ನಿಶ್ಚಯ ಜ್ಞಾನದಲ್ಲಿ ಪರಿನಿಷ್ಠಿತನಾಗಿ ಅಪ್ರಮತ್ತನಾಗಿಯೇ ಇರುವೆನು. ಸರ್ವದಾ ಅವಿದ್ಯಾದಿ ಸಕಲ ಮಲರಹಿತನಾಗಿ ಶುದ್ಧ ಚಿದ್ರೂಪನೇ ಆಗಿರುವೆನು. ಸರ್ವದಾ ನಿರುಪ ದ್ರವವಾದ ಪ್ರಶಾಂತಾತ್ಮನೇ ಆಗಿರುವೆನು ಮತ್ತು ಸರ್ವದಾ ನಾನು ಸಮಾಧಿ ನಿಷ್ಠನಾಗಿರುವೆನೇ ಹೊರತು ಯಾವಾಗಲೂ ಒಂದು ಕ್ಷಣವಾದರೂ ಸಮಾಧಿಯಿಂದ ಬಹಿರ್ಮುಖನಾಗಿಲ್ಲ.

ಭೇದಃ ಕೇನ ಸಮಾಧೇರ್ಮೇ ಜಾಯತೇ ಕಥಮೇವ ವಾ ।
ಆತ್ಮನೋಽವ್ಯತಿರೇಕೇಣ ನಿತ್ಯಮೇವ ಸದಾತ್ಮತಾ ॥ ೨೨ ॥

ತಸ್ಮಾತ್ಕದಾಚಿದಪಿ ಮೇ ನಾಸಮಾಧಿಮಯಂ ಮನಃ ।
ನ ವಾಸಮಾಹಿತಂ ನಿತ್ಯಮಾತ್ಮತತ್ವೈಕ ಸಂಭವಾತ್ ॥ ೨೩ ॥

ಸರ್ವಗಃ ಸರ್ವದೈವಾತ್ಮಾ ಸರ್ವಮೇವ ಚ ಸರ್ವಥಾ ।
ಅಸಮಾಧಿರ್ಹಿ ಕೋಽಸೌ ಸ್ಯಾತ್ಸಮಾಧಿರಪಿ ಕಃ ಸ್ಮೃತಃ ॥ ೨೪ ॥

---

೨೨. ನಾನು ಯಾವಾಗಲೂ ಆತ್ಮ ಸ್ವರೂಪಕ್ಕಿಂತ ಅವ್ಯತಿರಿಕ್ತನಾಗಿಯೇ ಇರುವ ಕಾರಣ ನನ್ನ ಸಮಾಧಿಸ್ಥಿತಿಗೆ ಯಾರಿಂದ ವಿಚ್ಛಿತ್ತಿಯು ಉಂಟಾದೀತು ? ಅದು ಹೇಗೆ ಉಂಟಾಗುವುದು ? ನನಗೆ ಸರ್ವದಾ ಕೇವಲ ಸದಾತ್ಮ ಸ್ವರೂಪವು ಸ್ವತಃ ಸಿದ್ಧವಾದುದು.

೨೩. ಈ ಕಾರಣದಿಂದ, ಅಯ್ಯಾ ಪರಿಘನೇ, ನನ್ನ ಮನಸ್ಸು ಯಾವಾಗಲೂ ಕೂಡ ಒಂದು ಕ್ಷಣವಾದರೂ ಸಮಾಧಿಯಿಂದ ವಿಚ್ಛಿತ್ತಿಯನ್ನೂ ಪಡೆಯುವುದಿಲ್ಲ ಸರ್ವದಾ ಸಮಾಹಿತವಾಗಿಯೂ ಇಲ್ಲ. ಏಕೆಂದರೆ ವಿಕ್ಷೇಪ ಹೇತುವಾದ ಮನಸ್ಸೇ ಸರ್ವದಾ ಅದ್ವಿತೀಯಾತ್ಮ ತತ್ತ್ವ ಸ್ವರೂಪಾವಿರ್ಭಾವದಿಂದ ನಾಶಹೊಂದಿಬಿಟ್ಟಿರುವುದು. ಇನ್ನು ವಿಕ್ಷೇಪವೆಲ್ಲಿಯದು ? ಹೀಗಿರುವಾಗ ನನಗೆ ಸಮಾಧಿಯ ಆವಶ್ಯಕತೆಯೂ ಇಲ್ಲ.

೨೪. ಆತ್ಮವು ಯಾವಾಗಲೂ ಕೂಡ ಸರ್ವಗತವಾಗಿ ಸರ್ವ ವ್ಯಾಪಿಯೆನ್ನಿಸಿರುವುದು. ಮತ್ತು ಸರ್ವ ಪ್ರಕಾರಗಳಲ್ಲಿಯೂ ಸರ್ವವೇ ಆಗಿರುವುದು ಹೀಗಿರುವಾಗ ಸಮಾಧಿಯಲ್ಲದುದು ಎಂಬುದು ಯಾವುದು ? ಅಥವಾ ಸಮಾಧಿಯೆಂಬುದು ತಾನೆ ಯಾವುದಿರುವುದು ?

ನಿತ್ಯಂ ಸಮಾಹಿತಧಿಯಃ ಸುಸಮಾ ಮಹಾಂತ
ಸ್ತಿಷ್ಠಂತಿ ಕಾರ್ಯಪರಿಣಾಮವಿಭಾಗ ಮುಕ್ತಾಃ ।
ತೇನಾಸಮಾಹಿತ ಸಮಾಹಿತ ಭೇದ ಭಂಗ್ಯಾ
ನಿತ್ಯೋದಿತಃ ಕ್ವ ನು ಸ ಉತ್ತಮವಾಕ್ಪ್ರಪಂಚಃ ॥ ೨೫ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಸಮಾಧಿ ನಿಶ್ಚಯೋ" ನಾಮ ದ್ವಿಷಷ್ಟಿತಮಃ ಸರ್ಗಃ.

---

೨೫. ಅಯ್ಯ ಪರಿಘನೇ, ಭೇದಜ್ಞಾನವನ್ನು ನಿಶ್ಶೇಷವಾಗಿ ತೊಲಗಿಸಿಕೊಂಡು ಸರ್ವದಾ ಆತ್ಮೈಕತ್ವ ಜ್ಞಾನದಲ್ಲಿ ಪರಿನಿಷ್ಠಿತ ಮನಸ್ಕರಾದ ಮಹಾತ್ಮರು ಸರ್ವತ್ರ ಸಮದರ್ಶಿಗಳಾಗಿಯೂ, ಕಾರಣ ಕಾರ್ಯ ಅದರ ಫಲ ಇತ್ಯಾದಿ ಸಕಲ ಭೇದ ಭಾವನೆಗಳಿಂದ ವಿಮುಕ್ತರಾಗಿಯೂ ಇರುವರು. ಈ ಕಾರಣದಿಂದ ಇವನು ಅಸಮಾಹಿತನು ಅವನು ಸಮಾಹಿತನು ಎಂಬೀ ಮೊದಲಾದ ನಾನಾ ಭೇದ ಕ್ರಮಗಳಿಂದ ಪ್ರವೃತ್ತವಾದ ಸದಾ ಜಗತ್ತಿನಲ್ಲಿ ಅಜ್ಞ ಜನ ರೂಢವಾದ ನಿನ್ನ ಆ ಉತ್ತಮ ವಾಗ್ವೈಭವವು ಯಾವ ಅರ್ಥದಲ್ಲಿ ವ್ಯವಸ್ಥಿತವಾಗಿರುವುದು !

[ಮಿಥ್ಯೆಯಾಗಿಯೇ ಭೇದ ವ್ಯವಹಾರವು ಲೋಕದಲ್ಲಿ ಭ್ರಾಂತಿಯಿಂದ ಎದ್ದಿರುವುದು ಎಂದರ್ಥ.]

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಸಮಾಧಿ ನಿಶ್ಚಯವೆಂಬ"
ಅರವತ್ತೆರಡನೆಯ ಸರ್ಗವು.

ತ್ರಿಷಷ್ಟಿತಮಃ ಸರ್ಗಃ

ಪರಿಘ ಉವಾಚ :—

ರಾಜನ್‌ನೂನಂ ಪ್ರಬುದ್ಧೋಽಸಿ ಪ್ರಾಪ್ತವಾನಸಿ ತತ್ಪದಂ ।
ಸಂಶೀತಲಾಂತಃಕರಣಃ ಪೂರ್ಣೇಂದುರಿವ ರಾಜಸೇ ॥ ೧ ॥

ಆನಂದಮಧುಸಂಪೂರ್ಣಲಕ್ಷ್ಮ್ಯಾ ಚ ಪರಯಾಶ್ರಿತಃ ।
ಶೀತಲಃ ಸ್ನಿಗ್ಧಮಧುರೋ ರಾಜೀವಮಿವ ರಾಜಸೇ ॥ ೨ ॥

ನಿರ್ಮಲೋ ವಿತತಃ ಪೂರ್ಣೋ ಗಂಭೀರಃ ಪ್ರಕಟಾಶಯಃ ।
ವೇಲಾನಿಲವಿಲಾಸೇನ ಮುಕ್ತೋಽಬ್ಧಿರಿವ ರಾಜಸೇ ॥ ೩ ॥

ಅರವತ್ತ ಮೂರನೆಯ ಸರ್ಗವು

ಪರಿಘನು ಹೇಳಿದನು :—

೧. ಎಲೈ ಸುರಘು ರಾಜನೇ, ನೀನು ನಿಶ್ಚಯವಾಗಿಯೇ, ತತ್ವಜ್ಞನಾಗಿರುವೆ. ಆನಂದೈಕರಸಾತ್ಮಕವಾದ ಆ ಪರಮ ಪದವನ್ನು ಪಡೆದಿದ್ದೇಯೆ. ನೀನು ಸಕಲ ಶೋಕ ತಾಪಗಳಿಂದ ವಿನಿರ್ಮುಕ್ತನಾಗಿ ಅತ್ಯಂತ ಶೀತಲವಾದ ಅಂತಃಕರಣವುಳ್ಳವನಾಗಿರುವ ಕಾರಣ, ಷೋಡಶಕಲಾನ್ವಿತನಾದ ಪೂರ್ಣಚಂದ್ರನಂತೆ ಆಹ್ಲಾದಕರನಾಗಿ ವಿರಾಜಿಸುತ್ತಿರುವೆ.

೨. ನಿತ್ಯ ನಿರತಿಶಯಾತ್ಮಾನಂದವೆಂಬ ಮಕರಂದದಿಂದ ಸದಾ ಸಂಪೂರ್ಣನಾಗಿಯೂ, ಪರಮ ದಿವ್ಯ ತೇಜಸ್ಸಿನಿಂದ ವಿರಾಜಮಾನನಾಗಿಯೂ, ಶೀತಲನಾಗಿಯೂ, ಸರ್ವತ್ರ ಅತ್ಯಂತ ಸ್ನಿಗ್ಧನಾಗಿಯೂ, ಅತ್ಯಂತ ಮಧುರನಾಗಿಯೂ ಕಮಲ ಪುಷ್ಪದಂತೆ ಶೋಭಿಸುತ್ತಿದ್ದೀಯೆ. (ಸ್ನಿಗ್ಧ= ಸ್ನೇಹರಸ ಪೂರ್ಣ)

೩. ನಿರ್ಮಲನಾಗಿಯೂ, ಸರ್ವವ್ಯಾಪಿಯಾಗಿಯೂ, ಸರ್ವತ್ರ ಪರಿಪೂರ್ಣನಾಗಿಯೂ, ಅತಿ ಗಂಭೀರನಾಗಿಯೂ, (ಸರ್ವದಾ ಕ್ಷೋಭೆಗೊಳ್ಳದ ಪ್ರಶಾಂತನು)

ಸ್ವಚ್ಛ ಆನಂದಸಂಪೂರ್ಣೋ ನಷ್ಟಾಹಂಕಾರವಾರಿದಃ ।
ಸ್ಫುಟೋ ವಿಸ್ತೀರ್ಣಗಂಭೀರಃ ಶರತ್ಖಮಿವ ರಾಜಸೇ ॥ ೪ ॥

ಸರ್ವತ್ರ ಲಕ್ಷ್ಯಸೇ ಸ್ವಸ್ಥಃ ಸರ್ವತ್ರ ಪರಿತುಷ್ಯಸಿ ।
ಸರ್ವತ್ರ ವೀತರಾಗೋಽಸಿ ರಾಜನ್ಸರ್ವತ್ರ ರಾಜಸೇ ॥ ೫ ॥

ಸಾರಾಸಾರಪರಿಚ್ಛೇದಪಾರಗಸ್ತ್ವಂ ಮಹಾಧಿಯಾ ।
ಜಾನಾಸಿ ಸರ್ವಮೇವೇದಂ ಯಥಾಸ್ಥಿತಮಖಂಡಿತಂ ॥ ೬ ॥

ಸ್ಪಷ್ಟವಾಗಿ ಕಾಣುವ ಅಂತಃಕರಣವುಳ್ಳವನಾಗಿಯೂ ಇರುವ ನೀನು-ತೀರದಲ್ಲಿ ಬೀಸುವ ಗಾಳಿಯ ರಭಸಕ್ಕೆ ಒಳಪಡದ ಪ್ರಶಾಂತವೂ, ನಿರ್ಮಲವೂ ಆಗಿದ್ದು ಒಳ ಭಾಗವು ಸ್ಪಷ್ಟವಾಗಿ ಕಾಣುತ್ತಿರುವ ಅತಿ ಗಂಭೀರವಾದ ಮಹಾಸಮುದ್ರದಂತೆಯೇ-ವಿರಾಜಮಾನನಾಗಿರುವೆ.

೪. ಸತ್ತ್ವೋತ್ಕರ್ಷದಿಂದ ಅತ್ಯಂತ ಸ್ವಚ್ಛನಾಗಿಯೂ, ಆತ್ಮಾನಂದರಸ ಪರಿಪೂರ್ಣನಾಗಿಯೂ, ಅಹಂಕಾರವೆಂಬ ಮೇಘದ ಆವರಣವನ್ನು ನಾಶಪಡಿಸಿ ಕೊಂಡವನಾಗಿಯೂ, ವ್ಯಕ್ತನಾಗಿಯೂ, ವಿಸ್ತೀರ್ಣನಾಗಿಯೂ, ಗಂಭೀರ ನಾಗಿಯೂ ಇದ್ದುಕೊಂಡು, ನೀನು ಶರತ್ಕಾಲದಲ್ಲಿನ ಗಗನ ಮಂಡಲದಂತೆ ರಾರಾಜಿಸುವೆ.

೫. ಇಷ್ಟಾನಿಷ್ಟ ವಿಷಯಗಳಲ್ಲಿ ಸರ್ವತ್ರ ನೀನು ಸರ್ವದಾ ರಾಗದ್ವೇಷ ಗಳನ್ನಿಡದೆಯೂ ಅದು ಕಾರಣವೇ ಸ್ವಸ್ವರೂಪದಿಂದ ಪ್ರಚ್ಯುತನಾಗದೆ ಸ್ವಸ್ಥ ನಾಗಿಯೇ ಇದ್ದೀ. ಆಪ್ತ ಸರ್ವಕಾಮನಾಗಿ, ನಿಸ್ಸ್ಪೃಹನಾಗಿರುವ ಕಾರಣ, ಸರ್ವತ್ರ ಸಂತೋಷಪಡುತ್ತಾ, ಸರ್ವತ್ರ ರಾಗ ದ್ವೇಷಗಳನ್ನು ತೊರೆದಿರುತ್ತೀ. ಅಯ್ಯ ರಾಜನೇ, ನೀನು ಎಲ್ಲೆಲ್ಲಿಯೂ ಸ್ವಯಂ ಪ್ರಕಾಶಮಾನನಾಗಿರುವೆ.

೬. ಪ್ರಪಂಚದಲ್ಲಿರುವ ಸಕಲ ದೃಶ್ಯ ಅನಾತ್ಮ ವಸ್ತುಗಳೂ ನಿಸ್ಸಾರವೆಂದೂ ಮತ್ತು ಸರ್ವ ಜಗದಧಿಷ್ಠಾನವಾದ ಸಚ್ಚಿದಾನಂದ ರೂಪ ಆತ್ಮವೊಂದೇ ಸಾರವೆಂದೂ ಶಾಸ್ತ್ರಾಚಾರ್ಯೋಪದೇಶ ಕ್ರಮದಿಂದ ವಿಚಾರಮಾಡಿ ಆ ನಿರ್ಣಯವನ್ನು ಅನು ಭವಕ್ಕೆ ತಂದು ಅದರ ಪಾರಂಗತನಾಗಿರುವ ನೀನು (ನಿತ್ಯಾನಿತ್ಯ ವಸ್ತು ವಿವೇಕ

ಭಾವಾಭಾವಪರಿಚ್ಛೇದತತ್ತ್ವಜ್ಞಮುದಿತಾಶಯಂ ।
ಗಮಾಗಮದಶಾಲೌಲ್ಯಮುಕ್ತಂ ತವ ವಪುಃ ಸ್ಥಿತಂ ॥ ೭ ॥

ವಸ್ತುನಾ ವಸ್ತುನೇವಾಂತರವ್ಯತೇನೇವ ಸಾಗರಃ ।
ಅಪುನಃ ಪ್ರಕ್ಷಯಾಯೈವ ಪರೇ ತೃಪ್ತೋಽಸಿ ಸುಂದರ ॥ ೮ ॥

ವನ್ನು ವಿಚಾರ ವಿಮರ್ಶೆಗಳಿಂದ ಚೆನ್ನಾಗಿ ನಿರ್ಣಯ ಮಾಡಿಕೊಂಡಿರುವ ನೀನು) ನಿನ್ನ ಉದಾರವಾದ ಬುದ್ಧಿಯಿಂದ ಈ ಸಮಸ್ತ ವಿಕಾರ ಜಾತವನ್ನೂ ಯಥಾರ್ಥ ವಾಗಿ ಅಪರಿಚ್ಛಿನ್ನ ಬ್ರಹ್ಮಾತ್ಮಕವಾಗಿಯೇ ತಿಳಿದಿರುವೆ.

["ಬ್ರಹ್ಮೈವೇದಗ್ಂ ಸರ್ವಂ" "ಆತ್ಮೈವೇದಗ್ಂ ಸರ್ವಂ." ಇದೆಲ್ಲವೂ ಬ್ರಹ್ಮವೇ. ತದ್ವ್ಯತಿರಿಕ್ತವಾಗಿ ಇದೊಂದೂ ವಸ್ತುತಃ ಇಲ್ಲವೇ ಇಲ್ಲ. ಇದೆಲ್ಲವೂ ಕೇವಲ ಮಿಥ್ಯೆಯು ಎಂದು ವಾಸ್ತವವಾಗಿ, ನಿಸ್ಸಂದೇಹವಾಗಿ ತಿಳಿದು ಜ್ಞಾನನಿಷ್ಠ ನಾಗಿರುವೆ.]

೭. ಸದಸದ್ವಿವೇಕವನ್ನು (ಭಾವಾಭಾವ ಪರಿಚ್ಛೇದ) ಚೆನ್ನಾಗಿ ತತ್ತ್ವತಃ ಬಲ್ಲವನಾದ ಸುರಘು ರಾಜನೇ, ಈಗ ನಿನ್ನ ದೇಹವು ಪ್ರಮೋದಭರಿತವಾದ ಆಶಯ ವುಳ್ಳದ್ದಾಗಿಯೂ, ಆರೋಹಾವರೋಹ ಕ್ರಮಗಳ ಅವಸ್ಥೆಗಳಿಂದ ಉಂಟಾಗುವ ಚಾಂಚಲ್ಯರಹಿತವಾಗಿಯೂ ಸ್ವಸ್ಥವಾಗಿರುವುದು.

೮. ತತ್ತ್ವಜ್ಞಾನಿಯಾಗಿ ಸಕಲ ಜಗತ್ಸುಂದರನಾದ ಸುರಘುರಾಜನೇ, ತನಗಿಂತಲೂ ಬೇರೆಯಾವುದೊಂದು ಪರಮಾರ್ಥ ವಸ್ತುವೂ ಇಲ್ಲದ ಮತ್ತು ತನ್ನೊಳಗೇ ಅಂತರ್ಯಾಮಿಯಾಗಿದ್ದುಕೊಂಡಿರುವ ಮತ್ತು ಮರಣಧರ್ಮ ಶೂನ್ಯ ವಾದ ಪರಮಾರ್ಥ ಸತ್ಯವಸ್ತುಭೂತ ಸ್ವಾತ್ಮರೂಪದಿಂದಲೇ ನೀನು (ಅಮೃತದಿಂದ) ಉದಕ ಸಮೃದ್ಧಿಯಿಂದ ಸಮುದ್ರವು ಹೇಗೋ ಹಾಗ, ಅಚ್ಯುತವಾದ ಆನಂದೈಕ ರಸಾತ್ಮಕ ಪರಮಪದದಲ್ಲಿ ಸದಾ ಸಂತೃಪ್ತನಾಗಿದ್ದುಕೊಂಡಿರುವೆ. ಈ ಕಾರಣ ದಿಂದ ನೀನು ಪುನಃ ಎಂದಿಗೂ ಅಪಕ್ಷಯಾದಿ ವಿಕಾರಗಳಿಗೆ ಒಳಪಡದವನಾಗಿಯೇ ಶಾಶ್ವತನಾಗಿರುವೆ.

ಸುರಘುರುವಾಚ :—

ನ ತದಸ್ತಿ ಮುನೇ ಪಸ್ತು ಯತ್ರೋಪಾದೇಯತಾಸ್ತಿ ನಃ ।
ಯಾವತ್ಕಿಂಚಿದಿದಂ ದೃಶ್ಯಂ ತಾವದೇತನ್ನ ಕಿಂಚನ ॥ ೯ ॥

ಉಪಾದೇಯಸ್ಯ ಚಾಭಾವಾದ್ಧೇಯಮಪ್ಯಸ್ತಿ ಕಿಂ ಕಿಲ ।
ಪ್ರತಿಯೋಗಿ ವ್ಯವಚ್ಛೇದಂ ವಿನಾ ಹೇಯಂ ಕಿಮುಚ್ಯತೇ ॥ ೧೦ ॥

ತುಚ್ಛತ್ವಾತ್ಸರ್ವಭಾವಾನಾಮತುಚ್ಛತ್ವಾಚ್ಚ ಕಾಲತಃ ।
ಚಿರಂ ಮಮ ಪರಿಕ್ಷೀಣೇ ತುಚ್ಛಾತುಚ್ಛೇ ಮನಸ್ಥಿತೀ ॥ ೧೧ ॥

ಸುರಘು ರಾಜನು ಹೇಳಿದನು :—

೯. ಎಲೈ ಪರಿಘಮುನಿಯೇ, ನಮಗೆ ಯಾವ ವಸ್ತುವಿನ ವಿಷಯದಲ್ಲಿ, "ಇದು ಉಪಾದೇಯವು ಎಂಬ ಬುದ್ಧಿಯುಂಟಾಗುವುದೋ ಅಂತಹ ವಸ್ತುವೊಂದೂ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಏಕೆಂದರೆ ಈ ಜಗತ್ತಿನಲ್ಲಿ ಯಾವ ಯಾವ ದೃಶ್ಯವಸ್ತುಗಳು ಎಷ್ಟು ಇರುವುವೋ ಅಷ್ಟೂ ಅದೆಲ್ಲವೂ ಸರ್ವಥಾ ಅಸತ್ಯವೇ.

೧೦. ಹೀಗೆ ಜಗತ್ತೇ ಅಸತ್ಯವಾದುದುರಿಂದ ಇದರಲ್ಲಿ ಉಪಾದೇಯವಾದ ವಸ್ತುವೇ ಇಲ್ಲವಾಗಿರುವುದು. ಆದುದರಿಂದ ಇನ್ನು ಹೇಯವಾದುದು ಯಾವುದು ತಾನೇ ಇರುವುದು? ನೀನೇ ಹೇಳು. ಯಾವುದಾದರೊಂದನ್ನು ಗ್ರಹಿಸಿದ್ದರೆ ಅಲ್ಲವೆ ಆಮೇಲೆ ಅದು ನಮಗೆ ಅನನುಕೂಲವಾದುದೆಂದು ತಿಳಿದು ಅದನ್ನು ಬಿಡಬೇಕಾಗಿರುವುದು? ನಮಗೆ ಪ್ರತಿಕೂಲವಾಗಿರುವ ಮತ್ತು ಬಿಡುವುದರಿಂದ ನಾಶಗೊಳಿಸಬೇಕಾಗಿರುವ ವಸ್ತುವನ್ನು ಯಾವಾಗಲೂ ಸ್ವೀಕರಿಸದೇನೇ ಇರುವಾಗ ಇನ್ನು "ಇದು ಹೇಯ" ವೆಂದು ಹೇಗೆ ತಾನೇ ಹೇಳಲಾಗುವುದು?

೧೧. ಪ್ರಪಂಚದಲ್ಲಿರುವ ಸಕಲ ಪದಾರ್ಥಗಳೂ ಅತ್ಯಂತ ತುಚ್ಛವಾದವುಗಳೇ ಸರಿ. ಆದರೆ ಅವುಗಳೇ, ಕಾಲವೈಪರೀತ್ಯವಶದಿಂದ ಅತುಚ್ಛಗಳಾಗುವುದೂ ಉಂಟು. ಹೀಗೆ ಪ್ರಾಪಂಚಿಕ ವಸ್ತುಗಳಲ್ಲಿನ ತುಚ್ಛತ್ವ ಅತುಚ್ಛತ್ವಗಳು ನಿಯತವಲ್ಲದಿರುವುದರಿಂದ, ಈ ಅನಿಯತ ಧರ್ಮಗಳನ್ನು ಅನುಸರಿಸಿ ತದನುಗುಣವಾಗಿ ಹೇಯವೆಂದೂ ಉಪಾದೇಯವೆಂದೂ ಹೇಳಲಾಗುವುದಿಲ್ಲ. ಅದು ಕಾರಣ ನನ್ನ ಮನಸ್ಸಿನೊಳಗಿದ್ದ, ಪ್ರಾಪಂಚಿಕ ವಸ್ತುಗತವಾದ ತುಚ್ಛತ್ವ, ಅತುಚ್ಛತ್ವರೂಪ ಭ್ರಮೆಗಳು ಯಾವಾಗಲೋ ಬಹು ದೀರ್ಘಕಾಲದ ಹಿಂದೆಯೇ ತೊಲಗಿ ಹೋಗಿರುವುವು.

ದೇಶಕಾಲವಶಾದೇವ ತುಚ್ಛಸ್ಯಾತುಚ್ಛತಾಮಿಹ ।
ಅತುಚ್ಛಸ್ಯ ತು ತುಚ್ಛತ್ವಂ ವರ್ಜ್ಯೇ ನಿಂದಾಸ್ತುತೀ ಬುಧೈಃ ॥ ೧೨ ॥

ರಾಗಾನ್ನಿಂದಾಸ್ತುತೀ ಲೋಕೇ ರಾಗಶ್ಚ ಪರಿವಾಂಛಿತಂ ।
ವಾಂಛ್ಯತೇ ಚ ಮಹೋದಾರಂ ವಸ್ತು ಶೋಭನಬುದ್ಧಿನಾ ॥ ೧೩ ॥

ತ್ರೈಲೋಕ್ಯೇ ಚ ಸ್ತ್ರಿಯಃ ಶೈಲಾಃ ಸಮುದ್ರವನರಾಜಯಃ ।
ಭೂತಾನಿ ವಸ್ತುಶೂನ್ಯಾನಿ ಸಾರೋ ನಾಸ್ತ್ಯತ್ರ ವಸ್ತುತಃ ॥ ೧೪ ॥

ಮಾಂಸಾಸ್ಥಿದಾರುಮೃದ್ರತ್ನಮಯೇ ಜಗತಿ ಜರ್ಜರೇ ।
ವಾಂಛನೀಯ ಮಿಹೇನೇಽಸ್ಮಿನ್ ಶೂನ್ಯೇ ಕಿಮಿವ ವಾಂಛ್ಯತೇ ॥ ೧೫ ॥

---

೧೨. ದೇಶ, ಕಾಲ ಮುಂತಾದವುಗಳ ಪ್ರಭಾವದಿಂದಲೇ ಈ ಜಗತ್ತಿನಲ್ಲಿ ತುಚ್ಛವಾಗಿರುವ ವಸ್ತುವು ಅತುಚ್ಛವೆನ್ನಿಸುವುದು. ಅಂತೆಯೇ ಅತುಚ್ಛವೂ ತುಚ್ಛವಾಗುವುದು. ಹೀಗಿರುವುದರಿಂದ ಪ್ರಾಜ್ಞರು ತುಚ್ಛಾತುಚ್ಛಗಳ ನಿಂದಾ ಸ್ತುತಿಗಳನ್ನು ಪರಿವರ್ಜಿಸ ಬೇಕಾಗಿರುವುದು.

೧೩. ಯಾವುದಾದರೂ ಪ್ರಿಯವಾದ ವಸ್ತುವಿನಲ್ಲಿ ಅನುರಾಗವನ್ನಿಡುವುದರಿಂದ ಸ್ತುತಿಗಳು ಲೋಕದಲ್ಲಿ ಪ್ರಸಕ್ತವಾಗುವುವು. ಪ್ರಿಯವಾದ ವಸ್ತುವಿನ ಅಪೇಕ್ಷೆಯೇ ರಾಗವೆನ್ನಿಸುವುದು. ಶುಭಾಶಯವುಳ್ಳ ಮಹಾ ವಿವೇಕಿಯಾದವನು ಸರ್ವದಾ ಅತ್ಯಂತ ಉದಾರವಾದ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವಾದ ಆತ್ಮ ವಸ್ತುವನ್ನು ಸ್ವಾತ್ಮತ್ವೇನ ಪಡೆಯಲು ಅಪೇಕ್ಷಿಸುವನೇ ಹೊರತು-ಅತಿ ತುಚ್ಛವಾದ ಅನಾತ್ಮ ದೃಶ್ಯ ವಸ್ತುವನ್ನು ಎಂದಿಗೂ ಅಪೇಕ್ಷಿಸುವುದಿಲ್ಲ.

೧೪. ಲೋಕ ತ್ರಯದಲ್ಲಿ ಎಲ್ಲೆಲ್ಲಿ ಹುಡುಕಿದರೂ ಸ್ತ್ರೀಯರು. ಪರ್ವತಗಳು ಸಮುದ್ರಗಳು ವನ ಶ್ರೇಣಿಗಳು ಇತ್ಯಾದಿ ಅಲ್ಪ ಭೋಗ್ಯ ವಸ್ತುಗಳೇ ಕಾಣಿಸುವುವು. ಈ ಪ್ರಪಂಚಗತವಾದ ಸಕಲ ಭೂತಗಳೂ ವಸ್ತುಗಳೂ ಸತ್ಯತ್ವ ಶೂನ್ಯವಾದವುಗಳು. ಇವುಗಳಲ್ಲಿ ವಸ್ತುತಃ ಸಾರವೆಂಬುದೇ ಇಲ್ಲ.

೧೫. ಈ ಜಗತ್ತು ಕೇವಲ ಮಾಂಸ, ಮೂಳೆಗಳು. ದಾರು (ಮರ) ಮಣ್ಣು ರತ್ನ ಇತ್ಯಾದಿ ವಸ್ತುಗಳಿಂದ ತುಂಬಿರುವುದು. ಮತ್ತು ಅವುಗಳ ಭೋಗದಿಂದ ಜರ್ಜರಿತವಾದುದು. ಇಂತಹ ಶೂನ್ಯವಾದ ವಸ್ತುವು ಯಾವುದೊಂದೂ ಸುತರಾಂ

ನಾಂಥಾಯಾಂ ವಿನಿವೃತ್ತಾಯಾಂ ಸಂಕ್ಷಯೋ ದ್ವೇಷರಾಗಯೋಃ ।
ದಿನಲಕ್ಷ್ಮ್ಯಾಂ ವ್ಯಪೇತಾಯಾಮಾಲೋಕಾತಪಯೋರಿವ　　॥ ೧೬ ॥

ಅಲಮತಿವಿತತೈರ್ವಚಃ ಪ್ರಪಂಚೈ
ರಿಯಮುಚಿತೇಹ ಸುಖಾಯ ದೃಷ್ಟಿರೇಕಾ ।
ಉಪಶಮಿತರಸಂ ಸಮಂ ಮನೋನ್ತ
ರ್ಯದಿ ಮುದಿತಂ ತದನುತ್ತಮಾ ಪ್ರತಿಷ್ಠಾ　　॥ ೧೭ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ “ಸುರಘು ಪರಿಘ ನಿಶ್ಚಯೋ” ನಾಮ ತ್ರಿಷಷ್ಟಿತಮಃ ಸರ್ಗಃ.

ಇಲ್ಲವೇ ಇಲ್ಲವು ಅಪೇಕ್ಷಣೀಯವಾದ ವಸ್ತುವೊಂದಿದ್ದರೆ ಅಲ್ಲವೆ ಅದನ್ನು ನಾವು ಅಪೇಕ್ಷಿಸಬಹುದು. ಅಂತಹ ವಸ್ತುವೇ ಇಲ್ಲದಿರುವಾಗ ಯಾವುದನ್ನು ತಾನೇ ಅಪೇಕ್ಷಿಸಬಹುದು.

೧೬. ದಿನಲಕ್ಷ್ಮಿಯು ಇಲ್ಲದೆ ಹೋಗಲು ಭೂಮಿಯ ಮೇಲೆ ಬೆಳಕೂ ಬಿಸಿಯೂ ತಾನಾಗಿಯೇ ಕಣ್ಮರೆಯಾಗುವಂತೆ ವಸ್ತುಗತವಾದ ಅಪೇಕ್ಷೆಯೇ ನಿವೃತ್ತಿಯಾದ ಬಳಿಕ ರಾಗ ದ್ವೇಷಗಳೆರಡೂ ತಾನಾಗಿಯೇ ನಾಶಹೊಂದುವುವು.

೧೭. ಇನ್ನು ಹೆಚ್ಚಾಗಿ ಹೀಗೆ ಮಾತುಗಳನ್ನು ಬೆಳೆಯಿಸಿಕೊಂಡು ಬಹು ವಿಸ್ತಾರವಾಗಿ ಮಾತನಾಡುವುದರಿಂದ ಪ್ರಯೋಜನವಿಲ್ಲ. ಸಾಕು ಇಲ್ಲಿಗೇ ನಿಲ್ಲಿಸಿ ಬಿಡುವ. ನಿರತಿಶಯಾನಂದೈಕರಸರೂಪ ಸ್ವಾತ್ಮ ಸಂಸ್ಥಿತಿಯೆಂಬ ಪರಮ ಸುಖ ಲಾಭಕ್ಕೆ, ಈ ಆಧ್ಯಾತ್ಮಿಕ ದೃಷ್ಟಿಯೊಂದೇ ಉಚಿತವಾದ ಸಾಧನವು. ಮನಸ್ಸು ತನ್ನೊಳಗೆ ಸಹಜವಾಗಿರುವ ರಾಗಗಳನ್ನು ಸಮಗ್ರವಾಗಿ ಶಾಂತಿಗೊಳಿಸಿಕೊಂಡು, ಸುಖ ದುಃಖಾದಿ ದ್ವಂದ್ವಗಳು ಪ್ರಾಪ್ತವಾದಾಗ ಸಮವಾಗಿರುತ್ತಾ, ಸರ್ವದಾ ಆನಂದಪೂರ್ಣವಾಗಿ ಪ್ರಶಾಂತವಾಗಿದ್ದುಬಿಟ್ಟರೆ, ಅದೇ ಆಗಲೇ ಉತ್ತಮೋತ್ತಮ ನಾದ ಪರಮಪದದಲ್ಲಿ (ಸ್ವಾತ್ಮಸ್ವರೂಪದಲ್ಲಿ) ಅಚಲವಾದ ಪ್ರತಿಷ್ಠೆಯೆಂದು ತಿಳಿಯ ಬೇಕು. ಅದೇ ಸಮಾಧಿನಿಷ್ಠೆಯು ಮತ್ತು ಜ್ಞಾನನಿಷ್ಠೆಯು ಎಂದು ಭಾವ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ “ಸುರಘು ಪರಿಘ ನಿಶ್ಚಯ” ವೆಂಬ ಆರವತ್ತ ಮೂರನೆಯ ಸರ್ಗವು.

ಚತುಷ್ಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಸುರಘುಃ ಪರಿಘಶ್ಚೈವ ವಿಚಾರ್ಯೇತಿ ಜಗದ್ಭ್ರಮಂ ।
ಮಿಥಃ ಪ್ರಪೂಜಿತೌ ತುಷ್ಟೌ ಸ್ವವ್ಯಾಪಾರಪರೌ ಗತೌ ॥ ೧ ॥

ತದೇವ ರಾಘವ ಶ್ರುತ್ವಾ ಪರಮಂ ಬೋಧಕಾರಣಂ ।
ಅನೇನೈವ ವಿಬೋಧೇನ ಭವ ಲಬ್ಧಾಸ್ಪದಃ ಸ್ಫುಟಂ ॥ ೨ ॥

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮಚಂದ್ರ, ಹೇಗೆ ಹಿಂದೆ ವರ್ಣಿತವಾದ ಪ್ರಕಾರದಿಂದ ಆ ಸುರಘುವೂ ಮತ್ತು ಪರಿಘನೂ, ಜಗದ್ಭ್ರಾಂತಿಯನ್ನು ಕುರಿತು ವಿಚಾರ ಮಾಡಿ, ಅದರ ನಿರ್ಣಯವನ್ನು ಪರಸ್ಪರ ತಿಳಿದುಕೊಂಡು ಒಬ್ಬರಿಗೊಬ್ಬರು ಆದರದಿಂದ ಅರ್ಘ್ಯಪಾದ್ಯಾದಿಗಳಿಂದ ಸತ್ಕೃತರಾಗಿ ಪರಮ ಸಂತೋಷದಿಂದ ತಮ್ಮ ತಮ್ಮ ವ್ಯವಹಾರಗಳಲ್ಲಿ ನಿರತರಾಗಿ ಹೊರಟು ಹೋದರು.

೨. ಅಯ್ಯ ರಾಘವ, ಆ ಸುರಘು ಪರಿಘರ ಪೂರ್ವವರ್ಣಿತ ಸಂವಿವಾದ ರೂಪ ವಿಚಾರವನ್ನು ಕೇಳಿ ಅದರ ಅರ್ಥವನ್ನು ಮನಸ್ಸಿನಲ್ಲಿ ಚೆನ್ನಾಗಿ ಅವಧರಿಸು ಅದೇ ತತ್ತ್ವಜ್ಞಾನೋದಯಕ್ಕೆ ಪರಮ ಕಾರಣವೆಂದು ತಿಳಿ. ಸುಪ್ರತಿಷ್ಠಿತವಾದ ಈ ತತ್ತ್ವ ಜ್ಞಾನದ ಸಹಾಯದಿಂದಲೇ ನೀನು ಆನಂದೈಕರಸರೂಪ ಪರಮಪದ ವನ್ನು ಪಡೆದು ಆತ್ಮಾರಾಮನಾಗುವೆ ಇದರಲ್ಲಿ ಸಂಶಯವಿಲ್ಲ.

ಪರಯಾ ಪ್ರಜ್ಞಯಾ ಧೀರ ವಿಚಾರಗತ ತೀಕ್ಷ್ಣಯಾ ।
ಗಲತ್ಯಲಮಹಂಕಾರ ಕಾಲಮೇಘೇ ಹೃದಂಬರೇ || ೩ ||

ಸಮಸ್ತ ಲೋಕಾನುಮತೇ ಸಫಲೇ ಹ್ಲಾದಕಾರಿಣಿ ।
ನಿರ್ಮಲೇ ವಿತತೇ ಚೇತ ಶ್ಶರತ್ಕಾಲ ಉಪಸ್ಥಿತೇ || ೪ ||

ಧ್ಯೇಯೇ ಶರಣ್ಯೇ ಸುಭಗೇ ಸಕಲಾನಂದ ಸಂಪದಿ ।
ಸುಪ್ರಸನ್ನೇ ಚಿದಾಕಾಶೇ ಸ್ಥೀಯತೇ ಪರಮಾತ್ಮನಿ || ೫ ||

ಯೋ ನಿತ್ಯಮಧ್ಯಾತ್ಮಮಯೋ ನಿತ್ಯಮಂತರ್ಮುಖಃ ಸುಖೀ ।
ನಿತ್ಯಂ ಚಿದನುಸಂಧಾನೋ ಮನಃ ಶೋಕೈರ್ನ ಬಾಧ್ಯತೇ || ೬ ||

೩-೪-೫. ಪಂಡಿತರೊಡನೆ ಕಲೆತು ಆತ್ಮ ತತ್ತ್ವವನ್ನು ವಿಚಾರ ಮಾಡುವುದರಿಂದಲೂ ಮತ್ತು ತಾನಾಗಿಯೇ ಮಾಡಿದ ನಿಶ್ಚಲವಾದ ಆತ್ಮ ವಿಚಾರದಿಂದಲೂ ಕೂಡ ತೀಕ್ಷ್ಣತೆಯನ್ನು ಪಡೆದಿರುವ ಆತ್ಮ ತತ್ತ್ವ ಸಾಕ್ಷಾತ್ಕಾರರೂಪ ಪರಮಜ್ಞಾನದಿಂದ ಹೃದಯವೆಂಬ ಗಗನಮಂಡಲದಲ್ಲಿ ಹಾರಾಡುವ ಅಹಂಕಾರವೆಂಬ ಕಾಲಮೇಘವು ಸಂಪೂರ್ಣವಾಗಿ ತೊಲಗಿ ಹೋಗಲಾಗಿ ಮತ್ತು ಸಕಲ ಲೋಕಗಳಿಗೂ ಅಭಿಮತವಾದ ಅಜ್ಞಾನಧ್ವಂಸರೂಪ ಮೋಕ್ಷವೆಂಬ ಫಲವನ್ನು ಕೊಡುವ ಸಕಲ ಸಂತಾಪ ಶೂನ್ಯತೆಯಿಂದ ಆಹ್ಲಾದಕರವಾದ ರಾಗಾದಿ ಮಲರಹಿತವಾದ ಸರ್ವತ್ರ ಪರಿಪೂರ್ಣವಾದ ಮನಸ್ಸು ಚೇತಸ್ ಎಂಬ ಶರತ್ಕಾಲವು ಸಂಪ್ರಾಪ್ತವಾಗಲಾಗಿ ಮುಮುಕ್ಷುವೆಂಬ ಸೂರ್ಯನು ಸರ್ವದಾ ಧ್ಯಾನಯೋಗ್ಯವಾದ, ಸರ್ವಾನರ್ಥ ಮತ್ತು ನಿವರ್ತಕವಾದ ಕಾರಣ ಆಶ್ರಿತರನ್ನು ಆಪತ್ತಿನಿಂದ ಸಂರಕ್ಷಣೆ ಮಾಡುವ, ಶಕ್ತಿಯುಳ್ಳ, ಅನಾಯಾಸವಾಗಿ (ಸ್ವರೂಪವೇ ಆಗಿರುವ ಕಾರಣ) ಲಭ್ಯವಾಗುವ ಪ್ರಪಂಚ ಗತವಾದ (ಹಿರಣ್ಯ ಗರ್ಭ ಇಂದ್ರಾದಿಗಳನ್ನು ಮೊದಲುಗೊಂಡಿರುವ) ಸಕಲ ವಿಧ ಆನಂದಗಳಿಗೂ ನಿಧಿ ಪ್ರಾಯವಾದ, ನಿತ್ಯ ಶುದ್ಧವಾದ ಪರಮಾತ್ಮ ಚಿದ್ರೂಪವೆಂಬ ಆಕಾಶದಲ್ಲಿ ವಿರಾಜಮಾನನಾಗಿ ಸುಪ್ರತಿಷ್ಠಿತನಾಗಿರುವನು.

೬. ಯಾವ ಮಹಾನುಭಾವನು ಸರ್ವದಾ ಅಧ್ಯಾತ್ಮ ವಿಚಾರದಲ್ಲಿ ಮಗ್ನನಾಗಿ, ಆತ್ಮತತ್ತ್ವ ವಿಚಾರವೊಂದರಿಂದಲೇ ಪ್ರಚುರನಾಗಿರುವನೋ, ಅಂತರ್ಮುಖನಾಗಿ (ಬಾಹ್ಯಾಸಕ್ತಿ ಶೂನ್ಯನಾಗಿ, ಸಮಾಧಿಸ್ಥನಾಗಿ) ಆತ್ಮಾರಾಮನಾಗಿರುವನೋ ಮತ್ತು ಅವಿಚ್ಛಿನ್ನವಾಗಿ, ಅತ್ಯಾದರದಿಂದ ಪುನಃ ಪುನಃ ಆನಂದ

ವ್ಯವಹಾರ ಪರೋಽತ್ಯುಚ್ಚೈಃ ರಾಗದ್ವೇಷಮಯೋಽಪಿ ಸನ್ ।
ನಾಂತಃ ಕಲಂಕಮಾಯಾತಿ ಪದ್ಮೋ ಜಲಗತೋ ಯಥಾ ॥ ೭ ॥

ಸಮ್ಯಗ್ವಿಜ್ಞಾನವಾನ್ ಶುದ್ಧೋ ಯೋಽಂತಃಶಾಂತಮನಾ ಮುನಿಃ ।
ನ ಬಾಧ್ಯತೇ ಸ ಮನಸಾ ಕರಿಣೇವ ಮೃಗಾಧಿಪಃ ॥ ೮ ॥

ಭೋಗೈಕಶರಣಂ ದೀನಂ ನ ಚಿತ್ತಂ ಜ್ಞಸ್ಯ ವಿದ್ಯತೇ ।
ನಂದನೇ ದುರ್ದ್ರುಮ ಇವ ಜ್ಞ ಚಿತ್ತಂ ಹಿ ಮಹಾವಪುಃ ॥ ೯ ॥

ಘನವಾದ ಸ್ವಾತ್ಮಚಿದ್ರೂಪವನ್ನೇ ಆಸ್ವಾದನೆ ಮಾಡುತ್ತಿರುವನೋ, ಅಂತಹವನ ಮನಸ್ಸು ಪುನಃ ಎಂದಿಗೂ ಸರ್ವಶೋಕಗಳಿಂದಲೂ ಸ್ವಲ್ಪವೂ ಸಂತಾಪ ಗೊಳ್ಳುವುದೇ ಇಲ್ಲ.

೭. ಅಂತಹ ಮಹಾನುಭಾವನು, ಬಹಳ ಹೆಚ್ಚಾಗಿ ತನ್ನ ಸ್ಥಿತಿಗೆ ಅನುರೂಪವಾದ ಲೌಕಿಕ ವ್ಯವಹಾರದಲ್ಲಿ ನಿರತನಾಗಿದ್ದರೂ, ರಾಗದ್ವೇಷಗಳಿಂದ ಪ್ರಚುರನಾಗಿರುವಂತೆ ಮೂಢಜನರು ಕಲ್ಪಿಸಿದಾಗ್ಯೂ ಕೂಡ, ನೀರಿನ ಮಧ್ಯದಲ್ಲಿ ರುವ ಕಮಲ ಪುಷ್ಪವು ಹೇಗೆ ಸ್ವಲ್ಪವೂ ಸಂಪರ್ಕವನ್ನು ಪಡೆಯದೆ ನಿರ್ಲಿಪ್ತ ವಾಗಿರುವುದೋ, ಹಾಗೆಯೇ ಆತನು ಮನಸ್ಸಿನೊಳಗೆ ಸ್ವಲ್ಪವಾದರೂ ಕಳಂಕ ವನ್ನು ಹೊಂದದೆ ನಿಷ್ಕಳಂಕನಾಗಿಯೇ ಇರುವನು. (ಅವಿದ್ಯಾ, ಕಾಮ, ಅಭಿಮಾನ ಇತ್ಯಾದಿಗಳಿಲ್ಲದಿರುವುದೇ ಆವನ ನಿಷ್ಕಳಂಕತ್ವಕ್ಕೆ ಕಾರಣವು.)

೮. ಯಾವಾತನು ಸಂಪೂರ್ಣವಾಗಿಯೂ ನಿಸ್ಸಂದೇಹವಾಗಿಯೂ ಸ್ವಾತ್ಮ ತತ್ತ್ವ ಜ್ಞಾನ ಸಂಪನ್ನನಾಗಿರುವನೋ ಶುದ್ಧನಾಗಿರುವನೋ ಯಾವಾತನ ನಿಷ್ಕಾ ಮವಾದ ಮನಸ್ಸು ಒಳಗೆ ಪ್ರಶಾಂತವಾಗಿರುವುದೋ ಮತ್ತು ಯಾವಾತನು ಸರ್ವದಾ ಆತ್ಮೈಕ ಮನನ ಶೀಲನಾಗಿರುವನೋ ಅಂತಹ ಮಹಾತ್ಮನನ್ನು ಒಂದು ಆನೆಯು ಸಿಂಹವನ್ನು ಬಾಧೆಗೊಳಿಸಲು ಹೇಗೆ ಅಸಮರ್ಥವಾಗಿರುವುದೋ ಹಾಗೆ ಮನಸ್ಸು ಎಂದಿಗೂ ಪೀಡಿಸಲಾರದು.

೯. ಹೇಗೆ ದೇವಲೋಕದ ನಂದನವನದಲ್ಲಿ ವಿಷವೃಕ್ಷ ಮುಳ್ಳಿನಗಿಡ ಮುಂತಾದ ದುಷ್ಟವೃಕ್ಷಗಳಿಲ್ಲವೋ ಹಾಗೆ ಆತ್ಮಜ್ಞಾನ ನಿಷ್ಠನ ಮನಸು ಐಹಿ ಕಾಮುಷ್ಮಿಕ ವಿಷಯೋಪ ಭೋಗಗಳಿಗೆ ಆಸೆಪಟ್ಟು ಮರೆಹೊಕ್ಕು ಅತಿ ಕೃಪಣ

ವಿರಕ್ತೋ ಜನ್ಮಮರಣೇ ಯಥಾ ದುಃಖೀ ನ ಮಾನವಃ ।
ಪರಿಜ್ಞಾತಾಖಿಲಾವಿದ್ಯಂ ತಥಾ ಚಿತ್ತಂ ನ ದುಃಖಿತಂ ॥ ೧೦ ॥

ಪರಿಜ್ಞಾತಮನೋಮೋಹೋ ಜಗದ್ಭಾವೋದ್ಭವಾತ್ಮನಾ ।
ಸ್ಪೃಶ್ಯತೇ ನೈನಸಾ ಸಾಧೋ ರಜಸೇವ ನಭಸ್ತಲಂ ॥ ೧೧ ॥

ವಾಗಿಯೂ ಕ್ಷುದ್ರವಾಗಿಯೂ ಇರುವುದಿಲ್ಲ. ಏಕೆಂದರೆ ಜ್ಞಾನಿಯ ಮನಸ್ಸು ಕ್ಷುದ್ರಗಳಾದ ಸುಖಲೇಶಗಳಲ್ಲಿ ಸದಾ ನಿಸ್ಸ್ಪೃಹವಾಗಿರುವುದು. (ದೊಡ್ಡ ಹೊಟ್ಟೆಯುಳ್ಳದ್ದು ಆದುಕಾರಣ ಈ ಅಲ್ಪ ಫಲಗಳಿಂದ ಅದಕ್ಕೆ ಏನೂ ಪ್ರಯೋಜನವಾಗುವುದಿಲ್ಲ.)

೧೦. ಜನನ ಮರಣಗಳು ಕೇವಲ ದೇಹ ಧರ್ಮಗಳೆಂದು ಭಾವಿಸಿ ಅವುಗಳಿಂದ ಹರ್ಷವಿಷಾದಗಳನ್ನು ಹೊಂದದೆ ಲೋಕದಲ್ಲಿ ಅತ್ಯಂತ ವೈರಾಗ್ಯ ಶಾಲಿಯಾದ ಸನ್ಯಾಸಿಯು ಪೂರ್ವದ ಅಭಿಮಾನವನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟಿರುವನಾದ ಕಾರಣ ಅವನ ಹೆಂಡತಿಯು ಸತ್ತರೂ ಕೂಡ ಹೇಗೆ ಅವನು ಕಾಮುಕನಾದ ಸಾಮಾನ್ಯ ಮನುಷ್ಯನಂತೆ ದುಃಖ ಭಾಜನ ನಾಗುವುದಿಲ್ಲವೋ ಹಾಗೆಯೇ ತತ್ತ್ವಜ್ಞನ ಚಿತ್ತವೂ ಬಹು ವಿಧವಾಗಿ ತತ್ತ್ವ ವಿಚಾರಮಾಡಿ ಸಮಸ್ತವಾದ ವಿಷಯೇಂದ್ರಿಯ ಶರೀರಾದಿ ಸರ್ವ ದೃಶ್ಯರೂಪ ಅವಿದ್ಯೆಯು ಮಿಥ್ಯಾಭ್ರಾಂತಿಯೇ ಎಂದು ಚೆನ್ನಾಗಿ ನಿರ್ಣೀತವಾದ ಜ್ಞಾನವುಳ್ಳದ್ದಾಗಿರುವ ಕಾರಣ ಎಂದಿಗೂ ಬಾಹ್ಯವಾದ ಲೋಕ ದುಃಖದಿಂದ ಸಂಪರ್ಕವನ್ನು ಲೇಶಮಾತ್ರವೂ ಹೊಂದುವುದೇ ಇಲ್ಲ.

೧೧. ಎಲೈ ಸಾಧುವೇ, ಮನಸ್ಸು ಮಹಾಮೋಹ ಮಯವಾದುದೆಂದು ಚೆನ್ನಾಗಿ ತಿಳಿದುಕೊಂಡಿರುವ ಜ್ಞಾನಿಯನ್ನು ವಾಯುವಿನಿಂದ ಮೇಲಕ್ಕೆ ಹಾರಿದ ಪರಾಗವು ಗಗನ ತಲವನ್ನು ಸ್ಪರ್ಶಿಸದೆ ಇರುವಂತೆಯೇ ಲೌಕಿಕ ವ್ಯವಹಾರಗಳಲ್ಲಿ ಕರ್ತೃತ್ವಾಭಿಮಾನದಿಂದ ಉದ್ಭವಿಸತಕ್ಕ ಪಾಪವು ಸ್ವಲ್ಪವೂ ಸ್ಪರ್ಶಿಸದೆ ಹೋಗುವುದು (ಅಂದರೆ ಕರ್ತೃತಾಭಿಮಾನವೇ ಇಲ್ಲದಕಾರಣ ಕರ್ತೃತ್ವ ಪೂರ್ವಕವಾದ ಪಾಪ ಪುಣ್ಯ ರೂಪ ಫಲಭೋಕ್ತೃತ್ವವೂ ದೂರಾಪಾಸ್ತವೆಂದರ್ಥ.) ಮುಂದೆಯೂ ದುಃಖ ಸಂಪರ್ಕವಿಲ್ಲವೆಂದು ಭಾವ.

ಅವಿದ್ಯಾಸಂಪರಿಜ್ಞಾತಮಿದಮೇವ ಮಹೌಷಧಂ ।
ಅವಿದ್ಯಾವಿತತವ್ಯಾಧೇಸ್ತಿಮಿರಸ್ಯೇವ ದೀಪಕಂ ॥ ೧೨ ॥

ಅವಿದ್ಯಾ ಸಂಪರಿಜ್ಞಾತಾ ಯದೈವ ಹಿ ತದೈವ ಹಿ ।
ಸಾ ಪರಿಕ್ಷೀಯತೇ ಭೂಯಃ ಸ್ವಪ್ನೇನೇವ ಹಿ ಭೋಗಭೂಃ ॥ ೧೩ ॥

ವ್ಯವಹಾರಪರೋಽಪ್ಯಂತರಸಕ್ತಮತಿರೇಕಧೀಃ
ಸ್ಪೃಶ್ಯತೇ ನೈನಸಾ ಸಾಧುರ್ಮತ್ಸ್ಯೇಕ್ಷಣಮಿವಾಂಭಸಾ ॥ ೧೪ ॥

---

೧೨. ಅಂಧಕಾರವನ್ನು ದೀಪವು ನಿವಾರಣೆ ಮಾಡುವಂತೆ ಈ ಸಮಸ್ತ ಜಗತ್ತೂ ಅವಿದ್ಯಾ ಮಾತ್ರವೇ ಎಂದು ಚೆನ್ನಾಗಿ ನಿರ್ಣೀತವಾದ ವಿಚಾರ ಜನ್ಯವಾದ ಜ್ಞಾನವು ಜಗದಾಕಾರವಾಗಿ ವಿಸ್ತೀರ್ಣವಾದ ಅವಿದ್ಯೆಯೆಂಬ ದೊಡ್ಡ ವ್ಯಾಧಿಯನ್ನು ನಿಶ್ಶೇಷವಾಗಿ ನಿವಾರಣೆ ಮಾಡಿ ಬಿಡತಕ್ಕಂತಹ ಮಹಾ ದಿವ್ಯೌಷಧವು.

೧೩. ಇದು ಸ್ವಪ್ನವು ಎಂದು ಸ್ವಪ್ನವನ್ನು ಚೆನ್ನಾಗಿ ತಿಳಿದುಕೊಂಡು ಬಿಟ್ಟರೆ ಆಗಲೇ ಸ್ವಪ್ನಾನುಭೂತವಾದ ವಸ್ತು ಸಾಮಗ್ರಿಯು ಬಲುಬೇಗ ಕ್ಷಯ ಹೊಂದಿಬಿಡುವಂತೆ ಯಾವಾಗ ನಾವು ಅವಿದ್ಯೆಯನ್ನು ಇದು ಅವಿದ್ಯೆಯು ಎಂದು ಚೆನ್ನಾಗಿ ಅರಿಯುವೆವೋ ಆಗಲೇ ಆ ಅವಿದ್ಯೆಯು ಪುನಃ ಕಾಣಿಸಿಕೊಳ್ಳದೆ ಬಲು ಬೇಗ ನಾಶ ಹೊಂದಿ ಬಿಡುವುದು.

೧೪. ಮೀನು ಯಾವಾಗಲೂ ನೀರಿನೊಳಗಡೆಯೇ ವಾಸ ಮಾಡಿಕೊಂಡು ಹಾರಾಡುತ್ತಿ ಇದ್ದರೂಕೂಡ ಅದರ ಕಣ್ಣಿಗೆ ಹೇಗೆ ನೀರು ಅಂಟಿಕೊಳ್ಳದೆ ಇರುವುದೋ ಹಾಗೆಯೇ ಮನಸ್ಸಿನೊಳಗೆ ಫಲಾಭಿಸಂಧಿರಹಿತನಾಗಿರುವಂಥ ಅದ್ವಿತೀಯಾತ್ಮ ಜ್ಞಾನನಿಷ್ಠನಾದ ಸಾಧುವು ಜಗದ್ವ್ಯಾಪಾರದಲ್ಲಿ ವ್ಯವಹಾರ ಮಾಡುತ್ತಿದ್ದರೂ ಕೂಡ ಪಾಪದ ಸಂಪರ್ಕವೇ ಆತನಿಗೆ ಇಲ್ಲವು.

ಪ್ರಾಪ್ತೇ ಚಿದ್ಭಾಸುರಾಲೋಕೇ ಪ್ರಕ್ಷೀಣಾಽಜ್ಞಾನಯಾಮಿನೀ ।
ಶೇಮುಷೀ ಪರಮಾನಂದಮಾಗತಾ ಜ್ಞಸ್ಯ ರಾಜತೇ ॥ ೧೫ ॥

ಅಜ್ಞಾನನಿದ್ರೋಪಶಮೇ ಜನೋ ಜ್ಞಾನಾರ್ಕಬೋಧಿತಃ ।
ತತ್ಪ್ರಬೋಧಮವಾಪ್ನೋತಿ ಪುನರ್ಯೇನ ನ ಮುಹ್ಯತಿ ॥ ೧೬ ॥

ದಿನಾನಿ ಜೀವ್ಯತೇ ತಾನಿ ಸಾನಂದಾಸ್ತೇ ಕ್ರಿಯಾಕ್ರಮಾಃ ।
ಆತ್ಮಚಂದ್ರೋದಿತಾ ಯೇಷು ಚಿಜ್ಜ್ಯೋತ್ಸ್ನಾ ಹೃದಯಾಂಬರೇ ॥ ೧೭ ॥

---

೧೫. ಜ್ಞಾನ ನಿಷ್ಠನಿಗೆ ದಿವ್ಯವಾದ ಸ್ವಾತ್ಮ ಚೈತನ್ಯ ಪ್ರಕಾಶವು ಸರ್ವ ಕಾಲಗಳಲ್ಲಿಯೂ ಅವಿಚ್ಛಿನ್ನವಾಗಿ ದೇದೀಪ್ಯ ಮಾನವಾಗಿರುವುದು. ಆದುದರಿಂದ ಅವನಿಗೆ ಅಜ್ಞಾನವೆಂಬ ರಾತ್ರಿಯು ನಾಶವಾಗಿ ಬಿಟ್ಟಿರುವುದು. ಮತ್ತು ಅವನ ಪ್ರಜ್ಞೆಯು ನಿರತಿಶಯ ನಿತ್ಯಾನಂದ ರೂಪ ಮುಕ್ತಿಯಲ್ಲಿದ್ದುಕೊಂಡು ವಿರಾಜಿಸುವುದು.

೧೬. ಸಚ್ಛಾಸ್ತ್ರ ವಿಚಾರವೆಂಬ ಸೂರ್ಯನು ಉದಯಿಸಿದ ಕೂಡಲೇ ಜನರು ಅಜ್ಞಾನವೆಂಬ ಮಹಾಮೋಹಮಯವಾದ ನಿದ್ರೆಯನ್ನು ಕಳೆದುಕೊಂಡು ಎಚ್ಚರಗೊಳ್ಳುವರು ಮತ್ತು ವಿವೇಕ ವೈರಾಗ್ಯಗಳ ಸಹಾಯದಿಂದಲೂ ಸಂತತವಾದ ಅಭ್ಯಾಸವಶದಿಂದಲೂ ಆ ಪ್ರಬೋಧವು ಸುಪುಷ್ಟವಾಗಿ ವೃದ್ಧಿಹೊಂದಿ ಪುನಃ ಮೋಹವು ತಲೆದೋರುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ.

೧೭. ಯಾವ ಯಾವ ದಿವಸಗಳಲ್ಲಿ ಹೃದಯವೆಂಬ ಆಕಾಶದೊಳಗೆ ಆತ್ಮವೆಂಬ ಚಂದ್ರನಿಂದ ಉದಯಿಸಿದ ಚಿತ್ ಎಂಬ ಬೆಳದಿಂಗಳು ಆಹ್ಲಾದಕರವಾಗಿ ವಿರಾಜಿಸುವುದೋ ಆಯಾ ದಿನಗಳಲ್ಲಿ ಮಾತ್ರವೇ ಮನುಷ್ಯನು ನಿಜವಾಗಿ ಜೀವಿಸಿರುವನೆಂದು ಪರಿಗಣಿಸಬೇಕು. ಮತ್ತು ಆ ದಿನಗಳಲ್ಲಿ ಮಾಡಿದ ಕ್ರಿಯಾಕಲಾಪಗಳು ಮಾತ್ರವೇ ನಿಜವಾಗಿಯೂ ಆನಂದಮಯವಾದುವುಗಳು (ಇತರ ದಿನಗಳಲ್ಲಿ ಬದುಕಿದ್ದರೂ ಬದುಕಿದಹಾಗೆ ಅಲ್ಲವು ಎಂದು ಭಾವ.)

ನರೋ ಮೋಹಸಮುತ್ತೀರ್ಣಃ ಸತತಂ ಸ್ವಾತ್ಮಚಿಂತಯಾ ।
ಅಂತಃಶೀತಲತಾಮೇತಿ ಸ್ವಾಮೃತೇನೇವ ಚಂದ್ರಮಾಃ ॥ ೧೮ ॥

ತಾನಿ ಮಿತ್ರಾಣಿ ಶಾಸ್ತ್ರಾಣಿ ತಾನಿ ತಾನಿ ದಿನಾನಿ ಚ ।
ವಿರಾಗೋಲ್ಲಾಸನಾನ್ಯೇಭ್ಯ ಆತ್ಮಚಿತ್ತೋದಯಃ ಸ್ಫುಟಂಃ ॥ ೧೯ ॥

ಚಿರಂ ಶೋಚಂತಿ ತೇ ದೀನಾ ಜನ್ಮಜಂಗಲವೀರುಧಃ ।
ಆತ್ಮಾವಲೋಕನೇ ಹೇಲಾ ಯೇಷಾಮವಿಗತೈನಸಾಂ ॥ ೨೦ ॥

---

೧೮. ಚಂದ್ರನು, ತನ್ನೊಳಗಿರುವ ಅಮೃತದಿಂದಲೇ ತಾನು ಸರ್ವದಾ ಶೀತಲನಾಗಿರುವಂತೆ ಸಂತತವಾದ ಸ್ವಾತ್ಮ ಸ್ವರೂಪಾನುಸಂಧಾನ ರೂಪ ಧ್ಯಾನ ದಿಂದ ಮನುಷ್ಯನು ಅಪಾರವಾದ ಮೋಹ ಸಾಗರವನ್ನು ದಾಟಿದವನಾಗಿ ತನ್ನಲ್ಲಿ ತಾನೇ ಸಕಲ ಶೋಕ ಸಂತಾಪ ವಿನಿರ್ಮುಕ್ತನಾಗಿ ಸರ್ವದಾ ಶೀತಲನಾಗುವನು.

೧೯. ಮಿತ್ರ ಶಾಸ್ತ್ರ ಮುಂತಾದ ಯಾವ ನಿಮಿತ್ತಗಳ ದೆಸೆಯಿಂದ ಆತ್ಮಾಕಾರ ವೃತ್ತಿಯೆಂಬ ಚಿತ್ತಾಭ್ಯುದಯವು (ಚಿತ್ತದ ಅಭ್ಯುದಯವು) ವಿರಕ್ತಿಯಿಂದ ಉಲ್ಲಾಸಗೊಂಡು ಸ್ಫುಟವಾಗಿ ಸಿದ್ಧಿಸುವುದೋ ಅಂತಹ ಮಿತ್ರರೇ ನಿಜವಾದ ಮಿತ್ರರು ಆ ಶಾಸ್ತ್ರಗಳೇ ಸಚ್ಛಾಸ್ತ್ರಗಳು. ಆ ದಿನಗಳು ಮಾತ್ರವೇ ಅತ್ಯಂತ ಶ್ಲಾಘ್ಯವಾದವುಗಳು. (ಆತ್ಮ ಚಿತ್ತೋದಯಕ್ಕೆ ಪ್ರತಿಕೂಲಗಳಾದ ಮಿತ್ರ ಶಾಸ್ತ್ರಾದಿಗಳಿಗೆ ಆ ಹೆಸರು ಸಲ್ಲ ತಕ್ಕದ್ದಲ್ಲ.)

೨೦. ಶಾಸ್ತ್ರ ವಿಹಿತಗಳಾದ ನಿತ್ಯ ನೈಮಿತ್ತಿಕ ಕರ್ಮಗಳನ್ನು ಕೇವಲ ಪರಮೇಶ್ವರ ಪ್ರೀತ್ಯರ್ಥವಾಗಿ ಅಭಿಮಾನರಾಹಿತ್ಯದಿಂದ ಅನುಷ್ಠಾನ ಮಾಡದೆಯೂ, ಅದರ ಮೂಲಕ ತಮ್ಮ ಪಾಪಕ್ಷಯವನ್ನು ಮಾಡಿಕೊಳ್ಳದೆಯೂ, ಮಲಿನಚಿತ್ತರಾಗಿರುವ ನರಪಶುಗಳು, ಸ್ವಾತ್ಮದರ್ಶನೋಪಾಯದಲ್ಲಿ ಉಪೇಕ್ಷೆಯಿಂದ ಪರಾಙ್ಮುಖರಾಗಿರುವ ಕಾರಣ, ಅವರು ಜನನಮರಣಪ್ರವಾಹರೂಪವಾದ ಈ ಸಂಸಾರವೆಂಬ ದುರ್ಗಮವಾದ ಕಾಡಿನಲ್ಲಿ ಬಳ್ಳಿಗಳಂತೆ ಸುತ್ತಿಕೊಂಡು, ಅತ್ಯಂತ ದೀನರಾಗಿ ಕಂಗೆಟ್ಟು, ಬಹುಕಾಲ (ಆತ್ಮದರ್ಶನಲಾಭ ಪರ್ಯಂತ) ನಾನಾವಿಧ ಶೋಕಗಳಿಗೆ ಗುರಿಯಾಗಿ ಸದಾ ನರಳುತ್ತಲಿರುವರು.

ಆಶಾಪಾಶಶತೈರ್ಬದ್ಧಂ ಭೋಗೋಲಪಸುಲಾಲಸಂ ।
ಜರಾಜರ್ಜರಿತಾಕಾರಂ ಶೋಕೋಚ್ಛ್ವಾಸಕದರ್ಥಿತಂ ॥ ೨೧ ॥

ವ್ಯಥದುಃಖಮಹಾಭಾರಂ ಜನ್ಮಜಂಗಲಜೀವಿತಂ ।
ಕುಕರ್ಮಕರ್ದಮಾಲಿಪ್ತಂ ಮೋಹಪಲ್ವಲಶಾಯಿನಂ ॥ ೨೨ ॥

ರಾಗದಂಶಾವಲೀದಷ್ಟಂ ಕೃಷ್ಟಂ ತೃಷ್ಣಾವರತ್ರಯಾ ।
ಮನೋವಣಿಚ್ಚಿಕೇತಸ್ಥಂ ಬಂಧು ಬಂಧನನಿಶ್ಚಲಂ ॥ ೨೩ ॥

---

೨೧. ಅಯ್ಯ ರಾಮ, ಈ ಜೀವವನ್ನು ಒಂದು ದೊಡ್ಡ ಗೂಳಿಯೆಂದು ಭಾವಿಸು. ಇದು ನೂರಾರು ಆಶೆಗಳೆಂಬ ಪಾಶಗಳಿಂದ (ಹಗ್ಗ) ಕಟ್ಟಕದಲದೆ ಇರುವಂತೆ ಬಲವಾಗಿ ಕಟ್ಟಲ್ಪಟ್ಟಿರುವುದು. ಶಬ್ದ ಸ್ಪರ್ಶಾದಿ ವಿಷಯೋಪಭೋಗಗಳೆಂಬ ನೀರಸವಾದ ಹುಲ್ಲುಕಡ್ಡಿಗಳಲ್ಲಿ ಮಹಾ ಆಶೆಯನ್ನಿಟ್ಟಿರುವುದು. ಇದರ ದೇಹವೆಲ್ಲವೂ ಮುಪ್ಪಿನಿಂದ ಬಹಳ ಶಿಥಿಲವಾಗಿ ಬಿಟ್ಟಿರುವುದು. ನಾನಾವಿಧ ಸಾಂಸಾರಿಕ ಶೋಕಗಳಿಂದ ಕಂಗೆಟ್ಟು, ಆಯಾಸದಿಂದ (ಉಸಿರನ್ನು ಬೇಗಬೇಗನೆ ಮೇಲಕ್ಕೆ ಎದುತ್ತಾ) ಉಚ್ಛ್ವಸಿಸುತ್ತಾ ಸಂಕಟಪಡುತ್ತಿರುವುದು.

೨೨. ಮತ್ತು ಈ ಜೀವ ಬಲೀವರ್ದವು. ದುಃಖ ಪರಂಪರೆಗಳೆಂಬ, ಹೊರಲಾರದಷ್ಟು ಬಹು ಹೆಚ್ಚಾದ ಭಾರವನ್ನು ಹೊತ್ತಿರುವುದು. ನಾನಾ ಯೋನಿಗಳಲ್ಲಿ ಅಸಂಖ್ಯಾಕ ಜನ್ಮಗಳನ್ನು ಪಡೆಯುವಿಕೆಯೆಂಬ ಘೋರ ನಿರ್ಜನಾರಣ್ಯದಲ್ಲಿ ವಾಸಮಾಡಿಕೊಂಡಿರುವುದು. ನಿಷಿದ್ಧ ಕರ್ಮಾಚರಣಗಳೆಂಬ ಕೆಸರಿನಿಂದ ಅದರ ದೇಹವೆಲ್ಲವೂ ಬಳಿಯಲ್ಪಟ್ಟು ಅಸಹ್ಯವಾಗಿರುವುದು. ಮಹಾ ಮೋಹವೆಂಬ ಕುಂಟೆಯಲ್ಲಿ ಬುರುದೆಯಾದ ನೀರಿನೊಳಗೆ ಸದಾ ಬಿದ್ದುಕೊಂಡು ಮೈಮರೆತಿರುವುದು.

೨೩. ಪ್ರಾಪಂಚಿಕ ವಿಷಯುಗಳಲ್ಲಿನ, ರಾಗಗಳೆಂಬ ಕಾಡುನೊಣಗಳು ಇದನ್ನು ಕಚ್ಚಿ ಕಚ್ಚಿ ನೋಯಿಸುತ್ತಿರುವುವು. ತೃಷ್ಣೆಯೆಂಬ ಚರ್ಮಮಯವಾದ ರಜ್ಜುವನ್ನು ಇದರ ಮೂಗಿಗೆ ಬಲವಾಗಿ ಕಟ್ಟಿರುವುದರಿಂದ ಅದು ಇದನ್ನು ಸೆಳೆಯುತ್ತಿರುವುದು. ಮತ್ತು ಮನಸ್ಸೆಂಬ ವರ್ತಕನ ಆಜ್ಞೆಯೆಂಬ ಅಂಗಡಿ

ಪುತ್ರದಾರಜರಾಜೀರ್ಣೇ ಮಗ್ನೋನ್ಮಗ್ನಂ ಕುಕರ್ದಮೇ ।
ಶ್ರಾಂತಂ ವಿಗತವಿಶ್ರಾಮಂ ಭಗ್ನಮಾದೀರ್ಘವರ್ತ್ಮನಿ ॥ ೨೪ ॥

ಗಮಾಗಮಪರಿಕ್ಷೀಣಂ ಸಂಸಾರಾರಣ್ಯಚಾರಿಣಂ ।
ಅಲಬ್ಧಶೀತಲಚ್ಛಾಯಂ ತೀವ್ರತಾಪೋಪತಾಪಿತಂ ॥ ೨೫ ॥

ಆಕಾರಭಾಸುರಂ ದೀನಂ ಬಾಹ್ಯೈರಾಕ್ರಾಂತಮಿಂದ್ರಿಯೈಃ ।
ಕರ್ಮಘಂಟಾರವಾಕ್ರಾಂತಂ ಕ್ರಾಂತಂ ದುಷ್ಕೃತತಾಡನೈಃ ॥ ೨೬ ॥

ಯೊಳಗೆ, ವಶವರ್ತಿಯಾಗಿರುವುದು. ಬಂಧುಜನಗಳೆಂಬ ಅನೇಕ ಬಂಧನಗಳಿಂದ ಬಿಗಿಯಲ್ಪಟ್ಟು, ಕಟ್ಟಕದಲಡೆ ನಿಂತಿರುವುದು. (ಚಲಿಸುವುದಕ್ಕೂ ಶಕ್ತಿಯಿಲ್ಲದಿರುವುದು.)

೨೪. ತನ್ನ ಮಕ್ಕಳು, ಹೆಂಡತಿ, ವಾರ್ಧಕ ಮುಂತಾದವುಗಳ ಚಿಂತೆಯೆಂಬ, ಅಲ್ಲಿಯೇ ಎಷ್ಟೋ ದಿನಗಳಿಂದ ಬಿದ್ದು ಕೊಳೆಯುತ್ತಿರುವ, ಸೆಗಣಿಯುರೊಚ್ಚಿನಲ್ಲಿ ಪುನಃ ಪುನಃ ಮುಳುಗುತ್ತಲೂ, ಏಳುತ್ತಲೂ ಇರುವುದು. ಅತ್ಯಂತ ದೀರ್ಘವಾದ ಈ ಸಂಸಾರವೆಂಬ ಅರಣ್ಯದ ವಿಷಮವಾದ ದಾರಿಯಲ್ಲಿ ಬಲುದೂರ ನಡೆದು ನಡೆದು, ಮಧ್ಯ ಮಧ್ಯದಲ್ಲಿ ಎಷ್ಟೋ ಸಲ ಮುಗ್ಗುರಿಸುತ್ತಾ, ಗಾಯ ಪಡೆದು, ಎಲ್ಲಿಯೂ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುವುದಕ್ಕೂ ಆಸ್ಪದವಿಲ್ಲದೆ ಸುತ್ತಿ ಸುತ್ತಿ ತೊಳಲುತ್ತಾ ಬಹಳವಾಗಿ ಬಳಲುವುದು.

೨೫. ಹೀಗೆ ಇದು ಸಂಸಾರವೆಂಬ ಅರಣ್ಯಮಾರ್ಗದಲ್ಲಿ ಸರ್ವದಾ ಅವಿಶ್ರಾಂತವಾಗಿ ಸಂಚರಿಸುತ್ತಾ ಅತ್ತಿತ್ತ ಹೋಗಿ ಬಂದು ಅಲೆದಾಡುವುದರಿಂದ, ಇದರ ದೇಹವೆಲ್ಲ ಬಹಳವಾಗಿ ಕುಗ್ಗಿ ಕೃಶವಾಗಿರುವುದು. ಸ್ವಲ್ಪ ಹೊತ್ತಾದರೂ ವಿಶ್ರಮಿಸಿಕೊಳ್ಳೋಣವೆಂದರೆ, ಸ್ವಲ್ಪವಾದರೂ ತಣ್ಣನೆಯ ನೆರಳಿರುವ ಪ್ರದೇಶವು ಯಾವುದೂ ಎಲ್ಲಿಯೂ ಇದಕ್ಕೆ ಸಿಗುವುದಿಲ್ಲ. ಅತಿ ತೀಕ್ಷ್ಣವಾದ ಸಾಂಸಾರಿಕ ತಾಪತ್ರಯಗಳೆಂಬ ಸಹಿಸಲಶಕ್ಯವಾದ ಬಿಸಿಲಾದರೋ ಇದನ್ನು ಸಂತತವಾಗಿ ದಹಿಸುತ್ತಾ ಸಂತಾಪಕರವಾಗಿರುವುದು.

೨೬. ಇದರ ಆಕಾರವು ಮಾತ್ರ ಹೊರಗೆ ನೋಡುವುದಕ್ಕೆ ಸೊಗಸಾಗಿರುವುದು. ಆದರೆ ಒಳಗೆ ಅದು ಬಹು ದೀನವಾಗಿರುವುದು. ಚಕ್ಷುರಾದಿ ಬಾಹ್ಯೇಂ

ಆವಿರ್ಭಾವತಿರೋಭಾವಚಕ್ರಾವರ್ತಧುರೋದ್ವಹಂ ।
ಅಜ್ಞಾನವಿಕಟಾಟವ್ಯಾಂ ಲುಠಿತಂ ಸನ್ನಗಾತ್ರಕಂ ॥ ೨೭ ॥

ನಿಜಾನರ್ಥಸದಾಮಗ್ನಂ ಸೀದಮಾನಮಕಿಂಚನಂ ।
ಸನ್ನಾಂಗಂ ಕರ್ಮಭಾರೇಣ ಕರುಣಾಕ್ರಂದಕಾರಿಣಂ ॥ ೨೮ ॥

ರಾಮ ಜೀವಬಲೀವರ್ದಮಿಮಂ ಸಂಸಾರಪಲ್ವಲಾತ್ ।
ಪರಮಂ ಯತ್ನಮಾಸ್ಥಾಯ ಚಿರಮುತ್ತಾರಯೇದ್ಬಲಾತ್ ॥ ೨೯ ॥

ದ್ರಿಯಗಳು ಇದನ್ನು ಆಕ್ರಮಿಸಿಕೊಂಡು, ಮೇಲೆ ಕುಳಿತು ಸವಾರಿ ಮಾಡುವುವು. ಕಾಮ್ಯಕರ್ಮಗಳಲ್ಲಿ ಪ್ರೋತ್ಸಾಹವನ್ನುಂಟು ಮಾಡುವ ಅರ್ಥವಾದಗಳೆಂಬ, ಅದರ ಕೊರಳಿಗೆ ಕಟ್ಟಿರುವ ಘಂಟೆಗಳ ಧ್ವನಿಯಿಂದ, ಇದು ಭ್ರಾಂತಿಗೊಂಡಿರುವುದು. ಆಗಾಗ್ಗೆ ದುಷ್ಕೃತಗಳೆಂಬ ಕಶಾಘಾತಗಳೂ, (ಚಾವುಟಿಗೆಯ ಏಟುಗಳೂ,) ಇದನ್ನು ನೋಯಿಸುವುವು

೨೭. ಜನನ ಮರಣಗಳೆಂಬ ಎರಡು ಚಕ್ರಗಳಿಂದ ಸದಾ ಸುತ್ತುತ್ತಿರುವ ಸಂಸಾರವೆಂಬ ಗಾಡಿಯ ಭಾರವನ್ನೆಲ್ಲ ಹೊತ್ತು, ಅದನ್ನು ಎಳೆದುಕೊಂಡು ಹೋಗುತ್ತಾ, ಅಜ್ಞಾನವೆಂಬ ವಿಷಮವಾದ ಕಾಡುದಾರಿಯಲ್ಲಿ ಮುಗ್ಗುರಿಸಿ ಬಿದ್ದು, ತನ್ನ ಅಂಗೋಪಾಂಗಗಳನ್ನು ಮುರಿದುಕೊಳ್ಳುವುದು.

೨೮. ಇದು ತಾನಾಗಿಯೇ ತನ್ನ ಅಜ್ಞಾನದಿಂದಲೇ ಸಂಪಾದಿಸಿಕೊಂಡ ಅನರ್ಥಕಾರಿಯಾದ ವಿಪತ್ಪರಂಪರೆಯಲ್ಲಿ ಸರ್ವದಾ ಮುಳುಗಿ ಹೋಗಿರುವುದು, ಏನೇನೂ ಗತಿಯಿಲ್ಲದೆ, ಕಡುಬಡತನದಿಂದ ಕಂಗೆಟ್ಟು ಸಂಕಟಪಡುತ್ತಿರುವುದು. ಪ್ರಾರಬ್ಧ, ಸಂಚಿತ ಮತ್ತು ಆಗಾಮಿ ಕರ್ಮರಾಶಿಗಳೆಂಬ ಹೊರೆಗಳ ರಾಶಿಗಳನ್ನು ಹೊತ್ತು ಹೊತ್ತು, ಇನ್ನು ಹೆಚ್ಚಾಗಿ ತಾಳಲಾರದೆ, ಇದರ ದೇಹವೆಲ್ಲವೂ ಕುಗ್ಗಿ ಹೋಗಿ ಮೇಲಕ್ಕೆ ಏಳಲಾರದೆ ಇರುವುದು. ಅತ್ಯಂತ ದೈನ್ಯದಿಂದ, ಇತರರಿಗೆ ಮರುಕವುಂಟಾಗುವ ತೆರದಲ್ಲಿ ಅರಿಚಿಕೊಳ್ಳುತ್ತಿರುವುದು.

೨೯. ಅಯ್ಯ ರಾಮ, ಇಂತಹ (ವಿಪನ್ನವಾದ, ವಿನಾಶೋನ್ಮುಖವಾದ) ಜೀವನೆಂಬ ಎತ್ತನ್ನು (ಅದು ವಿನಾಶವಾಗುವದರೊಳಗಾಗಿಯೇ) ವಿವೇಕಿಯಾದ

ತತ್ತ್ವಾವಲೋಕನಾತ್ ಕ್ಷೀಣೇ ಚಿತ್ತೇ ನೋ ಜಾಯತೇ ಪುನಃ ।
ಜೀವಃ ಕದಾಚನ ತದಾ ಭವೇತ್ತೀರ್ಣಭವಾರ್ಣವಃ ॥ ೩೦ ॥

ಮಹಾನುಭಾವ ಸಂಪರ್ಕಾತ್ಸಂಸಾರಾರ್ಣವಲಂಘನೇ ।
ಯುಕ್ತಿಃ ಸಂಪ್ರಾಪ್ಯತೇ ರಾಮ ಸ್ಫುಟಾ ನೌರಿವ ನಾವಿಕಾತ್ ॥ ೩೧ ॥

ವನು, ಚಿರಕಾಲ ಸಂಪೂರ್ಣವಾಗಿ, ಮಹತ್ತಮವಾದ (ತನ್ನ ಕಾರ್ಯದಲ್ಲಿ ತನಗೆ ನಿಶ್ಚಯವಾಗಿ ಜಯವನ್ನು ಕೊಡುವ) ಉತ್ತಮ ಪ್ರಯತ್ನವನ್ನು ಅವಲಂಬಿಸಿ, ತತ್ತ್ವಜ್ಞಾನ ಬಲದಿಂದ (ತನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ) ಸಂಸಾರವೆಂಬ ಸಣ್ಣ ಕುಂಟೆಯ ದೆಸೆಯಿಂದ ಹೊರಕ್ಕೆ ಎತ್ತಿ ಉದ್ಧರಿಸಬೇಕಾಗಿರುವುದು.

೩೦. ಅನೇಕ ಜನ್ಮಾಂತರಾರ್ಜಿತಗಳಾದ ಸುಕೃತ ವಿಶೇಷಗಳಿಂದ ವಿವೇಕ ವೈರಾಗ್ಯಾ ಭ್ಯಾಸಾದಿ ಉಪಾಯಗಳ ಮೂಲಕ, ಯಾವಾಗಲೋ ಒಂದುಕಾಲದಲ್ಲಿ ಆತ್ಮ ತತ್ತ್ವ ಸಾಕ್ಷಾತ್ಕಾರವಾದರೆ ಆಗ ಅದರ ಪ್ರಭಾವದಿಂದ ಚಿತ್ತವು ಅದರ ವೃತ್ತಿ ಗಳೊಡನೆ ನಿಶ್ಶೇಷವಾಗಿ ಕ್ಷೀಣವಾಗಿ ನಾಶವಾಗುವುದು. ಆ ಬಳಿಕ, ಈ ಜೀವನು ಎಂದಿಗೂ ಪುನಃ ಜನ್ಮಾಂತರವನ್ನು ಪಡೆಯುವುದೇ ಇಲ್ಲ. ಆಗಲೇ ಅವನು ಅಪಾ ರವಾದ ಸಂಸಾರ ಸಾಗರವನ್ನು ದಾಟಿ ಕೃತ ಕೃತ್ಯನಾಗುವನು.

೩೧. ಅಯ್ಯ ರಾಮ, ನಾವಿಕನ ಅನುಗ್ರಹದಿಂದ ಒಂದು ಧೃಢವಾದ ನಾವೆ ಯನ್ನು ಪಡೆದು ಅದರ ಸಹಾಯದಿಂದ ಹೇಗೆ ಸಮುದ್ರವನ್ನು ನಿರ್ಭಯವಾಗಿ ದಾಟಲಾಗುವುದೋ ಹಾಗೆಯೇ ಶ್ರೋತ್ರಿಯನೂ ಬ್ರಹ್ಮ ನಿಷ್ಠನೂ ಮಹಾನು ಭಾವನೂ ಆದ ಸದ್ಗುರುವನ್ನು ಆಶ್ರಯಿಸಿದರೆ ಸಮುದ್ರದಂತೆ ದುಸ್ತರವಾಗಿರುವ ಈ ಸಂಸಾರವನ್ನು ದಾಟುವುದಕ್ಕೆ ತಕ್ಕ ಸಾಧನವಾದ ಆತ್ಮ ಜ್ಞಾನವು ಆ ಸದ್ಗುರು ವಿನ ಅನುಗ್ರಹದಿಂದ ದೊರಕುವುದು. ಆಗ ಸಂಸಾರವನ್ನು ಅದರಿಂದ ಸುಖವಾಗಿ ದಾಟಲೂ ಸಾಧ್ಯವಾಗುವುದು. [ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ.]

ಯಸ್ಮಿನ್ದೇಶಮರೌ ತಜ್ಞೋ ನಾಸ್ತಿ ಸಜ್ಜನಪಾದಪಃ ।
ಸಫಲಃ ಶೀತಲಚ್ಛಾಯೋ ನ ತತ್ರ ನಿವಸೇದ್ಬುಧಃ ॥ ೩೨ ॥

ಸ್ನಿಗ್ಧಶೀತವಚಃಪತ್ರೇ ಸಚ್ಛಾಯೇ ಸ್ಮಿತಪುಷ್ಪಕೇ ।
ಕ್ಷಣಾದ್ವಿಶ್ರಮ್ಯತೇ ರಾಮ ಭೃಶಂ ಸುಜನಚಂಪಕೇ ॥ ೩೩ ॥

---

೩೨. ಮರುಭೂಮಿ ಸದೃಶವಾದ ಯಾವ ಸ್ಥಳದಲ್ಲಿ ಆತ್ಮ ಜ್ಞಾನ ನಿಷ್ಠನಾಗಿಯೂ ವಿವೇಕ, ವೈರಾಗ್ಯ, ಶಮ ದಮಾದಿಗಳೆಂಬ ಸುಪಕ್ವ ಫಲಭರಿತವಾಗಿಯೂ ಪ್ರಶಾಂತ ಚಿತ್ತನಾಗಿ ಸಕಲ ಶೋಕ ವಿವರ್ಜಿತನಾಗಿರುವ ಕಾರಣ ತನ್ನನ್ನು ಆಶ್ರಯಿಸಿದವರಿಗೂ ತನ್ನ ಸಾನ್ನಿಧ್ಯ ಮಹಿಮೆಯಿಂದ ಸಕಲ ಸಂತಾಪಗಳನ್ನು ನಿವಾರಣೆ ಮಾಡಿ ವಿಶ್ರಾಂತಿಯನ್ನು ಉಂಟುಮಾಡುವಷ್ಟು ಶೀತಲವಾದ ಸನ್ನಿವೇಶವುಳ್ಳವನಾಗಿಯೂ ಇರುವ ಸತ್ಪುರುಷನೆಂಬ ಫಲಭರಿತವಾದ ಬಹಳ ಒತ್ತಾಗಿ ತಂಪಾದ ನೆರಳುಳ್ಳ ಒಂದು ಮರವೂ ಇಲ್ಲವೋ ಅಂತಹ ಹಾಳು ಸ್ಥಳದಲ್ಲಿ ಪ್ರಾಜ್ಞನಾದವನು ಒಂದು ಕ್ಷಣ ಕಾಲವಾದರೂ ವಾಸಮಾಡಲೇ ಕೂಡದು. (ಸರ್ವದಾ ಫಲಸಮೃದ್ಧಿಯಿಂದ ಕೂಡಿದ ಒಂದು ಛಾಯಾ ವೃಕ್ಷವು ಪ್ರಯಾಣಿಕರು ತನ್ನ ಹತ್ತಿರಕ್ಕೆ ಬಂದು ನಿಂತರೆ ಅವರಿಗೆ ತಂಪಾದ ನೆರಳನ್ನೂ ಫಲಗಳನ್ನೂ ಕೊಟ್ಟು ವಿಶ್ರಾಂತಿಯನ್ನುಂಟುಮಾಡುವುದು ಆದರಂತೆ ಸತ್ಪುರುಷನೂ ತನ್ನನ್ನು ಆಶ್ರಯಿಸಿದವರ ತಾಪ ಪರಿಹಾರ ಮಾಡುವನು.)

೩೩. ಅಯ್ಯ ರಾಮ, ಲೋಕದಲ್ಲಿ ಸಾಧು ವೃತ್ತನಾದ ಸಜ್ಜನನು ಒಂದು ಚಂಪಕ ವೃಕ್ಷದಂತಿರುವನು. ಆ ಸುಜನ ಚಂಪಕದ ಆಪ್ತ ವಚನಗಳೆಂಬ ಎಲೆಗಳು ಅತ್ಯಂತಸ್ನಿಗ್ಧಗಳಾಗಿಯೂ (ಸ್ನೇಹಪೂರ್ಣಗಳಾಗಿಯೂ ಅಥವಾ ಒತ್ತಾಗಿಯೂ) ತಾಪ ಪರಿಹಾರ ಮಾಡುವಷ್ಟು ಶೀತಳವಾಗಿಯೂ ಇವೆ. ಅದು ಮಂದಹಾಸವೆಂಬ ಕುಸುಮ ಮಂಜರಿಗಳನ್ನು ಸೂಸುತ್ತಿರುವುದು. ಮತ್ತು ಸೌಜನ್ಯವೆಂಬ ತಂಪಾದ ನೆರಳನ್ನೂ ಬೀರುತ್ತಿರುವುದು. ಇಂತಹ ಸುಜನ ಚಂಪಕದ ಸಾನ್ನಿಧ್ಯದಲ್ಲಿ ಒಂದು ಕ್ಷಣ ಮಾತ್ರವಿದ್ದರೂ ಸಾಕು. ಅಷ್ಟರಿಂದಲೇ ಮನಸ್ಸು ಸಂತಾಪಗಳನ್ನು ನಿಶ್ಶೇಷವಾಗ ಪರಿಹರಿಸಿಕೊಂಡು ಸಂಪೂರ್ಣವಾಗಿ ವಿಶ್ರಾಂತಿಯನ್ನೈದುವುದು.

ತದಭಾವೇ ಮಹಾಮೋಹತಾಪಸಂಪತ್ತಿದಾಯಿನಿ ।
ಕಿಂಚಿಜ್ಜ್ಞಾತವಿವೇಕೇನ ಸ್ವಪ್ತವ್ಯಂ ನೇಹ ಧೀಮತಾ ॥ ೩೪ ॥

ಆತ್ಮೈವ ಹ್ಯಾತ್ಮನೋ ಬಂಧುರಾತ್ಮನಾತ್ಮೈವ ಮುದ್ಧರೇತ್ ।
ನಾತ್ಮಾನಮವಲೇಪೇನ ಜನ್ಮಪಂಕಾರ್ಣವೇ ಕ್ಷಿಪೇತ್ ॥ ೩೫ ॥

ಕಿಮಿದಂ ಕಥಮಾಯಾತಂ ಕಿಂಮೂಲಮಿತಿ ಕಿಂಕ್ಷಯಂ ।
ದೇಹದುಃಖಮಿತಿ ಪ್ರಾಜ್ಞೈಃ ಪ್ರೇಕ್ಷಣೀಯಂ ಪ್ರಯತ್ನತಃ ॥ ೩೬ ॥

---

೩೪. ಸ್ವಲ್ಪ ಮಾತ್ರವಾದರೂ ವಿವೇಕವನ್ನು ಸಂಪಾದಿಸಿಕೊಂಡಿರುವ ಬುದ್ಧಿವಂತನು ಸ್ವಾತ್ಮಲಾಭರೂಪ ವಿಶ್ರಾಂತಿಯೇ ಸುತರಾಂ ಇಲ್ಲದಿರುವ ದುರ್ಭೇದ್ಯ ಮಹಾ ಮೋಹ ಹೇತುಗಳಾದ ನಾನಾ ವಿಧ ಸಂತಾಪಗಳನ್ನು ಹೇರಳವಾಗಿ ತಂದೊಡ್ಡುವ ಈ ಸಂಸಾರದಲ್ಲಿ ಎಂದಿಗೂ ನಿಶ್ಚಿಂತನಾಗಿ ಮಲಗಿ ನಿದ್ರಿಸಬಾರದು.

೩೫. ಪ್ರಪಂಚದಲ್ಲಿ ನಿಜವಾಗಿ ಆತ್ಮನೇ ಆತ್ಮನಿಗೆ ಬಂಧುವು ಪೂರ್ವೋಕ್ತ ವಿವೇಕ, ವೈರಾಗ್ಯಾಭ್ಯಾಸಗಳನ್ನು ಮೊದಲ್ಗೊಂಡು ಆತ್ಮ ತತ್ತ್ವ ಸಾಕ್ಷಾತ್ಕಾರ ಪರ್ಯವಸಾಯಿಯಾದ ಉಪಾಯದಿಂದ ತನ್ನನ್ನು ತಾನೇ ಉದ್ಧಾರ ಮಾಡಿಕೊಳ್ಳ ಬೇಕಾಗಿರುವುದು. ಮತ್ತು ದೇಹಾದಿಗಳಲ್ಲಿ ನಾನು, ನನ್ನದು ಎಂಬ ಅಭಿಮಾನ ವನ್ನು ಮಾಡಿಕೊಂಡು ಗರ್ವದಿಂದ ತನ್ನನ್ನು ಜನ್ಮಾಂತರಗಳೆಂಬ (ನಾನಾ ಜನ್ಮ ಪರಂಪರೆಯೆಂಬ) ಒಂದು ದೊಡ್ಡ ಕೆಸರಿನ ಗುಂಡಿಯೊಳಗೆ ಪುನಃ ಮೇಲಕ್ಕೆ ಏಳ ಲಾರದ ರೀತಿಯಲ್ಲಿ ಎಂದಿಗೂ ಎತ್ತಿ ಎಸೆಯಲಾಗದು.

೩೬. ಈ ದೇಹಾಧೀನವಾದ ದುಃಖವು ಯಾವುದು ? ಇದು ಹೇಗೆ ಸಂಪ್ರಾಪ್ತವಾಯಿತು ? ಇದಕ್ಕೆ ಮೂಲಕಾರಣವು ಯಾವುದು. ಯಾವುದರ ದೆಸೆಯಿಂದ ಇದಕ್ಕೆ ನಿಶ್ಶೇಷ ನಾಶವುಂಟಾಗುವುದು ? ಎಂಬ ಮೊದಲಾದ ವಿಚಾರ ಗಳನ್ನು ಪ್ರಾಜ್ಞರು ಬಹು ಪ್ರಯತ್ನ ಪೂರ್ವಕವಾಗಿ ಸ್ವಬುದ್ಧಿಯಿಂದಲೂ ಶಾಸ್ತ್ರಾ ಚಾರ್ಯ ಸಹಾಯದಿಂದಲೂ ಪುನಃ ಪುನಃ ಬಹು ಪ್ರಕಾರಗಳಿಂದ ನಿರ್ಣಯವಾಗು ವವರೆಗೂ ವಿಚಾರಮಾಡಬೇಕು.

ನ ಧನಾನಿ ನ ಮಿತ್ರಾಣಿ ನ ಶಾಸ್ತ್ರಾಣಿ ನ ಬಾಂಧವಾಃ ।
ನರಾಣಾಮುಪಕುರ್ವಂತಿ ಮಗ್ನಸ್ವಾತ್ಮಸಮುದ್ಧೃತೌ ॥ ೩೭ ॥

ಮನೋಮಾತ್ರೇಣ ಸುಹೃದಾ ಸದೈವ ಸಹವಾಸಿನಾ ।
ಸಹ ಕಿಂಚಿತ್ಪರಾಮೃಶ್ಯ ಭವತ್ಯಾತ್ಮಾ ಸಮುದ್ಧೃತಃ ॥ ೩೮ ॥

ವೈರಾಗ್ಯಾಭ್ಯಾಸಯತ್ನಾಭ್ಯಾಂ ಸ್ವಪರಾಮರ್ಶಜನ್ಮನಾ ।
ತತ್ತ್ವಾಲೋಕನಪೋತೇನ ತೀರ್ಯತೇ ಭವಸಾಗರಃ ॥ ೩೯ ॥

---

೩೭. ಸಂಸಾರ ಸಾಗರದಲ್ಲಿ ಮುಳುಗಿಹೋಗಿರುವ ತನ್ನ ಆತ್ಮವನ್ನು ಉದ್ಧರಿಸುವ ವಿಷಯದಲ್ಲಿ ಧನಗಳಾಗಲಿ, ಸ್ನೇಹಿತರಾಗಲಿ, ಆತ್ಮ ಜ್ಞಾನ ಸಾಧಕವಲ್ಲದ ಶುಷ್ಕ ತರ್ಕವ್ಯಾಕರಣಾದಿ ಶಾಸ್ತ್ರಗಳಾಗಲಿ ಎಲ್ಲ ಬಂಧುಗಳಾಗಲೀ ಮತ್ತು ಇತರ ಎಲ್ಲ ವಿಧವಾದ ಸಹಾಯ ಸಂಪತ್ತಿಗಳಾಗಲಿ ಇವುಗಳಲ್ಲಿ ಯಾವುದೂ ಎಳ್ಳಷ್ಟೂ ಮನುಷ್ಯರಿಗೆ ಉಪಕಾರ ಮಾಡುವುದಿಲ್ಲ (ತನ್ನ ಉದ್ಧಾರಕ್ಕೆ ತಾನೇ ತನಗೆ ಸಹಾಯ ವೆಂದರ್ಥ ಇದೇ ಅಭಿಪ್ರಾಯದಿಂದಲೇ ಶ್ರೀಮದಾಚಾರ್ಯ ಪೂಜ್ಯಪಾದರು ನಹಿ ನಹಿರಕ್ಷತಿ ಡುಕೃಞಕರಣೇ ಎಂದು ಅಪ್ಪಣೆ ಕೊಡಿಸಿರುವರು.)

೩೮. ಆದರೆ, ಒಂದು ಕ್ಷಣ ಕಾಲವಾದರೂ ಎಡಬಿಡದೆ ಸರ್ವದಾ ನಮ್ಮೊಡನೆಯೇ ಒಳಗೇ ವಾಸಮಾಡಿಕೊಂಡಿರುವ ನಿಷ್ಕಾಮುಕಮೋಪಾಸನೆಯಿಂದ ಅತ್ಯಂತ ಪರಿಶುದ್ಧವಾದ-ಉತ್ತಮ ಸ್ನೇಹಿತನಂತೆ ಹಿತವನ್ನೇ ಕೋರುವ-ಮನಸಿನಿಂದ ಒಂದರಿಂದ ಮಾತ್ರವೇ ಕೂಡಿಕೊಂಡು ಸ್ವಲ್ಪ ಚೆನ್ನಾಗಿ ವಿಚಾರಮಾಡಿ ಆತ್ಮ ತತ್ತ್ವ ವಿನಿರ್ಣಯಮಾಡಿಕೊಂಡರೆ ಆಗ ಆತ್ಮನು ಸಂಸಾರಾರ್ಣವದಿಂದ ಉತ್ತೀರ್ಣನಾಗುವನು. ಉದ್ಧರಿಸಲ್ಪಡುವನು ಎಂದರ್ಥ.

೩೯. ನಿತ್ಯಾನಿತ್ಯ ವಸ್ತು ವಿವೇಕದ ಮೂಲಕ ಐಹಿಕಾಮುಷ್ಮಿಕ ಫಲೋಪಭೋಗಗಳಲ್ಲಿ ವೈರಾಗ್ಯವನ್ನು ಪುನಃ ಪುನಃ ಅಭ್ಯಾಸಮಾಡಿ ದೃಢ ಪಡಿಸಿಕೊಳ್ಳುವುದರಿಂದಲೂ ಗುರೂಪಸದನ ಶಾಸ್ತ್ರಾರ್ಥ ವಿಚಾರಾದಿ ಸ್ವಪ್ರಯತ್ನದಿಂದಲೂ ಕೂಡ ಸ್ವಾತ್ಮ ಸ್ವರೂಪವನ್ನು ವಿಮರ್ಶೆಮಾಡಿ ಶ್ರವಣ ಮನನ ನಿದಿಧ್ಯಾಸನಗಳಿಂದ ಸಕಲ ಸಂಶಯಗಳನ್ನು ಪರಿಹರಿಸಿಕೊಳ್ಳುತ್ತಾ ಬಂದು ಅದರಿಂದ ಉಂಟಾಗುವ ಸ್ವಾತ್ಮತತ್ತ್ವ ಸಾಕ್ಷಾತ್ಕಾರವೆಂಬ ನಾವೆಯನ್ನು ಆಶ್ರಯಿಸಿದರೆ ಆಗ ಅದರ

ಶೋಚ್ಯಮಾನಂ ಜನೈರ್ನಿತ್ಯಂ ದಹ್ಯಮಾನಂ ದುರಾಶಯಾ ।
ನಾತ್ಮಾನಮುಪಮನ್ಯೇತ ಪ್ರೋದ್ಧರೇದೇನಮಾದರಾತ್ ॥ ೪೦ ॥

ಅಹಂಕಾರಮಹಾಲಾನಂ ತೃಷ್ಣಾರಜ್ಜುಂ ಮನೋಮದಂ ।
ಜನ್ಮಜಂಬಾಲನಿರ್ಮಗ್ನಂ ಜೀವದಂತಿನಮುದ್ಧರೇತ್ ॥ ೪೧ ॥

ಅಯಮೇತಾವತೈವಾತ್ಮಾ ತ್ರಾತೋ ಭವತಿ ರಾಘವ ।
ಯದಪಾಸ್ಯ ವಿಮೂಢತ್ವಮಹಂಕಾರಃ ಪ್ರಮಾರ್ಜ್ಯತೇ ॥ ೪೨ ॥

ಸಹಾಯದಿಂದ ಈ ಸಂಸಾರಸಾಗರವನ್ನು ನಿಸ್ಸಂದೇಹವಾಗಿ ದಾಟಲು ಸಾಧ್ಯವಾಗುವುದು.

೪೦. ಸಮಸ್ತ ಜನಗಳಿಂದಲೂ ಸಕಲ ಶೋಕಗಳಿಗೂ ಗುರಿಮಾಡಲ್ಪಟ್ಟಿರುವ ಮತ್ತು ಸದಾ ದುರಾಶೆಯೆಂಬ ಅಗ್ನಿ ಜ್ವಾಲೆಯಿಂದ ದಹಿಸಲ್ಪಡುತ್ತಲಿರುವ ಈ ಆತ್ಮವನ್ನು ಸರ್ವಥಾ ಉಪೇಕ್ಷೆ ಮಾಡದೆ ಆದರದಿಂದ ಬಹುಮಾನಿಸಿ ಆತ್ಮತತ್ತ್ವ ದರ್ಶನದಿಂದ (ಸಂಸಾರದಲ್ಲಿ ಬಿದ್ದು ಮುಳುಗಿ ಹಾಳಾಗದಂತೆ) ಉದ್ಧಾರ ಮಾಡಬೇಕು.

೪೧. ಮನೋವೃತ್ತಿಗಳೆಂಬ ಮದೋದಕ ಧಾರೆಗಳನ್ನು ಬಹು ಪ್ರಕಾರವಾಗಿ ಸ್ರವಿಸುತ್ತಿರುವ ಜೀವನೆಂಬ ಮದಿಸಿದ ಆನೆಯು, ದೇಹಾದಿಗಳಲ್ಲಿ ರೂಢವಾದ ಅಹಂಕಾರವೆಂಬ ಒಂದು ದೃಢವಾದ ಗೂಟ (ಸ್ತಂಭ)ದಲ್ಲಿ ತೃಷ್ಣೆಯೆಂಬ ರಜ್ಜುವಿನಿಂದ (ಹಗ್ಗದಿಂದ) ಬಂಧಿತವಾಗಿ ನಾನಾ ಜನ್ಮಪರಂಪರೆಯೆಂಬ ಕೆಸರಿನೊಳಗೆ ಸಿಕ್ಕಿಕೊಂಡು ಮುಳುಗಿರುವುದು. ಪ್ರಾಜ್ಞನು ಹೇಗಾದರೂ ಕಷ್ಟಪಟ್ಟು ಬಹು ಪ್ರಯತ್ನಮಾಡಿ ಇದನ್ನು ಮೇಲಕ್ಕೆ ಎತ್ತಬೇಕು.

೪೨. ರಾಘವ, ಸ್ವಾತ್ಮ ಸ್ವರೂಪದ ಅಜ್ಞಾನವನ್ನು ನೀಗಿಕೊಂಡು, ದೇಹಾದಿಗಳಲ್ಲಿ ರೂಢವಾದ ಅಹಂಕಾರವನ್ನು ನಿಶ್ಶೇಷವಾಗಿ ನಾಶಗೊಳಿಸಿಬಿಟ್ಟದ್ದೇ ಆದರೆ ಇದಿಷ್ಟು ಮಾತ್ರದಿಂದಲೇ, ಈ ಆತ್ಮನು ಸುರಕ್ಷಿತನಾಗಿರುವನು.

ಏತಾವತ್ವೈವ ಸನ್ಮಾರ್ಗೇ ಯಾತಿ ಪ್ರಕಟತಾಮಲಂ ।
ಯದಪಾಸ್ಯ ಮನೋಜಾಲಮಹಂಭಾವೋ ವಿಲೂಯತೇ ॥ ೪೩ ॥

ಏತಾವತ್ವೈವ ದೇವೇಶಃ ಪರಮಾತ್ಮಾವಗಮ್ಯತೇ ।
ಕಾಷ್ಠಲೋಷ್ಠಸಮತ್ವೇನ ದೇಹೋ ಯದವಲೋಕ್ಯತೇ ॥ ೪೪ ॥

ಅಹಂಕಾರಾಂಬುದೇ ಕ್ಷೀಣೇ ದೃಶ್ಯತೇ ಚಿದ್ದಿವಾಕರಃ ।
ತತಸ್ತತ್ಪರಿಣಾಮೇನ ತತ್ಪದಂ ಸಮವಾಪ್ಯತೇ ॥ ೪೫ ॥

---

೪೩. ಮನಸ್ಸಿನಿಂದ ರಚಿತವಾದ ಬಾಹ್ಯ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿನ ಆಸಕ್ತಿಯೆಂಬ ಬಲೆಯ ಬಂಧನವನ್ನು ಬಿಡಿಸಿಕೊಂಡು, ಅಹಂಕಾರವನ್ನು ಸಮೂಲವಾಗಿ ಕತ್ತರಿಸಿ ಹಾಕಿಬಿಟ್ಟ ಪಕ್ಷದಲ್ಲಿ ಆಗ ಇಷ್ಟುಮಾತ್ರದಿಂದಲೇ, ಪರಮಾತ್ಮ ತತ್ತ್ವಜ್ಞಾನ ಪರ್ಯವಸಾಯಿಯಾದ ವಿಚಾರದಲ್ಲಿ, ಆತ್ಮನು ಸಂಪೂರ್ಣವಾಗಿ ಅತ್ಯಂತ ಸ್ಫುಟವಾದ ತತ್ತ್ವ ದರ್ಶನವನ್ನು ಪಡೆಯುವನು.

೪೪. ಈ ಜಡವಾದ ದೇಹವು ಕಾಷ್ಠ (ಮರದ ಕೊರಡು) ಲೋಷ್ಟ (ಮಣ್ಣು ಹೆಂಟೆ) ಗಳಿಗೆ ಸಮನಾಗಿ ಅತಿ ತುಚ್ಛವೂ, ಅನಾದರಣೀಯವೂ ಆಗಿರುವುದೆಂದು ತಿಳಿದು ಅದರಲ್ಲಿರುವ ಅಭಿಮಾನವನ್ನು ಪರಿತ್ಯಾಗ ಮಾಡಿದ ಪಕ್ಷದಲ್ಲಿ ಇಷ್ಟುಮಾತ್ರದಿಂದಲೇ ದೇವಾಧಿದೇವನಾದ ಪರಮಾತ್ಮನು ತತ್ತ್ವಜ್ಞಾನದಿಂದ ಸಾಕ್ಷಾತ್ಕೃತನಾಗುವನು.

೪೫. ಮೊದಲನೆಯದಾಗಿ ಅಹಂಕಾರವೆಂಬ ಮೇಘದ ಆವರಣವು ಕ್ಷಯ ಹೊಂದಲಾಗಿ (ನಾಶವಾಗಲಾಗಿ) ಆಗಲೇ ಅಷ್ಟು ಮಾತ್ರದಿಂದಲೇ ಚಿತ್ ಎಂಬ ಸೂರ್ಯನು ಸುಸ್ಪಷ್ಟವಾಗಿ ವಿರಾಜಿಸುವನು. ಬಳಿಕ; ಜೀವನು ತನ್ನ ಆವಿದ್ಯಕ ಜೀವಭಾವವನ್ನು ಬಿಟ್ಟು, ವಾಸ್ತವವಾದ ಪರಮಾರ್ಥ ಚಿದ್ರೂಪದಿಂದ ಪರಿಣಾಮ ಹೊಂದಿ ಸ್ವಾತ್ಮಾನಂದೈಕರಸ ಪರಮ ಪದವನ್ನು ಹೊಂದುವನು.

ಯಥಾ ಧ್ವಾಂತಸಮುಚ್ಛೇದೇ ಸ್ವಯಮಾಲೋಕವೇದನಂ ।
ತಥಾಹಂಕಾರವಿಚ್ಛೇದೇ ಸ್ವಯಮಾತ್ಮಾವಲೋಕನಂ ॥ ೪೬ ॥

ಅಹಂಕಾರೇ ಪರಿಕ್ಷೀಣೇ ಯಾವಸ್ಥಾ ಸುಖಮೋದಜಾ ।
ಸಾವಸ್ಥಾ ಭರಿತಾಕಾರಾ ಸಾ ಸೇವ್ಯಾ ಸಂಪ್ರಯತ್ನತಃ ॥ ೪೭ ॥

ಪರಿಪೂರ್ಣಾರ್ಣವಪ್ರಖ್ಯಾ ನ ವಾ ಗೋಚರಮೇತಿ ನಃ ।
ನೋಪಮಾನಮುಪಾದತ್ತೇ ನಾನುಧಾವತಿ ರಂಜನಂ ॥ ೪೮ ॥

---

೪೬. ಕತ್ತಲೆಯು ನಷ್ಟವಾದ ಬಳಿಕ, ಕೂಡಲೇ, ಪ್ರಕಾಶವು ತಾನಾಗಿಯೇ ಗೋಚರಿಸುವಂತೆ ಅಹಂಕಾರವು ಧ್ವಂಸವನ್ನು ಹೊಂದಿದ ಕೂಡಲೇ, ಆತ್ಮತತ್ತ್ವ ಸಾಕ್ಷಾತ್ಕಾರವು ತಾನಾಗಿಯೇ ಸಿದ್ಧಿಸುವುದು.

೪೭. ಅಹಂಕಾರವು ಸಂಪೂರ್ಣವಾಗಿ ಕ್ಷೀಣವಾಗಿ ಬಿಡಲಾಗಿ ಬಳಿಕ, ನಿರತಿಶಯಾನಂದ ವಿಶ್ರಾಂತಿಯಿಂದ ಅದೇ ರೂಪವಾಗಿಯೇ ಆವಿರ್ಭವಿಸಿದ ಯಾವ ನಿರ್ವಿಕಲ್ಪ ಸಮಾಧಿ ಸ್ಥಿತಿಯು ಉಂಟಾಗುವುದೋ-ಆ ಅವಸ್ಥೆಯೇ ಪರಿಪೂರ್ಣಾತ್ಮ ಸ್ಥಿತಿಯು. ಅಂತಹ ಸ್ಥಿತಿಯನ್ನು ಸರ್ವರೂ ಬಹುವಿಧ ಪ್ರಯತ್ನ ಪುರಸ್ಸರವಾಗಿ ಹೇಗಾದರೂ ಮಾಡಿ ಸೇವಿಸಲೇಬೇಕು. (ಪಡೆಯಲೇ ಬೇಕಾದುದು ಎಂದರ್ಥ.)

೪೮. ಪರಿಪೂರ್ಣವಾದ ಸಮುದ್ರಸದೃಶವಾಗಿ ಅಚಲ ಪ್ರತಿಷ್ಠವಾದ ಈ ಸ್ವಾತ್ಮ ಸ್ಥಿತಿಯು ಅನಿರ್ವಾಚ್ಯವಾದುದು. ಇದು ನಮ್ಮ ವಾಕ್ಕುಗಳಿಗೆ ಗೋಚರಿಸುವುದಿಲ್ಲ. ಅಂದರೆ ಈ ಸ್ಥಿತಿಯನ್ನು ನಮ್ಮ ವಾಕ್ಕುಗಳಿಂದ ವರ್ಣಿಸಲಳವಲ್ಲ. ಯಾವುದೊಂದು ಉಪಮಾನದಿಂದಲೂ ಇದನ್ನು ವಿವರಿಸಲು ಸಾಧ್ಯವಿಲ್ಲ. ಮತ್ತು ಇದು ಯಾವುದೊಂದು ದೃಶ್ಯದ ಉಪರಾಗವನ್ನೂ ಹಿಂಬಾಲಿಸಿಕೊಂಡು ಓಡುವುದಿಲ್ಲ.

ಕೇವಲಂ ಚಿತ್ಪ್ರಕಾಶಾಂಶಕಲಿಕಾ ಸ್ಥಿರತಾಂ ಗತಾ ।
ತುರ್ಯಾ ಚೇತ್ಪ್ರಾಪ್ಯತೇ ದೃಷ್ಟಿಸ್ತತ್ತಯಾ ಸೋಪಮೀಯತೇ ॥ ೪೯ ॥

ಅದೂರಗತಸಾದೃಶ್ಯಾತ್ಸುಷುಪ್ತಸ್ಯೋಪಲಕ್ಷ್ಯತೇ ।
ಸಾವಸ್ಥಾ ಭರಿತಾಕಾರಾ ಗಗನಶ್ರೀರಿವಾತತಾ ॥ ೫೦ ॥

ಮನೋಹಂಕಾರವಿಲಯೇ ಸರ್ವಭಾವಾಂತರಸ್ಥಿತಾ ।
ಸಮುದೇತಿ ಪರಾನಂದಾ ಯಾ ತನುಃ ಪಾರಮೇಶ್ವರೀ ॥ ೫೧ ॥

---

೪೯. ಆತ್ಮ ಚೈತನ್ಯದ ಅನಭಿವ್ಯಕ್ತವಾದ ಪ್ರಕಾಶಾಂಶವು ಸ್ಥಿರತ್ವವನ್ನು ಹೊಂದಿದುದಾಗಿ ಜಾಗ್ರದಾದ್ಯವಸ್ಥಾತ್ರಯಾತೀತವಾದ ತುರೀಯಾತ್ಮ ದರ್ಶನವು ಪ್ರಾಪ್ತವಾದರೆ ಆಗ ಈ ಸ್ವಾತ್ಮ ಸ್ಥಿತಿಯು ಅದರೊಡನೆ ಮಾತ್ರವೇ ಹೋಲಿಸಲ್ಪಡುವುದು. ಈ ಸ್ಥಿತಿಗೆ ಆ ತುರೀಯಾತ್ಮ ದರ್ಶನವೊಂದೇ ಉಪಮಾನವು. ಬೇರೆ ಇನ್ಯಾವ ಉಪಮಾನವೂ ಇಲ್ಲ.

೫೦. ಈ ಸ್ಥಿತಿಯು ಸುಷುಪ್ತ ಸ್ಥಿತಿಗೆ ವಿಕ್ಷೇಪ ರಾಹಿತ್ಯವೆಂಬ ಅಂಶದಲ್ಲಿ ಅತ್ಯಂತ ಸನ್ನಿಹಿತವಾದ ಸಾದೃಶ್ಯದಿಂದ ಗಗನಮಂಡಲದ ಸೊಬಗಿನಂತೆ ಅತಿ ವಿಸ್ತಾರವಾಗಿಯೂ, ಪರಿಪೂರ್ಣಾಕಾರವಾಗಿಯೂ (ಅಖಂಡವಾಗಿಯೂ) ಕಾಣುವುದು.

[ಅಜ್ಞಾನಾವರಣವು ಇಲ್ಲದೆ ಹೋಗದಿದ್ದರೆ ಆಗ ಅದೂ ತುರ್ಯಾವಸ್ಥೆಯೇ ಆಗುತ್ತಿತ್ತು]

೫೧. ಘಟಾದ್ಯುಪಾಧಿಗಳು ನಾಶವಾದ ಕೂಡಲೆ ತದುಪಹಿತವಾದ ಘಟಾಕಾಶವು ಮಹಾಕಾಶದೊಡನೆ ಐಕ್ಯ ಹೊಂದುವಂತೆಯೇ, ಮನಸ್ಸೂ ಅಹಂಕಾರವೂ ಲಯ ಹೊಂದಿದ ಬಳಿಕ, ಆ ಉಪಾಧಿಗಳಿಂದ ಉಪಹಿತವಾಗಿದ್ದ ತ್ವಂಪದ ಲಕ್ಷ್ಯವಾದ ಜೀವಚಿತ್ತಿಗೆ, ಉಪಾಧಿನಾಶ ಮಾತ್ರದಿಂದಲೇ, ತತ್ಪದ ಲಕ್ಷ್ಯವಾದ ಪರಮಾತ್ಮರೂಪ ಚಿತ್ಸ್ವಭಾವನೇ ಸ್ವತಏವ ಸಿದ್ಧಿಸುವುದು. ಅಂದರೆ ಮನೋಹಂಕಾರಗಳು ಲಯ ಹೊಂದಿದ ಬಳಿಕ, ಸಕಲ ಪದಾರ್ಥಗಳೊಳಗೂ ವ್ಯಾಪಿಸಿಕೊಂಡಿರುವ, ಯಾವ ಪರಮಾನಂದರೂಪ ಸ್ಥಿತಿಯು ಆವಿರ್ಭವಿಸುವುದೋ, ಅದೇ ಸರ್ವ ಜಗದಧಿಷ್ಠಾನವಾದ ಪರಮೇಶ್ವರನ ಸ್ವರೂಪವು

ಸಾ ಸ್ವಯಂ ಯೋಗಸಂಸಿದ್ಧಾ ಸುಷುಪ್ತಾ ದೂರಭಾವಿನೀ ।
ನ ಗಮ್ಯಾ ವಚಸಾಂ ರಾಮ ಹೃದ್ಯೇವೇಹಾನುಭೂಯತೇ ॥ ೫೨ ॥

ಅನುಭೂತಿಂ ವಿನಾ ತತ್ವಂ ಖಂಡಾದೇರ್ನಾನುಭೂಯತೇ ।
ಅನುಭೂತಿಂ ವಿನಾ ರೂಪಂ ನಾತ್ಮನಶ್ಚಾನುಭೂಯತೇ ॥ ೫೩ ॥

ಅಖಿಲಮಿದಮನಂತಮಾತ್ಮತತ್ವಂ
ದೃಢಪರಿಣಾಮಿನಿ ಚೇತಸಿ ಸ್ಥಿತೇಽಂತಃ ।
ಬಹಿರುಪಶಮಿತೇ ಚರಾಚರಾತ್ಮಾ
ಸ್ವಯಮನುಭೂಯತ ಏವ ದೇವದೇವಃ ॥ ೫೪ ॥

---

೫೨. ಅಯ್ಯ ರಾಮ, ಈ ಬಗೆಯಾದ ಸ್ವಾತ್ಮಸ್ಥಿತಿಯು ಸ್ವತಃ ಜ್ಞಾನ ಯೋಗ ಸಂಸಿದ್ಧವಾದುದು. ಇದು ಸುಷುಪ್ತಸ್ಥಿತಿಗೆ ಅತ್ಯಂತ ಸನ್ನಿಹಿತವಾದುದು. ಇದು ವಾಕ್ಯಗಳಿಗೆ ಅಗಮ್ಯವಾಗಿರುವ ಕಾರಣ, ವಿವರಿಸಿ ಹೇಳುವುದಕ್ಕೆ ಆಗುವುದಿಲ್ಲ. ಆದರೆ ತನ್ನ ಹೃದಯದಲ್ಲಿಯೇ ತನ್ನ ಅನುಭವದಿಂದಲೇ ಇದನ್ನು ತಿಳಿಯಬಹುದಾಗಿದೆ. ಅಂದರೆ ಅದರ ಪರಿಚಯವನ್ನು ಹೊಂದಲಿಕ್ಕೆ, ಸ್ವಾನುಭವ ವ್ಯತಿರಿಕ್ತವಾದ ಪ್ರಮಾಣಾಂತರವಿಲ್ಲ

೫೩. ಕಲ್ಸಕ್ಕರೆ ಮುಂತಾದ ವಸ್ತುಗಳಲ್ಲಿರುವ ಮಾಧುರ್ಯರಸ ಸ್ವರೂಪವು ನಾಲಗೆಯಿಂದ ಅನುಭವಿಸಿದ ಹೊರತು, ಬೇರೆ ಇನ್ಯಾವ ರೀತಿಯಿಂದಲೂ ಹೇಗೆ ಚೆನ್ನಾಗಿ ಗೊತ್ತಾಗುವುದಿಲ್ಲವೋ ಹಾಗೆಯೇ ಆತ್ಮನ ಪಾರಮಾರ್ಥಿಕ ಸಚ್ಚಿದಾನಂದ ರೂಪವೂ ಕೂಡ ಕೇವಲ ಸ್ವಾನುಭವವೊಂದರಿಂದಲೇ ಸ್ಪಷ್ಟವಾಗುವುದೇ ಹೊರತು, ಆ ವಿಷಯದಲ್ಲಿ ಪ್ರಮಾಣಾಂತರವಿಲ್ಲವು.

[ಸ್ವಾನುಭವದಿಂದ ಸಾಕ್ಷಾತ್ಕರಿಸದೆ ಹೋದ ಆತ್ಮಜ್ಞಾನವು, ಜಾತ್ಯಂಧರು ಆನೆಯ ಸ್ವರೂಪವನ್ನು ತಿಳಿದುಕೊಂಡುದಕ್ಕೆ ಸಮಾನವೇ ಸರಿ. ಎಂದು ತಾತ್ಪರ್ಯ.]

೫೪. ಪರಿದೃಶ್ಯಮಾನವಾದ ಈ ಜಗತ್ತೆಲ್ಲವೂ ಅನಂತವಾದ ಆತ್ಮತತ್ತ್ವವೇ ಆಗಿರುವುದು (ಬೇರೆಯಲ್ಲ.) ಮನಸ್ಸು ಬಾಹ್ಯ ವಿಷಯಗಳಲ್ಲಿ ಓಡದೆ ಉಪಶಾಂತ ವಾಗಿರುತ್ತಾ, ತನ್ನೊಳಗಿರುವ ಪ್ರತ್ಯಗಾತ್ಮ ಸ್ವರೂಪದಲ್ಲಿ ಕ್ಷೀರೋದಕ ನ್ಯಾಯದಂತೆ

ತದನು ವಿಷಯವಾಸನಾವಿನಾಶ
　　ಸ್ತದನು ಶುಭಃ ಪರಮಃ ಸ್ಫುಟಪ್ರಕಾಶಃ ।
ತದನು ಚ ಸಮತಾವಶಾತ್ಸ್ವರೂಪೇ
　　ಪರಿಣಮನಂ ಮಹತಾಮಚಿಂತ್ಯರೂಪಂ　　　　॥ ೫೫ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಉಪದೇಶೋ" ನಾಮ ಚತುಃಷಷ್ಟಿತಮಃ ಸರ್ಗಃ

ಐಕರಸ್ಯದಿಂದ ದೃಢವಾಗಿ ಪರಿಣಾಮ ಹೊಂದಿ ನಿಶ್ಚಲವಾಗಿದ್ದುಕೊಂಡಿರಲು, ಚರಾಚರಾತ್ಮಕಗಳಾದ ಜಗತ್ತುಗಳಿಗೆಲ್ಲಾ ಪ್ರತ್ಯಗಾತ್ಮನಾಗಿಯೂ ಚಕ್ಷು ರಾದೀಂದ್ರಿಯಗಳಿಗೆಲ್ಲಾ ಪ್ರಕಾಶವನ್ನು ಕೊಡತಕ್ಕ ಸಾಕ್ಷಿ ಚೈತನ್ಯನಾಗಿಯೂ ತಾನಾಗಿಯೇ ತನ್ನಿಂದಲೇ ಸಾಕ್ಷಾತ್ತಾಗಿ ಅನುಭವಿಸಲ್ಪಡುವನು. ಈ ವಿಚಾರದಲ್ಲಿ ಸಂಶಯಪಡಬೇಕಾಗಿಲ್ಲ.

೫೫. ಹೀಗೆ ಆತ್ಮಾನುಭವವಾದ ಬಳಿಕ, ಆತ್ಯಂತಿಕವಾಗಿ ಸಕಲ ವಿಷಯ ಗಳ ವಾಸನೆಗಳೂ ನಾಶಹೊಂದುವುವು. ಆದಾದ ನಂತರ ಸ್ವಪ್ರಯತ್ನವಿಲ್ಲದೆಯೇ, ಪರಮ ಪುರುಷಾರ್ಥರೂಪ ನಿಃಶ್ರೇಯಸಾತ್ಮಕ, ಸ್ವಾತ್ಮ ಪ್ರಕಾಶವು ಅತಿ ಸ್ಫುಟವಾಗಿ ಪೂರ್ಣ ಭಾವದಿಂದ ಅನುಭವಕ್ಕೆ ಬರುವುದು. ಇದೂ ಆದ ಬಳಿಕ, ಸಮಾಧಿ ಸ್ಥಿತಿಯಲ್ಲಿಯೂ ಮತ್ತು ಸಮಾಧಿಯಿಲ್ಲದ ಕಾಲದಲ್ಲಿಯೂ ಸರ್ವದಾ ಆತ್ಯಂತಿಕ ವೈಷಮ್ಯ ನಿವೃತ್ತಿ ದ್ವಾರಾ, ನಿತ್ಯ ನಿರತಿಶಯಾನಂದೈಕರಸಾತ್ಮಕ ಸ್ವರೂಪದಲ್ಲಿ ಅದೇ ರೂಪವಾದ ಪರಿಣಾಮವು (ಐಕ್ಯವು-ಅಭೇದ) ಸಿದ್ಧಿಸುವುದು. ಅದು ಮಹಾತ್ಮರಾದ ಹಿರಣ್ಯ ಗರ್ಭಾದಿಗಳಿಗೂ ಕೂಡ, ಮನಸ್ಸಿಗೂ ಅಗೋಚರವಾದ ಇಯತ್ತಾ ಪರಿಚ್ಛೇದ ಶೂನ್ಯವಾದ ಅಖಂಡ ರೂಪವಾಗಿರುವುದು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಉಪದೇಶ" ವೆಂಬ ಅರವತ್ತ ನಾಲ್ಕನೆಯ ಸರ್ಗವು.

ಪಂಚಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಮನಸ್ಯೈವ ಮನಶ್ಛಿತ್ವಾ ಯದ್ಯಾತ್ಮಾ ನಾವಲೋಕ್ಯತೇ ।
ಮಮೇತ್ಯಹಮಿತಿ ತ್ಯಕ್ತ್ವಾ ತತ್ತಾಮರಸಲೋಚನ ॥ ೧ ॥

ನಾಸ್ತಮೇತಿ ಜಗದ್ದುಃಖಂ ಯಥಾ ಚಿತ್ರಗತೋ ರವಿಃ ।
ಆಯಾತ್ಯಾಪದನಂತತ್ವಂ ಮಹಾರ್ಣವವದಾತತಾ ॥ ೨ ॥

ಪುನಃ ಪುನರುಪಾಯಾತಿ ಜಲಕಲ್ಲೋಲಕಾರಣಂ ।
ಮೇಘನೀಲತಮಃಶ್ಯಾಮಾ ಸಂಸೃತಿಪ್ರಾವೃಡಾಕುಲಾ ॥ ೩ ॥

ಅರವತ್ತೈದನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧-೨. ಅಯ್ಯ ಕಮಲನೇತ್ರನಾದ ರಾಮಚಂದ್ರ, ಮನಸ್ಸಿನಿಂದಲೇ ಮನಸ್ಸನ್ನು ಕತ್ತರಿಸಿ (ಲಯಗೊಳಿಸಿ) ಮಮಕಾರವನ್ನೂ ಮತ್ತು ಅಹಂಕಾರವನ್ನೂ, (ನನ್ನದು-ನಾನು ಎಂಬ ಅಭಿಮಾನಗಳನ್ನು) ಸಂಪೂರ್ಣವಾಗಿ ಪರಿತ್ಯಾಗ ಮಾಡಿ, ಆತ್ಮಸ್ವರೂಪವನ್ನು ಯಥಾಸ್ಥಿತವಾಗಿ ಸಾಕ್ಷಾತ್ಕರಿಸದೆ ಇದ್ದದ್ದೇ ಆದರೆ, ಆಗ ಒಂದು ಚಿತ್ರಪಟದ ಮೇಲೆ ಬರೆಯಲ್ಪಟ್ಟಿರುವ ಸೂರ್ಯನು (ಸೂರ್ಯನ ಆಕಾರವು) ಹೇಗೆ ಎಂದಿಗೂ ಅಸ್ತಂಗತವಾಗುವುದೇ ಇಲ್ಲವೋ ಹಾಗೆಯೇ. ಜಗತ್ತಿನಲ್ಲಿ ಅಹಂ ಮಮಾಧ್ಯಾಸದಿಂದ ಸಂಭವಿಸುವ ಶೋಕ ಮೋಹಾದಿ ಸಕಲ ವಿಧ ದುಃಖ ಪರಂಪರೆಗಳು ಎಂದೆಂದಿಗೂ ಅಸ್ತವಾಗುವುದೇ ಇಲ್ಲ. ಮತ್ತು ಅಪಾರವಾದ ಮಹಾಸಾಗರದಂತೆ ವಿಸ್ತಾರವಾಗಿ ಹರಡಿಕೊಂಡಿರುವ ವಿಪತ್ತು ಕೂಡ ಅಪರಿಚ್ಛೇದ್ಯವಾಗಿ ಬಿಡುವುದು. ಆ ವಿಪತ್ತಿಗೆ ಕೊನೆಯೇ ಇಲ್ಲವಾಗಿ ಹೋಗುವುದು.

೩. ಮತ್ತು ಕಾಲಮೇಘದಂತೆ ಕಪ್ಪಾದ ತಮೋಗುಣ ಪ್ರಾಚುರ್ಯದಿಂದ ಮಲಿನವಾಗಿಯೂ ಜಡರ ಅಭ್ಯುದಯಕ್ಕೆ ಮುಖ್ಯ ಕಾರಣವಾಗಿಯೂ ಇರುವ ಈ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಸಂವಾದಂ ಸುಹೃದೋಃ ಸಹ್ಯಸಾನೌ ಭಾಸವಿಲಾಸಯೋಃ ॥ ೪ ॥

ಅಸ್ತ್ಯುತ್ಸೇಧಜಿತಾಕಾಶಃ ಪೀಠೇನ ಜಿತಭೂತಲಃ ।
ತಲೇನ ಜಿತಪಾತಾಲಸ್ತ್ರಿಲೋಕವಿಜಯೋ ಗಿರಿಃ ॥ ೫ ॥

ಅಸಂಖ್ಯಕುಸುಮಾಪೂರೋಽಸಂಖ್ಯನಿರ್ಮಲನಿರ್ಝರಃ ।
ಗುಹ್ಯಕಾರಕ್ಷಿತನಿಧಿಃ ಸಹ್ಯನಾಮಾಽವಿಷಹ್ಯಭಾಃ ॥ ೬ ॥

ಸಂಸಾರವೆಂಬ ಮೇಘಗಳಿಂದಲೂ ಕಪ್ಪಾದ ಕತ್ತಲೆಗಳಿಂದಲೂ ಮಂಕಾಗಿ ಕಾಣುವ ಮತ್ತು ನೀರಿನ ಮೇಲೆ ದೊಡ್ಡ ದೊಡ್ಡ ತರಂಗಗಳ ಆವಿರ್ಭಾವಕ್ಕೆ ಕಾರಣವಾಗಿಯೂ ಇರುವ ವರ್ಷರ್ತುವು ಮನಸ್ಸಿಗೆ ತುಂಬಾ ವ್ಯಾಕುಲತೆಯನ್ನುಂಟು ಮಾಡುತ್ತಾ ಸರ್ವದಾ ಪದೇ ಪದೇ ಬಿಡದೆ ತಲೆದೋರುತ್ತಲೇ ಇರುವುದು.

೪. ಆತ್ಮದರ್ಶನೋಪಾಯದಲ್ಲಿ ಉಪೇಕ್ಷೆಯನ್ನು ತೋರಿದರೆ, ದುಃಖ ಪರಂಪರೆಯು ತಪ್ಪುವುದೇ ಇಲ್ಲ ಎಂಬೀ ವಿಷಯದಲ್ಲಿ ಪೂರ್ವ ಕಾಲದಲ್ಲಿ, ಸಹ್ಯವೆಂಬ ಪರ್ವತದ ಪ್ರಸ್ಥಭೂಮಿಯ ಮೇಲೆ ವಾಸವಾಗಿದ್ದಂಥ ಪರಿಶುದ್ಧಾಂತಃಕರಣರೂ ಮತ್ತು ಪರಸ್ಪರ ಸ್ನೇಹಿತರೂ ಆದ ಭಾಸನೆಂಬುವನಿಗೂ, ವಿಲಾಸನೆಂಬುವನಿಗೂ ನಡೆದ ಸಂವಾದರೂಪವಾದ ಈ (ವಕ್ಷ್ಯಮಾಣ) ಪುರಾತನೇತಿಹಾಸವನ್ನು ಪ್ರಾಜ್ಞರು ಉದಾಹರಿಸುವರು.

೫-೬. ಸಹ್ಯವೆಂಬ ಹೆಸರಿನಿಂದ ಲೋಕಪ್ರಸಿದ್ಧವಾದ ಒಂದು ಕುಲಪರ್ವತವು ಇರುವುದು. ಅದು ತನ್ನ ಔನ್ನತ್ಯದಿಂದ ಆಕಾಶವನ್ನೆಲ್ಲ ಆಕ್ರಮಿಸಿಕೊಂಡಿರುವುದು. ತನಗೆ ಆಸನ್ನವಾದ ಭೂಭಾಗದಿಂದ ಭೂತಲವನ್ನೆಲ್ಲ ಆವರಿಸಿರುವುದು. ಭೂಮಿಯೊಳಗೆ ಪ್ರವಿಷ್ಟವಾಗಿರುವ ಮೂಲಭಾಗದಿಂದ ಪಾತಾಳಲೋಕವನ್ನೆಲ್ಲ ವ್ಯಾಪಿಸಿಕೊಂಡಿರುವುದು. ಹೀಗೆ ಆಗಿರಿಯು ಮೂರು ಲೋಕಗಳಲ್ಲಿಯೂ ಸರ್ವತ್ರ ಆಕ್ರಮಿಸಿಕೊಂಡು ಸರ್ವೋತ್ಕೃಷ್ಟವೆನ್ನಿಸಿರುವುದು. ಆ ಪರ್ವತದಲ್ಲಿ ನಾನಾ ಪುಷ್ಪರಾಶಿಗಳೂ ನಿರ್ಮಲವಾದ ಜಲ ಪ್ರವಾಹಗಳೂ ಅಸಂಖ್ಯಾಕವಾಗಿರುವುವು. ಅದರಲ್ಲಿರುವ ನಿಧಿಗಳನ್ನು ಗುಹ್ಯಕರೆಂಬ ದೇವತೆಗಳು ಸರ್ವ ಕಾವಲುನಿಂದ ಸಂರಕ್ಷಿಸುತ್ತಿರುವರು. ಮತ್ತು ಅದರಲ್ಲಿರುವ ನವವಿಧರತ್ನಗಳ ಪ್ರಕಾಶವು ಪ್ರೇಕ್ಷಕರ ಕಣ್ಣುಗಳ

ಮುಕ್ತಾಪಟಲಸಂಪೂರ್ಣೈರ್ಭಾನುಭಾಸುರಭಿತ್ತಿಭಿಃ ।
ಭಾಸುರಃ ಕಾಂಚನತಟೈಃ ಕಟೈರಿವ ಸುರದ್ವಿಪಃ ॥ ೭ ॥

ಕ್ವಚಿತ್ಪುಷ್ಪಭರಾಸಾರೋ ಧಾತುಸಾರಾತತಃ ಕ್ವಚಿತ್ ।
ಕ್ವಚಿತ್ ಫುಲ್ಲಸರಸ್ಸಾರೋ ರತ್ನಶಾಲಿಶಿಲಃ ಕ್ವಚಿತ್ ॥ ೮ ॥

ಇತೋ ರಟನ್ನಿರ್ಝರವಾನಿತಃ ಕ್ವಣಿತಕೀಚಕಃ ।
ಇತೋ ರಟದ್ಗುಹಾವಾತ ಇತಃ ಷಟ್ಪದಘುಂಘುಮಃ ॥ ೯ ॥

ನೋಟವನ್ನು ಮುಂಕುಗೊಳಿಸಿ ಕುಗ್ಗಿಸುವಷ್ಟು ಹೆಚ್ಚಾಗಿ ಸಹಿಸುವುದಕ್ಕೆ ಅಶಕ್ಯವಾಗಿರುವುದು.

೭. ಐರಾವತವು ತನ್ನ ವಿಶಾಲವಾದ ಗಂಡಸ್ಥಲದಿಂದ ಶೋಭಿಸುವಂತೆ ಆ ಪರ್ವತವು ಮುತ್ತುಗಳ ರಾಶಿಗಳಿಂದ ಪರಿಪೂರ್ಣಗಳಾಗಿಯೂ ಸೂರ್ಯ, ರತ್ನ ಮುಂತಾದವುಗಳಿಂದ ಹೊರ ಹೊಮ್ಮುವ ಕಿರಣಗಳಿಂದ ಥಳಥಳಿಸುವ ಗೋಡೆಗಳುಳ್ಳವುಗಳಾಗಿಯೂ ಇರುವ ಸುವರ್ಣಮಯವಾದ ಪ್ರಸ್ಥ ಭೂಮಿಗಳಿಂದ ಪ್ರಕಾಶಮಾನವಾಗಿರುವುದು.

೮. ಆ ಶೈಲದ ಕೆಲವು ಮೂಲೆಗಳಲ್ಲಿ ಬಗೆ ಬಗೆಯ ಹೂವುಗಳ ರಾಶಿಗಳು ಧಾರಾಕಾರವಾಗಿ ಕೆಳಗೆ ಸುರಿಯುತ್ತಿರುವುವು. ಇನ್ನೂ ಬೇರೆ ಕೆಲವು ಭಾಗಗಳಲ್ಲಿ ಮನಃಶಿಲೆ ಗೈರಿಕ ಮುಂತಾದ ವಿವಿಧ ಧಾತುಗಳ ಸಾರಗಳು ಬಹು ವಿಸ್ತಾರವಾಗಿ ಹರಡಿಕೊಂಡಿರುವುವು. ಮತ್ತೆ ಕೆಲವು ಕಡೆಗಳಲ್ಲಿ ಚೆನ್ನಾಗಿ ವಿರಾಜಿಸುವ ಸರೋವರಗಳಿಂದ ಜಲ ಪ್ರವಾಹಗಳು ಸಂತತವಾಗಿ ಹರಿಯುತ್ತಿರುವುವು. ಇನ್ನೂ ಬೇರೆ ಕಡೆಗಳಲ್ಲಿ ಅನೇಕ ವಿವಿಧ ರತ್ನಗಳಿಂದ ಶೋಭಿಸುವ ಶಿಲೆಗಳು ಹೇರಳವಾಗಿರುವುವು.

೯. ಆ ಪರ್ವತದ ಈ ಪ್ರದೇಶದಲ್ಲಿ ಜಲ ಪ್ರವಾಹಗಳು ಭೋರ್ಗರೆಯುತ್ತಾ ಹರಿಯುತ್ತಿರುವುವು. ಆ ಪ್ರದೇಶದಲ್ಲಿ ಯಾವರೋ ಅಸಂಖ್ಯಾಕವಾದ ಬಿದಿರುಗಳು (ತಮ್ಮ ಮಧ್ಯದಲ್ಲಿರುವ ರಂಧ್ರಗಳೊಳಗೆ ವಾಯುವು ದೂರಿ ಸೋಗುವುದರಿಂದ)

ಸಾನೌ ಗೀತೋಪ್ಸರೋವೃಂದೈರ್ವನೇ ಮೃಗಖಗಾರವಃ ।
ಅಧಿತ್ಯಕಾಯಾಂ ಮತ್ತಾಭ್ರೋ ಗಗನೇಷು ಖಗಾರವಃ　　॥ ೧೦ ॥

ವಿದ್ಯಾಧರಾಶ್ರಿತಗುಹೋ ಭೃಂಗಗೀತಾಂಬುಜಾಕರಃ ।
ಕಿರಾತಗೀತಪರ್ಯಂತಃ ಖಗಗೀತವನದ್ರುಮಃ　　॥ ೧೧ ॥

ಹೃದಯಂಗಮವಾಗಿ ಧ್ವನಿಮಾಡುತ್ತಿರುವುವು. ಮತ್ತೊಂದು ಸ್ಥಳದಲ್ಲಿ ಗುಹಾದ್ವಾರಗಳಿಂದ ವಾಯುವು ಒಳಗೂ ಹೊರಗೂ ಅತಿರಭಸವಾಗಿ ಶಬ್ದ ಮಾಡುತ್ತಾ ಬೀಸುತ್ತಿರುವುದು ಇನ್ನೂ ಬೇರೆ ಕೆಲವು ಪ್ರದೇಶಗಳಲ್ಲಿ ಮಧು ಪಾನದಿಂದ ಉನ್ಮತ್ತಗಳಾದ ಭ್ರಮರಗಳು ಕರ್ಣಾನಂದ ಕರವಾಗಿ ಝುಂಕಾರ ಮಾಡುತ್ತಾ ಹಾರಾಡುತ್ತಿರುವುವು.

೧೦. ಆ ಶೈಲದ ಪ್ರಸ್ಥಭೂಮಿಗಳಲ್ಲಿ ದೇವಲೋಕದಿಂದ ಅಪ್ಸರಸ್ ಸ್ತ್ರೀಯರು ಗುಂಪು ಗುಂಪಾಗಿ ಇಳಿದು ಬಂದು ವಿನೋದದಿಂದ ವಿಹರಿಸುತ್ತಾ ಸಂಗೀತಗಳನ್ನು ಹಾಡುತ್ತಿರುವರು. ಅದರ ಕಾಡುಗಳಲ್ಲಿ ಸಿಂಹ ವ್ಯಾಘ್ರಾದಿ ಮೃಗಗಳು ಧ್ವನಿ ಮಾಡುತ್ತಿರುವುವು ಮತ್ತು ಶುಕ ಪಿಕಾದಿ ಪಕ್ಷಿಗಳು ಮೃದು ಮಧುರ ಗಾನ ಮಾಡುತ್ತಿರುವುವು. ಆ ಬೆಟ್ಟದ ಎತ್ತರವಾದ ಮೇಲ್ಭಾಗದ ಭೂಮಿಗಳಲ್ಲಿ ಮೇಘಪಙ್ಕ್ತಿಗಳು ಮದವೇರಿದವುಗಳಂತೆ ಗುಡಗುಡನೆ ಗರ್ಜಿಸುತ್ತಿರುವುವು. ಮತ್ತು ಅಂತರಿಕ್ಷದಲ್ಲಿ ನಾನಾ ಹಕ್ಕಿಗಳ ಗುಂಪುಗಳು ವಿವಿಧವಾಗಿ ಚಿಲಿಪಿಲಿ ಗುಟ್ಟುತ್ತಿರುವುವು.

೧೧. ಆ ಪರ್ವತದ ಗುಹೆಗಳನ್ನು ವಿದ್ಯಾಧರರೆಂಬ ಸ್ವರ್ಗನಿವಾಸಿ ದೇವಗಣಗಳು ಆಶ್ರಯಿಸಿಕೊಂಡು ಎಡಬಿಡದೆ ಸರ್ವದಾ ಅಲ್ಲಿಯೇ ವಾಸಮಾಡುತ್ತಾ ವಿನೋದದಿಂದ ದಿವ್ಯವಾಗಿ ಗಾನಮಾಡುತ್ತಿರುವರು. ಆ ಬೆಟ್ಟದಲ್ಲಿರುವ ಸರೋವರಗಳಲ್ಲಿಯೂ ಪುಷ್ಕರಿಣಿಗಳಲ್ಲಿಯೂ ವಿಕಸಿತನಾದ ಸರೋಜಗಳಲ್ಲಿರುವ ಮಕರಂದವನ್ನು ಪಾನಮಾಡಿ ಭ್ರಮರಗಳು ಮೈ ಮರೆತು ಝುಂಕಾರವನ್ನು ಹಾಡುತ್ತಿರುವುವು ಅವರ ಸಮೀಪ ಪ್ರದೇಶಗಳಲ್ಲಿ ಕಿರಾತರೆಂಬ ಕಾಡು ಜನರು ಸರ್ವದಾ ಸಂಗೀತಗಳನ್ನೂ ಹಾಡುತ್ತಿರುವರು. ಆ ಬೆಟ್ಟದ ಕಾಡುಗಳಲ್ಲಿ ಮರಗಳ ಮೇಲೆ ವಾಸಮಾಡಿಕೊಂಡಿರುವ ವಿವಿಧ ಪಕ್ಷಿಗಳು ವಿನೋದದಿಂದ ಗಾನಮಾಡುತ್ತಾ ಇರುವುವು. ಹೀಗೆ ಆ ಪರ್ವತದ ಎಲ್ಲಾ ಕಡೆಗಳಲ್ಲಿಯೂ ಸಂಗೀತಮಯವಾಗಿ ಅತ್ಯಂತ ಮನೋಹರವಾಗಿದ್ದಿತು.

ಸ್ಕಂಧೇಷು ದೇವೈರ್ವಲಿತಃ ಪಾದೇಷು ವಲಿತೋ ನರೈಃ ।
ಪಾತಾಲೇ ವಲಿತೋ ನಾಗೈರ್ಜಗದ್ಗೃಹಮಿವಾಪರಂ ॥ ೧೨ ॥

ಕಂದರೇಷು ಶ್ರಿತಃ ಸಿದ್ಧೈಃ ನಿಧಾನೈರಂತರಾಶ್ರಿತಃ ।
ಚಂದನೇಷು ಶ್ರಿತೋ ನಾಗೈಃ ಸಿಂಹೈಃ ಶೃಂಗಶಿಖಾಸು ಚ ॥ ೧೩ ॥

ಪುಷ್ಪಾಭ್ರಸಂವೀತವಪುಃ ಪುಷ್ಪರೇಣ್ವಭ್ರಪಾಂಸುಲಃ ।
ಪುಷ್ಪವಾತ್ಯಾಭ್ರಹೃದ್ಭ್ರಾಂತಃ ಪುಷ್ಪಪಾದಪಪಾಂಡುರಃ ॥ ೧೪ ॥

---

೧೨. ಆ ಪರ್ವತದ ಎಲ್ಲಾ ಪ್ರಸ್ಥ ಭೂಮಿಗಳಲ್ಲಿಯೂ ಸ್ವರ್ಗಲೋಕ ನಿವಾಸಿಗಳಾದ ನಾನಾ ದೇವಗಣಗಳು ಸರ್ವದಾ ಸಂಚರಿಸುತ್ತಾ ಸುತ್ತುವರಿದಿರುವರು. ಅದರ ಸಮೀಪದಲ್ಲಿರುವ ಸಣ್ಣ ಸಣ್ಣ ಗುಡ್ಡಗಳಲ್ಲಿ ಭೂಲೋಕ ವಾಸಿಗಳಾದ ಮನುಷ್ಯರು ತುಂಬಿಕೊಂಡಿರುವರು. ಅದರ ಮೂಲ ಭಾಗದಲ್ಲಿ ಪಾತಾಳದಲ್ಲಿರುವಂತೆ ನಾನಾ ಸರ್ಪಗಳು ಹಾರಾಡುತ್ತಿರುವುವು. ಹೀಗೆ ಆ ಶೈಲವು ಲೋಕ ತ್ರಯ ನಿವಾಸಿಗಳಾದ ಸಕಲ ಪ್ರಾಣಿವರ್ಗಗಳಿಗೂ ಆವಾಸ ಸ್ಥಾನವಾಗಿದ್ದುಕೊಂಡಿರುವ ಕಾರಣ ಬ್ರಹ್ಮಾಂಡವೆಂಬ ಒಂದು ದೊಡ್ಡ ಮನೆಯೋ ಎಂಬಂತೆ ಶೋಭಿಸುತ್ತಿರುವುದು.

೧೩. ಆ ಪರ್ವತದ ಗುಹೆಗಳನ್ನೆಲ್ಲಾ ಸಿದ್ಧರೆಂಬ ದೇವಗಣಗಳು ಸರ್ವದಾ ಆಶ್ರಯಿಸಿಕೊಂಡಿರುವರು. ಅದರ ಭೂಮಿಯೊಳಗೆ ಎಲ್ಲೆಲ್ಲಿ ನೋಡಿದರೂ (ಅಗೆದು ಒಳಗೆ ಗೋಪ್ಯವಾಗಿಟ್ಟಿರುವ) ಧನ ರಾಶಿಗಳೇ ಕಾಣುವುವು. ಅದರ ಕಾಡುಗಳಲ್ಲಿ ಬೆಳೆದಿರುವ ಚಂದನ ವೃಕ್ಷಗಳನ್ನು ವಿವಿಧ ಸರ್ಪಗಳು ಆಶ್ರಯಿಸಿಕೊಂಡಿವೆ. ಮತ್ತು ಶಿಖರಗಳ ತುದಿಗಳಲ್ಲಿ ಸಿಂಹಗಳು ಗುಂಪಾಗಿ ಆಶ್ರಯವನ್ನು ಹೊಂದಿ ವಿಹಾರ ಮಾಡಿಕೊಂಡಿವೆ.

೧೪. ವೃಕ್ಷಗಳ ದೆಸೆಯಿಂದ ಕೆಳಗೆ ಮೊದಲೇ ಬಿದ್ದಿದ್ದ ಹೂಗಳ ರಾಶಿಗಳು, ಮೇಘಗಳ ಸಾಲುಗಳಂತೆ ಕಾಣುತ್ತಾ ಆ ಪರ್ವತದ ಸುತ್ತಲೂ ಮುತ್ತಿಕೊಂಡಿದ್ದವು. ಆಗತಾನೇ ಮರಗಳಿಂದ ಕೆಳಕ್ಕೆ ಜಾರಿಬಿದ್ದ ಹೂಗಳ ಪರಾಗಗಳು ಅಂತರಿಕ್ಷಕ್ಕೆ ಹಾರಿಹೋಗಿ, ಆ ಪರ್ವತದ ಶಿಖರಗಳ ತುದಿಗಳಲ್ಲಿ ಮೇಘ ಮಂಡಲದಂತೆ ಕವಿದಿರುವುವು. ಇನ್ನೂ ಬೀಳಲಿರುವ ಮತ್ತು ಮರಗಳಲ್ಲಿಯೇ ಅಂಟಿಕೊಂಡಿರುವ ಹೂಗಳು ವಾಯುವಿನ ಪ್ರವಾಹಕ್ಕೆ ಸಿಕ್ಕಿ ಮೇಲಕ್ಕೆ ಹಾರಿ ಮೇಘ ಮಂಡಲದ ಮಧ್ಯದಲ್ಲಿ ಸೇರಿಕೊಂಡು ಮೇಘಗಳಂತೆಯೇ ಹಾರಾಡುತ್ತಿರುವುವು. ಹೀಗೆ ಆ ಸಹ್ಯಾದ್ರಿಯು ಪುಷ್ಪ ವೃಕ್ಷಗಳಿಂದ ಶುಭ್ರವಾಗಿ ವಿರಾಜಿಸುತ್ತಿರುವುದು.

ಧಾತುಧೂಲ್ಯಭ್ರಕಪಿಲೋ ರತ್ನೋಪಲತಲಸ್ಥಿತೈಃ ।
ಮಂದಾರಗೈರಿವ ಪುರಸ್ತ್ರೀಗಣೈರಲಮಾಶ್ರಿತಃ ॥ ೧೫ ॥

ಅಭ್ರನೀಲಾಂಶುಕಚ್ಛನ್ನಾ ಮೂಕರತ್ನ ವಿಭೂಷಣಾಃ ।
ಶಿಲಾಃ ಕನಕಸುಂದರ್ಯೋ ಯತ್ರ ಶೃಂಗಾಭಿಸಾರಿಕಾಃ ॥ ೧೬ ॥

ತತ್ರೋತ್ತರತಟೇ ಸಾನೌ ವಿನಮ್ರಫಲಪಾದಪೇ ।
ರತ್ನಪುಷ್ಕರಿಣೀಜಾಲವಹನ್ನಿರ್ಝರವಾರಿಣಿ ॥ ೧೭ ॥

ಚೂತದ್ರುಮಲತೋನ್ಮುಕ್ತಪುಷ್ಪಸ್ತಬಕದಂತುರೇ ।
ವಿಫುಲ್ಲಾಂಕೋಲಪುನ್ನಾಗನೀಲನೀರಜದಿಕ್ತಟೇ ॥ ೧೮ ॥

ಲತಾವಿತಾನಚ್ಛನ್ನಾರ್ಕೇ ರತ್ನಾಂಶುಭರಭಾಸ್ವರೇ ।
ಸ್ರವಜ್ಜಂಬೂರಸಸ್ಯೂತೇ ಸ್ವರ್ಲೋಕಾಹ್ಲಾದಕಾರಿಣಿ ॥ ೧೯ ॥

ಬ್ರಹ್ಮಲೋಕಸಮಃ ಸ್ವರ್ಗರಮ್ಯಃ ಶಿವಪುರೋಪಮಃ ।
ಅತ್ರೇರಸ್ತ್ಯಾಶ್ರಮಃ ಶ್ರೀಮಾನ್ಸಿದ್ಧಶ್ರಮಹರೋ ಮಹಾನ್ ॥ ೨೦ ॥

---

೧೫. ಗೈರಿಕಾದಿ ಧಾತುಗಳ ಧೂಳಿಗಳು ಮೇಘಾಕಾರವಾಗಿ ಆ ಪರ್ವತದ ಮೇಲೆಲ್ಲಾ ವ್ಯಾಪಿಸಿಕೊಂಡಿರುವುದರಿಂದ ಆ ಪರ್ವತವು ಕೆಂಪಗೆ ಕಾಣುತ್ತಿತ್ತು. ಪೌರ ನಾರಿಯರು ಆ ಪರ್ವತದಲ್ಲಿ ಕಲ್ಲು ಬಂಡೆಗಳಂತೆ ಅತಿ ವಿಶಾಲವಾದ ನವ ರತ್ನಗಳ ಮೇಲೆ ನಿಂತು ಕೊಂಡವರಾಗಿ ಮಂದಾರವೆಂಬ ಕಲ್ಪ ವೃಕ್ಷವನ್ನು ಹತ್ತಿರುವ ಸುರ ಸುಂದರಿಯರೋ ಎಂಬಂತೆ ಆ ಬೆಟ್ಟದ ಪ್ರದೇಶಗಳನ್ನೆಲ್ಲಾ ಸರ್ವದಾ ಸಂಪೂರ್ಣವಾಗಿ, ಆಶ್ರಯಿಸಿಕೊಂಡಿರುವರು.

೧೬. ಸುವರ್ಣಮಯವಾದ ಶಿಲೆಗಳೆಂಬ ಹೊಂಬಣ್ಣದ ಮೈಯ ಸುಂದರಿಯರು ಮೇಘ ಮಾಲೆಗಳೆಂಬ ನೀಲಾಂಬರಗಳಿಂದ ತಮ್ಮ ದೇಹಗಳನ್ನೆಲ್ಲ ಪೂರ್ತಿಯಾಗಿ ಮುಚ್ಚಿಕೊಂಡವರಾಗಿಯೂ ಶಬ್ದ ಮಾಡದೆ ಮೌನದಿಂದಿರುವ ಕಡಗ ಮುಂತಾದ ರತ್ನಾಭರಣಗಳಿಂದ ವಿಭೂಷಿತೆಯರಾಗಿಯೂ ಆ ಪರ್ವತದ ಶಿಖರಗಳೆಂಬ ವಿಟ ಪುರುಷರನ್ನು ಹುಡುಕುತ್ತಾ ಸಂಕೇತ ಸ್ಥಳಕ್ಕೆ ಹೋಗತಕ್ಕ ಅಭಿಸಾರಿಕಾ ಕಾಮಿನಿಯರಂತೆ ಇರುವುವು.

೧೭-೧೮-೧೯-೨೦. ಇಂತಹ ಆಸಹ್ಯ ಪರ್ವತದ ಉತ್ತರ ದಿಗ್ಭಾಗದ ಎತ್ತರ

ಮಹತ್ಯತ್ಯಾಶ್ರಮೇ ತಸ್ಮಿಂಸ್ತಾಪಸೌ ದ್ವೌ ಬಭೂವತುಃ ।
ಕೋವಿದೌ ತು ನಭೋಮಾರ್ಗ ಇವ ಶುಕ್ರಬೃಹಸ್ಪತೀ ॥ ೨೧ ॥

ವಾದ ಒಂದು ಪ್ರದೇಶದಲ್ಲಿ ಇಳಿಜಾರಾದ ಒಂದು ಪ್ರಸ್ಥ ಭೂಮಿಯಿರುವುದು. ಆ ಪ್ರಸ್ಥಭೂಮಿಯಲ್ಲಿನ ವೃಕ್ಷಗಳೆಲ್ಲವೂ ಹಣ್ಣುಗಳ ಭಾರದಿಂದ ಯಾವಾಗಲೂ ಬಗ್ಗಿಕೊಂಡಿರುವುವು ರತ್ನಮಯವಾದ ಸಣ್ಣ ಸಣ್ಣ ಕಮಲ ಸರಸ್ಸುಗಳ ದೆಸೆಯಿಂದ ನೀರು ಪ್ರವಾಹ ರೂಪವಾಗಿ ಸರ್ವದಾ ಹರಿಯುತ್ತಿರುವುದು. ಅಲ್ಲಿರುವ ಮಾವಿನ ಗಿಡಗಳಿಗೆ ಹಬ್ಬಿಕೊಂಡಿರುವ ಲತೆಗಳು ಹೂಗಳ ಗೊಂಚಲುಗಳನ್ನು ಅಸಂಖ್ಯಾಕವಾಗಿ ಮೇಲ್ಗಡೆಯಲ್ಲಿ ಚಾಚಿರುವುದರಿಂದ ಅವು ಆ ಲತೆಗಳೆಂಬ ನಾರಿಯರ ಉನ್ನತವಾದ ದಂತ ಪಙ್ಕ್ತಿಗಳಂತೆ ಶೋಭಿಸುತ್ತಿರುವುವು. ಆ ಪ್ರಸ್ಥ ಭೂಮಿಯ ಎಲ್ಲ ದಿಕ್ತಟಗಳಲ್ಲಿಯೂ ಅಂಕೋಲ, ಪುನ್ನಾಗ, ಕನ್ನೈದಿಲೆ ಮುಂತಾದ ಪುಷ್ಪಗಳು ಯಾವಾಗಲೂ ಚೆನ್ನಾಗಿ ಅರಳಿ ಸೌರಭವನ್ನು ಬೀರುತ್ತಿರುವುವು. ಲತಾ ಮಂಟಪಗಳು ಆ ಪ್ರಸ್ಥ ಭೂಮಿಯನ್ನು ಮೇಲ್ಹಾವಣಿಯಂತೆ ಮುಚ್ಚಿಬಿಟ್ಟು ಸೂರ್ಯ ಕಿರಣಗಳು ಪ್ರಸರಿಸದೆ ಇರುವಂತೆ ತಡೆದಿರುವುವು. ಆದರೂ ಅಲ್ಲಿರುವ ರತ್ನಗಳ ರಾಶಿಗಳಿಂದ ಪ್ರಕಾಶ ಮಾನವಾದ ಕಿರಣ ಜಾಲಗಳು ಹೊರ ಹೊರಟು ಅಲ್ಲಿರುವ ಕತ್ತಲೆಯನ್ನು ಧ್ವಂಸಮಾಡಿ ಬೆಳಗಿಸುತ್ತಿರುವುವು. ಅಲ್ಲಿ ನೇರಿಳೆಮರಗಳಿಂದ ಸರ್ವದಾ ಅವಿಚ್ಛಿನ್ನವಾಗಿ ಫಲರಸವು ಸ್ರವಿಸುತ್ತಿರುವುದು. ಇದು ಸ್ವರ್ಗಲೋಕದಂತೆ ಸರ್ವಜನಾಹ್ಲಾದಕರವಾಗಿ ಅತ್ಯಂತ ಸ್ಪೃಹಣೀಯವಾಗಿರುವುದು. ಇಂತಹ ಆ ಪ್ರಸ್ಥಭೂಮಿಯಲ್ಲಿ ಬ್ರಹ್ಮ ಲೋಕಸದೃಶವಾಗಿಯೂ ಸದಾ ಶಿವನಿಗೆ ಆವಾಸ ಸ್ಥಾನವಾದ ಕೈಲಾಸಕ್ಕೆ ಸಮನಾಗಿಯೂ ಸಕಲ ಸಿದ್ಧ ಪುರುಷರಿಗೂ ವಿಶ್ರಾಂತಿ ಪ್ರದವಾಗಿಯೂ ಇರುವ ಅತಿ ಪ್ರಶಸ್ತವಾದ ಬ್ರಹ್ಮತೇಜೋಮಯವಾದ ಬಹು ವಿಸ್ತಾರವಾದ ಅತ್ರಿ ಮಹರ್ಷಿಗಳ ದಿವ್ಯಾಶ್ರಮವು ಕಣ್ಗೊಳಿಸುತ್ತಲಿರುವುದು.

೨೧. ಅತಿ ವಿಸ್ತೀರ್ಣವಾದ ಆ ಅತ್ರಿ ಮಹರ್ಷಿಯ ಆಶ್ರಮದಲ್ಲಿಯಾವರೋ ಗಗನಮಂಡಲದಲ್ಲಿ ಶುಕ್ರ, ಬೃಹಸ್ಪತಿಗಳಿರುವಂತೆ, ಸರ್ವ ಶಾಸ್ತ್ರಗಳಲ್ಲಿ ವಿದ್ವಾಂಸರಾದ ಶುಕ್ರ ಬೃಹಸ್ಪತಿಗಳೆಂಬ ಹೆಸರುಗಳಿಂದ ವಿಖ್ಯಾತರಾದ ಇಬ್ಬರು ತಪಸ್ವಿಗಳು ವಾಸಮಾಡಿಕೊಂಡಿದ್ದರು.

ತಯೋರರ್ಥೈಕಾಸ್ಪದಯೋಸ್ತತ್ರಾಭೂತಾಂ ಸುತಾವುಭೌ ।
ಫುಲ್ಲಾಂಕುರೌ ಶುದ್ಧತನೂ ಸರಸ್ಯಂಬುಜಯೋರಿವ ॥ ೨೨ ॥

ವಿಲಾಸಭಾಸನಾಮಾನೌ ವೃದ್ಧಿಮಾಯಯತುಃ ಕ್ರಮಾತ್ ।
ತೌ ಪಿತ್ರೋಃ ಪಲ್ಲವೇ ದೀರ್ಘೇ ಲತಾಪಾದಪಯೋರಿವ ॥ ೨೩ ॥

ಆಸ್ತಾಮನ್ಯೋನ್ಯಸುಸ್ನಿಗ್ಧೌ ಸುಹೃದೌ ವಲ್ಲಭೌ ಮಿಥಃ ।
ತಿಲತೈಲವದಾಶ್ಲಿಷ್ಟೌ ತೌ ಪುಷ್ಪಾಮೋದವತ್ಸ್ಥಿತೌ ॥ ೨೪ ॥

---

೨೨. ಹೀಗೆ ಅದೇ ಆಶ್ರಮದಲ್ಲಿ ಒಂದೇ ಪರ್ಣಶಾಲೆಯಲ್ಲಿ ಒಟ್ಟಿಗೆ ವಾಸಮಾಡಿಕೊಂಡಿದ್ದಂಥ ಆ ಇಬ್ಬರು ತಪಸ್ವಿಗಳಿಗೆ ಸ್ವಲ್ಪ ಕಾಲಾನಂತರ ಒಂದೇ ಸರೋವರದ ನೀರಿನಲ್ಲಿ ಒಂದೇಕಡೆ ಉದ್ಭವಿಸಿರುವ ಎರಡು ಕಮಲ ನಾಳಗಳಲ್ಲಿ ನಿರ್ಮಲಾಕಾರವಾದ ಎರಡು ತಾವರೆ ಮೊಗ್ಗುಗಳು ಮೇಲಕ್ಕೆದ್ದು ಕಾಣಿಸುವಂತೆ ಪುಣ್ಯ ಶರೀರಿಗಳಾದ ಇಬ್ಬರು ಗಂಡು ಮಕ್ಕಳು ಉದ್ಭವಿಸಿದರು.

೨೩. ಆ ಇಬ್ಬರು ಮಕ್ಕಳುಗಳೊಳಗೆ ಒಬ್ಬನ ಹೆಸರು ವಿಲಾಸನೆಂದು, ಮತ್ತೊಬ್ಬನದು ಭಾಸನೆಂದು. ಹೀಗೆ ವಿಲಾಸ ಭಾಸರೆಂಬ ಹೆಸರಿನ ಆ ಇಬ್ಬರು ಮಕ್ಕಳೂ, ದಿನ ಕ್ರಮೇಣ ಕಾಲವು ಕಳೆಯುತ್ತಾ ಬಂದಹಾಗೆಲ್ಲಾ, ಒಂದು ಲತೆಯು ಮತ್ತು ಆ ಲತೆಯು ಸುತ್ತಿಕೊಂಡಿರುವ ಮರದ ರಸ ವಿಶೇಷಗಳಿಂದ ಸಣ್ಣಗೆ ಅಂಕುರಿಸಿದ ಎರಡು ಚಿಗುರೆಲೆಗಳು ಕಾಲಕ್ರಮದಿಂದ ವೃದ್ಧಿಹೊಂದಿ ದೊಡ್ಡ ಎಲೆಗಳಾಗುವಂತೆ, ತಮ್ಮ ತಮ್ಮ ಮಾತಾಪಿತೃಗಳ ಲಾಲನೆ, ಪೋಷಣೆಗಳಿಂದ ದಿನೇದಿನೇ ವೃದ್ಧಿಯನ್ನೈದಿದರು.

೨೪. ಆ ಇಬ್ಬರು ತಾಪಸ ಕುಮಾರರೂ, ಅನ್ಯೋನ್ಯ ಪರಮ ಸ್ನೇಹದಿಂದ ಭರಿತರಾಗಿಯೂ, ಪರಸ್ಪರ ಅತ್ಯಧಿಕ ಪ್ರೇಮಪಾತ್ರರಾಗಿಯೂ ಇರುತ್ತಾ ಎಳ್ಳು, ಎಣ್ಣೆಗಳಂತೆಯೂ ಮತ್ತು ಹೂವು, ಪರಿಮಳಗಳಂತೆಯೂ ಒಬ್ಬರನ್ನೊಬ್ಬರು ಯಾವಾಗಲೂ ಅಗಲಿರದೆ ಒಟ್ಟಿಗೆ ಕೂಡಿಕೊಂಡು ಉತ್ತಮ ಸ್ನೇಹಿತರಾಗಿದ್ದರು.

ನಾಯುಕ್ತೌ ಪುತ್ರಯುಕ್ತೌ ತು ಸುರಕ್ತಾವಿವ ದಂಪತೀ ।
ಏಕಂ ದ್ವಿತ್ವಮಿವಾಪನ್ನಂ ಸಮಮಾಸೀತ್ತಯೋರ್ಮನಃ ॥ ೨೫ ॥

ತೌ ತಥಾನ್ಯೋನ್ಯಮುದಿತೌ ಮನೋಹರ ತರಾಕೃತೀ ।
ತಸ್ಥತುಃ ಸ್ವಾಶ್ರಮೇ ಮೌನೇ ಸರೋಜ ಇವ ಷಟ್ಪದೌ ॥ ೨೬ ॥

ಪ್ರಾಪತುಃಯೌವನಂ ಬಾಲ್ಯಮುತ್ಸೃಜ್ಯ ನವವಲ್ಲಭೌ ।
ಕಾಲೇನಾಲ್ಪತರೇಣೈವ ಚಂದ್ರಸೂರ್ಯಾವಿವೋದಿತೌ ॥ ೨೭ ॥

---

೨೫. ಪುತ್ರೋತ್ಪಾದನಾರ್ಥವಾಗಿ ಗೃಹಸ್ಥ ಧರ್ಮದಿಂದ ಒಟ್ಟಿಗೆ ಕಲೆತು ಸಂಸಾರಮಾಡಿಕೊಂಡಿರುವ ಮತ್ತು ಅನ್ಯೋನ್ಯಾನುರಾಗ ಸಂಪೂರ್ಣರಾದ ದಂಪತಿಗಳಂತೆಯೇ ಆ ಇಬ್ಬರು ತಾಪಸ ಕುಮಾರರು ಯಾವಾಗಲೂ ಒಬ್ಬರನ್ನೊಬ್ಬರು ಅಗಲದೆ ಜೊತೆಗೂಡಿಯೇ ಇದ್ದರು. ಮತ್ತು ಒಂದೇ ಮನಸ್ಸು ಎರಡು ರೂಪಗಳಾಗಿ ಅವರಿಬ್ಬರ ಎರಡು ದೇಹಗಳಲ್ಲಿ ಬೇರೆ ಬೇರೆ ಸೇರಿಕೊಂಡಿದೆಯೋ ಎಂಬಂತೆ ಅವರಿಬ್ಬರ ಮನಸ್ಸುಗಳು ಸಮರಸವಾಗಿದ್ದುಕೊಂಡು ಒಂದೇ ಮನಸ್ಸಿನಂತೆಯೇ ಕಂಡವು.

೨೬. ವಯಸ್ಸು ಹೆಚ್ಚುತ್ತಾ ಬಂದ ಹಾಗೆಲ್ಲ ಮೊದಲಿಗಿಂತ ಹೆಚ್ಚು ಸುಂದರವಾಗಿ ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುವ ಆಕಾರ ಸಂಪನ್ನರಾದ ಆ ಇಬ್ಬರು ಮುನಿಕುಮಾರರೂ ತಪಸ್ವಿ ಜನಪೂರ್ಣವಾದ ತಮ್ಮ ಆಶ್ರಮದಲ್ಲಿ ಸೂರ್ಯನ ಅಸ್ತಾನಂತರ ಮುಕುಳಿತವಾದ ಕಮಲದೊಳಗೆ ಸೇರಿಕೊಂಡಿರುವ ಎರಡು ಭ್ರಮರಗಳಂತೆ ಹಾಗೆಯೇ ಪರಸ್ಪರಾನುರಾಗದಿಂದ ಸಂತೋಷಪಟ್ಟುಕೊಂಡು ಇದ್ದರು.

೨೭. ಚಂದ್ರೋದಯವಾದ ಬಳಿಕ ಚಂದ್ರನೂ ಹಾಗೆಯೇ ಸೂರ್ಯೋದಯವಾದ ನಂತರ ಸೂರ್ಯನೂ ಅತ್ಯಲ್ಪ ಕಾಲದೊಳಗಾಗಿ ಜನರು ನೋಡುತ್ತಿದ್ದಾಗಲೇ ಮೇಲಿಂದ ಮೇಲಕ್ಕೆ ಏರುತ್ತಾ ವೃದ್ಧಿಹೊಂದುವಂತೆ ಆ ಭಾಸನೂ ವಿಲಾಸನೂ ಕೂಡ ಅತ್ಯಲ್ಪಕಾಲದೊಳಗಾಗಿಯೇ ತಮ್ಮ ಬಾಲ್ಯವನ್ನು ಕಳೆದುಕೊಂಡು ಯೌವನವನ್ನು ಹೊಂದಿದರು. ಮತ್ತು ಆ ಹೊಸ ಯೌವನದಿಂದ ಮತ್ತಷ್ಟು ಹೆಚ್ಚು ಸೌಂದರ್ಯದಿಂದ ವಿರಾಜಮಾನರಾದರು.

ಜಗ್ಮತುರ್ದೇಹ ಮುತ್ಸೃಜ್ಯ ತತಸ್ತೌ ಪಿತರೌ ತಯೋಃ ।
ಸ್ವರ್ಗಂ ಜರಾರ್ತಾವುಡ್ಡೀಯ ನೀಡಾದಿವ ವಿಹಂಗಮೌ ॥ ೨೮ ॥

ಪಂಚತ್ವಂ ಗತಯೋಃ ಪಿತ್ರೋಃದೀನವಕ್ತ್ರೌ ಬಭೂವತುಃ ।
ತಪ್ತಾಂಗೌ ವಿಗತೋತ್ಸಾಹೌ ಪದ್ಮಾವಿವ ಜಲೋದ್ಧೃತೌ ॥ ೨೯ ॥

ತತೌರ್ಧ್ವದೈಹಿಕಂ ಕೃತ್ವಾ ಚಕ್ರಾತೇ ಪರಿದೇವನಂ ।
ಲೋಕಸ್ಥಿತಿರಲಂಘ್ಯಾ ಹಿ ಮಹತಾಮಪಿ ಮಾನದ ॥ ೩೦ ॥

---

೨೮. ಬಳಿಕ ಸ್ವಲ್ಪ ಕಾಲಾನಂತರ ಎರಡು ಪಕ್ಷಿಗಳು ತಮ್ಮ ವಾಸಸ್ಥಳವಾದ ಗೂಡನ್ನು ಬಿಟ್ಟು ಆಕಾಶದಲ್ಲಿ ಮೇಲಕ್ಕೆ ಹಾರಿಹೋಗುವಂತೆ ಬಹಳ ವಯಸ್ಸಾಗಿ ಮುದಿತನದಿಂದ ನರಳುತ್ತಲಿದ್ದ ಆ ಇಬ್ಬರು ಕುಮಾರರ ತಂದೆಗಳಿಬ್ಬರೂ ಕಾಲವಶದಿಂದ ತಮ್ಮ ತಮ್ಮ ದೇಹಗಳನ್ನು ಪರಿತ್ಯಜಿಸಿ ಪುಣ್ಯಾತ್ಮರಾಗಿದ್ದ ಕಾರಣ ದಿವ್ಯದೇಹಗಳನ್ನು ಧರಿಸಿ ಸ್ವರ್ಗಲೋಕವನ್ನು ಸೇರಿದರು.

೨೯. ತಮ್ಮ ತಂದೆಗಳಿಬ್ಬರೂ ಸತ್ತು ಹೋದ ಬಳಿಕ ಆ ಭಾಸ ವಿಲಾಸರಿಬ್ಬರೂ ನೀರಿನಿಂದ ಹೊರಕ್ಕೆ ಎತ್ತಿ ಹಾಕಿದ ಎರಡು ಕಮಲ ಪುಷ್ಪಗಳು ಕಳೆಗುಂದುವಂತೆ ದುಃಖದಿಂದ ಕಳೆಗುಂದಿದ ಮುಖಗಳುಳ್ಳವರಾಗಿಯೂ ಪಿತೃವಿಯೋಗ ಜನ್ಯವಾದ ಶೋಕದಿಂದ ಸಂತಾಪಕ್ಕೆ ಸಿಲುಕಿದ ಮನಸ್ಸುಳ್ಳವರಾಗಿಯೂ ಯಾವುದೊಂದು ವಿಷಯದಲ್ಲಿಯೂ ಸ್ವಲ್ಪವೂ ಉತ್ಸಾಹವಿಲ್ಲದವರಾಗಿಯೂ ಇದ್ದರು.

೩೦. ಕೂಡಲೆ ಆ ಇಬ್ಬರು ಕುಮಾರರೂ ಮರಣ ಹೊಂದಿದ ತಮ್ಮ ತಂದೆಗಳಿಬ್ಬರಿಗೂ ಶವದಾಹಾದಿ ಸಕಲ ಔರ್ಧ್ವದೈಹಿಕ ಸಂಸ್ಕಾರಗಳನ್ನು ಯಥಾ ವಿಧಿಯಾಗಿ ಆ ಅತ್ರ್ಯಾಶ್ರಮದಲ್ಲಿಯೇ ಮಾಡಿ ಮುಗಿಯಿಸಿ ತಮ್ಮ ತಮ್ಮ ಪಿತೃ ವಿಯೋಗಕ್ಕಾಗಿ ಬಹುವಾಗಿ ಅತ್ತುಗೋಳಿಟ್ಟರು. ಎಂತಹ ಮಹಾತ್ಮರೇ ಆಗಿದ್ದರೂ ಕೂಡ ಪ್ರಪಂಚದಲ್ಲಿ ಆಯಾ ಕಾಲಗಳಲ್ಲಿ ಪೂರ್ವಕರ್ಮಾನುಗುಣವಾಗಿ ಬಂದೊದಗುವ ಸುಖ ದುಃಖಾತ್ಮಕ ಸ್ಥಿತಿಯು ಸರ್ವಥಾ ಸರ್ವರಿಗೂ ಸರ್ವತ್ರ ವಾಸ್ತವವಾಗಿಯೂ ಅನುಲ್ಲಂಘನೀಯವಾದುದೇ ಸರಿ.

ಕೃತ್ವೌರ್ಧ್ವದೈಹಿಕಮಥೋ ವ್ಯಥಯಾಭಿಭೂತೌ ।
ಶೋಕೋತ್ಥಯಾ ಕರುಣಯಾರ್ತಗಿರಾ ವಿಲಪ್ಯ ॥
ಚಿತ್ರಾರ್ಪಿತಾವಿವ ನಿರಸ್ತ ಸಮಸ್ತ ಚೇಷ್ಟೌ ।
ತೌ ಸಂಸ್ಥಿತೌ ಸುಖಮಶೂನ್ಯಹೃದೌ ವಿವೃತ್ತೌ ॥ ೩೧ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಭಾಸವಿಲಾಸ ವೃತ್ತಾಂತೇ "ಸಹ್ಯಗಿರಿ ವರ್ಣನಂ" ನಾಮ ಪಂಚಷಷ್ಟಿತಮಃ ಸರ್ಗಃ.

---

೩೧. ಹೀಗೆ ಆ ಭಾಸ ವಿಲಾಸರಿಬ್ಬರೂ ತಮ್ಮ ತಂದೆಗಳಿಗೆ ಔರ್ಧ್ವದೈಹಿಕ ಕರ್ಮಗಳನ್ನು ಮಾಡಿದ ಬಳಿಕ, ವ್ಯಥೆಯಿಂದ ಪರಾಜಿತರಾಗಿ ಪಿತೃಶೋಕದಿಂದ ಉದಯಿಸಿದ ಆರ್ತಧ್ವನಿಯಿಂದ ಅಲ್ಲಿರುವವರಿಗೆಲ್ಲಾ ಮರುಕ ಹುಟ್ಟುವತೆರದಲ್ಲಿ ಬಹುವಿಧವಾಗಿ ಗೋಳಿಟ್ಟು ಅತ್ತು ಅತ್ತು, ಕಂಗೆಟ್ಟವರಾಗಿ ಚಿತ್ರ ಪಟದಲ್ಲಿ ನಾನಾ ಬಣ್ಣಗಳ ರಸಗಳಿಂದ ಚಿತ್ರಿತರಾದ ಆಕಾರಗಳಂತೆ ಸರ್ವವಿಧ ಚೇಷ್ಟಾವಿಹೀನರಾಗಿ (ಅಂಗೋಪಾಂಗಗಳ ವ್ಯವಹಾರವು ಯಾವುದೂ ಇಲ್ಲದೆ) ಅಂದರೆ ನಿಶ್ಚೇಷ್ಟರಾಗಿ ಕೊನೆಗೆ ಮೂರ್ಛಿತರಾಗಿದ್ದಕಾರಣವೇ ಅನಾಯಾಸದಿಂದ ಇದ್ದು ಕೊಂಡಿದ್ದರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದೊಳಗೆ ಭಾಸವಿಲಾಸ ವೃತ್ತಾಂತದಲ್ಲಿ "ಸಹ್ಯಗಿರಿವರ್ಣನ" ವೆಂಬ ಅರವತ್ತೈದನೆಯ ಸರ್ಗವು.

ಷಟ್ಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಅತಿಶೋಕಪರಾಭೂತೌ ತಸ್ಥತುರ್ದೃಢತಾಪಸೌ ।
ತಾಪಸಂಶುಷ್ಕಸರ್ವಾಂಗೌ ತಾವರಣ್ಯದ್ರುಮಾವಿವ ॥ ೧ ॥

ವಿರಕ್ತೌ ವಿಪಿನೇ ಕಾಲಂ ಕ್ಷೇಪಯಾಮಾಸತುರ್ದ್ವಿಜೌ ।
ವಿಯೂಥಾವಿವ ಸಾರಂಗಾವನಾಸ್ಥಾಮಾಗತೌ ಪರಾಂ ॥ ೨ ॥

ಜಗ್ಮುರ್ದಿನಾನಿ ಮಾಸಾಶ್ಚ ವರ್ಷಾಣ್ಯಥ ತಯೋಸ್ತದಾ ।
ಕ್ರಮಾತ್ದ್ವಾವಪಿ ಸಂಯಾತೌ ಜರಾಂ ಶ್ವಭ್ರದ್ರುಮಾವಿವ ॥ ೩ ॥

ಅರವತ್ತಾರನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :

೧. ಅಯ್ಯ ರಾಮಭದ್ರ, ಹೀಗೆ ಪಿತೃ ಮರಣದಿಂದ ಉಂಟಾದ ಅತ್ಯಧಿಕವಾದ ಶೋಕದಿಂದ ಸಮಾಕ್ರಾಂತರಾಗಿ ಪರವಶರಾಗಿದ್ದ ಆ ಭಾಸ ವಿಲಾಸರೆಂಬ ತಪಸ್ವಿಗಳಿಬ್ಬರೂ ಸಂತಾಪದಿಂದ ಚೆನ್ನಾಗಿ ನೀರಸವಾಗಿ ಶುಷ್ಕವಾದ ಸರ್ವಾಂಗಗಳುಳ್ಳವರಾಗಿ ಬೇಸಗೆಯ ಬಿಸಿಲಿನಿಂದಲೂ ಕಾಡು ಗಿಚ್ಚಿನ ದಾಹದಿಂದಲೂ ಚೆನ್ನಾಗಿ ಶುಷ್ಕವಾದ ಶಾಖೋಪಶಾಖೆಗಳುಳ್ಳಂಥಾ ವನವೃಕ್ಷಗಳಂತೆ ಬಹು ದೈನ್ಯದಿಂದ ಆ ತಪೋವನದಲ್ಲಿಯೇ ದೃಢವಾಗಿ ನಿಂತರು.

೨. ಆ ಬ್ರಾಹ್ಮಣರಿಬ್ಬರೂ ಮಂದೆಯಿಂದ ತಪ್ಪಿಸಿಕೊಂಡು ಹೋದ ಜಿಂಕೆಗಳಂತೆ ಗೃಹ ಕ್ಷೇತ್ರಧನಾದಿ ಆತ್ಮೀಯ ವಸ್ತುಗಳಲ್ಲಿಯೂ ಕೊನೆಗೆ ಅನ್ನಪಾನಾದಿ ಶರೀರ ಧಾರಣಾರ್ಥವಾದ ವ್ಯವಹಾರಗಳಲ್ಲಿಯೂ ಅತ್ಯಂತಿಕವಾದ ಅನಾಸಕ್ತಿಯನ್ನು ವಹಿಸಿ ವಿರಕ್ತರಾಗಿ ಆ ವನದಲ್ಲಿ ಕಾಲವನ್ನು ಹೇಗೋ ತಳ್ಳುತ್ತಿದ್ದರು

೩. ಹೀಗೆಯೇ ಅವರಿಬ್ಬರಿಗೂ ಕಾಲಕ್ರಮದಿಂದ ಒಂದೊಂದಾಗಿ ದಿನಗಳೂ ತಿಂಗಳುಗಳೂ ಸಂವತ್ಸರಗಳೂ ಅನೇಕ ಕಳೆದು ಹೋದವು. ಬಳಿಕ, ಕೆಲವು ಕಾಲ

ಅಪ್ರಾಪ್ತವಿಮಲಜ್ಞಾನೌ ಚಿರಾಜ್ಜರ್ಜರತಾಪಸೌ ।
ತಾವೇಕದಾ ಸಂಘಟಿತಾವಿದಮನ್ಯೋನ್ಯಮೂಚತುಃ ॥ ೪ ॥

ವಿಲಾಸ ಉವಾಚ :-
ಜೀವಿತಾಗ್ರ್ಯದ್ರುಮಫಲ ಹೃದಾವಾಸಾಮೃತಾಂಬುಧೇ ।
ಜಗತ್ಯಸ್ಮಿನ್ಮಹಾಬಂಧೋ ಭಾಸ ಸ್ವಾಗತಮಸ್ತು ತೇ ॥ ೫ ॥

ಏತಾವತ್ಯೋ ದಿನಾವಲ್ಯೋ ಮದ್ವಿಯೋಗವತಾ ತ್ವಯಾ ।
ವದ ಕ್ವ ಕ್ಷಪಿತಾಃ ಸಾಧೋ ಕಚ್ಚಿತ್ತೇ ಸಫಲಂ ತಪಃ ॥ ೬ ॥

ದಲ್ಲಿ ಅವರಿಬ್ಬರೂ ಒಂದು ಆಳವಾದ ಪಾಳು ಗುಂಡಿಯಲ್ಲಿ ಬೆಳೆದಿರುವ ಮರಗಳಂತೆ ಕ್ರಮವಾಗಿ ಬಹಳ ಮುದುಕರೂ ಆಗಿ ಬಿಟ್ಟರು.

೪. ಅಷ್ಟು ಹೆಚ್ಚು ವಯಸ್ಸಿನ ಮುದುಕರಾದರೂ ಕೂಡ ಜನ್ಮದಿಂದ ಮಾತ್ರವೇ ತಪಸ್ವಿಗಳಾಗಿದ್ದ ಅವರಿಬ್ಬರಿಗೂ ಸ್ವಲ್ಪವೂ ನಿರ್ಮಲ ಜ್ಞಾನವೇ ಉಂಟಾಗಲಿಲ್ಲ. ಆವೃದ್ಧರಿಬ್ಬರೂ ಹೇಗೋ ವಿಧಿ ವಶದಿಂದ ಸ್ವಲ್ಪಕಾಲ ವಿಯುಕ್ತರಾಗಿದ್ದು ಪುನಃ ಒಂದು ಸಮಯದಲ್ಲಿ ಒಟ್ಟಿಗೆ ಒಂದು ಕಡೆ ಪೂರ್ವದಂತೆ ಜೊತೆ ಗೂಡಿದವರಾಗಿ ಮುಂದೆ ಹೇಳುವ ಪ್ರಕಾರ ಪರಸ್ಪರ ಮಾತನಾಡಿಕೊಂಡರು.

ವಿಲಾಸನು ಹೇಳಿದನು :—

೫. ಅಯ್ಯ, ನನ್ನ ಶ್ರೇಷ್ಠವಾದ ಜೀವನವೆಂಬ ಫಲವೃಕ್ಷದ ಸುಪಕ್ವ ಫಲಪ್ರಾಯನಾದಮಿತ್ರನೇ, ನನ್ನ ಹೃದಯದೊಳಗೆ ಸರ್ವದಾ ವಾಸಮಾಡಿಕೊಂಡಿರುವ ಕ್ಷೀರ ಸಮುದ್ರವೇ, ಈ ಜಗತ್ತಿನೊಳಗ ನನಗೆ ಪರಮಾಪ್ತ ಬಂಧುವಾದ ಭಾಸನೇ, ನಿನಗೆ ಸ್ವಾಗತವು.

೬. ಅಯ್ಯ ಸಾಧುವೇ, ನೀನು ನನ್ನಿಂದ ವಿಯುಕ್ತನಾಗಿದ್ದುಕೊಂಡು ಇಷ್ಟೊಂದು (ಅನೇಕಾನೇಕ ದಿನ ಸಮುದಾಯ ಪರ್ಯಂತ) ದೀರ್ಘಕಾಲವನ್ನು ಎಲ್ಲಿ ಕಳೆದೆ ? ನೀನು ಮಾಡಿದ ತಪಸ್ಸು ಸಫಲವಾಗಿರುವುದೇ ಏನು ? ಹೇಳು.

ಕಚ್ಚಿತ್ತೇ ವಿಜ್ವರಾ ಬುದ್ಧಿಃ ಕಚ್ಚಿಜ್ಜ್ಞಾತಸ್ತ್ವಮಾತ್ಮವಾನ್ ।
ಕಚ್ಚಿತ್ಫಲಿತವಿದ್ಯಸ್ತ್ವಂ ಕಚ್ಚಿತ್ಕುಶಲವಾನಸಿ ॥ ೭ ॥

ಶ್ರೀ ವಸಿಷ್ಠ ಉವಾಚ :—

ಇತ್ಯುಕ್ತವಂತಂ ಸಂಸಾರಸಮುದ್ವಿಗ್ನಮಲಂ ತಥಾ ।
ಪ್ರಾಹಾಪ್ರಾಪ್ತಮಹಾಜ್ಞಾನಂ ಸುಹೃತ್ಸುಹೃದಮಾದರಾತ್ ॥ ೮ ॥

ಭಾಸ ಉವಾಚ :—

ಸಾಧೋ ಸ್ವಾಗತತಾದ್ಯೈವ ದಿಷ್ಟ್ಯಾ ದೃಷ್ಟೋಽಸಿ ಮಾನದ ।
ಕುಶಲಂ ತು ಕುತೋಽಸ್ಮಾಕಂ ಸಂಸಾರೇ ತಿಷ್ಠತಾಮಿಹ ॥ ೯ ॥

---

೭. ನಿನ್ನ ಬುದ್ಧಿಯು ಈಗ ಶೋಕ ಸಂತಾಪಗಳಿಂದ ವಿಮುಕ್ತವಾಗಿರುವುದೇನು? ನೀನು ಸ್ವಾತ್ಮ ತತ್ತ್ವಜ್ಞಾನ ಬಲದಿಂದ ಸ್ವಾತ್ಮ ವಿಸ್ಮೃತಿಗೆ ಕಾರಣವಾಗಿದ್ದ ಅಜ್ಞಾನಾವರಣವನ್ನು ನಾಶಪಡಿಸಿಕೊಂಡು ಆತ್ಮ ಲಾಭದಿಂದ ಕೃತ ಕೃತ್ಯನಾಗಿರುವೆಯಾ? ಹೀಗೆ ನೀನು ಪ್ರಯತ್ನಪಟ್ಟು ಸಂಪಾದಿಸಿದ ಆಧ್ಯಾತ್ಮಿಕ ವಿದ್ಯೆಯು ಸಫಲವಾಯಿತೇನು ? ಮತ್ತು ನೀನು ಕ್ಷೇಮದಿಂದಿರುವೆಯಾ ?

ಶ್ರೀ ವಸಿಷ್ಠರು ಹೇಳಿದರು :—

೮. ಅಯ್ಯ ರಾಮ, ಈ ರೀತಿಯಾಗಿ ಪ್ರಶ್ನೆ ಮಾಡುತ್ತಿರುವ ಸಾಂಸಾರಿಕ ನಾನಾ ಕ್ಲೇಶಗಳಿಂದ ಕಳವಳಗೊಂಡಿರುವ ಮತ್ತು ಆಗಲೂ ಕೂಡ ನಿರತಿಶಯಾನಂದ ರೂಪ ಪರಮ ಪುರುಷಾರ್ಥ ಸಾಧನವಾದ ಆತ್ಮ ಜ್ಞಾನವನ್ನು ಪಡೆಯದೆ ಅಜ್ಞಾನಾವೃತನಾಗಿಯೇ ಇರುವ ತನ್ನ ಸ್ನೇಹಿತನಾದ ವಿಲಾಸನನ್ನು ನೋಡಿ ಬಹು ಕನಿಕರದಿಂದ ಸ್ನೇಹಿತನಾದ ಭಾಸನು ಸ್ಪಷ್ಟವಾಗಿಯೇ ವಕ್ಷ್ಯಮಾಣ ಕ್ರಮದಿಂದ ಉತ್ತರಕೊಟ್ಟನು.

ಭಾಸನು ಹೇಳಿದನು :—

೯. ಅಯ್ಯ ಸಾಧುವೇ, ಅಯ್ಯ ಮಿತ್ರನೇ, ನನ್ನ ಅದೃಷ್ಟವಶದಿಂದ (ಪೂರ್ವ ಪುಣ್ಯಪರಿಪಾಕದಿಂದ) ಪರಮಾಪ್ತಸ್ನೇಹಿತನಾದ ನಿನ್ನನ್ನು ಈಗಲೇ ಇಲ್ಲಿಯೇ ಕಂಡು, ನಾನು ಪ್ರಮೋದಭರಿತನಾಗಿರುವೆನು. ನೀನು ಕೋರಿದ್ದಂತೆಯೇ ನನಗೆ ಸ್ವಾಗತವು ಸರಿ. ಅದು ಹಾಗಿರಲಿ. ಆದರೆ ಈ ಸಂಸಾರದಲ್ಲಿಯೇ ನಾನಾ ವ್ಯವಹಾರಗಳಲ್ಲಿ ಸರ್ವದಾ ವ್ಯಾಪೃತರಾಗಿ ತೊಳಲುತ್ತಿರುವವರಾದ ನಮಗೆ ಕುಶಲವು (ಕ್ಷೇಮವು) ಎಲ್ಲಿಯದು ? ಯಾವುದರಿಂದ ಲಭಿಸುವುದು ?

ಯಾವನ್ನಾಧಿಗತಂ ಜ್ಞೇಯಂ ಯಾವತ್ಕ್ಷೀಣಾ ನ ಚಿತ್ತಭೂಃ ।
ಯಾವತ್ತೀರ್ಣೋ ನ ಸಂಸಾರಸ್ತಾವನ್ಮೇ ಕುಶಲಂ ಕುತಃ ॥ ೧೦ ॥

ಆಶಾ ಯಾವದಶೇಷೇಣ ನ ಲೂನಾಶ್ಚಿತ್ತಸಂಭವಾಃ ।
ವೀರುಧೋ ದಾತ್ರಕೇಣೇವ ತಾವನ್ನಃ ಕುಶಲಂ ಕುತಃ ॥ ೧೧ ॥

ಯಾವನ್ನಾಧಿಗತಂ ಜ್ಞಾನಂ ಯಾವನ್ನ ಸಮತೋದಿತಾ ।
ಯಾವನ್ನಾಭ್ಯುದಿತೋ ಬೋಧಸ್ತಾವನ್ನಃ ಕುಶಲಂ ಕುತಃ ॥ ೧೨ ॥

---

೧೦. ಎಲ್ಲಿಯವರೆಗೆ ನಾನು ಅತ್ಯವಶ್ಯವಾಗಿ ಅರಿಯತಕ್ಕದ್ದಾಗಿರುವ (ಜ್ಞೇಯ)ಆತ್ಮತತ್ತ್ವವನ್ನು ತಿಳಿಯಲಿಲ್ಲವೋ, ಎಲ್ಲಿಯವರೆಗೆ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ತಾವಾಗಿಯೇ ಸರ್ವದಾ ಉದ್ಭವಿಸತಕ್ಕ ಕಾಮ ಸಂಕಲ್ಪಾದಿ ಅವಿದ್ಯಕ ವಿಕಾರಗಳು ಕ್ಷೀಣವಾಗಿ ಹೋಗಲಿಲ್ಲವೋ ಮತ್ತೂ ಎಲ್ಲಿಯವರೆಗೆ ಅಪಾರವಾದ ಸಂಸಾರಸಾಗರದಿಂದ ಉತ್ತೀರ್ಣನಾಗಲಿಲ್ಲವೋ, ಅಲ್ಲಿಯವರೆವಿಗೂ ನನಗೆ ಕುಶಲವು ಎಲ್ಲಿರುವುದು ?

೧೧. ಎಲ್ಲಿಯವರೆಗೆ ನಾನು ಮನಸ್ಸಿನಲ್ಲಿ ಸಂಭವಿಸುವ ಸಮಸ್ತವಾದ ಭೋಗಾಭಿಲಾಷೆಗಳನ್ನು ನಿಃಶೇಷವಾಗಿ ಕತ್ತಿಯಿಂದ (ಚೂರಿಯಿಂದ) ಲತಾಪಾಶಗಳನ್ನು ಕತ್ತರಿಸುವಂತೆಯೇ, ವೈರಾಗ್ಯಬಲದಿಂದ ಕತ್ತರಿಸಿ ಹಾಕಲಿಲ್ಲವೋ ಅದುವರೆವಿಗೆ ನನಗೆ ಕುಶಲವು ಎಲ್ಲಿಂದ ಹೇಗೆ ಉಂಟಾಗುವುದು ?

೧೨. ಎಲ್ಲಿಯವರೆಗೆ ನಾವು ತತ್ತ್ವಜ್ಞಾನವನ್ನು ಸಂಪಾದಿಸಲಿಲ್ಲವೋ, ಎಲ್ಲಿಯವರೆಗೆ ನಮ್ಮ ಬುದ್ಧಿಯಲ್ಲಿ ಸರ್ವಸಮತ್ವವು (ವೈಷಮ್ಯ ರಹಿತವಾದ ಅಭೇದ ಜ್ಞಾನವು) ಉದಯಿಸಲಿಲ್ಲವೋ ಮತ್ತು ಎಲ್ಲಿಯವರೆಗೆ ಸ್ವಾತ್ಮವಿಷಯಕ ಪರಮಾರ್ಥ ಜ್ಞಾನವೆಂಬ ಸೂರ್ಯನು ಉದಯಿಸಿ ಅಜ್ಞಾನಾಂಧಕಾರವನ್ನು ನಿರ್ಮೂಲವಾಗಿ ತೊಲಗಿಸಲಿಲ್ಲವೋ, ಅದುವರೆವಿಗೆ ನಮಗೆ ಸುಖವೆಲ್ಲಿಯದು ?

ಆತ್ಮಲಾಭಂ ವಿನಾ ಸಾಧೋ ವಿನಾ ಜ್ಞಾನಮಹೌಷಧಂ ।
ಉದೇತಿ ಪುನರೇವೇಯಂ ದುಃಸಂಸೃತಿವಿಷೂಚಿಕಾ ॥ ೧೩ ॥

ಶೈಶವಾಂಕುರಿತೋಜ್ಜೃಂಭಾನ್ನವಯೌವನಪಲ್ಲವಃ ।
ಜರಾಕುಸುಮಿತೋಽಭ್ಯೇತಿ ಪುನಃ ಸಂಸಾರದುರ್ದ್ರುಮಃ ॥ ೧೪ ॥

---

೧೩. ಅಯ್ಯ ಸಾಧುವೇ, ಸಂತತವಾದ ಸ್ವಪ್ರಯತ್ನದಿಂದ, ನಿಷ್ಕಾಮ ಕರ್ಮಾನುಷ್ಠಾನ, ವಿವೇಕ ವೈರಾಗ್ಯಾಭ್ಯಾಸ, ಸಚ್ಛಾಸ್ತ್ರ ವಿಚಾರಾದಿ ಉಪಾಯಗಳ ಮೂಲಕ, ಸ್ವಾತ್ಮಜ್ಞಾನನಿಷ್ಠೆಯೆಂಬ ದಿವ್ಯ ಸಿದ್ಧೌಷಧವನ್ನು ಸಂಪಾದಿಸಿ, ಸೇವನೆ ಮಾಡಿದ ಹೊರತು, ನಿರುಪದ್ರವ ಆನಂದೈಕರಸರೂಪ ಆತ್ಮಲಾಭವೆಂಬ ಆರೋಗ್ಯವು ಸಿದ್ಧಿಸುವುದಿಲ್ಲ. ಇಂತಹ ಆತ್ಮಲಾಭವೆಂಬ ಸಾರ್ವಕಾಲಿಕ ನೀರೋಗ ಸ್ಥಿತಿಯು ಸಿದ್ಧಿಸದಿದ್ದರೆ, ಈ ಹಾಳು ಸಂಸಾರವೆಂಬ ಕೆಟ್ಟ ವಿಸೂಚಿಕಾವ್ಯಾಧಿಯು, ಮತ್ತೆ ಮತ್ತೆ ತಲೆದೋರುತ್ತ ಕಾಡುತ್ತಲೇ ಇರುವುದು.

೧೪. ಪ್ರಾಣಿಗಳು ಮಾತೃಗರ್ಭದಿಂದ ಜನಿಸುವಾಗ ಆ ದೇಹಗಳೊಡನೆಯೇ ಈ ಸಂಸಾರವು ಮೊಳೆಯುವುದು. (ಅಂಕುರಿಸುವುದು) ಪ್ರಾಣಿದೇಹವು ಶೈಶವದಲ್ಲಿ ಕಳೆಯೇರಿ ವೃದ್ಧಿ ಹೊಂದುವಂತೆ, ಅದೂ ಅಂದರೆ ಮೊಳಕೆಯ ರೂಪದಲ್ಲಿದ್ದ ಸಂಸಾರವೂ ಕಳೆಗೊಂಡು ಉಜ್ಜೃಂಭಿಸುವುದು. ಅದು ಕಳೆದ ಬಳಿಕ ಆಗ ತಾನೇ ಆವಿರ್ಭವಿಸುತ್ತಲಿರುವ ನವಯೌವನವೆಂಬ ಪಲ್ಲವಗಳನ್ನು ಧರಿಸುವುದು. ಇನ್ನೂ ವಯಸ್ಸು ಕಳೆದ ತರುವಾಯ ವಾರ್ಧಕವೆಂಬ (ಪಲಿತ) ಹೂವುಗಳನ್ನು ವಿಶೇಷವಾಗಿ ಬಿಡುವುದು. ಕೊನೆಯಲ್ಲಿ ಈ ಸಂಸಾರವೆಂಬ ಕೆಟ್ಟ ವಿಷವೃಕ್ಷವು, ಹೀಗೆ ಕ್ರಮೇಣ ದೊಡ್ಡದಾಗುತ್ತಾ ಬಂದು, ರೂಢಮೂಲವಾಗಿ, ಬಹು ವಿಸ್ತಾರವಾಗಿ ಹರಡಿಕೊಂಡು, ಸರ್ವದಾ ಶೋಕಮೋಹಾದಿ ವಿಷಫಲಗಳನ್ನು ಕೊಟ್ಟು, ಸರ್ವಾನರ್ಥನಿದಾನವಾಗಿ ಪರಿಣಮಿಸುವುದು. ಇದನ್ನು ತತ್ತ್ವಜ್ಞಾನನಿಷ್ಠೆಯೆಂಬ ದೃಢವಾದ ಕುಡುಗೋಲಿನಿಂದ, ಇದರ ಮೂಲ (ಬೇರು) ವಾದ ಅಜ್ಞಾನ ದೊಂದಿಗೆ ಬೇರು ಸಹಿತ ಸಂಪೂರ್ಣವಾಗಿ ಕತ್ತರಿಸದೆ ಹೋದರೆ, ಅದು ಪುನಃ ಪುನಃ ಎಂದೆಂದಿಗೂ ತಪ್ಪದೆ ನಮ್ಮನ್ನು ಮುತ್ತಿಗೆ ಹಾಕುತ್ತಲೇ ಇರುವುದು.

ಕಾಯಜೀರ್ಣತರೋರಸ್ಮಾದ್ಬಾಂಧವಾಕ್ರಂದಷಟ್ಪದಾ ।
ಜರಾಕುಸುಮಿತೋದೇತಿ ಪುನರ್ಮರಣಮಂಜರೀ ॥ ೧೫ ॥

ಭುಕ್ತಕರ್ಮರ್ತುವಿರಸಾ ಪುರಾಣದಿವಸೋಂಭಿತಾ ।
ನೀಯತೇ ನೀರಸಪ್ರಾಯಾ ಪುನಃ ಸಂವತ್ಸರಾವಲೀ ॥ ೧೬ ॥

---

೧೫ ನಾನಾ ಸಾಂಸಾರಿಕ ಕ್ಲೇಶಗಳಿಂದ ಕುಗ್ಗಿ ಜೀರ್ಣವಾದ ಈ ಹಾಳು ದೇಹವು ಒಂದು ಮುದಿಮರದಂತೆ ಇರುವುದು. ಈ ದೇಹವೃಕ್ಷವನ್ನು ಪುನರ್ಮರಣ ಪರಂಪರೆಯೆಂಬ (ಅನೇಕ ಸಲ ಪದೇ ಪದೇ ಒಂದೊಂದು ಜನ್ಮವೆತ್ತಿದಾಗಲೂ ಒಂದೊಂದು ಸಲ ಮರಣ. ಹೀಗೆ ಅನೇಕ ಜನ್ಮಗಳೂ ಅನೇಕ ಮರಣಗಳೂ) ಲತಾಮಂಜರಿಯು ಆವರಿಸಿಕೊಂಡು ಹಬ್ಬಿರುವುದು. ಇದರಲ್ಲಿ ಜರೆಯೆಂಬ ಹೂವುಗಳು ಬಹಳವಾಗಿ ಬಿಟ್ಟಿರುವುವು ಆ ಹೂವುಗಳೊಳಗೆ ಪತ್ನೀ ಪುತ್ರಾದಿ ಸಕಲ ಬಂಧುಜನಗಳೆಂಬ ಭ್ರಮರಗಳು ನೆರೆದು, ಆರ್ತನಾದವೆಂಬ ಝಂಕಾರವನ್ನು ಮಾಡುತ್ತಾ ಹಾರಾಡುತ್ತಿರುವುವು.

೧೬. ಮತ್ತು ಮರಣಾನಂತರವೂ ಕೂಡ ನಾವು ಮಾಡಿದ ದುಷ್ಕರ್ಮ ಫಲವಾಗಿ ನರಕ ವಾಸವೋ ಅಥವಾ ತರು ಪಾಷಾಣಾದಿ ಸ್ಥಾವರ ಜನ್ಮಗಳೋ ಅಥವಾ ಪಶುಪಕ್ಷ್ಯಾದಿ ತಿರ್ಯಗ್ಜನ್ಮಗಳೋ ಪ್ರಾಪ್ತವಾಗಲಾಗಿ ಆ ಜನ್ಮಗಳಲ್ಲಿ ದುಷ್ಕರ್ಮ ಫಲಗಳನ್ನು ಅನುಭವಿಸುತ್ತಾ ವಸಂತಾದಿ ಋತುಗಳನ್ನು ಹೆಚ್ಚಾದ (ಸಹಿಸಲಶಕ್ಯವಾದ) ಸೆಕೆ, ಗಾಳಿ, ಮಳೆ, ಹಿಮ, ನೊಣ, ಸೊಳ್ಳೆಗಳ ಕಡಿತ ಇತ್ಯಾದಿ ನಾನಾ ಕ್ಲೇಶಗಳೊಡನೆ ನಿರಾನಂದವಾಗಿ (ವಿರಸವಾಗಿ) ಕಳೆಯುವೆವು. ಅಥವಾ ಪೂರ್ವಜನ್ಮ ಸಂಚಿತವಾದ ಸುಕೃತಗಳ ಫಲವಾಗಿ ಸ್ವರ್ಗಾದಿ ದಿವ್ಯ ಲೋಕಗಳಲ್ಲಿ ದೇಹಧಾರಣೆ ಮಾಡಿದರೂ ಕೂಡ, ಅಲ್ಲಿ ಪುನಃ ಪುಣ್ಯಸಂಚಯ ಮಾಡುವುದಕ್ಕೆ ಅಧಿಕಾರವಿಲ್ಲದಿರುವುದರಿಂದಲೂ, ಪೂರ್ವ ಸಂಚಿತ ಪುಣ್ಯಗಳನ್ನು ಫಲಾನುಭವದಿಂದ ವ್ಯಯಮಾಡಬೇಕಾಗಿರುವುದರಿಂದಲೂ, ಹರ್ಷ, ಕ್ರೋಧ, ಅಸೂಯೆ, ಕಾಮ, ಲೋಭ ಮುಂತಾದ ದೋಷಾಧಿಕ್ಯದಿಂದಲೂ ಕೂಡ ಶಮದಮಾದಿ ಸಾಧನ ಸಂಪತ್ತಿಗೂ ಆಸ್ಪದವಿಲ್ಲದ ಕಾರಣ, ತತ್ತ್ವಜ್ಞಾನವೂ ದುರ್ಲಭವಾಗಿ, ಕೇವಲ ಭೋಗೈಕಲಾಂಪಟ್ಯದಿಂದ ಕೂಡಿ, ಹಿಂದೆ ಎಷ್ಟೋ ವೇಳೆ ಅನುಭವಿಸಿಯೂ, ಹೊಸದಾದ ವಿಷಯ ಸುಖಾನುಭವವಿಲ್ಲದೆಯೂ ಅತ್ಯಂತ ಪುರಾತನ ಪ್ರಾಯಗಳಾದ ದಿವಸಗಳ ಸಮೂಹಗಳಿಂದ ಪೂರ್ಣವಾದ ಮತ್ತು ಅತ್ಯಂತ ನೀರಸಗಳಾದ

ಮಹಾದರೀಷು ದೇಹಾದ್ರೇಸ್ತೃಷ್ಣಾಕಂಟಕಿತಾಸ್ವಪಿ ।
ಫಲವ್ಯಾಲಾಸು ಚ ಪುನಃ ಕ್ರಿಯಾಸು ಪರಿಲುಠ್ಯತೇ ॥ ೧೭ ॥

ದುಃಖೈಃ ಸುಖಲವಾಕಾರೈರ್ದೀರ್ಘಾದೀರ್ಘೈಃ ಶುಭಾಶುಭೈಃ ।
ಅಪರ್ಯಪ್ತಾಗಮಾಪಾಯಾಃ ಪ್ರಯಾತ್ಯಾಯಾಂತಿ ರಾತ್ರಯಃ ॥ ೧೮ ॥

ಅನೇಕಾನೇಕ ಸಂವತ್ಸರ ಸಮುದಾಯಗಳನ್ನು ಮತ್ತೆ ಮತ್ತೆ ವ್ಯರ್ಥವಾಗಿಯೇ ಕಳೆಯುವೆವು.

೧೭. ಈ ದೇಹವೆಂಬುದೇ ಒಂದು ದೊಡ್ಡ ಬೆಟ್ಟ. ಇದರಲ್ಲಿ ಕರ್ಮಗಳೆಂಬ ಅತಿ ಭಯಂಕರವಾದ ದೊಡ್ಡ ಗುಹೆಗಳಿರುವುವು. ಇವುಗಳಲ್ಲಿ ನಾನಾ ಭೋಗಾಭಿಲಾಷೆಗಳೆಂಬ ಮುಳ್ಳುಗಳು ವಿಶೇಷವಾಗಿ ಬೆಳೆದಿರುವುವು. ಕರ್ಮಫಲ ರೂಪ ವಿಷಯೋಪಭೋಗಗಳೆಂಬ ಘಟ ಸರ್ಪಗಳು ವಾಸಮಾಡಿಕೊಂಡಿವೆ. ಇಂತಹ ಕರ್ಮಗಳೆಂಬ ಗುಹೆಗಳೊಳಗೆ ಸಿಕ್ಕಿಕೊಂಡು ಅಜ್ಞರಾದ ನರ ಪಶುಗಳು ಅವುಗಳಿಂದ ತಪ್ಪಿಸಿಕೊಂಡು ಹೊರಕ್ಕೆ ಬರುವ ಉಪಾಯವನ್ನು ಕಾಣದೆ ಅವುಗಳಲ್ಲಿಯೇ ಪುನಃ ಪುನಃ ಹೊರಳಾಡುತ್ತಿರುವುವು. [ಪೂರ್ವ ಶ್ಲೋಕದಲ್ಲಿ ವರ್ಣಿಸಿದಂತೆ ಮರಣಾನಂತರ ಪರಲೋಕಗಳಲ್ಲಿ ಕರ್ಮಫಲಾನುಭವ ಮಾಡಿ ಮುಗಿದ ಬಳಿಕ, ಪುನಃ ಈ ಲೋಕದಲ್ಲಿ ಮನುಷ್ಯ ಜನ್ಮವು ಸಿಗುವುದೇ ದುರ್ಲಭ. ಅದರಲ್ಲಿಯೂ ಬ್ರಾಹ್ಮಣ ಜನ್ಮವೂ, ತತ್ರಾಪಿ ಪುಂಜನ್ಮವೂ ದುರ್ಲಭತಮ. ಒಂದು ವೇಳೆ ಬ್ರಾಹ್ಮಣ್ಯವೂ, ಪುಂಜನ್ಮವೂ, ಅದೃಷ್ಟವಶದಿಂದ ದೊರೆತರೂ, ಈ ದೇಹದಲ್ಲಿ ಸರ್ವದಾ ಸಾಧಾರಣವಾಗಿ ಜನಗಳು ಭೋಗಲಂಪಟರಾಗಿ ಐಹಿಕಾಮುಷ್ಮಿಕ ಭೋಗಸಾಧನಗಳಾದ ವಿವಿಧ ಲೌಕಿಕ ವೈದಿಕ ಕರ್ಮಗಳಲ್ಲಿ ಪರಿಭ್ರಮಿಸುತ್ತಲಿರುವರೇ ಹೊರತು, ಆತ್ಮಜ್ಞಾನ ಸಂಪಾದನೆಗಾಗಿ ಪ್ರಯತ್ನಮಾಡಬೇಕೆಂಬ ಸಂಕಲ್ಪವುಳ್ಳವರಾಗಿಯೂ ಇರುವುದಿಲ್ಲ ಎಂದು ಭಾವ].

೧೮. ಈ ಹಾಳು ಸಂಸಾರದಲ್ಲಿ ಸರ್ವರೂ ಅನುಭವಿಸುತ್ತಲಿರುವ ಕ್ಷಣಭಂಗುರಗಳೂ, ತುಚ್ಛಗಳೂ ಆಗಿರುವ ಅಲ್ಪ ಸುಖಾಭಾಸಗಳೆಲ್ಲವೂ ವಾಸ್ತವವಾಗಿ ನೋಡಿದರೆ ದುಃಖಗಳೇ ಆಗಿರುವುವು. ಇವು ಒಂದೊಂದು ಸಮಯದಲ್ಲಿ ಅತಿ ದೀರ್ಘವಾಗಿಯೂ, ಶುಭಕರಗಳಾಗಿಯೂ ಮತ್ತೊಂದು ಸಮಯದಲ್ಲಿ ಹ್ರಸ್ವ

ಅಯಥಾರ್ಥಕ್ರಿಯಾರಂಭೈಃ ಕದಾಶಾವೇಶಪಲ್ಲವೈಃ ।
ಕ್ಷೀಯತೇ ಕರ್ಮಭಿಸ್ತುಚ್ಛೈರಾಯುರಾಹತಕರ್ಮಭಿಃ ॥ ೧೯ ॥

ಉನ್ಮೂಲಿತಾಶ್ರಯಾಲಾನೋ ಮನೋಮತ್ತಮತಂಗಜಃ ।
ತೃಷ್ಣಾಕರೇಣಿಕೋನ್ನಿದ್ರೋ ದೂರಂ ವಿಪರಿಧಾವತಿ ॥ ೨೦ ॥

ಜಿಹ್ವಾಚಪಲತಾಲಗ್ನಃ ಕಾಯದ್ರುಮಮಹಾಲಯೇ ।
ಪತಚ್ಚಿಂತಾಮಣೌ ವೃದ್ಧೋ ಗರ್ಧಗೃಧ್ರೋ ವಿವರ್ಧತೇ ॥ ೨೧ ॥

ಗಳಾಗಿಯೂ, ಅಶುಭಗಳಾಗಿಯೂ ತೋರುವುವು. ಇಂತಹ ದುಃಖ ಪರಂಪರೆಗಳಿಂದ ನಿಬಿಡವಾಗಿ ಮಧ್ಯಮಧ್ಯದಲ್ಲಿ ಪರಿಸಮಾಪ್ತಿಯೇ ಇಲ್ಲದಂಥ ಲಾಭ ನಷ್ಟಗಳಿಂದ ಪ್ರಚುರುಗಳಾದ ಎಷ್ಟೋ ಲೆಖ್ಖವಿಲ್ಲದಷ್ಟು ದಿವಸಗಳು ಸಕಲ ಜನ್ಮಗಳಲ್ಲಿಯೂ ಮತ್ತೆ ಮತ್ತೆ ಬಂದು ಹೋಗುತ್ತಿರುವುವು.

೧೯. ಸ್ವಪ್ನಕಾಲಿಕವಾದ ವ್ಯವಹಾರಗಳಂತೆ ಅತ್ಯಂತ ಅಸತ್ಯಗಳೂ, ಅಕಿಂಚಿತ್ಕರಗಳೂ ಆದ ವ್ಯವಹಾರಗಳಲ್ಲಿ ನಿರತರಾಗಿರುವ ನರಪಶುಗಳು ತಮ್ಮ ತಮ್ಮ ಕ್ರಿಯೆಗಳಿಂದ ನಿಷ್ಪನ್ನವಾಗುವ ಮಿಥ್ಯಾಭೂತವಾದ ಫಲಗಳಲ್ಲಿ ಆಸಕ್ತರಾಗಿಯೂ, ದುರಾಶಾವಿಷ್ಟರಾಗಿಯೂ ಅತ್ಯಂತ ತುಚ್ಛವಾದ ಕರ್ಮಗಳನ್ನೇ ಸರ್ವದಾ ಆಚರಿಸುತ್ತಾ, ವ್ಯರ್ಥವಾಗಿಯೇ ತಮ್ಮ ಆಯುಸ್ಸನ್ನು ನಾಶಗೊಳಿಸುತ್ತಲಿರುವರು.

೨೦. ಮನಸ್ಸೆಂಬ ಮದಿಸಿದ ಆನೆಯು ತನಗೆ ಆಶ್ರಯವಾದ ಪರಮಾತ್ಮನೊಂದಿಗೆ ತನ್ನನ್ನು ಸೇರಿಸಿ ಬಂಧಿಸಿರುವ ಸದಸದ್ವಿವೇಕವೆಂಬ ಗೂಟವನ್ನು ತನ್ನ ಅಹಂಕಾರ ಬಲದಿಂದಲೇ ಕಿತ್ತುಹಾಕಿ ಶಬ್ದಾದಿ ವಿಷಯಗಳಲ್ಲಿರುವ ತೃಷ್ಣೆಯೆಂಬ ಹೆಣ್ಣಾನೆಯಲ್ಲಿಟ್ಟಿರುವ ಕಾಮದಿಂದ ಉದ್ದೀಪಿತವಾಗಿ ಹುಚ್ಚೆದ್ದು ವಿಷಯಗಳನ್ನು ಅರಸುತ್ತಾ ತನ್ನ ಸ್ಥಳಬಿಟ್ಟು ಎಲ್ಲಿಯೋ ಬಹುದೂರದಲ್ಲಿ ಓಡಿಹೋಗುತ್ತಿರುವುದು.

೨೧. ಮೃಷ್ಟಾನ್ನಾದಿಗಳಲ್ಲಿ ಪ್ರಾಣಿ ಸಾಮಾನ್ಯಕ್ಕೆ ಸಾಧಾರಣವಾಗಿರುವ ಅಭಿಲಾಷೆಯೆಂಬುದೆ ಒಂದು ಮುದಿಹದ್ದು. ಇದು ಜಿಹ್ವಾಚಾಪಲ್ಯದಿಂದ ಈ ಭೌತಿಕ ದೇಹವೆಂಬ ದೊಡ್ಡ ಮರದಲ್ಲಿ ಹೃದಯವೆಂಬ ವಿಶಾಲವಾದ ಗೂಡನ್ನು ಕಟ್ಟಿ ಅದರಲ್ಲಿ ಸೇರಿಕೊಂಡಿರುವುದು. ಪರಮ ಪುರುಷಾರ್ಥೋಪಯೋಗಿಯಾದ ಆಯುಸು

ನೀರಸಾ ನಿಃಸುಖಾ ಲಘ್ವೀ ಪತತ್ಪೇಲವಗಾತ್ರಿಕಾ ।
ಜೀರ್ಣಪರ್ಣಸವರ್ಣೇಯಂ ಕ್ಷೀಯತೇ ದಿವಸಾವಲೀ ॥ ೨೨ ॥

ಅವಮಾನರಜೋಧ್ವಸ್ತಮಸ್ತಂಗತವಪುಃ ಶ್ರಿಯಂ ।
ಮುಖಂ ಧೂಸರತಾಮೇತಿ ಹಿಮೈಃ ಪದ್ಮಮಿವಾಹತಂ ॥ ೨೩ ॥

ಶುಷ್ಯತಃ ಕಾಯಸರಸಃ ಪ್ರಗಲದ್ಯೌವನಾಂಭಸಃ ।
ರಾಜಹಂಸಃ ಕ್ಷಣಾದಾಯುರನಿವರ್ತಿ ಪಲಾಯತೇ ॥ ೨೪ ॥

ಮತ್ತು ವಿವೇಕಗಳೆಂಬ ಚಿಂತಾಮಣಿಗಳು (ಕೇಳಿದ್ದನ್ನು ತಂದು ಕೊಡುವ ದಿವ್ಯ ರತ್ನ) ಈ ಮರದ ದೆಸೆಯಿಂದ ವ್ಯರ್ಥವಾಗಿ ಬಿದ್ದು ಹೋಗುತ್ತಿರುವುವು.

೨೨. ಅತ್ಯಂತಿಕ ನಿಸ್ಸಾರವಾಗಿಯೂ ಸುಖಲೇಶವೂ ಇಲ್ಲದುದಾಗಿಯೂ ಬಹಳ ಹ್ರಸ್ವವಾಗಿಯೂ ಆಯಾಸ ನಿಶ್ಶಕ್ತಿ ರೋಗಾದಿಗಳಿಂದ ಕೆಲಸ ಮಾಡುವ ಸಾಮರ್ಥ್ಯವಿಲ್ಲದೆ ಬಿದ್ದು ಹೋಗುವ ಅವಯವಗಳುಳ್ಳದ್ದಾಗಿಯೂ ಕೆಲವು ದಿನಗಳ ಕಾಲಮಾತ್ರ ಜೀವಿಸಿಕೊಂಡಿರುವುದಾಗಿಯೂ ಇರುವ ದೇಹವೆಂಬ ಲತೆಯು ಹಣ್ಣೆಲೆಗೆ ಸದೃಶವಾದ ಬಣ್ಣದಿಂದೊಡಗೂಡಿ ಕ್ರಮೇಣ ಕೃಶವಾಗುತ್ತಾ ಬಂದು ಕೊನೆಗೆ ನಾಶವಾಗುವುದು.

೨೩. ವಾರ್ಧಕ್ಯದಲ್ಲಿ ಪುತ್ರಾದಿಗಳು ಎಲ್ಲರೂ ತನಗೆ ಮಾಡುವ ಅವಮಾನಗಳೆಂಬ ಮಣ್ಣಿನ ಧೂಳಿಗಳಿಂದ ಮಲಿನವಾಗಿಯೂ ತನ್ನ ದೇಹ ಕಾಂತಿಯನ್ನೂ ಕಳೆದುಕೊಂಡುದಾಗಿಯೂ ಇರುವ ಪ್ರಾಣಿಗಳ ಮುಖವು ಮಂಜು ಸುರಿಯುವುದರಿಂದ ಕಂಗೆಟ್ಟ ಕಮಲದಂತೆ ತೇಜೋಹೀನವಾಗುವುದು.

೨೪. ಈ ದೇಹವೆಂಬ ಸರೋವರದಲ್ಲಿರುವ ಯೌವನವೆಂಬ ಜಲವು ಸಾಂಸಾರಿಕ ಶೋಕ ಸಂತಾಪಗಳೆಂಬ ಸೂರ್ಯಾತಪದಿಂದ ಕ್ರಮೇಣ ಇಂಗಿ ಹೋಗಿ ಕೊನೆಗೆ ಪೂರ್ತಿಯಾಗಿ ಬತ್ತಿ ಹೋಗುವುದು. ಆಗ ಇದರಲ್ಲಿ ವಾಸವಾಗಿರುವ ಆಯುಸ್ಸೆಂಬ ರಾಜ ಹಂಸವು ಈ ಶುಷ್ಕ ಸರಸ್ಸನ್ನು ಬಿಟ್ಟು ಕ್ಷಣದೊಳಗಾಗಿ ಹಿಂದಿರುಗಿ ನೋಡದೆಯೇ ಓಡಿಹೋಗಿ ಬಿಡುವುದು.

ಕಾಲಾನಿಲಬಲೋದ್ಧೂತಾಜ್ಜರ್ಜರಾತ್ ಜೀವಿತದ್ರುಮಾತ್ ।
ಭೋಗಪುಷ್ಪಾಣಿ ದಿವಸಪರ್ಣಾನಿ ನಿಪತಂತ್ಯಧಃ ॥ ೨೫ ॥

ಭೋಗಭೋಗಿಶ್ರಿತೇಷ್ವಂತಃದುಃಖದರ್ದುರಧಾರಿಷು ।
ಮನೋ ಮೋಹಾಂಧಕೂಪೇಷು ಪೂರೇಷು ವಿನಿಮಜ್ಜತಿ ॥ ೨೬ ॥

ನಾನಾನುರಂಜನಾಸ್ಪೃಷ್ಟಾ ತೃಷ್ಣಾತರಲಪೇಲವಾ ।
ಚೈತ್ಯಮುಗ್ರಪತಾಕೇವ ದೂರಂ ಸಮಧಿರೋಹತಿ ॥ ೨೭ ॥

---

೨೫. ಪ್ರಾಣಿಗಳ ಜೀವಿತವೆಂಬುದು ಒಂದು ದೊಡ್ಡ ಮುದಿ ಮರ. ಅದನ್ನು ಒಂದಾನೊಂದು ದಿವಸ ಕಾಲನೆಂಬ ಬಿರುಗಾಳಿಯು ಬಹಳ ಜೋರಾಗಿ ಅಲ್ಲಾಡಿಸಿ ಬಿಡುವುದು. ಆಗ ಅದರ ದೆಸೆಯಿಂದ ವಿಷಯೋಪ ಭೋಗಗಳೆಂಬ ಪುಷ್ಪಗಳೂ ದಿವಸಗಳೆಂಬ ಎಲೆಗಳೂ ಕೆಳಗೆ ಉದುರಿ ಬೀಳುವುವು. ಅವುಗಳನ್ನೂ ಬಿಡದೆ ಮತ್ತೆ ಕಾಲನೆಂಬ ವಾಯುವು ಹಾರಿಸಿಕೊಂಡು ಹೋಗುವುದು.

೨೬. ನಾನಾ ವಿಧಗಳಾದ ಭ್ರಾಂತಿಗಳೆಂಬುದೇ ಕತ್ತಲೆ ಕವಿದಿರುವ ಬಹಳ ಆಳವಾದ ಪಾಳುಭಾವಿಗಳು. ಇವುಗಳಲ್ಲಿ ಭೋಗಗಳೆಂಬ ಘೋರವಾದ ಹಾವುಗಳೂ ದುಃಖಗಳೆಂಬ ಕಪ್ಪೆಗಳೂ ಒಳಗೆ ಸದಾ ವಾಸಮಾಡಿಕೊಂಡಿರುವುವು. ಇಂತಹ ಮೋಹಾಂಧಕೂಪಗಳಲ್ಲಿ ಮನಸ್ಸು ಪೂರ್ತಿಯಾಗಿ ಮುಳುಗಿ ನಾಶವನ್ನು ಹೊಂದುವುದು. (ಭೋಗಗಳು ನಿವೃತ್ತಿ ಯಾದರೂ ಕೂಡ ಅವಗಳ ಮೇಲಿನ ಆಶೆಯೂ ಭೋಗಾನು ಭವ ಶಕ್ತಿಯು ಕುಗ್ಗಿ ಹೋಯಿತೆಂಬ ದುಃಖವೂ ಅದರಿಂದ ಉಂಟುಗುವ ಚಿಂತಾ ಶೋಕ ಮೋಹಾದಿಗಳೂಕೂಡ ವೃದ್ಧಿ ಹೊಂದುತ್ತಲೇ ಇರುವುವು.)

೨೭. ಅತ್ಯಂತ ಚಪಲವಾಗಿಯೂ ತುಚ್ಛವಾಗಿಯೂ ಇರುವ ತೃಷ್ಣೆಯು ವಿವಿಧ ಅನುರಾಗಗಳಿಂದ ಆವರಿಸಲ್ಪಟ್ಟುದಾಗಿ ದೇವಾಲಯ ಅಥವಾ ಅರಮನೆ ಮುಂತಾದ ಪ್ರಾಸಾದಗಳ ಅಗ್ರ ಭಾಗದಲ್ಲಿ ಕಟ್ಟಿರುವ ಧ್ವಜ ಪಟದಂತೆ ಬಹು ದೂರ ಮೇಲಕ್ಕೆ ಹತ್ತಿ ಹೋಗಿ ಸ್ವಲ್ಪವಾದ ವಿಷಯ ವಾಸನೆಯೆಂಬ ಮಂದಮಾರುತದಿಂದಲೂಕೂಡ ಯಾವಾಗಲೂ ಅಲ್ಲಾಡುತ್ತಿರುವುದು.

ಅಸ್ಯ ಸಂಸಾರತಂತ್ರಸ್ಯ ಬೃಹತ್ಕಾಲಬಿಲಾಸ್ಪದಃ ।
ಜೀವಿತಾಶಾಮಯಂ ತಂತುಮಂತಕಾಖುರ್ನಿಕೃಂತತಿ ॥ ೨೮ ॥

ಯೌವನೋತ್ಕಟಕಲ್ಲೋಲಾ ಮಹಲ್ಲೋಲಾಸಿಫೇನಿಲಾ ।
ಪರಾವರ್ತಮಹಾವರ್ತಾ ಯಾತಿ ಜೀವಿತದುರ್ನದೀ ॥ ೨೯ ॥

ಕಲಾಕುಲಗತ್ಕಾರ್ಯಕಲ್ಲೋಲಾಕುಲಸಂಕುಲಾ ।
ಕ್ರಿಯಾಸರಿದಪರ್ಯಂತಾ ವಹತ್ಯಾಕುಲಕೋಟರಾ ॥ ೩೦ ॥

---

೨೮. ಯಮನೆಂಬ ಮೂಷಕವು ಸರ್ವದಾ ಕಾಲವೆಂಬ ಒಂದು ದೊಡ್ಡ ಬಿಲದೊಳಗೆ ಅಡಗಿಕೊಂಡಿದ್ದು ಸಮಯ ದೊರೆತಾಗಲೆಲ್ಲಾ ಒಂದು ಸಂಸಾರವೆಂಬ ಕೈ ಮಗ್ಗದಲ್ಲಿ ಜೋಡಿಸಿರುವ ಜೀವಿತಾಶಾ ಪ್ರಚುರವಾದ (ಇನ್ನೂ ದೀರ್ಘಕಾಲ ಬದುಕಿರಬೇಕೆಂಬ ಆಶೆ) ಆಯುಸ್ಸೆಂಬ ತಂತುಗಳನ್ನು ಕತ್ತರಿಸಿ ಹಾಕುತ್ತಲೇ ಇರುವುದು.

೨೯. ಪ್ರಾಣಿಗಳ ಜೀವಿತವೆಂಬುದನ್ನು ಒಂದು ಹುಚ್ಚು ಹೊಳೆಯೆಂದು ಭಾವಿಸು. ಇದರಲ್ಲಿ ಯೌವನದ ಏರುಪೇರುಗಳೆಂಬ ದೊಡ್ಡ ದೊಡ್ಡ ಅಲೆಗಳು ಅತ್ಯುನ್ನತವಾಗಿ ಬೀಸುತ್ತಿರುವುವು. ಜೋರಾಗಿ ಬೀಸಲ್ಪಡುತ್ತಿರುವ ಖಡ್ಗ ಧಾರೆಗೆ ಸಮನಾಗಿ ಅತಿ ಭಯಂಕರಗಳಾದ ಕ್ರೋಧ ದ್ವೇಷ ಭಯ ಮುಂತಾದ ವಿಕಾರಗಳೆಂಬ ನೊರೆಯ ರಾಶಿಗಳನ್ನು ಹೊತ್ತುಕೊಂಡಿರುವುದು. ಲೋಭ ತೃಷ್ಣಾದಿಗಳಿಂದ ಪ್ರೇರಿತರಾಗಿ ಜನರು ಎಲ್ಲೆಂದರೆ ಅಲ್ಲಿ ಸರ್ವದಾ ಸುತ್ತಿ ಸುತ್ತಿ ಸುಳಿಯುವಿಕೆಗಳೇ ಈ ನದಿಗಳಲ್ಲಿ ನೀರಿನ ಸುಳಿಗಳಾಗಿರುವುವು. ಇಂತಹ ಜೀವಿತ ನದಿಯು ಅಪಾಯಕರವಾಗಿ ಪ್ರವಹಿಸುತ್ತಿರುವುದು.

೩೦. ಲೋಕದಲ್ಲಿ ಸಕಲ ಜಂತುಗಳ ನಾನಾ ಕಾರ್ಯ ಪ್ರವೃತ್ತಿಯೆಂಬುದೂ ಒಂದು ದೊಡ್ಡ ನದಿಯಂತಿರುವುದು. ಅದರಲ್ಲಿ ಶಿಲ್ಪ ತರ್ಕ, ನೀತಿ ಶಾಸ್ತ್ರ ಮುಂತಾದ ಕಲಾಕೌಶಲಗಳೆಂಬ ಮತ್ತು ಸಕಲ ಪ್ರಾಪಂಚಿಕ ವ್ಯವಹಾರ ಕಾರ್ಯಸಮುದಾಯಗಳೆಂಬ ದೊಡ್ಡ ದೊಡ್ಡ ಅಲೆಗಳು ಅತಿ ಭಯಂಕರಗಳಾಗಿ ಮೇಲಿಂದ ಮೇಲೆ ತಪ್ಪದೆ ಬೀಸುತ್ತಲಿರುವುವು ಇದು ಮಧ್ಯಮಧ್ಯದಲ್ಲಿ ಅಪಾಯಗಳೆಂಬ ತಗ್ಗು ಭೂಮಿಗಳಲ್ಲಿ ಮುಗ್ಗರಿಸುತ್ತಲೂ ಉಪಾಯಗಳೆಂಬ ಸ್ವಲ್ಪ ಉನ್ನತ ಭಾಗಗಳಲ್ಲಿ

ಅನಂತಾ ಬಂಧುಜನತಾನದ್ಯೋ ಗಂಭೀರಕೋಟರೇ ।
ಅಜಸ್ರಂ ನಿಪತಂತ್ಯೇತಾ ವಿತತೇ ಕಾಲಸಾಗರೇ ॥ ೩೧ ॥

ದೇಹರತ್ನಶಲಾಕೇಯಂ ನಾಶಪಂಕಾರ್ಣವೋದರೇ ।
ನ ಜ್ಞಾಯತೇ ಕ್ವ ಮಗ್ನೇತಿ ತಾತ ಜನ್ಮನಿ ಜನ್ಮನಿ ॥ ೩೨ ॥

ಚಿಂತಾಚಕ್ರೇ ಚಿರಂ ಬದ್ಧಂ ಕುಕ್ರಿಯಾಚಾರಚಂಚುರಂ ।
ಚೇತೋ ಭ್ರಮತಿ ಸಾಮುದ್ರೇ ಗರ್ತಾಪರ್ತೇ ತೃಣಂ ಯಥಾ ॥ ೩೩ ॥

ಏರುತ್ತಲೂ ಅತ್ಯಂತ ವ್ಯಗ್ರತೆಯಿಂದ ಕೊನೆಯಿಲ್ಲದೆ ಅವಿಚ್ಛಿನ್ನವಾಗಿ ಪ್ರತಿಯೊಂದು ಜನ್ಮದಲ್ಲಿಯೂ ಹೀಗೆಯೇ ಹರಿಯುತ್ತಿರುವುದು.

೩೧. ಈ ಸಂಸಾರದಲ್ಲಿ ಇನ್ನೂ ಅಸಂಖ್ಯಾಕರಾದ ಪತ್ನೀ ಪುತ್ರಾದಿ ಸಕಲ ಬಂಧು ಜನ ಸಮೂಹಗಳೆಂಬ ಬೇರೆ ನದಿಗಳೂ ಕೆಲವಿರುವುವು. ಇವು ಅವಿಚ್ಛಿನ್ನ ವಾಗಿ ಹರಿದುಹೋಗಿ ಬಹಳ ಆಳವಾಗಿಯೂ ಅತಿ ವಿಶಾಲವಾಗಿಯೂ ದೊಡ್ಡ ಹೊಟ್ಟೆಯುಳ್ಳದಾಗಿಯೂ ಇರುವ ಕಾಲವೆಂಬ ಸಮುದ್ರದಲ್ಲಿ ಸಂತತವೂ ಬೀಳುತ್ತಿರುವುವು.

೩೨. ಅಯ್ಯ ಮಿತ್ರನೇ, (ತಾತ= ತಂದೆಯೇ ಎಂಬ ಪರಮ ಪ್ರೇಮ ಸೂಚಕವಾದ ಶಬ್ದವನ್ನು ಅಪ್ಪಾ ಎನ್ನುವಂತೆ ಹೇಳಿದೆ.) ಪರನು ಪುರುಷಾರ್ಥ ಸಾಧನವಾಗಿ ನಿಃಶ್ರೇಯಸ ಹೇತುವೆನ್ನಿಸಿದ ರತ್ನಶಲಾಕೆಯಂತೆ ಅತ್ಯಂತ ಪ್ರಿಯ ತಮವಾದ ಈ ದೇಹವು ಪ್ರತಿಯೊಂದು ಜನ್ಮದಲ್ಲಿಯೂ ಸಮುದ್ರದಂತೆ ಅಪಾರ ವಾದ ನಾಶವೆಂಬ ಒಂದು ದೊಡ್ಡ ಕೆಸರು ಗುಂಡಿಯ ಮಧ್ಯದೊಳಗೆ ಬಿದ್ದು ಮುಳುಗಿ ಹೋಗುವುದು. ಹೇಗಾದರೂ, ಏನಾದರೂ ಕಷ್ಟಪಟ್ಟು ಮೇಲಕ್ಕೆ ಎತ್ತೋಣವೆಂದರೆ, ಅದು ಎಲ್ಲಿ ಮುಳುಗಿರುವುದೆಂಬುದೇ ಗೊತ್ತಾಗುವು ದಿಲ್ಲವಲ್ಲಾ !!!

೩೩. ಪ್ರಾಣಿಗಳ ಚಿತ್ತವೆಂಬುದು ಸರ್ವದಾ ಗಿರ್ರನೆ ಸುತ್ತುತ್ತಿರುವ ಚಿಂತೆ ಯೆಂಬ ಚಕ್ರದೊಳಗೆ ಸಿಕ್ಕಿಕೊಂಡು ಬಲವಾಗಿ ಅದರೊಂದಿಗೆ ಬಹುಕಾಲದಿಂದಲೂ ಬದ್ಧವಾಗಿರುವುದು. ಮತ್ತು ಅನೇಕಾನೇಕ ದುಷ್ಕರ್ಮಗಳನ್ನು (ನಿಷಿದ್ಧ ವ್ಯವ ಹಾರಗಳನ್ನು) ಅನುಷ್ಠಾನ ಮಾಡುವುದರಲ್ಲಿ ಬಹಳ ಕುಶಲತಯನ್ನು ಹೊಂದಿರು

ಉಹ್ಯಮಾನಮನಂತೇಷು ಚೇತಃ ಕಾರ್ಯಮಹೋರ್ಮಿಷು ।
ಕ್ಷಣಮೇತಿ ನ ವಿಶ್ರಾಂತಿಂ ಚಿಂತಾತಾಂಡವಿತಾಶಯಂ ॥ ೩೪ ॥

ಇದಂ ಕೃತಂ ಕರೋಮೀದಂ ಕರಿಷ್ಯಾಮೀದಮಿತ್ಯಲಂ ।
ಕಲನಾಜಾಲವಲಿತಾ ಮೂರ್ಛಿತಾ ಮತಿಪಕ್ಷಿಣೀ ॥ ೩೫ ॥

ವುದು. ಇದು ಸಮುದ್ರದ ಆಳವಾದ ಸುಳಿಯ ಮಧ್ಯದಲ್ಲಿ ಸಿಕ್ಕಿಬಿದ್ದಿರುವ ಹುಲ್ಲು ಕಡ್ಡಿಯಂತೆ ಒಂದು ಕ್ಷಣವಾದರೂ ನಿಲ್ಲದೆ ಯಾವಾಗಲೂ ಗಿರ್ರನೆ ಸುತ್ತುತ್ತಲೇ ಇರುವುದು.

೩೪. ಬಗೆಬಗೆಯ ನಾನಾ ಚಿಂತೆಗಳಿಗೆ ಅಧೀನವಾಗಿ, ಅವಿಶ್ರಾಂತವಾಗಿ ಕುಣಿದಾಡುತ್ತಿರುವ ಆಶಯವುಳ್ಳ ಪ್ರಾಣಿಗಳ ಈ ಚಿತ್ತವು ಅನಂತಗಳಾದ (ಕೊನೆ ಮೊದಲಿಲ್ಲದ) ನಾನಾ ಕಾರ್ಯಗಳೆಂಬ ದೊಡ್ಡ ಅಲೆಗಳ ಹೊಡೆತಕ್ಕೆ ಸಿಕ್ಕಿ ಬಿದ್ದು ಕೊಚ್ಚಿಕೊಂಡು ಹೋಗುತ್ತಾ, ಒಂದು ಕ್ಷಣವಾದರೂ ವಿಶ್ರಾಂತಿಯನ್ನು ಪಡೆಯುವುದಿಲ್ಲ.

೩೫. "ಈ ಕಾರ್ಯವನ್ನು ಮಾಡಿ ಮುಗಿಸಿದ್ದಾಯಿತು; ಈಗ ಇದನ್ನು ಮಾಡುತ್ತಿರುವೆನು; ಇನ್ನು ಮೇಲೆ ಆ ಕಾರ್ಯವನ್ನು ಮಾಡಬೇಕಾಗಿರುವುದು;" ಎಂಬೀ ಮೊದಲಾದ ನಾನಾ ಸಂಕಲ್ಪ ಕಲ್ಪನೆಗಳೆಂಬ ಒಂದು ದೃಢವಾದ ಬಲೆಯೊಳಗೆ ಬುದ್ಧಿಯೆಂಬ ಹೆಣ್ಣು ಪಕ್ಷಿಯು ಸಿಕ್ಕಿಹಾಕಿಕೊಂಡು ತಪ್ಪಿಸಿಕೊಳ್ಳುವ ಉಪಾಯವನ್ನು ಕಾಣದೆ ಗಾಬರಿಯಿಂದ ಸಂಪೂರ್ತಿಯಾಗಿ ಮೂರ್ಛೆ ಹೋಗಿರುವುದು.

ಅಯಂ ಸುಹೃದಯಂ ಶತ್ರುರಿತಿ ದ್ವಂದ್ವಮಹಾದ್ವಿಪಃ ।
ವಿನಿಕೃಂತತಿ ಮರ್ಮಾಣಿ ಯಥಾ ನೀಲೋತ್ಪಲಾನಿ ಮೇ ॥ ೩೬ ॥

ಚಿಂತಾನದ್ಯಾ ಮಹಾವರ್ತೇ ವೀಚಿಕಾನಿಚಯೇ ಚಿರಂ ।
ಕ್ಷಣಾದುಚ್ಛೂನತಾಮೇತಿ ಮನೋಮೀನಃ ಕ್ಷಣಾದ್ಗತಿಃ ॥ ೩೭ ॥

ಅನಾತ್ಮೀಯಾನಿ ದುಃಖಾನಿ ಬಹೂನ್ಯೇವಂ ವಿಧಾನ್ಯಯಂ ।
ಆತ್ಮಬುಧ್ಯಾ ವಿಚಿನ್ವಾನೋ ಜನೋ ಗಚ್ಛತಿ ದೀನತಾಂ ॥ ೩೮ ॥

---

೩೬. ಒಂದು ದೊಡ್ಡ ಮದಿಸಿದ ಕಾಡಾನೆಯು ಪುಷ್ಕರಿಣಿಯು ಒಳಹೊಕ್ಕು ಕನ್ನೈದಿಲೆ ಪುಷ್ಪಗಳನ್ನು ಕಿತ್ತು ಕಾಲುಗಳಿಂದ ತುಳಿದು ಧ್ವಂಸ ಮಾಡುವಂತೆ ಇವನು ಮಿತ್ರನು ಅವನು ಶತ್ರುವು ಎಂಬೀ ಮೊದಲಾದ ದ್ವಂದ್ವ ಭಾವನೆಗಳು ನನ್ನ ಹೃದಯದೊಳಗೆ ಸೇರಿಕೊಂಡು ಮರ್ಮಸ್ಥಾನಗಳನ್ನು ಛೇದಿಸಿ ಧ್ವಂಸ ಮಾಡುತ್ತಿರುವುವು.

೩೭. ಕ್ಷುತ್ಪಿಪಾಸಾದಿ ಷಡೂರ್ಮಿಗಳೆಂಬ ಅಲೆಗಳ ಪರಂಪರೆಯಿಂದ ಪ್ರಚುರವಾದ ಚಿಂತೆಯೆಂಬ ನದಿಯು ದೊಡ್ಡ ಸುಳಿಯ ಮಧ್ಯದಲ್ಲಿ ಎಷ್ಟೋ ದೀರ್ಘಕಾಲದಿಂದಲೂ ವಾಸವಾಗಿರುವ ಬಹು ಬೇಗನೆ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಸಂತತವಾಗಿ ನೆಗೆದಾಡುವ ಸ್ವಭಾವವುಳ್ಳ ಮನಸ್ಸೆಂಬ ಮೀನು ಒಂದು ಕ್ಷಣದೊಳಗಾಗಿ ಬಹು ಮಟ್ಟಿಗೆ ಅಭಿವೃದ್ಧಿಯನ್ನು ಹೊಂದುವುದು.

೩೮. ಅನಾತ್ಮಗಳಾದ ತನ್ನ ಮತ್ತು ಇತರರ ದೇಹೇಂದ್ರಿಯಾದಿಗಳಲ್ಲಿ ಆತ್ಮಬುದ್ಧಿಯನ್ನು ಭ್ರಾಂತಿಯಿಂದ ಆರೋಪ ಮಾಡಿಕೊಂಡಿರುವ ಈ ಅಜ್ಞ ಜನರು ತಮಗೆ ಸ್ವಲ್ಪವೂ ಹೇಗೂ ಸಂಬಂಧವೇ ಇಲ್ಲದಿರುವ ಪುತ್ತು ಅನಾತ್ಮ ದೇಹೇಂದ್ರಿಯಾದಿ ನಿಮಿತ್ತಕಗಳಾದ ಈ ವಿಧವಾದ ಅನೇಕಾನೇಕ ದುಃಖಗಳನ್ನು ತನ್ನವುಗಳೆಂದೇ ಭಾವಿಸಿಕೊಂಡು ಸರ್ವದಾ ಅನುಭವಿಸುತ್ತಾ ವ್ಯಾಕುಲ ಚಿತ್ತರಾಗಿ ವಿಶೇಷವಾದ ದೈನ್ಯವನ್ನು ಹೊಂದುವರು.

ಬಹುವಿಧಸುಖದುಃಖಮಧ್ಯಪಾತೀ
ವಿತತಜರಾಮಣ ಪ್ರವಾತಭಗ್ನಃ ।
ಜಗದುದರಗಿರೌ ಲುಠನ್ಜನೋಽಯಂ
ಗತರಸಪರ್ಣವದೇತಿ ಜರ್ಜರತ್ವಂ ॥ ೩೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಅನಿತ್ಯತಾ ಪ್ರತಿಪಾದನಂ" ನಾಮ ಷಟ್ಷಷ್ಟಿತಮಃ ಸರ್ಗಃ.

---

೩೯. ಬ್ರಹ್ಮಾಂಡವೆಂಬ ದೊಡ್ಡ ಪರ್ವತದ ಮಧ್ಯದಲ್ಲಿ ಬಿದ್ದು ಹೊರಳಾಡುತ್ತಿರುವ ಈ ಅಜ್ಞ ಜನರು ಬಹು ವಿಧದುರ್ಭರವಾದ ಸುಖದುಃಖಗಳ ನಡುವೆ ಸಿಕ್ಕಿಕೊಂಡು ಪುನಃ ಪುನಃ ಜರಾಮರಣಗಳ ಪ್ರವಾಹಗಳೆಂಬ ಬಿರುಗಾಳಿಯ ರಭಸದಿಂದ ಭಗ್ನವಾದ ಪುರುಷಾರ್ಥಗಳುಳ್ಳವರಾಗಿ ನೀರಿಸವಾಗಿ ಒಣಗಿದ ಎಲೆಯಂತೆ ವಿವರ್ಣರಾಗಿ ನಿರುತ್ಸಾಹಿಗಳಾಗಿ ಸಕಲ ಜನ್ಮಗಳಲ್ಲಿಯೂ ವ್ಯರ್ಥವಾಗಿ ನಾಶ ಹೊಂದುತ್ತಿರುವರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಅನಿತ್ಯತಾ ಪ್ರತಿಪಾದನ" ವೆಂಬ
ಅರವತ್ತ ಆರನೆಯ ಸರ್ಗವು.

ಸಪ್ತಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಏವಂ ತೌ ಕುಶಲಪ್ರಶ್ನಂ ಕೃತವಂತೌ ಪರಸ್ಪರಂ ।
ಕಾಲೇನಾಸಾದ್ಯ ವಿಮಲಂ ಜ್ಞಾನಂ ಮೋಕ್ಷಂ ತತೋ ಗತೌ ॥ ೧ ॥

ತತೋ ವಚ್ಮಿ ಮಹಾಬಾಹೋ ಯಥಾ ಜ್ಞಾನೇತರಾ ಗತಿಃ ।
ನಾಸ್ತಿ ಸಂಸಾರತರಣೇ ಪಾಸಬಂಧಸ್ಯ ಚೇತಸಃ ॥ ೨ ॥

ಅರವತ್ತೇಳನೆಯ ಸರ್ಗವು

ಶ್ರೀ ವಸಿಷ್ಠರು (ಶ್ರೀರಾಮನಿಗೆ) ಹೇಳಿದರು :—

೧. ಅಯ್ಯ ರಾಭದ್ರ, ಆಭಾಸ ವಿಲಾಸರಿಬ್ಬರೂ ಹಿಂದಿನ ಸರ್ಗದಲ್ಲಿ ವರ್ಣಿಸಿದ ಮೇರೆಗೆ ಸಂಸಾರದ ನಿಸ್ಸಾರತ್ವವನ್ನೂ ಕುರಿತ ವಿಚಾರ ಪ್ರಚುರವಾದ ಪರಸ್ಪರ ಕುಶಲ ಪ್ರಶ್ನೆಯನ್ನೂ (ಯೋಗ ಕ್ಷೇಮ ಸಮಾಚಾರಗಳನ್ನೂ ಪ್ರಶ್ನೆಮಾಡಿ ತಿಳಿದು ಮಾಡಿದರು. ಬಳಿಕ, ಕೆಲವು ಕಾಲದ ಮೇಲೆ ನಿರ್ಮಲವಾದ ಆತ್ಮ ತತ್ತ್ವ ಜ್ಞಾನವನ್ನೂ ಸಂಪಾದಿಸಿಕೊಂಡು ಆದರಿಂದ ಮೋಕ್ಷವನ್ನೂ ದೊರಕಿಸಿಕೊಂಡರು.

೨. ಅಯ್ಯ ಮಹಾ ಬಾಹುವೇ, ಅದುಕಾರಣವೇ ಬಲೆಗಳಂತೆ ಬಂಧನ ಹೇತುಗಳಾದ ಅವಿದ್ಯಾಕಾಮ ಕರ್ಮವಾಸನಾದಿ ದೋಷಗಳಿಂದ ಸಂಸಾರದಲ್ಲಿ ಸಿಕ್ಕಿ ಹಾಕಿಕೊಂಡಿರುವ ಮನಸ್ಸು ಅಪಾರವಾದ ಸಂಸಾರ ಸಾಗರವನ್ನು ದಾಟಿ ಸ್ವಸ್ಥವಾಗಿ ರಬೇಕಾದರೆ ಸ್ವಾತ್ಮ ತತ್ತ್ವ ಜ್ಞಾನಕ್ಕಿಂತಲೂ ಬೇರೆಯಾದ ಉಪಾಯಾಂತರವು ಯಾವುದೂ ಇಲ್ಲವೇ ಇಲ್ಲವೆಂಬ ಶ್ರುತ್ಯನುಭಿವಾದಿ ಸರ್ವ ಪ್ರಮಾಣ ಸಮ್ಮತವಾದ ವಿಷಯವನ್ನೂ ಪದೇ ಪದೇ ನಾನು ನಿನಗೆ ಉಪದೇಶಮಾಡುತ್ತಿರುವೆನು.

[ಬ್ರಹ್ಮದ್ ಬ್ರಹ್ಮೈವ ಭವತಿ ತರತಿ ಶೋಕ ಮಾತ್ಮವಿತ್ ಬ್ರಹ್ಮೈವಸನ್ ಬ್ರಹ್ಮಾಪ್ಯೇತಿಯ ಏವಂವೇದ ತಮೇವಂ ವಿದ್ವಾನ್ ಅಮೃತ ಇಹ ಭವಚ ನಾನ್ಯಃ ಪಂಥಾ ಅಯನಾಯವಿದ್ಯತೇ ಇತ್ಯಾದಿ ಪರಸ್ಸಹಸ್ರ ಶುತಿಗಳು ಇದೇ ಅಥವನ್ನೇ

ಇದಂ ಭವ್ಯಮತೇಃ ದುಃಖಮನಂತಮಪಿ ಪೇಲವಂ ।
ಕುಖಗಸ್ಯಾತರೋಽಂಭೋಧಿಃ ಸರ್ಪಾರೇರ್ಗೋಷ್ಪದಾಯತೇ ॥ ೩ ॥

ದೇಹಾತೀತಾ ಮಹಾತ್ಮಾನಸ್ಮಿನ್ಮಾತ್ರಖಾತ್ಮನಿ ಸ್ಥಿತಾಃ ।
ದೂರಾದ್ದೇಹಂ ಸಮೀಕ್ಷಂತೇ ಪ್ರೇಕ್ಷಕೋ ಜನತಾಮಿವ ॥ ೪ ॥

ಸಾರುವುವು. ಸ್ವಾತ್ಮ ಸ್ವರೂಪದ ಅಜ್ಞಾನದಿಂದ ಮಿಥ್ಯೆಯಾಗಿಯೇ ಕಲ್ಪಿತವಾದ ಸಂಸಾರವು-ಶುಕ್ತಿ ಜ್ಞಾನದಿಂದ ಅದರ ಅಜ್ಞಾನ ಜನ್ಯವಾದ ರಜತತ್ವ ಭ್ರಾಂತಿಯು ನಿರ್ಮೂಲವಾಗಿ ನಾಶವಾಗುವಂತೆ-ಸ್ವಾತ್ಮ ತತ್ತ್ವ ಜ್ಞಾನವೊಂದರಿಂದಲೇ ನಿವೃತ್ತಿಯಾಗುವುದು. ಎಂಬುದು ಅನುಭವಸಿದ್ಧವೂ ಆಗಿರುವುದು. ಯಾವ ವಿಷಯದಲ್ಲಿ ಅಜ್ಞಾನವು ಉದಯಿಸಿರುವುದೋ ಅದು ಅದೇ ವಿಷಯದ ಯಥಾರ್ಥ ಜ್ಞಾನದಿಂದಲೇ ತೊಲಗಬೇಕು. ಗತ್ಯಂತರವಿಲ್ಲ.]

೩. ಅಜ್ಞಾನಿ ಪಶುಗಳಿಗೆ ಅತ್ಯಂತ ದುರ್ಭರವಾಗಿ ಅನಂತವಾಗಿರುವುದಾದರೂ ಕೂಡ ಈ ಸಂಸಾರ ದುಃಖವು ಪ್ರಶಸ್ತನಾದ ಮತ್ತು ಉದಾರವಾದ ಬುದ್ಧಿಯುಳ್ಳ ಸಮದರ್ಶಿಯಾದ ಜ್ಞಾನಿಗೆ ಅತ್ಯಲ್ಪವಾದ ಅಕಿಂಚಿತ್ಕರವಾಗಿಯೇ ಪರಿಣಮಿಸುವುದು. ಹೇಗೆಂದರೆ ಲೋಕದಲ್ಲಿ ಸಾಮಾನ್ಯವಾದ ಕಾಗೆ ಮುಂತಾದ ಪಕ್ಷಿಗೆ ಸಮುದ್ರವು ದುಸ್ತರವಾಗಿ ಅತಿ ಭಯಂಕರವಾಗಿ ಕಾಣುವುದು. ಆದರೆ ಗರುಡನು ಅದನ್ನು ಒಂದು ಗೋವಿನ ಪಾದದಷ್ಟು ಮಾತ್ರವನ್ನಾಗಿ ಕಂಡು ಅನಾಯಾಸವಾಗಿ ದಾಟಿಬಿಡುವನಲ್ಲವೆ. ಮಹಾತ್ಮನಾದ ಜ್ಞಾನಿಯೂ ತನ್ನ ವಿವೇಕದಿಂದ ಪ್ರಾಪಂಚಿಕ ದುಃಖಗಳನ್ನೆಲ್ಲ ಲೀಲಾಮಾತ್ರವಾಗಿ ಪರಿಹರಿಸಿಕೊಂಡು ನಿರ್ವಿಣ್ಣನಾಗಿರುವನೆಂದು ಭಾವ.]

೪. ದೇಹಾದಿಗಳಲ್ಲಿ ಸಾಮಾನ್ಯ ಜನರಿಗೆ ಸಹಜವಾಗಿರುವ ಆತ್ಮ ಬುದ್ಧಿಯನ್ನು ಮಿಥ್ಯಾಧ್ಯಾಸರೂಪ ಭ್ರಾಂತಿಯೆಂದು ದೃಢ ನಿಶ್ಚಯವುಳ್ಳ ಮಹಾತ್ಮರು ದೇಹಾದಿಗಳಲ್ಲಿ ಅಭಿಮಾನವನ್ನು ಸಂಪೂರ್ಣವಾಗಿ ಪರಿತ್ಯಾಗ ಮಾಡಿ ಪಾರಮಾರ್ಥಿಕವಾದ ಕೇವಲ ಚಿದ್ರೂಪ ಸ್ವಾತ್ಮ ಭಾವದಲ್ಲಿ ಪರಿನಿಷ್ಠಿತರಾಗಿರುವರು. ಯಾವದೊಂದು ಪಕ್ಷವನ್ನೂ ವಹಿಸದೆ ಉದಾಸೀನನಾಗಿ ಸಾಕ್ಷಿಯಾಗಿರುವ ಪ್ರೇಕ್ಷಕನು ವ್ಯವಹಾರದಲ್ಲಿ ನಿರತರಾದ ಜನರ ಗುಂಪನ್ನು ತಟಸ್ಥನಾಗಿ ದೂರದಲ್ಲಿದ್ದುಕೊಂಡೇ

ದೇಹೇ ದುಃಖಾತಿಸಂಕ್ಷುಬ್ಧೇ ಕಾ ನಃ ಕ್ಷತಿರುಪಸ್ಥಿತಾ ।
ರಥೇ ವಿಧುರಿತೇ ಭಗ್ನೇ ಸಾರಥೇಃ ಕೇವ ಖಂಡನಾ ॥ ೫ ॥

ಮನಸಿ ಕ್ಷುಬ್ಧತಾಂ ಯಾತೇ ಚಿತ್ತಸ್ಯಾಂಗ ಕಿಮಾಗತಂ ।
ತರಂಗಜಲಸಂತಾನೇ ವೈಪರೀತ್ಯಂ ಕಿಮಂಬುಧೇಃ ॥ ೬ ॥

ನೋಡುವಂತೆ ಮಹಾತ್ಮರೂ ಕೂಡ ಈ ಅನಾತ್ಮಗಳಾದ ದೇಹಗಳೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ ಅವುಗಳ ಸುಖ ದುಃಖಾದಿ ಸಕಲಾವಸ್ಥೆಗಳನ್ನೂ ಉದಾಸೀನರಾಗಿ ದೂರದಿಂದ ನೋಡುತ್ತಾ ಆತ್ಮಾರಾಮರಾಗಿಯೇ ಇರುವರು

[ವ್ಯವಹರಿಸುತ್ತಲಿರುವ ಜನಗಳ ಲಾಭ ನಷ್ಟಗಳಿಂದ ಸಾಕ್ಷಿಯು ಹರ್ಷವಿಷಾದಗಳಿಲ್ಲದೆ ಪೂರ್ವದಂತೆಯೇ ಆನಿರ್ವಿಣ್ಣನಾಗಿರುವನು. ಹಿಗ್ಗುವುದೂ ಇಲ್ಲ ಕುಗ್ಗುವುದೂ ಇಲ್ಲ. ಇದರಂತೆಯೇ ದೇಹಗತವಾದ ಸುಖದುಃಖಗಳ ವಶದಿಂದ ಜ್ಞಾನಿಗೆ ಹರ್ಷ ವಿಷಾದಗಳು ಇಲ್ಲವು.]

೫. ಒಂದು ರಥವು ಶಿಥಿಲವಾಗಿ ಹೋದರೂ ಅಥವಾ ಮುರಿದೇ ಹೋದರೂ ಆ ಕಾರಣದಿಂದ ಆ ರಥದ ಯಜಮಾನನು ದುಃಖಗೊಳ್ಳುವನೇ ಹೊರತು ಅದರ ಸಾರಥಿಗೆ ಆದ ಕೆಡಕು ಅಥವಾ ನಷ್ಟವು ಯಾವುದು? ಯಾವುದೂ ಇಲ್ಲವಲ್ಲವೆ! ಹಾಗೆಯೇ ಈ ದೇಹವು ವಾರ್ಧಕ್ಯದಿಂದ ಶಿಥಿಲವಾದರೂ ಅಥವಾ ಮರಣ ಹೊಂದಿದರೂ ಅಥವಾ ಬೇರೆ ವಿಧವಾದ ದುಃಖಾತಿರೇಕಗಳಿಂದ ಕಂಗೆಟ್ಟು ಹೋದರೂ ಕೂಡ ಅದರಲ್ಲಿ ಆತ್ಮಾಭಿಮಾನವನ್ನಿಟ್ಟಿರುವ ಅಜ್ಞಾನಿಯು ದುಃಖಿತನಾಗುವನೇ ಹೊರತು ಅಭಿಮಾನ ತ್ಯಾಗ ಮಾಡಿರುವ ಜ್ಞಾನನಿಷ್ಠರಿಗೆ ಯಾವ ತೊಂದರೆ ನಷ್ಟಗಳೂ ಇಲ್ಲವೇ ಇಲ್ಲ.

೬. ಸಮುದ್ರದ ನೀರಿನಮೇಲೆ ತರಂಗಗಳು ಉದಯಿಸಿ ಕ್ಷೋಭೆಯುಂಟಾದ ಮಾತ್ರದಿಂದ ಆ ಸಮುದ್ರದ ಪರಿಪೂರ್ಣತಾರೂಪ ಸ್ವಭಾವ ಸ್ಥಿತಿಗೆ ಭಂಗವಿಲ್ಲದಿರುವಂತೆಯೇ ಮನಸ್ಸಿಗೆ ಅನೇಕ ಚಿಂತೆಗಳಿಂದಲೂ ಹರ್ಷ ವಿಷಾದ ಮುಂತಾದವುಗಳಿಂದಲೂ ಕ್ಷೋಭೆಯುಂಟಾದರೆ ಅದರಿಂದ ಚಿದ್ರೂಪನಾದ ಆತ್ಮನಿಗೆ ಯಾವ ವೈಪರೀತ್ಯವೂ ಇರುವುದಿಲ್ಲ.

ಕೇ ಭವನ್ತ್ವಯಸಾಂ ಹಂಸಾಃ ಪಯಸಾಮುಪಲಾಶ್ಚ ಕೇ ।
ಕಾಃ ಶಿಲಾಃ ಕಿಲ ದಾರೂಣಾಂ ಕೇ ಭೋಗಾಃ ಪರಮಾತ್ಮನಃ ॥ ೭ ॥

ಸಂಬಂಧಃ ಕ ಇವ ಶ್ರೀಮನ್ನೈಲಾಪರಸಮುದ್ರಯೋಃ ।
ಅಂತರೇ ಗಿರಿಸಂಬಾಧೇ ಕಶ್ಚ ಚಿತ್ತತ್ವಬಂಧಯೋಃ ॥ ೮ ॥

---

೭. ಕೊಳದಲ್ಲಿರುವ ನೀರುಗಳಿಗೆ ಹಂಸ ಪಕ್ಷಿಗಳು ಯಾವುವು ? ಅಂದರೆ ನೀರಿಗೂ ಹಂಸಗಳಿಗೂ ಯಾವ ಸಂಬಂಧವಿರುವುದು? ನೀರಿಗೂ ಕಲ್ಲುಗಳಿಗೂ ಇರುವ ಸಂಬಂಧವಾವುದು ? ಹಾಗೆಯೇ ಶಿಲೆಗಳಿಗೂ ಮರಗಳಿಗೂ ಏನು ಸಂಬಂಧ? ಯಾವುದೂ ಇಲ್ಲವಷ್ಟೇ. ಇದರಂತೆಯೇ ಅಸಂಗನೂ ಅವಿಕ್ರಿಯನೂ ನಿರ್ಲಿಪ್ತನೂ ಆದ ಸಚ್ಚಿದಾನಂದರೂಪ ಪರಮಾತ್ಮನಿಗೆ ಭೋಗ ಸಂಬಂಧವೂ ಸುತರಾಂ ಇಲ್ಲವೇ ಇಲ್ಲವು.

[ದೃಷ್ಟಾಂತದಲ್ಲಿ ನೀರು, ಕಲ್ಲು ಮರ ಮುಂತಾದ ಅಚೇತನಗಳಿಗೆ ಅಭಿಮಾನ ವಿಲ್ಲ. ದಾರ್ಷ್ಟಾಂತದಲ್ಲಿ ಆತ್ಮನು ಅಸಂಗನು. ಆದುದರಿಂದ ಅಹಂಕಾರ ರೂಪ ಅಭಿಮಾನವನ್ನು ಬಿಟ್ಟು ಬಿಟ್ಟರೆ ಯಾರಿಗೂ ಎಲ್ಲಿಯೂ ಮಮತೆಯೂ ತನ್ಮೂಲಕವಾದ ಸುಖ ದುಃಖಗಳೂ ಪ್ರಸಕ್ತವಾಗುವುದೇ ಇಲ್ಲ.]

೮. ಅಯ್ಯ ಶ್ರೀಮಂತನೇ, ಪಶ್ಚಿಮ ಸಮುದ್ರ ಮಧ್ಯದಲ್ಲಿ ಅಸ್ತ ಪರ್ವತವೇ ಮುಂತಾದ ಅನೇಕ ಬೆಟ್ಟಗಳು ನಿಬಿಡವಾಗಿದ್ದಾಗ್ಯೂ ಕೂಡ ಆ ಸಮುದ್ರಕ್ಕೂ ಪರ್ವತಕ್ಕೂ ಯಾವ ಸಂಬಂಧವು ತಾನೇ ಇರುವುದು ? ಹಾಗೆಯೇ ಪರಮಾತ್ಮನಿಗೂ, ಸಂಸಾರಕ್ಕೂ ಯಾವ ಸಂಬಂಧವಿರುವುದು ?

[ಯಾವುದೊಂದೂ ಇಲ್ಲ. ಆಕಾಶವನ್ನು ಹಗ್ಗಗಳಿಂದ ಬಿಗಿದು ಕಟ್ಟಲಾಗುವುದೇನು ಎಂದೆಂದಿಗೂ ಸಾಧ್ಯವಿಲ್ಲ.]

ಅಪ್ಯೃತ್ಸಂಗೋಹ್ಯಮಾನಾನಿ ಪದ್ಮಾನಿ ಸರಿದಂಭಸಾಂ ।
ಕಾನಿ ನಾಮ ಭವಂತೀಹ ಶರೀರಾಣಿ ತಥಾತ್ಮನಃ ॥ ೯ ॥

ಸಂಘಟ್ಟಾತ್ಕಾಷ್ಠಪಯಸೋರ್ಯಥೋತ್ತುಂಗಾಃ ಕಣಾದಯಃ ।
ದೇಹಾತ್ಮನೋಃ ಸಮಾಯೋಗಾತ್ತಥೈತಾಶ್ಚಿತ್ತವೃತ್ತಯಃ ॥ ೧೦ ॥

ಸಂಬಂಧಾದ್ದಾರು ಪಯಸಾಂ ಪ್ರತಿಬಿಂಬಾನಿ ದಾರುಣಃ ।
ಯಥಾ ಪಯಸಿ ಲಕ್ಷ್ಯಂತೇ ಶರೀರಾಣಿ ತಥಾತ್ಮನಿ ॥ ೧೧ ॥

೯. ಲೋಕದಲ್ಲಿ ನದೀ ಜಲವು ಕಮಲಗಳನ್ನು ತೊಡೆಯಮೇಲೆ ಹೇಗೂ ಹಾಗೆ ಎಡಬಿಡದೆ ಅಂಟಿಕೊಂಡೇ ಸರ್ವದಾ ಧರಿಸಿಕೊಂಡಿರುವುದನ್ನು ಎಲ್ಲರೂ ಕಾಣಬಹುದಲ್ಲವೇ. ಹೀಗಿದ್ದರೂಕೂಡವಸ್ತುತಃ ಪರೀಕ್ಷಿಸಿ ವಿಮರ್ಶೆಮಾಡಿ ನೋಡಿದರೆ ಆನದೀ ಜಲಕ್ಕೂ ಕಮಲಗಳಿಗೂ ಯಾವುದಾದರೊಂದು ವಿಧದಲ್ಲಿಯಾದರೂ ಏನಾದರೂ ಒಂದು ಸಂಬಂಧವು ಸ್ವಲ್ಪಮಾತ್ರವಾದರೂ ಇರುವುದೇನು ? ಇಲ್ಲವಷ್ಟೆ ಇದರಂತೆ ಶರೀರಗಳು ಆತ್ಮನಿಗೆ ಹೇಗೂ ಸರ್ವಥಾ ಸಂಬಂಧ ಪಡೆದಿರತಕ್ಕವುಗಳು ಅಲ್ಲವೇ ಅಲ್ಲ.

೧೦. ಒಂದು ಕಟ್ಟಿಗೆಯನ್ನೆತ್ತಿಕೊಂಡು ನೀರಿನ ಮೇಲೆ ಹೊಡೆದರೆ, ಆಗ ಆ ಕಾಷ್ಠ ಜಲಗಳ ಪರಸ್ಪರ ಸಂಘರ್ಷಣದಿಂದ, ನೀರಿನ ದೆಸೆಯಿಂದ ದೊಡ್ಡ ಜಲಬಿಂದುಗಳು ಮೇಲಕ್ಕೆ ಹಾರುವುವು. ಮತ್ತು ಅಲೆಗಳು ಹೊರಡುವುವು. ಇದರಂತೆಯೇ ದೇಹ-ಆತ್ಮಗಳ ಪರಸ್ಪರ ತಾದಾತ್ಮ್ಯಾಧ್ಯಾಸದಿಂದ, ಸುಖ ದುಃಖಾದಿ ನಾನಾ ರೂಪಗಳಾದ ಈ ಚಿತ್ತವೃತ್ತಿಗಳು ಆವಿರ್ಭವಿಸುವುವು.

೧೧. ಹೊಳೆ, ಕೆರೆ ಮುಂತಾದ ಜಲಾಶಯಗಳ ದಡದ ಮೇಲೆ, ಒಂದು ಮರವು ಬೆಳೆದುಕೊಂಡಿದ್ದರೆ, ಆ ಮರಕ್ಕೂ, ಜಲಾಶಯದೊಳಗಿರುವ ನೀರಿಗೂ ಕೇವಲ ಸಾನ್ನಿಧ್ಯ (ಸಾಮೀಪ್ಯ) ರೂಪ ಸಂಬಂಧವುಂಟಾಗಿ, ಆ ನಿಮಿತ್ತದಿಂದ ಆ ಮರವು ಸ್ವಚ್ಛವಾದ ನೀರಿನೊಳಗೆ ಪ್ರತಿಬಿಂಬಿಸುವುದು. ಆಗ ಆ ಮರದ ಕೊಂಬೆಗಳ ಮತ್ತು ಎಲೆ ಮುಂತಾದ ಇತರ ಭಾಗಗಳ ಪ್ರತಿಬಿಂಬಗಳು ಆ ನೀರಿನೊಳಗೆ ಹೇಗೆ ಕಾಣುವುವೋ ಹಾಗೆಯೇ ಈ ಶರೀರಗಳಿಗೂ ಆತ್ಮನಿಗೂ ಕೇವಲ ಸಾನ್ನಿಧ್ಯರೂಪ ನಿಮಿತ್ತದಿಂದ, ಸ್ವಚ್ಛವಾದ ಆತ್ಮಸ್ವರೂಪದಲ್ಲಿ ಶರೀರಾದಿಗಳ ಪ್ರತಿಬಿಂಬಗಳು ಕೇವಲ ಆಧ್ಯಾಸಿಕವಾಗಿಯೇ ತೋರುವುವು.

ಯಥಾ ದರ್ಪಣವೀಚ್ಯಾದೌ ಪ್ರತಿಬಿಂಬಾಸಿ ವಸ್ತುತಃ ।
ನಾಸತ್ಯಾನಿ ಚ ಸತ್ಯಾನಿ ಶರೀರಾಣಿ ತಥಾತ್ಮನಃ ॥ ೧೨ ॥

ದಾರುವಾಯುರ್ಮುಪಲಾಸ್ಫೋಟೇ ದುಃಖಿತಾ ನ ಯಥಾ ಕ್ವಚಿತ್ ।
ಸಂಯುಕ್ತೇಷು ವಿಯುಕ್ತೇಷು ನ ತಥಾ ಪಂಚಸು ಕ್ಷತಿಃ ॥ ೧೩ ॥

ದಾರುಸಂಶ್ಲೇಷಿತಾತ್ತೋಯಾತ್ಕಂಪಶಬ್ದಾದಯೋ ಯಥಾ ।
ಪ್ರಜಾಯಂತೇ ತಥೈವಾಸ್ಮಾದ್ದೇಹಾಚ್ಚಿತ್ಪರಿಬೋಧಿತಾತ್ ॥ ೧೪ ॥

---

೧೨. ಕನ್ನಡಿ, ಜಲತರಂಗ (ನೀರಿನ ಮೇಲಣ ಅಲೆ) ಮುಂತಾದುವುಗಳಲ್ಲಿ ಪ್ರತಿಫಲಿಸಿದ ವಸ್ತುಪ್ರತಿಬಿಂಬಗಳು ವಸ್ತುತಃ ಅಸತ್ಯಗಳೇ ಆಗಿದ್ದು ಸತ್ಯವಾದುವುಗಳಂತೆ ಆಭಾಸಮಾನವಾಗಿದ್ದರೂ ಸತ್ಯವಾದವುಗಳಲ್ಲದಿರುವಂತೆಯೇ. ಆತ್ಮನಿಗೆ ಶರೀರಗಳು ಸತ್ಯವಾಗಿರುವಂತೆ ಕಂಡು ಬಂದರೂ ಅವು ವಸ್ತುತಃ ಸತ್ಯಗಳಾಗಿಲ್ಲ. ಅಸತ್ಯಗಳೇ ಆಗಿರುವುವು.

೧೩. ಮರ, ನೀರು, ಕಲ್ಲು ಮುಂತಾದ ಜಡವಸ್ತುಗಳು ಒಂದಕ್ಕೊಂದು ಸೇರಿಕೊಂಡು ಒಟ್ಟಿಗೆ ಇದ್ದರೂ ಅಥವಾ ಇವುಗಳು ಪರಸ್ಪರ ವಿಯುಕ್ತಗಳಾಗಿ ಭಂಗವಡೆದು ಬೇರೆ ಬೇರೆಯಾಗಿದ್ದರೂ ಹೇಗಿದ್ದರೂ ಕೂಡ, ಅವುಗಳಲ್ಲಿ ಯಾವುದೊಂದಕ್ಕೂ ಎಲ್ಲಿಯೂ ಹೇಗೆ ಯಾವಾಗಲೂ ದುಃಖಾನುಭವವು ಇಲ್ಲವೋ ಹಾಗೆಯೇ ಈ ಆಕಾಶಾದಿ ಪಂಚಭೂತಗಳ ಸಮುದಾಯವು ದೇಹಾದ್ಯಾಕಾರಗಳಿಂದ ಪರಿಣಾಮ ಹೊಂದಿರಲು ಅವುಗಳಿಗೆ ಚಂದನಾದಿ ಲೇಪನ ದ್ರವ್ಯಾದಿಗಳ ಸಂಯೋಗವುಂಟಾದಾಗಲೂ, ಸ್ತ್ರೀ ಪುರುಷಾದಿಗಳಿಂದ ವಿಯೋಗವುಂಟಾದಾಗಲೂ ಕೂಡ ಯಾವುದೊಂದು ಬಗೆಯ ಸುಖದುಃಖಾದಿ ಮನೋವಿಕಾರಗಳಿಗೂ ಪ್ರಸಕ್ತಿಯೂ ಕೂಡ ಇಲ್ಲವೇ ಇಲ್ಲವು.

೧೪. ಒಂದು ಕಟ್ಟಿಗೆಯು ನೀರಿನ ಮೇಲೆ ಹೋಗಿ ಬಿದ್ದರೆ, ಕೂಡಲೆ ಆ ಕಟ್ಟಿಗೆಯ ಸಂಯೋಗಮಾತ್ರದಿಂದ, ಆ ನೀರಿನಲ್ಲಿ ಚಲನೆಯೂ ಶಬ್ದ ಮುಂತಾದವುಗಳೂ ಉಂಟಾಗುವಂತೆಯೇ, ಚಿತ್ತು ಸನ್ನಿಹಿತವಾಗಿದ್ದುಕೊಂಡಿರಲು, ಆ ಚಿತ್ತಿನ ಸನ್ನಿಧಿಮಾತ್ರದಿಂದ ನಾನಾ ಮುಖಗಳಲ್ಲಿ ಪ್ರಬೋಧಿತವಾದ ಈ ದೇಹದ ದೆಸೆಯಿಂದಲೂ ಚಲನವಲನಾದಿ ಸಕಲ ವ್ಯವಹಾರಗಳೂ ಉದಯಿಸುವುವು.

ನ ಶುದ್ಧ ಜಡಯೋರೇತಾಃ ಸಂವಿದಶ್ಚಿಚ್ಛರೀರಯೋಃ ।
ಏತಾ ಹ್ಯಜ್ಞಾನಮಾತ್ರಸ್ಯ ತಸ್ಮಿನ್ನಷ್ಟೇ ಚಿದೇವ ನಃ ॥ ೧೫ ॥

ಯಥಾ ನ ಕಸ್ಯಚಿದ್ವಾರಿದಾರುಶ್ಲೇಷೇಽನುಭೂತಯಃ ।
ತಥಾ ನ ಕಸ್ಯಚಿದ್ದೇಹದೇಹಿ ಸಂಗೇಽನುಭೂತಯಃ ॥ ೧೬ ॥

ಅಜ್ಞಸ್ಯಾಯಂ ಯಥಾ ದೃಷ್ಟಃ ಸಂಸಾರಃ ಸತ್ಯತಾಂ ಗತಃ ।
ನ ಜ್ಞಸ್ಯಾಯಂ ಯಥಾಭೂತಃ ಸಂಸಾರಃ ಸತ್ಯತಾಂ ಗತಃ ॥ ೧೭ ॥

---

೧೫. ಯಥಾರ್ಥವಾಗಿ ವಸ್ತುತತ್ತ್ವವನ್ನು ಪರಿಶೀಲಿಸಿದರೆ, ಈ ಜಗತ್ತಿನಲ್ಲಿ ಭಾಸಮಾನವಾಗಿರುವ ಸುಖದುಃಖಾದಿಗಳ ಜ್ಞಾನಗಳು, ನಿತ್ಯಶುದ್ಧನಾಗಿ, ನಿಷ್ಕಳಂಕನಾಗಿರುವ ಚಿದ್ರೂಪನಾದ ಆತ್ಮನಿಗೂ ಇಲ್ಲ. ಮತ್ತು ಅತ್ಯಂತ ಜಡಗಳಾದ ಶರೀರೇಂದ್ರಿಯಗಳಿಗೂ ಇಲ್ಲ. ಆದರೆ ಅಜ್ಞಾನಕ್ಕೆ ಮಾತ್ರವೇ ಈ ಸುಖದುಃಖಾದಿ ಜ್ಞಾನಗಳು ಇರುವುವು. ಇ ತಸ ನಮ್ಮ ಅಜ್ಞಾನವು ನಷ್ಟವಾಗಿಬಿಟ್ಟರೆ, ಬಳಿಕ ನಮ್ಮ ಚಿದ್ರೂಪವೊಂದೇ ನಿರುಪದ್ರವವಾಗಿ ಉಳಿಯುವುದು.

೧೬. ಜಲವೃಕ್ಷಗಳು (ಜಲವೂ, ಮರವೂ) ಕೇವಲ ಸಾಮೀಪ್ಯದಿಂದ ಒಂದಕ್ಕೊಂದು ಸಂಯೋಗವನ್ನು ಹೊಂದಿರಲು, ಆಗ ಉಂಟಾಗುವ ಪ್ರತಿಬಿಂಬಾದ್ಯನುಭವಗಳು, ಆ ಜಲವೃಕ್ಷಗಳೊಳಗೆ ಯಾವುದೊಂದಕ್ಕೂ ಹೇಗೆ ಇಲ್ಲವೋ ಹಾಗೆಯೇ ಈ ದೇಹಕ್ಕೂ ದೇಹಾಭಿಮಾನಿಯಾದ (ದೇಹಿ) ಆತ್ಮನಿಗೂ ಕೇವಲ ಸಾನ್ನಿಧ್ಯರೂಪ ಸಂಯೋಗವುಂಟಾದ ಮಾತ್ರದಿಂದಲೇ, ಆ ದೇಹ ದೇಹಿಗಳೊಳಗೆ ಯಾರೊಬ್ಬರಿಗೂ ಯಾವುದೊಂದು ಸುಖ ದುಃಖಾನುಭವವೂ ಉಂಟಾಗುವುದಿಲ್ಲ.

೧೭. ತತ್ತ್ವಜ್ಞಾನರಹಿತನಾದ ಅಜ್ಞಾನಿಗೆ ದೃಶ್ಯವಾದ ಈ ಸಂಸಾರ (ಜಗತ್ತು) ಎಲ್ಲವೂ ಹೇಗೆ ಕಣ್ಣುಗಳಿಗೆ ಕಾಣುತ್ತಿರುವುದೋ ಹಾಗೆಯೇ ಸತ್ಯವಾಗಿಯೇ ಕಾಣಿಸುವುದು. ಆತ್ಮಜ್ಞನಾದ ಜ್ಞಾನಿಗಾದರೋ ಈ ಸಂಸಾರವು ತೋರುವ ರೀತಿಯಲ್ಲಿ, ಸತ್ಯವಾಗಿರುವುದೇ ಇಲ್ಲ. (ಮಿಥ್ಯೆಯಾಗಿಯೇ ಕಾಣುವುದು) [ಅಜ್ಞನ ದೃಷ್ಟಿಗೆ ವಸ್ತುತಃ ಅಸತ್ತಾದ ಜಗತ್ತು ಸತ್ಯವಾಗಿರುವಂತೆ ಭ್ರಾಂತಿಯಿಂದ ಕಾಣುವುದು. ಜ್ಞಾನಿಗಾದರೋ ಅಸತ್ತಾದ ಜಗತ್ತು ಸರ್ವದಾ ಅಸತ್ತಾಗಿಯೇ ಯಥಾಸ್ಥಿತವಾಗಿ ಕಾಣುವುದೇ ಹೊರತು, ಎಂದಿಗೂ ಸತ್ಯವಾಗಿ

ಅಂತಃಸಂಗವಿಹೀನಾಸ್ತು ಯಥಾ ಸ್ನೇಹಾ ದೃಷಜ್ಜಲೇ ।
ತಥಾಸಕ್ತಮನೋವೃತ್ತೌ ಬಾಹ್ಯಭೋಗಾನುಭೂತಯಃ ॥ ೧೮ ॥

ಅಂತಃಸಂಗೇನ ರಹಿತಃ ಯದ್ವತ್ ಸಲಿಲಕಾಷ್ಠಯೋಃ ।
ಸಂಬಂಧಸ್ತದ್ವದೇವಾಂತರಸಂಗೋ ದೇಹದೇಹಿನೋಃ ॥ ೧೯ ॥

ಅಂತಃಸಂಗೇನ ರಹಿತಃ ಸಂಬಂಧೋ ಜಲಕಾಷ್ಠಯೋಃ ।
ಸದೇಹದೇಹಿನೋಶ್ಚಾಪಿ ಪ್ರತಿಬಿಂಬಾಂಭಸೋಸ್ತಥಾ ॥ ೨೦ ॥

ಸ್ಥಿತಾ ಸರ್ವತ್ರ ಸಂವಿತ್ತಿಃ ಶುದ್ಧಾ ಸಂವೇದ್ಯವರ್ಜಿತಾ ।
ದ್ವಿತ್ವೋಪಲಾಂಭಿತಾ ತ್ವನ್ಯಾ ದುಃಖಂವಿತ್ತಿರ್ನ ವಿದ್ಯತೇ ॥ ೨೧ ॥

ರುವುದಿಲ್ಲ. ಇಷ್ಟು ಮಾತ್ರವೇ ಅಜ್ಞನಿಗೂ ಪ್ರಾಜ್ಞನಿಗೂ ದೃಷ್ಟಿಯಲ್ಲಿ ವೈಶೇಷ್ಯ ವಿರುವುದು.]

೧೮. ಕಲ್ಲುಗಳೂ ನೀರುಗಳೂ ಒಟ್ಟಿಗೆ ಕೂಡಿಕೊಂಡಿರುವಾಗ ಅವುಗಳ ಪರಸ್ಪರ ಸಂಬಂಧಗಳು ಅನ್ಯೋನ್ಯ ಒಳಗೆ ಅನು ಪ್ರವೇಶ ರಹಿತಗಳಾಗಿ, ಒಂದು ಕಡೆ ಸಮಾವೇಶ ಮಾತ್ರ ರೂಪವಾಗಿರುವಂತೆಯೇ ಜೀವನ್ಮುಕ್ತನ ವಿಷಯದಲ್ಲಿ ಪ್ರಾರಬ್ಧ ಕರ್ಮ ಫಲಗಳ ಬಾಹ್ಯ ಭೋಗಾನು ಭವಗಳೂಕೂಡ ಅನಾಸಕ್ತವಾದ ಮನೋವೃತ್ತಿಯಲ್ಲಿ ಅಂತಃ ಅಭಿಮಾನ ರಹಿತಗಳಾಗಿಯೇ ಇರುವುವು.

೧೯. ಜಲಕ್ಕೂ ಕಾಷ್ಠಕ್ಕೂ ಇರುವ ಸಂಸರ್ಗರೂಪ ಸಂಬಂಧವು ಹೇಗೆ ಅಂತಃ ಸಂಗ ಶೂನ್ಯವಾಗಿ (ಒಳಗೆ ಪ್ರವೇಶವಿಲ್ಲದುದಾಗಿ) ರುವುದೋ ಹಾಗೆ ದೇಹಕ್ಕೂ ದೇಹಿಗೂ ಕಾಣುವ ಸಂಬಂಧವು ಅಂತಃ ಸಂಗ ಶೂನ್ಯವಾಗಿರುವುದು.

೨೦. ಜಲಕಾಷ್ಠಗಳಿಗೂ ಮತ್ತು ಜಲ ಆದರೊಳಗೆ ಕಾಣುವ ಪ್ರತಿಬಿಂಬ ಇವುಗಳಿಗೂ ಇರುವ ತಾದಾತ್ಮ್ಯ ರೂಪ ಸಂಬಂಧವು ಹೇಗೆ ಅಂತಃ ಸಂಗರಹಿತ ವಾದುದೋ ಹಾಗೆ ದೇಹಕ್ಕೂ ಆತ್ಮನಿಗೂ ತೋರುವ ತಾದಾತ್ಮ್ಯವು ಅಂತಃ ಸಂಗ ದಿಂದ (ಅಭಿಮಾನ) ರಹಿತವಾಗಿರುವುದು.

೨೧. [ಅಯ್ಯರಾಮ, ಹೀಗೆ ಆತ್ಮನಿಗೆ ಸುಖದುಃಖಾದಿ ಜ್ಞಾನವೇ ಇಲ್ಲದೆ ಹೋದಮೇಲೆ ಅದಕ್ಕಿಂತ ಬೇರೆಯಾದ ಜ್ಞಾನವಿರುವುದೇ ಅಪ್ರಸಿದ್ಧವಾಗಿರುವ

ಅದುಃಖಮೇತಿ ದುಃಖಿತ್ವಮಂತಃ ಸಂವೇದನಾತ್ ಸ್ಫುಟಂ ।
ಸ್ಫಾರೋ ಭವತಿ ವೇತಾಲೋ ವೇತಾಲತ್ವೇನ ಭಾವಿತಃ ॥ ೨೨ ॥

ಅಸಂಬದ್ಧೋಽಪಿ ಸಂಬಂಧೋ ಭವತ್ಯಂತರ್ವಿನಿಶ್ಚಯಾತ್ ।
ಸ್ವಪ್ನಾಂಗನಾಸುರತವತ್ ಸ್ಥಾಣುವೇತಾಲ ಸಂಗವತ್ ॥ ೨೩ ॥

ಕಾರಣ ಆತ್ಮನ ಅಸ್ತಿತ್ವದಲ್ಲಿ ಪ್ರಮಾಣವೇ ಇಲ್ಲವಾಗಿಬಿಟ್ಟು, ಕೊನೆಗೆ ಶೂನ್ಯ ವಾದದಲ್ಲಿ ಪರ್ಯವಸಾನವಾಯಿತೆಂದು ಭ್ರಮಿಸಬೇಡ. ಏಕೆಂದರೆ,] ನಿತ್ಯಶುದ್ಧ ವಾಗಿಯೂ. ಅಸತ್ಯಗಳಾದ ಜ್ಞೇಯಗಳೊಂದೂ ಇಲ್ಲದೆಯೂ ಇರುವ ಪರಮಾರ್ಥ ಚಿದ್ರೂಪವು ಕಾಲದೇಶಗಳಿಂದ ಅಪರಿಚ್ಛಿನ್ನವಾಗಿ ಸರ್ವ ಕಾಲಗಳಲ್ಲಿಯೂ, ಸರ್ವ ದೇಶಗಳಲ್ಲಿಯೂ ಅಬಾಧಿತವಾಗಿದ್ದುಕೊಂಡಿರುವುದು. ದ್ವಿತ್ವಾದಿಗಳಿಂದ (ನಾನಾ ಭೇದಭಿನ್ನ ದ್ವೈತ ಜಗತ್ತಿನಿಂದ) ಉಪಲಕ್ಷಿತವಾದ ಬೇರೆ ಜ್ಞಾನವಾದರೋ, ಅವಿದ್ಯಾ ದೋಷ ದೂಷಿತವಾದ ದುಜ್ಞಾನವೆನ್ನಿಸುವುದು. ಅದಕ್ಕೆ ವಿಷಯವಾದ ಜ್ಞೇಯವು ಅನಿರ್ವಾಚ್ಯವಾಗಿ ನಿರೂಪಣಾನರ್ಹವಾಗಿರುವ ಕಾರಣ ಅಂತಹ ದುಜ್ಞಾನವು ಎಲ್ಲಿಯೂ ವಾಸ್ತವವಾಗಿ ಇಲ್ಲವೇ ಇಲ್ಲ.

೨೨. ಅತ್ಯಂತಾಸತ್ತಾದುದು ಆದರೂ ಕೂಡ ಒಂದು ವಸ್ತುವು ಅಜ್ಞಾನದ ದೆಸೆಯಿಂದ ಭ್ರಾಂತಿಯ ಮೂಲಕ ಸತ್ಯ ವಸ್ತುವಿನಂತೆ ಕಲ್ಪಿತ ರೂಪದಿಂದ ಅಂತಃ ಕರಣದೊಳಗೆ ಭಾವನಾ ವಿಷಯವಾಗಿ ತಿಳಿಯಲ್ಪಡ ವಾಗ ಅದು ನಮ್ಮ ಭಾವನಾನು ಸಾರವಾಗಿ ಸತ್ಯವಾಗಿಯೇ ಭಾಸಿಸುವುದು. ಅದು ಕಾರಣ, ವಸ್ತುತಃ ದುಃಖ ವಲ್ಲದುದನ್ನು (ಅದುಃಖ) ದುಃಖವೆಂದು ಮನಸ್ಸಿನಲ್ಲಿ ಭಾವಿಸುವುದರಿಂದ ಅದು ದುಃಖವಾಗಿಯೇ ತೋರುವುದು. ಹೇಗೆಂದರೆ, ಬೇತಾಳನೆಂಬುದು ವಸ್ತುತಃ ಇಲ್ಲದಿದ್ದರೂ (ಅಸತ್) ಯಾವುದೋ ಒಂದನ್ನು ಕಂಡು ಮಕ್ಕಳು ಅಜ್ಞಾನದಿಂದ ತಮ್ಮ ಮನಸ್ಸಿನಲ್ಲಿ ಬೇತಾಳನಲ್ಲದುದನ್ನು ಬೇತಾಳ ರೂಪದಿಂದ ಭಾವನೆ ಮಾಡಿ ತಿಳಿದರೆ, ಆಗ ಅದು ದೊಡ್ಡ ಸತ್ಯ ಬೇತಾಳವಾಗಿಯೇ ಸ್ಪಷ್ಟವಾಗಿ ಕಾಣು ವುದಲ್ಲವೇ !

೨೩. ಸ್ವಪ್ನದಲ್ಲಿ ಕಂಡು ಅನುಭವಿಸಿದ ಸ್ತ್ರೀ ಸಂಭೋಗಾದಿಗಳು ಅತ್ಯಂತಾ ಸತ್ತಾದರೂ, ಭ್ರಾಂತಿ ಮೂಲಕವಾದ ಸಂಸರ್ಗಾಧ್ಯಾಸದಿಂದ ಸತ್ಯವಾಗಿಯೇ ಪರಿ ಣಮಿಸುವುದು. ಮತ್ತು ಒಂದು ಸ್ಥಾಣುವನ್ನು (ಮೋಟು ಮರವನ್ನು)

ಅಸತ್ಪ್ರಾಯೋ ಹಿ ಸಂಬಂಧೋ ಯಥಾ ಸಲಿಲಕಾಷ್ಠಯೋಃ ।
ತಥೈವ ಮಿಥ್ಯಾಸಂಬಂಧಃ ಶರೀರ ಪರಮಾತ್ಮನೋಃ ॥ ೨೪ ॥

ಅಂತಃಸಂಗಂ ವಿನಾ ನಾಂಬು ಕಾಷ್ಠಪಾತೈಃ ಪ್ರಗೃಹ್ಯತೇ ।
ಆತ್ಮಾಂಗಸಂಗರಹಿತೋ ದೇಹದುಃಖೈರ್ನ ದಹ್ಯತೇ ॥ ೨೫ ॥

ದೇಹಭಾವನಯೈವಾತ್ಮಾ ದೇಹದುಃಖವಶೇ ಸ್ಥಿತಃ ।
ತತ್ತ್ಯಾಗೇನ ತತೋ ಮುಕ್ತೋ ಭವತೀತಿ ವಿದುರ್ಬುಧಾಃ ॥ ೨೬ ॥

ಮಂದಾಂಧಕಾರದಲ್ಲಿ ಮಕ್ಕಳು ನೋಡಿ ತಾದಾತ್ಮ್ಯಾಧ್ಯಾಸದಿಂದ ಅದನ್ನು ಬೇತಾಳನೆಂದು ದೃಢವಾಗಿ ಭಾವಿಸಿದರೆ ಅದು ವಸ್ತುತಃ ಬೇತಾಳನಲ್ಲದಿದ್ದರೂ ಸತ್ಯ ಬೇತಾಳವಾಗಿಯೇ ಪರಿಣಮಿಸುವುದು. ಹೀಗೆ ಅಂತಃಕರಣದಲ್ಲಿ ಭಾವನೆಯಿಂದ ದೃಢವಾಗಿ ನಿಶ್ಚಯಮಾಡಿಕೊಳ್ಳುವುದರ ಮೂಲಕ, ಯಾವದೊಂದು ಸಂಬಂಧವಿಲ್ಲದುದೂ ಕೂಡ ಆಧ್ಯಾಸಿಕ ಸಂಬಂಧಯುಕ್ತವಾದುದಾಗಿ ಪರಿಣಮಿಸುವುದು.

೨೪. ಜಲಕ್ಕೂ, ಕಾಷ್ಠಕ್ಕೂ ತೋರುವ ಸಂಬಂಧವು ಹೇಗೆ ಅಸತ್ಯಭೂತವಾದುದೋ (ಯಾವ ಬಗೆಯ ಸಂಬಂಧವಿಲ್ಲದಿದ್ದರೂ ಕೂಡ ಸಂಬಂಧವಿರುವಂತೆ ತೋರುವುದೋ) ಹಾಗೆಯೇ ಶರೀರಕ್ಕೂ, ಪರಮಾತ್ಮನಿಗೂ ತೋರುವ ಸಂಬಂಧವೂ ಅಷ್ಟೇ ಮಿಥ್ಯಾಭೂತವಾದುದು

೨೫. ನೀರಿನ ಮೇಲೆ ಪುನಃ ಪುನಃ ಕಟ್ಟಿಗೆಯನ್ನು ಎಸೆದರೂ ಕೂಡ, ಅಂತಃಸಂಗವಿಲ್ಲದ ಕಾರಣ, (ಅಹಂಕಾರಾಧ್ಯಾಸಾಭಾವದಿಂದ) ಆ ನೀರು ಹೇಗೆ ಕಾಷ್ಠಪಾತಗಳಿಂದ ಪೀಡಿಸಲ್ಪಡುವುದಿಲ್ಲವೋ ಹಾಗೆ ದೇಹಾದಿಗಳಲ್ಲಿ ಅಹಂಭಾವಾಧ್ಯಾಸ ಶೂನ್ಯನಾದ ಕಾರಣ, ಆತ್ಮನಿಗೂ ದೇಹ ದುಃಖಗಳಿಂದ ಯಾವ ಸಂತಾಪವೂ ಸುತರಾಂ ಸರ್ವಥಾ ಇರುವುದಿಲ್ಲ.

೨೬. ಅನಾತ್ಮ ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ಅಜ್ಞಾನದಿಂದ ಆರೋಪಿಸಿ (ಅಧ್ಯಾಸ ಮಾಡಿ) ಆತ್ಮನೆಂದು ಭಾವನೆ ಮಾಡುವುದರಿಂದಲೇ, ಆತ್ಮನು ಶಾರೀರಕ ದುಃಖಗಳಿಂದ ಪೀಡಿತನಾಗಿ, ಅವುಗಳಿಗೆ ಪರವಶನಾಗಿರುವನು. ಆ ಬಗೆಯಾದ (ದೇಹದಲ್ಲಿ ಆಧ್ಯಾಸಿಕವಾದ) ಆತ್ಮಭಾವನೆಯನ್ನು ಮಾಡದೆ ಬಿಟ್ಟು

ಅಂತಃಸಂಗವಿಹೀನತ್ವಾತ್ ದುಃಖವಂತ್ಯಂಗ ನೋ ಯಥಾ ।
ಪತ್ರಾಂಬುಮಲದಾರೂಣಿ ಶ್ಲಿಷ್ಟಾನ್ಯಪಿ ಪರಸ್ಪರಂ ॥ ೨೭ ॥

ಅಂತಃಸಂಗೇನ ರಹಿತಾ ಯಾಂತಿ ನಿರ್ದುಃಖತಾಂ ಪರಾಂ ।
ಶ್ಲಿಷ್ಟಾನ್ಯಪಿ ತಥೈವಾತ್ಮದೇಹೇಂದ್ರಿಯಮನಾಂಸ್ಯಲಂ ॥ ೨೮ ॥

ಬಿಟ್ಟರೆ ಆಗ ಸಕಲ ದುಃಖಗಳಿಂದಲೂ ವಿಮುಕ್ತನಾಗುವನು. [ದೇಹಾದಿಗಳಲ್ಲಿ ಅಹಂಭಾವ ಭಾವನೆಯನ್ನು ಮಾಡುವುದರಿಂದ, ಆತ್ಮನಿಗೆ ದೇಹದುಃಖಗಳು ಅಜ್ಞಾನದಿಂದಲೇ ಕಲ್ಪಿತಗಳಾಗಿ ಮಿಥ್ಯಾಭೂತವಾಗಿಯೇ ಸಂಭವಿಸುವುವು. ಆಗಲೂ ವಾಸ್ತವವಾಗಿ ಅಸಂಗನಾದ ಆತ್ಮನಿಗೆ ಸುಖ ದುಃಖಗಳೂ ತನ್ನಲ್ಲಿ ಅಜ್ಞಾನದಿಂದಲೇ ಅಧ್ಯಸ್ತವಾಗಿರುವುವು. ದೇಹಾದಿಗಳಲ್ಲಿ ಯಾವಾಗ ಅಹಂಕಾರಾಧ್ಯಾಸವೇ ಇಲ್ಲವಾಗಿ ಬಿಡುವುದೋ ಆಗಲೇ ಆಧ್ಯಾಸಿಕವಾದ ಸುಖದುಃಖಗಳೂ ಇಲ್ಲವಾಗಿ ಬಿಡುವುವು. ಅದೇ ವಾಸ್ತವವಾದ ಪಾರಮಾರ್ಥಿಕ ನಿತ್ಯ ಮುಕ್ತಾತ್ಮಸ್ಥಿತಿಯಾದ ಆನಂದೈಕರಸ ಸ್ವರೂಪವು, ಸ್ವತಃ ಸಿದ್ಧವಾದುದು] ಎಂದು ಅನುಭವಿಗಳಾದ ಜ್ಞಾನಿಗಳು ತಿಳಿದುಕೊಂಡಿರುವರು.

೨೭-೨೮. ವತ್ಸ, ರಾಮ, ಕೊಳದಲ್ಲಿ ಬಿದ್ದಿರುವ ಎಲೆ, ನೀರು, ಕೊಳೆ, ಮರಗಳು, ಪರಸ್ಪರ ಸಂಬಂಧವನ್ನು ಪಡೆದಿರತಕ್ಕವುಗಳಂತೆ, ಒಟ್ಟಿಗೆ ಕೂಡಿಕೊಂಡಿದ್ದರೂ ಕೂಡ, ಅಂತಃಸಂಗರಹಿತವಾಗಿರುವ ಕಾರಣ (ಅಭಿಮಾನವಿಲ್ಲದ ಕಾರಣ) ಇವುಗಳಲ್ಲಿ ಯಾವುದೊಂದು ನಷ್ಟವಾದರೂ, ಯಾವುದೊಂದಕ್ಕೂ ಹೇಗೆ ದುಃಖವುಂಟಾಗುವುದಿಲ್ಲವೋ ಹಾಗೆಯೇ, ವಸ್ತುತಃ ಯಾವ ಸಂಬಂಧವೂ ಇಲ್ಲದೆಯೇ ಇರುವ ಆತ್ಮ, ದೇಹ, ಇಂದ್ರಿಯ, ಮನಸ್ಸುಗಳು ಒಂದಕ್ಕೊಂದು ಸಂಬಂಧ ಪಡೆದಿರುವಂತೆ ತೋರುತ್ತಾ ಒಟ್ಟಿಗೆ ಒಂದೇ ಕಡೆ ಕೂಡಿಕೊಂಡಿದ್ದರೂ ಕೂಡ, ಅಂತಃ ಅಹಂಮಮಾಧ್ಯಾಸಶೂನ್ಯಗಳಾಗಿ ಅಭಿಮಾನ ರಾಹಿತ್ಯದಿಂದ, ಅವುಗಳಲ್ಲಿ ಯಾವುದೊಂದೂ ಸುತರಾಂ ದುಃಖಕ್ಕೆ ಒಳಪಡದೆಯೇ ಅತ್ಯುತ್ತಮವಾದ ನಿರುಪದ್ರವ ಸ್ಥಿತಿಯನ್ನು ಪಡೆದು ಸ್ವಸ್ಥವಾಗಿರುವುವು. [ಅನಾತ್ಮದೇಹ, ಇಂದ್ರಿಯ, ಮನಸ್ಸುಗಳಲ್ಲಿ ಅಹಂತಾರೂಪ ಆತ್ಮ ಚೈತನ್ಯಾಧ್ಯಾಸವಿಲ್ಲದ ಕಾರಣ, ಅವುಗಳಿಗೆ ಸುಖದುಃಖಾದಿಗಳನ್ನು ಅನುಭವ ಮಾಡತಕ್ಕ ಯೋಗ್ಯತೆಯೇ ಸರ್ವಥಾ ಇಲ್ಲವು. ಹೀಗೆ ಅವುಗಳಿಗೆ ಸುಖದುಃಖಗಳಿಲ್ಲವಾಯಿತು. ಇನ್ನು ಚೇತನನಾದ ಆತ್ಮನಿಗಾದರೋ ಅಸಂಗನೂ, ಅವಿಕ್ರಿಯನೂ ಆಗಿರುವ ಕಾರಣ,

ಅಂತಃಸಂಗೋ ಹಿ ಸಂಸಾರೇ ಸರ್ವೇಷಾಂ ರಾಮ ದೇಹಿನಾಂ ।
ಜರಾಮರಣಮೋಹಾನಾಂ ತರೂಣಾಂ ಬೀಜಕಾರಣಂ ॥ ೨೯ ॥

ಅಂತಃಸಂಸಂಗವಾನ್ ಜಂತುರ್ಮಗ್ನಃ ಸಂಸಾರಸಾಗರೇ ।
ಅಂತಃಸಂಸಕ್ತಿಮುಕ್ತಸ್ತು ತೀರ್ಣಃ ಸಂಸಾರಸಾಗರಾತ್ ॥ ೩೦ ॥

ದೇಹೇಂದ್ರಿಯ ಮನಸ್ಸು ಮೊದಲಾದ ಅನಾತ್ಮ ಜಡವಸ್ತುಗಳ ಮತ್ತು ಅವುಗಳ ಧರ್ಮಗಳ ಅಧ್ಯಾಸವಿಲ್ಲದೆ ಹೋಗಿ, ಶುದ್ಧ ಚಿದ್ರೂಪ ಆತ್ಮನಿಗೂ ಬಾಹ್ಯ ಸುಖ ದುಃಖಗಳ ಸಂಪರ್ಕವಿಲ್ಲವು. ವಸ್ತುಸ್ಥಿತಿಯು ಹೀಗಿದ್ದರೂ ಆತ್ಮ, ದೇಹ, ಇಂದ್ರಿಯ, ಮನಸ್ಸು ಇವುಗಳೆಲ್ಲವೂ ಅಜ್ಞಾನದಿಂದ ಒಟ್ಟುಗೂಡಿರುವಂತೆ ಭಾವಿಸಿಕೊಂಡು, ಭ್ರಾಂತಿಯಿಂದ ಅನ್ಯೋನ್ಯ ತಾದಾತ್ಮ್ಯಾಧ್ಯಾಸವನ್ನು ಮಾಡಿಕೊಂಡು, ಅವುಗಳಲ್ಲಿ ಯಾವುದೊಂದಕ್ಕೂ ಸಂಬಂಧಪಡದ ಬಾಹ್ಯ ದುಃಖಗಳನ್ನು ತಮ್ಮ ತಮ್ಮಲ್ಲಿಯೇ ಮಿಥ್ಯೆಯಾಗಿ ಕಲ್ಪಿಸಿ ಆರೋಪಣೆ ಮಾಡಿಕೊಂಡು ವ್ಯರ್ಥವಾಗಿಯೇ ನಾನು ದುಃಖಿಯು ನನ್ನ ದುಃಖ ಪರಿಹಾರಕ್ಕಾಗಿ ಪ್ರಯತ್ನಿಸಬೇಕು. ನಾನು ಸುಖಿಯು ಸುಖವನ್ನು ಸಂಪಾದನೆ ಮಾಡಿದೆನು. ಇತ್ಯಾದಿ ನಾನಾ ಪ್ರಕಾರಗಳಾದ ವ್ಯವಹಾರಗಳು ಲೋಕದಲ್ಲಿ ನಿತ್ಯವೂ ನಡೆಯುತ್ತಿರುವುವು. ಇದರ ವೈಚಿತ್ರ್ಯವನ್ನು ಎಷ್ಟು ವರ್ಣಿಸಿದರೂ ಸಾಲದು]

೨೯. ಅಯ್ಯ ರಾಮ, ನಿಜವಾಗಿಯೂ ಈ ಸಂಸಾರದಲ್ಲಿ ಸಕಲ ದೇಹಿಗಳಿಗೂ ಆಧ್ಯಾಸಿಕ ಸಂಬಂಧದಿಂದುಂಟಾದ ಅಭಿಮಾನವೇ ಜರಾ ಮರಣ ಮೋಹ ರೂಪ ದುಃಖಗಳೆಂಬ ವೃಕ್ಷಗಳಿಗೆ ಬೀಜ ಪ್ರಾಯವಾದ ಮೂಲ ಕಾರಣವಾಗಿರುವುದು.

೩೦. ಆಧ್ಯಾಸಿಕವಾದ ಅಂತಃ ಸಂಗದಿಂದ (ಅಭಿಮಾನದಿಂದ ತುಂಬಿರುವ ಪಶು ಪ್ರಾಯನಾದ ಅನಾತ್ಮಜ್ಞನು ಸಂಸಾರ ಸಾಗರದಲ್ಲಿ ಸರ್ವದಾ ಮುಳುಗಿ ಭ್ರಾಂತನಾಗಿ ದುಃಖಿತನಾಗುವನು ಅಂತಃ ಅಭಿಮಾನ ರಹಿತನಾದ ಜ್ಞಾನಿಯಾದರೋ ಸಂಸಾರ ಸಾಗರದಿಂದ ಉತ್ತೀರ್ಣನಾಗಿ ಸದಾಸ್ವಸ್ಥನಾಗಿರುವನು.

ಅತಂಃಸಂಸಗವಚ್ಚಿತ್ತಂ ಶತಶಾಖಮಿವೋಚ್ಯತೇ ।
ಅಂತಃಸಂಗರಹಿತಂ ವಿಲೀನಂ ಚಿತ್ತಮುಚ್ಯತೇ ॥ ೩೧ ॥

ಭಗ್ನ ಸ್ಫಟಿಕವದ್ವಿದ್ಧಿ ಮನಃ ಸಕ್ತಮಪಾವನಂ ।
ಅಭಗ್ನ ಸ್ಫಟಿಕಾಭಾಸಮಸಕ್ತಂ ವಿದ್ಧಿ ಮೇ ಮನಃ ॥ ೩೨ ॥

ಅಸಕ್ತಂ ನಿರ್ಮಲಂ ಚಿತ್ತಂ ಮುಕ್ತಂ ಸಂಸಾರ್ಯಪಿ ಸ್ಫುಟಂ ।
ಸಕ್ತಂ ತು ದೀರ್ಘತಪಸಾ ಯುಕ್ತಮಪ್ಯತಿಬಂಧವತ್ ॥ ೩೩ ॥

---

೩೧. ಅಂತಃ ಸಂಗಯುಕ್ತವಾಗಿರುವ ಚಿತ್ತವು ನೂರಾರು ಶಾಖೋಪ ಶಾಖೆಗಳಾಗಿ ಕವಲೊಡೆದು ವಿಜೃಂಭಿಸಿ ವಿಸ್ತಾರವಾಗಿ ಸರ್ವತ್ರ ಚಂಚಲವಾಗುವುದು. ಅಂತಸ್ಸಂಗರಹಿತವಾದ ಚಿತ್ತವಾದರೋ ಲಯಹೊಂದಿ ಬಿಟ್ಟು ಕಾರ್ಯಾಕ್ಷಮವಾಗಿರುವುದು.

೩೨. ಮನಸ್ಸು ಅಂತಃ ಅಭಿಮಾನ ಯುಕ್ತವಾಗಿ ವಿಷಯಾಸಕ್ತವಾದರೆ ಆಗ ಅದು ಒಳಗೆ ವಿಭಿನ್ನವಾಗಿರುವ ಸ್ಫಾಟಿಕಲಿಂಗವು ಪೂಜಾದಿಗಳಿಗೆ ಅಯೋಗ್ಯವೆನ್ನಿಸಿ ಅಪವಿತ್ರವೂ, ಹಾನಿಕರವೂ ಆಗಿರುವಂತೆಯೇ-ಅಪವಿತ್ರವೂ (ದೋಷ ದೂಷಿತವೂ) ಅನಿಷ್ಟಪ್ರದವೂ ಆದುದು ಎಂದು ತಿಳಿಯಬೇಕು. ರಾಮ, ಇಗೋ ನೋಡು. ಈ ನನ್ನ ಮನಸ್ಸು ಅಂತಃಸಂಗರಹಿತವಾಗಿ, ಅಭಿಮಾನಶೂನ್ಯವಾಗಿರುವುದು. ಇಂತಹ ಚಿತ್ತವು ಸರ್ವದಾ ಪೂಜಾಯೋಗ್ಯವಾದ ಸಕಲ ಶ್ರೇಯಃಪ್ರದವಾದ ಭಗ್ನವಾಗದ ಪ್ರಶಸ್ತವಾದ ಸ್ಫಾಟಿಕ ಲಿಂಗದಂತೆಯೇ ತೇಜಃ ಪುಂಜವಾಗಿಯೂ ಪವಿತ್ರವಾಗಿಯೂ ಪರಮ ಪುರುಷಾರ್ಥ ಹೇತು ಭೂತವಾಗಿಯೂ ಇರುವುದೆಂದು ತಿಳಿ.

೩೩. ಅಂತಸ್ಸಂಗ ರಹಿತವಾದ ಮನಸ್ಸು ಅವಿದ್ಯಕ ಸಕಲ ದೋಷರಾಹಿತ್ಯದಿಂದ ನಿರ್ಮಲವಾಗಿ ಪವಿತ್ರವಾಗಿರುವುದು. ಇಂತಹ ನಿರ್ಮಲವಾದ ಚಿತ್ತವು ಸರ್ವಥಾ ಅಭಿಮಾನ ರಹಿತವಾಗಿರುವ ಕಾರಣ ಸಂಸಾರದಲ್ಲಿ ಎಲ್ಲ ವ್ಯವಹಾರಗಳನ್ನು ಮಾಡುತ್ತಿದ್ದರೂ ಕೂಡ ಅದು ವಾಸ್ತವವಾಗಿ ಸಂಪೂರ್ಣವಾಗಿ ನಿತ್ಯ ಮುಕ್ತವಾದುದೇ ಸರಿ ಸಂದೇಹವಿಲ್ಲ. ಅಂತಸ್ಸಂಗ ಯುಕ್ತವಾಗಿದ್ದರೋ ಆ ಮನಸ್ಸು ಅಭಿಮಾನ ಸಹಿತವಾಗಿರುವ ಕಾರಣ ನಿರಂತರವೂ ತಪಶ್ಚರ್ಯೆಯಲ್ಲಿ ನಿರತವಾಗಿದ್ದರೂ ಕೂಡ ಬಹು ಹೆಚ್ಚಾಗಿ ದುರ್ಭೇದ್ಯವಾದ ಸಂಸಾರ ಬಂಧಕ್ಕೆ ಸಿಕ್ಕಿ ಬಿದ್ದಿರುವುದೇ ಆಗಿರುವುದು. ಸಂದೇಹವಿಲ್ಲ

ಅಂತಃಸಕ್ತಂ ಮನೋ ಬದ್ಧಂ ಮುಕ್ತಂ ಸಕ್ತಿವಿವರ್ಜಿತಂ ।
ಅಂತಃಸಂಸಕ್ತಿರೇವೈಕಂ ಕಾರಣಂ ಬಂಧಮೋಕ್ಷಯೋಃ ॥ ೩೪ ॥

ಅಂತಃ ಸಂಸಕ್ತಿಮುಕ್ತಸ್ಯ ಕುರ್ವತೋಽಪಿ ನ ಕರ್ತೃತಾ ।
ಗುಣದೋಷವತೀ ತೋಯೇ ದಾರುವಾಹನನೌರ್ಯಥಾ ॥ ೩೫ ॥

ಅಂತಃಸಂಸಕ್ತಿತೋ ಜಂತೋರಕರ್ತುರಪಿ ಕರ್ತೃತಾ ।
ಸುಖದುಃಖವತೀ ಸ್ವಪ್ನೇ ಸಂಭ್ರಮೋನ್ಮುಖತಾ ಯಥಾ ॥ ೩೬ ॥

---

೩೪. ಅಂತಸ್ಸಂಗದಿಂದ ಯುಕ್ತವಾದ ಮನಸ್ಸು ಸರ್ವದಾ ಸಂಸಾರಬದ್ಧವೇ. ಅಂತಸ್ಸಂಗವಿವರ್ಜಿತವಾದ ಮನಸ್ಸು ಹೇಗಿದ್ದರೂ ಯಾವಾಗಲೂ ಸಂಸಾರಬಂಧಕ್ಕೆ ಸಿಕ್ಕದ ನಿತ್ಯಮುಕ್ತವೇ. ಹೀಗೆ ಸಂಸಾರ ಬಂಧಕ್ಕೂ ಮೋಕ್ಷಕ್ಕೂ ಕೂಡ ಅಂತಃ ಸಂಗರೂಪ ಅಭಿಮಾನವು ಒಂದೇ ಮುಖ್ಯ ಕಾರಣವು ಅಭಿಮಾನ ಸಾಹಿತ್ಯ ಮತ್ತು ಅಭಿಮಾನ ರಾಹಿತ್ಯ ಕ್ರಮವಾಗಿ ಬಂಧ ಮೋಕ್ಷ ಹೇತುಗಳು.

೩೫. ಮರದ ದಿಮ್ಮಿಗಳನ್ನು ಒಟ್ಟುಗೂಡಿಸಿ ಕಟ್ಟಿದ ನಾವೆಯನ್ನು ನೀರಿನಮೇಲೆ ನಡೆಯಿಸಿಕೊಂಡು ಹೋಗುತ್ತಿದ್ದರೂ ಕೂಡ ಅದು ದಾರುಮಯವೇ ಆಗಿದ್ದರೂ ಅದಕ್ಕೆ ಸಂಬಂಧಿಸಿದ ಛೇದ ಭೇದಾದಿ ಗುಣ ದೋಷಗಳೂ ಮತ್ತು ನೀರಿನ ಸಂಬಂಧವಾದ ಚಲನ, ಪರಿವರ್ತನ (ಬೇಕಾದ ದಿಕ್ಕಿಗೆ ತಿರುಗಿಸುವಿಕೆ) ಮುಂತಾದ ಗುಣ ದೋಷಗಳೂ ಮತ್ತು ನಾನು ತೇಲಿಕೊಂಡು ಹೋಗುತ್ತಿರುವೆನು ಎಂಬ ಕರ್ತೃತ್ವಾಭಿಮಾನವೂ ಹೇಗೆ ಸುತರಾಂ ಇಲ್ಲವೋ ಹಾಗೆಯೇ ಅಂತಸ್ಸಂಗರೂಪ ಅಭಿಮಾನ ವಿವರ್ಜಿತನಾದ ಮಹಾತ್ಮನು ಕ್ರಮ ಪ್ರಾಪ್ತವಾದ ಸಕಲ ವ್ಯವಹಾರಗಳನ್ನು ಮಾಡುತ್ತಾ ಇರುವಂತೆ ತೋರಿದರೂ ಅವನಿಗೆ ವಾಸ್ತವವಾಗಿ ಕರ್ತೃತ್ವವೂ ಅದರ ಗುಣ ದೋಷಗಳೂ ಸುತರಾಂ ಇಲ್ಲವೇ ಇಲ್ಲ.

೩೬. ಕನಸನ್ನು ಅನುಭವಿಸುತ್ತಿರುವ ಮನುಷ್ಯನು ತನ್ನ ಕೋಣೆಯಲ್ಲಿಯೇ ಹಾಸಿಗೆಯಮೇಲೆಯೇ ಮಲಗಿರುವವನಾಗಿದ್ದರೂ ಅವನು ಕಾಡಿಗೆ ಹೋದುದೂ ಅಲ್ಲಿ ವ್ಯಾಘ್ರಗಳನ್ನು ಕಂಡುದೂ ಭಯದಿಂದ ಓಡಿದುದೂ ಇತ್ಯಾದಿ ವ್ಯವಹಾರಗಳು ಒಂದೂ ವಾಸ್ತವವಾಗಿ ನಡೆಯದಿದ್ದರೂ ಕೂಡ ಅಂತಃಸಂಗವಶದಿಂದ ಮೇಲೆ ಹೇಳಿದ ವ್ಯವಹಾರಗಳಿಗೆಲ್ಲಾ ಹೇಗೆ ಕರ್ತೃವೆನ್ನಿಸುವನೋ ಮತ್ತು ಆ ಕರ್ತೃತ್ವ ಮೂಲಕವಾದ ಸುಖದುಃಖಾನುಭವಗಳಿಗೆ ಭಾಗಿಯಾಗುವನೋ

ಚಿತ್ತೇ ಕರ್ತರಿ ಕರ್ತೃತ್ವಮದೇಹಸ್ಯಾಪಿ ವಿದ್ಯತೇ ।
ಸ್ವಪ್ನಾದಾವಿವ ವಿಕ್ಷುಬ್ಧ ಸುಖದುಃಖದೃಶೋಪಮಂ ॥ ೩೭ ॥

ಹಾಗೆಯೇ ಅಂತಸ್ಸಂಗ ಯುಕ್ತನಾದ ಅನಾತ್ಮಜ್ಞನು ನಿಜವಾಗಿ ಯಾವ ಕೆಲಸವನ್ನೂ ಮಾಡದೆ ಒಂದುಕಡೆ ಕುಳಿತಿರುವಂತೆ ಕಂಡುಬಂದರೂ ಅವನು ವಾಸ್ತವವಾಗಿ ಸಕಲ ವ್ಯವಹಾರಗಳನ್ನೂ ಮಾಡುತ್ತಿರುವವನಾಗಿ ಕರ್ತೃತ್ವವನ್ನೂ ಆದರ ಮೂಲಕ ಸುಖ ದುಃಖಾನುಭವವನ್ನೂ ಪಡೆಯುವನು.

[ಈ ವಿಚಾರವನ್ನು ಕರ್ಮಣ್ಯಕರ್ಮಯಃ ಪಶ್ಯೇತ್ ಇತ್ಯಾದಿ ಭಗವದ್ಗೀತೆಯ ಅಧ್ಯಾಯ ೪ ಶ್ಲೋಕ ೧೮ರಲ್ಲಿಯೂ ಅದರ ಭಾಷ್ಯದಲ್ಲಿಯೂ ಸ್ಪಷ್ಟವಾಗಿ ವರ್ಣಿಸಿದೆ ಮತ್ತು ಇಲ್ಲಿಯೂ, ಹಿಂದಿನ ಸಂಪುಟದಲ್ಲಿ ಕನ್ನಡ ಭಾಷೆಯಲ್ಲಿ ವಿವರಿಸಿಯೂ ಇದೆ.]

೩೭. ಸ್ವಪ್ನಾದ್ಯವಸ್ಥೆಗಳಲ್ಲಿ ದೇಹವು ಇದ್ದಲ್ಲಿಯೇ ಕಟ್ಟಿ ಕದಲದೆ ಇದ್ದು ಕೊಂಡು ಯಾವುದೊಂದು ಚೇಷ್ಟೆಯನ್ನೂ ವ್ಯವಹಾರವನ್ನೂ ಮಾಡದೆ ಇರುವುದು ಆದರೆ ಮನಸ್ಸು ಮಾತ್ರವೇ ನಾನಾ ವ್ಯವಹಾರಗಳನ್ನೂ ಮಾಡುತ್ತಿರುವುದು. ಈ ಕಾರಣದಿಂದ ಮನಸ್ಸು ಕೃತ್ಯರ್ಯವಾಗಿದ್ದುಕೊಂಡಿರಲು ದೇಹ ಚೇಷ್ಟಾ ಶೂನ್ಯ ನಾದವನಿಗೂ ಕರ್ತೃತ್ವವೂ ತನ್ಮೂಲಕ ಸುಖ ದುಃಖ ಭೋಕ್ತೃತ್ವವೂ ಸ್ವತಃ ಸಿದ್ಧವು ಈ ಸ್ವಪ್ನ ದೃಷ್ಟಾಂತದಂತೆಯೇ ಜಾಗ್ರತ್ತಿನಲ್ಲಿಯೂ ಕೂಡ ತಾನು ತನ್ನ ದೇಹವನ್ನೂ ಕದಲಿಸದೆ ಯಾವ ವ್ಯವಹಾರವನ್ನೂ ಮಾಡದೆ ಇದ್ದರೂ ತನ್ನ ಮಕ್ಕಳು ಭೃತ್ಯರು ಮಾಡುತ್ತಿರುವ ಯುದ್ಧಾದಿ ವ್ಯಾಪಾರವನ್ನು ನೋಡುತ್ತಾ ತಟಸ್ಥ ನಾಗಿದ್ದರೂ ಚಿತ್ತದಲ್ಲಿ ತನ್ನವರು ತನಗಾಗಿ ಯುದ್ಧ ಮಾಡುತ್ತಿರುವರು ಎಂಬ ಅಭಿ ಮಾನವನ್ನಿಟ್ಟುಕೊಂಡು ಭಾವಿಸುವುದರಿಂದ ಮನಸ್ಸು ಕರ್ತೃತ್ವವೂ ಆ ವ್ಯವಹಾರ ಜನ್ಯವಾದ ಸುಖ ದುಃಖಗಳ ಲಾಭನಷ್ಟಗಳ ಅನುಭವವೂ ಸಿದ್ಧಿಸುವುವು ಹೀಗೆ ಮನೋವ್ಯಾಪಾರದಿಂದ ವ್ಯಾಕುಲನಾದವನಿಗೆ ಸುಖ ದುಃಖಾನುಭವವೂ ಜಾಗ್ರತ್ತಿ ನಲ್ಲಿಯೂ ಸ್ವಪ್ನದಲ್ಲಿಯೂ ಒಂದೇ ಸಮನಾಗಿರುವುದರಿಂದ ಮನಸ್ಸಿನ ಕರ್ತೃತ್ವ ಮೂಲಕವಾದ ಕರ್ತೃತ್ವವೂ ಕೂಡ ಮುಖ್ಯ ಕರ್ತೃಸದೃಶವಾದುದೇ ಸರಿ.

ಅಕರ್ತರಿ ಮನಸ್ಯಂತರಕರ್ತೃತ್ವಂ ಸ್ಫುಟಂ ಭವೇತ್ ।
ಶೂನ್ಯಚಿತ್ತೋ ಹಿ ಪುರುಷಃ ಕುರ್ವನ್ನಪಿ ನ ಚೇತತಿ ॥ ೩೮ ॥

ಚೇತಸಾ ಕೃತಮಾಪ್ನೋಷಿ ಚೇತಸಾ ನ ಕೃತಂ ತು ನ ।
ನ ಕ್ವಚಿತ್ಕಾರಣಂ ದೇಹೋ ನ ಚ ಚಿತ್ತೇ ನ ಕರ್ತೃತಾ ॥ ೩೯ ॥

[ಒಬ್ಬ ಚಕ್ರವರ್ತಿಯು ತಾನೇ ಸ್ವತಃ ರಣರಂಗದಲ್ಲಿ ನಿಂತು ಯುದ್ಧಮಾಡದೆ ಇದ್ದರೂ ಕೂಡ ಅವನ ಭೃತ್ಯರಾದ ಸೈನಿಕರು ಮಾಡುವ ಯುದ್ಧದಿಂದಲೇ ತಾನು ಯುದ್ಧ ಮಾಡುತ್ತಿರುವನೆಂದು ಭಾವಿಸಿಕೊಂಡು ಅದರಿಂದ ಸಂಭವಿಸುವ ಜಯಾಪಜಯಗಳನ್ನೂ ಅನುಭವಿಸುವನು. ಮತ್ತು ಒಬ್ಬ ದಳ್ಳಾಳಿಯು ಅಥವಾ ಗುಮಾಸ್ತೆ ಮುಂತಾದ ತನ್ನ ಪ್ರತಿನಿಧಿಗಳ ಮೂಲಕ ವ್ಯಾಪಾರ ಮಾಡುವ ಯಜಮಾನನು ತಾನೆ ಸ್ವತಃ ವ್ಯಾಪಾರ ಮಾಡುವನೆಂಬ ಅಭಿಮಾನವನ್ನಿಟ್ಟುಕೊಂಡಿರುವ ಕಾರಣ (ತನಗಾಗಿ ಅವರು ಮಾಡುವ ವ್ಯಾಪಾರದಿಂದ) ಪ್ರಾಪ್ತವಾಗುವ ಲಾಭ ನಷ್ಟಗಳಿಗೂ ಗುರಿಯಾಗುವನು. ಇದು ಲೋಕದಲ್ಲಿ ಅನುಭವಸಿದ್ಧವು.)

೩೮. ಮನಸ್ಸು ಒಳಗೆ ನಿಜವಾಗಿಯೇ ಯಾವ ವ್ಯವಹಾರವನ್ನೂ ಮಾಡದೆ ಅಕರ್ತೃವಾಗಿದ್ದುಕೊಂಡಿರಲು ದೇಹ ಚೇಷ್ಟಾ ಸಹಿತನಾಗಿದ್ದರೂ ಕೂಡ ಆಗ ತನಗೆ ಯಥಾರ್ಥವಾಗಿಯೇ ಅಕರ್ತೃತ್ವವು ಸ್ಪಷ್ಟವಾಗಿಯೇ ಸಿದ್ಧನಾಗಿರುವುದು. ಏಕೆಂದರೆ ಅಮನಸ್ಕನಾದ ಮನುಷ್ಯನು ಸಕಲ ವ್ಯವಹಾರಗಳನ್ನೂ ಮಾಡುತ್ತಿದ್ದರೂ ಕೂಡ (ಅಭಿಮಾನ ರಹಿತನಾಗಿರುವ ಕಾರಣದಿಂದಲೇ) ತಾನು ಕರ್ತೃವೆಂಬ ಅಭಿಮಾನವನ್ನೂ ಮಾಡಿಕೊಳ್ಳುವುದೇ ಇಲ್ಲ. [ನ್ಯಾಯಾಸ್ಥಾನದಲ್ಲಿಯೂ ಕೂಡ ಮನಃಪೂರ್ವಕವಾಗಿ ಮಾಡದೆಯೇ ಅಕಸ್ಮಾತ್ತಾಗಿ ನಡೆದ ಹತ್ಯಾದಿ ಮಹಾಪರಾಧಗಳನ್ನೂ ಕೂಡ ನ್ಯಾಯವಾದಿಗಳು ಉಪೇಕ್ಷಿಸುವರು.]

[ಈ ವಿಷಯವು ಭಗವದ್ಗೀತೆಯ ಅಧ್ಯಾಯ ೫ ಶ್ಲೋಕ ೮-೯ ನೈವಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ಇತ್ಯಾದಿ ಶ್ಲೋಕಗಳಲ್ಲಿ ಸ್ಪಷ್ಟವಾಗಿದೆ ಮತ್ತು ತ್ಯಕ್ತ್ವಾ ಕರ್ಮ ಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ಕರ್ಮಣ್ಯಭಿ ಪ್ರವೃತ್ತೋಽಪಿ ನೈವಕಿಂಚಿತ್ ಕರೋತಿಸಃ ಗೀತಾ ೪-೨೦ ನೋಡಿ.]

೩೯. ಅಯ್ಯ ರಾಮ, ಮನಸ್ಸು ಯಾವ ಕೆಲಸವನ್ನು ಮಾಡುವುದೋ, ಅದರ ಫಲವನ್ನೇ ನೀನು ಅವಶ್ಯವಾಗಿ ಅನುಭವಿಸುವೆ. ಮನಸ್ಸು ಮಾಡದೇ

ಅಸಂಸಕ್ತಮಕರ್ತ್ರೇವ ಕುರ್ವದೇವ ಮನೋ ವಿದುಃ ।
ನ ಕರ್ಮಫಲಭೋಕ್ತೃತ್ವಮಸಕ್ತಂ ಪ್ರತಿಪದ್ಯತೇ ॥ ೪೦ ॥

ಬ್ರಹ್ಮಹತ್ಯಾಶ್ವಮೇಧಾಭ್ಯಾಮಸಂಸಕ್ತೋ ನ ಲಿಪ್ಯತೇ ।
ದೂರಸ್ಥಕಾಂತಾ ಸಂಲೀನಮನಾಃ ಕಾರ್ಯೈರಿವಾಗ್ರಗೈಃ ॥ ೪೧ ॥

ಇರತಕ್ಕಂಥ ಕೆಲಸವೇ ಲೋಕದಲ್ಲಿ ಇಲ್ಲ. ದೇಹವು ಯಾವುದೊಂದು ಕೆಲಸದಲ್ಲಿಯೂ ಕಾರಣವಲ್ಲವು. ಮನಸ್ಸಿನಲ್ಲಿ ಕರ್ತೃತ್ವರೂಪಶಕ್ತಿ ಇದ್ದೇ ಇರುವುದು. (ಕರ್ತೃತ್ವವಿಲ್ಲವೆಂಬುದು ಇಲ್ಲ.) [ಮನಸ್ಸಿಗೆ ಕರ್ತೃತ್ವಶಕ್ತಿಯು ಇಲ್ಲದೆ ಇದ್ದಿದ್ದರೆ, ಆಗ ಅದು ದೇಹವನ್ನು ಕರ್ತೃವನ್ನಾಗಿ ಕಲ್ಪಿಸಬೇಕಾಗಿದ್ದಿತು. ಮನಸ್ಸಿಗೇನೇ ಕರ್ತೃತಾ ಶಕ್ತಿಯಿರುವುದರಿಂದ ದೇಹವು ಎಷ್ಟು ಮಾತ್ರವೂ ಯಾವ ಕಾರ್ಯದಲ್ಲಿಯೂ ಕರ್ತೃವಲ್ಲವೆಂದರ್ಥ.]

೪೦. ಅಂತಸ್ಸಂಗರಹಿತವಾದ ಮನಸ್ಸು ಕಾರ್ಯಗಳನ್ನು ಮಾಡುತ್ತಿದ್ದರೂ ಕೂಡ ಅದು ಅಭಿಮಾನ ಶೂನ್ಯವಾಗಿರುವ ಕಾರಣ ಅಕರ್ತೃವೆಂದೇ ಪ್ರಾಜ್ಞರು ಹೇಳುವರು. ಅಂತೆಯೇ ಮನಸ್ಸು ಅಂತಸ್ಸಂಗರಹಿತವಾಗಿ ಕರ್ಮಫಲಾನುಭವವನ್ನು ಪಡೆಯುವುದಿಲ್ಲ. (ಕರ್ತೃತ್ವವೂ ಇಲ್ಲ. ಭೋಕ್ತೃತ್ವವೂ ಇಲ್ಲ)

೪೧. ಎಲ್ಲಿಯೋ ಬಹುದೇಶದಲ್ಲಿರುವ ಹೆಂಡತಿಯನ್ನು ಸ್ಮರಿಸುತ್ತಾ ಅವಳಲ್ಲಿಯೇ ನೆಟ್ಟ ಮನಸ್ಸುಳ್ಳ ಕಾಮುಕನು, ತನ್ನ ಎದುರಿನಲ್ಲಿಯೇ ಇರುವುದಾದರೂ, ಶೀತೋಷ್ಣ ಸುಖದುಃಖ ಇತ್ಯಾದಿ ವಿಷಯಗಳ ಅನುಭವ ಮುಂತಾದ ಕಾರ್ಯಗಳಿಂದ ಹೇಗೆ ವಿಲಿಪ್ತನಾಗುವುದಿಲ್ಲವೋ ಹಾಗೆಯೇ ಮನಸ್ಸಿನಲ್ಲಿ ಉದ್ದೇಶವಿಲ್ಲದೆಯೂ, ಅಭಿಮಾನರಹಿತವಾಗಿಯೂ ಅಂತಃಸಂಗರಹಿತನಾಗಿ) ಅಕಸ್ಮಾತ್ ಬ್ರಹ್ಮಹತ್ಯಾದಿ ಮಹಾಪಾಪಗಳನ್ನು ಮಾಡಿದರೂ, ಅಶ್ವಮೇಧಾದಿ ಮಹಾಯಾಗಗಳನ್ನು ಯಥಾವಿಧಿಯಾಗಿ ಅನುಷ್ಠಾನ ಮಾಡಿದರೂ, ಅವುಗಳೊಂದರಿಂದಲೂ ಫಲಭಾಗಿಯಾಗದೆ ನಿರ್ಲಿಪ್ತನಾಗಿಯೇ ಇರುವನು.

ಅಂತಃಸಂಸಕ್ತಿನಿರ್ಮುಕ್ತೋ ಜೀವೋ ಮಧುರವೃತ್ತಿಮಾನ್ ।
ಬಹಿಃಕುರ್ವನ್ನಕುರ್ವನ್ವಾ ಕರ್ತಾ ಭೋಕ್ತಾ ನಹಿ ಕ್ವಚಿತ್ ॥ ೪೨ ॥

ಅಂತಃ ಸಂಸಕ್ತಿಮುಕ್ತಂ ಯನ್ಮನಃ ಸ್ಯಾತ್ತದಕರ್ತೃಕಂ ।
ತದ್ವಿಮುಕ್ತಂ ಪ್ರಶಾಂತಂ ತತ್ತದ್ಯುಕ್ತಂ ತದಲೇಪಕಂ ॥ ೪೩ ॥

ತಸ್ಮಾತ್ಸರ್ವಪದಾರ್ಥಾನಾಂ ಶ್ಲಿಷ್ಟಾನಾಂ ನಿಶ್ಚಿತಂ ಬಹಿಃ ।
ಸರ್ವದುಃಖಕರೀಂ ಕ್ರೂರಾಮಂತಃಸಕ್ತಿಂ ವಿವರ್ಜಯೇತ್ ॥ ೪೪ ॥

---

೪೨. ಅಂತಸ್ಸಂಗವನ್ನು ಸಂಪೂರ್ಣವಾಗಿ ಪರಿತ್ಯಾಗ ಮಾಡಿರುವ ಮಹಾನುಭಾವನು ಸರ್ವದಾ ವಿಕ್ಷೇಪರಹಿತವಾದ ಸೌಖ್ಯವುಳ್ಳವನಾಗಿರುವನು. ಅಂತಹವನು ಬಾಹ್ಯ ವ್ಯಾಪಾರಗಳನ್ನು ಮಾಡುತ್ತಿರಲಿ ಅಥವಾ ಮಾಡದೆ ಸುಮ್ಮ ನಿರಲಿ ಹೇಗಿದ್ದರೂ ಯಾವಾಗಲೂ ಎಲ್ಲಿಯೂ ಅವನು ಕರ್ತೃವೂ ಅಲ್ಲ ಮತ್ತು ಭೋಕ್ತೃವೂ ಅಲ್ಲ.

೪೩. ಯಾವ ಮನಸ್ಸು ಸಂಪೂರ್ಣವಾಗಿ ಅಂತಸ್ಸಂಗವನ್ನು ಪರಿತ್ಯಾಗ ಮಾಡಿರುವುದೋ ಅಂತಹ ಮನಸ್ಸು ಕರ್ತೃತ್ವಶೂನ್ಯವಾದುದು (ಅಕರ್ತೃ) ಅದೇ ವಿಮುಕ್ತವಾದುದು. (ಸಂಸಾರಬಂಧ ವರ್ಜಿತ) ಅದೇ ಪ್ರಶಾಂತವಾದುದು. ಅದೇ ಯೋಗಿಯು. ನಿರ್ಲಿಪ್ತವಾದುದೂ ಅದೇಯೇ. ಹೀಗೆ ಸಂಸಕ್ತಿತ್ಯಾಗ ಮಾತ್ರದಿಂದಲೇ ಮನಸ್ಸಿನಲ್ಲಿ ಸಕಲ ಜೀವನ್ಮುಕ್ತ ಧರ್ಮಗಳೂ ಫಲಿಸುವುವು.

೪೪. ಸರ್ವಾಂತರನಾದ ಆತ್ಮನಿಗೆ ಸ್ವಲ್ಪವೂ ಸಂಬಂಧವಿಲ್ಲದಂತೆ ಹೊರಗೆ ಒಟ್ಟಿಗೆ ಏಕತ್ರಮಿಳಿತವಾಗಿರುವ ಅನ್ನಮಯಾದಿ ಪಂಚಕೋಶಗಳೆಂಬ ಮತ್ತು ಭೋಗ್ಯವರ್ಗಗಳೆಂಬ ಸರ್ವಥಾ ಬಂಧ-ಹೇತುಗಳಾದ ಸಕಲ ಬಾಹ್ಯ ಪದಾರ್ಥಗಳನ್ನು ನಿರಸನ ಮಾಡುವ ವಿಷಯದಲ್ಲಿ, ಅತ್ಯಂತ ಕ್ರೂರವಾಗಿಯೂ ಸಕಲ ದುಃಖಗಳಿಗೆ ಮೂಲ ಕಾರಣವಾಗಿಯೂ ಇರುವ ಅಂತಸ್ಸಂಗವನ್ನು ಬಿಟ್ಟು ಬಿಡುವಿಕೆಯೆಂಬುದೊಂದೇ ನಿಶ್ಚಿತವಾದ ಮುಖ್ಯೋಪಾಯವು.

ವಿರಹಿತಮಲಮಂತಃಸಕ್ತಿದೋಷೇಣ ಚೇತಃ
ಶಮಮುಪಗತಮಾದ್ಯಂ ವ್ಯೋಮವನ್ನಿರ್ಮಲಾಭಂ ।
ಸಕಲಮಲವಿಮುಕ್ತೇನಾತ್ಮನೈಕತ್ವಮೇತಿ
ಸ್ಥಿರಮಣಿನಿಭಮಂಭೋವಾರಿಣೀ ವಾರಿನೀಲೇ ॥ ೪೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಸುರಘು ವೃತ್ತಾಂತೇ “ ಅಂತಃಸಂಸಂಗವಿಚಾರೋ ” ನಾಮ ಸಪ್ತಷಷ್ಟಿತಮಃ ಸರ್ಗಃ.

---

೪೫. ಮನಸ್ಸು ಅಭಿಮಾನರೂಪವಾದ ಅಂತಃಸಂಗವೆಂಬ ಮಹಾನರ್ಥಕಾರಿಯಾದ ದೋಷದಿಂದ ಅತ್ಯಂತ ಸಂಪೂರ್ಣವಾಗಿ ವಿರಹಿತವಾಗಿದ್ದು ಆ ಕಾರಣದಿಂದ (ಪ್ರಾಥಮಿಕ ಸಂಸಾರ ದೆಸೆಗಿಂತಲೂ ಹಿಂದಿನ ಕಾಲದ) ಪ್ರಪಂಚೋಪಶಮ (ನಿಷ್ಪ್ರಪಂಚ) ರೂಪ ಅನಾದಿ ಶಾಶ್ವತ ಪ್ರತ್ಯಗಾತ್ಮಭಾವವನ್ನು ಹೊಂದಿಬಿಟ್ಟರೆ ಆಗ ಅದು ಮಹಾಕಾಶದಂತೆ ನಿರ್ಮಲವಾಗಿ ಪ್ರಕಾಶಿಸುವುದು. ಮತ್ತು ಸ್ಫಟಿಕ ಶಿಲೆಯಂತೆ ಸ್ವಚ್ಛವಾದ ನಿರ್ಮಲೋದಕವು, ಹರಿತವಾದ ಅಲಗುಗಳುಳ್ಳ ಖಡ್ಗಗಳಂತೆ ನೀಲವಾದ ನೀರಿನೊಂದಿಗೆ ಮಿಳಿತವಾಗಿ ಐಕ್ಯವನ್ನು ಹೊಂದುವಂತೆ. ಆ ಶುದ್ಧವಾದ ಉದಾರವಾದ ಮನಸ್ಸು, ಅವಿದ್ಯಾದಿ ಸಕಲಮಲ ವಿಮುಕ್ತನಾದ ನಿತ್ಯ ಶುದ್ಧ ಬುದ್ಧ ಮುಕ್ತಸ್ವಭಾವನಾದ, ಸಚ್ಚಿದಾನಂದಾತ್ಮಕ ಪರಮಾತ್ಮನೊಂದಿಗೆ ಮಿಳಿತವಾಗಿ ಐಕ್ಯವನ್ನು ಹೊಂದಿ ನಿತ್ಯಮುಕ್ತಾತ್ಮ ಸ್ಥಿತಿಯನ್ನು ಪಡೆಯುವುದು. [ಅಂತಃಸಂಗ, ಅಂತಸ್ಸಂಸಂಗ, ಅಂತಸ್ಸಕ್ತಿ ಅಂತಸ್ಸಂಸಕ್ತಿ, ಈ ಪದಗಳೆಲ್ಲವೂ ಸಮಾನಾರ್ಥಕಗಳು.]

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ ಸುರಘು ವೃತ್ತಾಂತದೊಳಗೆ “ಅಂತಸ್ಸಂಸಂಗ ವಿಚಾರ”ವೆಂಬ ಅರವತ್ತೇಳನೆಯ ಸರ್ಗವು.

ಅಷ್ಟಷಷ್ಟಿತಮಃ ಸರ್ಗಃ

ಶ್ರೀರಾಮ ಉವಾಚ

ಕೀದೃಶೋ ಭಗವನ್ ಸಂಗಃ ಕಥಂ ಬಂಧಾಯ ವಾ ನೃಣಾಂ ।
ಕಶ್ಚ ಮೋಕ್ಷಾಯ ಕಥಿತಃ ಕಥಂ ವೈಷ ಚಿಕಿತ್ಸ್ಯತೇ ॥ ೧ ॥

ಶ್ರೀ ವಸಿಷ್ಠ ಉವಾಚ :—

ದೇಹದೇಹಿವಿಭಾಗೈಕಪರಿತ್ಯಾಗೇನ ಭಾವನಾತ್ ।
ದೇಹಮಾತ್ರೇ ತು ವಿಶ್ವಾಸಃ ಸಂಗೋ ಬಂಧಾರ್ಹ ಉಚ್ಯತೇ ॥ ೨ ॥

ಅರವತ್ತೆಂಟನೆಯ ಸರ್ಗವು

ಶ್ರೀರಾಮನು ಹೇಳಿದನು :—

೧. ಪೂಜ್ಯ ಗುರುಗಳೇ, (ಭಗವಂತನೇ) ಅಂತಸ್ಸಂಸಂಗವೆಂಬುದು ಎಂತಹುದು ? ಅದು ಯಾವ ಪ್ರಕಾರವಾಗಿ ಮನುಷ್ಯನಿಗೆ ಬಂಧಹೇತುವಾಗುವುದು. ಮತ್ತು ಮನುಷ್ಯರ ಮೋಕ್ಷಸಾಧನವಾದ ಅಂತಸ್ಸಂಸಂಗವು ಎಂತಹುದಾಗಿರುವುದು? ಮತ್ತು ಬಂಧಹೇತುವಾದ ಈ ಅಂತಃಸಂಸಂಗವನ್ನು ಚಿಕಿತ್ಸೆ ಮಾಡುವ ಪ್ರಕಾರವಾವುದು ? (ಹೇಗೆ ಪರಿಹರಿಸಿಕೊಳ್ಳಲಾಗುವುದು ? ಎಂದರ್ಥ)

ಶ್ರೀ ವಸಿಷ್ಠರು ಹೇಳಿದರು :—

೨. ಅಯ್ಯ ರಾಮ, ಕ್ಷೇತ್ರವೆನ್ನಿಸಿದ ದೇಹವು ಅತ್ಯಂತ ಜಡಸ್ವಭಾವವು. ದೇಹಿಯಾದ ಕ್ಷೇತ್ರಜ್ಞನಾದರೋ ಕೇವಲ ಚಿದ್ರೂಪನು. ಹೀಗೆ ದೇಹ ದೇಹಿಗಳ ಪರಸ್ಪರ ಅತ್ಯಂತ ವಿರುದ್ಧ ಸ್ವಭಾವಗಳನ್ನು ಆತ್ಯಂತಿಕವಾಗಿ ಪರ್ಯಾಲೋಚಿಸದೆಯೇ ಅವಿವೇಕದಿಂದ ಅನ್ಯೋನ್ಯ ತಾದಾತ್ಮ್ಯವನ್ನೂ (ಒಂದರಲ್ಲಿ ಮತ್ತೊಂದರ ಭಾವವನ್ನೂ ಮತ್ತು ಅದರ ಧರ್ಮಗಳನ್ನೂ) ತದ್ಧರ್ಮಗಳನ್ನೂ ಅಧ್ಯಾಸದ ಮೂಲಕ ಆರೋಪಣೆ ಮಾಡಿ ಭಾವನೆ ಮಾಡುವುದರ ದೆಸೆಯಿಂದ ದೇಹ ಮಾತ್ರದಲ್ಲಿ ಆತ್ಮತ್ವರೂಪ ವಿಶ್ವಾಸವನ್ನು (ಅಭಿಮಾನವನ್ನು) ಮಾಡುವ ಸಂಸಂಗವು ಯಾವುದುಂಟೋ ಅದೇ ಬಂಧಹೇತುವಾದ ಸಂಗವೆನ್ನಿಸುವುದು. [ಈ ಅಧ್ಯಾಸದ

ಅನಂತಸ್ಯಾತ್ಮತತ್ತ್ವಸ್ಯ ಸಪರ್ಯಂತತ್ವನಿಶ್ಚಯೇ ।
ಯತ್ಸುಖಾರ್ಥಿತ್ವಮಂತಃ ಸ ಸಂಗೋ ಬಂಧಾರ್ಹ ಉಚ್ಯತೇ ॥ ೩ ॥

ಸರ್ವಮಾತ್ಮೇದಮಖಿಲಂ ಕಿಂ ವಾಂಛಾಮಿ ತ್ಯಜಾಮಿ ಕಿಂ ।
ಇತ್ಯಸಂಗಸ್ಥಿತಿಂ ವಿದ್ಧಿ ಜೀವನ್ಮುಕ್ತತನುಸ್ಥಿತಿಂ ॥ ೪ ॥

ಸ್ವರೂಪವನ್ನು ಶ್ರೀಮಚ್ಛಂಕರ ಭಗವತ್ಪೂಜ್ಯಪಾದಾಚಾರ್ಯರವರು ತಮ್ಮ ಶಾರೀರಕ ಮೀಮಾಂಸಾಭಾಷ್ಯದ ಪ್ರಾರಂಭದಲ್ಲಿಯೇ ಸ್ಪಷ್ಟವಾಗಿ ವರ್ಣಿಸಿ, ಸಮರ್ಥಿಸಿರುವುದನ್ನು ಕಾಣಬಹುದು.] ಅನಾತ್ಮ ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನಿಟ್ಟು ಅಭಿಮಾನದಿಂದ ಮಾಡುವ ವ್ಯವಹಾರವು ಬಂಧಹೇತುವೆಂದರ್ಥ. ಅಯುಕ್ತಃ ಕಾಮಕಾರೇಣ ಫಲೇಸಕ್ತೋನಿಬಧ್ಯತೇ ॥ ಗೀತಾ ೫-೧೨.

೩. ವಸ್ತುತಃ ಕೇವಲ ಚಿದ್ರೂಪನಾದ ಆತ್ಮನು ಅನಂತನು-ಅಪರಿಮಿತನು. (ದೇಶಕಾಲವಸ್ತುಗಳಿಂದ ಪರಿಚ್ಛಿನ್ನನಲ್ಲದವನು) ಇಂತಹ ಆತ್ಮತತ್ತ್ವವನ್ನು ಅಜ್ಞಾನದಿಂದ ತಿಳಿಯಲಾರದೆ ಆತ್ಮನು ದೇಶಕಾಲಾದಿಗಳಿಂದ ಪರಿಚ್ಛಿನ್ನನಾದವನೆಂದು ತಪ್ಪಾಗಿಯೇ ಮನಸ್ಸಿನಲ್ಲಿ ದೃಢವಾಗಿ ಭಾವನೆ ಮಾಡಿಕೊಂಡರೆ, ಆಗ ತನ್ನ ಅಪರಿಚ್ಛಿನ್ನ ಅಖಂಡಾನಂದೈಕರಸ ಸ್ವರೂಪವು ಸರ್ವಥಾ ಮರೆತು ಹೋಗಿಬಿಡುವುದು. ಕೂಡಲೇ ಶಬ್ದಾದಿ ಬಾಹ್ಯವಿಷಯಗಳ ದೆಸೆಯಿಂದ ಸುಖವನ್ನು ಪಡೆಯಬೇಕೆಂಬ ಅಪೇಕ್ಷೆಯು ಮೂಡುವುದು. ಈ ಬಗೆಯಾದ ಅಂತಸ್ಸಂಗವು ಬಂಧಹೇತುವೆನ್ನಿಸಿರುವುದು.

೪. "ಈ ದೃಶ್ಯ ಜಗತ್ತೆಲ್ಲವೂ ಸರ್ವಸ್ವರೂಪನಾದ ಪರಮಾತ್ಮತತ್ತ್ವವೇ, ಬೇರೆಯಲ್ಲವು." ಎಂಬ ದೃಢವಾದ ಭಾವನೆಯಿಂದ ಜ್ಞಾನನಿಷ್ಠನಾದ ಮಹಾತ್ಮನಿಗೆ ಸರ್ವವೂ ಆತ್ಮವೇ ಆಗಿಬಿಟ್ಟಿರುವ ಕಾರಣ, ಅವನು ತನ್ನ ವ್ಯವಹಾರದಿಂದ ಯಾವ ಫಲಾಪೇಕ್ಷೆಯುಳ್ಳವನಾಗಿ ಯಾವುದನ್ನು ಗ್ರಹಿಸಬೇಕಾಗಿರುವುದು? ಅಥವಾ ಯಾವುದರಲ್ಲಿ ದ್ವೇಷಬುದ್ಧಿಯಿಂದ ಅದನ್ನು ಬಿಡಬೇಕಾಗಿರುವುದು? (ಯಾವುದೊಂದೂ ಇಲ್ಲವು) ಹೀಗೆ ಸರ್ವಬ್ರಹ್ಮಾತ್ಮಬುದ್ಧಿಯಿಂದ ಕ್ರಿಯಾಕಾರಕ ಫಲಾದಿ ಭೇದಬುದ್ಧಿ ಶೂನ್ಯನಾಗಿ, ಹೇಯೋಪಾದೇಯರಹಿತನಾಗಿ ಯದೃಚ್ಛಾಲಾಭ ಸಂತುಷ್ಟನಾಗಿ, ದ್ವಂದ್ವಾತೀತನಾಗಿ, ಸಿದ್ಧ್ಯಸಿದ್ಧಿಗಳಲ್ಲಿ ಸಮನಾಗಿ (ಅವಿಕಾರಿಯಾಗಿ) ಅಭಿಮಾನರಾಹಿತ್ಯದಿಂದ ಯಥಾಪ್ರಾಪ್ತವಾದ ವ್ಯವಹಾರಗಳನ್ನು ಮಾಡು

ನಾಹಮಸ್ಮಿ ನ ಚಾನ್ಯೋಽಸ್ತಿ ಮಾ ಭವಂತು ಭವಂತು ವಾ ।
ಸುಖಾನ್ಯಸಕ್ತ ಇತ್ಯಂತಃ ಕಥ್ಯತೇ ಮುಕ್ತಿಭಾಕ್ ನರಃ ॥ ೫ ॥

ನಾಭಿನಂದತಿ ನೈಷ್ಕರ್ಮ್ಯಂ ನ ಕರ್ಮಸ್ವನುಷಜ್ಜತೇ ।
ಸುಸಮೋಃ ಯಃ ಫಲತ್ಯಾಗೀ ಸೋಽಸಂಸಕ್ತ ಇತಿ ಸ್ಮೃತಃ ॥ ೬ ॥

ತ್ತಿರುವ ಉದಾಸೀನ ಸ್ಥಿತಿಯೇ ಅಂತಸ್ಸಂಗರಹಿತವಾದ ಸ್ಥಿತಿಯೆನ್ನಿಸಿರುವುದು. ಇದನ್ನೇ ಜೀವನ್ಮುಕ್ತನ ಶರೀರದಿಂದ ನಿರಭಿಸಂಧಿಪೂರ್ವಕವಾಗಿ ತಾನಾಗಿಯೇ ನಡೆಯುವ ವ್ಯವಹಾರ (ಸ್ಥಿತಿಯು) ವೆಂದೂ ಇದು ಸಂಸಾರ ಬಂಧದಿಂದ ಮೋಕ್ಷವನ್ನು ಪಡೆಯುವುದಕ್ಕೆ ಹೇತುವಾದುದೆಂದೂ ತಿಳಿಯಬೇಕು.

೫. "ನಾನು ಅಹಂಕಾರಾದಿಗಳಿಂದ ಪರಿಚ್ಛಿನ್ನನಲ್ಲವು. ಅಖಂಡಾನಂದೈಕ ರಸ ಚಿದ್ರೂಪ ಆತ್ಮನೇ ನಾನು. ಪರಮಾರ್ಥ ಸತ್ಯಸ್ವರೂಪನಾದ ನನಗಿಂತ ಬೇರೆ ಯಾವುದೊಂದೂ ವಸ್ತುತಃ ಇಲ್ಲವೇ ಇಲ್ಲವು. ಅನಾತ್ಮನಾದ ದೇಹೇಂದ್ರಿಯಾದಿ ಈ ದೃಶ್ಯ ಜಗತ್ತೆಲ್ಲವೂ ಅತ್ಯಂತ ಮಿಥ್ಯಾಭೂತವೇ ಸರಿ. ಇಂತಹ ಮಿಥ್ಯಾಭೂತ ದೇಹಾದಿಗಳಲ್ಲಿ ಕ್ಷಣಿಕವಾದ ವಿಷಯ ಸುಖಗಳು ಬರಲಿ ಅಥವಾ ಬರದೆಯೇ ಹೋಗಲಿ, ಅವುಗಳಿಂದ ನನಗೆ ಯಾವ ಹಾನಿ ವೃದ್ಧಿಗಳೂ ಇಲ್ಲವೇ ಇಲ್ಲ. ನನಗೂ ಆ ದೇಹಾದಿಗಳಿಗೂ ಯಾವದೊಂದು ಸಂಬಂಧವೂ ಸುತರಾಂ ಇಲ್ಲವು. ನಾನು ಅಸಂಗನು." ಎಂದು ದೃಢ ನಿಶ್ಚಯ ಜ್ಞಾನಸಂಪನ್ನನಾದವನು ವ್ಯವಹಾರಗಳನ್ನು ಮಾಡುತ್ತಿದ್ದರೂ ಅಥವಾ ಬಿಟ್ಟಿದ್ದರೂ, ಹೇಗಿದ್ದರೂ ಕೂಡ, ಅಂತಸ್ಸಂಗರಹಿತ ನಾದವನೇ ಆಗಿರುವನು. ಮತ್ತು ನಿತ್ಯಮುಕ್ತನೇ. ಸಂದೇಹವಿಲ್ಲ.

[ಗೀತಾ ೨. ೫೭ ನೋಡಿ]

೬. ಯಾವ ಮಹಾತ್ಮನು ಸರ್ವ ಕರ್ಮ ಪರಿತ್ಯಾಗವನ್ನು ಮಾಡಿ ಮನಸ್ಸಿನಲ್ಲಿ ಸಂತೋಷಿಸುವುದಿಲ್ಲವೋ ಅಥವಾ ಕರ್ಮ ಫಲಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕರ್ಮಗಳಲ್ಲಿ ಆಸಕ್ತನಾಗುವುದಿಲ್ಲವೋ ಮತ್ತು ಯಾವನು ಸಿದ್ಧ್ಯಸಿದ್ಧಿಗಳಲ್ಲಿ ಅತ್ಯಂತ ಸಮದರ್ಶಿಯಾಗಿ ಅವಿಕಾರಿಯಾಗಿರುವನೋ ಮತ್ತು ಪರಿಪೂರ್ಣ ಕಾಮನಾಗಿ ಕೃತಕೃತ್ಯತಾ ಲಾಭದಿಂದ ಕರ್ಮ ಫಲಗಳಲ್ಲಿ ವೈರಾಗ್ಯವನ್ನು ವಹಿಸಿ ಫಲಾಭಿಸಂಧಿ ವಿವರ್ಜಿತನಾಗಿರುವನೋ, ಅಂತಹ ಮಹಾನುಭಾವನು ಅಂತಸ್ಸಂಸಂಗ ರಹಿತನು, ಮುಕ್ತನೆನ್ನಿಸಿರುವನು.

ಆತ್ಮತತ್ತ್ವೈಕನಿಷ್ಠಸ್ಯ ಹರ್ಷಾಮರ್ಷವಶಂ ಮನಃ ।
ಯಸ್ಯ ನಾಯಾತ್ಯಸಕ್ತೋಽಸೌ ಜೀವನ್ಮುಕ್ತಃ ಸ ಕಥ್ಯತೇ ॥ ೭ ॥

ಸರ್ವಕರ್ಮಫಲಾದೀನಾಂ ಮನಸೈವ ನ ಕರ್ಮಣಾ ।
ನಿಪುಣಂ ಯಃ ಪರಿತ್ಯಾಗೀ ಸೋಽಸಂಸಕ್ತ ಇತಿ ಸ್ಮೃತಃ ॥ ೮ ॥

ಅಸಂಸಂಗೇನ ಸಕಲಾಶ್ಚೇಷ್ಟಾ ನಾನಾ ವಿಜೃಂಭಿತಾಃ ।
ಚಿಕಿತ್ಸಿತಾ ಭವಂತೀಹ ಶ್ರೇಯಃ ಸಂಪಾದಯಂತಿ ಚ ॥ ೯ ॥

---

೭. ಆತ್ಮತತ್ತ್ವವೊಂದರಲ್ಲಿ ಮಾತ್ರವೇ ಸರ್ವದಾ ಪರಿನಿಷ್ಠಿತವಾದ ಮನಸ್ಸುಳ್ಳ ಯಾವ ಸ್ಥಿತಪ್ರಜ್ಞನ (ಜೀವನ್ಮುಕ್ತನ) ಮನಸ್ಸು ಪ್ರಿಯಾಪ್ರಿಯ ಲಾಭದಿಂದ ಹರ್ಷ ಕ್ರೋಧಗಳಿಗೆ ಅಧೀನವಾಗದೆಯೂ ವಿಕಾರಗೊಳ್ಳದೆಯೂ ಪ್ರಶಾಂತವಾಗಿರುವುದೋ, ಆತನೇ ಅಸಕ್ತನು. ಆತನೇ ಜೀವನ್ಮುಕ್ತನು.

(ಗೀತಾ ೫-೧೯.) ಮತ್ತು (ಗೀತಾ ೧೨-೧೭ ನೋಡಿ.)

೮. ಯಾವ ವಿರಕ್ತನಾದ ಮಹಾತ್ಮನು ಕರ್ಮಾಚರಣೆಯಿಂದ ಸಾಧ್ಯವಾಗುವ ಪ್ರಯೋಜನವು ತನಗೆ ಯಾವುದೊಂದೂ ಇಲ್ಲದಿದ್ದರೂ ಕೂಡ ಲೋಕಸಂಗ್ರಹಾರ್ಥವಾಗಿಯಾದರೂ ಕರ್ಮಗಳನ್ನು ಮಾಡುತ್ತಾ ಅವುಗಳ ಫಲಾಫಲಗಳಲ್ಲಿ ಸಂಪೂರ್ಣವಾಗಿ ಅಭಿಸಂಧಿರಹಿತನಾಗಿ ತನ್ನ ಮನಃಪೂರ್ವಕವಾಗಿ ತಾನು ಆಚರಿಸುವ ಸರ್ವ ಕರ್ಮಗಳ ಫಲ, ಕಾರಕ ಇತ್ಯಾದಿ ಬುದ್ಧಿಗಳನ್ನು ಮಾತ್ರ ನಿಶ್ಶೇಷವಾಗಿ ಪರಿತ್ಯಾಗ ಮಾಡಿ ವಿವೇಕ ವೈರಾಗ್ಯಗಳಿಂದ ಸಂಪನ್ನನಾಗಿರುವನೋ ಅವನು ನಿಜವಾಗಿಯೂ ಅಸಂಸಕ್ತನೇ ಸರಿ ಅಂತಸ್ಸಂಗಶೂನ್ಯನೇ. ಎಂದರ್ಥ.

(ಗೀತಾ. ೬-೧.)

೯. ನಾನಾ ಪ್ರಕಾರಗಳಾದ ಫಲ ರಾಗಾದಿಗಳಿಂದ ವಿಜೃಂಭಿಸುತ್ತಿರುವ ವಿವಿಧ ಸಕಲ ಪ್ರಾಪಂಚಿಕ (ಸುಕೃತ ದುಷ್ಕೃತ ರೂಪ) ವ್ಯವಹಾರಗಳೂ, ಶ್ರವಣಾದಿ ಶಾಸ್ತ್ರೀಯ ವ್ಯವಹಾರಗಳೂ ಕೂಡ ಅಂತಸ್ಸಂಗರಾಹಿತ್ಯದಿಂದ (ಅಂತಸ್ಸಕ್ತಿಯನ್ನು ಇಡದೆ ಇರುವುದರಿಂದ) ಚಿಕಿತ್ಸೆ ಮಾಡಲ್ಪಡುವುವು. ಬಳಿಕ ಹೀಗೆ ಚಿಕಿತ್ಸಿತವಾದವುಗಳೇ ನಿರ್ವಿಘ್ನವಾಗಿ ಇಲ್ಲಿಯೇ ಜೀವಿಸಿರುವಾಗಲೇ

ಸಂಸಕ್ತಿವಶತಃ ಸರ್ವೇ ವಿತತಾ ದುಃಖರಾಶಯಃ ।
ಪ್ರಯಾಂತಿ ಶತಶಾಖತ್ವಂ ಶ್ವಭ್ರಕಂಟಕವೃಕ್ಷವತ್ ॥ ೧೦ ॥

ರಜ್ಜುಕೃಷ್ಟಘನಘ್ರಾಣೋ ಯದ್ಗತ್ವಾ ಪಥಿ ಗರ್ದಭಃ
ಭಾರಂ ವಹತಿ ಭೀತಾತ್ಮಾ ತತ್ಸಂಸಕ್ತಿವಿಜೃಂಭಿತಂ ॥ ೧೧ ॥

ಶೀತವಾತಾತಪಕ್ಲೇಶಮೇಕದೇಶನಿಷಣ್ಣಯಾ ।
ತರುರ್ವಹತಿ ಯತ್ತನ್ವಾ ತತ್ಸಂಸಕ್ತಿವಿಜೃಂಭಿತಂ ॥ ೧೨ ॥

ನಿಶ್ಶ್ರೇಯಸ ರೂಪವಾದ ಪರಮ ಪುರುಷಾರ್ಥ (ಮೋಕ್ಷ)ವನ್ನು ಸಂಪಾದಿಸಿ ಕೊಡುವುವು.

(ಗೀತಾ. ೧೬. ಶ್ಲೋಕ ೨೧-೨೨.)

೧೦. ಆಳವಾದ ಹಳ್ಳದಲ್ಲಿ (ಭೂಛಿದ್ರ) ಬೆಳೆದುಕೊಂಡಿರುವ ಮುಳ್ಳು ಗಿಡಗಳಂತೆ ಪ್ರಪಂಚದಲ್ಲಿ ಬಹು ವಿಸ್ತಾರವಾಗಿ ಹರಡಿಕೊಂಡಿರುವ ನಾನಾ ದುಃಖ ಪರಂಪರೆಗಳೆಲ್ಲವೂ ಅಂತಸ್ಸಂಗ ವಶದಿಂದ (ಅಭಿಮಾನದ ಮೂಲಕ) ಸಾವಿರಾರು ಶಾಖೋಪಶಾಖೆಗಳಾಗಿ ಕವಲೊಡೆದು ವೃದ್ಧಿ ಹೊಂದಿ ಅಭೇದ್ಯವಾಗಿಬಿಡುವುವು.

೧೧. ಜನಗಳು-ಸ್ಥೂಲವಾದ ಮೂಗುಗಳಿಗೆ ಬಲವಾಗಿ ಹಗ್ಗಗಳನ್ನು ಬಿಗಿದು ಕತ್ತೆ ಮುಂತಾದ ಗ್ರಾಮ್ಯ ಪಶುಗಳನ್ನು ಎಳೆದೆಳೆದು ಚಾವುಟಿಗೆಯಿಂದ ಹೊಡೆಯುತ್ತಾ ಓಡಿಸುತ್ತಿರಲು ಆ ಪಶುಗಳು ದಾರಿಯಲ್ಲಿ ನಡೆಯುತ್ತಾ ಮತ್ತೆ ಮತ್ತೆ ಏಟು ಬೀಳುವುದೆಂಬ ಭಯದಿಂದ ಹೊರಲಾರದಷ್ಟು ಭಾರಗಳನ್ನು ವೇಗವಾಗಿ ಹೊರುತ್ತಿರುವುದೂ, ಆ ಸಂಸಕ್ತಿಯ ವಿಜೃಂಭಣದಿಂದಲೇ ಹೊರತು ಮತ್ತೆ ಏತರಿಂದಲೂ ಅಲ್ಲ.

೧೨. ವೃಕ್ಷಗಳು ಒಂದೇ ಕಡೆಯಲ್ಲಿದ್ದುಕೊಂಡು ಕಟ್ಟು ಕದಲದೆ ತಮ್ಮ ಸ್ಥಾವರ ದೇಹಗಳಿಂದ ಹಿಮ, ಗಾಳಿ, ಬಿಸಿಲು ಮುಂತಾದವುಗಳ ಪ್ರಾಬಲ್ಯಕ್ಕೆ ಸಿಕ್ಕಿ ಕ್ಲೇಶಗಳನ್ನು ಅನುಭವಿಸುತ್ತಿರುವುದು ಕೂಡ ಅಂತಸ್ಸಂಗದ ವಿಜೃಂಭಣವೇ.

ಧರಾವಿವರನಿರ್ವಗ್ನೋ ಯತ್ಕೀಟಃ ಪೀಡಿತಾಂಗಕಃ ।
ಕ್ಷಿಣೋತಿ ವಿಕಲಃ ಕಾಲಂ ತತ್ಸಂಸಕ್ತಿವಿಜೃಂಭಿತಂ ॥ ೧೩ ॥

ಕ್ಷುತ್ತ್ಕ್ಷಾಮಕುಕ್ಷಿಃ ಕ್ಷಪಯತ್ಯಾಯುರ್ವ್ಯಾಘಾತಭೀರುಧೀಃ ।
ಪಕ್ಷೀ ವೃಕ್ಷಶಿಖಾಶಾಯೀ ತತ್ಸಂಸಕ್ತಿವಿಜೃಂಭಿತಂ ॥ ೧೪ ॥

ದೂರ್ವಾಂಕುರತೃಣಾಹಾರಃ ಕಿರಾತ ಶರಪೀಡಯಾ ।
ಜಹಾತಿ ಯನ್ಮೃಗೋ ದೇಹಂ ತತ್ಸಂಸಕ್ತಿವಿಜೃಂಭಿತಂ ॥ ೧೫ ॥

---

೧೩. ಹಾವು ಮೊದಲಾದ ಕೀಟಗಳು ಭೂಗರ್ಭದೊಳಗೆ ರಂಧ್ರಗಳನ್ನು ಮಾಡಿಕೊಂಡು ಅವುಗಳಲ್ಲಿ ವಾಸಮಾಡುತ್ತಾ ತಮ್ಮ ಅಂಗೋಪಾಂಗಗಳನ್ನೆಲ್ಲಾ ಮುದುರಿಕೊಂಡು ಚಾಚುವುದಕ್ಕೆ ಕೂಡ ಅವಕಾಶವಿಲ್ಲದೆ ಅತಿದೈನ್ಯದಿಂದ ನಾನಾ ಕಷ್ಟಗಳನ್ನು ಅನುಭವಿಸುತ್ತಾ ತಮ್ಮ ಜೀವಿತ ಕಾಲವನ್ನು ಕಳೆಯುತ್ತಿರುವುದೂ ಆ ಅಂತಃಸಕ್ತಿಯ ವಿಜೃಂಭಣವೇ.

೧೪. ಪಕ್ಷಿಗಳು ಹಸಿವು ಬಾಯಾರಿಕೆಗಳಿಂದ ಸೊರಗಿದ ಹೊಟ್ಟೆಯುಳ್ಳವುಗಳಾಗಿ ಯಾರು ಯಾವಾಗ, ಎಲ್ಲಿ ಬಾಣ ಕಲ್ಲು ಮುಂತಾದವುಗಳನ್ನು ತಮ್ಮ ಮೇಲೆ ಬೀಸಿ ಹೊಡೆದು ಕೊಲ್ಲುವರೋ ಎಂಬ ಭಯದಿಂದ ಪ್ರತಿಕ್ಷಣದಲ್ಲಿಯೂ ಮನಸ್ಸಿನಲ್ಲಿ ಗಾಬರಿ ಪಟ್ಟುಕೊಂಡು ಸರ್ವದಾ ಮರಗಳ ತುದಿಗಳಲ್ಲಿ ಗೂಡುಗಳನ್ನು ಕಟ್ಟಿ ಅವುಗಳಲ್ಲಿ ಮಲಗಿಕೊಂಡು ತಮ್ಮ ಆಯುಸ್ಸನ್ನು ನೀಗುವುದೂ ಈ ಅಂತಸ್ಸಕ್ತಿಯ ಮಹಿಮೆಯಿಂದಲೇ.

೧೫. ಗರಕೆ, ಎಳೆಯ ಸಸಿಗಳು ಹುಲ್ಲು ಇವುಗಳನ್ನು ತಿಂದು ಜೀವಿಸತಕ್ಕ ಜಿಂಕೆಗಳು ನಿರ್ಜನವಾದ ವನಾಂತರಗಳಲ್ಲಿಯೂ ಕೂಡ ಪ್ರತಿ ಕ್ಷಣದಲ್ಲಿಯೂ ಬೇಟೆಗಾರರು ಬಂದು ಬಾಣಗಳಿಂದ ಯಾವಾಗ ತಮ್ಮನ್ನು ಹೊಡೆದು ಕೊಂದು ಬಿಡುವರೋ ಎಂಬ ಭಯದಿಂದಲೂ ವ್ಯಸನದಿಂದಲೂ ಸರ್ವದಾ ಕೊರಗಿ ತಮ್ಮ ದೇಹಗಳನ್ನು ಬಿಡುವುದೂ ಕೂಡ ಈ ಅಂತಸ್ಸಂಗದ ಪ್ರಭಾವದಿಂದಲೇ.

ಕೃಮಿಕೀಟತ್ವಮಾಯಾಂತಿ ಜಾಯಮಾನಾಃ ಪುನಃ ಪುನಃ ।
ಯದಿಮಾ ಜನತಾ ಜೀರ್ಣಾಸ್ತತ್ಸಂಸಕ್ತಿವಿಜೃಂಭಿತಂ ॥ ೧೬ ॥

ಉತ್ಪತ್ಯೋತ್ಪತ್ಯ ಲೀಯಂತೇ ತರಂಗಿಣೀ ತರಂಗವತ್ ।
ಭೂತಾನಿ ಯದನಂತಾನಿ ತತ್ಸಂಸಕ್ತಿವಿಜೃಂಭಿತಂ ॥ ೧೭ ॥

ವೀರುತ್ತೃಣದಶಾಂ ಯಾತಾ ಮ್ರಿಯಂತೇ ಯತ್ಪುನಃ ಪುನಃ ।
ನರಾ ವಿಗತಸಂಚಾರಾಸ್ತತ್ ಸಂಸಕ್ತಿ ವಿಜೃಂಭಿತಂ ॥ ೧೮ ॥

---

೧೬. ಸುಕೃತಗಳನ್ನೋ ಅಥವಾ ದುಷ್ಕೃತಗಳನ್ನೋ ಮಾಡಿ ಪುಣ್ಯ ಪಾಪಗಳನ್ನು ಸಂಪಾದಿಸತಕ್ಕ ಯೋಗ್ಯತೆಯನ್ನು ಪಡೆದಿರುವ ಈ ಜನ ಸಮುದಾಯಗಳು ತಮ್ಮ ತಮ್ಮ ಕರ್ಮಾನುಸಾರವಾಗಿ ನಾನಾ ಯೋನಿಗಳಲ್ಲಿ ಪುನಃ ಪುನಃ ವಿವಿಧ ಜನ್ಮಗಳನ್ನು ಪಡೆಯುತ್ತಲೂ ಸ್ವಲ್ಪ ಕಾಲದೊಳಗಾಗಿಯೇ ಮುದುಕರಾಗುತ್ತಲೂ ಕೊನೆಗೆ ಸಾಯುತ್ತಲೂ ಇರುವುದೂ ಮತ್ತು ತಮ್ಮ ದುಷ್ಕೃತ ಕರ್ಮಗಳ ಫಲವಾಗಿಯೇ ಕೆಲವು ವೇಳೆ ಕ್ರಿಮಿ ಕೀಟಾದಿ ನೀಚ ಜನ್ಮಗಳನ್ನು ಪಡೆಯುವುದೂ ಇದೆಲ್ಲವೂ ಈ ಹಾಳು ಅಂತಸ್ಸಂಸಕ್ತಿಯ ವಿಜೃಂಭಣವೇ.

೧೭. ಅಲೆಗಳು ಉತ್ಪತ್ತಿಯಾಗತಕ್ಕ ಒಂದು ಅಗಾಧ ಜಲಾಶಯದಲ್ಲಿ ಅಲೆಗಳು ಪರಂಪರೆಯಾಗಿ ಮೇಲಿಂದಮೇಲೆ ಪುನಃಪುನಃ ಉತ್ಪತ್ತಿಯಾಗುತ್ತಲೂ ಮತ್ತೆ ಮತ್ತೆ ಅಲ್ಲಿಯೇ ಅಡಗುತ್ತಲೂ ಇರುವಂತೆ ಅಸಂಖ್ಯಾಕಗಳಾದ ಈ ಪ್ರಾಣಿ ಸಮುದಾಯಗಳು ಅಪರಿಮಿತವಾಗಿ ಈ ಪ್ರಪಂಚದಲ್ಲಿ ಪುನಃ ಪುನಃ ಆವಿರ್ಭವಿಸುತ್ತಲೂ ಮತ್ತೆ ಮತ್ತೆ ಅತ್ಯಲ್ಪ ಕಾಲದೊಳಗಾಗಿ ಅಲ್ಲಿಯೇ ಮರಣ ಹೊಂದಿ ಅದೃಶ್ಯವಾಗುತ್ತಲೂ ಇರುವುದೂ ಕೂಡ ಅಂತಸ್ಸಂಕ್ತಿಯ ವಿಜೃಂಭಣವೇ.

೧೮. ಪ್ರಪಂಚದಲ್ಲಿ ಜನರು ನಾನಾ ವ್ಯಾಧಿಗಳಿಂದ ಪೀಡಿತರಾಗಿ ಬಳ್ಳಿಗಳಂತೆಯೂ ಹುಲ್ಲು ಕಡ್ಡಿಗಳಂತೆಯೂ ಅತ್ಯಂತ ಕೃಶವಾದ ಹೀನ ಸ್ಥಿತಿಗೆ ಇಳಿದು ಸಂಚಾರಮಾಡುವುದಕ್ಕೂ ಶಕ್ತಿಯಿಲ್ಲದವರಾಗಿ ರೋಗ ಶಯ್ಯೆಯಲ್ಲಿಯೇ ಮಲಗಿಕೊಂಡಿದ್ದು ಕೊರಗಿ ಮತ್ತೆ ಮತ್ತೆ ಸಾಯುತ್ತಿರುವುದೂ ಈ ಸಂಸಕ್ತಿಯ ದುಶ್ಚೇಷ್ಟೆಯೆಂಬ ವಿಜೃಂಭಣವೇ.

ರಸಾತಲರಸಾಯೋಗಾತ್ತೃಣಗುಲ್ಮಲತಾದಯಃ ।
ಜನಯಂತಿ ಯದಾಕಾರಂ ತತ್ಸಂಸಕ್ತಿವಿಜೃಂಭಿತಂ ॥ ೧೯ ॥

ಸ್ವಾನರ್ಥಾಂತರಸಂಕಾಶಪದಾರ್ಥಶತಸಂಕುಲಾ ।
ಯತ್ಸಂಸಾರನದೀ ಮತ್ತಾ ತತ್ಸಂಸಕ್ತಿವಿಜೃಂಭಿತಂ ॥ ೨೦ ॥

ಸಂಸಕ್ತಿರ್ದ್ವಿವಿಧಾ ಪ್ರೋಕ್ತಾ ವಂಧ್ಯಾ ವಂದ್ಯಾ ಚ ರಾಘವ ।
ವಂಧ್ಯಾ ಸರ್ವತ್ರ ಮೂಢಾನಾಂ ವಂದ್ಯಾ ತತ್ವವಿದಾಂ ನಿಜಾ ॥ ೨೧ ॥

---

೧೯. ಹುಲ್ಲು. ಕುರುಚುಗಿಡ, ಲತೆ ಮುಂತಾದ ಸಸ್ಯ ವರ್ಗಗಳು ಭೂಗರ್ಭದೊಳಗೆ ಬಿದ್ದಿರುವ ನೀರನ್ನು ಬೇರುಗಳ ಮೂಲಕ ಕುಡಿದು ಉಪಯೋಗಿಸಿಕೊಂಡು ಭೂಮಿಯಮೇಲೆ ತಮ್ಮ ತಮ್ಮ ಆಕಾರಗಳನ್ನು ಪ್ರಕಟಿಸುವುದೂ ಕೂಡ ಆ ಅಂತಸ್ಸಂಸಕ್ತಿಯ ವಿಜೃಂಭಣವೇ.

೨೦. ಈ ಸಂಸಾರವೆಂಬ ನದಿಯು ಮೇಲಿಂದ ಮೇಲೆ ಎಡಬಿಡದೆ ಸಂಭವಿಸುತ್ತಲೇ ಇರುವ ತನ್ನ ಅನೇಕ, ಅನರ್ಥ ಪರಂಪರೆಗಳಂತಿರುವ ಮತ್ತು ವಿಯೋಗ, ಭ್ರಾಂತಿ, ಮುಗ್ಗರಿಸುವುದು ಮುಂತಾದ ಸಾವಿರಾರು ಕ್ಲೇಶಗಳಿಗೆ ಕಾರಣಗಳಾಗಿರುವ ಅನೇಕಾನೇಕ ಬಾಹ್ಯಾಭ್ಯಂತರ ಪದಾರ್ಥಗಳಿಂದ ನಿಬಿಡವಾಗಿ ವೃದ್ಧಿಹೊಂದಿ ಹುಚ್ಚು ಹುಚ್ಚಾಗಿ ಪ್ರವಹಿಸುತ್ತಿರುವುದೂ ಈ ಸಂಸಕ್ತಿಯ ವಿಜೃಂಭಣವೇ.

೨೧. ಅಯ್ಯಾ ರಾಘವ, ಈ ಅಂತಸ್ಸಂಸಕ್ತಿಯೆಂಬುದು ಎರಡು ಪ್ರಕಾರಗಳಿಂದಿರುವುದು. ಒಂದು ಪ್ರಶಸ್ತವಾಗಿ ಸರ್ವರಿಗೂ ನಮಸ್ಕಾರಾರ್ಹವಾದದು. ಮತ್ತೊಂದು ಪುರುಷಾರ್ಥ ಫಲ ಶೂನ್ಯವಾಗಿ ವ್ಯರ್ಥವಾದುದು. ವ್ಯರ್ಥವಾದ ಸಂಸಕ್ತಿಯು ಅಜ್ಞಾನಿಗಳಿಗೆ ಸರ್ವತ್ರ ಸ್ವಾಭಾವಿಕವಾಗಿ ಸಾಧಾರಣವಾದುದು. ಪ್ರಶಸ್ತವಾದ ಸಂಸಕ್ತಿಯಾದರೋ ತತ್ತ್ವಜ್ಞರಾದ ಜ್ಞಾನ ನಿಷ್ಠರಿಗೆ ಮಾತ್ರ ಸಹಜವಾದುದು.

ಆತ್ಮತತ್ತ್ವಾವಬೋಧೇನ ಹೀನಾ ದೇಹಾದಿವಸ್ತುಜಾ ।
ಭೂಯಃ ಸಂಸಾರಸಕ್ತಿರ್ಯಾ ದೃಢಾ ವಂಧ್ಯೇತಿ ಕಥ್ಯತೇ ॥ ೨೨ ॥

ಆತ್ಮತತ್ತ್ವಾವಬೋಧೇನ ಸತ್ಯಭೂತವಿವೇಕಜಾ ।
ವಂದ್ಯಾ ಹಿ ಕಥ್ಯತೇ ಸಕ್ತಿರ್ಭೂಯಃ ಸಂಸಾರವರ್ಜಿತಾ ॥ ೨೩ ॥

ಶಂಖಚಕ್ರಗದಾಹಸ್ತೋ ದೇವೋ ವಿವಿಧಯೇಹಯಾ ।
ವಂದ್ಯಸಂಸಕ್ತಿವಶತಃ ಪರಿಪಾತಿ ಜಗತ್ತ್ರಯಂ ॥ ೨೪ ॥

---

೨೨. ಆತ್ಮ ತತ್ತ್ವ ಜ್ಞಾನದಿಂದ ವಿರಹಿತವಾಗಿ ಪುನಃ ಪುನಃ ದೇಹೇಂದ್ರಿಯಾದಿ ಅನಾತ್ಮ ದೃಶ್ಯ ವಸ್ತುಗಳಲ್ಲಿ ಆತ್ಮ ಬುದ್ಧಿಯನ್ನಿಡುವ ಮಿಥ್ಯಾ ಭ್ರಾಂತಿಯಿಂದ ಉತ್ಪತ್ತಿ ಹೊಂದಿ ಕ್ರಮವಾಗಿ ದಾರ್ಢ್ಯವನ್ನು ಪಡೆದ ಸಂಸಾರದ ಮೇಲಣ ಸಂಸಕ್ತಿಯು (ವಂಧ್ಯಾ) ವ್ಯರ್ಥವೂ ಅನರ್ಥಕಾರಿಯೂ ಆದುದು ಎಂದು ಪ್ರಾಜ್ಞರು ಹೇಳುವರು.

೨೩. ಸದಸದ್ರೂಪ ಆತ್ಮಾನಾತ್ಮ ವಿವೇಕದಿಂದ ಉತ್ಪನ್ನವಾಗಿ ಯಥಾರ್ಥವಾದ ಆತ್ಮ ತತ್ತ್ವ ಜ್ಞಾನದಿಂದ ದೃಢವಾಗಿ ಪರಿನಿಷ್ಠಿತವಾದ ಸಂಸಕ್ತಿಯು ಯಾವುದಿರುವುದೋ ಅದು (ವಂದ್ಯಾ) ಪರಮ ಪುರುಷಾರ್ಥ ಹೇತುವಾದ ಸಂಸಕ್ತಿಯೆನ್ನಿಸುವುದು. ಇದನ್ನು ಆಶ್ರಯಿಸಿದ ಬಳಿಕ ಪುನಃ ಜನನ ಮರಣ ಪ್ರವಾಹ ರೂಪವಾದ ಸಂಸಾರದ ಭಯವು ಎಂದಿಗೂ ಸರ್ವಥಾ ಇರುವುದೇ ಇಲ್ಲ. (ಪುನರಾವೃತ್ತಿ ರಹಿತನಾಗುವನು.)

೨೪. ಈ ವಂದ್ಯಸಂಸಕ್ತಿವಶದಿಂದಲೇ, ಶಂಖ, ಚಕ್ರ, ಗದೆಗಳನ್ನು ಕೈಗಳಲ್ಲಿ ಧರಿಸಿರುವವನಾದ ಶ್ರೀಮನ್ನಾರಾಯಣನೂ ಕೂಡ ಬಹು ವಿಧ ಪ್ರಯತ್ನಗಳಿಂದ ಲೋಕತ್ರಯಗಳನ್ನು ಪರಿಪಾಲನೆ ಮಾಡುತ್ತಿರುವನು.

ಅನಾರತಂನಿರಾಲಂಬ ವ್ಯೋಮವರ್ತ್ಮನಿ ಪಾಂಥತಾಂ ।
ವಂದ್ಯಸಂಸಕ್ತಿವಶತಃ ಕರೋತಿ ರವಿರನ್ವಹಂ ॥ ೨೫ ॥

ಮಹಾಕಲ್ಪಸಮಾಧಾನಚಿರಕಲ್ಪಿತಕಲ್ಪನಂ ।
ವಂದ್ಯಸಂಸಕ್ತಿವಶತೋ ಬ್ರಾಹ್ಮಂ ಸ್ಫುರತಿ ವೈ ವಪುಃ ॥ ೨೬ ॥

ಲೀಲಯಾ ಲಲನಾಲಾನಲೀನಂ ಭೂತಿವಿಭೂಷಿತಂ ।
ವಂದ್ಯಸಂಸಕ್ತಿವಶತಃ ಶರೀರಂ ಶಾಂಕರಂ ಸ್ಥಿತಂ ॥ ೨೭ ॥

ವಿಜ್ಞಾಃಜ್ಞಾನಗತಯಃ ಸಿದ್ಧಾ ಲೋಕಪಾಲಾಸ್ತಥೇತರೇ ।
ವಂದ್ಯಸಂಸಕ್ತಿವಶತಸ್ತಿಷ್ಠಂತಿ ಜಗತೋಽಂಗಣೇ ॥ ೨೮ ॥

---

೨೫. ಇದೇ ವಂದ್ಯಸಂಸಕ್ತಿವಶದಿಂದ ಭಗವಂತನಾದ ಸೂರ್ಯದೇವನೂ ಕೂಡ ಪ್ರತಿದಿವಸವೂ ತಪ್ಪದೆ ಸಂತತವಾಗಿ ನಿರಾಧಾರವಾದ ಗಗನ ಮಾರ್ಗದಲ್ಲಿ ಪ್ರಯಾಣ ಮಾಡುತ್ತಿರುವನು.

೨೬. ಹಿರಣ್ಯಗರ್ಭನೆಂಬ ಚತುರ್ಮುಖ ಬ್ರಹ್ಮನ ದೇಹವೂ ಕೂಡ, ವಂದ್ಯ ಸಂಸಕ್ತಿಯ ಮಹಿಮೆಯಿಂದಲೇ, ಮಹಾಪ್ರಳಯ ಕಾಲದಲ್ಲಿ ವಿದೇಹ ಕೈವಲ್ಯ ವಿಶ್ರಾಂತಿಯನ್ನು ಪಡೆಯುವುದಕ್ಕೋಸ್ಕರವಾಗಿ, ಎರಡು ಪರಾರ್ಧಗಳಷ್ಟು ಅಪರಿಮಿತ ದೀರ್ಘಕಾಲವೂ ಜಗತ್ಸೃಷ್ಟ್ಯಾದಿ ನಾನಾ ಕಲ್ಪನೆಗಳನ್ನು ಕಲ್ಪಿಸಿಕೊಂಡು ಈಗಲೂ ವ್ಯವಹಾರ ಮಾಡುತ್ತಿರುವುದು.

೨೭. ಇದರಂತೆಯೇ ವಿಭೂತಿಯಿಂದ ಅಲಂಕೃತವಾದ ಸಾಕ್ಷಾತ್ ಪರಮೇಶ್ವರನ ದೇಹವೂ ಕೂಡ ವಂದ್ಯ ಸಂಸಕ್ತಿವಶದಿಂದಲೇ ತನ್ನ ಅರ್ಧಾಂಗಿಯಾದ ಪಾರ್ವತೀದೇವಿಯೆಂಬ ಬಂಧನಸ್ತಂಭದಲ್ಲಿ (ಗೂಟದಲ್ಲಿ) ಆಸಕ್ತವಾಗಿ ವಿನೋದದಿಂದಿರುವುದು.

೨೮. ಇದೇ ವಂದ್ಯ ಸಂಸಕ್ತಿ ಪ್ರಭಾವದಿಂದ ಬ್ರಹ್ಮತತ್ತ್ವಜ್ಞಾನದಲ್ಲಿ ದೃಢವಾಗಿ ಪರಿನಿಷ್ಠಿತರಾಗಿರುವ ಸಿದ್ಧರೂ, ಇಂದ್ರಾದಿ ಲೋಕಪಾಲಕರೂ ಮತ್ತು ಇವರಂತಹ ಇತರ ದಿವ್ಯ ಮಹಾವ್ಯಕ್ತಿಗಳೂ ಪ್ರಪಂಚದ ಮಧ್ಯದಲ್ಲಿ ಇರುವರು.

ಧತ್ತೇ ಶರೀರಯಂತ್ರೌಘಮನ್ಯಾ ಭುವನಸಂತತಿಃ ।
ಮಂದ್ಯಸಂಸಕ್ತಿವಶತೋ ಜರಾಮೃತಿವಿವರ್ಜಿತಂ ॥ ೨೯ ॥

ಮನಃ ಪತತಿ ಭೋಗೇಷು ಗೃಧ್ರೋ ಮಾಂಸಲವೇಷ್ವಿವ ।
ಮಂಧ್ಯಸಂಸಕ್ತಿವಶತೋ ವ್ಯರ್ಥಯಾ ರಮ್ಯಶಂಕಯಾ ॥ ೩೦ ॥

ಸಂಸಕ್ತಿವಶತೋ ವಾತಿ ವಾಯುರ್ಭುವನಕೋಟರೇ ।
ಪಂಚಭೂತಾನಿ ತಿಷ್ಠಂತಿ ವಹತೀಯಂ ಜಗತ್ಸ್ಥಿತಿಃ ॥ ೩೧ ॥

---

೨೯. ಸ್ವರ್ಗ ಮರ್ತ್ಯ ಪಾತಾಳಗಳೆಂಬ ಲೋಕತ್ರಯಗಳಿಗಿಂತ ಬೇರೆಯಾದ ಭುವನಾವಳಿಗಳಲ್ಲಿ (ಮಹಃ-ಜನಃ-ತಪಃ-ಸತ್ಯಂ ಎಂಬೀ ಮೊದಲಾದ ಲೋಕಾಂತರಗಳಲ್ಲಿ) ಇರುವ ತತ್ತ್ವಜ್ಞಾನನಿಷ್ಠರೂ ಕೂಡ, ಮಂದ್ಯ ಸಂಸಕ್ತಿ ವಶದಿಂದಲೇ ಜರಾಮರಣ ರಹಿತವಾದ ಶರೀರಗಳೆಂಬ ಯಂತ್ರಗಳ ಸಮುದಾಯವನ್ನು ಧರಿಸಿಕೊಂಡಿರುವರು.

೩೦. ಹದ್ದು (ಗೃಧ್ರ) ನೆಲದ ಮೇಲೆ ಬಿದ್ದಿರುವ ಮಾಂಸದ ಚೂರುಗಳನ್ನು ದೂರದಿಂದ ಕಂಡು, ಅವುಗಳ ಮೇಲೆ ಆಸೆಯಿಂದ ಬಂದು ಬೀಳುವಂತೆ ಮನಸ್ಸು, ಐಹಿಕಗಳೂ ಮತ್ತು ಆಮುಷ್ಮಿಕಗಳೂ ಆದ ಪ್ರಾಪಂಚಿಕ ಭೋಗಗಳನ್ನು ಕಂಡು, ಅವುಗಳು ರಮ್ಯವಾದವುಗಳೆಂದು ವ್ಯರ್ಥವಾಗಿಯೇ ಭ್ರಮಿಸಿ, ಅವುಗಳನ್ನು ಅನುಭವಿಸಬೇಕೆಂಬ ಆಸೆಯಿಂದ ಅವುಗಳಲ್ಲಿ ಬಂದು ಬೀಳುವುದು ದುಷ್ಟವಾದ ಮಂಧ್ಯ ಸಂಸಕ್ತಿಯು ಪ್ರಭಾವದಿಂದಲೇಯೇ. [ಮೂಲದಲ್ಲಿ ಮಂಧ್ಯ ಎಂದಿರಬೇಕು]

೩೧. ಸಂಸಕ್ತಿವಶದಿಂದಲೇ ವಾಯುವು ಬ್ರಹ್ಮಾಂಡ ಮಧ್ಯದಲ್ಲಿ ಬೀಸುತ್ತಿರುವುದು ಆಕಾಶಾದಿ ಪಂಚಮಹಾಭೂತಗಳೂ ತಮ್ಮ ತಮ್ಮ ನಿಯಮಗಳಲ್ಲಿ ನೆಲೆಸಿರುವುವು. ಮತ್ತು ಈ ಜಗತ್ತಿನ ಸ್ಥಿತಿಯು ಏಕರೀತಿಯಾಗಿ ನಿರ್ವಾಹವಾಗುತ್ತಿರುವುದು.

ದಿವಿ ದೇವಾ ಭುವಿ ನರಾಃ ಪಾತಾಲೇ ಭೋಗಿನೋಽಸುರಾಃ ।
ಬ್ರಹ್ಮಾಂಡೋದುಂಬರಫಲೇ ಸ್ಫುರನ್ಮಶಕವತ್ ಸ್ಥಿತಾಃ ॥ ೩೨ ॥

ಜಾಯಂತೇ ಚ ಮ್ರಿಯಂತೇ ಚ ನಿಪತಂತ್ಯುತ್ಪತಂತಿ ಚ ।
ಭೂತಾನಿ ಯದನಂತಾನಿ ತರಂಗಿಣಿ ತರಂಗವತ್ ॥ ೩೩ ॥

ಉತ್ಪತ್ಯೋತ್ಪತ್ಯ ಲೀಯಂತೇ ತತ್ಸಂಸಕ್ತಿವಿಜೃಂಭಿತಂ ।
ಭೂತಾನಿ ವಿರಸಂಭೂಯೋ ನಿರ್ಝರಾಂಬುಕಣಾ ಇವ ॥ ೩೪ ॥

ಪರಸ್ಪರನಿಗೀರ್ಣಂಗಾ ಜನತಾ ಜಾಡ್ಯಜರ್ಜರಾ ।
ಸಂಭ್ರಾಂತಾ ಪ್ರಭ್ರಮತ್ಯಂಗ ಶೀರ್ಣಪರ್ಣಮಿವಾಂಬರೇ ॥ ೩೫ ॥

---

೩೨. ಅತ್ತಿಯ ಹಣ್ಣಿನೊಳಗಡೆಯಲ್ಲಿ ಸಣ್ಣಸಣ್ಣ ಕ್ರಿಮಿಗಳು ಹಾರಾಡುವಂತೆ ಸ್ವರ್ಗಲೋಕದಲ್ಲಿನ ಸುರರೂ ಭೂಲೋಕದಲ್ಲಿನ ಮನುಷ್ಯರೂ ಪಾತಾಳಲೋಕದಲ್ಲಿನ ಸರ್ಪಗಳೂ ಮತ್ತು ರಾಕ್ಷಸರೂ ಈ ಬ್ರಹ್ಮಾಂಡ ಮಧ್ಯದಲ್ಲಿ ತಮ್ಮ ತಮ್ಮ ವ್ಯವಹಾರಗಳಲ್ಲಿ ಸ್ಪಷ್ಟವಾಗಿ ನಿರತರಾಗಿರುವರು. ಇದೂ ಆ ಸಂಸಕ್ತಿ ವಶದಿಂದಲೇಯೇ.

೩೩. ಅಲೆಗಳಿಂದ ಕೂಡಿದ ಒಂದು ಜಲಾಶಯದೊಳಗೆ ಅಲೆಗಳಂತೆ ಅನೇಕ ಕೋಟ್ಯನು ಕೋಟಿ ಸಂಖ್ಯಾಕ ಭೂತಗಳು ಅನಂತವಾಗಿ ಸರ್ವದಾ ಹುಟ್ಟುತ್ತಿರುವುದೂ ಸಾಯುತ್ತಲಿರುವುದೂ ಮೇಲೆ ಹಾರುತ್ತಲಿರುವುದೂ ಇತ್ಯಾದಿಗಳೆಲ್ಲವೂ ಸಂಸಕ್ತಿ ವಶದಿಂದಲೇ ನಡೆಯುವುವು.

೩೪. ಪರ್ವತಗಳಿಂದ ಅಧೋಮುಖವಾಗಿ ಹರಿಯುತ್ತಿರುವ ಜಲ ಪ್ರವಾಹಗಳಲ್ಲಿ ಜಲ ಬಿಂದುಗಳಂತೆ ಇನ್ನೂ ಇತರ ಪ್ರಾಣಿ ಸಮೂಹಗಳು ಅನೇಕವಾಗಿ ಪುನಃ ಪುನಃ ಕೇವಲ ವ್ಯರ್ಥವಾಗಿ ಮೇಲಕ್ಕೆ ಹಾರಿ ಹಾರಿ ಕೂಡಲೆ ಕೆಳಕ್ಕೆ ಬಿದ್ದು ಲಯ ಹೊಂದುತ್ತಿರುವುವು, ಇದೂ ಸಂಸಕ್ತಿಯ ಪ್ರಭಾವವೇ.

೩೫. ಅಯ್ಯ ರಾಮ, ನೆಲದಮೇಲೆ ಬಿದ್ದು ಚೆನ್ನಾಗಿ ಒಣಗಿ ಹೋದ ಎಲೆಗಳು ಸುಂಟರಗಾಳಿಗೆ ಸಿಕ್ಕಿ ಮೇಲೆ ಹಾರಿಹೋಗಿ ಅಂತರಿಕ್ಷದಲ್ಲಿ ಸುತ್ತುತ್ತಿರುವಂತೆ ಈ ಲೋಕದಲ್ಲಿನ ಜನ ಸಮುದಾಯವು ಜಡತ್ವದಿಂದ ದುರ್ಬಲವಾಗಿಯೂ

ನಕ್ಷತ್ರಚಕ್ರಂ ಗಗನೇ ದ್ರುಮೇ ಮಶಕಸಂತತಿಃ ।
ಸ್ಫುರತ್ಯಾವರ್ತವೃತ್ತ್ಯೈವ ಪಾತಾಲೇಽಂಗ ಜಲೌಘವತ್ ॥ ೩೬ ॥

ಪಾತೋತ್ಪಾತದಶಾಜೀರ್ಣಂ ಕಾಲಬಾಲಕಕಂದುಕಂ ।
ಅದ್ಯಾಪಿ ನ ಜಹಾತೀಂದುರ್ಜಲಮಾಮಲಿನಂ ವಪುಃ ॥ ೩೭ ॥

ನಾನಾಪುರಯುಗಾವರ್ತದುಃಖಾಲೋಕನಕರ್ಕಶಂ ।
ನ ಲುನಾತಿ ಮನಃಖಂಡಂ ದುಃಖಿಗೀರ್ವಾಣಮಂಡಲಂ ॥ ೩೮ ॥

ದಿಗ್ಭ್ರಮೆಗೊಂಡದ್ದಾಗಿಯೂ ಒಬ್ಬೊಬ್ಬರೂ ಪರಸ್ಪರ ದೇಹಗಳನ್ನು ನುಂಗಿ ನಾಶ ಪಡಿಸಲು ಉದ್ಯುಕ್ತವಾಗಿಯೂ ಸುಮ್ಮನೆ ಸುತ್ತಿಸುತ್ತಿ ಒದ್ದಾಡುತ್ತಿರುವುದು. ಇದೂ ಸಂಸಕ್ತಿಯ ವಶದಿಂದಲೇ.

೩೬. ಅಯ್ಯ ರಾಮ, ಪಾತಾಳದಲ್ಲಿ ಜಲಪ್ರವಾಹದಂತೆ, ಗಗನ ಮಂಡಲ ದಲ್ಲಿ ನಕ್ಷತ್ರಗಳ ಸಮೂಹಗಳೂ ಮರಗಳಲ್ಲಿ ಬೆಳಕಿನ ಸೊಳ್ಳೆಗಳ ಗುಂಪುಗಳೂ ಆಳವಾದ ನೀರಿನಲ್ಲಿ ಸುಳಿಗಳು ಸುತ್ತುವ ರೀತಿಯಲ್ಲಿಯೇ ಗಿರ್ರನೆ ಸುತ್ತುತ್ತಾ, ಮಿರುಗುತ್ತಿರುವುವು. ಇದು ಕೂಡ ಸಂಸಕ್ತಿಯ ಪ್ರಭಾವವೇ.

೩೭. ಬಹು ದಿನಗಳಿಂದಲೂ ಮೇಲಕ್ಕೆ ಹಾರುವುದು ಮತ್ತು ಕೆಳಗೆ ದುಪ್ಪನೆ ಬೀಳುವುದು ಮುಂತಾದ ನಾನಾ ಅವಸ್ಥೆಗಳ ದೆಸೆಯಿಂದ ಬಹಳ ಶಿಥಿಲವಾಗಿ ಹೋಗಿರುವ ಮತ್ತು ಕೆಸರು ಕೊಚ್ಚೆ ಮುಂತಾದುವುಗಳಿಂದ ಅತ್ಯಂತ ಮಲಿನ ವಾಗಿರುವ ಜಡವಾದ ಒಂದು ಚೆಂಡನ್ನು ಸಣ್ಣ ಹುಡುಗನು ಎಸೆದು ಬಿಡದೆ ಅದ ರಿಂದಲೇ ಆಟವಾಡುತ್ತಾ ಆನಂದಪಡುವಂತೆ ಈ ಚಂದ್ರನೂ ಕಾಲವೆಂಬ ಹುಡುಗನ ಕೈಯಲ್ಲಿ ಚೆಂಡಿನಂತಿರುವ ಸೃಷ್ಟ್ಯಾದಿ ಕಾಲದಿಂದಲೂ ಉದಯಾಸ್ತಮಯಗಳನ್ನೂ, ವೃದ್ಧಿಕ್ಷಯಗಳನ್ನೂ ಸರ್ವದಾ ಅನುಭವಿಸಿ ಅತ್ಯಂತ ಜೀರ್ಣವಾಗಿರುವ, ಜಲಮಯ ವಾದ ಮತ್ತು ಕಳಂಕದಿಂದ ಮಲಿನವಾದ ತನ್ನ ದೇಹವನ್ನು, ಬಹು ದೋಷ ಯುಕ್ತವಾಗಿರುವ ಕಾರಣ, ಬಿಡುವುದಕ್ಕೆ ಯೋಗ್ಯವಾಗಿದ್ದರೂ ಕೂಡ, ಸಂಸಕ್ತಿ ವಶದಿಂದಲೇ ಬಿಡದೆ, ಈಗಲೂ ಪೂರ್ವದಂತೆಯೇ ಧರಿಸಿಕೊಂಡಿರುವನು.

೩೮. ಎಷ್ಟೋ ಅಸಂಖ್ಯಕಗಳಾದ ಕೃತತ್ರೇತಾದಿ ಯುಗಗಳು ಮತ್ತೆಮತ್ತೆ ಕಳೆದು ಹೋಗುತ್ತಲೂ, ಹೊಸ ಹೊಸದಾಗಿ ಬರುತ್ತಲೂ ಇರುತ್ತಿರಲಿಕ್ಕಾಗಿ ಆಯಾ

ವಾಸನಾಮಾತ್ರವಶತಃ ಪರೇ ವ್ಯೋಮನಿ ಕೇನಚಿತ್ ।
ಇದಮಾರಚಿತಂ ಚಿತ್ರಂ ವಿಚಿತ್ರಂ ಪಶ್ಯ ರಾಘವ ॥ ೩೯ ॥

ಮನಃಸಂಗೈಕರಂಗೇಣ ಶೂನ್ಯೇ ವ್ಯೋಮ್ನಿ ಜಗನ್ಮಯಂ ।
ಯದಿದಂ ರಚಿತಂ ಚಿತ್ರಂ ತತ್ಸತ್ಯಂ ನಕದಾಚನ ॥ ೪೦ ॥

ಕಾಲಗಳಲ್ಲಿ ಸಂಪ್ರಾಪ್ತನಾದ ನಾನಾವಿಧಗಳಾದ ಅಪಾರಗಳಾದ ದುಃಖ ಪರಂಪರೆಗಳನ್ನು ಪುನಃ ಪುನಃ ಸರ್ವದಾ ಅನುಭವಿಸುವುದರಿಂದ ಮನಸ್ಸೆಂಬ ಒಂದು ದೊಡ್ಡ ವ್ರಣವು ಬಹು ಕಠೋರವಾಗಿರುವುದು. ಇದನ್ನು ಶಸ್ತ್ರ ಚಿಕಿತ್ಸೆಯಿಂದಲೇ ಪರಿಹರಿಸಬೇಕಾಗಿರುವುದು. ಇಂದ್ರಾದಿ ದೇವತೆಗಳ ಸಮೂಹವು ಇಂತಹ ಮನಸ್ಸೆಂಬ ವ್ರಣದಿಂದ ಸರ್ವದಾ ದುಃಖಪಡುತ್ತಿದ್ದರೂ ಕೂಡ ಈ ಸಂಸಕ್ತಿ ವಶದಿಂದಲೇ ಅತಿ ತೀಕ್ಷ್ಣವಾದ ವಿವೇಕ ವೈರಾಗ್ಯಗಳೆಂಬ ಶಸ್ತ್ರಗಳಿಂದ ಆ ಮನೋವ್ರಣವನ್ನು ಚಿಕಿತ್ಸೆ ಮಾಡಿಸದೆ ಈಗಲೂ ಅದರಿಂದ ದುಃಖಪಡುತ್ತಲೇ ಇರುವುದು.

೩೯. ಅಯ್ಯ ರಾಘವ, ಸರ್ವಜಗದಧಿಷ್ಠಾನಭೂತವಾದ ಪರಮಾಕಾಶದಲ್ಲಿ (ಆಕಾಶದಂತೆ ಸರ್ವಗತನಾದ ಪರಮಾತ್ಮನಲ್ಲಿ) ಅನಿರ್ವಚನೀಯವಾದ ಅಜ್ಞಾನದಿಂದ (ಮಾಯೆಯಿಂದ) ಈ ಅತ್ಯಾಶ್ಚರ್ಯಕರವಾದ ಜಗತ್ತೆಂಬ ಚಿತ್ರವು, ಕೇವಲ ವಾಸನಾವಶದಿಂದಲೇ (ಬಹು ವಿಚಿತ್ರವಾಗಿ) ಕಲ್ಪಿತವಾಗಿರುವುದು ನೋಡು. (ಸಂಸಕ್ತಿವಿಷಯವಾದ ಬಹುವಿಧ ವಿಚಿತ್ರಮಯವಾದ ಈ ಜಗತ್ತು, ಅಜ್ಞಾನದಿಂದ, ಮಿಥ್ಯೆಯಾಗಿಯೇ ವಾಸನಾಮಾತ್ರ ಕಲ್ಪಿತವಾಗಿರುವ ಕಾರಣ ಆ ಸಂಸಕ್ತಿಯನ್ನು ವಿವೇಕಮಾತ್ರಜನ್ಯಾತ್ಮಜ್ಞಾನದಿಂದ ಮಾತ್ರವೇ ನಾಶಗೊಳಿಸಬೇಕಾಗಿರುವುದು ಎಂದರ್ಥ.)

೪೦. ಮನಸ್ಸಿನಲ್ಲಿ ರೂಢಮೂಲವಾಗಿರುವ ಈ ಸಂಸಕ್ತಿಯೆಂಬ ಒಂದೇ ಒಂದು ರಂಜಕದ್ರವ್ಯದಿಂದ ಮಾತ್ರವೇ ಶೂನ್ಯವಾದ (ನಿರ್ವಿಕಲ್ಪ) ಪರಮಾಕಾಶದಲ್ಲಿ (ಪರಮಾತ್ಮನಲ್ಲಿ) ಅಜ್ಞಾನದಿಂದ ಅತಿ ವಿಚಿತ್ರವಾಗಿ ಕಲ್ಪಿತವಾಗಿರುವ ಕಾರಣವೇ, ಈ ಜಗದ್ರೂಪವಾದ ಚಿತ್ರವು ಎಂದೆಂದಿಗೂ ಸತ್ಯವಾದುದು ಅಲ್ಲವೇ ಅಲ್ಲವೆಂದು ತಿಳಿ. (ಅತ್ಯಂತಾಸತ್ಯವು ಅಥವಾ ಕೇವಲ ಮಿಥ್ಯೆಯು ಎಂದರ್ಥ.)

ಸಂಸಕ್ತಮನಸಾಮಸ್ಮಿನ್ಸಂಸಾರೇ ವ್ಯವಹಾರಿಣಾಂ ।
ಅತ್ತಿ ತೃಷ್ಣಾ ಶರೀರಾಣಿ ತೃಣಾನ್ಯಗ್ನಿಶಿಖಾ ಯಥಾ ॥ ೪೧ ॥

ಪರಿಸಕ್ತಮತೇರ್ದೇಹಾನ್ ಸಿಕತಾಃ ಪತ್ಯುರಂಭಸಾಂ ।
ಕಃ ಶಕ್ತಃ ಪರಿಸಂಖ್ಯಾತುಂ ತ್ರಸರೇಣುಗಣಂ ಯಥಾ ॥ ೪೨ ॥

ಮುಕ್ತಾಲತಾಯಾ ಗಂಗಾಯಾ ಮೇರೋರಾಪಾದಮಸ್ತಕಂ ।
ತರಂಗಮುಕ್ತಾ ಗಣ್ಯಂತೇ ನ ದೇಹಾಃ ಸಕ್ತಚೇತಸಾಂ ॥ ೪೩ ॥

---

೪೧. ಕಾಡುಗಿಚ್ಚಿನ ಜ್ವಾಲೆಗಳು, ಕಾಡಿನಲ್ಲಿ ಬೆಳೆದಿರುವ ಹುಲ್ಲುಗಾವಲುಗಳನ್ನು ಸುಟ್ಟು ನಿರ್ಮೂಲ ಮಾಡಿಬಿಡುವಂತೆಯೇ ಈ ಜಗತ್ತಿನಲ್ಲಿ (ಸಂಸಾರದಲ್ಲಿ) ಸತ್ಯತ್ವ ಬುದ್ಧಿಯನ್ನಿಟ್ಟುಕೊಂಡು, ಮನಸ್ಸಿನೊಳಗೆ ವಿಶೇಷವಾದ ಸಂಸಕ್ತಿಯನ್ನು ವಹಿಸಿ ವ್ಯವಹಾರ ಮಾಡುತ್ತಿರುವ ಅಜ್ಞಾನಿಗಳ ಶರೀರಗಳನ್ನು ತೃಷ್ಣೆಯು ಒಂದೇ ಬಾರಿಗೆ ಕಬಳಿಸಿ ಬಿಡುವುದು. (ನುಂಗಿ ತಿಂದುಬಿಡುವುದು.)

(ತೃಷ್ಣಾ= ವಿಷಯುಗಳ ಮೇಲಿರುವ ತೀವ್ರವಾದ ಭೋಗಾಕಾಂಕ್ಷೆ)

೪೨. ಗವಾಕ್ಷಗಳ ಮೂಲಕ ಮನೆಯೊಳಗೆ ಪ್ರವೇಶ ಮಾಡಿರುವ ಸೂರ್ಯಾತಪ ಕಾಣುವ ಪರಮಾಣು ಸದೃಶಗಳಾದ ರೇಣುಗಳ ಸಮುದಾಯವನ್ನು ಎಣಿಸುವುದಕ್ಕೆ ಯಾವನೊಬ್ಬನೂ ಹೇಗೆ ಸಮರ್ಥನಾಗಿಲ್ಲವೋ, ಹಾಗೆಯೇ, ಅಂತಸ್ಸಂಸಂಗ ದೋಷದಿಂದ ಪ್ರಾಪ್ತಗಳಾಗಿ ತೃಷ್ಣೆಯಿಂದ ಕೂಡಲೇ ಭಕ್ಷಿಸಲ್ಪಟ್ಟ, ವಿಷಯುಗಳಲ್ಲಿ ಸರ್ವತ್ರ ಆಸಕ್ತವಾದ ಮನಸ್ಸುಳ್ಳ ಅಜ್ಞಾನಿಯ ದೇಹಗಳನ್ನೂ, ಸಮುದ್ರದಲ್ಲಿರುವ ಮರಳುಗಳನ್ನೂ ಎಣಿಸಿ ಲೆಕ್ಕ ಮಾಡುವುದಕ್ಕೆ ಯಾವನೂ ಸಮರ್ಥನಲ್ಲವು.

೪೩. ಮೇರುಪರ್ವತದ ಮೇಲೆ ಬುಡದಿಂದ ಮೊದಲ್ಗೊಂಡು ಶಿಖರ ಪರ್ಯಂತವೂ (ಕಾಲಿನಿಂದ ಹಿಡಿದು ತಲೆಯವರೆವಿಗೂ) ಜೋಲಾಡುತ್ತಿರುವ ಮುಕ್ತಾಹಾರವೋ ಎಂಬಂತಿರುವ ಗಂಗಾನದಿಯಲ್ಲಿನ ತರಂಗಗಳೆಂಬ ಮುಕ್ತಾಫಲ (ಮುತ್ತು) ಗಳನ್ನಾದರೂ ಒಂದು ವೇಳೆ ಎಣಿಸಿ ಲೆಕ್ಕ ಮಾಡುವುದು ಸಾಧ್ಯವಾಗಬಹುದು. ಆದರೆ ಅಂತಸ್ಸಂಗದಿಂದ ಕೂಡಿರುವ ಮನಸ್ಸುಳ್ಳ

ಸಂಸಕ್ತಮನಸಾಮೇತಾ ರಮ್ಯಾಂತಃಪುರಪಂಕ್ತಯಃ ।
ರಚಿತಾ ರೌರವಾ ವೀಚಿಕಾಲಸೂತ್ರಾದಿನಾಮಿಕಾಃ ॥ ೪೪ ॥

ಸಕ್ತಚಿತ್ತಂ ಜನಂ ದುಃಖಶುಷ್ಕಮಿಂಧನಸಂಚಯಂ ।
ಜ್ವಲತಾಂ ನರಕಾಗ್ನೀನಾಂ ವಿದ್ಧಿ ತೇನ ಜ್ವಲಂತಿ ತೇ ॥ ೪೫ ॥

ದುಃಖಜಾಲಮಿದಂ ನಾಮ ಯತ್ಕಿಂಚಿಜ್ಜಗತೀಗತಂ ।
ಸಂಸಕ್ತಮನಸಾಮರ್ಥೇ ತತ್ಸರ್ವಂ ಪರಿಕಲ್ಪಿತಂ ॥ ೪೬ ॥

ಅಜ್ಞಾನಿಗಳು ಈ ಸಂಸಾರದಲ್ಲಿ ಪುನಃ ಪುನಃ ಪಡೆಯುತ್ತಿರುವ ದೇಹಗಳ ಸಂಖ್ಯೆಯನ್ನು ಮಾತ್ರ ಎಣಿಸುವುದಕ್ಕೆ ಎಂದಿಗೂ ಯಾರಿಗೂ ಸಾಧ್ಯವಿಲ್ಲವು.

೪೪. ಈ ಸಂಸಾರದಲ್ಲಿ ಅಂತಸ್ಸಂಸಕ್ತಿಯಿಂದ ಕೂಡಿದ ಮನಸ್ಸುಳ್ಳವರಾಗಿ ವ್ಯವಹರಿಸುತ್ತಿರುವ ಪ್ರಾಣಿಗಳಿಗೋಸ್ಕರವಾಗಿ ಅವರವರ ಕರ್ಮಗಳೆಂಬ ಶಿಲ್ಪಿಗಳು ವೀಚಿ, ಕಾಲಸೂತ್ರ ಮುಂತಾದ ನಾನಾ ಹೆಸರುಗಳುಳ್ಳ, (ಅಗ್ನಿ ಶಸ್ತ್ರಾದಿಗಳಿಂದ ಉಜ್ಜ್ವಲವಾಗಿರುವ ಕಾರಣ) ರಮ್ಯಗಳಾಗಿಯೂ ನಾನಾ ಯಾತನೆಗಳೆಂಬ ಕಾಮಿನಿಯರಿಂದ ನಿಬಿಡವಾಗಿಯೂ, ಕರ್ಮಫಲಸಂಭೋಗ ಸ್ಥಾನಗಳಾಗಿ, ಅಂತಃಪುರ ಶ್ರೇಣಿಗಳಂತೆಯೂ ಇರುವ ರೌರವಾದಿ ಈ ಮಹಾ ನರಕಗಳನ್ನು ನಿರ್ಮಿಸಿರುವರು.

೪೫. ಅಯ್ಯ ರಾಮ, ಈ ಸಂಸಾರದಲ್ಲಿ ಅಂತಸ್ಸಕ್ತಿಯಿಂದ ಕೂಡಿದ ಮನಸ್ಸುಳ್ಳ ಪ್ರಾಣಿ ಸಮುದಾಯಗಳು, ಸರ್ವದಾ ನಾನಾ ಕ್ಲೇಶ ಸಂತಾಪಗಳೆಂಬ ಬಿಸಿಲಿನಿಂದ ಚೆನ್ನಾಗಿ ಒಣಗಿ ನೀರಸವಾದ ಸೌದೆಗಳ ರಾಶಿಯಂತೆ ಇರುವುವು. ಇವು ಸರ್ವದಾ ಜಾಜ್ವಲ್ಯಮಾನವಾಗಿ ಉರಿಯುತ್ತಿರುವ ನರಕಗಳೆಂಬ ಅಗ್ನಿಗಳಿಗೆ ಸುಡಲು ಯೋಗ್ಯವಾಗಿರುವುವು. ಅದು ಕಾರಣ ಆ ನರಕಾಗ್ನಿಗಳು ಬಲು ಬೇಗನೆ, ಸಂಸಕ್ತ ಜನರೆಂಬ ಕಾಷ್ಠ ಸಂಚಯುಗಳನ್ನು ಸುಟ್ಟು ಬೂದಿಮಾಡಿ ಬಿಡುವುವು. ಎಂದು ಅವಧರಿಸು.

೪೬. ಈ ಪ್ರಪಂಚದಲ್ಲಿ, ಸರ್ವತ್ರ ಯಾವ ಯಾವ ಎಷ್ಟೆಷ್ಟು ವಿಧಗಳಾದ ನಾನಾ ದುಃಖ ಸಮುದಾಯಗಳು ನೆಲೆಸಿರುವುವೋ ಅವುಗಳೆಲ್ಲವನ್ನೂ ಮನಸ್ಸಿ

ಸಂಸಕ್ತಚಿತ್ತಮಾಯಾಂತಿ ಸರ್ವಾ ದುಃಖಪರಂಪರಾಃ ।
ಜಲಕಲ್ಲೋಲವಲಿತಾ ಮಹಾನದ್ಯ ಇವಾಂಬುಧಿಂ ॥ ೪೭ ॥

ಮನಃಸಂಸರ್ಗರೂಪಿಣ್ಯಾ ಭಾರಭೂತಶರೀರಯಾ ।
ಕ್ಷಯೋದಯದಶಾರ್ಥಿನ್ಯಾ ಸರ್ವಂ ತತಮವಿದ್ಯಯಾ ॥ ೪೮ ॥

ಅಸಂಸಂಗೇನ ಭೋಗಾನಾಂ ಸರ್ವಾ ರಾಮ ವಿಭೂತಯಃ ।
ಪರಂ ವಿಸ್ತಾರಮಾಯಾಂತಿ ಪ್ರಾವೃಷೀವ ಮಹಾಪಗಾಃ ॥ ೪೯ ॥

ನೊಳಗೆ ಸಂಸಕ್ತಿಯನ್ನು ವಹಿಸಿ ವ್ಯವಹರಿಸುತ್ತಿರುವ ನರಪಶುಗಳಿಗೋಸ್ಕರ ವಾಗಿಯೇ ಆ ಸಂಸಕ್ತಿಯು ಕಲ್ಪನೆಮಾಡಿ ಸಿದ್ಧಗೊಳಿಸಿರುವುದು.

೪೭. ದೊಡ್ಡ ದೊಡ್ಡ ಅಲೆಗಳ ಸಾಲುಗಳಿಂದ ತುಂಬಿ, ಸರ್ವದಾ ಕೂಲಂ ಕಷವಾಗಿ ಹರಿಯುತ್ತಿರುವ ಗಂಗೆ ಮುಂತಾದ ಮಹಾನದಿಗಳು ಅವಿಚ್ಛಿನ್ನವಾಗಿ ಸಮುದ್ರಕ್ಕೆ ಹೋಗಿ ಬೀಳುವಂತೆಯೇ, ಈ ಪ್ರಪಂಚದಲ್ಲಿರುವ ಸಮಸ್ತ ದುಃಖ ಪರಂಪರೆಗಳೂ ಕೂಡ ಒಂದು ಕ್ಷಣಕಾಲವಾದರೂ ವಿಶ್ರಾಂತಿಗೊಡದೆ ಸಂಸಕ್ತ ಚಿತ್ತನಾದ ಪುರುಷಾಧಮನನ್ನು ಹುಡುಕಿಕೊಂಡು ಬಂದು ಆವರಿಸಿ ಆಕ್ರಮಿಸಿ ಕೊಳ್ಳುವುವು.

೪೮. ಮನಸ್ಸಿನೊಳಗೆ ರೂಢವಾದ ಸಂಸಕ್ತಿಯೆಂಬ ಆಕಾರವುಳ್ಳದ್ದಾಗಿಯೂ ಅದು ಕಾರಣವೇ ಅತ್ಯವಶ್ಯವಾಗಿ ಹೊರಬೇಕಾಗಿರುವುದರಿಂದ ಅತ್ಯಂತ ಭಾರ ಭೂತ ವಾದ ದೇಹವುಳ್ಳದ್ದಾಗಿಯೂ ಮತ್ತು ಪ್ರಾಣಿಗಳಿಗೆಲ್ಲಾ ಸಾವು ಹುಟ್ಟುಗಳೆಂಬ ದುರ್ದಸೆಗಳನ್ನು ಯಾವಾಗಲೂ ಕೋರುತ್ತಲೂ ಇರುವ ಅವಿದ್ಯೆಯು ಈ ಪ್ರಾಪಂ ಚಿಕಗಳಾದ ಸಮಸ್ತ ದುಃಖ ಜಾಲಗಳನ್ನು ವೃದ್ಧಿಗೊಳಿಸಿ ತಂದೊಡ್ಡಿರುವುದು.

೪೯. ಅಯ್ಯ ರಾಮ, ಪ್ರಾಪಂಚಿಕ ಸಕಲ ಭೋಗಗಳ ಮೇಲೆ ಇರುವ ಸಂಸಕ್ತಿಯನ್ನು ಸಂಪೂರ್ಣವಾಗಿ ಪರಿತ್ಯಾಗ ಮಾಡುವುದರಿಂದ ಅಣಿಮಾದಿ ಅಷ್ಟವಿಧ ಸಿದ್ಧಿಗಳೆಲ್ಲವೂ ವರ್ಷರ್ತುವಿನಲ್ಲಿ ಮಹಾನದಿಗಳಂತೆ ಹೆಚ್ಚಾದ ವೈಶಾಲ್ಯ ವನ್ನು ಪಡೆದು ವಿಜೃಂಭಿಸುವುವು.

[ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿಃ, ಪ್ರಾಕಾಮ್ಯಂ,

ಅಂತಸ್ಸಂಸಂಗಮಂಗಾನಾಮಂಗಾರಂ ವಿದ್ಧಿ ರಾಘವ ।
ಅನಂತಸ್ಸಂಗಮಂಗಾನಾಂ ವಿದ್ಧಿ ರಾಮ ರಸಾಯನಂ ॥ ೫೦ ॥

ಸಂಸಂಗೇನಾಂತರಸ್ಥೇನ ದಹ್ಯತೇ ಪ್ರಕೃತಿಃ ಸ್ವಯಂ ।
ಸ್ವಕಲೋತ್ಥೇನೈರಕಾಂಕ್ಷೀ ಪಾವಕೇನ ಯಥೌಷಧಿಃ ॥ ೫೧ ॥

ಸರ್ವತ್ರಾಸಕ್ತಮಾಶಾಂತಮನಂತಮಿವ ಸಂಸ್ಥಿತಂ ।
ಅಸತ್ಕಲ್ಪಂ ಸದಾಭಾಸಂ ಸುಖಾಯೈವ ಮನೋ ಭವೇತ್ ॥ ೫೨ ॥

ಈಶಿತ್ವಂ, ವಶಿತ್ವಂ. ಎಂಬಿವು ಎಂಟು ಸಿದ್ಧಿಗಳು.] (ಸಂಸಕ್ತಿ ತ್ಯಾಗ ಮಾತ್ರದಿಂದ ಈ ಜಗತ್ತಿನಲ್ಲಿ ಸಕಲ ಸುಖಗಳೂ, ಸಿದ್ಧಿಗಳೂ ಲಭಿಸುವುವು ಎಂದರ್ಥ.)

೫೦. ಅಯ್ಯ ರಘೂತ್ತಮ, ರಾಮ, ಅಂತಸ್ಸಂಸಂಗವೆಂಬುದೇ ಪ್ರಾಣಿಗಳ ಅಂಗಗಳನ್ನೆಲ್ಲ ದಹಿಸಿ ಬಿಡುವಂತಹ ಅಗ್ನಿ ಜ್ವಾಲಾಮಯವಾದ ಕೊಳ್ಳಿಯೆಂದು ಭಾವಿಸು. ಅಂತಸ್ಸಂಗವನ್ನು ಪರಿತ್ಯಾಗಮಾಡುವಿಕೆಯೇ ಅಂಗೋಪಾಂಗಗಳಿಗೆಲ್ಲ ಆಪ್ಯಾಯಮಾನವಾಗಿ ಆಹ್ಲಾದಕರವಾದ ರಸಾಯನವೆಂದು ತಿಳಿ.

೫೧. ಏರಕವೆಂಬ ತೃಣ ವಿಶೇಷಗಳ ಅವಲಂಬನವನ್ನು ಬಯಸುವ ಲತೆಯು ತನ್ನೊಡನೆ ಬೆರೆತುಕೊಂಡಿರುವ ಹುಲ್ಲುಗಳಲ್ಲಿ ಉದ್ಭವಿಸಿದ ಅಗ್ನಿಯಿಂದ ಹೇಗೆ ಸುಟ್ಟುಹೋಗುವುದೋ ಹಾಗೆಯೇ ಮನಸ್ಸಿನೊಳಗೆ ನೆಲೆಸಿರುವ ಸಂಸಕ್ತಿಯ ವಶದಿಂದ ಪ್ರಕೃತಿ ಕಾರ್ಯಗಳಾದ ಅನಾತ್ಮದೇಹಾದಿಗಳಲ್ಲಿರುವ ಆತ್ಮಾಭಿಮಾನದಿಂದ ಪ್ರಕೃತಿ ಭೂತನಾದ ಜೀವನೂ ಕೂಡ ಸುಟ್ಟುಹೋಗಿ ನಾಶ ಹೊಂದುವನು.

೫೨. ಅಸಂಸಕ್ತವಾದ ಅತ್ಯಂತ ಪ್ರಶಾಂತವಾದ (ಅಥವಾ ಆಶೆಗಳನ್ನೆಲ್ಲಾ ಪರಿತ್ಯಾಗಮಾಡಿ ಕೊನೆಕಾಣಿಸಿರುವ) ಅಪಾರವಾದ ಆಕಾಶದಂತೆ ನಿರ್ಲಿಪ್ತವಾಗಿಯೂ ಸ್ವಚ್ಛವಾಗಿಯೂ ಇರುವ ಅಸತ್ಸದೃಶವಾಗಿಯೂ ಸತ್ತಿನಂತೆ ಆಭಾಸ ಮಾನವಾಗಿಯೂ ಇರುವ ಮನಸ್ಸು ಸರ್ವತ್ರ ಸರ್ವದಾ ಕೇವಲ ಸುಖಕ್ಕೇ ಕಾರಣವಾಗುವುದು.

ವಿದ್ಯಾದೃಶಿ ಪ್ರೋದಯಮಾಗತೇನ
ಕ್ಷಯಂ ತ್ವವಿದ್ಯಾವಿಷಯೇ ಗತೇನ।
ಸರ್ವತ್ರ ಸಂಸಕ್ತಿವಿವರ್ಜಿತೇನ
ಸ್ವಚೇತಸಾ ತಿಷ್ಠತಿ ಯಃ ಸ ಮುಕ್ತಃ ॥ ೫೩ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಸಂಗವಿಚಾರಯೋಗೋಪದೇಶೋ" ನಾಮ ಅಷ್ಟಷಷ್ಟಿತಮಃ ಸರ್ಗಃ.

---

೫೩. ತತ್ತ್ವಾವಬೋಧವೆಂಬ ಉತ್ತಮವಾದ ಜ್ಞಾನ ದೃಷ್ಟಿಯಲ್ಲಿ ಸೂರ್ಯ ಚಂದ್ರರಂತೆ ಚೆನ್ನಾಗಿ ಆವಿರ್ಭಾವವನ್ನು ಪಡೆದಿರುವ ಅದು ಕಾರಣವೇ ಅವಿದ್ಯಾ ವಿಜೃಂಭಿತಗಳಾದ ಪ್ರಾಪಂಚಿಕ ವಿಷಯಗಳಲ್ಲಿ ಕ್ಷಯವನ್ನು ಹೊಂದಿರುವ ಸರ್ವದಾ ಸಕಲ ದೃಶ್ಯ ವಸ್ತುಗಳಲ್ಲಿಯೂ ಅಂತಸ್ಸಂಸಕ್ತಿಯನ್ನು ಸಂಪೂರ್ಣವಾಗಿ ವಹಿಸದೆ ಇರುವ, ತನ್ನ ನಿರ್ವಿಕ್ಷೇಪವಾದ ಮನಸ್ಸಿನಿಂದ ಯಾವ ಮಹಾತ್ಮನು ಸಮದರ್ಶಿಯಾಗಿಯೂ ಅವಿಕಾರಿಯಾಗಿಯೂ ಇರುವನೋ ಅಂತಹವನು ನಿಸ್ಸಂದೇಹವಾಗಿ ಮುಕ್ತನೇ ಸರಿ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದೊಳಗೆ "ಸಂಗವಿಚಾರಯೋಗೋಪದೇಶ" ವೆಂಬ ಅರವತ್ತೆಂಟನೆಯ ಸರ್ಗವು.

ಏಕೋನಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಸರ್ವದಾ ಸರ್ವಸಂಸ್ಥೇನ ಸರ್ವೇಣ ಸಹ ತಿಷ್ಠತಾ ।
ಸರ್ವಕರ್ಮರತೇನಾಪಿ ಮನಃ ಕಾರ್ಯಂ ವಿಜಾನತಾ ॥ ೧ ॥

ನ ಸಕ್ತಮಿಹ ಚೇಷ್ಟಾಸು ನ ಚಿಂತಾಸು ನ ವಸ್ತುಷು ।
ನಾಕಾಶೇ ನಾಪ್ಯಧೋ ನಾಗ್ರೇ ನ ದಿಕ್ಷು ನ ಲತಾಸು ಚ ॥ ೨ ॥

ಅರವತ್ತೊಂಭತ್ತನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು.—

೧. ಅಯ್ಯ ರಾಮ, ಆತ್ಮಾನಾತ್ಮ ವಿವೇಕ ಜ್ಞಾನ ಸಂಪನ್ನನಾದ ಮಹಾತ್ಮನು ಸರ್ವದಾ ಆಯಾ ಕಾಲಗಳಲ್ಲಿ ಉಚಿತವಾದ ಸರ್ವ ವ್ಯವಹಾರಗಳಲ್ಲಿದ್ದುಗೊಂಡಿದ್ದರೂ ಆಯಾ ವ್ಯವಹಾರಗಳಿಗೆ ಉಚಿತರಾದ ಇಷ್ಟ ಪುತ್ರ ಮಿತ್ರ ಭೃತ್ಯ ಮುಂತಾದ ಸಮಸ್ತ ಜನಗಳ ಸಂಗಡ ಇದ್ದುಗೊಂಡಿದ್ದರೂ ಅನಿಷಿದ್ಧಗಳಾದ ಸಕಲ ಲೌಕಿಕ ಮತ್ತು ವೈದಿಕ ಕರ್ಮಗಳಲ್ಲಿ ಆಸಕ್ತಿಯನ್ನು ವಹಿಸಿ ಅವುಗಳನ್ನು ಮಾಡುತ್ತಿರುವವನಾಗಿದ್ದರೂ ಕೂಡ ತನ್ನ ಮನಸ್ಸನ್ನು ಮುಂದೆ ಹೇಳುವ ಲಕ್ಷಣಗಳುಳ್ಳದ್ದನ್ನಾಗಿ ಮಾಡಿಕೊಳ್ಳಬೇಕು.

೨. ಹೇಗೆಂದರೆ ಮನಸ್ಸು ಪ್ರಾಪಂಚಿಕ ವಿಷಯ ಭೋಗಗಳನ್ನು ಸಾಧಿಸಿಕೊಳ್ಳುವ ಸಕಲ ವ್ಯವಹಾರಗಳಲ್ಲಿಯೂ ಕಳೆದು ಹೋದ ವಿಷಯಗಳನ್ನು ಚಿಂತಿಸುವುದರಲ್ಲಿಯೂ ವರ್ತಮಾನ ಕಾಲಿಕ ವಸ್ತುಗಳಲ್ಲಿಯೂ ಮೇಲುಗಡೆ ಆಕಾಶದಲ್ಲಿಯೂ ಮತ್ತು ಕೆಳಗಡೆ ನೆಲದ ಮೇಲೆಯೂ ಮಧ್ಯ ಭಾಗದಲ್ಲಿಯೂ ದಿಕ್ಕುಗಳಲ್ಲಿಯೂ ಮತ್ತು ಲತೆಗಳಲ್ಲಿಯೂ ಆಸಕ್ತಿಯುಳ್ಳದ್ದಾಗಿ ಸಂಸಕ್ತಿಯಿಂದ ಕೂಡಿದ್ದಾಗಿ ಇರಕೂಡದು.

ನ ಬಹಿರ್ವಿಭವಲಾಭೋಗೇ ನ ಚೈವೇಂದ್ರಿಯವೃತ್ತಿಷು ।
ನಾಭ್ಯಂತರೇ ನ ಚ ಪ್ರಾಣೇ ನ ಮೂರ್ಧನಿ ನ ತಾಲುನಿ ॥ ೩ ॥

ನ ಭ್ರೂಮಧ್ಯೇ ನ ನಾಸಾಂತೇ ನ ಮುಖೇ ನ ಚ ತಾರಕೇ ।
ನಾಂಧಕಾರೇ ನ ಚಾಭಾಸೇ ನ ಚಾಸ್ಮಿನ್ ಹೃದಯಾಂಬರೇ ॥ ೪ ॥

ನ ಜಾಗ್ರತಿ ನ ಚ ಸ್ವಪ್ನೇ ನ ಸುಷುಪ್ತೇ ನ ನಿರ್ಮಲೇ ।
ನಾಸಿತೇ ನ ಚ ವಾ ಪೀತರಕ್ತಾದೌ ಶಬಲೇ ನ ಚ ॥ ೫ ॥

---

೩. ಹೊರಗಡೆ ಆಧಿ ಭೌತಿಕಗಳಲ್ಲಿಯೂ ಅತಿವಿಶಾಲವಾದ ಹೆಂಡತಿ ಭೃತ್ಯರು ಮುಂತಾದ ಪರಿವಾರದಿಂದ ಕೂಡಿದ ಪ್ರಪಂಚದಲ್ಲಿಯೂ ಚಕ್ಷುರಾದೀಂದ್ರಿಯ ವೃತ್ತಿಗಳಲ್ಲಿಯೂ ಅಭ್ಯಂತರವಾದ ಆಧ್ಯಾತ್ಮಿಕ ವಿಷಯದಲ್ಲಿಯೂ ಧಾರಣಾ ಸ್ಥಾನಗಳೆಂದು ಯೋಗಶಾಸ್ತ್ರದಲ್ಲಿ ಪ್ರಸಿದ್ಧಗಳಾದ ಪ್ರಾಣಗಳು, ಶಿರಸ್ಸು ತಾಲು ಮುಂತಾದ ಸ್ಥಳಗಳಲ್ಲಿಯೂ ಸಂಸಕ್ತವಾಗಿ ಇರಕೂಡದು.

೪. ಮತ್ತೂ ಹುಬ್ಬುಗಳ ಮಧ್ಯದಲ್ಲಿಯೂ ಮೂಗಿನ ಅಗ್ರ ಭಾಗದಲ್ಲಿಯೂ ಮುಖದಲ್ಲಿಯೂ ಬಲಗಣ್ಣಿನ ಗುಡ್ಡಿನಲ್ಲಿಯೂ ಕತ್ತಲೆಯಲ್ಲಿಯೂ ಅಲ್ಪ ಪ್ರಕಾಶದಲ್ಲಿಯೂ ಈ ಹೃದಯಾಕಾಶದಲ್ಲಿಯೂ ಕೂಡ ಸಕ್ತಿಯನ್ನು ವಹಿಸಿ ನೆಲೆಸಿರಕೂಡದು.

೫. ಜಾಗ್ರದವಸ್ಥೆಯಲ್ಲಿಯೂ ಕನಸಿನಲ್ಲಿಯೂ ಷುಷುಪ್ತಿಯಲ್ಲಿಯೂ ಶುದ್ಧ ಸತ್ತ್ವಗುಣದಲ್ಲಿಯೂ ತಮೋಗುಣದಲ್ಲಿಯೂ ಹಳದಿ ಕೆಂಪು ಮುಂತಾದ ರಜೋಗುಣದಲ್ಲಿಯೂ ಚಿತ್ರವರ್ಣಮಯವಾದ ಈ ಗುಣ ತ್ರಯ ಸಮಾಹಾರದಲ್ಲಿಯೂ ಸಂಸಕ್ತವಾಗಿ ನೆಲೆಸಿರಕೂಡದು.

ನ ಚಲೇ ನ ಸ್ಥಿರೇ ನಾದೌ ನ ಮಧ್ಯೇ ನೇತರತ್ರ ಚ ।
ನ ದೂರೇ ನಾಂತಿಕೇ ನಾಗ್ರೇ ನ ಪದಾರ್ಥೇ ನ ಚಾತ್ಮನಿ ॥ ೬ ॥
ನ ಶಬ್ದಸ್ಪರ್ಶರೂಪೇಷು ನ ಮೋಹಾನಂದವೃತ್ತಿಷು ।
ನ ಗಮಾಗಮಚೇಷ್ಟಾಸು ನ ಕಾಲಕಲನಾಸು ಚ ॥ ೭ ॥

ಕೇವಲಂ ಚಿತಿ ವಿಶ್ರಮ್ಯ ಕಿಂಚಿಚ್ಚೇತ್ಯಾವಲಂಬಿನಿ ।
ಸರ್ವತ್ರ ನೀರಸಮಿವ ತಿಷ್ಠತ್ವಾತ್ಮರಸಂ ಮನಃ ॥ ೮ ॥

---

೬. ಮತ್ತು ಚಲವಾದ ಕಾರ್ಯವರ್ಗದಲ್ಲಿಯೂ ಸ್ಥಿರವಾದ ಕಾರಣದಲ್ಲಿಯೂ ಸೃಷ್ಟಿ ಸ್ಥಿತಿಲಯಗಳ ಕಾಲಗಳಲ್ಲಿಯೂ ಬಹಳ ದೂರವಾದ ದಿಗ್ವಿಭಾಗಳಲ್ಲಿಯೂ ಬಹಳ ಸಮೀಪದಲ್ಲಿಯೂ ಅಗ್ರ ಭಾಗದಲ್ಲಿಯೂ ನಾಮರೂಪಾತ್ಮಕವಾದ ವಸ್ತು ಸಮುದಾಯದಲ್ಲಿಯೂ ದೇಹೋಪಾಧಿಯಿಂದ ಕೂಡಿದ ಜೀವನಲ್ಲಿಯೂ ಕೂಡ ಆಸಕ್ತವಾಗಿರಕೂಡದು.

೭. ಮತ್ತು ಶಬ್ದ ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳಲ್ಲಿಯೂ ಈ ವಿಷಯಗಳ ಅಭಿಲಾಷೆಯಿಂದ ಪರವಶನಾಗಿರುವ ಸ್ಥಿತಿಯಲ್ಲಿಯೂ ವಿಷಯೋಪ ಭೋಗ ಫಲಗಳಲ್ಲಿಯೂ ಲಾಭನಷ್ಟಗಳಲ್ಲಿಯೂ ಅಥವಾ ಗಗನ ಸಂಚಾರಾದಿ ಸಕಲ ಸಿದ್ಧಿರೂಪ ವ್ಯವಹಾರಗಳಲ್ಲಿಯೂ ಅತೀತಾನಾಗತ ವಿಷಯಗಳ ಪರಿಜ್ಞಾನ ಚಿರಂ ಜೀವಿತ್ವ ಮುಂತಾದ ಸಿದ್ಧಿಗಳಲ್ಲಿಯೂ ಕೂಡ ಮನಸ್ಸು ಸಂಸಕ್ತಿಯಿಂದ ಕೂಡಿ ನೆಲೆಯಾಗಿ ನಿಲ್ಲಕೂಡದು.

೮. ಮತ್ತು ಆ ಮನಸ್ಸು ನಿಶ್ಚಲವಾದ ಬುದ್ಧಿಗೆ ಕೇವಲ ಸಾಕ್ಷಿ ಭೂತವಾಗಿ ರುವ ಚಿದ್ರೂಪ ಪರಮಾತ್ಮನಲ್ಲಿ ಮಾತ್ರವೇ ವಿಶ್ರಾಂತಿಯನ್ನು ಪಡೆದು ಇತರವಾದ ಪ್ರಾಪಂಚಿಕ ವಿಷಯಗಳಲ್ಲಿ ಸರ್ವತ್ರ ಕ್ಷಣಿಕತ್ವ ತುಚ್ಛತ್ವ ಭಾವನೆಯಿಂದ ವೈರಾಗ್ಯ ವುಳ್ಳದ್ದರಂತೆ ಇದ್ದುಕೊಂಡು (ಅಂತಹ ವಿರಕ್ತವಾದ ಮನಸ್ಸಿನ ಸ್ಥಿತಿಯೂ ಮಿಥ್ಯೆಯೇ ಆಗಿರುವ ಕಾರಣ) ಆನಂದೈಕ ರಸವಾದ ಸಚ್ಚಿದಾತ್ಮ ಸ್ವರೂಪದಲ್ಲಿ ಸ್ಥಿರವಾಗಿ ನಿಂತಿರಲಿ.

ತತ್ರಸ್ಥೋ ವಿಗತಾಸಂಗೋ ಜೀವೋಽಜೀವತ್ವಮಾಗತಃ ।
ವ್ಯವಹಾರಮಿಮಂ ಸರ್ವಂ ಮಾ ಕರೋತು ಕರೋತು ವಾ ॥ ೯ ॥

ಅಕುರ್ವನ್ನಪಿ ಕುರ್ವಾಣೋ ಜೀವಃ ಸ್ವಾತ್ಮರತಿಃ ಕ್ರಿಯಾಃ ।
ಕ್ರಿಯಾಫಲೈರ್ನ ಸಂಬಂಧಮಾಯಾತಿ ಖಮಿವಾಂಬುದೈಃ ॥ ೧೦ ॥

ಅಥವಾ ತಮಪಿ ತ್ಯಕ್ತ್ವಾ ಚೇತ್ಯಾಂಶಂ ಶಾಂತಚಿದ್ಘನಃ ।
ಜೀವಸ್ತಿಷ್ಠತು ಸಂಶಾಂತೋ ಜ್ವಲನ್ಮಣಿರಿವಾತ್ಮನಿ ॥ ೧೧ ॥

---

೯. ಈ ವಿಧವಾದ ಆನಂದರಸಾತ್ಮ ಸ್ಥಿತಿಯಲ್ಲಿದ್ದುಕೊಂಡು, ಪರಬ್ರಹ್ಮ ಸ್ವರೂಪವನ್ನು ಪಡೆದವನಾಗಿರುವ ಜೀವನು ಆಮೇಲೆ ಆಸಕ್ತಿಶೂನ್ಯನಾಗಿ (ಅಭಿಮಾನರಹಿತನಾಗಿ) ಈ ಪ್ರಾಪಂಚಿಕ ಸಕಲ ವ್ಯವಹಾರಗಳನ್ನು ಮಾಡುತ್ತಲಾದರೂ ಇರಲಿ ಅಥವಾ ಬಿಟ್ಟುಬಿಟ್ಟಾದರೂ ಇರಲಿ. (ಹೇಗಾದರೂ ಯಾವದೊಂದು ಹಾನಿಯೂ ಇಲ್ಲ.)

೧೦. ಸ್ವಾತ್ಮಾರಾಮನಾದ ಜೀವನು, ಸಕಲ ಕಾರ್ಯಗಳನ್ನು ಮಾಡುತ್ತಿರುವವನಾದರೂ ಅಥವಾ ಮಾಡದೇ ಇರುವವನಾಗಿದ್ದರೂ ಕೂಡ, ಆಕಾಶವು ಮೇಘಗಳಿಂದ ಹೇಗೂ ಸ್ವಲ್ಪಮಾತ್ರವೂ ಯಾವ ಸಂಬಂಧವನ್ನೂ ಪಡೆಯದೆ ನಿರ್ಲಿಪ್ತವಾಗಿರುವಂತೆ (ಅಂತಸ್ಸಂಗರಹಿತನಾಗಿರುವ ಕಾರಣ) ಕರ್ಮಫಲಗಳಿಂದ ಸ್ವಲ್ಪವೂ ಸಂಬಂಧವನ್ನು ಪಡೆಯದೆ ನಿರ್ಲಿಪ್ತನಾಗಿಯೇ ಇರುವನು.

೧೧. ಅಥವಾ ಹಿಂದೆ ಇದೇ ಸರ್ಗದ ಎಂಟನೆಯ ಶ್ಲೋಕದಲ್ಲಿ ಹೇಳಿದ ಹಾಗೆ, ಆ ಚೇತ್ಯಾಂಶ ಸ್ಥಿತಿಯನ್ನು (ಬುದ್ಧಿ ಸಾಕ್ಷಿತ್ವವನ್ನು) ಕೂಡ ಪರಿತ್ಯಾಗ ಮಾಡಿ, ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿರುವ ಒಂದು ಮಣಿಯಂತೆ, ಈ ಜೀವನು ಶಾಂತನಾಗಿಯೂ ಆನಂದಘನ ಚಿದ್ರೂಪನಾಗಿಯೂ ಸ್ವಾತ್ಮಸ್ವರೂಪದಲ್ಲಿ ಚೆನ್ನಾಗಿ ಶಾಂತಚಿತ್ತನಾಗಿ ಇದ್ದುಕೊಂಡಿರಬಹುದು.

ನಿರ್ವಾಣಮಾತ್ಮನಿ ಗತಃ ಸತತೋದಿತಾತ್ಮಾ
ಜೀವೋಽರುಚಿರ್ವ್ಯವಹರನ್ನಪಿ ರಾಮಭದ್ರ ।
ನೋ ಸಂಗಮೇತಿ ಗತಸಂಗತಯಾ ಫಲೇನ
ಕರ್ಮೋದ್ಭವೇನ ಸಹತೀವ ಚ ದೇಹಭಾರಂ ॥ ೧೨ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಶಾಂತಿಸಮಾಯಾತ ಯೋಗೋಪದೇಶೋ" ನಾಮ ಏಕೋನ ಸಪ್ತತಿತಮಃ ಸರ್ಗಃ.

---

೧೨. ಅಯ್ಯ ರಾಮಭದ್ರ, ಸ್ವಾತ್ಮ ಸ್ವರೂಪದಲ್ಲಿ ಪೂರ್ವದ ತನ್ನ ಆವಿದ್ಯಕ ಜೀವಭಾವವನ್ನು ನೀಗಿಕೊಂಡು ಐಕ್ಯವನ್ನು (ಅಭೇದವನ್ನು) ಹೊಂದಿ, ಅಸ್ತಂಗತನಾಗದೆಯೇ ಸರ್ವದಾ ಉದಿತನಾಗಿಯೇ (ಜನನ ಮರಣರೂಪ ವಿಕಾರಗಳಿಗೆ ಒಂದಕ್ಕೂ ಸಿಕ್ಕದೆ ಅವಿಕ್ರಿಯನಾಗಿ ನಿತ್ಯಸಿದ್ಧನಾದ) ಪರಮಾತ್ಮನಾಗಿ ಬಿಟ್ಟಿರುವ ಈ ಜೀವನು ವ್ಯವಹಾರ ಫಲೇಚ್ಛಾಶೂನ್ಯನಾಗಿ (ಅರುಚಿಃ) ಸಕಲ ವ್ಯವಹಾರಗಳನ್ನು ಮಾಡುತ್ತಿದ್ದರೂ ಕೂಡ, ಅವಿದ್ಯಾಕಾಮ ಕರ್ಮವಾಸನಾದಿ ಆಸಕ್ತಿ ನಿಮಿತ್ತಗಳಿಂದ ಶೂನ್ಯನಾಗಿರುವ ಕಾರಣ ಕರ್ಮಜನ್ಯವಾದ ಫಲದಿಂದ ಸ್ವಲ್ಪವೂ ಸಂಪರ್ಕವನ್ನು (ಸಂಬಂಧ= ಲೇಪ) ಪಡೆಯದವನಾಗಿಯೇ ಇರುವನು. ಮತ್ತೂ ಆದರೆ ಪ್ರಾರಬ್ಧನಾಶಪರ್ಯಂತ ದೇಹಭಾರವನ್ನು ಮಾತ್ರ ವಹಿಸಿಕೊಂಡಿರುವವನಂತೆ ಕಾಣುವನು. [ತಸ್ಯತಾವದೇವ ಚಿರಂ ಯಾವನ್ನವಿಮೋಕ್ಷ್ಯೇ ಅಥ ಸಂಪತ್ಸ್ಯೇ, ಛಾಂದೋಗ್ಯ ಅಧ್ಯಾಯ ೬ ಕೊನೆ.]

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಶಾಂತಿಸಮಾಯಾತಯೋಗೋಪದೇಶ"ವೆಂಬ ಅರವತ್ತೊಂಬತ್ತನೆಯ ಸರ್ಗವು.

ಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಅಸಂಸಂಗ ಸುಖಾಭ್ಯಾಸ ಸಂಸ್ಥಿತೈರ್ವಿತತಾತ್ಮಭಿಃ ।
ವ್ಯವಹಾರಿಭಿರಪ್ಯಂತರ್ವೀತ ಶೋಕಭಯೈಃ ಸ್ಥಿತಂ ॥ ೧ ॥

ಪ್ರಕ್ಷುಬ್ಧಾಕ್ಷುಬ್ಧ ದೇಹಸ್ಯಾವಿಸಂವಾದೇನ ಸಂವಿದಃ ।
ಅಂತಃ ಪೂರ್ಣಸ್ಯ ವದನೇ ಶ್ರೀರಿಂದೋರಿವ ಲಕ್ಷ್ಯತೇ ॥ ೨ ॥

ಎಪ್ಪತ್ತನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು.

೧. ಅಯ್ಯ ರಾಮಚಂದ್ರ, ಬಾಹ್ಯಾನಾತ್ಮ ವಸ್ತುಗಳಲ್ಲಿ ಸಂಸಕ್ತಿಯನ್ನು ಸಂಪೂರ್ಣವಾಗಿ ಪರಿತ್ಯಾಗಮಾಡಿ ನಿತ್ಯನಿರತಿಶಯ ಸ್ವಾತ್ಮಾನಂದವನ್ನು ನಿರಂತರವೂ ಆಸ್ವಾದನೆ ಮಾಡುವುದರಲ್ಲಿ ವಿಶ್ರಾಂತರಾಗಿರತಕ್ಕ ಸರ್ವತ್ರ ಆತ್ಮ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಂಡು ಇರುವ ಜ್ಞಾನನಿಷ್ಠರು ಪ್ರಾಪಂಚಿಕ ವ್ಯವಹಾರ ನಿರತ ರಾಗಿದ್ದಾಗ್ಯೂ ಕೂಡ ಮನಸ್ಸಿನೊಳಗೆ ಶೋಕ ಭಯಾದಿವಿಕಾರಗಳೊಂದೂ ಇಲ್ಲದೆ ಸ್ವಸ್ಥರಾಗಿರುವರು.

೨. ಪತ್ನೀ ಪುತ್ರಾದಿಗಳ ಮತ್ತು ಧನಗಳ ನಾಶ, ಬಂಧನ, ಅಪಮಾನ ಮುಂತಾದ ಕಾರಣಗಳಿಂದ ಕಳವಳಗೊಂಡ ದೇಹವುಳ್ಳವನಂತೆ ತೋರುತ್ತಿದ್ದರೂ ವಸ್ತುತಃ ಮನಸ್ಸಿನಲ್ಲಿ ಸ್ವಲ್ಪವೂ ಕಳವಳಗೊಳ್ಳದವನಾಗಿರುವ ಸ್ಥಿತಪ್ರಜ್ಞನ ಚಿತ್ತ ವೃತ್ತಿಗೆ ಪರಮಾರ್ಥವಾದ ಆತ್ಮಾನಂದದಲ್ಲಿ ಸ್ವಲ್ಪವೂ ವಿರೋಧವಿಲ್ಲದಿರುವ ಕಾರಣ ಅವನು ಅಂತಃ ಪರಿಪೂರ್ಣನಾಗಿರುವನು. ಅಂತಹ ಮಹಾತ್ಮನ ಮುಖದಲ್ಲಿ ಪೂರ್ಣಚಂದ್ರನ ಮಂಡಲದಲ್ಲಿರುವಂತೆ ಕಾಂತಿಯು ಅತ್ಯಂತ ರಮಣೀಯ ವಾಗಿಯೂ ಪ್ರಸನ್ನವಾಗಿಯೂ ಕಾಣುವುದು.

ಚೇತ್ಯಹೀನಂ ಚಿದಾಲಂಬಂ ಮನೋ ಯಸ್ಯ ಗತಜ್ವರಂ ।
ತೇನಾಂಬು ಕತಕೇನೇವ ಜನತಾ ಸಂಪ್ರಸೀದತಿ ॥ ೩ ॥

ನಿತ್ಯಮಾತ್ಮದೃಶಾ ಲೀನೋ ಜ್ಞಃ ಸ್ವಸ್ಥಶ್ಚಂಚಲೋಽಪಿ ಸನ್ ।
ಕ್ಷುಬ್ಧೋ ದೃಶ್ಯತ ಏವಾಸೌ ಪ್ರತಿಬಿಂಬಾರ್ಕವನ್ಮೃಧಾ ॥ ೪ ॥

ಆತ್ಮಾರಾಮಾ ಮಹಾತ್ಮಾನಃ ಪ್ರಬುದ್ಧಾಃ ಪರಮೋದಯಾಃ ।
ಬಹಿಃ ಪಿಚ್ಛಾಗ್ರತರಲಾ ಅಂತರ್ಮೇರುರಿವಾಚಲಾಃ ॥ ೫ ॥

---

೩. ಯಾವ ಜ್ಞಾನ ನಿಷ್ಠನ ಮನಸ್ಸು ಚೇತ್ಯ (ಜ್ಞೇಯ= ಜ್ಞಾನ ವಿಷಯ ವಾಗುವ ದೃಶ್ಯ ವಸ್ತು) ರಹಿತವಾಗಿ ಚಿತ್ತನ್ನು ಮಾತ್ರ ಆಶ್ರಯಸಿಕೊಂಡು ಸಂತಾಪ ರಹಿತವಾಗಿರುವುದೋ ಅಂತಹ ಮಹಾತ್ಮನ ಅನುಗ್ರಹದಿಂದ ಕತಕವೆಂಬ ಒಂದು ಬಗೆಯ ಬೀಜದಿಂದ ಜಲವು ನಿರ್ಮಲವಾಗಿ ತಿಳಿಯಾಗುವಂತೆ ಸುತ್ತಮುತ್ತಲಿರುವ ಜನ ಸಮುದಾಯವೆಲ್ಲ ಕ್ಷೋಭಮಾಲಿನ್ಯವನ್ನು ಕಳೆದುಕೊಂಡು ಪ್ರಸನ್ನವಾಗು ವುದು. [ಇನ್ನು ಜ್ಞಾನನಿಷ್ಠನ ಮನಸ್ಸಿಗೆ ಕ್ಷೋಭವೆಲ್ಲಿಯದು ?]

೪. ಸ್ವಾತ್ಮತತ್ತ್ವ ಸಾಕ್ಷಾತ್ಕಾರದಿಂದ ಸರ್ವದಾ ಸ್ವಸ್ವರೂಪದಲ್ಲಿ ಲೀನನಾಗಿ ಸ್ವಸ್ಥನಾಗಿರುವ ತತ್ತ್ವಜ್ಞನು ಯಾವುದೊಂದು ವ್ಯವಹಾರವನ್ನೂ ಮಾಡದೆ ಸ್ಥಿರ ವಾಗಿದ್ದರೂ ಅಥವಾ ವ್ಯವಹಾರ ಪರನಾಗಿ ಚಂಚಲನಾಗಿದ್ದರೂ ಕೂಡ, ಸ್ವಚ್ಛವಾದ ಜಲದೊಳಗೆ ಪ್ರತಿಫಲಿಸಿರುವ ಸೂರ್ಯಮಂಡಲದ ಪ್ರತಿಬಿಂಬದಂತೆ ಅಸತ್ಯ ವಾಗಿಯೇ ಕ್ಷೋಭೆಗೊಂಡಿರುವವನಂತೆ ಹೊರಗೆ ಕಾಣಿಸಿಕೊಳ್ಳುವನು.

[ಜಲವು ಚಲಿಸದೆ ಇರುವಾಗ ಸೂರ್ಯನ ಪ್ರತಿಬಿಂಬವೂ ಚಲಿಸದಿರುವುದು. ಜಲವು ಚಲಿಸಿದರೆ ಪ್ರತಿಬಿಂಬವೂ ಚಲಿಸುವಂತೆ ಕಾಣುವುದು. ವಸ್ತುತಃ ಬಿಂಬವು ಚಲಿಸದೆಯೇ ಸ್ಥಿರವಾಗಿರುವುದು. ಇದರಂತೆ ತಿಳಿಯಬೇಕು.]

೫. ಸುದೃಢವಾದ ಆತ್ಮಜ್ಞಾನನಿಷ್ಠರಾಗಿಯೂ, ಉತ್ತಮೋತ್ತಮವಾದ ನಿಃಶ್ರೇಯಸವನ್ನು (ಪರಮ ಪುರುಷಾರ್ಥ) ಪಡೆದವರಾಗಿಯೂ ಇರುವ ಆತ್ಮಾರಾಮ ರಾದ ಮಹಾತ್ಮರು ಹೊರಗೆ ನವಿಲು ಗರಿಯ ತುದಿಯಂತೆ ಚಂಚಲವಾಗಿ ಕಾಣಿಸಿ ಕೊಳ್ಳುವರು. ಒಳಗಾದರೋ ವಸ್ತುತಃ ಅವರು ಮೇರು ಪರ್ವತದಂತೆ ಅತ್ಯಂತ ಸ್ಥಿರವಾಗಿಯೇ ಇರುವರು.

ಚಿತ್ತಮಾತ್ರತ್ವಮಾಯಾತಂ ಸುಖದುಃಖಾನುರಂಜನಂ ।
ನೋಪೈತಿ ರಂಗಸಂಯುಕ್ತೋ ಮಸೃಣಃ ಸ್ಫಟಿಕೋ ಯಥಾ　　॥ ೬ ॥

ಸಂಸಾರದೃಷ್ಟಿರುದಿತಂ ಜ್ಞಾತಲೋಕ ಪರಾವರಂ ।
ನ ರಂಜಯತಿ ಸಚ್ಚಿತ್ತಂ ಜಲಲೇಖಾ ಯಥಾಂಬುಜಂ　　॥ ೭ ॥

ಆತ್ಮಧ್ಯಾನ ಮಯೋಽಧ್ಯಾನೇ ಪ್ರಬೋಧಂ ಪರಮಾತ್ಮನಃ ।
ಕಲನಾಮಲನಿರ್ಮುಕ್ತಃ ಸ್ವಸಕ್ತ ಇತಿ ಕಥ್ಯತೇ　　॥ ೮ ॥

---

೬. ಅತ್ಯಂತ ಸ್ನಿಗ್ಧವಾಗಿರುವ ಸ್ಫಟಿಕ ಮಣಿಯು ಜಪಾ ಕುಸುಮ (ಕೆಂಪು ದಾಸವಾಳದ ಹೂ) ಮುಂತಾದ ರಂಜಕ ವಸ್ತುಗಳಿಂದ ಕೂಡಿಕೊಂಡಿದ್ದರೂ ವಸ್ತುತಃ ಅದು ಒಳಗೆ ಹೇಗೆ ಬಣ್ಣಗಳ ಸಂಪರ್ಕವನ್ನು ಪಡೆಯದೆ ಸ್ವಚ್ಛವಾಗಿಯೇ ಇರುವುದೋ, ಹಾಗೆಯೇ ಆತ್ಮಭಾವವನ್ನು ಜ್ಞಾನದಿಂದ ಸಂಪಾದಿಸಿಕೊಂಡ ಚಿತ್ತವು ವ್ಯವಹಾರಗಳಿಂದ ಕೂಡಿಕೊಂಡಿದ್ದರೂ ಸಂಸಕ್ತಿಶೂನ್ಯವಾಗಿರುವ ಕಾರಣ, ಸುಖದುಃಖಾದಿಗಳ ಲೇಪವನ್ನು ಹೊಂದುವುದಿಲ್ಲ.

೭. ಜಲ ಬಿಂದುಗಳ ಸಮುದಾಯಗಳು ಕಮಲ ದಳಗಳನ್ನು ಹೇಗೆ ಅಂಟಿಸಿಕೊಳ್ಳುವುದಿಲ್ಲವೋ ಹಾಗೆ ನಿರತಿಶಯಾನಂದ ರೂಪ ಅಭ್ಯುದಯವನ್ನು ಪಡೆದವನಾಗಿಯೂ ಸರ್ವಲೋಕಾತೀತವಾದ ಪರಮೇಶ್ವರ ತತ್ತ್ವವನ್ನೂ, ಜೀವ ತತ್ತ್ವವನ್ನೂ ಕೂಡ ಯಥಾರ್ಥವಾಗಿ ತಿಳಿದಿರುವವನಾಗಿಯೂ, ಕೇವಲ ಸತ್ತ್ವ ಪ್ರಧಾನವಾದ ಮನಸ್ಸುಳ್ಳವನಾಗಿಯೂ ಇರುವ ಜ್ಞಾನನಿಷ್ಠನನ್ನು ಈ ಸಂಸಾರ ದೃಷ್ಟಿಯು ಆಕ್ರಮಿಸುವುದೂ ಇಲ್ಲ. ಮತ್ತು ಇದರ ರಾಗದ್ವೇಷ ಸುಖ ದುಃಖಾದಿ ದ್ವಂದ್ವಗಳ ಸಂಪರ್ಕವೂ ಜ್ಞಾನನಿಷ್ಠನಿಗೆ ಸರ್ವಥಾ ಇರುವುದಿಲ್ಲ.

೮. ಜೀವನು ಪರಮಾತ್ಮನ ಸಚ್ಚಿದಾನಂದ ಸ್ವರೂಪ ತತ್ತ್ವ ಜ್ಞಾನವನ್ನು ಪಡೆದು, ಸಂಕಲ್ಪ ಹೇತುಗಳಾದ ಅವಿದ್ಯಾ ಕಾಮಕರ್ಮಾದಿ ದೋಷಗಳಿಂದ ವಿವರ್ಜಿತನಾಗಿ, ನಿರತಿಶಯಾನಂದಾತ್ಮಕ ಸ್ವರೂಪವು ತಾನಾಗಿಯೇ ಸ್ಪಷ್ಟವಾಗಿ ಸ್ಫುರಿಸುತ್ತಿರುವ ಕಾರಣ, ನಿರ್ವಿಕಲ್ಪ ಸಮಾಧಿಯಲ್ಲಿ ಹೇಗೋ ಹಾಗೆ ಧ್ಯಾನಮಾಡದೆ ಇರುವ ಸ್ಥಿತಿಯಲ್ಲಿದ್ದರೂ ಕೂಡ, ಆತ್ಮಧ್ಯಾನಮಯನಾಗಿರುವವನಂತೆ ತೋರುತ್ತಾ ಯಾವಾಗ ಸುಖಸಾಗರದಲ್ಲಿ ಮಗ್ನನಾಗುವನೋ ಆಗ ಅವನು ಸ್ವಸಂಸಕ್ತನೆನ್ನಿಸುವನು.

ಆತ್ಮಾರಾಮತಯಾ ಜೀವೋ ಯಾತ್ಯಸಂಸಂಗತಾಮಿಹ ।
ಆತ್ಮಜ್ಞಾನೇನ ಸಂಸಂಗಸ್ತನುತಾಮೇತಿ ನಾನ್ಯಥಾ ॥ ೯ ॥

ಜಾಗ್ರತ್ಯೇವ ಸುಷುಪ್ತಸ್ಥೋ ಜೀವೋ ಭವತಿ ರಾಘವ ।
ಅಸ್ಯಾಂ ದೃಶಿ ಗಶೋಽದ್ವಂದ್ವೋ ನಿತ್ಯಾನಸ್ತಮಯೋದಯಃ ॥ ೧೦ ॥

ಅತ್ರ ಪ್ರೌಢಿಮುಪಾಯಾತಃ ಸೂರ್ಯತಾಮೇತಿ ಪಾವನೀಂ ।
ಪರಿಣಾಮವಶಾದಿಂದುರ್ಜಮಾನಾಸ್ಯಾರ್ಕತಾ ಮಿವ ॥ ೧೧ ॥

---

೯. ಜೀವನು ಪರಿಪಕ್ವವಾದ ಸ್ವಾತ್ಮ ತತ್ತ್ವ ಜ್ಞಾನ ನಿಷ್ಠೆಯಿಂದ ಆತ್ಮಾರಾಮನಾಗಿದ್ದುಕೊಂಡು ಆತ್ಮ ಸಂಸಕ್ತಿಯನ್ನು ಅವಿಚ್ಛಿನ್ನವಾಗಿ ವಹಿಸುವುದರಿಂದ ಈ ಪ್ರಪಂಚದಲ್ಲಿನ ಬಾಹ್ಯ ವಸ್ತುಗಳಲ್ಲಿರುವ ಸಂಸಕ್ತಿಯನ್ನು ಕ್ರಮೇಣ ನಿಶ್ಶೇಷವಾಗಿ ಕಳೆದುಕೊಳ್ಳುವನು. ಹೀಗೆ ಆತ್ಮ ಸಂಸಕ್ತಿಯನ್ನು ಪಡೆಯದೆ ಹೋದರೆ ಇನ್ನಾವ ಉಪಾಯಾಂತರದಿಂದಲೂ ಬಾಹ್ಯ ವಸ್ತುಗಳಲ್ಲಿ ಸಹಜವಾಗಿರುವ ಸಂಸಕ್ತಿಯು ಕ್ಷೀಣವಾಗುವುದಿಲ್ಲ.

೧೦. ಅಯ್ಯ ರಾಘವ, ಪೂರ್ವೋಕ್ತವಾದ ಈ ಆತ್ಮ ಸಂಸಕ್ತಿ ದೃಷ್ಟಿಯಲ್ಲಿ ಪರಿಣತನಾಗಿಯೂ ಇಷ್ಟಾನಿಷ್ಟಾದಿ ದ್ವಂದ್ವರಹಿತನಾಗಿಯೂ ಸರ್ವದಾ ಮರಣ ಜನನಾದಿ ವಿಕಾರಗಳಿಲ್ಲದವನಾಗಿಯೂ ಪರಮಾರ್ಥಸತ್ಯವಾಗಿಯೂ ಇರುವ ಜೀವನು ಸಕಲ ಭೂತಗಳೂ ಎಚ್ಚರವಾಗಿ ವ್ಯವಹಾರಮಾಡುತ್ತಿರುವ ಕಾಲದಲ್ಲಿಯೆ ಸುಷುಪ್ತ ಸ್ಥಿತಿಯಲ್ಲಿ ಹೇಗೋ ಹಾಗೆ ಸತ್ಸಂಪನ್ನನಾಗಿ ಯಾವ ವ್ಯವಹಾರವನ್ನೂ ಮಾಡದೆ ಸ್ವಸ್ಥನಾಗಿ ಇರುವನು [ಯಾ ನಿಶಾ ಸರ್ವ ಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ಯಸ್ಯಾಂ ಜಾಗ್ರತಿ ಭೂತಾನಿ ಸಾನಿಶಾಪಶ್ಯತೋ ಮುನೇಃ ಗೀತಾ ೨-೬೯ ಇದರ ಅರ್ಥವನ್ನು ಇದೇ ಪ್ರಕರಣದಲ್ಲಿ ಹಿಂದೆ ವಿವರಿಸಲಾಗಿದೆ.]

೧೧. ಪುನಃ ಪುನಃ ಈ ಆತ್ಮ ಸಂಸಕ್ತಿಯನ್ನು ಅಭ್ಯಾಸ ಮಾಡುತ್ತಾ ಕ್ರಮೇಣ ವೃದ್ಧಿಪಡಿಸಿಕೊಂಡು ಸ್ಥಿರನಿಷ್ಠನಾಗಿರುವ ಜೀವನು ದಿನಕ್ರಮೇಣ ಕೃಷ್ಣಪಕ್ಷದಲ್ಲಿ ಒಂದೊಂದಾಗಿ ಕಲೆಗಳನ್ನು ಕಳೆದುಕೊಂಡು ಇರುವ ಕಾರಣ, ಜಲಮಯವಾದ ಮಂಡಲದಲ್ಲಿ ಸೂರ್ಯನ ಪ್ರತಿಬಿಂಬವಾಗಿರುವ ಚಂದ್ರನು ಅಮಾವಾಸ್ಯೆಯ ದಿನ ತನ್ನ ಬಿಂಬಭೂತವಾದ ಸೂರ್ಯನ ಭಾವವನ್ನೇ ಹೊಂದುವಂತೆ ಅತಿ ಪವಿತ್ರವಾದ (ಅವಿದ್ಯಕ ದೋಷರಹಿತವಾದ) ಸೂರ್ಯನ ಭಾವವನ್ನು (ಅಂದರೆ ಸ್ವಯಂಪ್ರಕಾಶಮಾನವಾದ ನಿತ್ಯ ಶುದ್ಧ ಚಿದ್ರೂಪವನ್ನು) ಹೊಂದುವನು.

ಚಿತ್ತೇ ಚಿತ್ತದಶಾಹೀನೇ ಯಾ ಸ್ಥಿತಿಃ ಕ್ಷೀಣಚೇತಸಾಂ ।
ಸೋಽಚ್ಯತೇ ಶಾಂತಕಲನಾ ಜಾಗ್ರತ್ಯೇವ ಸುಷುಪ್ತತಾ ॥ ೧೨ ॥

ತಾಂ ಸುಷುಪ್ತದಶಾಮೇತ್ಯ ಜೀವನ್ವ್ಯವಹರನ್ನರಃ ।
ಸುಖದುಃಖ ವರತ್ರಾಭಿರ್ನ ಕದಾಚನ ಕೃಷ್ಯತೇ ॥ ೧೩ ॥

ಜಾಗ್ರತ್ಯೇವ ಸುಷುಪ್ತಸ್ಥೋ ಯಃ ಕರೋತಿ ಜಗತ್ಕ್ರಿಯಾಂ ।
ತಂ ಯಂತ್ರಪುತ್ರಕಮಿವ ನಾಯಾತಿ ಸುಖದುಃಖದೃಕ್ ॥ ೧೪ ॥

---

೧೨. ಬಾಹ್ಯ ವಸ್ತುಗಳನ್ನು ಕುರಿತು ಓಡಿಹೋಗಿ, ಅವುಗಳ ಆಕಾರದಿಂದ ಪರಿಣಾಮಹೊಂದಿ ನಾನಾ ಭೇದ ವೃತ್ತಿಗಳನ್ನು ಕಲ್ಪಿಸತಕ್ಕ ಸಾಮರ್ಥ್ಯವುಳ್ಳ ಚಿತ್ತವು ವಿವೇಕವೈರಾಗ್ಯಾಭ್ಯಾಸಗಳ ಮೂಲಕ ತನ್ನ ಹಿಂದಿನ ಚಿತ್ತತ್ವರೂಪ ದಶೆಯನ್ನು ಕಳೆದುಕೊಂಡು ನಿರ್ವಿಷಯವಾಗಿ ಬಿಡಲು, ಮನೋನಾಶವನ್ನು ಮಾಡಿಕೊಂಡಿರತಕ್ಕ ಆತ್ಮಸಂಸಕ್ತರಾದ ಜ್ಞಾನಿಗಳಿಗೆ ಸಕಲ ಕಲ್ಪನಾಶೂನ್ಯವಾದ ಯಾವ ಸ್ವಸ್ವರೂಪಾವಸ್ಥಿತಿಯು (ನಿರ್ವಿಕಲ್ಪಾತ್ಮ ಸ್ಥಿತಿಯು) ಉಂಟಾಗುವುದೋ, ಆ ಸ್ಥಿತಿಯನ್ನೇ ಜಾಗ್ರತ್ತಿನಲ್ಲಿಯೇ ಸಂಭವಿಸುವ ಸುಷುಪ್ತತ್ವವು ಎಂಬುದಾಗಿ ಪ್ರಾಜ್ಞರು ಕರೆಯುವರು. (ವ್ಯವಹರಿಸುವರು.)

೧೩. ಇಂತಹ ಸುಷುಪ್ತ ಸ್ಥಿತಿಯಲ್ಲಿದ್ದುಕೊಂಡು ಪ್ರಾರಬ್ಧ ಕ್ಷಯ ಪರ್ಯಂತ ದೇಹವನ್ನು ಧರಿಸಿಕೊಂಡು ಜೀವಿಸಿರುತ್ತಾ ಸ್ವೋಚಿತವಾದ ಆಯಾ ವ್ಯವಹಾರಗಳನ್ನು ನಡೆಯಿಸುತ್ತಿರುವವನಾದರೂ ಜೀವನ್ಮುಕ್ತನಾದ ಮಹಾನುಭಾವನು ಅಸಂಸಕ್ತನಾಗಿರುವ ಕಾರಣ ಪುನಃ ಎಂದೆಂದಿಗೂ ಆ ವ್ಯವಹಾರಜನ್ಯವಾದ ಸುಖದುಃಖಾದಿ ಫಲಗಳೆಂಬ ಲಗಾಮುಗಳಿಂದ ಬದ್ಧನಾಗಿ ಆಕರ್ಷಿಸಲ್ಪಡುವುದಿಲ್ಲ.

೧೪. ಜನಗಳು ಕುಣಿಸಿದ ಹಾಗೆ ಕುಣಿದಾಡುವ, ಯಂತ್ರಮಯವಾದ ಗೊಂಬೆಯು, ತನ್ನ ಲೀಲೆಗಳಲ್ಲಿ ಅಭಿಮಾನಶೂನ್ಯವಾಗಿರುವ ಕಾರಣ, ಅವುಗಳಿಂದ ಹರ್ಷವಿಷಾದಾದಿಗಳನ್ನು ಹೇಗೆ ಅನುಭವಿಸಲಾರದೋ ಹಾಗೆಯೇ ಅಜ್ಞಜನರಿಗೆಲ್ಲಾ ವ್ಯವಹಾರಹೇತುವಾಗಿ ಜಾಗ್ರತ್ತಿನಂತೆ ಇರುವ ಕಾಲದಲ್ಲಿಯೇ ಸುಷುಪ್ತ ಕಾಲದಂತೆ ಸರ್ವ ವ್ಯವಹಾರ ಶೂನ್ಯವಾಗಿ ಸ್ವಸ್ಥನಾಗಿರುವ ಜ್ಞಾನನಿಷ್ಠನು, ಪ್ರಪಂಚದಲ್ಲಿ ವ್ಯವಹಾರಗಳನ್ನು ಮಾಡುತ್ತಿರುವವನಾಗಿ ಕಂಡರೂ. ಆ ವ್ಯವಹಾರಗಳಿಗೆ ಸಂಬಂಧಿಸಿದ ಸುಖದುಃಖಾದಿ ಫಲದೃಷ್ಟಿಯು ಅವನನ್ನು ಎಂದಿಗೂ

ಚಿತ್ತಸ್ಯ ಬಾಧಿಕಾ ಶಕ್ತಿರ್ಭಾವಾಭಾವೋಪತಾಪದಾ ।
ಆತ್ಮತಾಮಾಗತೇ ಚಿತ್ತೇ ತಸ್ಯ ಕಿಂ ಬಾಧತೇ ಕಥಂ ॥ ೧೫ ॥

ಸುಷುಪ್ತಬುದ್ಧಿಃ ಕರ್ಮಾಣಿ ಪೂರ್ವಮೇವಾವಹೇಲಯಾ ।
ಕುರ್ವನ್ನ ಬಾಧ್ಯತೇ ಜೀವೋ ಜೀವನ್ಮುಕ್ತತಯಾ ಸ್ಥಿತಃ ॥ ೧೬ ॥

ಸೌಷುಪ್ತೀಂ ವೃತ್ತಿಮಾಶ್ರಿತ್ಯ ಕುರು ಮಾ ಕುರು ವಾನಘ ।
ಕರ್ಮ ಪ್ರಕೃತಿಜಂ ಪಾಕವಶಾದುಪಗತಂ ಸ್ಥಿತಂ ॥ ೧೭ ॥

ಆಕ್ರಮಿಸುವುದೂ ಇಲ್ಲ, ವಿಕಾರಗೊಳಿಸುವುದೂ ಇಲ್ಲ. ಏಕೆಂದರೆ ಅವನಿಗೂ ತನ್ನ ವ್ಯವಹಾರಗಳಲ್ಲಿ ಅಹಂಭಾವರೂಪ ಕರ್ತೃತ್ವವೂ, ಮಮತಾರೂಪ ಭೋಕ್ತೃತ್ವವೂ ಸರ್ವಥಾ ಇಲ್ಲವಾಗಿ ಹೋಗಿರುವುದು.

೧೫. ಸರ್ವ ವ್ಯವಹಾರಗಳಲ್ಲಿಯೂ ಸಾಮಾನ್ಯವಾಗಿರುವ ಅಹಂಭಾವ (ನಾನು ಈ ಫಲಕ್ಕಾಗಿ, ಈ ಕೆಲಸವನ್ನು ಇಂತಹ ಸಾಧನಗಳಿಂದ ಹೀಗೆ ಮಾಡುವೆನು. ಎಂಬೀ ಮೊದಲಾದ ಭಾವನೆ) ರೂಪ ಶಕ್ತಿಯೇ ಮನಸ್ಸಿಗೆ ಅತ್ಯಂತ ದುರ್ಭರಗಳಾದ ಅನೇಕ ದುಃಖಗಳನ್ನು ತಂದು ಒಡ್ಡುವುದು. ಆ ಶಕ್ತಿಯು ಪ್ರಿಯಾಪ್ರಿಯಗಳ (ಇಷ್ಟಾನಿಷ್ಟ) ಲಾಭನಷ್ಟಗಳ ಮೂಲಕ ಬಹುವಿಧ ಸಂತಾಪಗಳನ್ನು ಸರ್ವದಾ ಕೊಡುತ್ತಿರುವುದು. ಯಾವಾಗ ಚಿತ್ತವು (ಮನಸ್ಸು) ಆತ್ಮಭಾವವನ್ನು ಹೊಂದಿಬಿಡುವುದೋ (ಚಿತ್ತತ್ವವನ್ನು ಕಳೆದುಕೊಂಡು) ಆಗ ಯಾವುದು ಹೇಗೆ ಅದನ್ನು ಬಾಧಿಸಲಾಗುವುದು ? ಯಾವುದೊಂದೂ ಹೇಗೂ ಬಾಧಿಸಲಾರದು ಎಂದು ತಾತ್ಪರ್ಯ.

೧೬. ಜಾಗ್ರತ್ತಿನಲ್ಲಿಯೇ ಸುಷುಪ್ತ ಸ್ಥಿತಿಯುಳ್ಳವನಾಗಿ ಕ್ಷೀಣಮನಸ್ಕನಾದ ಜೀವನು ಜೀವನ್ಮುಕ್ತಾತ್ಮಭಾವದಿಂದ ಇದ್ದುಕೊಂಡಿರುವನು. ಹಿಂದೆ ಅವನು ವಿವೇಕ ವೈರಾಗ್ಯಾದಿ ಸಾಧನಗಳನ್ನು ಅಭ್ಯಾಸಮಾಡುತ್ತಿದ್ದ ಕಾಲವನ್ನು ಮೊದಲುಗೊಂಡೇ ಸರ್ವದಾ ಅಸಂಸಕ್ತನಾಗಿ, ಅಭಿಮಾನರಾಹಿತ್ಯದಿಂದ ವ್ಯವಹಾರಗಳನ್ನು ಮಾಡುತ್ತಿರುವವನಾದ ಕಾರಣ, ಆ ಕರ್ಮಗಳು ಅವನಿಗೆ ಎಂದೆಂದಿಗೂ ಸರ್ವಥಾ ಬಂಧನಹೇತುಗಳಾಗುವುದಿಲ್ಲ, ಸಂಸಾರಪ್ರದಗಳಾಗುವುದಿಲ್ಲ.

೧೭. ಅಯ್ಯ ಅನಘನಾದ ರಾಮಚಂದ್ರ, ನೀನೂ ಕೂಡ ಸ್ಥಿತಪ್ರಜ್ಞನಂತೆ ಜಾಗ್ರತ್ತಿನಲ್ಲಿಯೇ ಸುಷುಪ್ತಕಾಲಿಕವಾದ ಸ್ವಸ್ಥತಾರೂಪ ವೃತ್ತಿಯನ್ನಾಶ್ರಯಿಸಿ,

ನಾದಾನಂ ನ ಪರಿತ್ಯಾಗಃ ಕರ್ಮಣೋಽಜ್ಞಾಯ ರೋಚತೇ ।
ತಿಷ್ಠಂತ್ಯವಗತಾತ್ಮಾನೋ ಯಥಾ ಪ್ರಾಪ್ತಾನುವರ್ತಿನಃ ॥ ೧೮ ॥

ಕುರ್ವನ್ನಪಿ ನ ಕರ್ತಾಸಿ ಸುಷುಪ್ತೈಕಸ್ಥಯಾ ಧಿಯಾ ।
ಅಕರ್ತಾಪಿ ಚ ಕರ್ತಾಸಿ ಯಥೇಚ್ಛಸಿ ತಥಾ ಕುರು ॥ ೧೯ ॥

ವರ್ಣಾಶ್ರಮಾದಿ ಸ್ವಭಾವೋಚಿತಗಳಾದ ಪ್ರಾರಬ್ಧ ಕರ್ಮ ಪರಿಪಾಕವಶದಿಂದ ತಾನಾಗಿಯೇ ಸಂಪ್ರಾಪ್ತಗಳಾದ ಲೋಕದಲ್ಲಿಯೂ, ಶಾಸ್ತ್ರಗಳಲ್ಲಿಯೂ ಪ್ರಸಿದ್ಧಗಳಾಗಿರುವ ಕರ್ಮಗಳನ್ನೆಲ್ಲ, ಮಾಡುವವನಾಗಿರು ಅಥವಾ ಮಾಡದವನಾಗಿಯಾದರೂ ಇರು. ಆದರಿಂದ ಯಾವ ಫಲವೂ ಇಲ್ಲ ಅಥವಾ ಪ್ರತ್ಯವಾಯವೂ ಇಲ್ಲ.

೧೮. ಪರಿನಿಷ್ಠಿತಾತ್ಮಜ್ಞಾನ ಸಂಪನ್ನನಾದ ಜೀವನ್ಮುಕ್ತನಿಗೆ ಕರ್ಮಗಳ ಪರಿಗ್ರಹವೂ ರುಚಿಸುವುದಿಲ್ಲ. ಅಂತೆಯೇ ಪರಿತ್ಯಾಗವೂ ರುಚಿಸುವುದಿಲ್ಲ. ಹೀಗೆ ತಾನಾಗಿ ಯಾವದೊಂದು ಕರ್ಮವನ್ನು ಪರಿಗ್ರಹಿಸದೆಯೂ ಮತ್ತು ಪರಿತ್ಯಜಿಸದೆಯೂ ರಾಗ ದ್ವೇಷ ರಹಿತನಾಗಿ ಸಿದ್ಧ್ಯಸಿದ್ಧಿಗಳಲ್ಲಿ ಸಮನಾಗಿ ವರ್ತಿಸುವನು. ಆತ್ಮ ತತ್ತ್ವಜ್ಞರು ಯಾದೃಚ್ಛಿಕವಾಗಿ ತಾನಾಗಿಯೇ ಪ್ರಾಪ್ತವಾದ ಕರ್ಮಗಳನ್ನು ಅಭಿಮಾನ ರಹಿತರಾಗಿ ಆಚರಿಸುತ್ತಾ ರಾಗ ದ್ವೇಷಗಳಿಲ್ಲದೆ ಸ್ವಸ್ಥರಾಗಿರುವರು. (ಗೀತಾ ೪–೧೨)

೧೯. ನೀನು ತತ್ತ್ವಜ್ಞನಾಗಿರುವೆಯಾದರೆ ಸುಷುಪ್ತಿ ಸ್ಥಿತಿಮಾತ್ರದಲ್ಲಿ ವಿಶ್ರಾಂತವಾಗಿರುವ ಅತಿ ಪವಿತ್ರವಾದ ರಾಗ ದ್ವೇಷ ಶೂನ್ಯವಾದ ಮಹೋದಾರ ಬುದ್ಧಿಯಿಂದ ಅಭಿಮಾನ ರಹಿತನಾಗಿ ವ್ಯವಹಾರಗಳನ್ನು ಮಾಡುತ್ತಿರುವವನಾಗಿದ್ದರೂ ವಾಸ್ತವವಾಗಿ ನೀನು ಕರ್ತೃವಲ್ಲವು ಅಥವಾ ತತ್ತ್ವಜ್ಞನಲ್ಲವಾಗಿದ್ದರೆ ಆಗ ಶರೀರ ವ್ಯಾಪಾರಗಳನ್ನು ನಿಲ್ಲಿಸಿಬಿಟ್ಟು ಕದಲದೆ ಯಾವ ಕೆಲಸವನ್ನೂ ಮಾಡದೆ ಇರುವವನಾಗಿದ್ದರೂ ನಿಜವಾಗಿ ನೀನು ಕರ್ತೃವೇ ಆಗಿರುವೆ. ಅದು ಕಾರಣ ನೀನು ತತ್ತ್ವಜ್ಞನಾಗಿರುತ್ತಾ ನಿನ್ನ ಇಚ್ಛೆಯಂತೆ ಕರ್ಮಗಳನ್ನು ಮಾಡುತ್ತಲೋ ಅಥವಾ ಮಾಡದೆಯೋ ಹೇಗಾದರೂ ಇರು ಬಾಧಕವಿಲ್ಲ.

ಯಥಾ ನ ಕಿಂಚಿತ್ಕಲಯನ್ಮಂಚಕೇ ಸ್ಪಂದತೇ ಶಿಶುಃ ।
ತಥಾ ಫಲಾನ್ಯಕಲಯನ್ಕುರು ಕರ್ಮಾಣಿ ರಾಘವ ॥ ೨೦ ॥

ಅಚೇತ್ಯಚಿತ್ಪದಸ್ವಸ್ಥೋ ಜಾಗ್ರತ್ಯಪಿ ಸುಷುಪ್ತಧೀಃ ।
ಯದ್ಯತ್ಕರೋತಿ ಲಬ್ಧಾತ್ಮಾ ತಸ್ಮಿಂಸ್ತಸ್ಯ ನ ಕರ್ತೃತಾ ॥ ೨೧ ॥

ದಶಾಮಾಸಾದ್ಯ ಸೌಷುಪ್ತೀಂ ಸ್ವಚಿತ್ತೇ ಚ ವಿವಾಸನಃ ।
ಅಂತಃಶೀತಲತಾಮೇತಿ ಜ್ಞೋ ರಸೇನ ಯಥಾ ಶಶೀ ॥ ೨೨ ॥

---

೨೦. ಅಯ್ಯ ರಾಘವ, ಲೋಕದಲ್ಲಿ ಎಳೆ ಮಕ್ಕಳು ಮನಸ್ಸಿನಲ್ಲಿ ಯಾವ ಸಂಕಲ್ಪವೂ ಇಲ್ಲದೆ ಸುಮ್ಮನೆ ಕೈಕಾಲುಗಳನ್ನು ಅಲ್ಲಾಡಿಸುತ್ತಾ ತೊಟ್ಟಿಲಲ್ಲಿ ಮಲಗಿಕೊಂಡು ಹೇಗೆ ಸ್ವಸ್ಥವಾಗಿರುವುವೋ ಹಾಗೆ ನೀನೂ ಮನಸ್ಸಿನಲ್ಲಿ ಫಲಗಳನ್ನು ಕುರಿತು ಯೋಚನೆ ಮಾಡದೆಯೇ ಪರಮೇಶ್ವರ ಪ್ರೀತ್ಯರ್ಥವಾಗಿ ವಿಹಿತವಾದ ಕರ್ಮಗಳನ್ನು ಯೋಗ ಬುದ್ಧಿಯನ್ನಾಶ್ರಯಿಸಿ ಮಾಡಿಕೊಂಡಿರು.

೨೧. ಚೇತ್ಯಗಳಾದ ಸರ್ವದೃಶ್ಯಗಳಿಂದ ವಿವರ್ಜಿತವಾದ ಕೇವಲ ಚಿದ್ರೂಪ ಪರಮಪದದಲ್ಲಿ ವಿಶ್ರಾಂತಿಯನ್ನು ಪಡೆದು ಸತ್ಸಂಪತ್ತಿಯಿಂದ ಸ್ವಸ್ಥನಾಗಿರುವ ಮತ್ತು ತತ್ತ್ವಸಾಕ್ಷಾತ್ಕಾರದಿಂದ ಸ್ವಾತ್ಮಲಾಭವನ್ನು ಪಡೆದು ನಿತ್ಯತೃಪ್ತನಾಗಿರುವ ಮಹಾತ್ಮನು ಜಾಗ್ರತ್ತಿನಲ್ಲಿ ವ್ಯವಹಾರ ಮಾಡುತ್ತಿರುವಾಗಲೂ ಕೂಡ ಸುಷುಪ್ತ ಸ್ಥಿತಿಯಲ್ಲಿರುವಂತೆ ಸಕಲ ವ್ಯವಹಾರಾಭಾವರೂಪ ನಿಷ್ಕ್ರಿಯಾತ್ಮ ಭಾವ ಬುದ್ಧಿಯುಳ್ಳವನಾಗಿ ಅಸಂಸಕ್ತನಾಗಿರುವ ಕಾರಣ ಅವನು ತನ್ನ ದೇಹದಿಂದ ಯಾವ ಯಾವ ಕರ್ಮವನ್ನು ಮಾಡುತ್ತಿದ್ದರೂ ಕೂಡ ಆಯಾ ಕರ್ಮಗಳಲ್ಲೆಲ್ಲಾ ಅವನಿಗೆ ಕರ್ತೃತ್ವವು ಇಲ್ಲವೇ ಇಲ್ಲ.

೨೨. ಜಾಗ್ರದ್ವ್ಯವಹಾರದಲ್ಲಿಯೂ ಕೂಡ ಸುಷುಪ್ತದಶೆಯ ನಿಷ್ಕ್ರಿಯಾತ್ಮ ಸ್ಥಿತಿಯನ್ನು ಆಶ್ರಯಿಸಿ ತನ್ನ ಮನಸ್ಸಿನಲ್ಲಿಯೂ ಕಾಮ ಕರ್ಮಾದಿ ಸಕಲವಾಸನಾ ರಹಿತನಾಗಿರುವ ಜ್ಞಾನನಿಷ್ಠನು ನಿತ್ಯ ನಿರತಿಶಯಾತ್ಮಾನಂದ ಲಾಭದಿಂದ ಚಂದ್ರನಂತೆ ಸರ್ವದಾ ಅಂತಃ ಶೀತಲನಾಗಿ ಪ್ರಸನ್ನನಾಗಿರುವನು.

(ರಸೋವೈಸಃ ರಸಗ್ಗ್ಂ ಹ್ಯೇವಾಯಂಲಬ್ಧ್ವಾ ಆನಂದೀಭವತಿ ತೈತ್ತಿರೀಯ)

ಸುಷುಪ್ತಸ್ಥೋ ಮಹಾತೇಜಾಃ ಪೂರ್ಣಃ ಪೂರ್ಣೇಂದುಬಿಂಬವತ್ ।
ಸಮಃ ಸರ್ವಾಸ್ವವಸ್ಥಾಸು ಭವತ್ಯದ್ರಿರ್ಯಥರ್ತುಷು ॥ ೨೩ ॥
ಸುಷುಪ್ತಸಂಸ್ಥೋ ಧೀರಾತ್ಮಾ ಬಹಿರಾಯಾತಿ ಲೋಲತಾಂ ।
ಕ್ರಿಯಾಸು ನೋ ಭವತ್ಕಂಪಃ ಪ್ರಸ್ಪಂದಿತ ಇವಾಚಲಃ ॥ ೨೪ ॥
ಸುಷುಪ್ತಾವಸ್ಥಿತೋ ಭೂತ್ವಾ ದೇಹಂ ವಿಗತಕಲ್ಮಷಃ ।
ಪಾತಯಾಶ್ವಥ ವಾ ದೀರ್ಘಂ ಕಾಲಂ ಧಾರಯ ಶೈಲವತ್ ॥ ೨೫ ॥

---

೨೩. ಜಾಗ್ರತ್ತಿನಲ್ಲಿಯೂ ಸುಷುಪ್ತ ಸ್ಥಿತಿಯುಳ್ಳವನಾಗಿರುತ್ತ ಷೋಡಶ ಕಲಾ ಪರಿಪೂರ್ಣವಾದ ಪೂರ್ಣಿಮಾ ಚಂದ್ರಮಂಡಲದಂತೆ ಪರಿಪೂರ್ಣನಾಗಿಯೂ ಸುಪ್ರಸನ್ನನಾಗಿಯೂ ಮಹಾ ತೇಜಸ್ವಿಯಾಗಿಯೂ ಇರುವ ಜ್ಞಾನ ನಿಷ್ಠನು ಸಕಲ ಋತುಗಳಲ್ಲಿಯೂ ಪರ್ವತವು ಏಕರೀತಿಯಿಂದ ಸ್ಥಿರವಾಗಿರುವಂತೆ ಸರ್ವಾವಸ್ಥೆಗಳಲ್ಲಿಯೂ ಸಮನಾಗಿ ಅವಿಕ್ರಿಯನಾಗಿಯೇ ಇರುವನು.

೨೪. ವಾಯುವು ಪರ್ವತದ ಮೇಲೆ ಬೀಸುತ್ತಿರಲು ಅಲ್ಲಿ ಬೆಳೆದಿರುವ ಹುಲ್ಲು ಗಿಡ ಮರಗಳು ವಾಯುವೇಗದಿಂದ ಚಲಿಸುವುದನ್ನು ಕಾಣಬಹುದು. ಇಷ್ಟು ಮಾತ್ರದಿಂದ ಪರ್ವತವು ತನ್ನ ಹೊರಗಡೆ ಚಂಚಲವಾಗಿರುವಂತೆ ತೋರಿದರೂ ಒಳಗಡೆ ಸ್ವಲ್ಪವೂ ಚಲನವಿಲ್ಲದೆ ವಸ್ತುತಃ ಅಚಲವಾಗಿಯೇ ಇರುವಂತೆ ಜಾಗ್ರತ್ತಿನಲ್ಲಿಯೂ ಸುಷುಪ್ತಸ್ಥಿತಿಯಲ್ಲಿರುವಂತೆಯೇ ನಿರುಪದ್ರವನಾಗಿರುವ ಕಾರಣ ಸಕಲ ಲೌಕಿಕ ವೈದಿಕ ಕರ್ಮಗಳನ್ನು ಆಚರಿಸುತ್ತಾ ಚಾಂಚಲ್ಯವುಳ್ಳವನಂತೆ ಕಂಡು ಬಂದರೂ ಅಂತಃ, ಚಾಂಚಲ್ಯರಹಿತನಾಗಿಯೇ ನಿಷ್ಕ್ರಿಯಾತ್ಮ ನಿಷ್ಠೆಯಿಂದ ಚ್ಯುತನಾಗದೆ ಅಚಲನಾಗಿರುವನು.

೨೫. ಅಯ್ಯ ರಾಮ, ನೀನೂ ಕೂಡ ಜ್ಞಾನನಿಷ್ಠನಂತೆ ಜಾಗ್ರತ್ತಿನಲ್ಲಿ ಸಕಲ ವ್ಯವಹಾರಗಳನ್ನು ಮಾಡುತ್ತಿರುವವನಾದರೂ ಸುಷುಪ್ತ ಸ್ಥಿತಿಯಲ್ಲಿರುವಂತೆ ನಿಷ್ಕ್ರಿಯನಾಗಿಯೂ, ಸ್ವಸ್ಥನಾಗಿಯೂ ಇದ್ದುಕೊಂಡು ಜನನ-ಜೀವನ ಮರಣಾದಿ ದೇಹ ಧರ್ಮಗಳಿಂದಲೂ ಅಭಿಮಾನರಾಹಿತ್ಯದಿಂದ ಅವಿಕಾರಿಯಾಗಿ ಬಲುಬೇಗನೆ ಸರ್ವಾನರ್ಥ ಮೂಲವಾದ ಈ ದೇಹವನ್ನು ಪರಿತ್ಯಜಿಸು, ಅಥವಾ ನಿಷ್ಕಲ್ಮಷನಾಗಿ ಒಂದು ಬೆಟ್ಟದಂತೆ ಎಷ್ಟು ದೀರ್ಘಕಾಲ ಪರ್ಯಂತ ಬೇಕಾದರೂ ಸ್ಥಿರವಾಗಿ ದೇಹವನ್ನು ಧರಿಸಿಕೊಂಡಿರು.

ಏಷೈವ ರಾಮ ಸೌಷುಪ್ತೀ ಸ್ಥಿತಿರಭ್ಯಾಸಯೋಗತಃ ।
ಪ್ರೌಢಾ ಸತೀ ತುರ್ಯಮಿತಿ ಕಥಿತಾ ತತ್ವಕೋವಿದೈಃ ॥ ೨೬ ॥

ಆನಂದಮಯ ಏವಾಂತಃ ಪ್ರಕ್ಷೀಣಸಕಲಾಮಯಃ ।
ಅತ್ಯಂತಾಸ್ತಂ ಗತಮನಾ ಭವತಿ ಜ್ಞೋ ಮಹೋದಯಃ ॥ ೨೭ ॥

ತತ್ರಸ್ಥೋ ಜ್ಞಃ ಪ್ರಮುದಿತಃ ಪರಮಾರಂದಘೂರ್ಣಿತಃ ।
ಲೀಲಾಮಿಮಾಮ್ ರಚನಾಂ ಸದಾ ಸಮನುಪಶ್ಯತಿ ॥ ೨೮ ॥

---

೨೬. ರಾಮಚಂದ್ರ, ಈ ಪ್ರಕಾರವಾದ ಜಾಗ್ರತ್ಕಾಲಿಕ ಸುಷುಪ್ತ ಸ್ಥಿತಿಯು, ನಿರಂತರಾಭ್ಯಾಸ ವಶದಿಂದ ದೃಢತರವಾಗಿ ಪ್ರೌಢಿಮೆಯನ್ನು ಪಡೆದರೆ ಈ ಸೌಷುಪ್ತ ಸ್ಥಿತಿಯನ್ನೇ ತತ್ವಜ್ಞಾನಿಗಳಾದ ಪಂಡಿತರು ತುರ್ಯವೆಂಬುದಾಗಿ ಕರೆಯುವರು.

೨೭. ಆತ್ಯಂತಿಕವಾಗಿ ಮನೋಲಯವನ್ನು ಮಾಡಿಕೊಂಡು, ಅಮನಸ್ಕನಾಗಿಯೂ, ಮನಸ್ಸಿನೊಳಗೆ ಇದ್ದ ಸಕಲ ವಿಧ ದುಃಖ ಸಂತಾಪಗಳನ್ನು ಧ್ವಂಸ ಮಾಡಿಕೊಂಡವನಾಗಿಯೂ, ಪರಮ ಪುರುಷಾರ್ಥ ರೂಪ ನಿರತಿಶಯಾನಂದಾತ್ಮ ಲಾಭದಿಂದ ನಿತ್ಯ ತೃಪ್ತನಾಗಿಯೂ ಇರುವ ತತ್ತ್ವಜ್ಞನು ಸುಷುಪ್ತ ಸ್ಥಿತಿಯಲ್ಲಿರುವಂತೆ ಸರ್ವದಾ ಆನಂದ ಪ್ರಚುರನಾಗಿಯೂ, ದುಃಖಲೇಶವೂ ಇಲ್ಲದವನಾಗಿಯೂ (ದುಃಖ ಹೇತುವಾದ ಅವಿದ್ಯೆಯು ನಿರ್ಮೂಲವಾಗಿ ನಾಶಹೊಂದಿದ ಕಾರಣ) ಇರುವನು.

೨೮. ಆ ಸೌಷುಪ್ತ ಸ್ಥಿತಿಯಲ್ಲಿ ಸ್ಥೈರ್ಯದಿಂದಿರುವ ತತ್ತ್ವಜ್ಞನು ನಿತ್ಯಾನಂದ ಮಯನಾಗಿ, ನಿರತಿಶಯಾನಂದ ಲಾಭದಿಂದ ನಿತ್ಯ ತೃಪ್ತನಾಗಿ ಪ್ರಾಪಂಚಿಕ ವ್ಯವಹಾರಗಳನ್ನು ಮಾಡುತ್ತಾ ಇಲ್ಲಿಂದಲ್ಲಿಗೆ ಓಡಾಡುತ್ತಿರುವವನಾದರೂ ಈ ಮಾಯಾಮಯವಾದ ಜಗತ್ಕಲ್ಪನಾರೂಪ ವೈಚಿತ್ರ್ಯವನ್ನು, ಮಾಯಾಶ್ರಯನಾದ ಮಹೇಶ್ವರನು ತೋರುತ್ತಿರುವ ಲೀಲೆಯನ್ನೋಪಾದಿಯಲ್ಲಿ ವಿನೋದದಿಂದ ಕಾಣುತ್ತಾ, ಅದರಲ್ಲಿ ಸತ್ಯತ್ವ ಬುದ್ಧಿಯನ್ನಿಡದೆ ಸದಾ ನಿಶ್ಚಿಂತನಾಗಿ ತಾಟಸ್ಥ್ಯದಿಂದಿರುವನು.

ವೀತಶೋಕಭಯಾಯಾಸೋ ಗತಸಂಸಾರಸಂಭ್ರಮಃ ।
ತುರ್ಯಾವಸ್ಥಾಮುಪಾರೂಢೋ ಭೂಯಃ ಪತತಿ ನಾತ್ಮವಾನ್ ॥ ೨೯ ॥

ಒಬ್ಬ ಐಂದ್ರ ಜಾಲಿಕನು ತನ್ನ ಹೊಟ್ಟೆಪಾಡಿನ ನಿರ್ವಹಣಕ್ಕಾಗಿ ತನ್ನಲ್ಲಿರುವ ಅತ್ಯದ್ಭುತವಾದ ಮಾಯಾ ಶಕ್ತಿಯನ್ನು ಪ್ರಯೋಗಿಸಿ ಅತಿವಿಚಿತ್ರಗಳಾದ ವಸ್ತುಗಳನ್ನು ಪ್ರದರ್ಶನಮಾಡುತ್ತಿರಲು ಅದರ ವಾಸ್ತವವಾದ ಗುಟ್ಟನ್ನು ಅರಿಯದ ಮೂಢರಾದ ಶಿಶುಗಳು ಸತ್ಯವೆಂದೇ ಭ್ರಮಿಸಿ ಅಚ್ಚರಿಗೊಂಡು ಆನಂದಿಸುವರೇ ಹೊರತು ಅವುಗಳ ತತ್ತ್ವವನ್ನು ಚೆನ್ನಾಗಿಯೂ ಬಲ್ಲವರಾದ ಪ್ರೌಢರು ಅವುಗಳಲ್ಲಿ ಸತ್ಯತ್ವ ಬುದ್ಧಿಯನ್ನಿಡುವುದೂ ಇಲ್ಲ. ಅವೆಲ್ಲಾ ಕೇವಲ ಮಾಯೆಯೆಂದೇ ದೃಢವಾಗಿ ಭಾವಿಸಿ ನಿರ್ಬಂಧದಿಂದಲೋ ಅಥವಾ ತನ್ನ ಮಕ್ಕಳ ಸಲುವಾಗಿಯೋ ಅಂತೂ ಏನೋ ಒಂದು ಕಾರಣದಿಂದ ನಿಂತು ನೋಡಬೇಕಾದ ಸಂಭವವು ಒದಗಿದರೂ ಪೂರ್ವದಂತೆಯೇ ಪ್ರಶಾಂತರಾಗಿರುವರು. ಅಲ್ಲದೆ ಅವುಗಳನ್ನು ಸತ್ಯವೆಂದು ನಂಬಿರುವ ಮೂಢರ ಮೌಢ್ಯವನ್ನು ಕಂಡು ಕನಿಕರದಿಂದ ಮರಗುವರು. ಮತ್ತು ಮಾಯಾವಿಯಾದ ಪ್ರದರ್ಶನಕಾರನೂ ತನ್ನ ಮಾಯೆಯಿಂದ ಆವೃತನಾಗಿರುವುದಿಲ್ಲ. ಇದರಂತೆ ದಾರ್ಷ್ಟಾಂತವನ್ನೂ ಸಮನ್ವಯ ಮಾಡಿಕೊಳ್ಳಬೇಕು.)

೨೯. ಸ್ವಾತ್ಮ ಲಾಭವನ್ನು ಪಡೆದವನಾದ ಮಹಾತ್ಮನು ಜ್ಞಾನ ಬಲದಿಂದ ಅಜ್ಞಾನದ ಮೂಲಕ ಮಿಥ್ಯೆಯಾಗಿಯೇ ತನ್ನಲ್ಲಿ ಆರೋಪಿತವಾಗಿದ್ದ ಸಕಲವಿಧ ಪ್ರಾಪಂಚಿಕ. ಶೋಕ, ಮೋಹ, ಭಯ, ಸಂತಾಪ, ಆಯಾಸ ಮುಂತಾದ ಅನರ್ಥ ಪರಂಪರೆಗಳನ್ನು ನಿಶ್ಶೇಷವಾಗಿ ನಾಶಪಡಿಸಿಕೊಂಡು ಸಾಂಸಾರಿಕ ಭ್ರಾಂತಿಗಳಿಂದ ಸಂಪೂರ್ಣವಾಗಿ ತಪ್ಪಿಸಿಕೊಂಡು ಅತ್ಯುಚ್ಚವಾದ ತುರ್ಯಾವಸ್ಥೆಯನ್ನೇರಿ ಅಲ್ಲಿಯೇ ಸ್ಥಿರವಾಗಿ ಪ್ರತಿಷ್ಠಿತನಾಗಿರುವ ಕಾರಣ ಪುನಃ ಎಂದೆಂದಿಗೂ ಅಲ್ಲಿಂದ ಕೆಳಕ್ಕೆ ಮಾಯಾಮಯವಾದ ಸಂಸಾರದಲ್ಲಿ ಬಂದು ಬೀಳುವುದೇ ಇಲ್ಲ, [ಪುನರಾವೃತ್ತಿ ರಹಿತನಾಗಿರುವನು.]

ಪ್ರಾಪ್ಯ ಸ್ವಾಂ ಪದವೀಂ ಪುಣ್ಯಾಂ ಯಥೇದಂ ಭ್ರಮಿತಂ ಜಗತ್ ।
ಶೈಲಸಂಸ್ಥ ಇವಾಽಧಃಸ್ಥಂ ಹಸನ್ಪಶ್ಯತಿ ಧೀರಧೀಃ ॥ ೩೦ ॥

ಅಸ್ಯಾಂ ತು ತುರ್ಯಾವಸ್ಥಾಯಾಂ ಸ್ಥಿತಿಂ ಪ್ರಾಪ್ಯಾವಿನಾಶಿನೀಂ ।
ಆನಂದೈಕಾಂತಲೀನತ್ವಾದನಾನಂದಪದಂ ಗತಃ ॥ ೩೧ ॥

ಅನಾನಂದಮಹಾನಂದಕಲಾತೀತಸ್ತತೋಽಪಿ ಹಿ ।
ಮುಕ್ತ ಇತ್ಯುಚ್ಯತೇ ಯೋಗೀ ತುರ್ಯಾತೀತಂ ಪದಂ ಗತಃ ॥ ೩೨ ॥

---

೩೦. ಅತ್ಯುನ್ನತವಾದ ಪರ್ವತದ ಶಿಖರವನ್ನೇರಿ ಮೇಲೆ ನಿಶ್ಚಿಂತನಾಗಿ ವಿಶ್ರಮಿಸಿಕೊಳ್ಳುತ್ತಿರುವ ಧೀರನು ಕೆಳಗೆ ಕಲ್ಲು ಮುಳ್ಳುಗಳನ್ನು ಮೆಟ್ಟುತ್ತಲೂ ಹಳ್ಳ ಕೊಳ್ಳಗಳಲ್ಲಿ ಮುಗ್ಗರಿಸುತ್ತಲೂ ಬಹು ವಿಧ ದುಃಖಗಳನ್ನು ಅನುಭವಿಸುತ್ತಾ ಎಷ್ಟು ಅಲೆದರೂ ವಿಶ್ರಾಂತಿ ಸ್ಥಾನವನ್ನೇ ಕಾಣದೆ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಸುತ್ತಿ ಸುತ್ತಿ ಕಂಗೆಟ್ಟು ದೀನನಾಗಿರುವ ಪುರುಷನನ್ನು ಕಂಡು ಅವನ ಮನೋ ದೌರ್ಬಲ್ಯ ರೂಪ ದೋಷಕ್ಕಾಗಿ ನಗುತ್ತಲೂ ದೈನ್ಯಕ್ಕಾಗಿ ಕನಿಕರ ಪಡುತ್ತಲೂ ಸ್ವಸ್ಥನಾಗಿರುವಂತೆ ಅತಿ ಧೀರ ಮನಸ್ಕನಾದ ತತ್ತ್ವಜ್ಞಾನ ನಿಷ್ಠನು ಅನೇಕ ಕೋಟಿ ಜನ್ಮಾಂತರಾರ್ಜಿತ ಸುಕೃತ ವಿಶೇಷಗಳ ಪರಿಪಾಕದಿಂದ ಲಬ್ಧವಾದ ಮನಃ ಪ್ರಸಾದ, ವಿವೇಕ ವೈರಾಗ್ಯಾದಿ ಸಾಧನಗಳ ಮೂಲಕ, ತತ್ತ್ವಜ್ಞಾನವನ್ನು ಸಂಪಾದಿಸಿ ಅದರ ಬಲದಿಂದ ಉನ್ನತೋನ್ನತವಾದ ಸ್ವ ಸ್ವರೂಪಾವ ಸ್ಥಿತಿಯೆಂಬ ಸ್ವೀಯ ಪರಮ ಪದವನ್ನು ಸೇರಿ ನಿರುಪದ್ರವನಾಗಿರುತ್ತಾ ಈ ಜಗತ್ತು ಭ್ರಾಂತಿಯಿಂದ ಪುರುಷಾರ್ಥಗಳೆಂದು ಭಾವಿಸಿಕೊಂಡು ಮೋಸ ಹೋಗಿರುವ ಅಜ್ಞ ಜನರ ಮೌಢ್ಯಕ್ಕಾಗಿ ಮರುಗುತ್ತಾ ಆತ್ಮಾರಾಮನಾಗಿ ಸ್ವಸ್ಥನಾಗಿರುವನು.

೩೧. ಈ ತುರ್ಯಾವಸ್ಥೆಯಲ್ಲಿಯೇ, ಎಂದೆಂದಿಗೂ ಚ್ಯುತಿಯುಂಟಾಗದಿರುವ, ಅತ್ಯಂತ ಸ್ಥಿರವೂ ಶಾಶ್ವತವೂ ಆದ ಸ್ಥಿತಿಯನ್ನು ಬಹು ದೀರ್ಘಕಾಲ ಪಡೆದು, ಅದು ದೃಢತರವಾದ ಬಳಿಕ, ಆನಂದೈಕರಸ ಘನವಾದ ಸ್ವಸ್ವರೂಪದಲ್ಲಿ ಆತ್ಯಂತಿಕ ಲಯವನ್ನು ಹೊಂದಿಬಿಡುವ ಕಾರಣ, ಆ ಆನಂದಾನುಭವವೂ ಇಲ್ಲದ ವಾಚಾಮಗೋಚರವಾದ (ಅನಿರ್ವಾಚ್ಯವಾದ) ಅನಾನಂದ ಪದವನ್ನು ಪಡೆಯುವನು.

೩೨. ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯಾತ್ಮಕ ಅನಾನಂದ ಪದಕ್ಕಿಂತಲೂ ತುರ್ಯಸ್ಥಿತಿಯು ಹೆಚ್ಚು, ಆನಂದವುಳ್ಳದ್ದಾದುದರಿಂದ

ಪರಿಗಲಿತ ಸಮಸ್ತಜನ್ಮಪಾಶಃ
　　ಸಕಲವಿಲೀನತಮೋಮಯಾಭಿಮಾನಃ ।
ಪರಮರಸಮಯೀಂ ಪ್ರಯಾತಿ ಸತ್ತಾಂ
　　ಜಲಗತಸೈಂಧವಖಂಡವನ್ಮಹಾತ್ಮಾ　　|| ೩೩ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಅಸಂಸಂಗ ವಿಕಲ್ಪೋಪದೇಶೋ" ನಾಮ ಸಪ್ತತಿತಮಃ ಸರ್ಗಃ.

ಮಹಾನಂದವೆನ್ನಿಸುವುದು. ಇದು ಜೀವನ್ಮುಕ್ತನಿಗೆ ಸರ್ವದಾ ಸ್ವತಃ ಸಿದ್ಧವಾದುದು ಯಾವಜ್ಜೀವವೂ ಇಂತಹ ತುರ್ಯಪದದಲ್ಲಿದ್ದುಕೊಂಡು, ದೇಹ ಪಾತಾನಂತರ, ಅನಾನಂದ (ಅವಸ್ಥಾತ್ರಯ) ಮಹಾನಂದ (ತುರ್ಯ) ಗಳೆಂಬ ಕಲ್ಪನೆಗಳಿಗೂ ಅತೀತನಾಗಿ, ಆ ತುರ್ಯ ಸ್ಥಿತಿಯಿಂದಲೂ ಮುಕ್ತನಾದ ಜ್ಞಾನ ಯೋಗಿಯು ತುರ್ಯಾತೀತ ಪದವನ್ನು ಪಡೆದವನೆಂದು ಶಾಸ್ತ್ರಜ್ಞರು ಹೇಳುವರು.

೩೩. ಆ ತುರ್ಯಾತೀತ ಪದವನ್ನು ಪಡೆದ ಮಹಾತ್ಮನಿಗೆ ಕೇವಲ ತಮೋಮಯವಾದ ಅಭಿಮಾನಗಳೆಲ್ಲಾ ನಿಶ್ಶೇಷವಾಗಿ ಲಯ ಹೊಂದಿಬಿಟ್ಟಿರುವ ಕಾರಣ, ಪುನರ್ಜನ್ಮಾಂತರ ಹೇತುಗಳಾದ ಅವಿದ್ಯಾ ಕಾಮ ಕರ್ಮಾದಿ ಸಕಲ ವಾಸನಾ ಜಾಲಗಳೆಂಬ ಪಾಶಗಳನ್ನು ಜ್ಞಾನವೆಂಬ ಖಡ್ಗದಿಂದ ಕತ್ತರಿಸಿ ಬಿಟ್ಟು ಪರಿಹರಿಸಿಕೊಂಡವನಾಗಿ, ಬದ್ಧನಾಗುವ ಸಂಭವವೇ ಇಲ್ಲದೆ, ನಿತ್ಯಮುಕ್ತನಾಗಿ ನೀರಿನೊಳಗೆ ಬಿದ್ದ ಉಪ್ಪಿನಕಲ್ಲು (ಹರಳು) ತಾನಾಗಿಯೇ ಕರಗಿ ನೀರಿನೊಂದಿಗೇ ಬೆರೆತು ಐಕ್ಯ ಹೊಂದುವ ರೀತಿಯಲ್ಲಿ, ನಿತ್ಯನಿರತಿಶಯಾನಂದರಸಮಯವಾದ ಪರಮಾರ್ಥ ಸ್ಥಿತಿಯನ್ನು ಹೊಂದಿ ಸ್ವಸ್ಥನಾಗಿರುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಅಸಂಸಂಗ ವಿಕಲ್ಪೋಪದೇಶ" ವೆಂಬ ಎಪ್ಪತ್ತನೆಯ ಸರ್ಗವು.

ಏಕಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಯಾವತ್ತುರ್ಯಪರಾಮರ್ಶ ಸ್ತಾವತ್ಕೇವಲತಾಪದಂ !
ಜೀವನ್ಮುಕ್ತಸ್ಯ ವಿಷಯೋ ವಚಸಾಂ ಚ ರಘೂದ್ವಹ ॥ ೧ ॥

ಅಥ ಊರ್ಧ್ವಮದೇಹಾನಾಂ ಮುಕ್ತಾನಾಂ ವಚಸಾಂ ತಥಾ !
ವಿಷಯೋ ನ ಮಹಾಬಾಹೋ ಪುರುಷಾಣಾಮಿವಾಂಬರಂ ॥ ೨ ॥

ಎಪ್ಪತ್ತೊಂದನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :

೧. ಅಯ್ಯ ರಘುಕುಲ ಶ್ರೇಷ್ಠನಾದ ರಾಮಭದ್ರ, ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯಗಳು ಓಂಕಾರದ ಮೂರು ಪಾದಗಳು. ಅವುಗಳನ್ನು ಅವುಗಳ ಸಾಕ್ಷಿಭೂತವಾದ ಚಿನ್ಮಾತ್ರದಲ್ಲಿ ಲಯಗೊಳಿಸುವ ಕ್ರಮದಿಂದ ಕಳೆದುಬಿಟ್ಟರೆ, ಬಳಿಕ ಕೊನೆಯಲ್ಲಿ ಚಿನ್ಮಾತ್ರವೇ ಅವಶಿಷ್ಟವಾಗುವುದು. ಈ ಚಿನ್ಮಾತ್ರಾವಸ್ಥಿತಿಯೆಂಬುದನ್ನು ತುರ್ಯವೆಂದು ಪ್ರಾಜ್ಞರು ವ್ಯವಹರಿಸುವರು. ಈ ತುರ್ಯಸ್ಥಿತಿಯು ಎದುವರೆಗೆ ಸಾಕ್ಷಾತ್ತಾಗಿ ಅನುಭವಗೋಚರವಾಗುತ್ತಿರುವುದೋ ಅದುವರೆವಿಗೆ ಮಾತ್ರವೇ ಕೈವಲ್ಯಪದವು ಜೀವನ್ಮುಕ್ತನಿಗೂ ಮತ್ತು ಶ್ರುತಿವಾಕ್ಯಗಳಿಗೂ ವಿಷಯವಾಗಿರುವುದು.

೨. ಅಯ್ಯ ಮಹಾಬಾಹುವೇ, ಅಲ್ಲಿಂದ ಮುಂದಕ್ಕಾದರೋ, ಆಕಾಶವು ಭೂಮಿಯ ಮೇಲೆ ನಿಂತಿರುವ ಸಾಧಾರಣ ಮನುಷ್ಯರಿಗೆ ವಿಷಯವಾಗದಿರುವಂತೆ, ಪ್ರಾರಬ್ಧಕರ್ಮ ಕ್ಷಯಾನಂತರದಲ್ಲಿ ಶರೀರತ್ಯಾಗ ಮಾಡಿದ ಮುಕ್ತರಿಗೂ (ವಿದೇಹ ಮುಕ್ತರಿಗೂ) ಹಾಗೆಯೇ ಶ್ರುತ್ಯಾದಿ ವಾಕ್ಯಗಳಿಗೂ ತುರ್ಯಾತೀತ ಪದವು ವಿಷಯವಾಗುವುದಿಲ್ಲ. [ಆ ತುರ್ಯಾತೀತಪದವು ವಿದೇಹಮುಕ್ತರಿಗೆ ಪ್ರಾಪ್ಯವಾಗಿದ್ದರೂ ಕೂಡ, ಅದು ಅವರಿಗೂ ಗೋಚರವಾಗುವುದಿಲ್ಲ. ಏಕೆಂದರೆ ಆ ತುರ್ಯಾತೀತಪದವನ್ನು ವಿದೇಹಮುಕ್ತರಿಗೆ ವಿಷಯವನ್ನಾಗಿ

ಸಾ ಹಿ ವಿಶ್ರಾಂತಿಪಪವೀ ದೂರೇಭ್ಯೋಽಪಿ ದವೀಯಸೀ ।
ಗಮ್ಯಾ ವಿದೇಹಮುಕ್ತಾನಾರಿ ಖಲೇಖೇವ ನಭಸ್ವತಾಂ ॥ ೩ ॥

ಸುಷುಪ್ತಾವಸ್ಥಯಾ ಕಿಂಚಿತ್ಕಾಲಂ ಭುಕ್ತ್ವಾ ಜಗತ್ಸ್ಥಿತಿಂ ।
ತುರ್ಯತಾಮೇತಿ ತದನು ಪರಮಾನಂದಘೂರ್ಣಿತಃ ॥ ೪ ॥

ತುರ್ಯಾತೀತದಶಾಂ ತಜ್ಜ್ಞಾ ಯಥಾ ಯಾಂತ್ಯಾತ್ಮಕೋವಿದಾಃ ।
ತಥಾಧಿಗಚ್ಛ ನಿರ್ದ್ವಂದ್ವಂ ಪದಂ ರಘುಕುಲೋದ್ವಹ ॥ ೫ ॥

ಮಾಡುವುದಕ್ಕೆ ಹೇತುವಾದ ಮನಸ್ಸೇ ಸಂಪೂರ್ಣವಾಗಿ ನಾಶಹೊಂದಿಬಿಟ್ಟಿರುವುದು. ಎಂದು ಭಾವ]

೩. ತುರ್ಯಾತೀತವೆನ್ನಿಸಿರುವ ಸ್ಥಿತಿಯು ವಾಸ್ತವವಾಗಿಯೇ ನಿರುಪದ್ರವವಾದ (ಸರ್ವೋಪಪ್ಲವರಹಿತವಾದ) ಸ್ವಸ್ಥತಾರೂಪ ಶಾಶ್ವತವಾದ ವಿಶ್ರಾಂತಿ ಪದವಿಯು. ಅದು (ಅನಾತ್ಮಜ್ಞರಿಗೆ) ಅತಿ ದೂರವಾದವುಗಳಿಗಿಂತಲೂ ಹೆಚ್ಚು ದೂರವಾದುದು. ಗಗನಮಾರ್ಗವು ವಾಯುಗಳಿಗೆ ಮಾತ್ರವೇ ಗಮ್ಯವಾಗಿರುವಂತೆ, ಆ ತುರ್ಯಾತೀತ ಪದವಿಯು ವಿದೇಹಮುಕ್ತರಿಗೆ ಮಾತ್ರವೇ ಸುಲಭವಾಗಿ ಗಮ್ಯವೆನ್ನಿಸಿರುವುದು.

೪. ಜೀವನ್ಮುಕ್ತನಾದ ಮಹಾತ್ಮನು ಜಾಗ್ರತ್ತಿನಲ್ಲಿಯೂ ಸುಷುಪ್ತ ಸ್ಥಿತಿಯಿಂದಿರುತ್ತ ಪ್ರಾರಬ್ಧ ದೇಹಪಾತ ಪರ್ಯಂತ ಕೆಲವು ಕಾಲ ಪ್ರಾಪಂಚಿಕ ವ್ಯವಹಾರ ಸ್ಥಿತಿಯನ್ನು ಅನುಭವಿಸಿ, ಅನಂತರ ಪರಮಾನಂದ ರಸ ಪೂರ್ಣನಾಗಿ ತುರ್ಯ ಸ್ಥಿತಿಯನ್ನು ಪಡೆಯುವನು.

೫. ಅಯ್ಯ ರಘುಕುಲ ಶ್ರೇಷ್ಠನೇ, ಸ್ವಾತ್ಮತತ್ತ್ವಜ್ಞಾನ ಪಂಡಿತರಾದ ಆತ್ಮಜ್ಞರು ಯಾವ ಕ್ರಮದಿಂದ ತುರ್ಯಾತೀತ ಸ್ಥಿತಿಯನ್ನು ಪಡೆಯುವರೋ, ಅದೇ ಕ್ರಮದಿಂದ ನೀನೂ ಕೂಡ ದ್ವಂದ್ವರಹಿತವಾದ ಆ ತುರ್ಯಾತೀತ ಪದವನ್ನು ಹೊಂದುವವನಾಗು.

ಸುಷುಪ್ತಾವಸ್ಥಯಾ ರಾಮ ಭವ ಸಂವ್ಯವಹಾರವಾನ್ ।
ಚಿತ್ರೇಂದೋರಿವ ತೇ ನ ಸ್ತಃ ಕ್ಷಯೋದ್ವೇಗಾವರಿಂದಮ ॥ ೬ ॥

ಶರೀರಸಂನಿವೇಶಸ್ಯ ಕ್ಷಯೇ ಸ್ಥೈರ್ಯೇ ಚ ಸಂವಿದಃ ।
ಮಾ ಗೃಹಾಣ ಭ್ರಮೋ ಹ್ಯೇಷ ಶರೀರಮಿತಿ ಜೃಂಭತೇ ॥ ೭ ॥

ದೇಹನಾಶೇನ ಕೋಽರ್ಥಸ್ತೇ ಕೋಽರ್ಥಸ್ತೇ ದೇಹಸಂಸ್ಥಯಾ ।
ಭವ ತ್ವಂ ಪ್ರಕೃತಾರಂಭಸ್ತಿಷ್ಠತ್ವೇಷ ಯಥಾಸ್ಥಿತಂ ॥ ೮ ॥

---

೬. ಅಯ್ಯ ಶತ್ರುಗಳನ್ನು ನಿಗ್ರಹಿಸುವ ಸಾಮರ್ಥ್ಯಶಾಲಿಯಾದ ರಾಮ, ನೀನು ಜಾಗ್ರತ್ತಿನಲ್ಲಿಯೂ (ಸ್ಥಿತ ಪ್ರಜ್ಞನಂತೆ) ಪ್ರಾಪಂಚಿಕ ವ್ಯವಹಾರಗಳನ್ನು ಮಾಡುವವನಾಗಿರು. ಹೀಗೆ ಮಾಡಿದ್ದೇ ಆದರೆ ಚಿತ್ರ ಪಟದಲ್ಲಿ ಬಣ್ಣಗಳಿಂದ ಚಿತ್ರಿತನಾಗಿರುವ ಚಂದ್ರನಿಗೆ (ಚಂದ್ರನ ಆಕಾರ= ಪ್ರಕೃತಿ) ಪ್ರಸಿದ್ಧನಾದ ವಾಸ್ತವ ಚಂದ್ರನಿಗಿರುವಂತೆ ಕಲಾ ಕ್ಷಯವೂ ರಾಹುವಿನಿಂದ ಪೀಡೆಯೂ ಇಲ್ಲದಿರುವ ಹಾಗೆ ನಿನಗೂ, ಮರಣವೂ, ಶೋಕ, ಮೋಹ, ಭಯ ಮುಂತಾದವುಗಳ ಸಂತಾಪವೂ ಸಂಪೂರ್ಣವಾಗಿ ಇಲ್ಲದೆ ಹೋಗಿಬಿಡುವುವು.

೭. ರಕ್ತ, ಮಾಂಸಾದಿ ವಿವಿಧ ಧಾತುಗಳ ಶರೀರ ರೂಪವಾದ ರಚನೆ ಕ್ರಮೇಣ ಕ್ಷಯಿಸಿ ನಾಶ ಹೊಂದಿದರೂ ಅಥವಾ ಸ್ಥಿರವಾಗಿಯೇ ಇನ್ನೂ ಸ್ವಲ್ಪಕಾಲ ಇದ್ದರೂ, ಆ ಶರೀರ ಸಂಬಂಧವಾದ ಕ್ಷಯ ಸ್ಥೈರ್ಯಗಳಿಂದ ಕೇವಲ ಚಿದ್ರೂಪ ನಾದ ನಿನಗೆ ಕ್ಷಯವಾಗಲಿ ಸ್ಥೈರ್ಯವಾಗಲೀ ಉಂಟಾಗುವುದೆಂದು ಭಾವಿಸಿ ಕೆಡಬೇಡ. ಏಕೆಂದರೆ ಆರೀತಿ ತಿಳಿಯುವುದು ವಾಸ್ತವವಾಗಿ ಭ್ರಾಂತಿಯೇ ಸರಿ. ಈ ಅಜ್ಞಾನ ರೂಪವಾದ ಭ್ರಾಂತಿಯಿಂದಲೇ " ದೇಹವು ನಾನು." " ಈ ದೇಹವು ನನ್ನದು " ಎಂಬೀ ಬಗೆಯಾದ ಮಿಥ್ಯಾಭೂತವಾದ ಅಧ್ಯಾಸವು ವಿಜೃಂಭಿಸು ತ್ತಿರುವುದು.

೮. ಈ ದೇಹವು ನಾಶ ಹೊಂದಿದರೆ ಅದರಿಂದ ಕೇವಲ ಚಿದ್ರೂಪನಾಗಿರುವ (ಅಶರೀರನಾದ) ನಿನಗೆ ಯಾವ ಅರ್ಥವು ನಷ್ಟವಾಯಿತು ? ಅಥವಾ ಈ ದೇಹವು ಸ್ಥಿರವಾಗಿ ಇದ್ದ ಮಾತ್ರದಿಂದಲೇ ನಿನಗೆ ಯಾವ ಪುರುಷಾರ್ಥವು ಸಿದ್ಧಿಸುವುದು ?

ಜ್ಞಾತವಾನಸಿ ತತ್ಸತ್ಯಂ ಬುದ್ಧವಾನಸಿ ತತ್ಪದಂ ।
ಪ್ರಾಪ್ತವಾನಸಿ ರೂಪಂ ಸ್ವಂ ವಿಶೋಕೋ ಭವ ಭೂತಯೇ ॥ ೯ ॥

ಈಪ್ಸಿತಾನೀಪ್ಸಿತಂ ತ್ಯಕ್ತ್ವಾ ಶೀತಲಾಲೋಕಶೋಭಯಾ ।
ಅಂಧಕಾರಾತ್ತಥಾಂಭೋದಾನ್ಮುಕ್ತಂ ಖಮಿವ ಶೋಭಸೇ ॥ ೧೦ ॥

ಮನಸ್ತವಾತ್ಮಸಂಪನ್ನಂ ನಾಥಃ ಸಮನುಧಾವತಿ ।
ಯೋಗಮಂತ್ರತಪಃಸಿದ್ಧಃ ಪುರುಷಃ ಖಾದಿವಾವನಿಂ ॥ ೧೧ ॥

ಯಾವುದೊಂದೂ ಇಲ್ಲವಷ್ಟೇ!! ಅದು ಕಾರಣ, ಅಯ್ಯ ರಾಮ, ಈ ದೇಹವು ಅದರ ಪಾಡಿಗೆ ಅದು ಇರುವಂತೆ ಇದ್ದುಕೊಂಡಿರಲಿ. ಅದರ ಯೋಚನೆ ನಿನಗೆ ಬೇಡ.

೯. ಪರಮಾರ್ಥ ಸತ್ಯವಾದ ಜಗದಧಿಷ್ಠಾನ ತತ್ತ್ವವನ್ನು ನೀನು ಸ್ಪಷ್ಟವಾಗಿ ತಿಳಿದವನಾಗಿರುವೆ. ಅವಸ್ಥಾತ್ರಯಾಧಿಷ್ಠಾನವಾದ ಆ ಪರಮ ಪದವನ್ನು ಗೊತ್ತು ಮಾಡಿಕೊಂಡಿರುವೆ. ಮತ್ತು ಅಖಂಡವಾಕ್ಯಾರ್ಥ ಸ್ವರೂಪವನ್ನು ನೀನು ನಿಸ್ಸಂದೇಹವಾಗಿ ಸಾಕ್ಷಾತ್ಕಾರದಿಂದ ಪಡೆದಿರುವೆ. ಅದು ಕಾರಣ ನೀನು ಸ್ವಾತ್ಮ ಬೋಧ ವಿಷಯದಲ್ಲಿ ಸಂದೇಹವನ್ನು ಬಿಟ್ಟು, ಬಿಟ್ಟು ಶೋಕ ರಹಿತನಾಗಿರುತ್ತಾ ಪರಮ ಪುರುಷಾರ್ಥರೂಪ ನಿಶ್ಶ್ರೇಯಸವನ್ನು ಪಡೆಯುವವನಾಗು.

೧೦. ಅಯ್ಯ ರಾಮ, ಶೀತಲವಾಗಿರುವ ಕಾರಣ ಸಕಲ ಸಂತಾಪ ಪರಿಹಾರಕವಾಗಿಯೂ ಸಂಶಯಾದಿ ರಹಿತವಾಗಿರುವ ಕಾರಣ ಪ್ರಕಾಶ ಮಾನವಾಗಿ ಶೋಭಿಸುತ್ತಿರುವುದಾಗಿಯೂ ಇರುವ ದಿವ್ಯವಾದ ತಾತ್ತ್ವಿಕ ದೃಷ್ಟಿಯಿಂದ ನೀನು ಇಷ್ಟಾನಿಷ್ಟಗಳೆಂಬ ಭೇದ ಭಾವನೆಯನ್ನು ಬಿಟ್ಟಿರುವೆಯಾದುದರಿಂದ ಅಂಧಕಾರದಿಂದಲೂ ಮೇಘಾವರಣದಿಂದಲೂ ವಿರಹಿತವಾದ ಶರತ್ಕಾಲದ ಪೂರ್ಣಿಮಾ ಚಂದ್ರನಿಂದ ಪ್ರಕಾಶಿಸುವ ಆಕಾಶದಂತೆ ಶೋಭಿಸುತ್ತಿರುವೆ.

೧೧. ತೀವ್ರವಾದ ಯೋಗಾಭ್ಯಾಸ, ಸತತವಾದ ಮಂತ್ರ, ಜಪ, ಘೋರವಾದ ತಪಶ್ಚರ್ಯೆ ಮುಂತಾದ ಸಾಧನಗಳಿಂದ ಅಣಿಮಾದ್ಯಷ್ಟ ಸಿದ್ಧಿಗಳನ್ನು ಗಳಿಸಿ

ಇಹ ಶುದ್ಧಾ ಚಿದೇವಾಸ್ತಿ ಪಾರಾವಾರವಿವರ್ಜಿತಾ ।
ಅಯಂ ಸೋಽಹಮಿದಂ ತನ್ಮ ಇತಿ ತೇ ಮಾಸ್ತು ವಿಭ್ರಮಃ ॥ ೧೨ ॥

ಆತ್ಮೇತಿ ವ್ಯವಹಾರಾರ್ಥಮಭಿಧಾ ಕಲ್ಪಿತಾ ವಿಭೋಃ ।
ನಾಮರೂಪಾದಿಭೇದಸ್ತು ದೂರಮಸ್ಮಾದಲಂ ಗತಃ ॥ ೧೩ ॥

ಜಲಮೇವ ಯಥಾಂಭೋಧಿರ್ನ ತರಂಗಾದಿಕಂ ಪೃಥಕ್ ।
ಆತ್ಮೈವೇದಂ ತಥಾ ಸರ್ವಂ ನ ಭೂತೋಽಯಾದಿಕಂ ಪೃಥಕ್ ॥ ೧೪ ॥

ಸ್ವಾಧೀನ ಪಡಿಸಿಕೊಂಡು ಊರ್ಧ್ವಲೋಕಗಳಲ್ಲಿ ಸಂಚರಿಸುತ್ತಿರುವ ಸಿದ್ಧ ಪುರುಷನು ಗಗನ ಮಾರ್ಗ ಸಂಚಾರವನ್ನು ಬಿಟ್ಟು ಭೂಮಿಗೆ ಇಳಿದು ಬರದೆ ಇರುವಂತೆ ವಿವೇಕ ವೈರಾಗ್ಯಾಭ್ಯಾಸ ಶಾಸ್ತ್ರೋಪದೇಶಾದಿ ಕ್ರಮಗಳಿಂದ ಸ್ವಾತ್ಮಜ್ಞಾನವನ್ನು ಪಡೆದು ಪರಿನಿಷ್ಠಿತವಾಗಿ ಆತ್ಮ ಭಾವದಿಂದ ಸಂಪನ್ನವಾಗಿರುವ ನಿನ್ನ ಮನಸ್ಸೂ ಕೂಡ ಅತ್ಯುನ್ನತವಾದ ಪರಮ ಪದದಲ್ಲಿದ್ದುಕೊಂಡಿರುವ ಕಾರಣ ಪುನಃ ಅದು ಅಧೋಮುಖವಾಗಿ ಇಳಿದು ಅತಿತುಚ್ಛವಾದ ವಿಷಯ ಸುಖಗಳ ಕಡೆಗೆ ಓಡುವುದಿಲ್ಲ.

೧೨. ಈ ಜಗತ್ತಿನಲ್ಲಿ, ದೇಶಕಾಲಾದಿಗಳಿಂದ ಸರ್ವಥಾ ಅಪರಿಚ್ಛಿನ್ನವಾದ (ಎರಡು ದಡಗಳೂ ಇಲ್ಲದಿರುವ) ಶುದ್ಧ ಚಿನ್ಮಾತ್ರವೊಂದೇ (ಚೈತನ್ಯವೊಂದೇ) ಪರಮಾರ್ಥ ಸತ್ಯವಾಗಿರುವುದು. ಅದು ಕಾರಣ, ರಾಮ, "ಇವನು, ಅವನು, ನಾನು, ಅದು ನನ್ನದು" ಇತ್ಯಾದಿ ನಾನಾ ವಿಧವಾದ ಭ್ರಾಂತಿಯು ನಿನಗೆ ಎಂದಿಗೂ ಉಂಟಾಗದಿರಲಿ.

೧೩. ಕೇವಲ ಲೋಕವ್ಯವಹಾರಕ್ಕೋಸ್ಕರವಾಗಿಯೇ, ಸರ್ವವ್ಯಾಪಿಯಾಗಿ, ಅಪರಿಚ್ಛಿನ್ನವಾಗಿರುವ ಆ ಶುದ್ಧ ಚೈತನ್ಯಕ್ಕೇ ಆತ್ಮಾ ಎಂಬ ಹೆಸರು ಕಲ್ಪಿತವಾಗಿರುವುದು. ನಾಮ, ರೂಪ ಮುಂತಾದ ಭೇದವಾದರೋ ಈ ಚೈತನ್ಯಕ್ಕಿಂತ ಬಲು ದೂರದಲ್ಲಿ ಓಡಿಹೋಗಿರುವುದು.

೧೪. ನಾನಾ ಬಗೆಗಳಿಂದ ವಿಚಾರಮಾಡಿ ನೋಡಿದರೂ, ಸಮುದ್ರವೆಂಬುದು ಬರಿಯ ಜಲವೇ ಆಗಿರುವುದಲ್ಲದೆ. ಜಲಕ್ಕಿಂತ ಪ್ರತ್ಯೇಕವಾದ ತರಂಗ

ಯಥಾ ಸಮುಸ್ತಾಜ್ಜಲಧೌ ಜಲಾದನ್ಯನ್ನ ಲಭ್ಯತೇ ।
ತಥೈವ ಜಗತಃ ಸ್ಫಾರಾದಾತ್ಮನೋಽನ್ಯನ್ನ ಲಭ್ಯತೇ || ೧೫ ||

ಅಯಂ ಸೋಽಹಮಿತಿ ಪ್ರಾಜ್ಞ ಕ್ವ ಕರೋಷಿ ವ್ಯವಸ್ಥಿತಿಂ ।
ಕಿಂ ತತ್ವಂ ಕಿಂ ಚ ವಾ ತೇ ಸ್ಯಾತ್ಕಿಂ ತತ್ವಂ ಕಿಂ ಚ ವಾ ನ ತೇ || ೧೬ ||

(ಅಲೆ) ಮುಂತಾದುದೊಂದೂ ಆಗಿಲ್ಲದಿರುವಂತೆ, ಈ ಪರಿದೃಶ್ಯಮಾನವಾದ ಜಗತ್ತೆಲ್ಲವೂ ಕೇವಲ ಆತ್ಮವೇ ಆಗಿರುವುದೇ ಹೊರತು, ಆತ್ಮವ್ಯತಿರಿಕ್ತವಾದ ಪೃಥಿವೀ, ಜಲ ಇತ್ಯಾದಿ ಯಾವುದೊಂದಾಗಿಯೂ ಇಲ್ಲ.

೧೫. ಸಮುದ್ರದಲ್ಲಿ, ಸರ್ವತ್ರ ಪರಿಪೂರ್ಣವಾಗಿರುವ ಜಲವನ್ನು ಬಿಟ್ಟು. ಬೇರೆ ಯಾವುದೊಂದೂ ಹೇಗೆ ಸಿಕ್ಕುವುದಿಲ್ಲವೋ ಹಾಗೆ ಜಗದಾಕಾರವಾಗಿ ಅತ್ಯಂತ ವಿಸ್ತಾರವಾಗಿರುವ ಆತ್ಮನಿಗಿಂತ ಬೇರೆಯಾದ ಯಾವುದೊಂದೂ ಈ ಜಗತ್ತಿನಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ. [ಆತ್ಮೈವೇದಗ್ಂ ಸರ್ವಂ ನಾನ್ಯತ್ ಕಿಂ ಚನಮಿಷತ್]

೧೬. ಎಲೈ ಪ್ರಾಜ್ಞನಾದ ರಾಮ, ಆತ್ಮವೊಂದೇ ಪರಮಾರ್ಥ ಸತ್ಯವಾಗಿಯೂ, ತದ್ಭಿನ್ನವಾದುದೆಲ್ಲವೂ (ಅನಾತ್ಮದೃಶ್ಯಗಳು) ಶುಕ್ತಿರಜತಾದಿಗಳಂತೆ ಸರ್ವಥಾ ಮಿಥ್ಯೆಯೇ ಆಗಿರುವ ಕಾರಣ, "ಅವನು, ಇವನು, ನಾನು, ನನ್ನದು" ಎಂಬೀ ಮೊದಲಾದ ಭೇದ ವ್ಯವಸ್ಥೆಯನ್ನು ನೀನು ಈ ಜಗತ್ತಿನ ಯಾವ ಅಂಶದಲ್ಲಿ ಇಡಬೇಕಾಗಿರುವುದು? ಈ ದೇಹೇಂದ್ರಿಯಾದಿ ಸಕಲ ಪ್ರಾಪಂಚಿಕ ಭಾವಗಳ ಮಧ್ಯದಲ್ಲಿ ನೀನು ಎಂಬುದು ಯಾವುದು ಮತ್ತು ನಿನ್ನದು ಎಂಬುದು ಯಾವುದಿರುವುದು ? ಅಥವಾ ಎಲ್ಲಿ ನೀನು ಇಲ್ಲವೊ ಅದು ಯಾವುದು ಮತ್ತು ನಿನ್ನದಲ್ಲದಿರುವುದೆಂಬುದು ಯಾವುದು ? ಹೇಳು. ನೋಡೋಣ.

[ಕೇವಲ ಆಧ್ಯಾಸಿಕ ದೃಷ್ಟಿಯಿಂದ ನೋಡಿದರೆ ಜಗತ್ತೆಂಬುದೇ ಭ್ರಾಂತಿ ಮೂಲಕ ಕಲ್ಪಿತವಾಗಿ ಮಿಥ್ಯೆಯಾದ ಕಾರಣ, ನಿನಗೆ ಆತ್ಮಭೂತವಾಗಿರುವುದೂ ಅಥವಾ ನಿನ್ನದಾಗಿ ನಿನಗೆ ಸಂಬಂಧಗೊಂಡಿರುವುದೂ ಯಾವುದೊಂದೂ ಅಸಂಭವವು. ಆತ್ಮವು ಸಮಸ್ತ ಮಿಥ್ಯಾ ಜಗದಧಿಷ್ಠಾನವೆಂಬ ದೃಷ್ಟಿಯಿಂದ ನೋಡಿದಾಗಲೋ-ಸರ್ವತ್ರ ಸರ್ವವೂ ನಿನ್ನ ಆತ್ಮವೇ. ಸರ್ವವೂ ನಿನ್ನದೇ ಎಂದು ಹೇಳುವುದು ಸಂಭವವು. ಎಂದು ತಾತ್ಪರ್ಯ.]

ನ ದ್ವಿತ್ವಮಸ್ತಿ ನೋ ದೇಹಾಃ ಸಂಬಂಧೋ ನ ಚ ತೈಃ ಸ್ಥಿತಃ ।
ಸಂಭಾವ್ಯತೇ ಕಲಂಕೋ ವಾ ಭಾನೋರಿವ ತಮಃಪಟೈಃ ॥ ೧೭ ॥

ದ್ವಿತ್ವಮಭ್ಯುಪಗಮ್ಯಾಪಿ ಕಥಯಾಮಿ ತವಾರಿಹನ್ ।
ದೇಹಾದಿಭಿಃ ಸದ್ಭಿರಪಿ ನ ಸಂಬಂಧೋ ವಿಭೋರ್ಭವೇತ್ ॥ ೧೮ ॥

---

೧೭. ವಾಸ್ತವವಾಗಿ ಪಾರಮಾರ್ಥಿಕ ದೃಷ್ಟಿಯಿಂದ ವಿಚಾರ ಮಾಡಿದರೆ, ನಾನಾ ಭೇದಭಿನ್ನವಾದ ಪ್ರಪಂಚವೆಂಬ ದ್ವೈತಭಾವವೂ ಇಲ್ಲ. ಈ ಜಡ ಅನಾತ್ಮ ದೇಹಗಳೂ ಇಲ್ಲ. ಅತ್ಯಂತಾಸತ್ತಾದ ಈ ದೇಹಗಳೊಂದಿಗೆ ಕಾಲತ್ರಯಾಬಾಧ್ಯನೂ, ಪರಮಾರ್ಥಸತ್ಯ ಚಿದ್ರೂಪನೂ, ಅಪರಿಚ್ಛಿನ್ನಾತ್ಮನೂ ಆದ ನಿನಗೆ ಯಾವದೊಂದು ಸಂಬಂಧವೂ ಇಲ್ಲ.

[ವಂಧ್ಯಾ ಪುತ್ರನಂತೆ ಸರ್ವದಾ ಸರ್ವತ್ರ ಸರ್ವಥಾ ಅಪ್ರಸಿದ್ಧವಾದ ಅಸದ್ವಸ್ತುಗಳಿಗೂ ಪರಮಾರ್ಥ ಸದ್ವಸ್ತುವಿಗೂ, ಹೇಗೂ ಯಾವ ಸಂಬಂಧವನ್ನೂ, ಕಲ್ಪಿಸುವುದಕ್ಕೂ ಸಾಧ್ಯವಿಲ್ಲ. ಹೀಗೆಯೇ ದ್ವೈತ ಪ್ರಪಂಚವೇ ಅಸತ್ತಾಗಿರುವಾಗ, ತದಧೀನವಾದ ದೇಹಾದಿಗಳು ಅವುಗಳೊಡನೆ ಸಂಬಂಧ. ಆ ಸಂಬಂಧದ ದೆಸೆಯಿಂದುಂಟಾಗುವ ರಾಗ ದ್ವೇಷಾದಿ ಕಳಂಕಗಳ ಕಲ್ಪನೆ. ಇವುಗಳ ಸಂಭಾವನೆಯೂ ಅತ್ಯಂತ ದೂರದಲ್ಲಿ ನಿರಸ್ತವಾದುದೆಂದು ತಿಳಿಯಬೇಕು.] ಒಂದು ವೇಳೆ ಹಾಗೆ ಸಂಭಾವನೆ ಮಾಡಿದರೆ ಆ ಭಾವನೆಯೂ ಭ್ರಾಂತಿಮಯವಾಗಿ ತಪ್ಪಾಗುವುದು. ಏಕೆಂದರೆ ಆರೀತಿಯಾದ ಸಂಭಾವನೆಯು ಅಂಧಕಾರದ ಸಮೂಹಗಳಿಂದ ಸೂರ್ಯನಿಗೆ ಕಳಂಕವುಂಟಾಗುವುದು. ಎಂದು ಸಂಭಾವನೆ ಮಾಡುವ ಉನ್ಮತ್ತನ ಪ್ರಲಾಪಕ್ಕೆ ಸಮಾನವಾದುದೆಂದು ದೃಢವಾಗಿ ತಿಳಿ.

(ಸೂರ್ಯನು ಗಗನ ಮಂಡಲದಲ್ಲಿ ವಿರಾಜಮಾನನಾಗಿರುವಾಗ ಕತ್ತಲೆಯು ಸೂರ್ಯನನ್ನು ಮುಸುಕುವುದೆಂತು ? ಮತ್ತು ಕಳಂಕವನ್ನುಂಟುಮಾಡುವುದೆಂದು ಭಾವಿಸುವುದು ಹೇಗೆ ಸಾಧ್ಯ? ಈ ವ್ಯವಹಾರವೆಲ್ಲವೂ ಸಂಭಾವ್ಯವೇನು ? ಇದರಂತೆಯೇ ದಾರ್ಷ್ಟಾಂತವು.

೧೮. ಅಯ್ಯ ಶತ್ರು ಸಂಹಾರಕನೇ, ಹಿಂದಿನ ಶ್ಲೋಕದಲ್ಲಿ ವಸ್ತುತಃ ದ್ವೈತವೆಂಬುದಿಲ್ಲವೇ ಇಲ್ಲವೆಂಬ ಶ್ರುತಿ ಸಮ್ಮತವಾದ ಸಿದ್ಧಾಂತವನ್ನು ಹೇಳಿದೆನಲ್ಲವೇ ಈಗ ತುಷ್ಯತು ದುರ್ಜನಃ ಎಂಬ ನ್ಯಾಯವನ್ನನುಸರಿಸಿ ಕೇವಲವಾದಕ್ಕೋಸ್ಕರ

ಛಾಯಾತಪಪ್ರಸರಯೋಃ ಪ್ರಕಾಶತಮಸೋರ್ಯಥಾ ।
ನ ಸಂಭವತಿ ಸಂಬಂಧಸ್ತಥಾ ವೈ ದೇಹದೇಹಿನೋಃ ॥ ೧೯ ॥

ಯಥಾ ಶೀತೋಷ್ಣಯೋರ್ನಿತ್ಯಂ ಪರಸ್ಪರವಿರುದ್ಧಯೋಃ ।
ನ ಸಂಭವತಿ ಸಂಬಂಧೋ ರಾಮ ದೇಹಾತ್ಮನೋಸ್ತಥಾ ॥ ೨೦ ॥

ಅವಿನಾಭಾವಿನೋರ್ಯಸ್ತು ಸಂಬಂಧಃ ಕಥಿತೋತಯೋಃ ।
ಜಡಚೇತನಯೋರ್ದೇಹದೇಹಿನೋರನುಭೂಯತೇ ॥ ೨೧ ॥

ಒಂದು ಪಕ್ಷ ದ್ವೈತ ಪ್ರಪಂಚವನ್ನೂ ದೇಹಾದಿಗಳನ್ನೂ ಸತ್ಯವಾಗಿರುವುವೆಂದು ಒಪ್ಪಿಕೊಂಡರೂ ಚಿದ್ರೂಪನೂ ಮತ್ತು ವಿಭುವೂ ಆದ ಆತ್ಮನಿಗೆ ಅತ್ಯಂತ ಜಡ ವಸ್ತುಗಳಾದ ಪ್ರಪಂಚ ದೊಡನೆಯೂ ಮತ್ತು ದೇಹೇಂದ್ರಿಯಾದಿಗಳೊಡನೆಯೂ ಯಾವುದೊಂದು ಸಂಬಂಧವೂ ಸುತರಾಂ ಸಂಭವಿಸುವುದೇ ಇಲ್ಲ.

೧೯. ಪರಸ್ಪರ ಅತ್ಯಂತ ವಿರುದ್ಧ ಸ್ವಭಾವಗಳಾದ ನೆರಳು ಮತ್ತು ಬಿಸಿಲು ಒಂದೇ ಕಾಲದಲ್ಲಿ ಹೇಗೆ ಪ್ರಸರಿಸದೆ ಇರುವ ಕಾರಣ ಸಂಸರ್ಗ ಸಂಬಂಧವನ್ನು ಪಡೆಯುವುದಿಲ್ಲವೋ ಮತ್ತು ಬೆಳಕೂ ಕತ್ತಲೆಯೂ ಹೇಗೆ ಪರಸ್ಪರ ತಾದಾತ್ಮ್ಯ ಸಂಬಂಧವನ್ನೂ ಹೊಂದುವುದಿಲ್ಲವೋ ಹಾಗೆಯೇ ಜಡ ಚೇತನಗಳಾದ ದೇಹ ದೇಹಿ ಗಳಿಗೂ ಯಾವ ಸಂಬಂಧವೂ ಸಂಭವಿಸುವುದೇ ಇಲ್ಲ.

೨೦. ಅಯ್ಯ ರಾಮ, ಅನ್ಯೋನ್ಯ ವಿರುದ್ಧ ಧರ್ಮಿಗಳಾದ ಶೀತೋಷ್ಣಗಳಿಗೆ ಲೋಕದಲ್ಲಿ ಹೇಗೆ ಎಂದಿಗೂ ಯಾವ ಸಂಬಂಧವೂ ಸಂಭವಿಸುವುದೇ ಇಲ್ಲವೋ ಹಾಗೆಯೇ ದೇಹಕ್ಕೂ ಆತ್ಮನಿಗೂ ಸರ್ವದಾ ಪರಸ್ಪರ ಸಂಬಂಧವು ಹೇಗೂ ಸಂಭವಿಸುವುದೇ ಇಲ್ಲ.

೨೧. ಮತ್ತು ಲೋಕದಲ್ಲಿ ಅವಿನಾಭಾವಿಗಳಾದ (ಅಯುತ ಸಿದ್ಧಗಳಾದ ಅಂದರೆ ಯಾವಾಗಲೂ ಒಂದು ಕ್ಷಣವಾದರೂ ಒಂದನ್ನೊಂದು ಅಗಲದೆ ಇರತಕ್ಕ ಧರ್ಮ ಧರ್ಮಿಗಳಿಗೂ ಗುಣ ಗುಣಿ ಮುಂತಾದುವುಗಳಿಗೂ) ಎರಡೆರಡು ಪದಾರ್ಥ ಗಳಿಗೆ ಮಾತ್ರ ಸಮವಾಯ ಸಂಬಂಧವು ಸಂಭವಿತಕ್ಕುದು. ಇಂತಹ ಸಮವಾಯ ಸಂಬಂಧವು ಜಡವಾದ ದೇಹಕ್ಕೂ ಚೇತನನಾದ ಆತ್ಮನಿಗೂ ಹೇಗೆ ಅನುಭವ ಗೋಚರವಾಗುವುದು ? ಸಂಭವಿಸುವುದು. ಸಂಭವಿಸುವುದೇ ಇಲ್ಲ.

ಚಿನ್ಮಾತ್ರಸ್ಯಾತ್ಮನೋ ದೇಹಸಂಬಂಧ ಇತಿ ಯಾ ಕಥಾ ।
ಸೈಷಾ ದುರವಬೋಧಾರ್ಥಾ ದಾವಾಗ್ನೌ ಜಲಧಿರ್ಯಥಾ ॥ ೨೨ ॥

ಸತ್ಯಾವಲೋಕನೇನೈಷಾ ಮಿಥ್ಯಾದೃಷ್ಟಿರ್ವಿನಶ್ಯತಿ ।
ಅವಲೋಕನಯಾ ಸಾಮ್ಯಮಾತಪೇ ಜಲಧಿರ್ಯಥಾ ॥ ೨೩ ॥

ಚಿದಾತ್ಮಾ ನಿರ್ಮಲೋ ನಿತ್ಯಃ ಸ್ವಾವಭಾಸೋ ನಿರಾಮಯಃ ।
ದೇಹಸ್ತ್ವನಿತ್ಯೋ ಮಲವಾಂಸ್ತೇನ ಸಂಬಧ್ಯತೇ ಕಥಂ ॥ ೨೪ ॥

[ಸಂಯೋಗ ಸಂಬಂಧ. ತಾದಾತ್ಮ್ಯ ಸಂಬಂಧ. ಸಮವಾಯ ಸಂಬಂಧ-- ಈ ಮೂರು ವಿಧ ಸಂಬಂಧಗಳೂ ದೇಹದೇಹಿಗಳಿಗೆ ಪರಸ್ಪರ ವಿರುದ್ಧ ಸ್ವಭಾವಗಳಾದ ಕಾರಣ ಸಂಭವಿಸುವುದಿಲ್ಲ.]

೨೨. ಕೇವಲ ಚಿದ್ರೂಪನಾದ ಮತ್ತು ಸತ್ಯಭೂತನಾದ ಆತ್ಮನಿಗೆ, ಜಡವೂ ಅಸತ್ಯವೂ ಆದ ದೇಹೇಂದ್ರಿಯಾದಿಗಳೊಡನೆ ಸಂಬಂಧವಿರುವುದೆಂದು ಹೇಳುವ ವಾದವು ಯಾವುದುಂಟೋ ಅದು ಕಾಡುಗಿಚ್ಚಿನಲ್ಲಿ ಸಮುದ್ರವಿರುವುದೆಂಬ ಹೇಳಿಕೆಗೆ ಸದೃಶವಾಗಿ ಅತ್ಯಂತಾಸಂಭಾವ್ಯವೂ ಅನುಪಪನ್ನವೂ ಅರ್ಥವಾಗದುದೂ ಆಗಿ ಉನ್ಮತ್ತಪ್ರಲಾಪವೇ ಸರಿ ಎನ್ನಿಸುವುದು.

೨೩. ವಸ್ತು ಸ್ವಭಾವವನ್ನು ಆದರಿಸಿ ವಿಮರ್ಶೆಮಾಡಿ ಚೆನ್ನಾಗಿ ಪರೀಕ್ಷಿಸಿ ನೋಡಿದರೆ, ಮೊದಲು ಸಾಂದ್ರವಾದ ಸೂರ್ಯಾತಪದಲ್ಲಿ ಭ್ರಾಂತಿಯಿಂದ ಉದಯಿಸಿದ್ದ ಸಮುದ್ರಜ್ಞಾನವು ಹೇಗೆ ಲಯಹೊಂದಿ (ಸಾದೃಶ್ಯಜ್ಞಾನವು ಅಧ್ಯಸ್ತ ವೈಷಮ್ಯ ಬಾಧವನ್ನು ಹೊಂದಿ) ತೊಲಗುವುದೋ ಹಾಗೆ, ಪರಮಾರ್ಥ ಸತ್ಯವಾದ ಆತ್ಮೈಕತ್ವ ವಿಜ್ಞಾನದಿಂದ ಈ ದೊಡ್ಡ ಪ್ರಪಂಚರೂಪವಾದ ಮಿಥ್ಯಾಭೂತ ಅಜ್ಞಾನವು ನಾಶ ಹೊಂದುವುದು. [ದೇಹಾತ್ಮ ಸಂಬಂಧ ಕಲ್ಪನಾರೂಪವಾದ ಅಧ್ಯಾಸಕ್ಕೆ ಆತ್ಮವೇ ಅಧಿಷ್ಠಾನವಾಗಿರುವ ಕಾರಣ, ಆತ್ಮತತ್ತ್ವಜ್ಞಾನದಿಂದಲೇ ಆತ್ಮಾಜ್ಞಾನವು ಬಾಧಿತವಾಗುವುದು.]

೨೪. ಚಿದ್ರೂಪನಾದ ಆತ್ಮನು ನಿತ್ಯನು, ನಿರ್ಮಲನು, ಸ್ವತಃ ಪ್ರಕಾಶನು ಮತ್ತು ನಿರುಪದ್ರವನು (ಸರ್ವೋಪಪ್ಲವರಹಿತನು) ದೇಹವಾದರೋ ಪೂರ್ವೋಕ್ತ ಆತ್ಮವಿರುದ್ಧ ಸ್ವಭಾವವುಳ್ಳದ್ದು, ಅನಿತ್ಯವು, ಮಲಿನವಾದುದು. ಜಡವು ಮತ್ತು

ಸ್ಪಂದಮಾಯಾತಿ ವಾತೇನ ಭೂತೈರ್ವಾ ಪೀವರೀಕೃತಃ ।
ದೇಹಸ್ತೇನ ನ ಸಂಬಂಧೋ ಮನಾಗೇವ ಸಹಾತ್ಮನಾ ॥ ೨೫ ॥

ಸಿದ್ಧೇ ದ್ವಿತ್ವೇಽಪಿ ದೇಹಸ್ಯ ನ ಸಂಬಂಧಸ್ಯ ಸಂಭವಃ ।
ದ್ವಿತ್ವಾಸಿದ್ಧೌ ತು ಸುಮತೇ ಕಲನೈವೇದೃಶೀ ಕುತಃ ॥ ೨೬ ॥

ಸರ್ವದಾ ಶೋಕ, ಮೋಹ, ಭಯ, ರೋಗಾದಿಗಳಿಂದ ಬಾಧಿತವಾದುದು. ಹೀಗೆ ದೇಹ ದೇಹಿಗಳು ಅನ್ಯೋನ್ಯ ಅತ್ಯಂತ ವಿರುದ್ಧ ಸ್ವಭಾವಗಳಾಗಿರುವಲ್ಲಿ, ದೇಹದೊಡನೆ ಆತ್ಮನು ಹೇಗೆ ಸಂಬಂಧಗೊಳ್ಳುವನು ? ಹೇಗೂ ಇಲ್ಲವೆಂದರ್ಥ.

೨೫. ಈ ದೇಹವು ಪ್ರಾಣವಾಯುವಿನಿಂದ ಚಲನವನ್ನು ಪಡೆಯುವುದು. ಮತ್ತು ಪ್ರಾಣಗಳ ಸ್ಥಿತಿಗೆ ಹೇತುಗಳಾದ ಅನ್ನಪಾನಾದಿಗಳಿಂದ ವೃದ್ಧಿ ಹೊಂದುವುದು. ಹೀಗಿರುವ ಕಾರಣ, ದೇಹದ ಚಲನೆಗೆ ಪ್ರಾಣವಾಯುವೋ ಅಥವಾ ಅನ್ನಾದಿ ದ್ರವ್ಯಗಳಿಂದ ಉಂಟಾದ ಬಲವೋ ಕಾರಣವೇ ಹೊರತು, ಆತ್ಮನು ಎಂದಿಗೂ ಕಾರಣವಲ್ಲ. ಆದುದರಿಂದ ಆತ್ಮಸಂಬಂಧದಿಂದ ದೇಹದಲ್ಲಿ ಚಲನಾದಿಗಳುಂಟಾಗುವುದೆಂದು ಹೇಳುವುದು ಕೇವಲ ಮೌಢ್ಯವು. ಈ ದೇಹಕ್ಕೆ ಆತ್ಮನೊಡನೆ ಸ್ವಲ್ಪಮಾತ್ರವೂ ಸಂಬಂಧವಿಲ್ಲವೇ ಇಲ್ಲ.

೨೬. ಅಯ್ಯ ಸದ್ಬುದ್ಧಿಯುಳ್ಳ ರಾಮ, ಹೀಗೆ ಕೇವಲವಾದಕ್ಕೋಸ್ಕರ, ದ್ವೈತ ಪ್ರಪಂಚವು ಸತ್ಯವೆಂದು ಒಂದು ಪಕ್ಷ ಒಪ್ಪಿಕೊಂಡು ವಿಚಾರ ಮಾಡಿದರೂ, ಜಡವಾದ ದೇಹಕ್ಕೆ ಚಿದ್ರೂಪನಾದ ಆತ್ಮನೊಡನೆ ಯಾವೊಂದು ಸಂಬಂಧವೂ ಸಂಭವಿಸುವುದೇ ಇಲ್ಲ. ಹೀಗಿರುವಾಗ, ವಾಸ್ತವವಾಗಿ ದ್ವೈತಪ್ರಪಂಚವೇ ಅಸತ್ಯವಾಗಿರುವಾಗ, ಆ ಪರಮಾರ್ಥ ಸ್ಥಿತಿಯಲ್ಲಿ, ವಂಧ್ಯಾಪುತ್ರನಂತೆ ಅತ್ಯಂತಾಸತ್ತಾದ ದ್ವೈತಕ್ಕೆ, ಸತ್ಯನಾದ ಆತ್ಮನೊಂದಿಗೆ ಸಂಬಂಧಕಲ್ಪನೆ ಮಾಡುವ ಇಂತಹ ಮಿಥ್ಯಾಭೂತ ದೃಷ್ಟಿಗೆ ಅವಕಾಶವು ತಾನೇ ಎಲ್ಲಿಯದು ?

ಇತ್ಯೇತದೇವ ತತ್ಸತ್ವೇ ತತ್ರೈವಾಂತಃಸ್ಥಿತಿಂ ಕುರು ।
ನ ಬಂಧೋಽಸ್ತಿ ನ ಮೋಕ್ಷೋಽಸ್ತಿ ಕದಾಚಿತ್ಕಸ್ಯಚಿತ್ಕ್ವಚಿತ್ ॥ ೨೭ ॥

---

೨೭. ಅಯ್ಯ ರಾಮ, ಒಂದು ವೇಳೆ, ದ್ವೈತಪ್ರಪಂಚವು ಸತ್ಯವಾದುದೆಂದು ಯಾವನಾದರೊಬ್ಬನು ಆಶಂಕಿಸಿದ್ದೇ ಆದರೆ, ಆಗಲೂ ನಾನು ಇದುವರೆವಿಗೆ ಪೂರ್ವದಲ್ಲಿ ವಿವರಿಸಿದ ನಾನಾ ಯುಕ್ತಿಗಳನ್ನೇ ಉಪನ್ಯಾಸ ಮಾಡಿ, ಅವುಗಳ ಬಲದಿಂದ ಆ ಶಂಕೆಯನ್ನು ನಿರ್ಮೂಲ ಮಾಡಬೇಕಾಗುವುದು. ಅದು ಕಾರಣ, ನೀನು ಮನಸ್ಸಿನೊಳಗೆ ದ್ವೈತ ಪ್ರಪಂಚದ ಸತ್ಯತ್ವಭ್ರಾಂತಿಯನ್ನು ಸಂಪೂರ್ಣವಾಗಿ ನಾಶಪಡಿಸಿಕೊಂಡು. ಆ ಚಿನ್ಮಾತ್ರರೂಪ ಆತ್ಮನಲ್ಲಿಯೇ ಸ್ಥಿರವಾದ ಸ್ಥಿತಿಯನ್ನು ಪಡೆಯುವವನಾಗು. ಈ ಸಂಸಾರದಲ್ಲಿ ಎಲ್ಲಿಯೂ, ಯಾವಾಗಲೂ ಯಾರಿಗೂ ಬಂಧವೂ ಇಲ್ಲ. ಮೋಕ್ಷವೂ ಇಲ್ಲ. [ಬಂಧಮೋಕ್ಷಾದಿ ವ್ಯವಹಾರವೆಲ್ಲವೂ ಕಲ್ಪಿತವಾದುದು. "ಸ್ವಪ್ನಮಾಯೇ ಯಥಾದೃಷ್ಟೇ ಗಂಧರ್ವನಗರಂ ಯಥಾ । ತಥಾವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ ॥ ನ ನಿರೋಧೋ ನ ಚೋತ್ಪತ್ತಿಃ ನ ಬದ್ಧೋ ನ ಚ ಸಾಧಕಃ । ನ ಮುಮುಕ್ಷುಃ ನ ವೈಮುಕ್ತಃ ಇತ್ಯೇಷಾ ಪರಮಾರ್ಥತಾ ॥ ಶ್ರೀ ಗೌಡಪಾದಾಚಾರ್ಯ ವಿರಚಿತ ಮಾಂಡೂಕ್ಯೋಪನಿಷತ್ಕಾರಿಕಾ ವೈತಥ್ಯ ಪ್ರಕರಣ ಶ್ಲೋಕ ೩೧-೩೨.]

[ಪೂರ್ವೋಕ್ತ ಯುಕ್ತಿಗಳು ಹೇಗೆಂದರೆ, ನೇಹನಾನಾಸ್ತಿ ಕಿಂಚನ ಇತ್ಯಾದಿ ಶ್ರುತಿಗಳು, ದ್ವೈತವೇ ಇಲ್ಲವೆಂದು ಸಾರುತ್ತಲಿರುವುವು. ದ್ವಿತೀಯವಾದ ವಸ್ತು ಒಂದು ಸಿದ್ಧಿಸಿದರೆ ಅಲ್ಲವೆ, ಆಗ ಭೇದವು ಸಿದ್ಧಿಸುವುದು. ಆ ದ್ವಿತೀಯವು ಚೈತನ್ಯವೆಂದೇ ಹೇಳಿದರೆ, ಆಗ ಅಲ್ಲಿ ಭೇದಕವೇ ಇಲ್ಲ. ಜಡವೆಂದು ಹೇಳಿದರೆ ಛಾಯಾತಪಗಳಂತೆ ಅನ್ಯೋನ್ಯ ವಿರುದ್ಧವಾದ ಕಾರಣ ಪೂರ್ವಸಿದ್ಧ ಚಿದ್ವಿರುದ್ಧವಾದ ಜಡವೇ ಸಿದ್ಧಿಸುವುದಿಲ್ಲ. ಚಿತ್ತು ತನಗೆ ಅಸಂಬದ್ಧವಾದ ಜಡವನ್ನು ಸಾಧಿಸುವುದು ಎಂದು ಹೇಳುವ ಮಾತೂ ಅರ್ಥವಿಲ್ಲದುದಾಗುವುದು. ದ್ವಿತೀಯವು ಅಧ್ಯಸ್ತವೆಂದು ಹೇಳಿದರೆ, ಸತ್ಯವಾದ ಚಿದ್ರೂಪಾತ್ಮಜ್ಞಾನ ಮಾತ್ರದಿಂದ ನಾಶವಾಗಬೇಕಾಗುವುದು. ನಿರ್ಮಲನೂ ಅಸಂಗನೂ ಆದ ಆತ್ಮನು ಸ್ವಭಾವ ವಿರುದ್ಧವಾದ ಮಲಿನವೂ ಜಡವೂ ಆದ ದ್ವಿತೀಯ ವಸ್ತುವನ್ನು ಸಾಧಿಸುವುದು ಹೇಗೆಯೂ ಸಿದ್ಧಿಸುವುದಿಲ್ಲ. ಹೀಗೆ ನಾನಾ ಯುಕ್ತಿಗಳಿಂದ ವಿಚಾರ ಮಾಡಿದರೆ ದ್ವೈತವೇ ಎಂದಿಗೂ ಸಿದ್ಧಿಸುವುದಿಲ್ಲ. ಅದು ಕಾರಣ, ನೀನು ದ್ವೈತಭ್ರಾಂತಿಯನ್ನು ಬಿಟ್ಟು ಬಿಟ್ಟು ಅದ್ವಿತೀಯ ಚಿನ್ಮಾತ್ರಾತ್ಮನಲ್ಲಿಯೇ ಸ್ಥಿರನಾಗಿರು. ಆ ಸ್ಥಿತಿಯಲ್ಲಿ ಬಂಧಮೋಕ್ಷಾದಿ ವ್ಯವಹಾರಗಳ ಶಂಕೆಗೂ ಅವಕಾಶವೇ ಇಲ್ಲ.]

ಸರ್ವಮಾತ್ಮಮಯಂ ಶಾಂತಮಿತ್ಯೇವಂ ಪ್ರತ್ಯಯಂ ಸ್ಫುಟಂ ।
ಸಬಾಹ್ಯಾಭ್ಯಂತರಂ ರಾಮ ಸರ್ವತ್ರ ದೃಢತಾಂ ನಯ ॥ ೨೮ ॥

ಸುಖೀ ದುಃಖೀ ವಿಮೂಢೋಽಸ್ಮೀತ್ಯೇತಾ ದುರ್ದೃಷ್ಟಯಃ ಸ್ಮೃತಾಃ ।
ಆಸು ಚೇದ್ವಸ್ತುಬುದ್ಧಿಸ್ತೇ ತಚ್ಚಿರಂ ದುಃಖಮಿಚ್ಛಸಿ ॥ ೨೯ ॥

ಯಃ ಕ್ರಮಃ ಶೈಲತೃಣಯೋಃ ಕೌಶೇಯೋಪಲಯೋಸ್ತಥಾ ।
ಸಾಮ್ಯಂ ಪ್ರತಿ ಸ ಏವೋಕ್ತಃ ಪರಮಾತ್ಮಶರೀರಯೋಃ ॥ ೩೦ ॥

---

೨೮. ಅಯ್ಯ ರಾಮ, "ಈ ಸಮಸ್ತ ಜಗತ್ತೂ ಚಿದ್ರೂಪ ಆತ್ಮಮಯವಾದುದು. ಅದು ಕಾರಣವೇ ಪ್ರಶಾಂತವಾದುದು" ಎಂಬೀ ಸ್ಪಷ್ಟವಾದ ಜ್ಞಾನವನ್ನೇ ಒಳಗೂ ಹೊರಗೂ ಸರ್ವತ್ರ ಸರ್ವದಾ ದೃಢಪಡಿಸಿಕೊಳ್ಳುವವನಾಗು. (ವಾಚಾರಂಭಣಂ ವಿಕಾರೋ ನಾಮಧೇಯಂ ಛಾಂದೋಗ್ಯ ೬ ಅತೋಽನ್ಯದಾರ್ತಂ ನತು ತದ್ದ್ವಿತೀಯ ಮಸ್ತಿ ಬೃಹದಾರಣ್ಯಕ ಮಾಯಾ ಮಾತ್ರ ಮಿದಂದ್ವೈತಂ ಅದ್ವೈತಂ ಪರಮಾರ್ಥತಃ ಮಾಂಡೂಕ್ಯಕಾರಿಕಾ ಇತ್ಯಾದಿ ಸಾವಿರಾರು ಪ್ರಮಾಣಗಳು ದ್ವೈತ ಪ್ರಪಂಚಾಭಾವವನ್ನು ಉದ್ಘೋಷಿಸುತ್ತಿರುವುವು.

೨೯. "ನಾನು ಸುಖಿಯು, ನಾನು ದುಃಖಿಯು, ನಾನು ಅತ್ಯಂತ ಮೂಢನು" ಎಂಬೀ ಮೊದಲಾದ ಜ್ಞಾನಗಳೆಲ್ಲವೂ ಮಹಾನರ್ಥ ಹೇತುಗಳಾದ ದುಷ್ಟ ಜ್ಞಾನಗಳೆಂದು ಶಾಸ್ತ್ರಗಳಲ್ಲಿಯೂ ಅನುಭವದಲ್ಲಿಯೂ ಪಂಡಿತರಿಂದ ಸಿದ್ಧಾಂತಿತವಾಗಿರುವುದು. ಈ ವಿರುದ್ಧವಾದ ದುಷ್ಟ ಜ್ಞಾನಗಳನ್ನು ಸಂಪೂರ್ಣವಾಗಿ ನಿರಾಸಮಾಡಿದ ಹೊರತು ಸರ್ವಾತ್ಮ ದೃಷ್ಟಿಯು ದೃಢವಾಗುವುದಿಲ್ಲ. ಈ ವಿಧವಾದ ದುಷ್ಟ ಜ್ಞಾನಗಳಲ್ಲಿಯೇ ನಿನಗೆ ಸತ್ಯತ್ವ ಬುದ್ಧಿಯು ಇದ್ದ ಪಕ್ಷದಲ್ಲಿ ಆಗ ನೀನು ಶಾಶ್ವತವಾದ ದುಃಖವನ್ನೇ ಎಂದೆಂದಿಗೂ ಅಪೇಕ್ಷಿಸುವವನಾಗುವೆ ಎಂದು ತಿಳಿಯಬೇಕಾಗುವುದು.

೩೦. ದೂರದಿಂದ ನೋಡಿದರೂ ಶೈಲ ತೃಣಗಳೆರಡೂ ವಸ್ತುತಃ ಕಣ್ಣಿಗೆ ಗೋಚರವಾಗುವುವು. ಆದರೆ ಅದರಲ್ಲಿ ವಿಶೇಷವುಂಟು ಶೈಲವು ದೊಡ್ಡದಾಗಿಯೂ ಸ್ಥಿರವಾಗಿಯೂ ಇರುವ ಕಾರಣ ಬೇಗನೆ ಸುಲಭವಾಗಿ ಗೋಚರವಾಗುವುದು. ತೃಣವಾದರೋ ಅಲ್ಪವೂ ಚಲವೂ ಆಗಿರುವದರಿಂದ ಅಷ್ಟು ಸುಲಭವಾಗಿ ಕಣ್ಣಿಗೆ ತಟ್ಟನೆ ಕಾಣುವುದಿಲ್ಲ. ಮತ್ತು ಹಾಗೆಯೇ ಕೌಶೇಯ ಪಾಷಾಣಗಳು ತ್ವಗಿಂದ್ರಿಯದಿಂದ

ಯಥಾ ತೇಜಸ್ತಿಮಿರಯೋರ್ನ ಸಂಬಂಧೋ ನ ತುಲ್ಯತಾ ।
ಅತ್ಯಂತಭಿನ್ನಯೋಃ ರಾಮ ತಥೈವಾತ್ಮಶರೀರಯೋಃ ॥ ೩೧ ॥

ಯಥಾ ಶೀತೋಷ್ಣಯೋರೈಕ್ಯಂ ಕಥಾಸ್ವಪಿ ನ ದೃಶ್ಯತೇ ।
ಜಡಪ್ರಕಾಶಯೋಃ ಶ್ಲೇಷೋ ನ ತಥಾತ್ಮಶರೀರಯೋಃ ॥ ೩೨ ॥

ಮುಟ್ಟಿ ತಿಳಿಯುವುದಕ್ಕೆ ಯೋಗ್ಯವಾಗಿದ್ದರೂಕೂಡ ಕೌಶೇಯವು ಅತ್ಯಂತ ಮೃದುವಾಗಿಯೂ ಸುಖಸ್ಪರ್ಶವಾಗಿಯೂ ಇರುವ ಕಾರಣ ಕೌಶೇಯ ಸ್ಪರ್ಶವು ಸರ್ವರಿಗೂ ಗ್ರಾಹ್ಯವಾದುದು ಆದರೆ ಪಾಷಾಣವು ಕಠಿಣವಾಗಿಯೂ ಮುಟ್ಟಿದರೆ ದುಃಖಕರವಾಗಿಯೂ ಇರುವ ಕಾರಣ ಅದರ ಸ್ಪರ್ಶವನ್ನು ಎಲ್ಲರೂ ತಿರಸ್ಕರಿಸುವರು. ಇದು ಲೋಕ ಪ್ರಸಿದ್ಧವು. ಈ ದೃಷ್ಟಾಂತಗಳಂತೆಯೇ, ಪಾರಮಾರ್ಥಿಕವಾದ ಪರಮಾತ್ಮ ದೃಷ್ಟಿಯು ಅಪರಿಚ್ಛಿನ್ನವೂ, ಸರ್ವದಾ ಸ್ವಯಂಪ್ರಕಾಶ ನಿರತಿಶಯಾನಂದರೂಪವೂ ಆಗಿ ಇರುವ ಕಾರಣ, ಅದು ಸುಕರವೂ ಉಪಾದೇಯವೂ ಆಗಿರುವುದು. ದೇಹಾದಿ ಅನಾತ್ಮದ್ವೈತ ದೃಷ್ಟಿಯಾದರೋ ಅತ್ಯಂತ ತುಚ್ಛವೂ, ಅಸ್ಥಿರವೂ ಮನಸ್ಸು ಮೊದಲಾದವುಗಳ ಸಾಹಾಯ್ಯವನ್ನು ಅಪೇಕ್ಷಿಸತಕ್ಕದೂ ಆಗಿರುವ ಕಾರಣ, ದುಷ್ಕರವೂ ಹೇಯವೂ ಆಗಿರುವುದು. ಹೀಗೆ ಅವೆರಡಕ್ಕೂ ಅತ್ಯಂತ ವಿರುದ್ಧವಾದ ವೈಷಮ್ಯವಿರುವುದರಿಂದ ಸಾಮ್ಯವು ಎಂದೆಂದಿಗೂ ಕೂಡುವುದಿಲ್ಲ.

೩೧. ಅಯ್ಯ ರಾಮ, ಪರಸ್ಪರ ವಿರುದ್ಧ ಸ್ವಭಾವವುಳ್ಳವುಗಳಾಗಿ ಅತ್ಯಂತ ಭಿನ್ನ ವಸ್ತುಗಳಾದ ಪ್ರಕಾಶ ತಮಸ್ಸುಗಳಿಗೆ (ಬೆಳಕು-ಕತ್ತಲೆ) ಹೇಗೆ ಯಾವದೊಂದು ಸಂಬಂಧವೂ ಸಾದೃಶ್ಯವೂ ಇಲ್ಲವೋ ಹಾಗೆಯೇ ಆತ್ಮವೂ, ಶರೀರವೂ ಅತ್ಯಂತ ವಿರುದ್ಧ ಸ್ವಭಾವವುಳ್ಳವುಗಳಾಗಿ ವಿಭಿನ್ನವಾದವುಗಳಾದ ಕಾರಣ, ಅವೆರಡಕ್ಕೂ ಪರಸ್ಪರ ಸಂಬಂಧವಿಲ್ಲದಿರುವಂತೆ ಸಾಮ್ಯವೂ ಇಲ್ಲವೇ ಇಲ್ಲ.

೩೨. ಅನ್ಯೋನ್ಯ ವಿರೋಧವಿರುವ ಕಾರಣದಿಂದಲೇ, ಶೀತೋಷ್ಣಗಳಿಗೆ ಹೇಗೆ ಐಕ್ಯವು ಮಾತುಗಳಲ್ಲಿಯೂ ಕೂಡ (ಉನ್ಮತ್ತರ ಮಾತುಗಳಲ್ಲವು) ಕಾಣುವ

ದೇಹಶ್ಚಲತಿ ವಾತೇನ ತೇನೈವಾಯಾತಿ ಗಚ್ಛತಿ ।
ಶಬ್ದಂ ಕರೋತಿ ವಾತೇನ ದೇಹನಾಡೀವಿಲಾಸಿನಾ　　　॥ ೩೩ ॥

ಶಬ್ದಃ ಕಚತಟಪ್ರಾಯಃ ಸ್ಫುರತ್ಯಂತಃ ಸಮೀರಣೈಃ ।
ಯಥಾ ಪ್ರಜಾಯತೇ ವಂಶಾತ್ ದೇಹರಂಧ್ರಾತ್ತಥೈವ ಹಿ　　　॥ ೩೪ ॥

ದಿಲ್ಲವೋ (ಉಪಪನ್ನವಾದುದಲ್ಲವೋ) ಹಾಗೆ ಜಡ ಶರೀರಕ್ಕೂ ಚೇತನನಾದ ಆತ್ಮನಿಗೂ, ಪರಸ್ಪರ ಸಂಯೋಗ ಸಂಬಂಧವೇ ಉಪಪನ್ನವಾಗುವುದಿಲ್ಲ. ಇನ್ನು ಐಕ್ಯವು (ತಾದಾತ್ಮ್ಯ ಸಂಬಂಧವು) ಎಲ್ಲಿರುವುದು? (ಐಕ್ಯವು ದೂರದಲ್ಲಿ ನಿರಸ್ತವಾಯಿತೆಂದು ಭಾವ.)

೩೩. ಆತ್ಮ ತಾದಾತ್ಮ್ಯವಿಲ್ಲದಿದ್ದರೂ ಕೂಡ, ದೇಹವು ಪ್ರಾಣ ವಾಯುವಿನಿಂದ ಚಲಿಸುವುದು. ಆ ಪ್ರಾಣ ವಾಯುವಿನಿಂದಲೇ ಒಂದೊಂದು ಸಲ ದೇಹವು ಬರುವುದು ಮತ್ತು ಹೋಗುವುದು. ದೇಹದೊಳಗಿರುವ ನಾಡಿಗಳಲ್ಲಿ ಪ್ರಾಣ ವಾಯುವು ಸ್ವೇಚ್ಛೆಯಾಗಿ ಸಂಚರಿಸುತ್ತಾ ತುಂಬಿಕೊಳ್ಳುವುದರಿಂದ ಈ ದೇಹವು ಒಂದೊಂದು ಸಲ ಶಬ್ದವನ್ನೂ ಮಾಡುವುದು.

೩೪. ಕೀಚಕಗಳೆಂಬ ವೇಣು ವಿಶೇಷಗಳ ರಂಧ್ರಗಳಲ್ಲಿ ವಾಯುವು ಪ್ರವೇಶಿಸಿ ತುಂಬಿ ಕೊಂಡಾಗ ಅವುಗಳಿಂದ ಕಚಟತ ಇತ್ಯಾದಿ ರೂಪವಾದ ಶಬ್ದವು ಹೇಗೆ ಉದ್ಭವಿಸುವುದೋ ಹಾಗೆಯೇ ದೇಹದ ರಂಧ್ರಗಳೊಳಗೂ ಪ್ರಾಣಾದಿವಾಯುಗಳು ಸಂಚಾರಮಾಡಿ ತುಂಬಿಕೊಳ್ಳುವುದರಿಂದ ಒಳಗೆ ಶಬ್ದವು ಮೂಡುವುದು. (ದೇಹ ರಂಧ್ರವೆಂದರೆ ಕಂಠ, ಅದರಿಂದ ಉದಯಿಸಿದ ಪ್ರಾಣವಾಯುಗಳು ಕಂಠ ತಾಲು ಮೊದಲಾದ ಮುಖಸ್ಥಾನಗಳಲ್ಲಿ ನಾಲಗೆ ಮುಂತಾದವುಗಳಿಂದ ಅಭಿಹತವಾಗಿ ಹೊರ ಹೊರಡುವಾಗ ಅವುಗಳಿಂದ ದೇಹದೊಳಗೆ ಕವರ್ಗ ಚವರ್ಗ ಟವರ್ಗ ತವರ್ಗ ಮುಂತಾದ ಶಬ್ದವು ಸ್ಫುರಿಸುವುದು ಎಂಬುದು ಸರ್ವರಿಗೂ ಪ್ರತ್ಯಕ್ಷ ಸಿದ್ಧವು ಎಂದು ತಾತ್ಪರ್ಯ ಪ್ರಕಾಶ ಟೀಕಾಕಾರದ ಅಭಿಪ್ರಾಯ.

ಕನೀನಿಕಾಪರಿಸ್ಪಂದಶ್ಚಕ್ಷುಃ ಸ್ಪಂದಸ್ಯ ಮಾರುತಾತ್ ।
ಇಂದ್ರಿಯಸ್ಫುರಣಾತ್ಸ್ವೈವ ಸಂವಿತ್ಕೇವಲಮಾತ್ಮನಃ ॥ ೩೫ ॥

ಆಕಾಶೋಪಲಕುಡ್ಯಾದೌ ಸರ್ವತ್ರಾತ್ಮದಶಾ ಸ್ಥಿತಾ ।
ಪ್ರತಿಬಿಂಬಮಿವಾದರ್ಶೇ ಚಿತ್ತ ಏವಾತ್ರ ದೃಶ್ಯತೇ ॥ ೩೬ ॥

ಶರೀರಾಲಯಮುತ್ಸೃಜ್ಯ ಯತ್ರ ಚಿತ್ತವಿಹಂಗಮಃ ।
ಸ್ವವಾಸನಾವಶಾದ್ಯಾತಿ ತತ್ರೈವಾತ್ಮಾನುಭೂಯತೇ ॥ ೩೭ ॥

---

೩೫. ರೂಪವಿರುವ ಪ್ರದೇಶದಲ್ಲಿ ಅದನ್ನು ಗ್ರಹಿಸುವುದಕ್ಕಾಗಿ ಕಣ್ಣು ಚಲಿಸುವುದು. ಈ ಕಣ್ಣಿನ ಚಲನಕ್ಕೆ ಕಣ್ಣುಗುಡ್ಡಿನ ಚಲವವೇ ನಿಮಿತ್ತವು ಆ ಕನೀನಿಕಾ ಚಲನವೂ ಕೂಡ ಪ್ರಾಣವಾಯುಗಳ ದೆಸೆಯಿಂದಲೇ ಆಗುವುದು. ಹೀಗೆಯೇ ಸಮಸ್ತವಾದ ಇಂದ್ರಿಯಗಳ ಸ್ಫುರಣದಿಂದಲೂ ಉದಯಿಸತಕ್ಕ ವಿಷಯಸ್ಫೂರ್ತಿಯೆಂಬ ಸಂವಿತ್ತು ಮಾತ್ರವೇ ಕೇವಲ ಆತ್ಮನಿಗೆ ಸಂಬಂಧ ಪಡುವುದು ಮತ್ತೆ ಬೇರೆ ಯಾವುದೂ ಆತ್ಮನಿಗೆ ಸಂಬಂಧಪಡುವುದಿಲ್ಲ.

೩೬. ಆ ಸಂವಿತ್ತು ಆಕಾಶ, ಕಲ್ಲು, ಗೋಡೆ ಮುಂತಾದ ಸರ್ವ ವಸ್ತುಗಳಲ್ಲಿಯೂ ಸರ್ವಗತವಾಗಿಯೂ ಸಾರ್ವಕಾಲಿಕವಾಗಿಯೂ ಇರುವುದೇನೋ ನಿಜ ಆದರೂಕೂಡ ದರ್ಪಣ ಮುಂತಾದ ಸ್ವಚ್ಛದ್ರವ್ಯಗಳಲ್ಲಿ ಮಾತ್ರವೇ ಮುಖ ಮುಂತಾದ ಬಿಂಬಗಳು ಪ್ರತಿಫಲಿಸಿ ಅಲ್ಲಿ ಆ ಪ್ರತಿ ಬಿಂಬಗಳು ಕಾಣುವಂತೆ ಆ ಮನಸ್ಸಿನಲ್ಲಿಯೂ ಮನೋ ವೃತ್ತಿಗಳಲ್ಲಿಯೂ ಮಾತ್ರವೇ ಅಭಿವ್ಯಕ್ತವಾಗುವುದು. ಸಂವಿತ್ತು ಬೇರೆ ಇನ್ನೆಲ್ಲಿಯೂ ಕಾಣುವುದಿಲ್ಲ.

೩೭. 'ಈ ಕಾರಣದಿಂದಲೇ, ಈ ಚಿತ್ತ (ಮನಸ್) ಎಂಬ ಹಕ್ಕಿಯು ಶರೀರವೆಂಬ ಗೂಡನ್ನು ಬಿಟ್ಟುಬಿಟ್ಟು, ತನ್ನ ಕಾಮುಕರ್ಮಾದಿ ವಾಸನಾವಶದಿಂದ ಎಲ್ಲೆಲ್ಲಿಗೆ (ಲೋಕಾಂತರಾದಿಗಳಿಗೆ) ಹೋಗುವುದೋ ಅಲ್ಲಿಗೆ ಅಲ್ಲಿಗೆ ಎಲ್ಲಾ ಆತ್ಮನೂ ಹೋಗುವಂತೆ ಅನುಭವಗೋಚರನಾಗುವನು.

[ಆತ್ಮನಿಗೆ ಪರಲೋಕ ಗಮನಾದಿ ವ್ಯವಹಾರವು ಸಿದ್ಧಿಸುವುದು ಕೂಡ ಈ ಕಾರಣದಿಂದಲೇ.]

ಯತ್ರ ಪುಷ್ಪಂ ತತ್ರ ಗಂಧಸಂವಿದಃ ಸಂಸ್ಥಿತಾ ಯಥಾ ।
ಯತ್ರ ಚಿತ್ತಂ ಹಿ ತತ್ರಾತ್ಮಸಂವಿದಃ ಸಂಸ್ಥಿತಾಸ್ತಥಾ ॥ ೩೮ ॥

ಸರ್ವತ್ರಸ್ಥಿತಮಾಕಾಶಮಾದರ್ಶೇ ಪ್ರತಿಬಿಂಬತಿ ।
ಯಥಾ ತಥಾತ್ಮಾ ಸರ್ವತ್ರ ಸ್ಥಿತಶ್ಚೇತಸಿ ದೃಶ್ಯತೇ ॥ ೩೯ ॥

ಅಪಾಮವನತಂ ಸ್ಥಾನಮಾಸ್ಪದಂ ಭೂತಲೇ ಯಥಾ ।
ಅಂತಃಕರಣ ಮೇವಾತ್ಮಸಂವಿದಾಮಾಸ್ಪದಂ ತಥಾ ॥ ೪೦ ॥

ಸತ್ಯಾಸತ್ಯಂ ಜಗದ್ರೂಪಮಂತಃಕರಣ ಬಿಂಬಿತಾ ।
ಆತ್ಮಸಂವಿತ್ತನೋತೀದಮಾಲೋಕಮಿವ ಸೂರ್ಯಭಾ ॥ ೪೧ ॥

ಅಂತಃಕರಣ ಮೇವಾತಃ ಕಾರಣಂ ಭೂತಸಂಸೃತೌ ।
ಆತ್ಮಾ ಸರ್ವಾತಿಗತ್ವಾತ್ತು ಕಾರಣಂ ಸದಕಾರಣಂ ॥ ೪೨ ॥

---

೩೮. ಎಲ್ಲಿ ಹೂಗಳಿರುವುವೋ ಅಲ್ಲಿ ಗಂಧ ಜ್ಞಾನಗಳೂ ಇರುವುವು. ಅಂತೆಯೇ ಎಲ್ಲಿ ಚಿತ್ತವಿರುವುದೋ ಅಲ್ಲಿ ಆತ್ಮಸಂವಿತ್ತುಗಳೂ ಇದ್ದುಕೊಂಡಿರುವುವು.

೩೯. ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ಅಪಾರವಾದ ಆಕಾಶವು ಹೇಗೆ ಸಣ್ಣದಾದ ಒಂದು ಕನ್ನಡಿಯೊಳಗೆ ಪ್ರತಿಬಿಂಬಿಸುವುದೋ ಹಾಗೆಯೇ ಆತ್ಮನು ಜಗತ್ತಿನಲ್ಲಿ ಎಲ್ಲಾ ವ್ಯಾಪಿಸಿಕೊಂಡು ಸರ್ವಗತನಾಗಿದ್ದರೂ ಚಿತ್ತದಲ್ಲಿ ಪ್ರತಿಬಿಂಬಿತನಾಗಿ ಕಾಣುವನು.

೪೦. ಭೂಮಿಯಲ್ಲಿ ತಗ್ಗಾಗಿರುವ ಪ್ರದೇಶವು ಹೇಗೆ ನೀರಿಗೆ ಆಸ್ಪದವಾಗಿರುವುದೋ ಹಾಗೆ ಚಿತ್ಪ್ರತಿಬಿಂಬಗಳಿಗೆ ಅಂತಃಕರಣವೇ, ಆಸ್ಪದವಾಗಿರುವುದು.

೪೧. ಅಂತಃಕರಣದೊಳಗೆ ಪ್ರತಿಬಿಂಬಿಸಿದ ಆತ್ಮಚೈತನ್ಯವು ವ್ಯಾವಹಾರಿಕವಾಗಿಯೂ, ಪ್ರಾತಿಭಾಸಿಕವಾಗಿಯೂ ಇರುವ ಎರಡು ಬಗೆಯಾದ ಈ ಜಗದ್ರೂಪವನ್ನು, ಸೂರ್ಯನ ತೇಜಸ್ಸು ಬೆಳಕನ್ನು ಪ್ರಸರಿಸುವಂತೆ ವಿಸ್ತರಿಸುವುದು.

೪೨. ಅದು ಕಾರಣ, ಪಾಂಚಭೌತಿಕ ಮಯವಾದ ಈ ಜಗತ್ತಿನ ಸೃಷ್ಟಿಯ ವಿಷಯದಲ್ಲಿ ಅಂತಃಕರಣವು ಮಾತ್ರವೇ (ಅಂತಃಕರಣ ಸಮಷ್ಟ್ಯಾತ್ಮನಾದ ಹಿರಣ್ಯ

ಅವಿಚಾರಣ ಮಜ್ಞಾನಂ ಮೌರ್ಖ್ಯಮಾಹುರ್ಮಹಾಧಿಯಃ ।
ಸಂಸಾರಸಂಸೃತೌ ಸಾರಮಂತಃಕರಣ ಕಾರಣಂ ॥ ೪೩ ॥

ಅಸಮ್ಯಕ್‌ಪ್ರೇಕ್ಷಣಾ ನ್ಮೋಹಾಚ್ಚೇತಃ ಸತ್ತಾಂ ಗೃಹೀತವತ್ ।
ಸಂಮೋಹಬೀಜಕಣಿಕಾಂ ತಮೋಽರ್ಕಾದಿವ ದೃಶ್ಯತೇ ॥ ೪೪ ॥

ಯಥಾಭೂತಾತ್ಮತತ್ತ್ವೈಕಪರಿಜ್ಞಾನೇನ ರಾಘವ ।
ಅಸತ್ತಾಮೇತ್ಯಲಂ ಚೇತೋ ದೀಪೇನೇವ ತಮಃ ಕ್ಷಣಾತ್ ॥ ೪೫ ॥

ಗರ್ಭನೇ) ಕಾರಣವಾಗಿರುವುದು. ಆತ್ಮನಾದರೋ ಸರ್ವಾತೀತನಾಗಿರುವ ಕಾರಣ ಪ್ರತಿಬಿಂಬದ ಮೂಲಕ ಕಾರಣವಾಗಿದ್ದರೂ ಕೂಡ ಸ್ವತಃ ಕಾರಣವಲ್ಲವೇ ಅಲ್ಲವು.

೪೩. ಅತ್ಯಂತ ವಿಸ್ತಾರವಾಗಿ ಹರಡಿಕೊಂಡಿರುವ ಈ ಸಂಸಾರ ಮಾರ್ಗದಲ್ಲಿ (ಜಗತ್ಪ್ರವಾಹದಲ್ಲಿ) ಅವಿಚಾರ, ಅಜ್ಞಾನ, ಮೌರ್ಖ್ಯ (ಮೂಢತ್ವ) ಎಂಬ ಈ ಮೂರೇ ಅಂತಃಕರಣಕ್ಕೆ ಪ್ರಧಾನ ಕಾರಣವೆಂದು ಮಹಾ ಜ್ಞಾನಿಗಳು ಹೇಳುವರು.

೪೪. ಅನ್ಯಥಾ ಗ್ರಹಣ ಸಂಸ್ಕಾರಬಲದ ದೆಸೆಯಿಂದ (ಒಂದು ವಸ್ತುವನ್ನು ಯಥಾಸ್ಥಿತವಾಗಿ ತಿಳಿದುಕೊಳ್ಳದೆ ಬೇರೆ ರೀತಿಯಾಗಿ ಅರಿಯುವುದು. ಅಂದರೆ ಸ್ಥಾಣುವನ್ನು ಸ್ಥಾಣುವೆಂದು ತಿಳಿಯದೆ ಪುರುಷನೆಂದು ತಪ್ಪಾಗಿ ತಿಳಿಯುವಿಕೆ ಅನ್ಯಥಾ ಗ್ರಹಣವೆನ್ನಿಸುವುದು.) ಮೋಹವು ಉದಯಿಸುವುದು ಈ ಮೋಹದ ದೆಸೆಯಿಂದ ಸಕಲ ಭ್ರಾಂತಿಗಳಿಗೂ ಬೀಜಭಾನ್ಯಪ್ರಾಯವಾದ ಚಿತ್ತಾಕಾರ ಪರಿಣಾಮವನ್ನು ಗ್ರಹಿಸಿದಂಥ ಅಜ್ಞಾನವು ಚಿದ್ರೂಪನಾದ ಸ್ವಾತ್ಮನ ವಿಷಯದಲ್ಲಿ, "ನಾನು ಅಜ್ಞನು" ಎಂಬುದಾಗಿ ಸರ್ವ ಜನರಿಗೂ ಪ್ರತ್ಯಕ್ಷವಾಗಿಯೇ-ಸೂರ್ಯಮಂಡಲದ ದೆಸೆಯಿಂದ ಅದನ್ನು ನುಂಗುವಂಥ ರಾಹುವು ಅಗೋಚರವಾದುದಾದರೂ ಪ್ರತ್ಯಕ್ಷವಾಗಿ ಕಣ್ಣಿಗೆ ಗೋಚರವಾಗುವಂತೆ, ಅನುಭವಗೋಚರವಾಗಿರುವುದು

೪೫. ಅಯ್ಯ ರಾಘವ, ದೀಪ ಪ್ರಕಾಶವು ಉದಯಿಸಿದ ಕೂಡಲೇ ಅಂಧಕಾರವು ನಿಶ್ಶೇಷವಾಗಿ ನಾಶವಾಗಿ ಬಿಡುವಂತೆ ಇದ್ದದ್ದು ಇದ್ದ ಹಾಗೆ (ಯಥಾಸ್ಥಿತವಾಗಿ ವಸ್ತು ಸ್ಥಿತಿಗೆ ಅನುಸಾರವಾಗಿ) ಆತ್ಮತತ್ತ್ವವನ್ನು ನಿಸ್ಸಂದೇಹವಾಗಿ ಸಾಕ್ಷಾ

ಸಂಸಾರಕಾರಣಮಿತಃ ಸ್ವಯಂ ಚೇತೋ ವಿಚಾರಯೇತ್ ।
ಜೀವೋಽಂತಃಕರಣಂ ಚಿತ್ತಂ ಮನಶ್ಚೇತ್ಯಾದಿನಾಮಕಂ ॥ ೪೬ ॥

ಶ್ರೀ ರಾಮ ಉವಾಚ :—
ಏತಾಃ ಸಂಜ್ಞಾಃ ಪ್ರಭೋ ಬ್ರಹ್ಮಂಶ್ಚೇತಸೋ ರೂಢಿಮಾಗತಾಃ ।
ಕಥಮಿತ್ಯೇವ ಕಥಯ ಮಯಿ ಮಾನದ ಸಿದ್ಧಯೇ ॥ ೪೭ ॥

ಶ್ರೀ ವಸಿಷ್ಠ ಉವಾಚ :—
ಸರ್ವೇ ಭಾವಾ ಇಮೇ ನಿತ್ಯಮಾತ್ಮತತ್ತ್ವೈಕರೂಪಿಣಃ ।
ಚಿತ್ತಾತ್ತರಂಗಕಗಣಾ ಜಲೈಕಕಲಿತಾ ಯಥಾ ॥ ೪೮ ॥

ತ್ಕರಿಸುವಿಕೆಯಿಂದ ಮಾತ್ರವೇ ಈ ಚಿತ್ತವು ಸಂಪೂರ್ಣವಾಗಿ ನಾಶಹೊಂದಿ ಇಲ್ಲದೆ ಹೋಗಿಬಿಡುವುದು,

೪೬. ಹೀಗಿರುವ ಕಾರಣ ಈಚಿತ್ತವೇ ಸಂಸಾರಕ್ಕೆ ಕಾರಣವು; ಈ ಚೇತೋ ನಾಶವೇ ಸಂಸಾರ ನಾಶವು ಎಂಬುದಾಗಿ ಸಾಧಕನು ತಾನೇ ವಿಚಾರ ಮಾಡಿ ತಿಳಿಯ ಬೇಕಾಗಿರುವುದು. ಈ ಚೇತಸ್ಸಿಗೆ ಜೀವಃ, ಅಂಃಕರಣಂ ಚಿತ್ತಂ ಮನಃ ಇತ್ಯಾದ್ಯ ನೇಕ ನಾಮಾಂತರಗಳೂ ಇರುವುವು.

ಶ್ರೀರಾಮನು ಹೇಳಿದನು. (ಪ್ರಶ್ನೆಯನ್ನು ಕೇಳಿದನು.)

೪೭. ಸ್ವಾಮಿ, ಬ್ರಹರ್ಷಿವರ್ಯರೇ, ಅಭಿಮಾನವನ್ನು ಕತ್ತರಿಸಿ ಹಾಕತಕ್ಕ ಗುರುಗಳೇ- ಪ್ರಭುಗಳೇ, ಈಗಲೇ ತಾವು ಉಪದೇಶಿಸಿದಂಥ ಜೀವ ಮುಂತಾದ ಸಂಜ್ಞೆಗಳು ಚೇತಸ್ಸಿಗೆ ಹೇಗೆ ರೂಢವಾಗಿರುವುವು. ತಾವು ಉಪದೇಶಿಸಿದಂಥ ತತ್ತ್ವ ವಿಚಾರವು ನನ್ನಲ್ಲಿ ಸಿದ್ಧಿಸುವುದಕ್ಕೋಸ್ಕರ ಈಗ ತಾವು ಈ ವಿಚಾರವನ್ನು ದಯ ಮಾಡಿ ನನಗೆ ಅಪ್ಪಣೆ ಕೊಡಿಸಬೇಕು.

ಶ್ರೀ ವಸಿಷ್ಠರು ಹೇಳಿದರು.

೪೮. ಕೇವಲ ಜಲದಿಂದಲೇ ಅನೇಕಾನೇಕ ಅಲೆಗಳ ಸಮುದಾಯಗಳು ವಿವಿಧವಾಗಿ ಆವಿರ್ಭವಿಸುವಂತೆ ಪ್ರಾಪಂಚಿಕಗಳಾದ ಈ ಸಕಲ ದೃಶ್ಯ ಪದಾರ್ಥಗಳೂ ಆತ್ಮ ತತ್ತ್ವದೊಡನೆ ತಾದಾತ್ಮ್ಯಾಧ್ಯಾಸದ ಮೂಲಕ ಏಕರೂಪವನ್ನು ಪಡೆದ ಸಮಷ್ಟ್ಯಾತ್ಮಕ ಚಿತ್ತದಿಂದಲೇ ಸಂತತವೂ ಉತ್ಪನ್ನವಾಗಿರುವುವು.

ಆತ್ಮಾಽಸ್ಪಂದೈಕರೂಪಾತ್ಮಾ ಸ್ಥಿತಸ್ತೇಷು ಕ್ವಚಿತ್ಕ್ವಚಿತ್ ।
ತರಂಗೇಷು ವಿಲೋಲೇಷು ಪಯೋಧೇಃ ಸಲಿಲಂ ಯಥಾ ॥ ೪೯ ॥

ಕ್ವಚಿದಸ್ಪಂದರೂಪಾತ್ಮಾ ಸ್ಥಿತಸ್ತೇಷು ಮಹೇಶ್ವರಃ ।
ತರಂಗತ್ವಮಯಾತೇಷು ಜಲಭಾವೋ ಜಲೇಷ್ವಿವ ॥ ೫೦ ॥

ತತ್ರೋಪಲಾದಯೋ ಭಾವಾ ಅಲೋಲಾಃ ಸ್ವಾತ್ಮನಿ ಸ್ಥಿತಾಃ ।
ಸುರಾಫೇನವದುತ್ಸ್ಪಂದಾ ಲೋಲಾಸ್ತು ಪುರುಷಾದಯಃ ॥ ೫೧ ॥

ತತ್ರ ತೇಷು ಶರೀರೇಷು ಸರ್ವಶಕ್ತೇಸ್ತದಾತ್ಮನಃ ।
ಕಲಿತಾಽಜ್ಞಾನಕಲನಾ ತೇನಾಜ್ಞಾನಮಸೌ ಸ್ಥಿತಃ ॥ ೫೨ ॥

---

೪೯. ಅತ್ಯಂತ ಚಂಚಲವಾಗಿ ಮೇಲಿಂದಮೇಲೆ ವಿಶೇಷವಾಗಿ ಬೀಸುತ್ತಿರುವ ಸಮುದ್ರದ ಅಲೆಗಳಲ್ಲಿ ಸರ್ವತ್ರ ಜಲವೇ ಇರುವಂತೆ ಕೆಲವು ಕೆಲವು ಪ್ರಾಪಂಚಿಕ ಪದಾರ್ಥಗಳೊಳಗೆ ಕೇವಲ ಚಲನಾತ್ಮಕನಾಗಿ ಚಲನ ಸ್ವಭಾವವುಳ್ಳವನಾಗಿ ಆತ್ಮನು ಇದ್ದೇ ಇರುವನು.

೫೦. ಅಲೆಗಳ ಭಾವವನ್ನು ಪಡೆಯದೆ ನಿಶ್ಚಲವಾಗಿರುವ ಜಲಗಳಲ್ಲಿ ಜಲತ್ವವು ಇರುವಂತೆಯೇ ಈ ಪ್ರಾಪಂಚಿಕ ವಸ್ತುಗಳೊಳಗೆ ಕೆಲವು ಕಡೆಗಳಲ್ಲಿ ಆತ್ಮನು ನಿಶ್ಚಲನಾಗಿಯೇ ಇದ್ದುಕೊಂಡಿರುವನು

೫೧. ಈ ರೀತಿಯಾಗಿ ಚಲವೂ ಅಚಲವೂ ಆಗಿರುವ ಪ್ರಾಪಂಚಿಕ ಪದಾರ್ಥಗಳೊಳಗೆ ಕಲ್ಲು ಮೊದಲಾದ ವಸ್ತುಗಳೇ ಅಚಲಗಳಾಗಿ ಸ್ವರೂಪವಾದ ಆತ್ಮನಲ್ಲಿ ನೆಲೆಸಿರುವುವು, ಪುರುಷಾದಿ ಪ್ರಾಣಿಗಳಾದರೋ ಹೆಂಡದಮೇಲೆ ಉದಯಿಸುವ ನೊರೆಯಂತೆ ಅತಿ ಚಂಚಲವಾಗಿ ಕಾಣಿಸುತ್ತಾ ಸ್ವಾತ್ಮ ಸ್ವರೂಪದಲ್ಲಿ ಜಂಗಮಗಳಾಗಿ ಇರುವುವು.

೫೨. ಸರ್ವ ಶಕ್ತನಾದ ಆತ್ಮನ ಈ ಬಗೆಯಾದ ಸ್ಥಾವರ ಮತ್ತು ಜಂಗಮರೂಪ ಶರೀರಗಳಲ್ಲಿ ಕಲ್ಪಿತವಾದ ಅಜ್ಞಾನದ ಈ ಪ್ರಭಾವವು ಸುಪ್ರಸಿದ್ಧವಾಗಿರುವುದು. ಅದು ಕಾರಣ ಸ್ವಕಲ್ಪಿತವಾದ ಆ ಅಜ್ಞಾನವು ಆತ್ಮರೂಪವಾಗಿಯೇ ಇದ್ದುಕೊಂಡಿರುವುದು.

ತದಜ್ಞಾನಮನಂತಾತ್ಮಭೂಷಿತಂ ಜೀವ ಉಚ್ಯತೇ ।
ಸ ಸಂಸಾರೇ ಮಹಾಮೋಹಮಾಯಾಪಂಜರಕುಂಜರಃ ॥ ೫೩ ॥
ಜೀವನಾಜ್ಜೀವ ಇತ್ಯುಕ್ತೋಽಹಂಭಾವಃ ಸ್ವಾತ್ಮ್ಯಹಂತಯಾ ।
ಬುದ್ಧಿರ್ನಿಶ್ಚಯಕರ್ತೃತ್ವೇನ ಸಂಕಲ್ಪಕಲನಾನ್ಮನಃ ॥ ೫೪ ॥

ಪ್ರಕೃತಿಃ ಪ್ರಕೃತಿತ್ವೇನ ದೇಹೋ ದಿಗ್ಧತಯಾ ಸ್ಥಿತಃ ।
ಜಡಃ ಪ್ರಕೃತಿಭಾವೇನ ಚೇತನಃ ಸ್ವಾತ್ಮಸತ್ತಯಾ ॥ ೫೫ ॥

ಜಡಾಜಡದೃಶೋರ್ಮಧ್ಯಂ ಯತ್ತತ್ವಂ ಪಾರಮಾತ್ಮಿಕಂ ।
ತದೇತದೇವ ನಾನಾತ್ವಂ ನಾನಾಸಂಜ್ಞಾಭಿರಾತತಂ ॥ ೫೬ ॥

---

೫೩. ಆ ಅಜ್ಞಾನವೇ ಪ್ರತಿಬಿಂಬ ಭಾವಾಪನ್ನನಾದ ಅನಂತನಾದ ಆತ್ಮನಿಂದ ಅಲಂಕರಿಸಲ್ಪಟ್ಟಿರುವಂತೆ ಪ್ರಕಾಶ ಮಾನನಾಗಿ ಜೀವ ಎಂಬುದಾಗಿ ಹೇಳಲ್ಪಡುವುದು. ಆ ಜೀವನು ಈ ಸಂಸಾರದಲ್ಲಿ ಮಹಾಭ್ರಾಂತಿಜನಕವಾದ ಮಾಯೆಯೆಂಬ ಪಂಜರದೊಳಗೆ ಸಿಕ್ಕಿಕೊಂಡಿರುವ ಆನೆಯಾಗಿರುವನು.

೫೪. ಈ ಅಜ್ಞಾನವೇ ಪ್ರಾಣಧಾರಣದಿಂದ ಜೀವಿಸಿಕೊಂಡಿರುವ ಕಾರಣ, ಜೀವನೆನ್ನಿಸುವನು. ದೇಹಾದಿಗಳಲ್ಲಿ "ಅಹಂ" ಎಂಬ ಬುದ್ಧಿಯನ್ನಿಡುವುದರಿಂದ ಅಹಂಭಾವ (ಅಹಂಕಾರ) ಎನ್ನಿಸುವದು. ನಿಶ್ಚಯಾತ್ಮಕವಾದ ಬುದ್ಧಿಯನ್ನುಂಟು ಮಾಡುವ ಕಾರಣ ಬುದ್ಧಿ ಎಂಬ ಹೆಸರನ್ನು ಪಡೆಯುವದು. ಒಳಗೆಯೇ ನಾನಾ ಸಂಕಲ್ಪಗಳನ್ನು ಮಾಡಿಕೊಳ್ಳುವುದರಿಂದ ಮನಸ್ ಎನ್ನಿಸಿಕೊಳ್ಳುವುದು.

೫೫. ಸಮಸ್ತ ಪ್ರಪಂಚಕ್ಕೂ ಪ್ರಕೃತಿ (ಮೂಲ ಕಾರಣ) 'ಯಾಗಿರುವ ಕಾರಣ ಪ್ರಕೃತಿಯೆನ್ನಿಸಿಕೊಂಡಿರುವದು. ವಿಶೇಷವಾಗಿ ಕ್ರಮೇಣ ವೃದ್ಧಿ ಹೊಂದಿರುವ ಕಾರಣ, ದೇಹ ಎಂಬುದಾಗಿ ಕರೆಯಲ್ಪಡುವದು. ಪ್ರಕೃತಿ (ಅಜ್ಞಾನಾಂಶ ಪ್ರಾಧಾನ್ಯ) ಭಾವದಿಂದ ಜಡನೆಂದೂ, ಸ್ವಾತ್ಮವಾದ ಚಿತ್ತಿನ ಪ್ರಾಧಾನ್ಯದಿಂದ ಚೇತನನೆಂದೂ ವ್ಯವಹರಿಸಲ್ಪಡುವದು.

೫೬. ಈ ರೀತಿಯಾದ (ಜಡ ಮತ್ತು ಅಜಡ ದೃಷ್ಟಿಗಳ ಅಂದರೆ) ಅಜ್ಞಾನ ಮತ್ತು ಅದರ ಸಾಕ್ಷಿಯಾದ ಆತ್ಮಗಳ ಮಧ್ಯದಲ್ಲಿರುವ, ಯಾವ ಪರಮಾತ್ಮ

ಏವಂ ಸ್ವರೂಪಂ ಜೀವಸ್ಯ ಬೃಹದಾರಣ್ಯಕಾದಿಷು ।
ಬಹುಧಾ ಬಹುಷು ಪ್ರೋಕ್ತಂ ವೇದಾಂತೇಷು ಕಿಲಾನಘ ॥ ೫೭ ॥

ಸಂಬಂಧಿಯಾದ ತತ್ತ್ವವಿರುವುದೋ ಅಂತಹ (ಜಗತ್ತಿನಿಂದೊಡಗೂಡಿದ) ಈ ಮನಸ್ಸೆಂಬುದೇ ಅನೇಕಾನೇಕ ಭಾವಗಳನ್ನು ಹೊಂದಿ, ಹಿಂದೆ ಹೇಳಿದ ಜೀವ ಬುದ್ಧಿ ಮನಸ್ಸು ಚಿತ್ತ ಅಹಂಕಾರ ಮುಂತಾದ ನಾನಾ ಹೆಸರುಗಳಿಂದ ಜಗತ್ತನ್ನೆಲ್ಲ ಆವರಿಸಿಕೊಂಡಿರುವುದು.

೫೭. ಅಯ್ಯ ನಿರ್ದೋಷಿಯಾದ ರಾಮ, ಈ ರೀತಿಯಾಗಿ ಜೀವನ ಸ್ವರೂಪವು ಬೃಹದಾರಣ್ಯಕ ಮುಂತಾದ ಅನೇಕ ಉಪನಿಷತ್ತುಗಳಲ್ಲಿ, ಅನೇಕ ಪ್ರಕಾರವಾಗಿ ವರ್ಣಿತವಾಗಿರುವುದು.

[ನಾನಾ ಉಪಾಧಿಗಳೊಳಗೆ ಪ್ರವೇಶ ಮಾಡುವುದರಿಂದ, ಪರಮಾತ್ಮನಿಗೆ ಔಪಾಧಿಕ ನಾನಾವಿಧ ಸಂಜ್ಞೆಗಳುಂಟಾಗುವುವು. ಹೇಗೆಂದರೆ, ಸ ಏಷ ಇಹ ಪ್ರವಿಷ್ಟಃ ಆನಖಾಗ್ರೇಭ್ಯಃ ಎಂದು ಮೊದಲು ಮಾಡಿ, ಪ್ರಾಣನ್ನೇವ ಪ್ರಾಣೋ ಭವತಿ ವರ್ದವಾಕ್ ಪಶ್ಯಂಚಕ್ಷುಃ ಶೃಣ್ವನ್ ಶ್ರೋತ್ರಂ ಮನ್ವಾನೋಮನಃ ತಾನ್ಯಸ್ಯ ಏತಾನಿ ಕರ್ಮನಾಮಾನ್ಯೇವ ಮತ್ತು ಸಃ ಸಮಾನಸ್ಸನ್ ಉಭೌ ಲೋಕೌ ಅನುಸಂಚರತಿ ಧ್ಯಾಯತೀವ ಲೇಲಾಯತೀವ ಸಧೀಃ ಸ್ವಪ್ನೋಭೂತ್ವಾ ಇಮಂ ಲೋಕಮತಿಕ್ರಾಮತಿ ಮೃತ್ಯೋರೂಪಾಣಿ. ಬೃಹದಾರಣ್ಯಕ.

ಬುದ್ಧೇರ್ಗುಣೇನಾತ್ಮಗುಣೇನಚೈವ ಆರಾಗ್ರಮಾತ್ರೋಹ್ಯವರೋಪಿ ದೃಷ್ಟಃ । ವಾಲಾಗ್ರಶತಭಾಗಸ್ಯ ಶತಧಾಕಲ್ಪಿತಸ್ಯ ಚ । ಭಾಗೋಜೀವಸ್ಸವಿಜ್ಞೇಯಃ ಸಚಾನನ್ತ್ಯಾಯಕಲ್ಪತೇ ॥ ಛಾಂದೋಗ್ಯ.

ತತ್ಸೃಷ್ಟ್ವಾ ತದೇವಾನು ಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ । ತೈತ್ತಿರೀಯ.

ಸ ಏತಂ ಸೀಮಾನಂ ವಿದಾರ್ಯ, ಏತಯಾ ದ್ವಾರಾ ಪ್ರಾಪದ್ಯತ ತಸ್ಮಾದಿದಂದ್ರೋ ನಾಮ । ಯದೇತತ್ ಹೃದಯಂ ಮನಶ್ಚ ಏತತ್ ಸಂಜ್ಞಾನಮಾಜ್ಞಾನಂ ವಿಜ್ಞಾನಂ ಪ್ರಜ್ಞಾನಂ. ಐತರೇಯ.

ಇತ್ಯಾದಿ ಸಾವಿರಾರು ಶ್ರುತಿಗಳು ಮೇಲಣ ಅರ್ಥದಲ್ಲಿ ಪ್ರಮಾಣ]

ಅಜ್ಞೈಸ್ತ್ವೇತಾಸು ಸಂಜ್ಞಾಸು ಕುವಿಕಲ್ಪಕುತಾರ್ಕಿಕೈಃ ।
ಮೋಹಾಯ ಕೇವಲಂ ಮೂಢೈರ್ವ್ಯರ್ಥಮಾಸ್ಥಾಃ ಪ್ರಕಲ್ಪಿತಾಃ ॥ ೫೮ ॥

ಏವಮೇಷ ಮಹಾಬಾಹೋ ಜೀವಃ ಸಂಸಾರಕಾರಣಂ ।
ಮೂಕೇನಾತಿವರಾಕೇಣ ದೇಹಕೇನೇಷ ಕಿಂ ಕೃತಂ ॥ ೫೯ ॥

---

೫೮. ಶಾಸ್ತ್ರಾರ್ಥ ಸಂಪ್ರದಾಯಗಳ ಪರಿಚಯವೇ ಇಲ್ಲದೆ ತಮ್ಮ ಮನಸ್ಸಿಗೆ ತೋರಿದಂತೆಲ್ಲಾ ಶಾಸ್ತ್ರಯುಕ್ತ್ಯನುಭವಗಳಿಗೆ ಕೇವಲ ವಿರುದ್ಧವಾದ ನಾನಾ ಕುತ್ಸಿತಗಳಾದ ವಿಕಲ್ಪಗಳನ್ನೂ ಅವುಗಳಿಗೆ ಅನುಗುಣವಾಗಿ ನಾನಾ ದುಷ್ಟ ತರ್ಕಗಳನ್ನೂ ಕಲ್ಪಿಸಿಕೊಂಡು ವಾದ ಮಾಡುತ್ತಿರುವ ಅವೈದಿಕರಾದ ಮಹಾ ಮೂಢರಾದರೋ ಪೂರ್ವೋಕ್ತಗಳಾದ ಈ ಜೀವಾದಿ ಸಂಜ್ಞೆಗಳಲ್ಲಿ ಕೇವಲ ತಮ್ಮ ಭ್ರಾಂತಿಗಾಗಿಯೇ ನಿಷ್ಪ್ರಯೋಜನವಾಗಿ ಆದರದಿಂದ ಅಭಿನಿವೇಶಗಳನ್ನು (ಹಠಪೂರ್ವಕವಾದ ಆಸಕ್ತಿ) ಕಲ್ಪಿಸಿಕೊಂಡಿರುವರು.

[ಅವರು ಅವೈದಿಕರೂ ಕುತಾರ್ಕಿಕರೂ ಆಗಿರುವುದರಿಂದಲೂ ಅವರ ವಾದವು ಪುರುಷಾರ್ಥ ಹೇತುವಾಗದಿರುವುದರಿಂದಲೂ ಅವರು ಬೇರೆ ಬೇರೆ ನಾನಾ ವಿಧವಾಗಿ ಹೇಳುವ ಜೀವ ಸ್ವರೂಪ ಕಲ್ಪನೆಗಳನ್ನು ಶ್ರೇಯಸ್ಕಾಮಿಯಾದ ಸಾಧಕರು ಸರ್ವಥಾ ಅನಾದರದಿಂದ ಉಪೇಕ್ಷಿಸಬೇಕು ಎಂದರ್ಥ)

೫೯. ಅಯ್ಯ ಮಹಾ ಬಾಹುವೇ, ಈ ಜೀವನು ಹೀಗೆ ಅಜ್ಞಾನ ಭ್ರಾಂತಿಯಿಂದ ಸಂಸಾರ ಕಾರಣವೆನ್ನಿಸುವನು. ಈ ಸಂಸಾರದ ವಿಷಯದಲ್ಲಿ ಅತ್ಯಂತ ಜಡವಾದ ಮತ್ತು ತುಚ್ಛವಾದ ಕೆಲಸಕ್ಕೆ ಬಾರದ ಈ ದೇಹವು ಮಾಡಿರುವುದಾದರೂ ಯಾವುದು? [ಶುದ್ಧ ಚಿದ್ರೂಪನಾದ ಆತ್ಮನಿಗೂ ಸಂಸಾರವೆಂಬುದು ಇಲ್ಲ ಜಡವಾದ ದೇಹಕ್ಕೂ ಇಲ್ಲ. ಆದರೆ ಅಂತರಾಳಿಕನಾದ ಜೀವನಿಗೆ ಮಾತ್ರವೇ ಅಜ್ಞಾನದಿಂದ ಈ ಸಂಸಾರವು ಹೀಗೆ ಮಿಥ್ಯೆಯಾಗಿಯೇ ಕಲ್ಪಿತವಾಗಿರುವುದು.]

ಆಧಾರಾಧೇಯಯೋರೇಕನಾಶೇ ನಾನ್ಯಸ್ಯ ನಷ್ಟತಾ ।
ಯಥಾ ತಥಾ ಶರೀರಾದಿನಾಶೇ ನಾತ್ಮನಿ ನಷ್ಟತಾ ॥ ೬೦ ॥

ಏಕಪರ್ಣರಸೇ ಕ್ಷೀಣೇ ರಸೋ ನೈತಿ ಯಥಾ ಕ್ಷಯಂ ।
ಯಾತಿ ಪರ್ಣರಸಶ್ಚಾರ್ಕರಶ್ಮಿಜಾಲಾಂತರೇ ಯಥಾ ॥ ೬೧ ॥

ಶರೀರಸಂಕ್ಷಯೇ ದೇಹೀ ನ ಕ್ಷಯಂ ಯಾತಿ ಕಸ್ಯಚಿತ್ ।
ನಿರ್ವಾಸನಶ್ಚೇತ್ತದ್ವ್ಯೋಮ್ನಿ ತಿಷ್ಠತ್ಯಾತ್ಮಪದೇ ತಥಾ ॥ ೬೨ ॥

---

೬೦. ಆಧಾರ ಆಧೇಯಗಳೊಳಗೆ ಯಾವುದಾದರೊಂದು (ಆಧಾರವಾಗಲಿ ಅಥವಾ ಆಧೇಯವಾಗಲಿ) ನಾಶ ಹೊಂದಿದ ಮಾತ್ರದಿಂದ, ಉಳಿದ ಮತ್ತೊಂದಕ್ಕೆ ಯಾವ ನಾಶವುಂಟಾಗುವುದು ? (ಅದಕ್ಕೆ ಯಾವ ಹಾನಿಯುಂಟಾಗುವುದು ?) ಯಾವದೂ ನಷ್ಟವಾಗುವುದಿಲ್ಲ. ಇದರಂತೆಯೇ ಶರೀರಾದಿಗಳು ನಾಶ ಹೊಂದಿದ ಮಾತ್ರದಿಂದಲೇ, ಆತ್ಮನಿಗೆ ಯಾವ ಬಾಧೆಯೂ (ನಷ್ಟವೂ) ಇಲ್ಲವೇ ಇಲ್ಲ.

[ಆಧಾರ= ಪಾತ್ರೆ (ತುಪ್ಪಕ್ಕೆ ಆಶ್ರಯವಾಗಿರುವುದು) ಆಧೇಯ = ಪಾತ್ರೆಯೊಳಗೆ (ಆಧಾರದಲ್ಲಿ) ಇರುವ ತುಪ್ಪ] ಅದು ಕಾರಣ ದೇಹೇಂದ್ರಿಯಾದಿಗಳು ನಾಶಹೊಂದಿದರೂ ಜೀವನಾಶವು ಎಂದೆಂದಿಗೂ ಇಲ್ಲ.]

೬೧-೬೨. ಸರಸವಾಗಿ (ರಸಯುಕ್ತವಾಗಿ) ರುವ ಎಲೆ ಅಥವಾ ಎಲೆಗಳು, ಸೂರ್ಯಕಿರಣ ಸಂಪರ್ಕದಿಂದ ಒಣಗಿ ರಸ (ದ್ರವ) ವಿಹೀನವಾದರೆ, ಅಂದರೆ ಆ ಎಲೆಗಳಲ್ಲಿದ್ದ ರಸವು ನಾಶಹೊಂದಿದರೆ, ಹೇಗೆ ಆ ರಸವೇ ನಾಶವನ್ನು ಹೊಂದಿಬಿಡುವುದಿಲ್ಲವೋ ಮತ್ತು ಆ ಎಲೆಗಳ ರಸವು ಸೂರ್ಯಕಿರಣ ಜಾಲಗಳ ಮಧ್ಯದಲ್ಲಿ ಹೇಗೆ ಇದ್ದುಕೊಂಡಿರುವುದೋ (ಎಲೆಯ ರಸವು ಎಲೆಯಲ್ಲಿಲ್ಲದೆ ಈಗ ಸೂರ್ಯ ಕಿರಣಗಳ ಮಧ್ಯದಲ್ಲಿರುವುದು, ಎಲೆಯಲ್ಲಿ ಮಾತ್ರ ಇಲ್ಲ ಅಷ್ಟೇ. ಅದು ಬೇರೆ ಕಡೆ ಇದ್ದುಕೊಂಡಿರುವುದು. ಸ್ಥಾನಾಂತರದಲ್ಲಿರುವ ಕಾರಣ ಅದಕ್ಕೆ ನಾಶವು ಇಲ್ಲವೇ ಇಲ್ಲ) ಹಾಗೆಯೇ ಯಾವನಾದರೊಬ್ಬ ಜೀವನ ಶರೀರವು ನಾಶ ಹೊಂದಿದಾಗ್ಯೂ ಕೂಡ ದೇಹಿಯು (ಜೀವನು) ಎಂದಿಗೂ ನಾಶ ಹೊಂದುವುದೇ ಇಲ್ಲ. ದೇಹಿಯು ವಾಸನಾ ಸಹಿತನಾಗಿದ್ದರೆ ದೇಹ ನಾಶವಾದ ಮೇಲೆ ವಾಸನೆಯಲ್ಲಿಯೇ ಇದ್ದುಕೊಂಡಿರುವವನು. ಮತ್ತು ವಾಸನಾ ಶೂನ್ಯವಾಗಿರುವ ಪಕ್ಷದಲ್ಲಿ, ಬ್ರಹ್ಮಾ

ದೇಹನಾಶೇ ವಿನಷ್ಟೋಽಸ್ಮೀತ್ಯೇವಂ ಯಸ್ಯಾಽಮತೇರ್ಭ್ರಮಃ ।
ಮಾತುಃಸ್ತನತಟಾತ್ತಸ್ಯ ಮನ್ಯೇ ವೇತಾಲ ಉತ್ಥಿತಃ । ॥ ೬೩ ॥

ಯಸ್ಯ ಹ್ಯಾತ್ಯಂತಿಕೋ ನಾಶಃ ಸ್ಯಾದಸಾವುದಿತಃ ಸ್ಮೃತಃ ।
ಚಿತ್ತನಾಶೋ ಹಿ ನಾಶಃ ಸ್ಯಾತ್ ಸಮೋಕ್ಷ ಇತಿ ಕಥ್ಯತೇ ॥ ೬೪ ॥

ಕಾಶ ಸ್ವಭಾವವಾದ ಸ್ವೀಯ ಸಚ್ಚಿದಾನಂದರೂಪ ಪರಮ ಪದದಲ್ಲಿ ಅಕ್ಷತನಾಗಿ ಸರ್ವದಾ ಇದ್ದುಕೊಂಡಿರುವನು.

೬೩. ಸ್ವಲ್ಪವೂ ವಿವೇಕವೇ ಇಲ್ಲದಿರುವ ಯಾವ ಮೂಢನು ದೇಹವು ನಾಶಹೊಂದಲಾಗಿ ಆದೇಹ ನಾಶವು ತನಗೆ ಸರ್ವಥಾ ಭಯ ಶೋಕಾದಿಗಳಿಗೆ ಹೇತು ವಲ್ಲದಿದ್ದರೂ ಕೂಡ ಅಜ್ಞಾನದಿಂದ ಅದು ತನ್ನ ಭಯ ಶೋಕಾದಿಗಳಿಗೆ ಹೇತುವಾಗಿ ರುವುದೆಂದು ತಪ್ಪಾಗಿಯೇ ತಿಳಿದುಕೊಂಡು ಅಯ್ಯೋ ನಾನು ಸಂಪೂರ್ಣವಾಗಿ ನಾಶಹೊಂದಿದೆನು ಎಂಬೀ ಮೊದಲಾಗಿ ಹೇಳುತ್ತಾ ಭ್ರಾಂತಿಗೊಳ್ಳುವನೋ ಅಂತಹ ಮಹಾ ಮೂಢನು ತನ್ನ ತಾಯಿಯ ಸ್ತನ ಮಂಡಲದಿಂದ ದೊಡ್ಡ ಪಿಶಾಚವು ಉದ್ಭ ವಿಸುವುದೆಂಬ ಶಂಕೆಯಿಂದ ಜೀವನಾಧಾರವಾದ ಸ್ತನ್ಯ ಪಾನವನ್ನು ಮಾಡದೆ ತನ್ನ ಪ್ರಾಣಕ್ಕೇ ಸಂಚಕಾರವನ್ನು ತಂದುಕೊಳ್ಳುವ ಹುಚ್ಚು ಮಗುವಿನಂತೆ ಅತ್ಯಂತ ಉನ್ಮತ್ತನೆಂದೇ ನಾನು ಭಾವಿಸುವೆನು.

[ದೇಹಕ್ಕಿಂತ ಬೇರೆಯಾಗಿ ವಿಲಕ್ಷಣವಾಗಿರುವವನು ಆತ್ಮನು; ದೇಹ ನಾಶ ಹೊಂದಿದರೂ ಆತ್ಮನು ನಾಶ ಹೊಂದುವುದಿಲ್ಲ. ದೇಹಿಯು ಅವಿನಾಶಿಯು. ಎಂದರ್ಥ: ಅಶರೀರಂವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ]

೬೪. ವಜ್ರದ ಸರಪಣಿಯಂತೆ ಅತ್ಯಂತ ದೃಢಬಂಧನ ಭೂತವಾದ ಚಿತ್ತ ವೆಂಬ ಉಪಾಧಿಯು ಆತ್ಯಂತಿಕವಾಗಿ ನಾಶಹೊಂದಿದ್ದೇ ಆದರೆ ಈ ಜೀವನು ಸ್ವರೂ ಪವಾದ ಬ್ರಹ್ಮ ಭಾವವನ್ನು ಪ್ರತ್ಯಭಿಜ್ಞಾನ ಬಲದಿಂದ ಸ್ಮರಿಸಿಕೊಂಡವನಾಗಿ ನಿರತಿ ಶಯಾನಂದ ರೂಪ ಅಭ್ಯುದಯವನ್ನು ಪಡೆದವನಾಗುವನು. ಅಂತಹ ಚಿತ್ತದ

ಮೃತೋ ನಷ್ಟ ಇತಿ ಪ್ರೋಕ್ತೋ ಮನ್ಯೇ ತಚ್ಚ ಮೃಷಾಪ್ಯಸತ್ ।
ಸ ದೇಶಕಾಲಾಂತರಿತೋ ಭೂತ್ವಾ ಭೂತ್ವಾನುಭೂಯತೇ ॥ ೬೫ ॥

ಇಹೋಹ್ಯಂತೇ ಜನ್ಯೈರೇವಂ ತರಂಗಾಂತಸ್ತೃಣೈರಿವ ।
ಮರಣವ್ಯಪದೇಶಾಸು ದೇಹಕಾಲಾತಿರೋಹಿತೈಃ ॥ ೬೬ ॥

ನಾಶವನ್ನೇ ಜೀವ ವಿನಾಶವೆಂದು ಭಾವಿಸುವುದಾದರೆ ಆಗಲಿ ಅದು ನಮಗೆ ಇಷ್ಟಾಪತ್ತಿಯೇ ಏಕೆಂದರೆ ಆ ಜೀವತ್ವದ ವಿನಾಶವನ್ನು ಪರಮ ಪುರುಷಾರ್ಥವಾದ ಮೋಕ್ಷವೆಂದು ಸಕಲ ಶಾಸ್ತ್ರಗಳೂ ಉದ್ಘೋಷಿಸುತ್ತಿರುವುವು. [ಅದು ಕಾರಣ ಚಿತ್ತ ನಾಶದಿಂದಲೂ ಕೂಡ ಭಯವನ್ನು ಶಂಕಿಸುವುದು ಅತ್ಯಂತಾನುಚಿತವಾದುದೇ ಸರಿ.]

೬೫. ಅಯ್ಯ ರಾಮ, "ಇವನು ಸತ್ತನು, ಅವನು ನಾಶ ಹೊಂದಿದನು" ಎಂಬೀ ಮೊದಲಾಗಿ ಹೇಳತಕ್ಕ ವ್ಯವಹಾರವೂ ಕೂಡ ಕೇವಲ ಸುಳ್ಳು (ಮಿಥ್ಯೆಯು) ಏಕೆಂದರೆ ಅದು ಅಸತ್ಯವು. (ನಿಜವಾದುದಲ್ಲ) ಜೀವನು ದೇಶಕಾಲಗಳಿಂದ ವ್ಯವಧಾನಗೊಂಡವನಾಗಿ ಒಂದು ದೇಹವನ್ನು ಬಿಟ್ಟು ಪುನಃ ಪುನಃ ಮತ್ತೊಂದು ದೇಹವನ್ನು ಸ್ವೀಕರಿಸಿದವನಾಗಿ ಅನುಭವಗೋಚರನಾಗುವನು. ಹೀಗೆ ಎಷ್ಟೋ ಜನ್ಮಾಂತರಗಳು ಬಂದು ಹೋಗುತ್ತಿರುವುವು. [ಈಗ ಒಬ್ಬ ಜೀವನು ಈ ಊರಲ್ಲಿ ತನ್ನ ದೇಹವನ್ನು ಬಿಟ್ಟು ಮರಣ ಹೊಂದಿದನೆಂದರೆ, ಅವನು ಕಾಲಾಂತರದಲ್ಲಿ ಮತ್ತೊಂದು ಸ್ಥಳದಲ್ಲಿ ಇನ್ನೊಂದು ದೇಹವನ್ನು ಧರಿಸಿರುವನು. ಅದು ಕಾರಣ ಜೀವನು ಮೃತನಾದನಲ್ಲ ಎಂದು ಹೇಳುವ ಮಾತು ಕೇವಲ ಅಸತ್ಯವೇ ಸರಿ ಎಂದರ್ಥ]

೬೬. ಈ ಸಂಸಾರದಲ್ಲಿ ಮರಣ ಪರಂಪರೆಗಳೆಂಬ ನದೀಪ್ರವಾಹಗಳೊಳಗೆ, ಅಲೆಗಳ ಮಧ್ಯದಲ್ಲಿ ಸಿಕ್ಕಿಕೊಂಡ ಹುಲ್ಲು ಕಡ್ಡಿಗಳಂತಿರುವ ಜೀವರುಗಳು, ದೇಶ

ವಾಸನಾವಸ್ಥಿತೋ ಜೀವೋ ಯಾತ್ಯುತ್ಸೃಜ್ಯ ಶರೀರಕಂ ।
ಕಪಿರ್ವನತರುಂ ತ್ಯಕ್ತ್ವಾ ತರ್ವಂತರಮಿವ ಸ್ಥಿತಃ ॥ ೬೭ ॥

ಪುನಸ್ತಮಪಿ ಸಂತ್ಯಜ್ಯ ಗಚ್ಛತ್ಯನ್ಯದಪಿ ಕ್ಷಣಾತ್ ।
ಅನ್ಯಸ್ಮಿನ್ ವಿತತೇ ದೇಶೇ ಕಾಲೇಽನ್ಯಸ್ಮಿಂಶ್ಚ ರಾಘವ ॥ ೬೮ ॥

ಕಾಲಗಳಿಂದ ಕಣ್ಣಿಗೆ ಮರೆಯಾದ ತಮ್ಮ ದೇಹಾದಿ ಸ್ವರೂಪವುಳ್ಳವರಾಗಿ, ಪೂರ್ವೋಕ್ತ ಪ್ರಕಾರಗಳಾದ ಇವನು ಮೃತನಾದನು, ನಾಶಹೊಂದಿದನು. ಹುಟ್ಟಿದನು, ವೃದ್ಧಿ ಹೊಂದಿದನು. ಸುಖಿಯು, ದುಃಖಿಯು ಎಂಬೀ ಮೊದಲಾದ ಭ್ರಾಂತಿಗಳಿಂದ ಸರ್ವದಾ ಕೊಚ್ಚಿಕೊಂಡು ಹೋಗುತ್ತಿರುವರು.

೬೭. ಕಾಡುಕಪಿಯು, ಆ ಕಾಡಿನಲ್ಲಿರುವ ಒಂದು ಮರವನ್ನು ಬಿಟ್ಟು ಮತ್ತೊಂದು ಮರವನ್ನು ಆಶ್ರಯಿಸಿಕೊಂಡಿರುವಂತೆ, ವಾಸನಾ ವೈಚಿತ್ರ್ಯದಿಂದ ಕೂಡಿಕೊಂಡಿರುವ ಜೀವನು ಈಗ ಇಲ್ಲಿರುವ ಜೀರ್ಣವಾದ ದೇಹವನ್ನು ಬಿಟ್ಟು, ಬೇರೆ ಕಾಲದಲ್ಲಿ, ಇನ್ನೊಂದು ದೇಶದಲ್ಲಿ ಮತ್ತೊಂದು ಶರೀರವನ್ನು ಪಡೆದು ಕೊಂಡಿರುವನು.

೬೮. ಅಯ್ಯ ರಾಘವ, ಸ್ವಲ್ಪ ಕಾಲದೊಳಗಾಗಿ ಪುನಃ ಅದನ್ನು ಬಿಟ್ಟು ಮತ್ತೊಂದು ವಿಶಾಲವಾದ ದೇಶದಲ್ಲಿ, ಇನ್ನೊಂದು ಬೇರೆ ಕಾಲದಲ್ಲಿ (ಕಾಲಾಂತರದಲ್ಲಿ) ಇನ್ನೊಂದು ಹೊಸ ಶರೀರವನ್ನು ಪಡೆಯುತ್ತಿರುವನು. ಹೀಗೆ ಸಾವೂ ಅನಂತರ ಜನ್ಮ, ಪುನಃ ಮರಣ ಜನನಗಳು ಅಸಂಖ್ಯಾಕವಾಗಿ ಬಂದು ಹೋಗುತ್ತಲಿರುವುವು.

[ಜಾತಸ್ಯಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯಚ ಬಹೂನಿ ಮೇ ವ್ಯತೀತಾನಿ ಜನ್ಮಾನಿತವಚಾರ್ಜುನ ಗೀತಾ ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ ಇದೇ ಸಂಸಾರದಕ್ರಮ ದ್ವಾದಶಮಂಜರೀ.

ಇತಶ್ಚೇತಶ್ಚ ನೀಯಂತೇ ಜೀವಾ ವಾಸನಯಾ ಸ್ವಯಾ ।
ಚಿರಂತದುಪ ಜೀವಿನ್ಯಾ ಧೂರ್ತ್ಯಾ ಧಾತ್ರ್ಯೇವ ಬಾಲಕಾಃ ॥ ೬೯ ॥

ವಾಸನಾರಜ್ಜುವಲಿತಾಃ ಜೀರ್ಣಾಃ ಪರ್ವತ ಕುಕ್ಷಿಷು ।
ಜರಯಂತ್ಯತಿ ದುಃಖೇನ ಜೀವಿತಂ ಜೀವ ಜೀವಿಕಾಃ ॥ ೭೦ ॥

ಜರಠ ಜರದುಪ್ರೋಢ ದುಃಖಭಾರಾಃ
ಪರಿಣತಿ ಜರ್ಜರ ಜೀವಿತಾಶ್ಚ ಸತ್ಯಃ ।
ಹೃದಯ ಜನಿತ ವಾಸನಾನುವೃತ್ತ್ಯಾ
ನರಕ ಭರೇ ಜನತಾಶ್ಚಿರಂ ಪತಂತಿ ॥ ೭೧ ॥

---

೬೯. ಧೂರ್ತನಾದ ವಿಟನಲ್ಲಿ ಅನುರಕ್ತಳಾದ ಒಬ್ಬ ದಾದಿಯು ತನ್ನ ರಕ್ಷಣೆಗೊಳಪಟ್ಟ ಬಾಲಕರನ್ನು ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಸುಮ್ಮನೆ ಸುತ್ತಿಸುವಂತೆ ಜೀವರುಗಳನ್ನು ಮರೆಯಿಸಿ ಜೀವಿಸುವ ಅತ್ಯಂತಧೂರ್ತ ಸ್ವಭಾವವುಳ್ಳ ಸ್ವಕೀಯ ವಾಸನಾ ವೈಚಿತ್ರ್ಯವೇ ಜೀವರುಗಳನ್ನು ತನ್ನ ವಶದಲ್ಲಿಟ್ಟುಕೊಂಡು ಈ ಸಂಸಾರದಲ್ಲಿ ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೂ ಒಂದು ಕಾಲದಿಂದ ಮತ್ತೊಂದು ಕಾಲಕ್ಕೂ ಅನಾದಿ ಕಾಲದಿಂದಲೂ ಈಗಲೂ ಒಯ್ಯುತ್ತಿರುವುದು.

೭೦. ಪರಸ್ಪರ ಉಪಯೋಗಕರವಾಗಿರುವ ಕಾರಣ ಜೀವಗಳೇ ಜೀವನೋಪಾಯವಾಗಿ ಉಳ್ಳ ಜೀವರುಗಳು ಕಾಮ ಕರ್ಮಾದಿವಾಸನೆಗಳೆಂಬ ಹಗ್ಗಗಳಿಂದ ಪರಿವೇಷ್ಟಿತರಾಗಿ ಮೊದಲೇ ಅತ್ಯಂತ ಜೀರ್ಣವಾಗಿದ್ದರೂ ಕೂಡ ಅತಿಭಯಂಕರವಾದ ಸಾಂಸಾರಿಕ ಸುಖ ದುಃಖಗಳೆಂಬ ಪರ್ವತಗಳ ಗುಹೆಗಳೊಳಗೆ ಅತ್ಯಂತ ದುಃಖದಿಂದ ತಮ್ಮ ಜೀವಿತವನ್ನು ಈಗಲೂ ಇನ್ನೂ ಹೆಚ್ಚಾಗಿ ದುರ್ಬಲಗೊಳ್ಳಿಸುತ್ತಿರುವರು. (ಮುದಿಗೊಳ್ಳಿಸುತ್ತಾ ಇರುವರು.

೭೧. ಪ್ರಪಂಚದಲ್ಲಿನ ಜೀವರುಗಳು ತಮ್ಮ ಚಿತ್ತಗಳಲ್ಲಿ ಉದಯಿಸಿದ ವಾಸನೆಯನ್ನು ಅನುಸರಿಸುವ ಕಾರಣದಿಂದ (ವಯೋವೃದ್ಧರಿಗಿಂತಲೂ ಹೆಚ್ಚು ಮುದುಕರಾಗಿ) ಅತ್ಯಂತ ಜೀರ್ಣರಾಗಿ ದಾರಿದ್ರ್ಯ, ರೋಗ, ವಿಯೋಗ ಮುಂತಾದ ದುರ್ಭರವಾದ ದುಃಖ ಭಾರಗಳನ್ನು ಹೊತ್ತುಕೊಂಡು ನಾನಾಯೋನಿಗಳಲ್ಲಿ ಹುಟ್ಟಿ ಅನೇಕ ದುರ್ದಶೆಗಳನ್ನು ಅನುಭವಿಸುವುದರಿಂದ ಅನೇಕ ಪರಿಣಾಮಗಳನ್ನು

ಶ್ರೀ ವಾಲ್ಮೀಕಿರುವಾಚ :—

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯಂತನಾಯ ವಿಧಯೇsಸ್ತಮಿನೋ ಜಗಾಮ ।
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ　　॥ ೭೨ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಸಂಸಾರೋಪದೇಶೋ" ನಾಮ ಏಕ ಸಪ್ತತಿತಮಃ ಸರ್ಗಃ.

ಹೊಂದಿ ಕುಗ್ಗಿದ ಪ್ರಾಣಗಳುಳ್ಳವರಾಗಿ ರೌರವಾದಿ ನರಕ ಸಮುದಾಯಗಳಲ್ಲಿ ಚಿರ ಕಾಲ ಶಾಶ್ವತವಾಗಿ ಬಿದ್ದುಕೊಂಡಿರುವರು.

[ವಾಸನಾ ದೋಷದಿಂದ ಎಷ್ಟು ಅಪರಿಮಿತವಾದ ದುಃಖವುದಯಿಸುವುದು. ಇದೆಂತಹ ಆಶ್ಚರ್ಯ.]

ಶ್ರೀ ವಾಲ್ಮೀಕಿಋಷಿಗಳು ಹೇಳಿದರು :—

೭೨. ಅಯ್ಯ ಭರದ್ವಾಜ, ಈ ರೀತಿಯಾಗಿ ಶ್ರೀ ವಸಿಷ್ಠರು ಹೇಳುತ್ತಿರುವಾಗಲೇ ಆ ಹಗಲು ಕಳೆದು ಹೋಯಿತು. ಕೂಡಲೇ ಸೂರ್ಯನು ಅಸ್ತಂಗತನಾದನು. ಅಲ್ಲಿ ನೆರೆದಿದ್ದ ಸಭೆಯೂ ಸಾಯಂಕಾಲಿಕವಾದ ಕರ್ಮಾನುಷ್ಠಾನಾರ್ಥವಾಗಿ ಸ್ನಾನ ಮಾಡುವುದಕ್ಕೋಸ್ಕರ ಶ್ರೀ ವಸಿಷ್ಠ ಬ್ರಹ್ಮರ್ಷಿಗಳಿಗೆ ನಮಸ್ಕಾರಮಾಡಿ ಎದ್ದು ಹೊರಟು ಹೋಯಿತು ಪುನಃ ರಾತ್ರಿ ಕಳೆಯುತ್ತಲೂ ಸೂರ್ಯನ ಕಿರಣಗಳ ಸಂಗಡಲೇ ಪುನಃ ಸ್ವಭಾಸ್ಥಾನಕ್ಕೆ ಬಂದು ಸೇರಿತು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಸಂಸಾರೋಪದೇಶ" ವೆಂಬ ಎಪ್ಪತ್ತೊಂದನೆಯ ಸರ್ಗವು.